
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು–೫೭೦ ೦೦೬

KARNATAKA STATE OPEN UNIVERSITY
Mukthagangotri, Mysuru-570 006

# ಇತಿಹಾಸ

## ಎಂ.ಎ. (ಅಂತಿಮ)

## ಇತಿಹಾಸ ಸಂಶೋಧನಾ ವಿಧಾನ ಮತ್ತು ಇತಿಹಾಸ ಬರವಣಿಗೆ



ಹೆರೊಡೋಟಸ್



ರ್ಯಾಂಕೆ

**ಕೋರ್ಸ್–VI** **ಬ್ಲಾಕ್–1 ರಿಂದ 7**

# ಕರಾಮುವಿ

ರಾಷ್ಟ್ರೀಯ
ಅಂತಾರಾಷ್ಟ್ರೀಯ
ಮಾನ್ಯತೆ

- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಜೂನ್ ೧, ೧೯೯೬ ರಂದು ಸರ್ಕಾರಿ ಅದೇಶ ಸಂಖ್ಯೆ : ED1/UOV/dated 12th February 1996 (Karnataka State Open University Act - 1992) ರ ಪ್ರಕಾರ ಕರ್ನಾಟಕ ರಾಜ್ಯಪಾಲರ ಅನುಮೋದನೆಯೊಂದಿಗೆ ಪೂರ್ಣಪ್ರಮಾಣದ ವಿಶ್ವವಿದ್ಯಾನಿಲಯವಾಗಿ ಸ್ಥಾಪನೆಗೊಂಡಿತು. ರಾಜ್ಯದ ಶೈಕ್ಷಣಿಕ ಪದ್ಧತಿಯಲ್ಲಿ 'ದೂರ ಶಿಕ್ಷಣ ಪದ್ಧತಿ'ಯನ್ನು ಆರಂಭಿಸುವ ಮತ್ತು ಉತ್ತೇಜಿಸುವ ದೃಷ್ಟಿಯಿಂದ ಈ ಮುಕ್ತ ವಿಶ್ವವಿದ್ಯಾನಿಲಯವನ್ನು ಅಧಿನಿಯಮದ ಮೂಲಕ ಸ್ಥಾಪಿಸಲಾಯಿತು.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧಿನಿಯಮ ೧೯೯೨ ರಂತೆ ಈ ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯದ ಒಳಗೆ ಸಂಸ್ಥೆಗಳನ್ನು, ಕಾಲೇಜುಗಳನ್ನು, ಪ್ರಾದೇಶಿಕ ಕೇಂದ್ರಗಳನ್ನು ಮತ್ತು ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವ, ನಿರ್ವಹಿಸುವ ಮತ್ತು ಮಾನ್ಯತೆ ಕೊಡುವ ಅಧಿಕಾರವನ್ನು ಹೊಂದಿದೆ. ಅಗತ್ಯವಿದ್ದ ಸಂದರ್ಭಗಳಲ್ಲಿ ಕರ್ನಾಟಕ ರಾಜ್ಯದ ಹೊರಗಿನ ಸ್ಥಳಗಳಲ್ಲೂ ಪ್ರಾದೇಶಿಕ ಕೇಂದ್ರ ಮತ್ತು ಅಧ್ಯಯನ ಕೇಂದ್ರಗಳನ್ನು ತೆರೆಯಲು ಅಧಿಕಾರವನ್ನು ಪಡೆದಿದೆ.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳು 'ದೂರ ಶಿಕ್ಷಣ ಮಂಡಳಿ' (DEC), ಮಾನವಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (MHRD), ನವದೆಹಲಿಯ ಮಾನ್ಯತೆಯನ್ನು ಪಡೆದಿವೆ.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ೧೯೯೯ರಿಂದ ನವದೆಹಲಿಯಲ್ಲಿರುವ 'ಭಾರತೀಯ ವಿಶ್ವವಿದ್ಯಾನಿಲಯಗಳ ಸಂಘ'ದ (AIU) ಖಾಯಂ ಸದಸ್ಯತ್ವವನ್ನು ಹೊಂದಿದೆ.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ೧೯೯೯ರಿಂದ 'ಕಾಮನ್‌ವೆಲ್ತ್ ವಿಶ್ವವಿದ್ಯಾನಿಲಯಗಳ ಸಂಘ' (ACU), ಲಂಡನ್, ಯುನೈಟೆಡ್ ಕಿಂಗ್‌ಡಮ್‌ನ ಶಾಶ್ವತ ಸದಸ್ಯ ಸಂಸ್ಥೆಯಾಗಿದೆ. ಸದಸ್ಯತ್ವದ ಸಂಖ್ಯೆ : ZKASOPENUINI.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ೧೯೯೯ ರಿಂದ 'ಏಷಿಯಾದ ಮುಕ್ತ ವಿಶ್ವವಿದ್ಯಾನಿಲಯಗಳ ಸಂಘ' (AAOU), ಬೀಜಿಂಗ್, ಚೀನಾ – ಇದರ ಶಾಶ್ವತ ಸದಸ್ಯ ಸಂಸ್ಥೆಯಾಗಿದೆ.
- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 'ಕಾಮನ್‌ವೆಲ್ತ್ ಆಫ್ ಲರ್ನಿಂಗ್' (COL) ಕೆನಡ, ಇದರ ಸಹಯೋಗವನ್ನು ೨೦೦೩ ರಿಂದ ಹೊಂದಿದೆ. 'ಕಾಮನ್‌ವೆಲ್ತ್ ಆಫ್ ಲರ್ನಿಂಗ್' ಎನ್ನುವುದು ದೂರ ಶಿಕ್ಷಣದಲ್ಲಿ ಮುಕ್ತಕಲಿಕಾ ತಿಳಿವಳಿಕೆ, ಸಂಪನ್ಮೂಲಗಳು ಮತ್ತು ತಂತ್ರಜ್ಞಾನಗಳ ಅಭಿವೃದ್ಧಿ ಮತ್ತು ಹಂಚುವಿಕೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಕಾಮನ್‌ವೆಲ್ತ್ ದೇಶಗಳ ಸರ್ಕಾರಗಳಿಂದ ನಿರ್ಮಾಣಗೊಂಡ ಅಂತಾರಾಷ್ಟ್ರೀಯ ಸರ್ಕಾರಿ ಸಂಸ್ಥೆಯಾಗಿದೆ.

**ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ**

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006.

## ಎಂ.ಎ., ಇತಿಹಾಸ (ಅಂತಿಮ)

## ಪತ್ರಿಕೆ – 06 : ಇತಿಹಾಸ ಸಂಶೋಧನಾ ವಿಧಾನ ಮತ್ತು ಇತಿಹಾಸ ಬರವಣಿಗೆ


| | | | |
|---|---|---|---|
| **ಬ್ಲಾಕ್ – 1** | | **ಭಾರತೀಯರ ಇತಿಹಾಸ ಬರವಣಿಗೆ** | **ಪುಟ ಸಂಖ್ಯೆ** |
| **ಘಟಕ – 1** | : | ಇತಿಹಾಸದ ಅರ್ಥ – ವ್ಯಾಖ್ಯೆಗಳು – ಇತಿಹಾಸದ ಸ್ವರೂಪ ಮತ್ತು ವ್ಯಾಪ್ತಿ | 01 – 10 |
| **ಘಟಕ – 2** | : | ಇತಿಹಾಸದ ವಸ್ತು ವಿಷಯ ಮತ್ತು ಇತಿಹಾಸದ ವಿಧಗಳು | 11 – 19 |
| **ಘಟಕ – 3** | : | ಇತಿಹಾಸದ ಉದ್ದೇಶಗಳು – ಗುರಿ ಮತ್ತು ಉಪಯೋಗಗಳು | 20 – 27 |
| **ಘಟಕ – 4** | : | ಸಮಾಜ ವಿಜ್ಞಾನಗಳು ಮತ್ತು ಇತರೇ ವಿಜ್ಞಾನಗಳೊಂದಿಗೆ ಇತಿಹಾಸದ ಸಂಬಂಧ | 28 – 37 |
| **ಘಟಕ – 5** | : | ವಿಜ್ಞಾನ ಮತ್ತು ಕಲೆಯಾಗಿ ಇತಿಹಾಸ | 38 – 44 |
| **ಬ್ಲಾಕ್ – 2** | | **ಇತಿಹಾಸ ಸಂಶೋಧನಾ ವಿಧಾನಗಳು** | |
| **ಘಟಕ – 6** | : | ಸಂಶೋಧಕನ ಅರ್ಹತೆಗಳು – ಸಂಶೋಧನಾ ವಿಷಯದ ಆಯ್ಕೆ | 45 – 49 |
| **ಘಟಕ – 7** | : | ಬಾಹ್ಯ ವಿಮರ್ಶೆ ಮತ್ತು ಆಂತರಿಕ ವಿಮರ್ಶೆ | 50 – 59 |
| **ಘಟಕ – 8** | : | ನಕಾರಾತ್ಮಕ ವಿವರಣಾ ವಿಮರ್ಶೆ | 60 – 66 |
| **ಘಟಕ – 9** | : | ಸಂಯೋಜನಾ ಕಾರ್ಯಗಳು – ಸಂಶೋಧನಾ ಪ್ರಬಂಧ ಯೋಜನೆ, ರಚನಾತ್ಮಕ ಸಮರ್ಥನೆ – ಸಮಂಜಸ ಸಾಮಾನ್ಯೀಕರಣ | 67 – 76 |
| **ಘಟಕ – 10** | : | ಸಂಶೋಧನೆಯ ವಿವರಣೆ ಮತ್ತು ಸಂಶೋಧನಾ ಅಂಶಗಳ ಸಮರ್ಥಕ ಜೋಡಣೆ | 77 – 81 |
| **ಘಟಕ – 11** | : | ಇತಿಹಾಸದಲ್ಲಿ ವಾಸ್ತವಿಕತೆ ನಿರೂಪಣೆ | 82 – 87 |
| **ಬ್ಲಾಕ್ – 3** | | **ಪ್ರಾಚೀನ ಮತ್ತು ಮಧ್ಯಕಾಲೀನ ಇತಿಹಾಸ ಬರವಣಿಗೆ** | |
| **ಘಟಕ – 12** | : | ಗ್ರೀಕರ ಇತಿಹಾಸ ಬರವಣಿಗೆ – ಹೆರೊಡೋಟಸ್, ಥೂಸಿಡೈಡಿಸ್ ಹಾಗೂ ಇತರ ಗ್ರೀಕ್ ಇತಿಹಾಸ ಬರಹಗಾರರು | 88 – 98 |
| **ಘಟಕ – 13** | : | ರೋಮನ್ ಇತಿಹಾಸ ಲೇಖನ ಕಲೆ – ಕ್ಯಾಟೊ, ಲಿವಿ, ಟ್ಯಾಸಿಟಸ್ ಮತ್ತು ಇತರರು | 99 – 108 |
| **ಘಟಕ – 14** | : | ಕ್ರೈಸ್ತ ಇತಿಹಾಸ ಲೇಖನ ಕಲೆ – ಸಂತ ಅಗಸ್ಟಿನ್ ಮತ್ತು ಇತರರು | 109 – 117 |
| **ಘಟಕ – 15** | : | ಅರಬ್ ಇತಿಹಾಸ ಲೇಖನ ಕಲೆ – ಇಬ್ನ್ಖಾಲ್ಡೂನ್ | 118 – 126 |

## ಬ್ಲಾಕ್ – 4 ನವೋದಯ ಮತ್ತು ರಮ್ಯತೆಯ ಇತಿಹಾಸ ಬರವಣಿಗೆ

ಘಟಕ – 16 : ವಾಲ್ಟೈರ್ – ರೂಸೋ 127 – 130

ಘಟಕ – 17 : ಕ್ಯಾಂಟ್ – ಟರ್ಗಾಟ್ – ಕಾಂಡೋರ್ಸೆಟ್ ಮತ್ತು ಇತರರು 131 – 135

ಘಟಕ – 18 : ಥಾಮಸ್ ಕಾರ್ಲೈಲ್ – ಹೆಗಲ್ 136 – 141

## ಬ್ಲಾಕ್ – 5 ಖಂಡಿತಾವಾದಿಗಳ ಕಾಲದ ಇತಿಹಾಸ ಬರವಣಿಗೆ

ಘಟಕ – 19 : ಆಗಸ್ಟ್ ಕಾಮ್ಟೆ (1798–1857) 142 – 149

ಘಟಕ – 20 : ಎಡ್ವರ್ಡ್ ಗಿಬ್ಬನ್ (1727–1794) 150 – 153

ಘಟಕ – 21 : ಲಿಯೋ ಪಾಲ್ಡ್ ವಾನ್ ರ್‍ಯಾಂಕೆ (1795–1850) 154 – 157

## ಬ್ಲಾಕ್ – 6 19 ಮತ್ತು 20ನೇ ಶತಮಾನದ ಇತಿಹಾಸ ಬರವಣಿಗೆ

ಘಟಕ – 22 : ಬೆನೆಡಿಟೋ ಕೋಷೆ (1866–1952) 158 – 162

ಘಟಕ – 23 : ಕಾರ್ಲ್ ಮಾರ್ಕ್ಸ್ (1818–1883) 163 – 167

ಘಟಕ – 24 : ಆಸ್ವಾಲ್ಡ್ ಸ್ಪೆಂಗ್ಲರ್ (1880–1936) 168 – 174

ಘಟಕ – 25 : ಆರ್ನಾಲ್ಡ್ ಟಾಯನ್ಬಿ (1889–1975) 175 – 181

## ಬ್ಲಾಕ್ – 7 ಭಾರತೀಯರ ಇತಿಹಾಸ ಬರವಣಿಗೆ

ಘಟಕ – 26 : ಪ್ರಾಚೀನ ಮತ್ತು ಮಧ್ಯಕಾಲೀನ ಭಾರತದ ಇತಿಹಾಸ ಬರವಣಿಗೆ 182 – 194

ಘಟಕ – 27 : ಆಧುನಿಕ ಭಾರತದ ಇತಿಹಾಸ ಬರವಣಿಗೆ 195 – 205

ಘಟಕ – 28 : ಆಧುನಿಕ ಭಾರತದ ಪ್ರಮುಖ ಇತಿಹಾಸಕಾರರ ಇತಿಹಾಸಲೇಖನ ಕಲೆ 206 – 221

## ಪಠ್ಯಕ್ರಮ ವಿನ್ಯಾಸ ಮತ್ತು ಸಂಪಾದಕ ಮಂಡಳಿ


**ಪ್ರೊ. ಎಂ. ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಪ್ರೊ. ಟಿ. ಡಿ. ದೇವೇಗೌಡ**
ಡೀನ್ (ಶೈಕ್ಷಣಿಕ) ಸಮಾವೇಶಕರು (ಪ್ರಭಾರ)
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ವಿಷಯ ಸಂಯೋಜಕರು**

**ಪ್ರೊ. ಎ. ಸೋಮಶೇಖರ್**
ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು


## ಪಠ್ಯಕ್ರಮ ನಿರೂಪಕರು

| ಪಠ್ಯಕ್ರಮ ನಿರೂಪಕರು | | ಘಟಕಗಳು |
|---|---|---|
| **ಪ್ರೊ. ಎ. ಸೋಮಶೇಖರ್**<br>ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು<br>ಇತಿಹಾಸ ಮತ್ತು ಸಂಶೋಧನಾ ವಿಭಾಗ<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು | ಬ್ಲಾಕ್–1<br>ಬ್ಲಾಕ್–2 | 01 ರಿಂದ 05<br>06 ರಿಂದ 11 |
| **ಪ್ರೊ. ಶಿವಣ್ಣ**<br>ನಿವೃತ್ತ ಪ್ರಾಧ್ಯಾಪಕರು,<br>ಇತಿಹಾಸ ಅಧ್ಯಯನ ವಿಭಾಗ<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. | ಬ್ಲಾಕ್–3 | 12 ರಿಂದ 15 |
| **ಪ್ರೊ. ಎ. ಸೋಮಶೇಖರ್**<br>ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು<br>ಇತಿಹಾಸ ಮತ್ತು ಸಂಶೋಧನಾ ವಿಭಾಗ<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು | ಬ್ಲಾಕ್–4<br>ಬ್ಲಾಕ್–5<br>ಬ್ಲಾಕ್–6 | 16 ರಿಂದ 18<br>19 ರಿಂದ 21<br>22 ರಿಂದ 25 |
| **ಡಾ. ವೈ. ಹೆಚ್. ನಾಯಕವಾಡಿ**<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. | ಬ್ಲಾಕ್–7 | 26 ರಿಂದ 30 |

## ಕುಲಸಚಿವರು


ಕ.ರಾ.ಮು.ವಿ., ಯ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, 2014

ಎಲ್ಲಾ ಹಕ್ಕುಗಳನ್ನು ಕಾದಿರಿಸಲಾಗಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸ್‌ಗಳ ಹೆಚ್ಚಿನ ವಿವರಗಳನ್ನು ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮುಕ್ತಗಂಗೋತ್ರಿ, ಮೈಸೂರು – 570 006 ಇಲ್ಲಿಂದ ಪಡೆಯಬಹುದು.

## ಕೋರ್ಸ್ – 6

## ಇತಿಹಾಸ ಸಂಶೋಧನಾ ವಿಧಾನ ಮತ್ತು ಇತಿಹಾಸ ಬರವಣಿಗೆ

**ಪೀಠಿಕೆ :–**

ಕೋರ್ಸ್ 6ರ ಮೊದಲನೇ ಬ್ಲಾಕ್‌ನಲ್ಲಿ ನೀವು 5ಘಟಕಗಳನ್ನು ಗುರುತಿಸಿ ಅಧ್ಯಯನ ಮಾಡುತ್ತೀರಿ. ಅವುಗಳೆಲ್ಲವೂ ಇತಿಹಾಸದ ಪ್ರಾಥಮಿಕ ಅಧ್ಯಯನಗಳೆಂದೂ ಮತ್ತು ಯಾವುದೇ ಇತಿಹಾಸವನ್ನು ಅಧ್ಯಯನ ಮಾಡುವ ಮುನ್ನ ಅತ್ಯವಶ್ಯಕವಾಗಿ ಮನನ ಮಾಡುವಂತಹ ಅಧ್ಯಾಯಗಳಾಗಿವೆ. ಈ ಘಟಕಗಳ ಅಧ್ಯಯನವು ಇತಿಹಾಸದ ವಿದ್ಯಾರ್ಥಿಗಳು ಹಾಗೂ ಎಲ್ಲಾ ಜನಸಾಮಾನ್ಯರೂ ತಿಳಿಯಲೇ ಬೇಕಾದ ವಿಷಯಗಳಾಗಿವೆ.

ಈ ಬ್ಲಾಕ್ 1ರಲ್ಲಿ, ಐದು ಘಟಕಗಳಿದ್ದು ಘಟಕ 1ರಲ್ಲಿ ನೀವುಗಳು ಇತಿಹಾಸದ ಅರ್ಥ, ವ್ಯಾಖ್ಯೆಗಳು, ಸ್ವರೂಪ ಮತ್ತು ಇತಿಹಾಸದ ವ್ಯಾಪ್ತಿಯನ್ನು ತಿಳಿಯುವಿರಿ. ಘಟಕ–2ರಲ್ಲಿ ಇತಿಹಾಸದ ವಸ್ತು ವಿಷಯಗಳು ಮತ್ತು ಇತಿಹಾಸದ ಹಲವು ವಿಧಗಳ ಬಗ್ಗೆ ಅಧ್ಯಯನ ಮಾಡುತ್ತೀರಿ. ಘಟಕ–3ರಲ್ಲಿ ಇತಿಹಾಸದ ಉದ್ದೇಶ, ಗುರಿ ಮತ್ತು ಇತಿಹಾಸದ ಉಪಯೋಗಗಳನ್ನು ಸಹ ತಿಳಿಯುತ್ತೀರಿ. ಘಟಕ 4ರಲ್ಲಿ ಇತಿಹಾಸವು ಸಮಾಜ ವಿಜ್ಞಾನಗಳು ಮತ್ತು ಇತರೇ ವಿಷಯ ವಿಜ್ಞಾನಗಳೊಂದಿಗೆ ಹೊಂದಿರುವ ಸ್ನೇಹ ಸಂಬಂಧವನ್ನು ಅರಿಯುವಿರಿ. ಇನ್ನು ಘಟಕ 5ರಲ್ಲಿ ಇತಿಹಾಸವು ವಿಜ್ಞಾನವೇ ಅಥವಾ ಕಲೆಯೇ ಅಥವಾ ಇತಿಹಾಸವನ್ನು ವಿಜ್ಞಾನ ಮತ್ತು ಕಲೆಯೂ ಹೌದು ಎಂಬುದಾಗಿ ಅಧ್ಯಯನ ಮಾಡುತ್ತೀರಿ.

**ಬ್ಲಾಕ್ – 2ರ ಪರಿಚಯ:–**

ಕೋರ್ಸ್ 6ರ ಬ್ಲಾಕ್ 2ರಲ್ಲಿ ನೀವು 6 ಘಟಕಗಳನ್ನು ಅಧ್ಯಯನ ಮಾಡುತ್ತೀರಿ. ಈ ಆರೂ ಅಧ್ಯಾಯಗಳು ಇತಿಹಾಸ ಸಂಶೋಧನಾ ವಿಧಾನಗಳ ಬಗ್ಗೆ ವಿವರಣೆ ನೀಡುತ್ತವೆ. ಘಟಕ 6ರಲ್ಲಿ ಇತಿಹಾಸ ಸಂಶೋಧಕನ ಅರ್ಹತೆಗಳು ಮತ್ತು ಸಂಶೋಧನಾ ವಿಷಯದ ಆಯ್ಕೆಯನ್ನು ತಿಳಿಯುತ್ತೀರಿ. 7ನೇ ಘಟಕದಲ್ಲಿ ಬಾಹ್ಯ ವಿಮರ್ಶೆ ಮತ್ತು ಆಂತರಿಕ ವಿಮರ್ಶೆಗಳ ಕಾರ್ಯವಿಧಾನವನ್ನು ಚರ್ಚಿಸುತ್ತೀರಿ. 8ನೇ ಘಟಕದಲ್ಲಿ ಆಂತರಿಕ ವಿಮರ್ಶೆಯ ಪ್ರಮುಖ ಘಟ್ಟವಾದ ನಕಾರಾತ್ಮಕ ವಿವರಣಾ ವಿಮರ್ಶೆಯನ್ನು ತಿಳಿಯುತ್ತೀರಿ. 9ನೇ ಘಟಕದಲ್ಲಿ ಸಂಯೋಜನಾ ಕಾರ್ಯಗಳನ್ನು ಅಧ್ಯಯನ ಮಾಡುತ್ತಾ ಸಂಶೋಧನಾ ಪ್ರಬಂಧದ ಯೋಜನೆ, ವಿಷಯಗಳ ರಚನಾತ್ಮಕ ಸಮರ್ಥನೆ ಮತ್ತು ವಿಷಯಗಳ ಸಮಂಜಸ ಸಾಮಾನ್ಯೀಕರಣವನ್ನು ತಿಳಿಯುತ್ತೀರಿ. 10ನೇ ಘಟಕದಲ್ಲಿ ಸಂಶೋಧನೆಯ ಅಧ್ಯಯನದ ವಿವರಣೆಯನ್ನು ಹಾಗೂ ಅವುಗಳನ್ನು ವಿಷಯಕ್ಕೆ ತಕ್ಕಂತೆ ಜೋಡಣೆ ಮಾಡುವ ಕಾರ್ಯವನ್ನು ನಿರ್ಧರಿಸುವುದನ್ನು ಅರಿಯುವಿರಿ. ಇನ್ನು 11ನೇ ಘಟಕದಲ್ಲಿ ಇತಿಹಾಸದಲ್ಲಿ ವಸ್ತು ನಿಷ್ಠತೆಯನ್ನು ಕಾಪಾಡುವ ನಿರೂಪಣೆಯ ಬಗ್ಗೆ ತಿಳಿಯುತ್ತೀರಿ.

**ಬ್ಲಾಕ್ – 3ರ ಪರಿಚಯ:–**

**ಘಟಕ 12:** ಗ್ರೀಕರ ಇತಿಹಾಸ ಲೇಖನ ಕಲೆಗೆ ಸಂಬಂಧಿಸಿದುದು. ನೀವು ಈ ಘಟಕವನ್ನು ಅಧ್ಯಯನ ಮಾಡುವುದರಿಂದ ಪ್ರಸಿದ್ಧ ಗ್ರೀಕ್ ಇತಿಹಾಸಕಾರಾದ ಹೆರೊಡೋಟಸ್ ಮತ್ತು ಥೂಸಿಡೈಡೀಸ್‌ರ ಬಗ್ಗೆ ತಿಳಿದುಕೊಳ್ಳುವಿರಿ. ಇದರ ಜೊತೆಗೆ ಇನ್ನುಳಿದ ಇತಿಹಾಸಕಾರರಾದ ಜೆನೋಫನ್ ಮತ್ತು ಪಾಲಿಬಿಯಸ್‌ರ ಬಗ್ಗೆ ತಿಳಿಯುವಿರಿ. ಇತಿಹಾಸ ಲೇಖನ ಕಲೆ ಗ್ರೀಕರಿಂದ ಪ್ರಾರಂಭವಾದುದೆಂಬುದನ್ನು ಕೂಡ ಅರಿಯುವಿರಿ.

**ಘಟಕ 13:** ರೋಮನ್ ಇತಿಹಾಸ ಲೇಖನ ಕಲೆಗೆ ಸಂಬಂಧಿಸಿದುದು. ಇತಿಹಾಸ ಲೇಖನ ಕಲೆಯನ್ನು ಬೆಳೆಸು ವುದರಲ್ಲಿ ಗ್ರೀಕರ ಉತ್ತರಾಧಿಕಾರಿಗಳಾಗಿ ಬಂದವರು ರೋಮನ್ನರು ಎಂಬುದನ್ನು ಈ ಘಟಕವನ್ನು ಅಧ್ಯಯನ ಮಾಡುವುದರಿಂದ

ತಿಳಿದುಕೊಳ್ಳುವಿರಿ. ಲಿವಿ ಮತ್ತು ಟ್ಯಾಸಿಟಸ್ ರೋಮನ್ ಇತಿಹಾಸಕಾರರಲ್ಲಿ ಪ್ರಮುಖರು ಎಂಬುದನ್ನು ಕೂಡ ಈ ಘಟಕದಿಂದ ತಿಳಿಯುವಿರಿ.

**ಘಟಕ 14:** ಕ್ರೈಸ್ತ ಇತಿಹಾಸ ಲೇಖನ ಕಲೆಯ ಬೆಳವಣಿಗೆಯನ್ನು ವಿವರಿಸುತ್ತದೆ. ಕ್ರೈಸ್ತ ಧರ್ಮದ ಉದಯ ಇತಿಹಾಸ ಲೇಖನ ಕಲೆಯ ಮೇಲೆ ಎಷ್ಟರ ಮಟ್ಟಿಗೆ ಪ್ರಭಾವ ಬೀರಿತು ಎಂಬುದನ್ನು ಈ ಘಟಕವನ್ನು ಓದುವುದರಿಂದ ನೀವು ತಿಳಿದುಕೊಳ್ಳುವಿರಿ. ಮಧ್ಯಕಾಲೀನ ಯುಗದಲ್ಲಿ ಕ್ರೈಸ್ತಧರ್ಮದ ಅನೇಕ ವಿದ್ವಾಂಸರು ಇತಿಹಾಸಲೇಖನ ಕಲೆಯ ಬೆಳವಣಿಗೆಗೆ ಕಾರಣರಾದರು ಎಂಬುದನ್ನು ಅರಿಯುವಿರಿ. ಕ್ರೈಸ್ತ ಇತಿಹಾಸ ಲೇಖನ ಕಲೆಯಲ್ಲಿ ಯುಸೆಬಿಯಸ್ ಮೊಟ್ಟ ಮೊದಲನೆಯ ಪ್ರಮುಖ ಇತಿಹಾಸಕಾರ ಹಾಗೂ ಸಂತ ಅಗಸ್ಟಿನ್ ಅತ್ಯಂತ ಶ್ರೇಷ್ಠ ಇತಿಹಾಸಕಾರನೆಂಬುದನ್ನು ಈ ಘಟಕದ ಅಧ್ಯಯನದಿಂದ ಅರ್ಥಮಾಡಿಕೊಳ್ಳುವಿರಿ.

ಘಟಕ 15: ಅರಬ್ ಇತಿಹಾಸ ಲೇಖನ ಕಲೆಯ ಬೆಳವಣಿಗೆಗೆ ಸಂಬಂಧಿಸಿದುದು. ಮಧ್ಯಕಾಲೀನ ಯುಗದಲ್ಲಿ ಅರಬರು ಕೂಡ ಇತಿಹಾಸಲೇಖನ ಕಲೆಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದರು ಎಂಬುದನ್ನು ಈ ಘಟಕವನ್ನು ಓದುವುದರಿಂದ ನೀವು ಅರ್ಥಮಾಡಿಕೊಳ್ಳುವಿರಿ. ಅರಬರ ಶ್ರೇಷ್ಠ ಇತಿಹಾಸಕಾರನೆಂದರೆ ಇಬ್ನೈಖಾಲ್ದೂನ್ ಎಂಬುದನ್ನು ಕೂಡ ನಿಮಗೆ ಈ ಘಟಕ ತಿಳಿಸಿಕೊಡುತ್ತದೆ.

**ಬ್ಲಾಕ್ – 4ರ ಪರಿಚಯ:–**

ಈ ಬ್ಲಾಕ್ 4ರಲ್ಲಿ ಮೂರು ಘಟಕಗಳಿವೆ. ಇವುಗಳು ಆ ಕಾಲದ ನವೋದಯ ಮತ್ತು ರಮ್ಯತೆಯ ಇತಿಹಾಸ ಬರವಣಿಗೆಗಳು ಮತ್ತು ಅವುಗಳ ಪ್ರತಿಪಾದಕರ ಬಗ್ಗೆ ಮಹತ್ವವಾಗಿ ತಿಳಿಸುತ್ತದೆ.

ಘಟಕ 16ರಲ್ಲಿ ಪ್ರಸಿದ್ಧ ವೈಚಾರಿಕ ವಿದ್ವಾಂಸರಾದ ವಾಲ್ಟೈರ್ ಮತ್ತು ರೂಸೋರ ಬಗ್ಗೆ ತಿಳಿಯುತ್ತೇವೆ. ಇವರ ಚಿಂತನೆಗಳು ಮತ್ತು ನವೋದಯದ ಸಿದ್ಧಾಂತಗಳ ಬಗ್ಗೆ ಅರಿಯುತ್ತೇವೆ.

ಘಟಕ 17ರಲ್ಲಿ ನವೋದಯದ ರೂವಾರಿಗಳಾದ ಇಮ್ಯಾನ್ಯೂಯೆಲ್ ಕ್ಯಾಂಟ್, ಟರ್ಗಾಟ್ ಹಾಗೂ ಕಾಂಡೋರ್ಸೆಟ್‌ರವರ ಬಗ್ಗೆ ತಿಳಿಯುವುದಲ್ಲದೆ ಈ ಚಿಂತನೆಗಳಿಗೆ ಇವರ ಕೊಡುಗೆಯನ್ನು ಸಹ ಅಧ್ಯಯನ ನಡೆಸಲಾಗುವುದು.

ಘಟಕ 18ರಲ್ಲಿ ರಮ್ಯತೆಯ ಇತಿಹಾಸ ಪ್ರತಿಪಾದಕರಾದ ಥಾಮಸ್ ಕಾರ್ಲೈಲ್ ಮತ್ತು ಹೆಗೆಲ್‌ರ ಬಗ್ಗೆ ವಿಶೇಷ ಅಧ್ಯಯನ ನಡೆಸಲಾಗುವುದು. ಇವರ ಈ ರಮ್ಯತೆಯ ಬರವಣಿಗೆಯಿಂದ ಆದಂತಹ ಆಕರ್ಷಣೆ ಮತ್ತು ಜನಾನುರಾಗಿ ತಂತ್ರಗಳು ಇತಿಹಾಸ ಆಗಿರುವ ಬಗ್ಗೆ ಅಧ್ಯಯನ ನಡೆಸಲಾಗುವುದು.

**ಬ್ಲಾಕ್ – 5ರ ಪರಿಚಯ:–**

ಈ ಬ್ಲಾಕ್‌ನಲ್ಲಿ ಮೂರು ಘಟಕಗಳಿದ್ದು, ಇವುಗಳೆಲ್ಲವೂ ಖಂಡಿತವಾದಿಗಳ ಕಾಲದ ಇತಿಹಾಸ ಬರವಣಿಗೆಯನ್ನು ಕುರಿತು ವಿಸ್ತೃತವಾದ ಅಧ್ಯಯನವನ್ನು ಮಾಡುವುದಾಗಿದೆ.

ಘಟಕ 19ರಲ್ಲಿ ಪ್ರಖ್ಯಾತ ಖಂಡಿತವಾದದ ಪ್ರತಿಪಾದಕರಾದ ಆಗಸ್ಟ್ ಕಾಮ್ಟೆಯ ಬಗ್ಗೆ ಅಧ್ಯಯನ ಮಾಡಲಾಗುವುದು. ಅವನ ಚಿಂತನೆಗಳು ಮತ್ತು ಈ ಪಂಥಕ್ಕೆ ಅವನು ನೀಡಿದ ಕೊಡುಗೆಯನ್ನು ಸಹ ತಿಳಿಯಲಾಗುವುದು.

ಘಟಕ 20ರಲ್ಲಿ ಮತ್ತೊಬ್ಬ ಖಂಡಿತವಾದಿ ಮತ್ತು ಪ್ರಸಿದ್ಧ ಇತಿಹಾಸ ಸಂಶೋಧನಾ ವಿಧಾನವನ್ನು ತಿಳಿಸಿರುವ ಇಂಗ್ಲೆಂಡಿನ ವಿದ್ವಾಂಸ ಎಡ್ವರ್ಡ್ ಗಿಬ್ಬನ್ನನ ಬಗ್ಗೆ ತಿಳಿಯಲಾಗುವುದು. ಇವರ ಚಿಂತನೆಗಳು ಈ ಪಂಥದ ಬೆಳವಣಿಗೆಗೆ ಕಾರಣವಾಯಿತ್ತಲ್ಲದೇ ಈ ಪಂಥದ ರೂವಾರಿಯಾದ ಗಿಬ್ಬನ್ನನ ಇತಿಹಾಸಕಾರರೆಲ್ಲೆಲ್ಲಾ ಆಕರ್ಷಕ ಮತ್ತು ಅನುಕರಣೀಯ ಇತಿಹಾಸಕಾರವಾದುದದನ್ನು ಇಲ್ಲಿ ಅಧ್ಯಯನ ಮಾಡಲಾಗುವುದು.

ಘಟಕ 21ರಲ್ಲಿ ಇತಿಹಾಸ ಬರಹಗಾರರಲ್ಲಿ ಸುಪ್ರಸಿದ್ಧನೂ ಹಾಗೂ ವೈಜ್ಞಾನಿಕ ವಿಧಾನದ ಇತಿಹಾಸ ಸಂಶೋಧನೆಯ ಪ್ರತಿಪಾದಕನೂ ಆದ ಲಿಯೋ ಪಾಲ್ಡ್ ವಾನ್ ರ್‍ಯಾಂಕೆಯ ಬಗ್ಗೆ ತಿಳಿಯಲಾಗುವುದು. ಇವನು ಇತಿಹಾಸ ಸಂಶೋಧನೆ ಮತ್ತು ವಿಷಯ ನಿರೂಪಣೆಯಲ್ಲಿ ವಸ್ತುನಿಷ್ಠತೆ ಹಾಗೂ ವೈಜ್ಞಾನಿಕತೆಯನ್ನು ತರಲು ಪ್ರಯತ್ನಪಟ್ಟ ಬಗ್ಗೆ ತಿಳಿಯಲಾಗುವುದು.

**ಬ್ಲಾಕ್ – 6ರ ಪರಿಚಯ:–**

ಕೋರ್ಸ್ 6ರ ಬ್ಲಾಕ್ 6ರಲ್ಲಿ ನಾಲ್ಕು ಘಟಕಗಳಿವೆ. ಈ ಘಟಕಗಳು 19 ಮತ್ತು 20ನೇ ಶತಮಾನ ಇತಿಹಾಸ ಬರಹಗಾರರ ಬಗ್ಗೆ ತಿಳಿಸುತ್ತದೆ. ಘಟಕ 22 ಪ್ರಖ್ಯಾತ ಇತಿಹಾಸಜ್ಞ ಮತ್ತು ಇತಿಹಾಸ ಒಂದು ಕಲೆಯಾಗಿದ್ದು ಎಲ್ಲರಿಗೂ ಸಂತೋಷವನ್ನು ನೀಡುತ್ತದೆಂದು ವಿವರಿಸುವ ಬೆನೆಡಿಟ್ಟೋ ಕ್ರೋಷೆಯ ಬಗ್ಗೆ ತಿಳಿಸುತ್ತದೆ. ಘಟಕ 23, ಪ್ರಖ್ಯಾತ ಇತಿಹಾಸ ನಿರೂಪಕ ಮತ್ತು ಮಾರ್ಕ್ಸ್ ವಾದದಿಂದ ಇತಿಹಾಸವನ್ನು ಅಧ್ಯಯನ ಮಾಡಿದ ಕಾರ್ಲ್ ಮಾರ್ಕ್ಸ್‌ನ ಬಗ್ಗೆ ತಿಳಿಸುತ್ತದೆ. ಘಟಕ 24ರಲ್ಲಿ ವೈಜ್ಞಾನಿಕ ಇತಿಹಾಸವನ್ನು ಕುರಿತು ಅಧ್ಯಯನ ಮಾಡಿದ ಆಸ್ವಾಲ್ಡ್ ಸ್ಪೆಂಗರ್‌ನ ಬಗ್ಗೆ ಅಧ್ಯಯನ ಮಾಡುತ್ತೇವೆ.

ಘಟಕ 25ರಲ್ಲಿ ಪ್ರಖ್ಯಾತ ಇತಿಹಾಸಕಾರ ಮತ್ತು ಸಂಶೋಧಕ ಇಂಗ್ಲೆಂಡಿನ ಆರ್ನಾಲ್ಡ್ ಜೆ. ಟಾಯನ್ಬಿಯವರ ಬಗ್ಗೆ ಅಧ್ಯಯನ ಮಾಡುತ್ತೇವೆ.

**ಬ್ಲಾಕ್ – 7ರ ಪರಿಚಯ:–**

ಕೋರ್ಸ್ 6ರಲ್ಲಿ ಬ್ಲಾಕ್ 7 ಒಂದು ಪ್ರಮುಖ ವಿಭಾಗವಾಗಿದ್ದು, ಈ ಬ್ಲಾಕ್‌ನಲ್ಲಿ ನೀವುಗಳು ಮೂರು ಘಟಕಗಳನ್ನು ಅಧ್ಯಯನ ಮಾಡುವಿರಿ. ಘಟಕ 26ರಲ್ಲಿ ನೀವುಗಳು ಪ್ರಾಚೀನ ಉತ್ತರ ಭಾರತದ ಇತಿಹಾಸದ ಬಗೆಗೆ, ಪ್ರಾಚೀನ ದಕ್ಷಿಣ ಭಾರತದ ಇತಿಹಾಸ ಬರವಣಿಗೆ, ದೆಹಲಿ ಸುಲ್ತಾನರ ಕಾಲದ ಇತಿಹಾಸ ಬರವಣಿಗೆ ಮತ್ತು ಮೊಗಲರ ಕಾಲದ ಇತಿಹಾಸ ಬರವಣಿಗೆಯನ್ನು ಅಧ್ಯಯನ ಮಾಡುವಿರಿ. ಘಟಕ 27ರಲ್ಲಿ ಪ್ರಾಚ್ಯ ವಿದ್ಯಾವಿದರ ಕಾಲದ ಇತಿಹಾಸ ಬರವಣಿಗೆ, ರಾಷ್ಟ್ರೀಯವಾದದ ಕಾಲದ ಇತಿಹಾಸ ಬರವಣಿಗೆಯನ್ನು ತಿಳಿಯುವಿರಿ. ಇನ್ನು ಘಟಕ 28ರಲ್ಲಿ ಆಧುನಿಕ ಭಾರತದ ಇತಿಹಾಸಕಾರರಾದ ಜಾದೂನಾಥ್ ಸರ್ಕಾರ್. ಆರ್.ಸಿ. ಮಜುಂದಾರ್, ಡಿ. ಡಿ. ಕೋಸಾಂಬಿ, ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ನೀಲಕಂತಶಾಸ್ತ್ರಿ, ಕೆ. ಎಂ. ಫಣಿಕ್ಕರ್ ಮುಂತಾದವರು ಇತಿಹಾಸ ಬರವಣಿಗೆಗೆ ನೀಡಿದ ಕೊಡುಗೆಗಳನ್ನು ತಿಳಿಯುವಿರಿ.

**ನಿಮಗೆಲ್ಲಾ ಶುಭವನ್ನು ಹಾರೈಸುವ**

**ಪ್ರೊ. ಎ. ಸೋಮಶೇಖರ್**
ಅಧ್ಯಕ್ಷರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು

# ಘಟಕ- 1 ಇತಿಹಾಸದ ಅರ್ಥ, ವ್ಯಾಖ್ಯೆಗಳು-ಇತಿಹಾಸದ ಸ್ವರೂಪ ಮತ್ತು ವ್ಯಾಪ್ತಿ

ವಿಷಯಾನುಕ್ರಮಣಿಕೆ


1.0 ಉದ್ದೇಶಗಳು

1.1 ಪೀಠಿಕೆ

1.2 ಇತಿಹಾಸದ ಅರ್ಥ ಮತ್ತು ವ್ಯಾಖ್ಯೆಗಳು

1.3 ಇತಿಹಾಸದ ಸ್ವರೂಪ

1.4 ಇತಿಹಾಸದ ವ್ಯಾಪ್ತಿ

1.5 ಘಟಕದ ಸಾರಾಂಶ

1.6 ಸ್ವಯಂ ಮೌಲ್ಯಮಾಪನ ಪ್ರಶ್ನೆಗಳು

1.7 ಆಯ್ದ ಗ್ರಂಥಗಳ ಪಟ್ಟಿ

## 1.0 ಉದ್ದೇಶಗಳು

ನಲ್ಮೆಯ ಶಿಕ್ಷಣಾರ್ಥಿಗಳೇ,

ಈ ಘಟಕವನ್ನು ಅಧ್ಯಯನ ಮಾಡುವುದರಿಂದ ನೀವು ಈ ಕೆಳಗಿನ ವಿಷಯಗಳನ್ನು ತಿಳಿಯುವಿರಿ.

* ಇತಿಹಾಸದ ಅರ್ಥ ಮತ್ತು ಇತಿಹಾಸವನ್ನು ಕುರಿತು ಪ್ರಮುಖ ಇತಿಹಾಸಕಾರರು ನೀಡಿರುವ ಇತಿಹಾಸದ ಹತ್ತು ಹಲವು ವ್ಯಾಖ್ಯೆಗಳನ್ನು ತಿಳಿಯುವಿರಿ.

* ಇತಿಹಾಸದ ಮೂಲ ಸ್ವರೂಪವನ್ನು ಸಹ ಅರಿತುಕೊಳ್ಳುವಿರಿ.

* ಇದಲ್ಲದೇ ಇತಿಹಾಸ ವಿಷಯದ ವ್ಯಾಪ್ತಿಯ ಬಗ್ಗೆಯು ಸಹ ಅರ್ಥ ಮಾಡಿಕೊಳ್ಳುವಿರಿ.

## 1.1 ಪೀಠಿಕೆ

ಪ್ರೀತಿಯ ವಿದ್ಯಾರ್ಥಿ ಯಾವುದೇ ಒಬ್ಬ ವ್ಯಕ್ತಿಯೇ ಆಗಲಿ ತನ್ನ ದೇಶದ ಮತ್ತು ಪ್ರಪಂಚದ ಇತಿಹಾಸವನ್ನು ತಿಳಿದುಕೊಳ್ಳಬೇಕು. ಇಲ್ಲದಿದ್ದಲ್ಲಿ ಅವನ ಜೀವನ ವ್ಯರ್ಥವೆಂದು ಕಾಣಿಸುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸಕ್ತ ಘಟಕ ಒಂದರಲ್ಲಿ ನೀವು ಪ್ರಪಂಚದಲ್ಲಿ ಇತಿಹಾಸವು ಯಾವ ರೀತಿಯಲ್ಲಿ ನಿರ್ಮಾಣವಾಯಿತೆಂಬುದನ್ನು ಅರ್ಥ ಮಾಡಿಕೊಳ್ಳುವಿರಿ. ಸಮಾದಲ್ಲಿ ಇತಿಹಾಸದ ಪ್ರಾಮುಖ್ಯತೆಯೇನು? ಮತ್ತು ಅರ್ಥವೇನು?ಎಂಬುದನ್ನೂ ಇತಿಹಾಸದ ಬಗ್ಗೆ ಪ್ರಮುಖ ಇತಿಹಾಸಕಾರರು ಹಾಗೂ ವಿದ್ವಾಂಸರು ನೀಡಿರುವ ಹಲವು ವ್ಯಾಖ್ಯೆಗಳನ್ನೂ ಇತಿಹಾಸದ ಸ್ವರೂಪವೆಂತದ್ದು?ಮತ್ತು ಇತಿಹಾಸಕ್ಕಿರುವ ವ್ಯಾಪ್ತಿಯನ್ನೂ ಕುರಿತು ಅಧ್ಯಯನ ನಡೆಸುವಿರಿ. ಈ ಅಧ್ಯಯನದಿಂದ ಸಮಾಜಕ್ಕೆ ಎಷ್ಟು ಅನುಕೂಲವಾಗುತ್ತದೆಂಬುದನ್ನೂ ಸಹ ತಿಳಿಯುವಿರಿ.

## 1.2 ಇತಿಹಾಸದ ಅರ್ಥ ಮತ್ತು ವ್ಯಾಖ್ಯೆಗಳು

### 1.2.1 ಇತಿಹಾಸದ ಅರ್ಥ

ಇತಿಹಾಸದಲ್ಲಿ ಹಿಂದೆ ನಡೆದ ಘಟನೆಗಳನ್ನು ಸರಿಯಾದ ರೀತಿಯಲ್ಲಿ ಪ್ರಸ್ತುತ್ತ ಪಡಿಸುವ ನಿಟ್ಟಿನಲ್ಲಿ ಇತಿಹಾಸ ಸಂಶೋಧನಾ ವಿಧಾನವು ಬೆಳೆದು ಕೊಂಡು ಬಂದಿದೆ. ಈ ಸಂಶೋಧನಾ ವಿಧಾನವು ವಿದ್ವಾಂಸರು ಇತಿಹಾಸವನ್ನು ಬರೆಯುವ ಕಲೆಯನ್ನು ಕಲಿಸಿಕೊಡುತ್ತದೆ. ಈ ಇತಿಹಾಸ ಬರವಣಿಗೆಯ ವಿಧಾನವನ್ನು ಕಲಿಯುವ ಮುನ್ನ ಇತಿಹಾಸ ವಿದ್ಯಾರ್ಥಿಯು ಪ್ರಶ್ನೆಗಳಾದ ಇತಿಹಾಸವೆಂದರೇನು?ಎಂಬ ಈ ಪ್ರಶ್ನೆಗಳಿಗೆ ಅರ್ಥ ಹುಡುಕಿಕೊಳ್ಳಲು ಪ್ರಯತ್ನ ಮಾಡೋಣ.

ಇತಿಹಾಸದ ವಿಷಯವನ್ನು ಅಧ್ಯಯನ ಮಾಡುವ ಮೊದಲು ನಾವು ಇತಿಹಾಸದ ಅರ್ಥವನ್ನು ತಿಳಿದುಕೊಳ್ಳಬೇಕು. ಇಲ್ಲಿ 'ಇತಿಹಾಸ' ಎಂಬ ಪದದ ಅರ್ಥವನ್ನು ಸರಿಯಾಗಿ ಅರ್ಥೈಸಿಕೊಳ್ಳಬೇಕು. 'ಇತಿಹಾಸ'ಎಂಬ ಪದವು ಜರ್ಮನ್ ಭಾಷೆಯ 'ಜೆಸಿಸ್ಟೆ'ಎಂಬ ಪದದಿಂದ ಬಂದಿದ್ದು, ಇದರ ಅರ್ಥ ಹಿಂದಿನ ಘಟನೆಗಳನ್ನು ಬುದ್ಧಿವಂತಿಕೆಯಿಂದಲೂ ಹಾಗೂ ಪರಿಣಾಮಕಾರಿಯಾಗಿಯೂ ತಿಳಿಸುವುದಾಗಿದೆಯೆಂದು ಕೆಲವು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ. ಇನ್ನೂ ಕೆಲವು ವಿದ್ವಾಂಸರ ಪ್ರಕಾರ ಇತಿಹಾಸವು ಗ್ರೀಕ್ ಪದವಾಗಿದ್ದು, ಇದರ ಅರ್ಥ ವಿಚಾರಣೆ, ಸಂಶೋಧನೆ ಅನ್ವೇಷಣೆ ಅಥವಾ ಮಾಹಿತಿ ಎಂಬುದಾಗಿದೆ. ಬಹಳ ಕಾಲದವರೆಗೂ ಇತಿಹಾಸವು ಘಟನೆಗಳನ್ನು ಹೊರಸೂಸುವ ದಾಖಲೆಯೆಂದು ಪರಿಗಣಿಸಲ್ಪಟ್ಟಿದ್ದಿತು. ಆದರೆ ಇದಕ್ಕೂ ಮುಂದೆ ಸಾಗಿ ವಿದ್ವಾಂಸರು ಇತಿಹಾಸವು ಮಾನವನ ಜೀವನದಲ್ಲಿ ಗತಿಸಿದ ಹಲವು ಪ್ರಮುಖ ಘಟನೆಗಳೆ ಸಾರವೆಂಬುದಾಗಿದೆ ಎಂದು ತಿಳಿಸಿದ್ದಾರೆ. ಇನ್ನೊಂದು ಅರ್ಥದಲ್ಲಿ ಇತಿಹಾಸವೆಂದರೆ ಹಿಂದೆ ನಡೆದ ಘಟನೆಗಳ ಪ್ರತೀಕಗಳನ್ನು ಸಂರಕ್ಷಿಸುವುದಲ್ಲದೇ, ಹಿಂದೆ ಎಂಥಹ ಘಟನೆಗಳ ನಡೆದವು ಮತ್ತು ಪ್ರಸ್ತುತದಲ್ಲಿ ಏನು ನಡೆಯುತ್ತಿದೆ ಎಂಬುದರ ಪೂರ್ಣ ಚಿತ್ರಣವನ್ನು ನೀಡುವುದೇ ಆಗಿದೆ. ಈ ಪೂರ್ಣ ಪ್ರಕ್ರಿಯೆಯು ಮಾನವನ ನಿಯಮಿತ ಕಾರ್ಯ ಮುನ್ನಡೆಯ ಮಾರ್ಗವಾಗಿದೆಯೆಂದರೆ ತಪ್ಪಾಗಲಾರದು.

### 1.2.2 ಇತಿಹಾಸದ ವ್ಯಾಖ್ಯೆಗಳು

ಯಾವುದೇ ಒಂದು ವಿಷಯವನ್ನು ವ್ಯಾಖ್ಯಾನಿಸುವುದು ಅಷ್ಟು ಸುಲಭದ ಕೆಲಸವಲ್ಲ. ಇದು ಇತಿಹಾಸದ ವಿಷಯಕ್ಕೂ ಸಹ ಅನ್ವಯಿಸುತ್ತದೆ. ಸರ್ ಜಾನ್ ಆಡಮ್ಸ್ ಎಂಬ ವಿದ್ವಾಂಸರು ತಿಳಿಸುವಂತೆ, ಯಾವುದೇ ಒಬ್ಬ ತತ್ವಶಾಸ್ತ್ರ ವಿಷಯಗಳನ್ನು ತಿಳಿದುಕೊಂಡಿರುವ ದಾರ್ಶನಿಕರನ್ನು ಸಾವಿನ ದವಡೆಯಲ್ಲಿ ನೋವು ಅನುಭವಿಸುತ್ತಿರುವ ಒಂದು ನಾಯಿಯ ಬಗ್ಗೆ ವ್ಯಾಖ್ಯಾನಿಸಿ ಎಂಬುದಾಗಿ ಕೇಳಿದಾಗ ಅವನು ಅದನ್ನು ಸರಿಯಾಗಿ ವಿವರಿಸಲಾಗದೇ ತನ್ನ ಸಾವನ್ನು ಕಾಣಬಹುದೆಂದು ತಿಳಿಸುತ್ತಾರೆ. ಅಂದರೆ ಈ ಘಟನೆಯನ್ನು ವ್ಯಾಖ್ಯಾನಿಸುವುದು ಬಹಳ ಕಷ್ಟಕರವಾಗಿಯೆಂದರ್ಥ. ಇತಿಹಾಸವು ಮಾನವ ಜೀವನದ ಪ್ರಮುಖ ಘಟನೆಗಳ ದಾಖಲೆಯಾಗಿದ್ದು ಅವನ ಜೀವನದ ಕಷ್ಟಸುಖಗಳು ಮತ್ತು ಏರುಪೇರುಗಳ ಸಂಗಮವಾಗಿದೆಯೆನ್ನ ಬಹುದು. ಮಾನವನು ತನ್ನ ಆರಂಭಿಕ ಜೀವನದಲ್ಲಿ ಪ್ರಾಣಿಪಶುಗಳ ರೀತಿಯಲ್ಲಿ ಜೀವನ ನಡೆಸುತ್ತಿದ್ದು ಕ್ರೂರವಾಗಿ ಕಾಣಿಸುತ್ತಿದ್ದನಲ್ಲದೇ ಸುಂದರ ಜೀವನದಲ್ಲಿ ನಾಗರೀಕ ಲಕ್ಷಣಗಳ್ನು ಕಲಿತು ವನನಿರ್ಮಾಣ, ಪಟ್ಟಣಗಳ ನಿರ್ಮಾಣ ಮಾಡಿದ್ದು ಸುಸಂಸ್ಕೃತನಂತೆ ಕಾಣತ್ತಿದ್ದ ಕಾಲವನ್ನು ಸಹಾ ಇತಿಹಾಸದಲ್ಲಿ ಕಾಣತ್ತೇವೆ. ಇತಿಹಾಸಕಾರನು ಕೇವಲ ಹಿಂದಿನ ಘಟನೆಗಳಲ್ಲಿ ಆದಂತಹ ಅಧ್ಯಯನವಲ್ಲದೇ ಮುಂದಿನ ಜೀವನಕ್ಕೆ ಅನುಕೂಲವಾಗುವ ಸುಂದರ ಭವನಗಳನ್ನು ಕಟ್ಟುವ ಭವಿಷ್ಯದ ನೋಟವನ್ನು ಕಾಣುತ್ತಾನೆ. ಇದರಿಂದಾಗಿ ಇತಿಹಾಸದ ಸ್ವರೂಪ ಮತ್ತು ವ್ಯಾಪ್ತಿಯ ಬಹು ವಿಶಾಲವಾಗಿ ಕಾಣುತ್ತದೆಯಲ್ಲದೇ ಜಟಿಲತೆಯಿಂದ ಕೂಡಿರುತ್ತದೆ. ಈಗ ಇತಿಹಾಸದ ಕೆಲವು ವ್ಯಾಖ್ಯೆಗಳನ್ನು ತಿಳಿದುಕೊಳ್ಳೋಣ.

ಇತಿಹಾಸವನ್ನು ವ್ಯಾಖ್ಯಾನಿಸಿದವರಲ್ಲಿ ಗ್ರೀಕರು ಪ್ರಥಮರು. ಗ್ರೀಕರ ವಿದ್ವಾಂಸರಾದ ಹ್ಯಾಲಿಕಾರ್ನಾಸಸ್‌ನ ಡಯೋನಿಸಿಯಸ್‌ರ ಪ್ರಕಾರ 'ಇತಿಹಾಸವು ಉದಾಹರಣೆಗಳ ಸಹಿತ ಬೋಧಿಸಲ್ಪಡುವ ಒಂದು ತತ್ವಶಾಸ್ತ್ರ'ಇವನ ಪ್ರಕಾರ 'ಇತಿಹಾಸವು ಮಾನವನ ಬಹುಮುಖ ಅನುಭವಗಳನ್ನು ತಿಳಿಸುವುದಲ್ಲದೇ ಇತಿಹಾಸದ ಅಧ್ಯಯನವು ಜಾಗತಿಕ ಮೌಲ್ಯವನ್ನು ಪಡೆದಿದೆ. ಮಾನವನ ನಿಜಜೀವನದ ಪಾಠಗಳನ್ನು ಹೊರತರುವುದಲ್ಲದೇ, ಪಾಠಗಳು ಒಂದು ವ್ಯವಸ್ಥಿತ ರೀತಿಯಲ್ಲಿ ಬಂದಾಗ ಇತಿಹಾಸವು ಸೃಷ್ಟಿಯಾಗುತ್ತದೆ.

ಅರಿಸ್ಟಾಟಲ್‌ರ ಪ್ರಕಾರ ಇತಿಹಾಸವು ಐತಿಹಾಸಿಕ ಅಂಶಗಳನ್ನು ವ್ಯತಿರಿಕ್ತವಾಗಿ ಕಾಣಲು ಸಂಶೋಧನೆಯನ್ನು ನಡೆಸಿ ತರ್ಕಬದ್ಧವಾದ ವಿಷಯ ವಿವರಣೆಯನ್ನು ನೀಡಲು ಸಹಕಾರಿಯಾಗುತ್ತದೆ'ಈ ವ್ಯಾಖ್ಯೆಯ ಬಹಳ ಮಹತ್ವದ್ದಾಗಿದ್ದು 'ವ್ಯತಿರಿಕ್ತತೆ'ಎಂಬ ಪದವು ನಮ್ಮ ಮನಸ್ಸಿನಲ್ಲಿ ಐತಿಹಾಸಿಕ ಮಾಹಿತಿಗಳ ಪ್ರಾಮುಖ್ಯತೆಯನ್ನು ಹೇಗೆ ಅಧ್ಯಯನ ನಡೆಸಬೇಕು ಹಾಗೂ ಈ ಘಟನೆಗಳನ್ನು ಖಾಯಂ ಆಗಿ ಮತ್ತು ವ್ಯವಸ್ಥಿತವಾಗಿ ಹೇಗೆ ತಿಳಿಸಬೇಕು ಎಂಬುದನ್ನು ಇತಿಹಾಸವು ಕಲಿಸಿಕೊಡುತ್ತದೆ. ಅರಿಸ್ಟಾಟಲ್ ಮುಂದುವರೆದು ಇತಿಹಾಸವು ಬದಲಾವಣೆಯಾಗದ ಹಿಂದಿನ ಘಟನೆಗಳ ಸರಮಾಲೆಯೆಂದು ತಿಳಿಸುತ್ತಾರೆ. ಇದಲ್ಲದೇ ಹಿಂದೆನಡೆದ ಘಟನೆಗಳ ಬದಲಾವಣೆಗೆ ಒಳಪಡುವುದಿಲ್ಲವೆಂಬುದೂ ಸಹ ತಿಳಿಯುತ್ತದೆ. **ಪಾಲಿಬಿಯಸ್** ಮತ್ತು **ಥ್ಯೂಸಿಡೈಡಸ್** ರವರ ಪ್ರಕಾರ ಇತಿಹಾಸವು ಉತ್ತಮವಾಗಿ ಜ್ಞಾಪಕದಲ್ಲಿಟ್ಟು ಕೊಳ್ಳಬಹುದಾದ ವಿಷಯಗಳ ಕಥೆಯಂತಿದೆ ಎನ್ನುತ್ತಾರೆ. **ಸರ್ ಫ್ರಾನ್ಸಿಸ್ ಬೇಕನ್** 'ಇತಿಹಾಸವು ಮಾನವರನ್ನು ಬುದ್ಧಿವಂತರನ್ನಾಗಿಸುವ ಒಂದು ಪ್ರಮುಖ ವಿಷಯವೆನ್ನುತ್ತಾರೆ ಬುದ್ಧಿವಂತಿಕೆ ಎಂಬುದು ಸರಿತಪ್ಪುಗಳ್ನು ಗುರುತಿಸದ ಸಾಮರ್ಥ್ಯವನ್ನು ಹೊಂದಿದ್ದು ಈ ಬುದ್ಧಿವಂತಿಕೆಯನ್ನು ಇತಿಹಾಸವು ಕಲಿಸಿಕೊಡುತ್ತದೆಂಬುದು ವ್ಯಕ್ತವಾಗುತ್ತದೆ.

**ಪ್ರೊಫೆಸರ್ ಹೆನ್ರಿ ಜಾನ್ಸನ್** ರವರು ಇತಿಹಾಸವು ಹಿಂದೆ ಹೇಗೆ ನಡೆಯಿತೋ, ಹಾಗೆಯೇ ಸುಧೀರ್ಘವಾಗಿ ಘಟನೆಗಳನ್ನು ತಿಳಿಸುವ ಕಾರ್ಯವನ್ನು ಮಾಡುತ್ತದೆ ಎನ್ನುತ್ತಾರೆ. **ಪ್ರೊ.ಫಿನ್ಲೆಯವರು** ಇತಿಹಾಸವು ಐತಿಹಾಸಿಕ ಘಟನೆಗಳನ್ನು ಅವುಗಳ ಕಾರಣಗಳೊಂದಿಗೆ ತಿಳಿಸುವ ವಿಷಯವೆನ್ನುತ್ತಾರೆ **ಮೇಟ್‌ಲ್ಯಾಂಡ್** ರವರು "ಮನುಷ್ಯರ" ಏನು ಮಾಡಿದರು ಏನು ಹೇಳಿದರು ಮತ್ತು ಅವರು ಮುಖ್ಯವಾಗಿ ಏನು ಚಿಂತನೆ ಮಾಡಿದರು"ಎಂಬುದನ್ನು ತಿಳಿಸುವುದೇ ಇತಿಹಾಸ ಎನ್ನುತ್ತಾರೆ. ಇದರ ಅರ್ಥ ಇತಿಹಾಸವು ಇಂದಿನ ಕಾಲದ ಘಟನೆಗಳ ವಿವರಣೆಯನ್ನು ಹಿಂದೆ ನಡೆದ ಘಟನೆಗಳ ಹಂತಗಳನ್ನು ಸಾಂದರ್ಭಿಕವಾಗಿ ಸಂಶೋಧನಾತ್ಮಕವಾಗಿ ಇತಿಹಾಸವು ತಿಳಿಸುತ್ತದೆ ಎಂಬುದಾಗಿದೆ. ಇತಿಹಾಸವು ಯಾವುದೇ ಪ್ರತ್ಯೇಕ ಅಂಶಗಳಾಗಲೀ ಅಥವಾ ಘಟನೆಗಳಾಗಲೀ ಗಮನಿಸದೇ ಅವುಗಳ ಬಗ್ಗೆ ಪೂರ್ಣ ಮಾಹಿತಿಯನ್ನು ನೀಡುವುದು ಇತಿಹಾಸದ ಪ್ರಥಮ ಗುರಿಯಾಗಿದೆ. ಇದರಿಂದಾಗಿ ಮಾನವ ಸಮಾಜವು ನಿರಂತರವಾಗಿ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಕಂಡಿದೆಯೆನ್ನಬಹುದು.

ಜಿ.ಐ.ರೆನಿಯರ್‌ರ ಪ್ರಕಾರ 'ಇತಿಹಾಸವು ಸಮಾಜದಲ್ಲಿ ಜೀವಿಸಿರುವ ಮಾನವ ಕುಲದ ಕಥೆಯಾಗಿದೆ'.ಇದರಿಂದ ಇತಿಹಾಸವು ಮಾನವನ ಮಾನಸಿಕ ಬೆಳವಣಿಗೆ, ಅವನ ಬುದ್ಧಿವಂತಿಕೆ, ಮತ್ತು ತನ್ನ ಜೀವನದಲ್ಲಿ ಒಳ್ಳೆಯದನ್ನು ಸಾಧಿಸುವುದ ಮತ್ತು ವ್ಯವಸ್ಥಿತ ಸಮಾಜ ನಿರ್ಮಾಣದ ಕಾರ್ಯಗಳನ್ನು ಇತಿಹಾಸವು ಮಾಡಿದೆ ಅದನ್ನೇ ನಾಗರೀಕತೆ ಅಥವಾ ಸಂಸ್ಕೃತಿ ಎಂದು ರೆನಿಯರ್ ಕರೆದಿದ್ದಾರೆ. ಸಂಸ್ಕೃತಿಯು ಒಂದು ಸಂಕೀರ್ಣದಂತಿದ್ದು ಇದರಲ್ಲಿ ಜ್ಞಾನ, ನಂಬಿಕೆ, ಕಲೆ, ನೈತಿಕತೆ, ಸಂಪ್ರದಾಯಗಳು ಇತರೇ ಸಾಮರ್ಥ್ಯಗಳು ಅಥವಾ ಪ್ರವೃತ್ತಿಗಳನ್ನು ಮಾನವನ ಸಮಾಜದ ಒಬ್ಬ ಸದಸ್ಯನಾಗಿ ಒಗ್ಗೂಡಿಸಿಕೊಂಡಿದ್ದಾನೆ. ಆದುದರಿಂದ ಇತಿಹಾಸವು ಸಾದಾರಣ ಮನುಷ್ಯರನ್ನು ಹಲವು ಸಾಧಕರ ಉದಾಹರಣೆಗಳನ್ನು ಅರಿತು ಒಳ್ಳೆಯ ಮುತ್ಸದ್ದಿಗಳಾಗಬೇಕು ಮತ್ತು ಬುದ್ಧಿವಂತರನ್ನಾಗಿಸುವುದಲ್ಲದೇ ಇದು ಹಲವಾರು ಪ್ರಭಾವಗಳ ಅಧ್ಯಯನವೇ ಆಗಿದೆ. ಅಂದರೆ ಸಾಮಾಜಿಕ, ರಾಜಕೀಯ ಆರ್ಥಿಕ ಮತ್ತು ಮನೋವೈಜ್ಞಾನಿಕ ಬಲಗಳಿಂದ ಮಾನವನ ಪ್ರಗತಿಯನ್ನು ನಿರ್ಮಾಣ ಮಾಡುವ ಕಾರ್ಯವನ್ನು ಇತಿಹಾಸವು ಮಾಡುತ್ತದೆ.

ಲೆಕ್ಕಿ ಎಂಬ ಇತಿಹಾಸಕಾರರು 'ಇತಿಹಾಸವು ನೈತಿಕ ಕ್ರಾಂತಿಗಳ ದಾಖಲೆಯೂ ಹಾಗೂ ವಿವರಣೆಯೂ ಆಗಿದೆ'ಎನ್ನುತ್ತಾರೆ ಈ ವ್ಯಾಖ್ಯಾನದಲ್ಲಿ ಆದರ್ಶಗಳು ಮತ್ತು ನೈತಿಕ ಮೌಲ್ಯಗಳ ಮೇಲ್ಮೆಯಿದ್ದು ಇದು ಕೇವಲ ವಾಸ್ತವಿಕ ಸಂಗತಿಗಳು ಅಥವಾ ಅವಲಂಬಿತ ಅಂಶಗಳಿಂದ ಮಾತ್ರ ಕೂಡಿಲ್ಲ. ಲೆಯ್‌ಬನಿಟ್ಜ್‌ರವರು ಇತಿಹಾಸವು ಧರ್ಮದ ನಿಜವಾದ ಪ್ರದರ್ಶನವಾಗಿದೆ ಎನ್ನುತ್ತಾರೆ. ಎಡ್ಮಂಡ್ ಬರ್ಕ್‌ರವರು ಇತಿಹಾಸವು ವಿವೇಕದ ಬೋಧಕವಾಗಿದೆಯೇ ಹೊರತು ತತ್ವಗಳನ್ನಲ್ಲ. ಕಾರ್ಲೈಲ್ ಪ್ರಕಾರ ಇತಿಹಾಸವು ಮಾನವನ ಸಾಧನೆಗಳ ದಾಖಲೆಯಾಗಿದೆಯಲ್ಲದೇ ಇತಿಹಾಸದಲ್ಲಿ ಮಹಾನ್ ವ್ಯಕ್ತಿಗಳ ಒಳ್ಳೆಯ ಗುಣಗಳನ್ನು ತಿಳಿಸುತ್ತಾರೆ. ಇದರಿಂದಾಗಿಯೇ ಇತಿಹಾಸವು ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆಯಂದಿದ್ದಾರೆ.

ಸೀಲೆಯವರು ಇತಿಹಾಸವು ಗತಕಾಲದ ರಾಜಕೀಯ ಹಾಗೂ ರಾಜಕೀಯ ಪ್ರಸುತ್ತ ಇತಿಹಾಸ ಎಂದಿದ್ದಾರೆ. ಲಾರ್ಡ್‌ಆಕ್ಟನ್ ರವರು ಇತಿಹಾಸಕ್ಕೆ ಬೇರೆ ಆಯಾಮವನ್ನು ನೀಡುವ ಇತಿಹಾಸವು ಮನಕುಲ ಸ್ವಾತಂತ್ರ್ಯದ ಬಿಚ್ಚಿಡಲಾದ ಕಥೆಯಾಗಿದೆಯೆಂದಿದ್ದಾರೆ. ಎ.ಎಲ್ ರೌಸ್‌ರವರು ಇತಿಹಾಸವು ಮಾನವನ ಸಮಾಜಗಳ ಭೌಗೋಳಿಕ ಮತ್ತು ಭೌತಿಕ ಪರಿಸರಗಳ ದಾಖಲೆಗಳೇ ಎಂದಿದ್ದಾರೆ. ಸೈನೋಬೋಸ್‌ರವರು ಇತಿಹಾಸವು ಅವಶ್ಯಕವಾಗಿ ಒಂದು ವೈಜ್ಞಾನಿಕ ತರ್ಕಬದ್ಧ ನಿರೂಪಣೆಯಾಗಿದೆ. ಏಕೆಂದರೆ ಎಲ್ಲಾ ಐತಿಹಾಸಿಕ ಜ್ಞಾನವು ಪರೋಕ್ಷವಾದುವುಗಳು. ಓಕ್ಸ್‌ಹಾಟ್ ರವರು ಇತಿಹಾಸವು ಇತಿಹಾಸಕಾರರ ಅನುಭವವಾಗಿದೆಯೆನ್ನುತ್ತಾರೆ. ಇ.ಹೆಚ್.ಕಾರ್‌ರವರು ಇತಿಹಾಸವೆಂದರೆ ಅರ್ಥವಿವರಣೆವಿ. ಅರ್ನೆಸ್ಟ್ ಬರ್ನ್‌ಹೀಮ್‌ರವರು ಮಹತ್ವ ಪೂರ್ವಕ ವ್ಯಾಖ್ಯೆ ನೀಡಿದ್ದಾರೆ. ಅದೆಂದರೆ 'ಇತಿಹಾಸವು ಒಂದು ವಿಜ್ಞಾನವಾಗಿದ್ದು ಮಾನವನ ವಿಕಾಸವು ಪ್ರದೇಶ ಮತ್ತು ಕಾಲಗಳ ಮನೋಭೌತಿಕ ಕಾರಣಗಳ ಅಂಶಗಳಿಂದ ಇದು ಮಾನವರು ವೈಯಕ್ತಿಕ ಮತ್ತು ಸಾಮೂಹಿಕ ಸ್ವರೂಪದ ಚಟುವಟಿಕೆಗಳಿಗೆ ಕಾರಣವಾಗಿದೆಯೆನ್ನುತ್ತಾರೆ. ಅಂದರೆ ಇತಿಹಾಸವು ಕಾದಂಬರಿಯಾಗದೆ ವಿಜ್ಞಾನವಾಗಿದೆ. ಇದರ ಮುಖ್ಯಕಾರ್ಯ ಒಳ ಹೆಕ್ಕಿ ಮಂಡಿಸುವುದಾಗಿದೆ. ಅಂದರೆ ಇತಿಹಾಸವು ಸಮಸ್ಯೆಗಳ ಮೂಲವನ್ನು ಕಾರಣ ಸಹಿತ ಹುಡುಕಬೇಕಾಗಿದೆಯಲ್ಲದೇ ಈ ಕಾರಣಗಳು ಮಾನಸಿಕ ಅಥವಾ ಭೌತಿಕ ವಿಷಯಗಳು ಇಂತಹ ಕಾಲ ಮತ್ತು ಇಂತಹ ಸ್ಥಳಗಳಲ್ಲಿ ಆಗಿದೆಯೆಂಬುದನ್ನು ಹೊರಗೆಡವ ಬೇಕಾಗುತ್ತದೆ. ಈ ಸಂಶೋಧನಾ ಅಂಶಗಳ ಮಾನವನ ಪ್ರಗತಿ ಅಥವಾ ಬದಲಾವಣೆಗೆ ಸಂಬಂಧಿಸಿದ್ದು ಅವನು ವೈಯಕ್ತಿಕ ಅಥವಾ ಸಾಮೂಹಿಕ ಚಟುವಟಿಕೆಗೂ ಸಂಬಂಧಿಸಿದೆ.

ಇತಿಹಾಸದ ಮಹತ್ಕಾರ್ಯವು ಮನುಷ್ಯ ಮನುಷ್ಯನನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದಲ್ಲದೇ ಇದು ಮನುಷ್ಯನ ಮಹತ್ವವಾದ ಆದರ್ಶಗಳು, ಚಿಂತನೆಗಳು ಮತ್ತು ಕಾರ್ಯಗಳ ವಿವರಣೆಯಾಗಿದ್ದು ಇವುಗಳಲ್ಲಿ ಮಾನವನು ಏನು ಸಾಧಿಸಿದ ಏನು ಚಿಂತನೆ ನಡೆಸಿದ ಹಾಗೂ ಯಾವ ಕಲ್ಪನೆ ಮತ್ತು ಯಾವುದಾಗಬೇಕೆಂದು ಬಯಸಿದ ಎಂಬುದೂ ಕೂಡ ಆಗಿದೆ. ವೈಯಕ್ತಿಕ ವಿಷಯವಾಗಿ ಹೇಳಬೇಕೆಂದರೆ ಮಾನವನ ಜಾಗೃತ ಮನೋಭಾವದ ಜಗತ್ತಿನಲ್ಲಿ ಆದಂತ ಘಟನೆಗಳ ದಾಖಲೆಯೇ ಇತಿಹಾಸವಾಗಿದೆ. ವಸ್ತು ನಿಷ್ಟವಾಗಿ ಹೇಳಬೇಕೆಂದರೆ ಇತಿಹಾಸವು ರಾಜಕೀಯ, ನೈತಿಕತೆ, ಧರ್ಮ, ಬುದ್ಧಿವಂತಿಕೆ ಸಾಮಾಜಿಕ ವ್ಯವಸ್ಥೆಗಳು, ಆರ್ಥಿಕ ಲಕ್ಷಣಗಳು, ಪರಿಶುದ್ಧತೆ ಮತ್ತು ರುಚಿಯ ವಿಶೇಷ ಅಂಶಗಳೊಂದಿಗೆ ಬೆರೆತು ರಾಜ್ಯಗಳು ಮತ್ತು ಮಾನವ ಸಮುದಾಯಗಳ ಪ್ರಗತಿ ಮತ್ತು ಅವಸಾನ ಸ್ಥಿತಿಗಳನ್ನು ಹೇಗೆ ತಲುಪಿದವೆಂಬುದನ್ನು ತಿಳಿಸುವುದೇ ಇತಿಹಾಸ ಕೊನೆಯದಾಗಿ ಹೇಳಬೇಕೆಂದರೆ ಯಾವುದೇ ಜ್ಞಾನದ ವಿಷಯವನ್ನು ವ್ಯಾಖ್ಯಾನಿಸುವುದು ಇತಿಹಾಸದಷ್ಟು ಕಷ್ಟವಲ್ಲವೆಂಬುದು ತಿಳಿದುಬರುತ್ತದೆ.

## 1.3 ಇತಿಹಾಸದ ಸ್ವರೂಪ

ಮನುಷ್ಯರು ಹಾಗೂ ರಾಷ್ಟ್ರಗಳ ವಿಷಯಗಳು ನಿರಂತರ ಚಾಲನೆಯಲ್ಲಿರುತ್ತವೆ. ಇದರಿಂದಾಗಿ ಇತಿಹಾಸದ ಸ್ವರೂಪ ಮತ್ತು ವ್ಯಾಪ್ತಿಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಆಮೂಲಾಗ್ರ ಬದಲಾವಣೆಯಾಗಿದೆಯೆನ್ನಬಹುದು. ಇತಿಹಾಸವನ್ನು ಈ ಹಿಂದೆ ಕೇವಲ ಘಟನೆಗಳ ಪಟ್ಟಿಯನ್ನು ಧಾರಾವಾಹಿಯ ರೀತಿಯಲ್ಲಿ ವಿವರಿಸುವ ಪದ್ಧತಿಯಿತ್ತು. ಆದರೆ ಪ್ರಸುತ್ತದಲ್ಲಿ ಇತಿಹಾಸದ ಅಧ್ಯಯನವು ವಿಮರ್ಶಾತ್ಮಕ ಹಾಗೂ ವೈಜ್ಞಾನಿಕ ರೀತಿಯಲ್ಲಿ ಆಗುತ್ತಿದೆ. ಅಂತೆಯೇ ಇತಿಹಾಸಕಾರರು ಹಳೆಯ ಗ್ರಂಥಗಳಲ್ಲಿರುವ ವಿಷಯಗಳನ್ನು ಪುನರುಚ್ಚರಿಸದೇ ಬಹಳಷ್ಟು ರೀತಿಯಲ್ಲಿ ವಿಷಯಗಳ ಬಗ್ಗೆ ಚಿಂತನೆ ಮಾಡಿ ವರದಿ ನೀಡುವರು. ಇತಿಹಾಸದ ಅಧ್ಯಯವನ್ನು ಇತಿಹಾಸದ ಘಟನೆಗಳು ಹೇಗೆ ನಡೆದವೋ ಅದನ್ನೇ ಸತ್ಯವಾಗಿ ನಡೆದ ರೀತಿಯಲ್ಲಿ ಅಧ್ಯಯನ ಮಾಡುವುದಾಗಿದೆ. ಇತಿಹಾಸಕಾರನ ಕಾರ್ಯಗಳು ಹಿಂದಿನ ಕಾಲವನ್ನು ಪ್ರೀತಿಸುವುದಾಗಲೀ ಅಥವಾ ಹಿಂದಿನ ಕಾಲವನ್ನು ಪೂರ್ಣವಾಗಿ ಅಧ್ಯಯನ ಮಾಡುವುದಾಗಿದೆಯೆನ್ನಬಹುದು. ಬಹುಪಾಲು ವಿದ್ವಾಂಸರು ಇತಿಹಾಸವು ಮನುಕುಲದ ಅನುಭವಗಳ ಕಥೆಯಾಗಿವೆಯೆಂಬುದನ್ನು ಒಪ್ಪಿಕೊಂಡಿದ್ದಾರೆ. ಈ ಅನುಭವಗಳು ನಿರಾಸಕ್ತವೂ ಹೌದು ಹಾಗೂ ಕ್ರಿಯಾಶೀಲವೂ ಹೌದು. ಇತಿಹಾಸವು ಒಂದು ಸಮಾಜ ವಿಜ್ಞಾನವಾಗಿದ್ದು ಗತಿಸಿದ ಎಂದ ಘಟನೆಗಳನ್ನು ವ್ಯವಸ್ಥಿತವಾಗಿ ಒಂದುಗೂಡಿಸಿ ವಿವರಣೆ ನೀಡುವುದಲ್ಲದೇ ಮಾನವನ ಪ್ರಗತಿಯಲ್ಲಿ ಯುವಶಕ್ತಿಗಳು ಕಾರ್ಯ ನಿರ್ವಹಿಸದವು ಎಂಬುದನ್ನು ಆಳವಾಗಿ ಅಧ್ಯಯನ ಮಾಡುವುದೇ ಇತಿಹಾಸದ ಪರಮಗುರಿಯಾಗಿದೆ. ಹಲವು ಸಮುದಾಯಗಳು, ರಾಷ್ಟ್ರಗಳು ಹಾಗು ನಾಗರೀಕತೆಗಳ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಈ ಮಾನವನ ಅನುಭವವು ವೈವಿಧ್ಯಯವಾಗಿ ಕಾಣುತ್ತದೆ. ಆದರೆ ಈ ಅನುಭವದ ವೈವಿಧ್ಯತೆಯು ತೋರಿಕೆ ಮಾತ್ರವೇ ಹೊರತು ವಾಸ್ತವಿಕವಲ್ಲವೆಂದು ತಿಳಿಯುತ್ತದೆ. ಮಾನವನ ಮನಸ್ಸು ಮತ್ತು ಮಾನವನ ಚಟುವಟಿಕೆಗಳ್ನು ರೂಪುಗೊಳಿಸಲು ಕಾಣುವಶಕ್ತಿಗಳು ಇಡೀ ಪ್ರಪಂಚದಲ್ಲಿ ಒಂದೇ ತೆರನಾಗಿವೆಯೆಂದು ಹೇಳಬಹುದು. ಈ ಏಕರೂಪತೆಯನ್ನು ಕಂಡು ಹಿಡಿದದ್ದೇ ಇತಿಹಾಸಕಾರನು ಘಟನೆಗಳು ಹೇಗೆ ಆದುವು. ಏಕೆ ಆದುವು ಹಾಗೂ ಯಾವ ರೀತಿಯಲ್ಲಿ ಆದುವು ಎಂಬುದನ್ನು ಕಂಡು ಹಿಡಿಯುವುದರಲ್ಲಿ ಕಟ್ಟುನಿಟ್ಟಾಗಿ ನಿರತವಾಗಿದ್ದಾನೆ. ಇತಿಹಾಸವು ಘಟನೆಗಳ ಮಹಾಪೂರವೂ ಆಗಿರಬಹುದು ಅಥವಾ ಘಟನೆಗಳ ಸ್ಮರಣೆಯಾಗಿರಲೂ ಬಹುದು.

ಮಾನವ ಸಮಾಜದಲ್ಲಿ ನಿರಂತರ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಕಾಣುತ್ತೇವೆ. ಇತಿಹಾಸದ ಈ ಬೆಳವಣಿಗೆಯನ್ನು ಇತಿಹಾಸಕಾರನು ಗಮನಕ್ಕೆ ತೆಗೆದುಕೊಂಡು ಈ ಕಾಲ ಮತ್ತು ಪ್ರಾದೇಶಿಕ ಹಿನ್ನೆಲೆಯಲ್ಲಿ ಈ ಇವುಗಳನಲು ಪ್ರಸ್ತುತ ಪಡಿಸುವನು. ಇತಿಹಾಸದಲ್ಲಿ ವಾಸ್ತವಿಕತೆ ಮತ್ತು ಘಟನೆಗಳು ವಿವೇಚನೆಯ ರೂಪದಲ್ಲಿ ಒಂದಕ್ಕೊಂದು ಸಂಬಂಧವನ್ನು ಹೊಂದಿರುತ್ತವೆ. ಇತಿಹಾಸವು ಕೇವಲ ರಾಜರು, ಆಸ್ಥಾನ, ಯುದ್ಧಗಳು ಮತ್ತು ಶಾಂತಿ, ದಂಗೆಗಳು, ಬಂಡಾಯಗಳ ದಾಖಲೆಯೇ ಆಗಿರದೇ ಸಾಧಾರಣ ವಿಷಯಗಳಿಂದ ಬಹಳಷ್ಟು ಸಮ್ಮಿಶ್ರಿತ ವಿಷಯಗಳನ್ನೊಳಗೊಂಡ ಬೆಳವಣಿಗೆಗಳ ಮೊತ್ತವಾಗಿರುತ್ತದೆಂದು ಹೇಳಬಹುದು. ಇದೊಂದು ಮಹತ್ವದ ಸಂಗತಿಗಳ ದಾಖಲೆಗಳಾಗಿದ್ದು ಇದನ್ನು ವೈಜ್ಞಾನಿಕ ರೀತಿಯಲ್ಲಿ ಬಳಸಿಕೊಳ್ಳಬೇಕಾಗಿದೆ. ಇತಿಹಾಸದ ಘಟನೆಗಳನ್ನು ಕೇವಲ ಕಾಲದ ಗಣನೆಯಲ್ಲಿ ಮಾತ್ರ ದಾಖಲಿಸದೇ ಘಟನೆಯ ಕಾರಣಗಳು ಮತ್ತು ಪರಿಣಾಮಗಳನ್ನು ಘಟನೆಯ ಜೊತೆಗೆ ದಾಖಲಿಸುತ್ತದೆ. ಈ ಕಾರಣಗಳು ಮತ್ತು ಪರಿಣಾಮಗಳಿಂದ ಕೂಡಿದ ಘಟನೆಗಳನ್ನು ಸರಿಯಾದ ರೀತಿಯಲ್ಲಿ ವ್ಯಾಖ್ಯಾನಿಸುವುದ ಇತಿಹಾಸಕಾರನ ನೈಜಕಾರ್ಯವಾಗಿದೆ.

ಇತಿಹಾಸದ ಸ್ವರೂಪದಲ್ಲಿ ಯಾವುದೇ ರೀತಿಯ ಒಮ್ಮತದ ಅಭಿಪ್ರಾಯವಿಲ್ಲ. ಈ ಸ್ವರೂಪದ ಬಗ್ಗೆ ಭಿನ್ನವಾದ ಅಭಿಪ್ರಾಯಗಳು ಬಂದಿರುವುದು ಗೊತ್ತಾಗುತ್ತದೆ. ಕೆಲವು ವಿದ್ವಾಂಸರು ಇತಿಹಾಸವು ಮರುಕಳಿಸುತ್ತದೆಂದೂ ಮತ್ತೆ ಹಲವರು ಈ ವಾದವನ್ನು ವಿರೋದಿಸುತ್ತಾರೆ. ಮೊದಲ ಗುಂಪಿನ ವಿದ್ವಾಂಸರು ಮಾನವನ ಭಾವನೆಗಳು ಎಲ್ಲ ಕಾಲಕ್ಕೂ ಹಾಗೂ ಎಲ್ಲಾ ಸ್ಥಳಗಳಲ್ಲೂ ಒಂದೇ ರೀತಿಯಲ್ಲಿ ಇರುತ್ತದೆಂಬ ಆಧಾರದ ಮೇಲೆ ಇತಿಹಾಸವು ಮರುಕಳಿಸುತ್ತದೆಂದು ಹೇಳುವರು. ಈ ಮರುಕಳಿಸುವಿಕೆಯಲ್ಲಿ ಬದಲಾವಣೆಗಳು. ಅಷ್ಟೊಂದು ವೈವಿಧ್ಯತೆಯನ್ನು ತೋರಿಸುವುದಿಲ್ಲ ಉದಾಹರಣೆಗೆ ಮನುಷ್ಯನ ಗುಣವು ಹೋರಾಟವಾಗಿದ್ದು ಇಡೀ ಪ್ರಪಂಚದ ಎಲ್ಲಾ ಕಾಲದಲ್ಲಿಯೂ ಯುದ್ಧವು ಒಂದು ಮನೋವಿಜ್ಞಾನದ ಒಂದು ಅಂಶವಾಗಿ ಸಾಧಿಸುತ್ತಿದ್ದು. ಆದರೆ ಆಗಾಗ ಬದಲಾವಣೆಯು ಕಂಡರೂ ಯುದ್ಧವು ಒಂದೇ ಆದರೆ ಯುದ್ಧ ಮಾಡುವುದು ವೈವಿದ್ಯಮಯ ರೀತಿಯಾಗಿದ್ದು ನಿರಂತರವಾಗಿರುತ್ತದೆ. ಈ ಅಭಿಪ್ರಾಯವನ್ನು ಒಪ್ಪದ ಇನ್ನೊಂದು ಗುಂಪಿನ ವಿದ್ವಾಂಸರು ಬದಲಾವಣೆಯ ಪ್ರಕೃತಿಯ ನಿಯಮ ಮತ್ತು ಪ್ರಕೃತಿಯಲ್ಲಿ

ಎರಡು ಘಟನೆಗಳು ನಡೆದು ಒಂದೇ ರೀತಿಯಲ್ಲಿ ಕಾಣಿಸಿದರೂ ಅವುಗಳು ಒಂದಕ್ಕೊಂದು ವಿಭಿನ್ನವಾಗಿರುತ್ತವೆಂದು ತಿಳಿಸುತ್ತಾರೆ. ಇತಿಹಾಸವು ಒಂದು ಅಪೂರ್ವ ವೈಯಕ್ತಿಕ ಹಾಗೂ ಬಹಳ ಪ್ರಮುಖ ಘಟನೆಗಳ ದಾಖಲೆಯಾಗಿದೆಯೆನ್ನಬಹುದು. ಕೆಲವು ಇತಿಇಹಾಸಕಾರರು ಎಲ್ಲಾ ಇತಿಹಾಸವೂ ಸಮಕಾಲೀನ ಇತಿಹಾಸವಾಗಿದೆಯೆನ್ನುತ್ತಾರೆ. ಕ್ರೋಷೆಯು ಈ ಸಮಕಾಲೀನ ಇತಿಹಾಸ ವ್ಯಾಖ್ಯಾನದ ಪ್ರತಿಪಾದಕ ಇಲ್ಲಿ ಭೂತಕಾಲ ಮತ್ತು ವರ್ತಮಾನಕಾಲದ ಸಾಮಾನ್ಯ ಪ್ರಕ್ರಿಯೆಗಳ ಸರಪಣಿಯಾಗಿದೆ. ಎಲ್ಲಾ ರೀತಿಯ ಘಟನೆಗಳನ್ನು ವ್ಯವಸ್ಥಿತ ರೀತಿಯಲ್ಲಿ ಎಣೆಯಲಾಗಿದೆ. ಇತಿಹಾಸಕಾರನು ಯಾವುದೇ ಕಾಲಕ್ಕೆ ಸಂಬಂಧ ಪಡದೇ ಇದ್ದರೂ ಗತಿಸಿದ ಘಟನೆಗಳನ್ನು ತನ್ನದೇ ಆದ ದೃಷ್ಟಿಕೋನದಲ್ಲಿ ನೋಡುವುದರಿಂದ ಇಲ್ಲಿ ಸಮಕಾಲೀನತೆಯನ್ನು ಹೊರದೂಡಲು ಆಗುವುದಿಲ್ಲ.

ಹೀಗೆ ಇತಿಹಾಸದ ಸ್ವರೂಪದೊಂದಿಗೆ ಹತ್ತು ಹಲವಾರು ಅಂಶಗಳು ಸೇರಿಕೊಂಡಿರುವುದು ಕಾಣುತ್ತಾರೆ. ಇದರಿಂದಾಗಿ ಇತಿಹಾಸದ ವಸ್ತು ವಿಷಯವು ಅದರ ಆಗಾಧತೆಯನ್ನು ಬಿಂಬಿಸುತ್ತದೆ. ಇದು ಜೀವನದಲ್ಲಿ ನಡೆಯುವ ಎಲ್ಲಾ ರೀತಿಯ ನಾಟಕಗಳನ್ನು ಹಾಗೂ ಸಂಸ್ಕೃತಿಯ ಏಳು, ಬೀಳು ಮತ್ತು ಅಭಿವೃದ್ಧಿಯನ್ನು ತಿಳಿಸುತ್ತದೆ. ಈ ಹೆಚ್.ಕಾರ್‌ರವರು ಇತಿಹಾಸವು ಭೂತ ಮತ್ತು ವರ್ತಮಾನಕಾಲದಲ್ಲಿ ನಿರಂತರವಾಗಿ ನಡೆಯುವ ಸಂಭಾಷಣೆಯಂತೆ ಎನ್ನುತ್ತಾರೆ ಇದು ಕೇವಲ ಘಟನೆಗಳ ಪಟ್ಟಿಯಾಗಿರದೇ, ಕ್ರಿಯಾತ್ಮಕವಾದ ವಿಮರ್ಶಾತ್ಮಕವಾದ ಒಂದು ಮಾನಸಿಕ ಕಾರ್ಯವಾಗಿದೆ. ಇದರೊಂದಿಗೆ ಇವುಗಳನ್ನೇ ವಿವರಿಸಲು ಬೇಕಾದ ಒಬ್ಬ ಮನುಷ್ಯನಿಂದ ಮತ್ತೊಬ್ಬರ ನಡುವೆ ವ್ಯತ್ಯಾಸದ ಕಲ್ಪನಾಶಕ್ತಿಯನ್ನು ತೋರಿಸುತ್ತದೆ. ಆದರೆ ಇತಿಹಾಸವು ಪರಮೋಚ್ಛ ನ್ಯಾಯಾಲಯದಂತೆ ಕಾರ್ಯನಿರ್ವಹಿಸಿ ವಾದವಿವಾದಗಳನ್ನು ಆಲಿಸಿ ಉತ್ತಮ ತೀರ್ಮಾನವನ್ನು ನೀಡುವುದೇ ಆಗಿದೆ. ಇದಕ್ಕೆ ಉದಾಹರಣೆಯಾಗಿ ವೈಜ್ಞಾನಿಕ ಇತಿಹಾಸಜ್ಞನೆನಿಸರುವ ರ್‍ಯಾಂಕೆಯು ಘಟನೆಗಳನ್ನು ಹೇಗೆ ನಡೆದವೋ ಹಾಗೆಯೇ ವಿವರಿಸ ಬೇಕೆಂದಿದ್ದು, ಇತಿಹಾಸ ಪುನಃರಚನೆಯಲ್ಲಿ ಮೌಲ್ಯಧಾರಿತ ತೀರ್ಮಾನವನ್ನು ಕೊಡಬೇಕೆಂದಿದ್ದಾನೆ. ಆದರೆ ಈ ವಾದವನ್ನು ಒಪ್ಪದ ವಿದ್ವಾಂಸರು ಇತಿಹಾಸವು ಒಳ್ಳೆಯದನ್ನು ಸೂಚಿಸುತ್ತದೆ ಹಾಗೂ ಕೆಟ್ಟದ್ದನ್ನು ಹೊಡೆದೋಡಿಸುವ ಕಾರ್ಯವನ್ನು ಮಾಡುವ ಹಾಳೆಯಲ್ಲಿ ಕಾರ್ಯನಿರ್ವಹಿಸುತ್ತಾನೆ. ಆದ್ದರಿಂದ ಇತಿಹಾಸಕಾರನು ತೀರ್ಮಾನವನ್ನು ನೀಡುವಾಗ ವಿಭಿನ್ನ ಭಾವನೆಗಳನ್ನು ಇಟ್ಟುಕೊಳ್ಳಬಾರದೆನ್ನುತ್ತಾರೆ. ಆಕ್ಟನ್ ರವರ ಪ್ರಕಾರ ಇತಿಹಾಸವು ಆತ್ಮ ಸಾಕ್ಷಿಯನ್ನು ಬೆಳೆಸಿ, ಅಚ್ಚುಕಟ್ಟಾಗಿಸುವುದಲ್ಲದೇ ಅದನ್ನು ಕಾಪಾಡುವ ಕಾರ್ಯ ನಿರ್ವಹಿಸುತ್ತದೆ. ಆದರೂ ಇತಿಹಾಸದಲ್ಲಿ ಹೆಚ್ಚಿನ ನೈತಿಕತೆಯು ಒಳ್ಳೆಯ ಫಲಿತಾಂಶವನ್ನು ಒದಗಿಸುವುದಿಲ್ಲ.

ಇದಲ್ಲದೇ ಇತಿಹಾಸದ ಸ್ವರೂಪವು ಇತಿಹಾಸದ ತತ್ವ ನಿಯಮದಂತೆ ಬದಲಾವಣೆಯಾಗುತ್ತದೆ ಹಾಗೂ ಇದನ್ನು ಒಬ್ಬ ಇತಿಹಾಸಕಾರನು ಇನ್ನೊಬ್ಬ ಇತಿಹಾಸಕಾರ ನಿಂದ ಭಿನ್ನವಾದ ಅಭಿಪ್ರಾಯಕ್ಕೆ ಒಳಗಾಗುತ್ತದೆ. ಉದಾ: ಭಾರತದಂಥಹ ರಾಷ್ಟ್ರಗಳು, ತಮ್ಮ ಸಾಮ್ರಾಜ್ಯಶಾಹಿ ರಾಷ್ಟ್ರಗಳ ನಿಯಂತ್ರಣದಿಂದ ಸ್ವಾತಂತ್ರ್ಯ ಹೊಂದಿದ ನಂತರ ಇವರ ದೇಶದ ಇತಿಹಾಸವನ್ನು ಸಂಪೂರ್ಣವಾಗಿ ತಾವೇ ಪುನಃ ರಚನೆ ಮಾಡಬೇಕೆನ್ನುತ್ತಾರೆ. ಈ ಕಾರ್ಯವು ತುಂಬಾ ಸೂಕ್ಷ್ಮವಾದ ವಿಷಯವಾಗಿದ್ದು ಭಾವನೆಗಳು ಇಲ್ಲಿ ಪ್ರಧಾನ ಕಾರ್ಯವನ್ನು ವಹಿಸಬಹುದಲ್ಲದೇ, ಸ್ವಾನುಭವ ದೃಷ್ಟಿಕೋನವು ಇಲ್ಲಿ ಮೆರೆಯಬಹುದು. ಹೀಗಾಗಿ ರಾಷ್ಟ್ರೀಯವಾದಿ ಇತಿಹಾಸಕಾರರಾದ ಗ್ರೀನ್, ಫ್ರೀಮನ್, ಸೀಲೆ ಮುಂತಾದವರು ಇತಿಹಾಸವು ಬೇರು ಮತ್ತು ರಾಜಕೀಯ ಹಣ್ಣು ಮತ್ತು ಎಲ್ಲಾ ಇತಿಹಾಸವೂ ಗತಿಸದ ರಾಜಕೀಯವೆನ್ನುತ್ತಾರೆ. ಕ್ರಿ.ಶ.19ನೇ ಶತಮಾನದಲ್ಲಿ ಯಾವುದೇ ವಿಷಯದ ವಿಭಾಗವನ್ನು ವೈಜ್ಞಾನಿಕ ವಿಷಯವೆನ್ನುವ ಸಂಪ್ರದಾಯವನ್ನು ಕಾಣತ್ತೇವೆ. ಇದನ್ನು ಆದರಿಸಿ ಬ್ಯೂರಿ ಎಂಬುವನು ಇತಿಹಾಸವು ಒಂದು ವಿಜ್ಞಾನ, ಹೆಚ್ಚೂ ಇಲ್ಲ, ಕಡಿಮೆಯೂ ಇಲ್ಲ ಎನ್ನುವಷ್ಟರ ಮಟ್ಟಿಗೆ ಅಭಿಪ್ರಾಯ ಪಟ್ಟಿದ್ದಾನೆ ಕಾರ್ಲ್‌ಮಾರ್ಕ್ಸ್ ತನ್ನ ಆರ್ಥಿಕ ನಿರ್ಣಯವಾದದ ಹಿನ್ನೆಲೆಯಲ್ಲಿ ಇತಿಹಾಸಕ್ಕೆ ಹೊಸ ಆಯಾಮವನ್ನು ನೀಡಿ ಘಟನೆಗಳಿಗೆ ಇದೇ ರೀತಿ ಹುರುಪನ್ನು ನೀಡುತ್ತಾನೆ. ಇದರಿಂದಾಗಿ ಇತಿಹಾಸಕಾರನ ನೋಟವು ಅವನ ಇತಿಹಾಸ ಬರವಣಿಗೆಯ ಮೇಲೆ ಪ್ರಭಾವ ಬೀರಿದೆ.

ಇತ್ತೀಚಿನ ವಿದ್ವಾಂಸರ ಪ್ರಕಾರ ಗತಕಾಲದ ಇತಿಹಾಸದ ವ್ಯಾಖಾನವು ಭವಿಷ್ಯವನ್ನು ರೂಪಿಸಲು ಇತಿಹಾಸವನ್ನು ಉಪಯೋಗಿಸಲಾಗುವುದೆನ್ನುತ್ತಾರೆ. ಇದಲ್ಲದೇ ಇತಿಹಾಸವು ಗತಕಾಲದ ಇತಿಹಾಸದ ನಿರೂಪಣೆಯು ಬಲಿಷ್ಠರನ್ನು ಎದುರಿಸಲು ಶಕ್ತಿ ನೀಡುವುದೆಂಬುದನ್ನು ಇವರು ತಿಳಿಸುತ್ತಾರೆ. ಇಲ್ಲಿ ಇತಿಹಾಸ ದ ಪ್ರಮುಖ ಕಾರ್ಯವು ಇತಿಹಾಸದ ವಿವರಣೆ ನೀಡುವದೇ ಆಗಿದೆ ಇತಿಹಾಸವು ಕಾಲ ಮತ್ತು ಪ್ರದೇಶಗಳಲ್ಲಿ ಆದಂತಹ ಘಟನೆಗಳ ವಿವರ ಆಗದೆ ಇತಿಹಾಸವು ಲೌಕಿಕವೂ ಮತ್ತು ಭೌತಿಕವೂ ಆಗಿದೆಯೇ ಹೊರತು ಆಧ್ಯಾತ್ಮಿಕವು ಅಲ್ಲ ಅಥವಾ ಪ್ರಕೃತ್ಯತೀತ್ವ ಆಗಿಲ್ಲ. ಇತಿಹಾಸದ ಘಟನೆಗಳು ಅವನ ಅನುಭವಗಳ ದಾಖಲೆಗಳಾಗಿದ್ದು,

ಪ್ರಪಂಚದಲ್ಲಿ ಮಾನವನಸುತ್ತಾ ಘಟಿಸಿದ ಘಟನೆಗಳು ಮಾನವನ ಚಟುವಟಿಕೆಗಳ ಚಿತ್ರಣವಾಗಿದೆ. ಇತಿಹಾಸದ ಚಟುವಟಿಕೆಗಳ ಹಿಂದಿನ ಘಟನೆಗಳ ಮೇಲೆ ಅವುಗಳ ಪ್ರಭಾವವನ್ನು ಸಹ ಸೂಚಿಸುತ್ತವೆ. ಯಾವುದೇ ಒಬ್ಬ ವ್ಯಕ್ತಿಯ ಖಾಸಗಿ ಚಟುವಟಿಕೆಯು ಇತಿಹಾಸವಾಗದೇ ಅದು ಸಾರ್ವಜನಿಕ ಕ್ಷೇತ್ರದ ಮೇಲೆ ಪ್ರಭಾವಿತವಾಗುದಾದರೆ ಅಂತಹ ಕ್ರಿಯೆಯ ಇತಿಹಾಸವೆನಿಸುತ್ತದೆ. ಇದರಿಂದಾಗಿ ಇತಿಹಾಸವು ಮಾನವನ ಜೀವನ ಹಾಗೂ ಅವನ ಕಾರ್ಯ ಚಟುವಟಿಕೆಗಳನ್ನು ಒಳಗೊಂಡ ಕ್ರಿಯೆಯಾಗಿದೆಯೆನ್ನ ಬಹುದು.

ಇತಿಹಾಸವು ಗತಕಾಲವನ್ನು ನಿರೂಪಿಸುವುದಾಗಿದ್ದು ಮುಂದಿನ ಭವಿಷ್ಯವನ್ನು ಹೇಳುವುದಿಲ್ಲ ಆದ್ದರಿಂದ ಭವಿಷ್ಯವನ್ನು ನುಡಿಯುವುದು ಇತಿಹಾಸದ ಅಚ್ಚುಕಟ್ಟಿನಿಂದ ದೂರವಾಗಿದೆ. ಗತಕಾಲದ ಘಟನೆಗಳನ್ನು ಹಾಗೂ ಜೀವಿಸಿದ್ದ ಎಲ್ಲಾ ಜನರ ಬಗ್ಗೆಯೂ ತಿಳಿಸುವುದಿಲ್ಲ. ಕೇವಲ ಪ್ರಮುಖ ವ್ಯಕ್ತಿಗಳು ಮತ್ತು ಪ್ರಮುಖ ಘಟನೆಗಳು ಇತಿಹಾಸಕಾರನನ್ನು ಅವಲಂಬಿಸುತ್ತವೆ. ಅವನ್ನು ಉತ್ತಮ ಆಯ್ಕೆದಾರನಾಗಿದ್ದು ಯಾವುದು ಪ್ರಸುತ್ತ ಮತ್ತು ಸತ್ಯವಾದದ್ದು ಎಂಬುದನ್ನು ಎಚ್ಚರಿಕೆಯಿಂದ ಆಯ್ದುಕೊಳ್ಳುವನು. ಇವರು ಯಾವುದು ಸಾಧ್ಯ ಮತ್ತು ಉಪಯುಕ್ತ ಎಂಬುದನ್ನು ಯೋಚಿಸುವನು. ಯಾವುದನ್ನು ಆಯ್ಕೆ ಮಾಡುವುದೆಂಬುದನ್ನು ಅರಿತುಕೊಂಡು ಇತಿಹಾಸಕಾರನು ಸಮಸ್ಯೆಯ ಆಳವನ್ನು ಹಾಗೂ ಅದರ ಮೂಲವನ್ನು ಆಮೂಲಾಗ್ರವಾಗಿ ಶೋಧಿಸುವನು. ಇವನು ಸಮಸ್ಯೆಯ ಮೂರು ಪ್ರಶ್ನೆಗಳಾದ 'ಏನು 'ಹೇಗೆ' ಮತ್ತು ಎಂಬುದನ್ನು ಎದುರಿಸುತ್ತಾನೆ. ಇತಿಹಾಸವನ್ನು ಬಹಳ ಪ್ರಮುಖವಾಗಿ ಕಾಲವನ್ನೂ ಪ್ರಕೃತಿ ಮತ್ತು ಸಮಸ್ಯೆಯ ವಿಸ್ತರಣೆಯ ಬಗ್ಗೆ ಯೋಚಿಸುತ್ತಾನೆ. ಈ ನಿರೂಪಣೆಯಲ್ಲಿ ಇತಿಹಾಸಕಾರನು ಸತ್ಯಾಸತ್ಯತೆ ಮತ್ತು ಅವುಗಳ ನಿಖರ ಕಾರಣಗಳನ್ನು ತಿಳಿದುಕೊಂಡು ಪೂರ್ಣವೂ ಮತ್ತು ವಿಸ್ತೃತರೂ ಆದಂತಹ ಇತಿಹಾಸವನ್ನು ಬರೆಯುವನು.

ಇತಿಹಾಸವು ನಿಂತ ನೀರಿನಂತಿರದೇ ಚಲನಾತ್ಮಕವಾಗಿದ್ದು ಕಾಲದ ಜೊತೆಗೆ ಸಾಗುತ್ತದೆ. ಈ ಕಾಲದ ಚಲನೆಯು ವಿವಿಧ ಕಾಲದಲ್ಲಾದ ವಿವಿಧ ಸಂಸ್ಕೃತಿಗಳನ್ನು ತಿಳಿಸುತ್ತದೆ. ಕೆಲವರು ಇತಿಹಾಸವು ಸುರುಳಿಯಾಕಾರವಾಗಿದೆಯೆಂದೂ, ಮತ್ತೆ ಕೆಲವರ ಇತಿಹಾಸವು ಸಮಾನ ರೇಖೆಯಲ್ಲಿ ನಡೆಯುತ್ತಾದೆಂದೂ, ಇನ್ನೂ ಕೆಲವರು ಇದೊಂದು ಪ್ರಗತಿ ಅಥವಾ ಅಭಿವೃದ್ಧಿಯತ್ತ ಸಾಗುವ ಚಲನೆಯೆಂದೂ ತಿಳಿಸುತ್ತಾರೆ. ಪ್ರಗತಿಯು ವಿಕಾಸವಾದಕ್ಕೆ ಸಂಬಂಧಿಸಿದ್ದಾಗಿದೆ. ಈ ಪ್ರಗತಿಯ ಬಗ್ಗೆ ಮತ್ತು ವಿಕಾಸಲಾದದ ಬಗ್ಗೆ ವೀಕೋ, ಡಾರ್ವಿನ್, ಕಾಮ್ಟೆ, ನಂಬಿಕೆಯಿಟ್ಟಿದ್ದು ನೆಪೋಲಿಯನ್ ಮತ್ತು ಬಿಸ್ಮಾರ್ಕ್‌ರ ಸಾಮಾನ್ಯ ನಿರ್ಧಾರಗಳು ಮಾನವನ ನಡವಳಿಕೆಗಳ ಮೇಲೆ ನಿಂತಿರುತ್ತದೆಂದು ತಿಳಿಸುತ್ತಾರೆ.

ಹೀಗೆ ಇತಿಹಾಸದ ಸ್ವರೂಪ ಸಂಕೀರ್ಣತೆಯಿಂದ ಕೂಡಿದೆಯೆಂದು ಹೇಳಬಹುದು. ಇದು ಹಲವಾರು ವಿವರಣೆಗಳನ್ನು ನೀಡುತ್ತದೆ. ಇತಿಹಾಸದಲ್ಲಿ ಒಂದು ವಿಷಯವು ಮಾತ್ರ ಸೇರಿರುವುದಿಲ್ಲ. ಏಕೆಂದರೆ ಇತಿಹಾಸವು ವರ್ತಮಾನ ಮತ್ತು ಭೂತಕಾಲದ ನಡುವಿನ ನಿರಂತರ ಸಂಭಾಷಣೆಯಂತಿರುತ್ತದೆ. ಇದು ಮನುಷ್ಯನ ಆಸಕ್ತಿಯಂತೆ ಕಾಲಕಾಲಕ್ಕೆ ತಕ್ಕಂತೆ ಇತಿಹಾಸದ ಸ್ವರೂಪದ ಬದಲಾವಣೆಯಾಗುತ್ತಿರುತ್ತದೆ. ಇತಿಹಾಸಕಾರ ನೇಮಿಯರ್ ಇತಿಹಾಸದ ಸ್ವರೂಪವನ್ನು ಹೀಗೆ ಬಣ್ಣಿಸಿದ್ದಾರೆ. "ಇತಿಹಾಸಕಾರನ ಕಾರ್ಯಗಳು ಒಬ್ಬ, ಛಾಯಾ ಚಿತ್ರ ತೆಗೆಯುವ ಕ್ಯಾಮರದಂತಿರದೇ ವರ್ಣಚಿತ್ರಕಾರನ ಕಾರ್ಯದ ರೀತಿಯಂತಿರುತ್ತದೆ. ಅಂದರೆ ತಾನು ಕಾಣುವುದನ್ನು ತನ್ನ ಕಣ್ಣಿಗೆ ಅಂದವಾಗಿ ಕಾಣುವಂತೆ ಚಿತ್ರಿಸಿ". ತನ್ನ ಚಿತ್ರವು ಎಲ್ಲಾ ಕೊನಗಳನ್ನು ಸ್ಪಷ್ಟವಾಗಿ ಕಾಣುವಂತೆ ಮಾಡುವುದು ಇವನ ಕಾರ್ಯ, ಆದ್ದರಿಂದ ಇತಿಹಾಸವು ಅವಶ್ಯಕವಾಗಿ ವಸ್ತುನಿಷ್ಟವೂ ಹಾಗೂ ವ್ಯಕ್ತಿಗತವು ಆಗಿದೆ" ಎನ್ನುತ್ತಾರೆ. ಇತಿಹಾಸ ಪುನರಾವರ್ತನೆಯಾಗುತ್ತದೆಂಬುದು ತಪ್ಪು ಅಭಿಪ್ರಾಯ ಕಾರಣ ಇತಿಹಾಸದ ದಾಖಲೆಗಳು ಒಂದೇ ತೆರವಾಗಿರುವುದಿಲ್ಲ ಒಂದೊಂದು ಘಟನೆಯು ಪ್ರಾಮುಖ್ಯವೂ ಆಗಿದ್ದು ಒಂದೇ ಘಟನೆಗಳು ಬೇರೆ ಬೇರೆ ಕಾಲದಲ್ಲಿ ನಡೆದು ಇವುಗಳು ಒಂದೇ ತೆರವಾಗಿರುವುದಿಲ್ಲ. ಒಂದೇ ರೀತಿಯ ಇತಿಹಾಸದ ದೃಷ್ಟಾಂತಗಳು ಉದ್ಭವಿಸಬಹುದು. ಉದಾ:ಕ್ರಾಂತಿಗಳು, ಸುಧಾರಣೆಗಳು, ವಸಾಹತು ನಿರ್ಮಾಣ, ನಿರಂಕುಶ ಪ್ರಭುತ್ವ ರಾಜಕೀಯ ಕ್ಷಿಪ್ರತೆ, ಸಾಮಾಜಕ ಬದಲಾವಣೆ ಮತ್ತು ಆರ್ಥಿಕ ಬದಲಾವಣೆ ಇವುಗಳ ಇದ್ದರೂ ಒಂದೇ ತೆರವಾಗಿರುವುದಿಲ್ಲ ಟ್ರೈವೆಲ್ಯಾನ್‌ರವರ ಪ್ರಕಾರ ಇತಿಹಾಸವು ಪುನರಾವರ್ತನಯಾಗುತ್ತದೆ. ಇತಿಹಾಸವು ಪುನರಾವರ್ತನೆಯಾಗುವುದಿಲ್ಲ ಎಂಬ ಮಾತು ಸಮಾನ ಸತ್ಯವಾಗಿದೆ. ಏಕೆಂದರೆ ಇತಿಹಾಸದಲ್ಲಿ ನಡೆದ ರಾಜಕೀಯ ಅಥವಾ ಸಾಮಾಜಿಕ ಕ್ರಾಂತಿಗಳ ನಂತರ ಮಿಲಿಟರಿ ಆಡಳಿತ ಎಲ್ಲಾ ಕಡೆಯೂ ಸಂಭವಿಸಲಿಲ್ಲ. ಉದಾ: ಜಾರ್ಜ್‌ವಾಷಿಂಗ್‌ಟನ್ನನು ಮಿಲಿಟರಿ ಪ್ರಭುತ್ವವಾದಿಯಾಗಿರಲಿಲ್ಲ. ಹೀಗೆ ಇತಿಹಾಸದ ಸ್ವರೂಪವು ವೈವಿಧ್ಯತೆಯಿಂದ ಕೂಡಿರುವುದನ್ನು ನಾವು ಕಾಣುತ್ತೇವೆ.

## 1.4 ಇತಿಹಾಸದ ವ್ಯಾಪ್ತಿ

ಕಾಲಕಳೆದಂತೆ ಇತಿಹಾಸದ ವ್ಯಾಪ್ತಿಯೂ ವಿಸ್ತರಣೆಯಾಗಿರುವುದನ್ನು ಇತಿಹಾಸದುದ್ದಕ್ಕೂ ಕಾಣುತ್ತೇವೆ. ಇದರ ವ್ಯಾಪ್ತಿಗೆ ಹಲವು ಹೊಸ ಅಂಶಗಳು ಸೇರಿಕೊಂಡಿರುವುದು ಕಂಡು ಬರುತ್ತದೆ. ಇತಿಹಾಸವು ಮೂರು ರೀತಿಯ ವ್ಯಾಪಕ ಅಧ್ಯಯನವನ್ನು ಒಳಗೊಂಡಿದೆ. ಇತಿಹಾಸವು ಕೇವಲ ರಾಜರು ಮತ್ತು ರಾಜಮನೆತನಗಳು ಯುದ್ಧಗಳ ಅಧ್ಯಯನವನ್ನು ಮಾತ್ರಮಾಡದೇ ಮಾನವೀಯ ಅಂಶಗಳಿಂದ ಸಾಮಾಜಿಕ ಕಾರ್ಯಗಳನ್ನೊಳಗೊಂಡು ಕ್ರೀಡೆಗಳೂ ಮಾನವನ ಸನ್ನಡತೆಗಳು, ಸಂಪ್ರಾದಯಗಳು ದಿನನಿತ್ಯದ ಕಾರ್ಯ ಚಟುವಟಿಕೆಗಳು ಗಂಡು ಹೆಣ್ಣು, ಮಕ್ಕಳು ಮುಂತಾದವರ ಎಲ್ಲ ಕಾರ್ಯಗಳ ಅಧ್ಯಯನವಾಗಿದೆ. 'ಇತಿಹಾಸವು ಯಾವುದೇ ಸಾಹಿತ್ಯ ಅಥವಾ ರಾಜಕೀಯ ವಿಷಯದ ಶಾಖೆಯಾಗಿರದೇ, ಸಂಸ್ಕೃತಿಯ ಅಧ್ಯಯನವಾಗಿದ್ದು, ಅವುಗಳಲ್ಲಿ ಜ್ಞಾನ, ನಂಬಿಕೆ, ಕಲೆ, ನೈತಿಕತೆ, ರೂಢಿ ಸಂಪ್ರದಾಯಗಳು, ಮಾನವನ ಚಟುವಟಿಕೆಗಳು ಎಲ್ಲವೂ ನಡೆದು ಸಾಮಾಜಿಕ ಕ್ಷೇತ್ರದ ಅಧ್ಯಯನವನ್ನು ಇತಿಹಾಸವು ನಡೆಸುತ್ತದೆ.

ಇತಿಹಾಸವು ಎರಡು ಪ್ರಮುಖ ಕಾರ್ಯಗಳನ್ನು ನಿರ್ವಹಿಸುತ್ತದೆ. ಅದೆಂದರೆ, ಅಂಕಿ ಅಂಶಗಳ ಸಂಗ್ರಹ ಮತ್ತು ಇತಿಹಾಸದ ಮೂಲ ಭೂತ ಬಲಗಳನ್ನು ವಿವರಿಸುವುದಕ್ಕಾಗಿ ಈ ಅಂಶಗಳನ್ನು ಬಳಸಿಕೊಳ್ಳುವ ಕಾರ್ಯಗಳೇ ಆಗಿವೆ. ಮೊದಲ ಕಾರ್ಯವು ವಸ್ತು ನಿಷ್ಠತೆಯದಾಗಿತ್ತು. ಒಂದು ರೀತಿ ವೈಜ್ಞಾನಿಕ ಕಾರ್ಯವಾಗಿದೆ ಎರಡನೆಯ ಕಾರ್ಯವು ವಿಷಯಕ್ಕೆ ಸಂಬಂಧಿಸಿದ್ದು ಇದು ಕಲಾತ್ಮಕ ನಿರೂಪಣೆಯಾಗಿರುತ್ತದೆ. ಟ್ರೈವಲ್ಯಾನ್‌ರವರ ಪ್ರಕಾರ ಇತಿಹಾಸಕಾರನ, ಮೂರು ಪ್ರಮುಖ ಕಾರ್ಯಗಳನ್ನು ಮಾಡುತ್ತಾನೆ. ಅವುಗಳು ವೈಜ್ಞಾನಿಕ ಕಾರ್ಯ, ಕಾಲ್ಪನಿಕ ಕಾರ್ಯ ಹಾಗೂ ಸಾಹಿತ್ಯಕ ಕಾರ್ಯ ವೈಜ್ಞಾನಿಕ ಕಾರ್ಯದಲ್ಲಿ ಆಧಾರಗಳನ್ನು ಸಂಗ್ರಹಿಸಿ, ಪ್ರಮುಖ ಅಂಶಗಳನ್ನು ಒಂದು ಗೂಡಿಸುವುದು, ಕಾಲ್ಪನಿಕ ಕಾರ್ಯದಲ್ಲಿ ಆಧಾರಗಳ ಅಂಶಗಳನ್ನು ಆಯ್ಕೆ ಮಾಡುವುದು ಮತ್ತು ಆಧಾರಗಳ ವರ್ಗೀಕರಣ ಮಾಡುವುದಾಗಿದ್ದು, ಇವೆಲ್ಲವೂಗಳನ್ನು ಬಳಸಿಕೊಂಡು ಇತಿಹಾಸದ ಘಟನೆಯನ್ನು ಒಂದು ಸೌಂದರ್ಯಕರ ಸಾಹಿತ್ಯದ ತುಂಡನ್ನಾಗಿ ಮಾಡುವುದು ಸಾಹಿತ್ಯದ ಕಾರ್ಯವಾಗಿರುತ್ತದೆಯೆಂದು ಕೇಳಬಹುದು. ಇತಿಹಾಸದ ಸ್ವರೂಪವು ಕೇವಲ ಘಟನೆಗಳ ಪಟ್ಟಿಯನ್ನು ಒದಗಿಸಿಕೊಡುವುದಲ್ಲದೇ ಅವುಗಳನ್ನು ವಿಮರ್ಶೆ, ವಿಶ್ಲೇಷಣಾತ್ಮಕ ಅಧ್ಯಯನ ಮಾಡಿ ಅವುಗಳಿಂದ ಒಳ್ಳೆಯ ಇತಿಹಾಸದ ರಚನೆಯನ್ನು ಮಾಡುವುದಾಗಿದೆಯೆನ್ನಬಹುದು ಇನ್ನೊಂದು ಅರ್ಥದಲ್ಲಿ ಇತಿಹಾಸದ ಮುಖ್ಯಕಾರ್ಯವೆಂದರೆ ಆಧಾರಗಳನ್ನು ಅರ್ಥೈಸುವುದಾಗಿದೆ.

ಇತಿಹಾಸವು ತನ್ನ ಸ್ವರೂಪವನ್ನು ಹೊರತು ಪಡಿಸಿ ತನ್ನ ಕಾರ್ಯವಾದ ಮನುಷ್ಯನ ಹುಟ್ಟಿನಿಂದ ಹಿಡಿದು ಅವನ ಹತ್ತು ಹಲವು ಮುಖದ ಸಾಧನೆಗಳ ವಿಕಾಸದ ಬಗ್ಗೆ ಅಧ್ಯಯನ ನಡೆಸುತ್ತದೆ. ಆದರೆ ಸ್ವರೂಪವೂ ಸಹ ಇತಿಹಾಸದ ವ್ಯಾಪ್ತಿಯಲ್ಲ ಬರುತ್ತಾದಾದರೂ ಇದು ಮಾನವನ ಸಾಧನೆಗಳಲ್ಲಿ ಯಾವುದೇ ಕಾರ್ಯವನ್ನು ನಿರ್ವಹಿಸುವುದಿಲ್ಲ. ಮನುಷ್ಯನ ಜೀವನದ ಗುರಿಯನ್ನು ಮುಟ್ಟಲು ಹಾಗೂ ಮಾನವನ ಜೀವನದ ರೂಪು ರೇಷೆಯ ವಿಧಾನದಲ್ಲಿ ನದಿಗಳು, ಗುಡ್ಡಬೆಟ್ಟಗಳು, ಸಮುದ್ರಗಳು, ಇತಿಹಾಸದಲ್ಲಿ ತಮ್ಮ ತಮ್ಮ ಪಾತ್ರವನ್ನು ವಹಿಸುತ್ತವೆ. ನಪೋಲಿಯನ್, ಕ್ಲೈವ್ ಮತ್ತು ಬಾಬರನ ಕಾರಣದಿಂದಾಗಿ ವಾಟರ್ಲೂ, ಪ್ಲಾಸಿ ಮತ್ತು ಪಾಣಿಪತ್ ನಂತಹ ನಿರ್ಣಾಯಕ ಯುದ್ಧಗಳಾದವು. ವಿಶ್ವೇಶ್ವರಯ್ಯನವರು ನದಿಗೆ ಅಣೆಕಟ್ಟನ್ನು ಕಟ್ಟಿದ್ದರಿಂದಾಗಿ ಕಾವೇರಿ ನದಿಗೆ ಇತಿಹಾಸದಲ್ಲಿ ಪ್ರಮುಖ ಪಾತ್ರ ಸಿಕ್ಕಿತು. ಅದು ಸಿಂಧೂ ನದಿ ಇರಬಹುದು, ಗಂಗಾ ಅಥವಾ ಹಿಮಾಲಯ ಆಗಬಹುದು, ಆದರೆ ಅವುಗಳ ಭಾರತೀಯರ ಜೀವನದಲ್ಲಿ ನಿರ್ವಹಿಸಿದ ಪಾತ್ರಗಳಿಂದಾಗಿ ಪ್ರಮುಖ್ಯತೆಯನ್ನು ಪಡೆದಿವೆಯೆಂದರೆ ತಪ್ಪಾಗಲಾರದು.

ಇತಿಹಾಸದ ವ್ಯಾಪ್ತಿಯು ಗತಕಾಲದ ಘಟನೆಗಳ ಮೂಲವನ್ನು ಅರಿಯುವುದಾಗಿದೆ ಮತ್ತು ಘಟನೆಗಳಿಗಿರುವ ಸಂಬಂಧ, ಕಾರಣಗಳು ಮತ್ತು ಹೋಲಿಕೆ ವ್ಯತ್ಯಾಸಗಳನ್ನು ತಿಳಿಯುವುದೂ ಆಗಿದೆ. ಇತಿಹಾಸಕರನು ಸಮಾಜದ ಚಾಲನೆಯೆನಿಸಿರುವ ಹಲವು ಶಕ್ತಿಗಳ ಹೊರಮೈಯನ್ನು ಹುಡುಕುವ ಪ್ರಯತ್ನವನ್ನು ಮಾಡುತ್ತಾನೆ. ಇತಿಹಾಸಕ್ಕೆ ಗತಕಾಲದ ವಿಷಯಗಳ ಗುಣಗಳ ಗಣನೆ ಬೇಕಾಗಿಲ್ಲ. ಇತಿಹಾಸವು ಒಂದು ಅಪರಾಧಗಳು ಮಾನವಕುಲದ ದೂರದೃಷ್ಟಿಗಳು ಹಾಗೂ ಅವಿವೇಕಗಳ ದಾಖಲೆಗಳಿಗಿಂದ ಒಂದು ಪಟ್ಟು ಮಾತ್ರ ಹೆಚ್ಚು ಎನ್ನುವ ಇತಿಹಾಸಕಾರ ಗಿಬ್ಬನ್‌ನ ಇತಿಹಾಸ ಚಿಂತನೆಯು ಸರಿಯಾದುದಲ್ಲ. ಇತಿಹಾಸದ ವ್ಯಾಪ್ತಿಯಲ್ಲಿ ಹಿಂದಿನ ಘಟನೆಗಳ ಹಲವು ಉತ್ತಮ ಸಾಧನೆಗಳ ಅಂಶಗಳು, ಅಭಿವೃದ್ಧಿ ಕಾರ್ಯಗಳ ಮಹಾಪೂರವೇ ಇತಿಹಾಸವನ್ನು ಉನ್ನತ ಸ್ಥಾನಕ್ಕೆ ತಂದಿದೆ. ಇತಿಹಾಸವು ಕಾಲಗಣನೆ ಮತ್ತು ಸ್ಥಳೀಯ ಅಂಶಗಳ ಹುಟ್ಟಿಗೆ ಬೆಲೆ ನೀಡುತ್ತದೆ. ಪ್ರಸಿದ್ಧ ಇತಿಹಾಸತಜ್ಞರಾದ ಟಾಯನ್ಬಿಯವರು ಇತಿಹಾಸದಲ್ಲಿ

ಬಂದು ಹೋಗುವ ದೊಡ್ಡ ದೊಡ್ಡ ಸಾಮ್ರಾಜ್ಯಗಳ ಅಸ್ತಿತ್ವ, ಮಹಾನ್ ವ್ಯಕ್ತಿಗಳ ಪ್ರಮುಖ ಪಾತ್ರಗಳು ಮಾತ್ರ ಇತಿಹಾಸದಲ್ಲಿ ಸ್ಥಾನ ಪಡೆಯದೇ ಕೆಲವು ಸಣ್ಣ ಪುಟ್ಟ ವಿಷಯಗಳು ಮತ್ತು ಅವುಗಳಿಂದುಂಟಾದ ಚಳುವಳಿಗಳ ಕಾಲಗಳೂ ಸಹ ಪ್ರಾಮುಖ್ಯತೆಯನ್ನು ಇತಿಹಾಸ ಪ್ರಪಂಚದಲ್ಲಿ ಪಡೆಯುತ್ತವೆಂದು ತಿಳಿಸಿತ್ತಾರೆ. ಇತಿಹಾಸವು ಸಮಾಜದಲ್ಲಿ ಕಂಡು ಬರುವ ವಿಜ್ಞಾನ, ತಂತ್ರಜ್ಞಾನ, ಅನ್ವೇಷಣೆಗಳು, ಹುಡುಕಾಟಗಳು ಮತ್ತು ಸಾಧನೆಗಳಂತಹ ಎಲ್ಲಾ ಮಾನವನ ಸಾಧನೆಗಳನ್ನು ಸಹ ಪರಿಗಣನೆಗೆ ತೆಗೆದುಕೊಳ್ಳಬೇಕು, ಕಾರಣ ಇವೆಲ್ಲವೂ ಮಾನವ ನಿರ್ಮಿತವಾದವುಗಳು. ಆದರೂ ಪ್ರಾಥಮಿಕವಾಗಿ ಮನುಷ್ಯನ ಸಾಮಾಜಿಕ ಜೀವನ, ರಾಜಕೀಯ ಸಾಧನೆಗಳು, ಸಾಂಸ್ಕೃತಿಕ ಮೇಲ್ಮಗಳು, ಸಂವಿಧಾನಿಕ ವ್ಯವಸ್ಥೆಗಳು ಮತ್ತು ಅವನ ಆರ್ಥಿಕ ಅಭಿವೃದ್ಧಿಗಳು ಇತಿಹಾಸದ ವ್ಯಾಪ್ತಿಯೊಳಗಿದ್ದು ಅವನ ದಿನನಿತ್ಯದ ಯೋಗಕ್ಷೇಮವನ್ನು ನೋಡಿಕೊಳ್ಳುತ್ತವೆ. ಅಲ್ಲದೆ ರಾಜ್ಯ ಮತ್ತು ಸಮಾಜಗಳ ಅಸ್ತಿತ್ವದ ಮುಖಾಂತರ ಮಾನವನ ಕಲಾತ್ಮಕತೆ ಮುಂತಾದುವು ನಮಗೆ ಪ್ರಸ್ತುತವೇ ಆಗಿವೆ. ಇತಿಹಾಸದ ವ್ಯಾಪ್ತಿಯಲ್ಲ ಜನಸಾಮಾನ್ಯನೂ ಸಹ ಸ್ಥಾನವನ್ನು ಪಡೆದಿದ್ದಾನೆ, ಇತಿಹಾಸದ ಪುಟದಲ್ಲಿ ಆತನನ್ನು ಪರದೆಯ ಹಿಂದೆ ಸರಿಸಿದ್ದರೂ ಸಂಶೋಧನಾತ್ಮಕ ಇತಿಹಾಸದ ಒರೆಯಲ್ಲಿ ಸಾಮಾನ್ಯ ಮನುಷ್ಯನೂ ತನ್ನ ಪಾತ್ರವನ್ನು ಇತಿಹಾಸದಲ್ಲಿ ನಿರ್ವಹಿಸಿದ್ದಾನೆಂಬುದು ಅವಲೋಕನದಲ್ಲಿ ಕಂಡು ಬಂದಿದೆ. ಆದರೂ ಇತಿಹಾಸಜ್ಞನ ಕೇವಲ ಮಹಾನ್ ವ್ಯೂಹಗಳು ಮತ್ತು ಮಹಾನ್ ಘಟನೆಗಳನ್ನು ಮಾತ್ರ ವ್ಯಾಪ್ತಿಯಲ್ಲಿ ಸೇರಿಸಿರುವುದು ಮಹಾ ಪರಾಧವೇ ಸರಿ. ಏಕೆಂದರೆ ಕೆಳಸ್ತರದ ವ್ಯಕ್ತಿಗಳು ಸಾಮ್ರಾಟರ ಕಪಿಮುಷ್ಠಿಯಲ್ಲಿ ಸಿಲುಕಿ ಸಾಕಷ್ಟು ಕಷ್ಟಕಾರ್ಪಣ್ಯಗಳನ್ನು ಅನುಭವಿಸಿದರೂ ಸಹ, ಸಾಮ್ರಾಟರ ಕಾರ್ಯಗಳಲ್ಲಿ ಸಹಾಯ ಸಹಕಾರ, ದುಡಿಮೆ ಮಾಡಿ ಅವರ ಸಾಧನೆಗಳ ಪ್ರಖ್ಯಾತಿಗಳಲ್ಲಿ ಸಹಾಯ ಮಾಡಿದ್ದಾರೆಂಬುದು ಇತಿಹಾಸದ ವ್ಯಾಪ್ತಿಗೆ ಈಗ ಸೇರಿದೆ. ಪಿರಮಿಡ್‌ನ್ನು ಕಟ್ಟುವುದರಿಂದ ಹಿಡಿದು ಆಧುನಿಕ ಜಗತ್ತಿನ ಆಕಾಶ ಕಾಯಗಳ ನಿರ್ಮಾಣದವರೆಗೂ ಇವನು ಘಟನೆಗಳ ಹಿಂಬದಿಯಲ್ಲಿದ್ದು ಸಾಧನೆಯಲ್ಲಿ ನಿರ್ವಂಚನೆಯ ಪಾತ್ರ ವಹಿಸಿದ್ದು ಇತಿಹಾಸ ವ್ಯಾಪ್ತಿಗೆ ಇತ್ತೀಚೆಗೆ ಸೇರುತ್ತಿದೆ.

ಇತಿಹಾಸದಲ್ಲಿ ಹಲವಾರು ವಿಂಗಡಣೆಗಳು ಮತ್ತು ಮರುವಿಂಗಡಣೆಗಳು ಕಂಡು ಬರುತ್ತವೆ ಇವುಗಳ ಮೇಲೂ ಇತಿಹಾಸಕಾರನು ಬೆಳಕು ಚೆಲ್ಲ ಬೇಕಾಗಿದೆ. ಏಕೆಂದರೆ ಇವುಗಳು ಮಾನವ ಕುಲದ ವಿಷಯಗಳೇ ಆಗಿದೆ. ಇವುಗಳ ಅಧ್ಯಯನವನ್ನು ನಡೆಸುವಾಗ ಇತಿಹಾಸಕಾರನು ಹಲವು ವಿಷಯಗಳ ಸಹಕಾರವನ್ನು ಪಡೆಯುತ್ತೇವೆ ಅವುಗಳಲ್ಲಿ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಮನೋವಿಜ್ಞಾನ, ಸಾಹಿತ್ಯ ಮುಂತಾದವುಗಳು ಸಹಾಯ ಹಸ್ತ ನೀಡಿವೆ. ಇತಿಹಾಸವು ಸಾಹಿತ್ಯಾತ್ಮಕ ವಿವರಣೆಯನ್ನು ನೀಡುವಲ್ಲಿ ಸಾಹಿತ್ಯದ ಸಹಾಯವು ಅತ್ಯಮೂಲವಾಗಿದೆ 19ನೇ ಶತಮಾನದ ನಂತರದಿಂದ ಇತಿಹಾಸದ ವ್ಯಾಪ್ತಿಯು ಬಹು ವಿಸ್ತಾರವಾಗಿದೆ. ಆದ್ದರಿಂದಲೇ 19ನೇ ಶತಮಾನವನ್ನು "ಇತಿಹಾಸದ ಶತಮಾನ"ವೆಂದು ಕರೆದಿದ್ದಾರೆ. ಇದು ಇತಿಹಾಸವನ್ನು ಮಾನವೀ ಮೌಲ್ಯಗೊಳಿಸಿದೆಯಲ್ಲಿದೇ ಮತ್ತು ಚಿಂತನೆ ಮತ್ತು ಸತ್ಯಗಳ ಕೇಂದ್ರಬಿಂದುವಾಗಿ ಮಾಡಿದೆ. ಇತಿಹಾಸದ ವ್ಯಾಪ್ತಿಯಿಂದಾಗಿ ಇತಿಹಾಸವು ಜಾಗತಿಕ ಇತಿಹಾಸದ ಬೆಳವಣಿಗೆಗೆ ಕಾರಣವಾಗಿದೆಯೆನ್ನಬಹುದು.

## 1.5 ಘಟಕದ ಸಾರಾಂಶ

ಮೇಲೆ ತಿಳಿಸಿದ ಘಟಕದಲ್ಲಿ ನಾವು ಈ ಕೆಳಕಂಡ ವಿಷಯಗಳನ್ನು ಅರ್ಥ ಮಾಡಿಕೊಳ್ಳುವಂತಾಯಿತು.

* ಇತಿಹಾಸದ ಅರ್ಥ
* ಇತಿಹಾಸದ ವ್ಯಾಖ್ಯೆಗಳು
* ಇತಿಹಾಸದ ಸ್ವರೂಪ ಮತ್ತು
* ಇತಿಹಾಸದ ವ್ಯಾಪ್ತಿ

## 1.6 ಸ್ವಯಂ ಮೌಲ್ಯಮಾಪನ ಪ್ರಶ್ನೆಗಳು

1. ಇತಿಹಾಸದ ಅರ್ಥ ಮತ್ತು ವ್ಯಾಖ್ಯೆಗಳನ್ನು ಕುರಿತು ಟಿಪ್ಪಣಿ ಬರೆಯಿರಿ.
2. ಇತಿಹಾಸದದ ಸ್ವರೂಪ ಮತ್ತು ವ್ಯಾಪ್ತಿಯನ್ನು ವಿಮರ್ಶಿಸಿ.

## 1.7 ಆಯ್ದು ಗ್ರಂಥಗಳ ಪಟ್ಟಿ


1. Renier G.I - History -Its purpose and Method
2. Carr E.H - What is History
3. Colling wood R.G. - The Idea of History


ಡಾ.ಎ.ಸೋಮಶೇಖರ

# ಘಟಕ - 2 ಇತಿಹಾಸದ ವಸ್ತು ವಿಷಯ ಹಾಗೂ ಇತಿಹಾಸದ ವಿಧಗಳು

*ವಿಷಯಾನುಕ್ರಮಣಿಕೆ*


2.0 ಉದ್ದೇಶಗಳು

2.1 ಪೀಠಿಕೆ

2.2 ಇತಿಹಾಸದ ವಸ್ತು ವಿಷಯ

2.3 ಇತಿಹಾಸದ ವಿಧಗಳು

2.4 ಘಟಕದ ಸಾರಾಂಶ

2.5 ಸ್ವಯಂ ಪರಿಶೀಲನಾ ಪ್ರಶ್ನೆಗಳು

2.6 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 2.0 ಉದ್ದೇಶಗಳು

ಈ ಘಟಕದ ಅಧ್ಯಯನದ ಉದ್ದೇಶವೇನೆಂದರೆ, ಇತಿಹಾಸದ ವಸ್ತು ವಿಷಯಗಳೇನು? ಇತಿಹಾಸದಲ್ಲಿ ಗತಕಾಲದ ಮಾನವನ ಜೀವನದ ಚಟುವಟಿಕೆಗಳು ಯಾವ ರೀತಿಯಲ್ಲಿ ಸಾಗಿದವು ಮತ್ತು ಅವನು ತನ್ನ ಚಟುವಟಿಕೆಗಳನ್ನು ನಡೆಸಿ ಯಾವ ರೀತಿಯ ಸಾಧನೆಗಳಾಗಲೀ ಅಥವಾ ಅವನು ಎದುರಿಸಿದ ಸವಾಲುಗಳು ಹಾಗೂ ಅವನ ಸಾಧನೆಗಳನ್ನು ಕುರಿತ ಹತ್ತು ಹಲವಾರು ವಸ್ತು ವಿಷಯಗಳನ್ನು ಇಲ್ಲಿ ಅಧ್ಯಯನ ನಡೆಸಲಾಗುವುದು. ಇದಲ್ಲದೇ ಇತಿಹಾಸದಲ್ಲಿ ಯಾವ ಯಾವ ಪ್ರಾಕಾರಗಳಲ್ಲಿ ಅಧ್ಯಯನ ನಡೆಸುತ್ತೇವೆ ಎಂಬುದು ಈ ಘಟಕದ ಅಧ್ಯಯನದ ಉದ್ದೇಶಗಳಲ್ಲಿ ಒಂದಾಗಿ ಸೇರಿದೆ.

## 2.1 ಘಟಕದ ಪೀಠಿಕೆ

ಇತಿಹಾಸವು ಗತಕಾಲದಲ್ಲಿ ನಡೆದ ಘಟನೆಗಳ ಒಂದು ದಾಖಲೆಯೆನ್ನಬಹುದು. ಇತಿಹಾಸವು ಎಲ್ಲಾ ಘಟನೆಗಳನ್ನು ವಿವರಿಸುತ್ತದೆಯಲ್ಲದೇ ವಿಶೇಷವಾಗಿ ಪ್ರಮುಖ ಘಟನೆಗಳನ್ನು ದಾಖಲಿಸುತ್ತದೆ. ಈ ಇತಿಹಾಸದ ನಿರೂಪಣೆಯಲ್ಲಿ ಮಾನವನ ಹಲವು ಸಮಾಜದಲ್ಲಿ ಚಟುವಟಿಕೆಗಳು ಹಾಗೂ ಅವನ ಸಾಧನೆಗಳನ್ನು ನಾವು ದಾಖಲಿಸುತ್ತೇವೆ. ಇತಿಹಾಸವು ಪ್ರಮುಖವಾಗಿ ಮಾನವ ಜೀವಿಗಳ ಬಗ್ಗೆ ಅಧ್ಯಯನ ನಡೆಸುತ್ತಿದ್ದು, ಮಾನವನು ಏನು ಸಾಧಿಸಿದನು ಎಂಬುದನ್ನು ಸಹ ಅಧ್ಯಯನ ಮಾಡುತ್ತೇವೆ. ಆದ್ದರಿಂದ ಇತಿಹಾಸದ ವಸ್ತು ವಿಷಯವೆಂದರೆ ಮಾನವ ಮತ್ತು ಅವನ ಹಲವು ಚಟುವಟಿಕೆಗಳ ಅಧ್ಯಯನವೆನ್ನಬಹುದು. ಎಲ್ಲಾ ಚಟುವಟಿಕೆಗಳ ಜೊತೆಗೆ ಹಲವು ಅತೀ ಪ್ರಮುಖ ಘಟನೆಗಳು, ಸಾಧನಾಯುಕ್ತ ವಿಷಯಗಳು ಮತ್ತು ವೈಯಕ್ತಿಕವಾಗಿ ಮಾಡಿದ ಸಾಧನೆಗಳನ್ನೂ ಸಹ ಇತಿಹಾಸದ ವಸ್ತು ವಿಷಯವನ್ನಾಗಿ ಅಧ್ಯಯನ ನಡೆಸುತ್ತೇವೆ. ಇದರಿಂದಾಗಿ ಎಲ್ಲರೂ ಇತಿಹಾಸದ ನಿಜವಾದ ವಸ್ತು ವಿಷಯವೇನು? ಎಂಬುದನ್ನು ಅರಿಯಬೇಕಾಗಿದೆ. ಈ ಘಟಕದಲ್ಲಿ ಇತಿಹಾಸದ ವಸ್ತು ವಿಷಯದ ಪರಿಪೂರ್ಣ ಮಾಹಿತಿಯನ್ನು ಹೊಂದುವ ಪ್ರಯತ್ನ ಮಾಡಲಾಗಿದೆ.

## 2.2 ಇತಿಹಾಸದ ವಸ್ತು ವಿಷಯ

ಇತಿಹಾಸದ ವಸ್ತುವಿಷಯಗಳಲ್ಲಿ ಯಾವ ಯಾವ ವಿಷಯಗಳು ಸೇರಿಕೊಂಡಿವೆ ಎಂಬುದರ ಬಗ್ಗೆ ವಿದ್ವಾಂಸರಲ್ಲಿ ಸಾಕಷ್ಟು ಚರ್ಚೆ ಮತ್ತು ಜಿಜ್ಞಾಸೆಗಳು ನಡೆಸಲ್ಪಟ್ಟಿವೆ. ಏಕೆಂದರೆ ಇತಿಹಾಸದ ವಸ್ತು ವಿಷಯವು ಬೇರೆಯದೇ ರೀತಿಯದಾಗಿದ್ದು, ಪ್ರಾಕೃತಿಕ ವಿಜ್ಞಾನಗಳಲ್ಲಿ ಕಂಡುಬರುವ ವಸ್ತು ವಿಷಯಗಳಂತಿರದೇ ವೈಶಿಷ್ಟ್ಯ ಪೂರ್ವಕವಾದ ವಿಷಯವನ್ನು ಇತಿಹಾಸವು ಹೊಂದಿದೆಯೆನ್ನಬಹುದು. ಇತಿಹಾಸವು ಒಂದು ವೈವಿಧ್ಯಮಯವೂ ಹಾಗೂ ವಿಶಿಷ್ಟವೂ ಆದ ಒಂದು ಅನುಭವವೆನ್ನಬಹುದು. ಇತಿಹಾಸಕಾರ ಕಾಲಿಂಗ್‌ವುಡ್‌ರವರು ಇತಿಹಾಸ ಜ್ಞಾನವು "ಮಾನವನು ಹಿಂದೆ ಏನು ಸ್ಥಾಪಿಸಿದ ಎಂಬುದರ ಜ್ಞಾನವೇ ಆಗಿದೆ" ಎನ್ನುತ್ತಾರೆ. ಇತಿಹಾಸವು ಮಾನವನ ಅನುಭವಗಳ ದಾಖಲೆಯಾಗಿದೆ ಎನ್ನುತ್ತಾರೆ. ಆದರೆ ಮಾನವನ ಅನುಭವಗಳು ಎಂದರೇನು? ಎಂಬುದು ಒಂದು ಪ್ರಶ್ನೆ. ಮಾನವನ ಅನುಭವಗಳು ಮಾನವನ ಚಿಂತನೆಗಳಿಗೆ ಸಂಬಂಧಪಟ್ಟಿವೆ ಎಂದು ತಿಳಿಯಬಹುದು. ಈ ಚಿಂತನೆಗಳು ಇತಿಹಾಸಕಾರನ ಮನಸ್ಸಿನಲ್ಲಿ ಪುನಪ್ರದರ್ಶನಗೊಳ್ಳುತ್ತವೆಂದೂ ಸಹ ಹೇಳಬಹುದು ಮತ್ತು ಅವುಗಳನ್ನು ಅವನು ದಾಖಲಿಸುತ್ತಾನೆಂದೂ ಸಹ ತಿಳಿಯಬಹುದು. ಈ ಹಿಂದೆ ನಡೆದ ಘಟನೆಗಳ ಬಗ್ಗೆ ಚಿಂತನೆಯು ಇಂದು ಮುಂದುವರಿಯಬಹುದು. ಆದರೆ ಈ ಮುಂದುವರಿಕೆಯು ದೈಹಿಕವಾಗಿ ಆಗದಿದ್ದರೂ ಮಾನಸಿಕವಾಗಿ ನಡೆಯಬಹುದು. ಆದ್ದರಿಂದಲೇ ಇತಿಹಾಸಕಾರನ ಪ್ರಮುಖ ಕಾರ್ಯವೆಂದರೆ ಹಿಂದೆ ಗತಿಸಿದ ಘಟನೆಗಳನ್ನು ನಿರಂತರವಾಗಿ ಇಂದಿಗೆ ಅಳವಡಿಸುವುದೇ ಆಗಿದೆ ಎಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಆದ್ದರಿಂದ ಇತಿಹಾಸದ ವಸ್ತು ವಿಷಯವು ಯಾವುದೇ ಒಂದು ವಿಷಯವಾಗಿರದೇ ಇತಿಹಾಸಕಾರನ ಮನಸ್ಸಿನಲ್ಲಿ ಪುನರ್ ಅಭಿನಯಿಸಲ್ಪಡುವ ಚಿಂತನೆಗಳ-ಚಟುವಟಿಕೆಗಳಾಗಿವೆಯೆನ್ನಬಹುದು.

ಇತ್ತೀಚಿನ ವರ್ಷಗಳಲ್ಲಿ ಇತಿಹಾಸದ ವಸ್ತು ವಿಷಯವನ್ನು ಕುರಿತು ಹಲವು ಹೊಸ ದೃಷ್ಟಿಕೋನಗಳು ಹೊರಬಂದಿವೆ. ಈ ಹೊಸ ದೃಷ್ಟಿಕೋನಗಳ ರುವಾರಿಯಾದ ಆರ್.ಜಿ. ಕಾಲಿಂಗ್ ವುಡ್‌ರವರು ತಮ್ಮ ಅದ್ಭುತ ಗ್ರಂಥವಾದ 'The Idea of History' ಯಲ್ಲಿ ಇತಿಹಾಸದ ವಸ್ತು ವಿಷಯವೆಂದರೆ ಕೇವಲ ಯುದ್ಧ, ದಿಗ್ವಿಜಯ ಅಥವಾ ಮಹಾಪುರುಷ ಮಾತ್ರವಾಗಿರದೇ ಇತಿಹಾಸವು

ಒಂದು ಚಿಂತನೆಯಾಗಿದೆ" ಎನ್ನುತ್ತಾರೆ. ಇನ್ನೂ ಮುಂದುವರಿದು ಇತಿಹಾಸವೆಂದರೆ ಕೇವಲ ಅನುಭವದ ವಿಷಯವೊಂದೇ ಅಲ್ಲವೆನ್ನುತ್ತಾರೆ. ಪ್ರಕೃತಿಯಲ್ಲಿ ಉಂಟಾಗುವ ಬದಲಾವಣೆಗಳು ನೈಜವಾಗಿರಬಹುದು ಅಥವಾ ರಚನಾತ್ಮಕವಾಗಿರಬಹುದು ಮತ್ತು ಅವುಗಳು ಸ್ಥಿರವಾದ ಆವರ್ತನ ಚಕ್ರದ ಹಂತಗಳ ಪುನರಾವರ್ತನೆಗಳಾಗಿದ್ದು ಇತಿಹಾಸವೆನಿಸಿಕೊಳ್ಳಬಹುದು ಅಥವಾ ಇತಿಹಾಸವಾಗದೇಯೂ ಇರಬಹುದು. ಆದರೆ ಈ ಎಲ್ಲಾ ವಿವರಣೆಗಳು ಪ್ರಾಕೃತಿಕ ಜೀವನವು ಐತಿಹಾಸಿಕ ಜೀವನವೆನ್ನುವುದನ್ನು ದೃಢಪಡಿಸಲಾರವು. ಉದಾಹರಣೆಗೆ ಭೂಮಿಯಲ್ಲಿ ಒಂದು ಬೀಜವನ್ನು ಬಿತ್ತಿದರೆ ಅದು ರೂಪಾಂತರಕ್ಕೆ ಒಳಪಟ್ಟಿದ್ದು ಈ ಕ್ರಿಯೆಯ ಬದಲಾವಣೆಯು ಜೈವಿಕವೇ ಹೊರತು ಐತಿಹಾಸಿಕವಾಗಲಾರವೆಂದು ಹೇಳಬಹುದು. ಯಾವುದನ್ನು ಸ್ವಾಭಾವಿಕ ಇತಿಹಾಸವೆನ್ನುತ್ತಾರೆಂದರೆ, ನಿಸರ್ಗದಲ್ಲಿ ನಡೆಯುವ ಘಟನೆಗಳು ಚಿಂತನವಾಗಲು ವ್ಯಕ್ತಿಗಳ ಕಾರ್ಯಚಟುವಟಿಕೆಗಳಾಗಿದ್ದಲ್ಲಿ ಮಾತ್ರ ಒಪ್ಪಿಕೊಳ್ಳಬಹುದು. ಇದಲ್ಲದೇ ಅನುಭವಗಳೂ ಸಹ ಇತಿಹಾಸ ಜ್ಞಾನದ ವಸ್ತುಗಳಾಗದೇ ಇರಬಹುದು. ಏಕೆಂದರೆ ಅವುಗಳು ಎಲ್ಲವೂ ಸಹ ಪುನಃ ಅಭಿನಯಿಸಲ್ಪಡುವುದಿಲ್ಲ. ಇದರಿಂದಾಗಿ ವ್ಯಕ್ತಿಯ ಜ್ಞಾನವೇ ಇತಿಹಾಸ ಎಂಬುದು ಬಹಳಷ್ಟು ದೊಡ್ಡ ಅಥವಾ ತುಂಬಾ ಸಂಕುಚಿತವಾದ ಅಸ್ಪಷ್ಟವಾದ ಒಂದು ಮಾತಾಗುತ್ತದೆ. ಏಕೆಂದರೆ ಇದು ಇತಿಹಾಸದ ನಿಜವಾದ ಅರ್ಥವನ್ನು ನಿರೂಪಿಸುವುದಿಲ್ಲ. ನಾವು ಇತಿಹಾಸದಲ್ಲಿ ಚಿಂತನೆಯ ಅಂಶಗಳನ್ನು ಅಳವಡಿಸದಿದ್ದರೆ ಇತಿಹಾಸವು ಆತ್ಮವಿಲ್ಲದ ಒಂದು ಅಧ್ಯಯನ ವಿಷಯವಾಗುವುದು. ಆದ್ದರಿಂದ ಚಿಂತನೆಯಿಲ್ಲದ ಇತಿಹಾಸವಿಲ್ಲವೆಂಬುದು ಸತ್ಯ. ಹಿಂದಿನ ಘಟನೆಗಳು ನಮ್ಮ ಮುಂದೆ ಬರುವುದಿಲ್ಲ ಆದರೆ ಅವು ಕೇವಲ ಮಾನಸಿಕ ಪ್ರತಿಬಿಂಬಗಳಾಗುತ್ತವೆ. ಆದ್ದರಿಂದ ಇತಿಹಾಸದ ಜ್ಞಾನಕ್ಕೆ ಒಂದು ಅವಶ್ಯಕವಾದ ನಿಯಮವಿರಬೇಕಾಗುತ್ತದೆ. ಅದೆಂದರೆ ಇತಿಹಾಸಕಾರ ಮತ್ತು ಅವನ ವಸ್ತುವಿನ ನಡುವಿನ ಕಾಲದ ಅಂತರವು ಇತಿಹಾಸಕಾರನ ಮನಸ್ಸಿನಲ್ಲಿ ಪುನರ್ಜೀವಿತವಾಗಬೇಕಾಗುತ್ತದೆ. ಅಲ್ಲದೇ ಇತಿಹಾಸಕಾರನ ಮನಸ್ಸು ಈ ಪುನರುಜ್ಜೀವನಕ್ಕೆ ಆವಾಸಸ್ಥಾನವಾಗಬೇಕು. ಆದ್ದರಿಂದ ಇತಿಹಾಸಕಾರನು ಯಾವುದೇ ವಸ್ತು ವಿಷಯವನ್ನು ಸರಿಯಾದ ರೀತಿಯಲ್ಲಿ ಅಧ್ಯಯನ ಮಾಡಲು ಸಶಕ್ತನಾಗಿರಬೇಕು. ಇವನು ಯಾವುದನ್ನು ಅಧ್ಯಯನ ಮಾಡುತ್ತಿದ್ದಾನೋ ಅದೊಂದು ಚಿಂತನೆಯಾಗಬೇಕು. ಆದ್ದರಿಂದ ಇತಿಹಾಸಕಾರನ ಮನಸ್ಸು ಮತ್ತು ಅವನ ಘಟನೆಗಳ ವಸ್ತುಗಳ ನಡುವೆ ಒಂದು ರೀತಿಯ ಉತ್ತಮ ಬಾಂಧವ್ಯವಿರಬೇಕಾಗುತ್ತದೆ. ಇತಿಹಾಸಕಾರನ ಚಿಂತನೆಯು ಒಟ್ಟು ಅನುಭವವನ್ನು ಒಟ್ಟುಗೂಡಿಸುವ ಹಾದಿಯಲ್ಲಿರಬೇಕಾದ್ದು ಅವಶ್ಯ.

ಅಂದರೆ ಇತಿಹಾಸದ ಜ್ಞಾನವು ಒಂದು ರೀತಿಯ ನಿಜವಾದ ವಸ್ತುವಿನ ಜ್ಞಾನವಾಗಿರದೇ ಅದೊಂದು ವಿಷಯದ ಚಿಂತನೆಗೆ ಒಳಪಡುವುದಾಗಿರಬೇಕು. ಇದು ಇತಿಹಾಸಕಾರನ ಮನಸ್ಸಿನ ಕೇಂದ್ರ ಬಿಂದುವಾಗಬೇಕು. ಇದರಲ್ಲಿ ಚಿಂತನೆಯ ಕಾರ್ಯ ಅಥವಾ ಚಟುವಟಿಕೆಗೆ ಹೆಚ್ಚು ಒತ್ತನ್ನು ನೀಡಬೇಕು. ಅಂದರೆ ಹಿಂದೆ ನಡೆದ ಘಟನೆಯು ಕೇವಲ ನಿರ್ಜೀವ ವಸ್ತುವಿನ ಆಕರವಾಗಿರದೇ ಆ ಘಟನೆಯು ನಡೆದ ಬಗೆಗೆ ಮತ್ತು ಆ ಆಕರದ ಒಂದು ಆಂತರ್ಯವಾಗಬೇಕು. ಇದನ್ನು ಹೊರತರುವುದು ಇತಿಹಾಸಕಾರನ ಕರ್ತವ್ಯ, ಇದನ್ನು ತನ್ನ ಮನಸ್ಸಿನಾಳದಿಂದ ಮೂಡಿಸಬೇಕಾಗಿದೆ ಇದನ್ನು ಅವನು ಹಿಂದಿನ ಘಟನೆಗಳ ಆಕರಗಳ ಜವಾಬ್ದಾರಿಯುತ ಅಧ್ಯಯನದಿಂದ ಮಾಡಬೇಕು. ಈ ನಿಯಮವು ಇತಿಹಾಸವನ್ನು ಇತರೇ ಸ್ವಾಭಾವಿಕ ವಿಜ್ಞಾನಗಳಿಂದ ಭಿನ್ನವಾಗಿಸುವುದಲ್ಲದೇ ಮನೋವಿಜ್ಞಾನದಲ್ಲಿ ಕಂಡುಬರುವ ತಕ್ಷಣದ ಅನುಭವಗಳು, ಭಾವನೆಗಳು, ಇಂದ್ರೀಯ ಜ್ಞಾನ ಇವುಗಳ ಮಾನಸಿಕ ಕ್ರಿಯೆಗಳಾದರೂ ಸಹ ಚಿಂತನೆಯ ಕ್ರಿಯೆಗಳಾಗುವುದಿಲ್ಲ ಎಂಬುದನ್ನು ಈ ನಿಯಮವು ತಿಳಿಸುತ್ತದೆ.

ಇತಿಹಾಸದ ವಸ್ತು ವಿಷಯವು ಕೇವಲ ಚಿಂತನೆ ಮಾತ್ರವಾಗಿರದೇ ಚಿಂತನೆಯ ಕ್ರಿಯೆಗಳೂ ಆಗಿರುತ್ತದೆ. ಅಂದರೆ ಸಮಗ್ರ ಇತಿಹಾಸದ ಅಧ್ಯಯನವು ಯಾವ ರೀತಿಯ ಚಿಂತನೆಯಾಗಿದೆ ಎಂಬುದಾಗಿರುತ್ತದೆ. ಮಾನವನ ದಿನನಿತ್ಯದ ಚಟುವಟಿಕೆಗಳಾದ ಊಟ, ತಿಂಡಿ, ಆಟ, ವಿಶ್ರಾಂತಿಗಳಾಗಿರದೇ ಮಾನವನ ಏಳು-ಬೀಳುಗಳು, ಅವನ ದುಃಖ ದುಮ್ಮಾನಗಳನ್ನು ತೊಡೆದು ಸುಖವೇರ್ಪಡುವಂತೆ ಮಾಡುವಂತಹ ಕ್ರಿಯೆಗಳನ್ನು ಚಿತ್ರಿಸುವ ಚಿಂತನೆಯು ಇತಿಹಾಸವಾಗುತ್ತದೆ. ಅಂದರೆ ಜಗತ್ತಿನಲ್ಲಿ ವಿವಿಧ ಕ್ಷೇತ್ರಗಳಲ್ಲಿ ಆದಂತಹ ಅನೇಕ ಕಾರ್ಯಗಳಿಂದ ಯುದ್ಧಗಳು, ಶಾಂತಿ-ಸಂಧಾನ, ಆಡಳಿತ ಸುಧಾರಣೆಗಳು ಮುಂತಾದ ವಿಷಯಗಳನ್ನು ಅಧ್ಯಯನ ಮಾಡುವುದು ಇತಿಹಾಸದ ವಸ್ತು ವಿಷಯವಾಗಿದೆ. ಇದಲ್ಲದೇ ಕ್ರಾಂತಿಗಳು ಧಾರ್ಮಿಕ ಶಾಂತಿ, ಜನಕಲ್ಯಾಣ, ಸ್ವಾರ್ಥ, ದುರಾಶೆ, ಅಧಿಕಾರ ಲಾಲಸೆ ಬಿಟ್ಟು ಉತ್ತಮ ಕಾರ್ಯಗಳನ್ನು ಸಾಧಿಸಿದ ವ್ಯಕ್ತಿಗಳು, ಸಾಮ್ರಾಜ್ಯಗಳು ಸಂಸ್ಥೆಗಳ ಅಧ್ಯಯನವೂ ಕೂಡ ಇತಿಹಾಸದ ಅಧ್ಯಯನದ ವಿಷಯವಾಗಿದೆಯೆನ್ನಬಹುದು. ಈ ಎಲ್ಲಾ ಘಟನೆಗಳು ನಮ್ಮ ಸುಂದರ ಪ್ರಕೃತಿ ಅಥವಾ ಜಗತ್ತಿನಲ್ಲಾಗಿದ್ದು ಇದರ ಅಧ್ಯಯನವೇ

ಇತಿಹಾಸದ ವಸ್ತು ವಿಷಯ. ಹಿಂದಿನ ಇತಿಹಾಸಕಾರರು ಮತ್ತು ಹಿಂದಿನ ಘಟನೆಗಳನ್ನು ಒಟ್ಟುಗೂಡಿಸುವ ಭಾವನೆಗಳು ಅಥವಾ ಚಿಂತನೆಗಳು ಅಂದರೆ ಅವುಗಳು ಯಾವುದೇ ವ್ಯಕ್ತಿಗೆ ಸಂಬಂಧಿಸಿರಲಿ, ಯಾವುದೇ ದೇಶದ್ದಾಗಿರಲಿ ಅವುಗಳನ್ನು ಯಥಾವತ್ತಾಗಿ ಚಿತ್ರಿಸುವ ಕಾರ್ಯವು ಇತಿಹಾಸದ ವಸ್ತು ವಿಷಯ. ಈ ಎಲ್ಲಾ ವಿಷಯಗಳನ್ನು ದೈಹಿಕ ಶ್ರಮಕ್ಕಿಂತ ಮಾನಸಿಕ ಪರಿಶ್ರಮದಿಂದ ಮಾಡುವುದು ಇತಿಹಾಸಕಾರನದಾಗಿರುತ್ತದೆ. ಅವನು ಸಂಶೋಧಕನಾಗಿ, ಸಮರ್ಪಕವಾಗಿ ಸತ್ಯ ರೂಪದಲ್ಲಿ ಚಿತ್ರಿಸಬೇಕು.

ಇತಿಹಾಸಕಾರನ ಮನಸ್ಸು ಛಾಯಾಚಿತ್ರ ತೆಗೆಯುವ ಕ್ಯಾಮರಾದಂತಿರಬೇಕು. ಅಂದರೆ ಕ್ಯಾಮರಾದಲ್ಲಿ ಚಿತ್ರದ ಪೂರ್ಣ ದೃಶ್ಯವು ಮೂಡುವಂತಿರಬೇಕು ಅಂತಹ ಮನಸ್ಸು ಇತಿಹಾಸಕಾರವಾಗಿದ್ದರೆ ಮಾತ್ರ ಇತಿಹಾಸದ ವಸ್ತು ವಿಷಯಗಳು ಸಂಪೂರ್ಣವಾಗಿ ಅವನಿಂದ ಹೊರಹೊಮ್ಮುತ್ತದೆ. ಇತಿಹಾಸದ ವಸ್ತು ವಿಷಯಗಳಲ್ಲಿ ಯಾವುದೇ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ವಿಷಯಗಳಿದ್ದರೂ ಅದನ್ನು ಒಮ್ಮೆ ಮಾತ್ರ ಇತಿಹಾಸಕಾರನು ತನ್ನ ಕಲಾತ್ಮಕ ಭಾವನೆಯಿಂದ ಚಿತ್ರಿಸಬಹುದೇ ಹೊರತು ಒಂದೇ ವಿಷಯವನ್ನು ಅದರ ಚಿಂತನೆ ಮತ್ತು ಆಲೋಚನೆಯು ಒಬ್ಬ ವ್ಯಕ್ತಿ, ಒಂದು ಕಾಲ ಒಂದು ಘಟನೆಯನ್ನು ಚಿತ್ರಿಸಿ ಅದರ ಪ್ರದರ್ಶನವನ್ನು ಎಲ್ಲಾ ಘಟನೆಗಳು ಮತ್ತು ಎಲ್ಲ ಕಾಲ ಹಾಗೂ ವ್ಯಕ್ತಿಗಳಿಗೂ ಮೂಡಿಸುವುದಾಗಿರದೇ ವಿಷಯಗಳ ಸತ್ಯಾಸತ್ಯತೆಯನ್ನು ಬೆಳೆಸುವುದು ಇತಿಹಾಸದ ಪ್ರಮುಖ ಕರ್ತವ್ಯವಾಗುತ್ತದೆ. ಇತಿಹಾಸಕಾರನು ತನ್ನ ಬರವಣಿಗೆಯಲ್ಲಿ ಗತಕಾಲದ ಘಟನೆಗಳನ್ನು ಪುನಃ ಅಸ್ತಿತ್ವಕ್ಕೆ ತರಲು ಎಷ್ಟೇ ಪ್ರಯತ್ನಿಸಿದರೂ ಅವುಗಳ ಮೂಲವನ್ನು ತಲುಪಲು ಸಾಧ್ಯವಾಗುವುದಿಲ್ಲ.

ಇತಿಹಾಸವು ಗತಕಾಲದ ಅನುಭವ. ಗತಕಾಲಕ್ಕೆ ಸಂಬಂಧಿಸಿದ ಚಟುವಟಿಕೆಗಳು ಎಲ್ಲಿ ಹೇಗೆ, ಮತ್ತು ಏಕೆ ಸಂಭವಿಸಿದವು ಹಾಗೂ ಅವುಗಳು ಯಾವ ರೀತಿಯ ಪರಿಣಾಮಗಳನ್ನು ಹಿಂದೆ ಬೀರಿದವು ಎಂಬುದನ್ನು ಇತಿಹಾಸವು ವಿಶ್ಲೇಷಿಸಿ ಪರಿಶೀಲಿಸುತ್ತದೆ. ಇತಿಹಾಸವು ಒಂದು ಘಟನೆಗಳನ್ನು ಪ್ರತಿಬಿಂಬಿಸುವುದಾಗಿದೆ. ಐತಿಹಾಸಿಕ ಘಟನೆಗಳು ಗತಕಾಲದ ಘಟನೆಗಳು, ಇಟಲಿಯ ಇತಿಹಾಸಕಾರ ಹಾಗೂ ದಾರ್ಶನಿಕರಾದ ***ಬೆನೆಡಿಟ್ಟೋ ಕ್ರೋಚೆ*** ಅವರು ಇತಿಹಾಸದಲ್ಲಿ ವರ್ತಮಾನ ವಿಷಯಗಳು ಎಂಬ ತತ್ವವನ್ನು ಪ್ರತಿಪಾದಿಸಿದ್ದಾರೆ. ಇವರ ಪ್ರಕಾರ ಎಲ್ಲಾ ಇತಿಹಾಸವೂ ವರ್ತಮಾನ ಕಾಲದ್ದಾಗಿದೆ.

ಇತಿಹಾಸದ ವಸ್ತುವಿಷಯಗಳು ಹಲವು ಮತ್ತು ಹಲವಾರು ಕಾಲಗಳದ್ದಾಗಿದೆ. ಇತಿಹಾಸದ ಘಟನೆಗಳು ಪ್ರಮುಖವಾದವುಗಳು ಹಾಗೂ ವರ್ಗೀಕರಣವಾಗದೇ ಇರುವಂಥವುಗಳು. ಇತಿಹಾಸವು ಸಮಾಜದ ಕ್ರಿಯೆಗಳು, ಘಟನೆಗಳ ವಿವರಣೆಗಳು ಮತ್ತು ಮಾನವನ ಚಿಂತನೆಗಳನ್ನು ರೂಪಿಸುತ್ತದೆಯೇ ಹೊರತು ವಿಜ್ಞಾನದ ವಿಷಯಗಳು ತಿಳಿಸುವ ಸತ್ತ ವಿಷಯಗಳು ಮತ್ತು ಜಡ ವಸ್ತುಗಳ ನಿರೂಪಣೆಯಲ್ಲ. ಇತಿಹಾಸದ ಘಟನೆಗಳು ಸಂಪದ್ಭರಿತವೂ ಮತ್ತು ಹಲವಾರು ವಿಷಯಗಳನ್ನು ಒಳಗೊಂಡಿರುತ್ತವೆ. ***ಓಕ್‌ಷೋಟ್***ರವರು ಹೇಳುವಂತೆ ಇತಿಹಾಸವು ಒಂದು ಜಾಗತಿಕ ಆದರ್ಶಗಳ ರೂಪ. ಇವುಗಳನ್ನು ನಿರ್ಮಾಣವೂ, ಹೊರತರುವ ಕಾರ್ಯವು ಇತಿಹಾಸದ ವಸ್ತು ವಿಷಯವಾಗಿದೆ. ಇತಿಹಾಸದಲ್ಲಿ ಗತಿಸಿದ ಘಟನೆಗಳು ತಿಳಿದರೆ ಪ್ರಾಪಂಚಿಕ ಅನುಭವವಾದಂತಾಗುತ್ತದೆ. ಅದೇ ತಿಳಿಯದಿದ್ದರೆ ಇದೊಂದು ವ್ಯರ್ಥ ಪ್ರಯತ್ನವಾಗುತ್ತದೆ. ಇತಿಹಾಸವು ಪ್ರಮುಖವಾಗಿ ಮಾನವನ ಸಮಾಜದ ಚಟುವಟಿಕೆಗಳನ್ನು ಅಧ್ಯಯನ ಮಾಡುವುದರಿಂದ ಇದನ್ನು ಅಧ್ಯಯನ ಮಾಡಲು ಎಷ್ಟೊಂದು ಯೋಜನೆಗಳನ್ನು ರೂಪಿಸಬೇಕೆಂಬುದು ಬಹಳ ಪ್ರಮುಖವಾದ ವಿಷಯವಾಗಿದೆ. ಆದುದರಿಂದ ಇತಿಹಾಸದ ವಸ್ತು ವಿಷಯವು ಬಹಳಷ್ಟು ಪ್ರಾಮುಖ್ಯತೆಯನ್ನು ಪಡೆದಿದೆಯೆಂದರೆ ತಪ್ಪಾಗಲಾರದು.

## 2.3 ಇತಿಹಾಸದ ವಿಧಗಳು

ಇತಿಹಾಸವು ಒಂದು ಸಮಗ್ರ ಅಧ್ಯಯನಶೀಲ ವಿಷಯವಾಗಿದ್ದು ಹಲವು ವಿಷಯಗಳನ್ನು ನಮಗೆ ಇದು ಪರಿಚಯಿಸುತ್ತದೆ. ಉದಾಹರಣೆಗೆ, ರಾಜಕೀಯ ಇತಿಹಾಸ, ಸಂವಿಧಾನದ ಇತಿಹಾಸ, ಕಾನೂನು ಅಧ್ಯಯನದ ಇತಿಹಾಸ, ರಾಯಭಾರದ ಅಥವಾ ವಿದೇಶಾಂಗ ವ್ಯವಹಾರದ ಇತಿಹಾಸ, ಸೈನಿಕ ಕ್ಷೇತ್ರದ ಇತಿಹಾಸ, ಆರ್ಥಿಕ ಇತಿಹಾಸ, ಸಾಮಾಜಿಕ ಇತಿಹಾಸ, ಪ್ರಜ್ಞಾಶೀಲ ಅಥವಾ ಬೌದ್ಧಿಕ ವಿಷಯಗಳ ಇತಿಹಾಸ ಮುಂತಾದವುಗಳನ್ನು ಇತಿಹಾಸವು ಹಲವು ವಿಭಾಗಗಳಾಗಿ ಸಮಗ್ರತೆಯನ್ನು ಕಾಪಾಡಿಕೊಂಡು ಅಧ್ಯಯನ ಮಾಡುತ್ತದೆ.

### 2.3.1 ರಾಜಕೀಯ ಇತಿಹಾಸ

ಇತಿಹಾಸದ ಕ್ಷೇತ್ರದಲ್ಲಿ ರಾಜಕೀಯ ಇತಿಹಾಸವು ಒಂದು ಪ್ರಮುಖ ಭಾಗವನ್ನು ಪಡೆದಿದೆಯೆಂದು ಹೇಳಬಹುದು. ಏಕೆಂದರೆ ರಾಜಕೀಯ ಸಮಾಜದ ಮಾನವ ಜೀವಿಗಳ ಕ್ರಿಯೆಗಳಾದ ಹಲವು ಬದಲಾವಣೆಗಳು ಅಂದರೆ, ಬೌದ್ಧಿಕವಾಗಿ, ವೇಗವಾಗಿ ಹಾಗೂ ಸಮರ್ಥಿತ ಬದಲಾವಣೆಗಳನ್ನು ತಂದು ಅದಕ್ಕೊಂದು ರೂಪಕೊಡುವ ಕಾರ್ಯವನ್ನು ರಾಜಕೀಯ ಕ್ಷೇತ್ರ ಮಾಡುತ್ತಿದೆ. ಇದರ ಘಟನೆಗಳು ಇತಿಹಾಸದ ವಿಷಯಗಳಾಗಿವೆಯೆನ್ನಬಹುದು. ರಾಜಕೀಯವು ಯಾವುದೇ ಕಾಲದಲ್ಲಿ ಅಂದಿನ ಸಂವಿಧಾನ, ಕಾನೂನು ಸುವ್ಯವಸ್ಥೆ, ವಿದೇಶಾಂಗ ವ್ಯವಹಾರ, ಸೈನಿಕ ಕ್ಷೇತ್ರ, ಆರ್ಥಿಕ, ಸಾಮಾಜಿಕ ಸಮಸ್ಯೆಗಳನ್ನು ತಿಳಿದುಕೊಂಡು ಅವುಗಳಿಗೆ ಒಂದು ಸ್ವರೂಪವನ್ನು ಕೊಡುವ ಕಾರ್ಯವನ್ನು ಮಾಡುತ್ತದೆ. ಆದುದರಿಂದ ಇತಿಹಾಸದಲ್ಲಿ ರಾಜಕೀಯ ಇತಿಹಾಸವು ಒಂದು ಪ್ರಮುಖ ಹಾಗೂ ಜನಾನುರಾಗಿ ಇತಿಹಾಸದ ಒಂದು ಅಂಗವಾಗಿದೆಯೆನ್ನಬಹುದು. ಇಂಗ್ಲೀಷ್ ಇತಿಹಾಸಜ್ಞರ ಚಿಂತನೆಯ ಒಂದು ಗುಂಪು ಯಾವ ಘಟ್ಟಕ್ಕೆ ಹೋದರೆಂದರೆ ಎಲ್ಲಾ ಇತಿಹಾಸವೂ ರಾಜಕೀಯ ಇತಿಹಾಸವಾಗಿದೆ. ಅಲ್ಲದೇ "ಇತಿಹಾಸವು ಬೇರು ರಾಜ್ಯಶಾಸ್ತ್ರ ಫಲ (ಹಣ್ಣು) ಆಗಿದೆ ಮತ್ತು ಗತ ಕಾಲದ ಇತಿಹಾಸವು ಇಂದಿನ ಇತಿಹಾಸವಾಗಿದೆ. ಇತಿಹಾಸದ ಆದಿಕಾಲದಿಂದ ಇಂದಿಗೂ ಸಹ ಇರುವ ಇತಿಹಾಸದ ಹಂತಗಳಲ್ಲಿ ಎಲ್ಲಾ ಕಾಲದಲ್ಲೂ ರಾಜಪ್ರಭುತ್ವ ಅಥವಾ ಶ್ರೀಮಂತ ಪ್ರಭುತ್ವ ಯಾವುದೇ ಪ್ರಭುತ್ವವಾದರೂ ಸಹ ಹೆಚ್ಚಿನ ಅಧಿಕಾರವನ್ನು ಹೊಂದಿದ್ದು ಮಾನವ ಜೀವನದಲ್ಲಿ ತನ್ನದೇ ಆದ ಪ್ರಭಾವವನ್ನು ಹೊಂದಿರುವುದು ತಿಳಿದು ಬರುತ್ತದೆ. ಎಲ್ಲಾ ಕಾಲದಲ್ಲಿಯೂ, ಎಲ್ಲಾ ಕಡೆಯಲ್ಲಿಯೂ, ಹಾಗೂ ಎಲ್ಲಾ ದೇಶಗಳಲ್ಲಿಯೂ ಯಾರಾದರೂ ಒಬ್ಬರು ಅಥವಾ ಕೆಲವೇ ಜನರು ಬಹುಮಂದಿಯನ್ನು ಆಳಿದರೆಂಬುದು ಇತಿಹಾಸದಲ್ಲಿ ಕಂಡು ಬಂದಿದೆ. ಇತಿಹಾಸವು ಪ್ರಮುಖ ಘಟನೆಗಳ ಗುಂಪನ್ನು ಗುರುತಿಸುತ್ತಿದ್ದು ಇದರಲ್ಲಿ ಒಂದು ಉದಾಹರಣೆಯನ್ನು ನೋಡಬಹುದು. ಅದೇಂದರೆ, ಕುರಿ ಕಾಯುವವನನ್ನು ನಾವು ಗುರುತಿಸುತ್ತೇವೆಯೇ ಹೊರತು, ಕುರಿಗಳ ಗುಂಪು ಏನೇ ಕಾರ್ಯ ಮಾಡಿದರು ನಾವು ಗುರುತಿಸುವುದಿಲ್ಲ. ಅದರಿಂದಲೇ ರಾಜನನ್ನು ಆತನ ಪ್ರಜೆಗಳನ್ನು ನೋಡಿಕೊಳ್ಳುವ ಕುರುಬನನ್ನಾಗಿ ಕಾಣುತ್ತೇವೆ. ಆಧುನಿಕ ಕಾಲದ ರಾಷ್ಟ್ರಪತಿ, ಪ್ರಧಾನ ಮಂತ್ರಿ, ಪಾರ್ಲಿಮೆಂಟ್, ಸೆನೆಟ್ ಮತ್ತು ಇತರೇ ರಾಜಕೀಯ ಸಂಸ್ಥೆಗಳು ಇತಿಹಾಸವನ್ನು ಸೃಷ್ಟಿಸುತ್ತವೆ. ಎಲ್ಲಾ ಸಮಾಜಗಳೂ ಸಹ ಜನರನ್ನು ರಕ್ಷಿಸುವ ಕಾರ್ಯದಲ್ಲಿ ಗಣ್ಯರು ಅಥವಾ ಮೇಲ್ವರ್ಗದವರನ್ನು ಬೆಂಬಲಿಸುವವು. ಇದಲ್ಲದೇ ಅಧಿಕಾರವನ್ನು ಮಹಾನ್ ವ್ಯಕ್ತಿಗಳು, ನಾಯಕರು, ಇತರರ ನಾಯಕತ್ವವನ್ನು ವಹಿಸುವರು. ಇತಿಹಾಸದ ಆಕರಗಳಲ್ಲಿ ಬಹುಪಾಲು ರಾಜಕೀಯ ವಿಷಯಗಳಿಗೆ ಸಂಬಂಧಪಟ್ಟವಾಗಿವೆ. ರಾಜಕೀಯ ಇತಿಹಾಸವು ಇತಿಹಾಸ ಅಧ್ಯಯನದ ಪ್ರಮುಖ ವಾಹಿನಿಯಾಗಿದ್ದು ಇದರ ಅಧ್ಯಯನ ಇತಿಹಾಸದಲ್ಲಿ ಸಿಂಹ ಪಾಲು ಪಡಿದಿದೆಯೆನ್ನಬಹುದು.

### 2.3.2 ಸಂವಿಧಾನದ ಇತಿಹಾಸ

ಸಂವಿಧಾನದ ಇತಿಹಾಸವು ಯಾವುದೇ ಕಾಲದ ರಾಜ್ಯ ವ್ಯವಸ್ಥೆಯನ್ನು ತಿಳಿದುಕೊಳ್ಳುವುದರಲ್ಲಿ ಸಹಕರಿಸುತ್ತದೆ. ರಾಜಕೀಯ ಸಂಸ್ಥೆಗಳ ಅಭಿವೃದ್ಧಿ, ಕಾನೂನು ಮತ್ತು ನಿಯಮಗಳು, ಹಕ್ಕುಗಳು ಮತ್ತು ಭಾದ್ಯತೆಗಳು, ಕಾನೂನು ಮತ್ತು ನ್ಯಾಯದ ನಿಯಮಗಳು, ಕಾರ್ಯಾಂಗ, ಶಾಸಕಾಂಗ ಮತ್ತು ಆಡಳಿತದ ಕಾರ್ಯಗಳು, ಆರ್ಥಿಕ ಮತ್ತು ಹಣಕಾಸಿನ ಕಾರ್ಯಗಳು, ಅಧಿಕಾರಷಾಹಿಯ ಸ್ವರೂಪ ರಾಜ್ಯದ ನೀತಿಯ ಪ್ರಮುಖ ಹಕ್ಕುಗಳು, ಇವೆಲ್ಲವುಗಳನ್ನು ಸಹ ಸಂವಿಧಾನದ ಇತಿಹಾಸದಲ್ಲಿ ವಿವರಿಸಲಾಗಿದೆ. ಕೆಲವು ದೇಶಗಳು ಲಿಖಿತ ಸಂವಿಧಾನಗಳನ್ನು ಹೊಂದಿದ್ದು ಅವು ಕಠಿಣವಾಗಿದ್ದು ಮತ್ತೆ ಕೆಲವು ದೇಶಗಳು ಅಲಿಖಿತ ಸಂವಿಧಾನಗಳನ್ನು ಹೊಂದಿದ್ದು ಅದರಲ್ಲೂ ಇಂಗ್ಲೆಂಡಿನ ಸಂವಿಧಾನ ಮುಂತಾದವು ಮೃದುವಾದ ಮತ್ತು ಬದಲಾವಣೆಗೆ ಒಳಪಡುವ ಸಂವಿಧಾನಗಳನ್ನು ಹೊಂದಿರುವುದನ್ನು ಕಾಣುತ್ತೇವೆ. ಸಂವಿಧಾನದ ತತ್ವಗಳ ವಿಕಾಸವಾದದ ಇತಿಹಾಸವೇ ಇತಿಹಾಸದ ವಸ್ತು ವಿಷಯವಾಗಿದೆಯೆಂದರೆ ತಪ್ಪಾಗಲಾರದು. ಈ ತರಹದ ಇತಿಹಾಸ ವ್ಯಕ್ತಿ ಸ್ವರೂಪವಲ್ಲದ ಇತಿಹಾಸವಾಗಿದ್ದು ಇದೇ ಸಂಸ್ಥೆಗಳ ಇತಿಹಾಸ ಒಂದು ವಿಷಯವಾಗಿದೆ.

### 2.3.3 ನ್ಯಾಯ ಶಾಸ್ತ್ರದ ಇತಿಹಾಸ

ಇತ್ತೀಚಿನ ದಿನಗಳಲ್ಲಿ ನ್ಯಾಯಶಾಸ್ತ್ರದ ಇತಿಹಾಸವು ಪ್ರಾಮುಖ್ಯತೆಯನ್ನು ಪಡೆಯುತ್ತಿದೆ. ಈ ರೀತಿಯ ನ್ಯಾಯಶಾಸ್ತ್ರದ ಇತಿಹಾಸವು ಎಲ್ಲಿ ಕಾನೂನಿನ ಆಡಳಿತವು ಜೀವನದ ದಾರಿಯಾಗಿರುತ್ತದೋ ಅಲ್ಲಿ ಇದು ಪ್ರಮುಖವಾಗಿರುತ್ತದೆ. ಮನುವಿನ ಧರ್ಮಶಾಸ್ತ್ರ, ಹಮ್ಮೂರಾಬಿಯ ಸಂಹಿತೆ, ಜಸ್ಟಿನಿಯನ್ ಸಂಹಿತೆ, ನೆಪೋಲಿಯನಿಕ್ ಸಂಹಿತೆ, ಮೆಕಾಲೆಯ ಭಾರತ ಪೀನಲ್ ಕೋಡ್, ಹೋಲ್ಡ್‌ವರ್ತನ ಇಂಗ್ಲೀಷ್ ಕಾನೂನಿನ ಇತಿಹಾಸ, ಬ್ಲಾಕ್‌ಸ್ಟೋನ್‌ರವರ ಇಂಗ್ಲೆಂಡಿನ ಕಾನೂನಿನ ಮೇಲಿನ ಟೀಕೆಗಳು, ಮತ್ತು ನ್ಯಾಯಶಾಸ್ತ್ರದ ಇತಿಹಾಸದ ವಿಭಾಗಗಳಲ್ಲಿ ಪ್ರಮುಖ ಗ್ರಂಥಗಳಾಗಿವೆಯೆಂದು ಹೇಳಬಹುದು.

### 2.3.4 ರಾಯಭಾರ ವ್ಯವಸ್ಥೆಯ ಇತಿಹಾಸ

ರಾಜಕೀಯ ಇತಿಹಾಸದಲ್ಲಿ ರಾಯಭಾರ ವ್ಯವಸ್ಥೆಯ ಇತಿಹಾಸವು ಒಂದು ಪ್ರಮುಖ ವಿಶೇಷ ಶಾಖೆಯಾಗಿದೆ. ಈ ಶಾಖೆಯು ಅಂತರಾಷ್ಟ್ರೀಯ ಸಂಬಂಧಗಳ ತತ್ವಗಳನ್ನು ಅಧ್ಯಯನ ಮಾಡುವುದಾಗಿದೆ. ರಾಯಭಾರಿಗಳು ದೇಶ-ವಿದೇಶಗಳ ನಡುವಿನ ಕೊಂಡಿಗಳಾಗಿ ಕೆಲಸ ನಿರ್ವಹಿಸುತ್ತಾರೆ ಮತ್ತು ಅವರು ರಾಯಭಾರ ವ್ಯವಸ್ಥೆಯ ಮತ್ತು ಅವ್ಯವಸ್ಥೆಯನ್ನು ರಕ್ಷಿಸುವ ಕಾರ್ಯವನ್ನು ನಿರ್ವಹಿಸುವರು. ಈ ಶಾಖೆಯಲ್ಲಿ ರಾಯಭಾರಿಗಳು, ಸಮತೋಲನ ಅಧಿಕಾರ, ಶೀತಲಯುದ್ಧ, ಶಾಂತಿ ಒಪ್ಪಂದ ಮುಂತಾದುವನ್ನು ಒಳಗೊಂಡಿದ್ದು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿದೆಯೆನ್ನಬಹುದು.

### 2.3.5 ಮಿಲಿಟರಿ ಇತಿಹಾಸ

ಮಿಲಿಟರಿ ಇತಿಹಾಸದ ಅಧ್ಯಯನವು ರಾಜಕೀಯ ಇತಿಹಾಸದ ಪ್ರಮುಖ ಅಧ್ಯಾಯವಾಗಿದ್ದು ಈ ವಿಭಾಗದಲ್ಲಿ ಯುದ್ಧಗಳು, ಕದನಗಳು, ದಿಗ್ವಿಜಯಗಳು ಮುಂತಾದವುಗಳು ಪ್ರಾಮುಖ್ಯತೆಯನ್ನು ಪಡೆದಿವೆ. ಇದಲ್ಲದೇ ಇದರಲ್ಲಿ ಯುದ್ಧಗಳ ಕಾರಣಗಳು, ಯುದ್ಧಗಳ ತಂತ್ರಗಳು ಯುದ್ಧಗಳ ಶಸ್ತ್ರಾಸ್ತ್ರಗಳು, ಹೋರಾಟದ ಯಂತ್ರಗಳು, ವಿಭಾಗಗಳು ಮುಂತಾದ ವಿಷಯಗಳನ್ನು ತಿಳಿಯುತ್ತೇವೆ. ಥ್ಯುಸಿಡೈಡಸ್ ಬರೆದ ಪೆಲೊಫೊನ್ನೀಷಿಯನ್ ಯುದ್ಧ, ಕ್ಲಾರೆಂಡನ್‌ರ ಮಹಾ ದಂಗೆ ಅಮೇರಿಕಾದ ಅಂತರ್ಯುದ್ಧದ ಮೇಲಿನ ಅನೇಕ ಐತಿಹಾಸಿಕ ಗ್ರಂಥಗಳು, ಭಾರತದ ಸೇನಾ ದಂಗೆ (1857) ಪ್ರಥಮ ಮಹಾಯುದ್ಧ, ದ್ವಿತೀಯ ಮಹಾಯುದ್ಧ, ಇವುಗಳು ಐತಿಹಾಸಿಕ ಬರವಣಿಗೆಗೆ ಸೇರ್ಪಡೆಯಾಗಿವೆ. ಯುದ್ಧಗಳು ಮಾನವನ ಜೀವನದಲ್ಲಿ ಒಂದು ಮನೋವೈಜ್ಞಾನಿಕ ಅಂಶವಾಗಿದ್ದು ಈ ಯುದ್ಧಗಳಿಂದ ಯಾವುದೇ ಕಾಲವೂ ಅಥವಾ ಯಾವುದೇ ದೇಶವೂ ಹೊರತಾಗಿಲ್ಲ. ಮಿಲಿಟರಿ ಇತಿಹಾಸವು ರಾಜಕೀಯ ಇತಿಹಾಸದಷ್ಟೇ ಪ್ರಾಮುಖ್ಯವಾಗಿದೆಯೆಂದು ಹೇಳಬಹುದು.

### 2.3.6 ಆರ್ಥಿಕ ಇತಿಹಾಸ

ಇತ್ತೀಚಿನ ವರ್ಷಗಳಲ್ಲಿ ಆರ್ಥಿಕ ವಿಷಯಗಳನ್ನು ಅಧ್ಯಯನ ಮಾಡುವ ಆರ್ಥಿಕ ಇತಿಹಾಸವು ಬಹಳಷ್ಟು ಜನಪ್ರಿಯವಾಗಿದೆ. ವಿದ್ವಾಂಸರಾದ ಬಕ್ಕಲ್, ಕಾಮ್ಟೆ ಮತ್ತು ಮಾರ್ಕ್ಸ್‌ರವರ ಕಾಲದಿಂದಲೂ ಈ ಆರ್ಥಿಕ ಅಧ್ಯಯನವು ಪ್ರಾಮುಖ್ಯತೆಯನ್ನು ಪಡೆಯುತ್ತಿದೆಯೆನ್ನಬಹುದು. ಇತಿಹಾಸದ ಭೌತಿಕ ಇತಿಹಾಸವನ್ನು ಪ್ರತಿಪಾದನೆಯ ನಂತರ ಈ ಹೊಸ ಆರ್ಥಿಕ ಅಧ್ಯಯನದ ದೃಷ್ಟಿಕೋನವು ಬೆಳೆದು ಬಂದಿದೆಯೆನ್ನಬಹುದು. ಆರ್ಥಿಕ ಇತಿಹಾಸದಲ್ಲಿ ವರ್ಗಗಳ ಹೋರಾಟ, ಮನುಷ್ಯನು ತನ್ನ ದಿನನಿತ್ಯದ ಆಹಾರವನ್ನು ಸಂಪಾದಿಸುವ ಚಾತುರ್ಯ, ಸಾರಿಗೆ ಮತ್ತು ಸಂಪರ್ಕ ಸಾಧನಗಳು, ಅನುಭೋಗ, ವಿತರಣೆ ಮತ್ತು ಉತ್ಪಾದನೆ, ಕೃಷಿ, ಕೈಗಾರಿಕೆ, ವ್ಯಾಪಾರ ಮತ್ತು ವಾಣಿಜ್ಯ, ಭೂಕಂದಾಯ, ತೆರಿಗೆಯ ಲೆಕ್ಕಾಚಾರ ಮುಂತಾದವುಗಳನ್ನು ಇತಿಹಾಸಜ್ಞನು ಅಧ್ಯಯನದಲ್ಲಿ ಗಮನಿಸಬೇಕಾಗುತ್ತದೆ. ಡಾರ್ವಿನ್ನನ ಜೀವನಕ್ಕಾಗಿ ಹೋರಾಟವೆನ್ನುವ ನೀತಿಯನ್ನು ಪ್ರತಿಪಾದಿಸಿ ಇದು ಆರ್ಥಿಕ ಅವಲಂಬನವೆಂಬುದಾಗಿ ತಿಳಿಸಿರುವುದು ಮುಂತಾದ ವಿಷಯಗಳು ಆಧುನಿಕ ಇತಿಹಾಸಜ್ಞರ, ಆರ್ಥಿಕ ಇತಿಹಾಸಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡುತ್ತಿರುವುದಕ್ಕೆ ಸಾಕ್ಷಿಯಾಗಿವೆಯೆಂದು ಹೇಳಬಹುದು.

### 2.3.7 ಸಾಮಾಜಿಕ ಇತಿಹಾಸ

ಸಾಮಾಜಿಕ ಇತಿಹಾಸದಲ್ಲಿ ಮಾನವನ ಚಟುವಟಿಕೆಗಳಾದ ಧಾರ್ಮಿಕ ವಿಧಿ ಆಚರಣೆಗಳು, ನೈತಿಕತೆ, ಸಂಪ್ರದಾಯ, ಒಳ್ಳೆಯ ನಡವಳಿಕೆ, ಆಹಾರ, ವಸ್ತುಗಳು, ಕುಟುಂಬ ಜೀವನ, ಕಲೆ ಮತ್ತು ಸಾಹಿತ್ಯ ಮುಂತಾದವುಗಳ ಅಧ್ಯಯನವು ಹೆಚ್ಚು ಹೆಚ್ಚಾಗಿ ನಡೆಯುತ್ತಿದೆ. ಇಂಗ್ಲೆಂಡಿನ ಇತಿಹಾಸಕಾರರಾದ ಟ್ರಾವೆಲ್ಯಾನ್‌ರವರು ಸಾಮಾಜಿಕ ಇತಿಹಾಸದ ಬರವಣಿಗೆಯಲ್ಲಿ ಮಾಡಿ ಬರೆದಿರುವ 'Social History of England' ಎಂಬುದು ಸಾಮಾಜಿಕ ಇತಿಹಾಸದ ಅಧ್ಯಯನದ ಪ್ರಮುಖ ಉದಾಹರಣೆಯಾಗಿ ತೋರುತ್ತದೆ. ಅಲ್ಲದೇ ಈ ಸಾಮಾಜಿಕ ಇತಿಹಾಸವನ್ನು ಹೇಗೆ ಬರೆಯಬೇಕು ಎಂಬುದನ್ನು ಸಹ ಪ್ರತಿಬಿಂಬಿಸುತ್ತದೆ. ಸಾಮಾಜಿಕ ಇತಿಹಾಸವು ಮೂಲವಾಗಿ, ಸಾಮಾಜಿಕ ಸಂಸ್ಥೆಗಳ ಮೂಲ ಮತ್ತು ಅಭಿವೃದ್ಧಿಯಾಗಿರುವುದು ಕಂಡುಬರುತ್ತದೆ. ಈ ಸಾಮಾಜಿಕ ಇತಿಹಾಸವು ಮಾನವನು ಅನಾಗರೀಕತೆಯ ಕಾಲದಿಂದ ನಾಗರೀಕತೆಯನ್ನು ರೂಢಿಸಿಕೊಂಡು ಬಂದಿರುವ ಸಾಂಸ್ಕೃತಿಕ ವಿಷಯಗಳನ್ನು ಕುರಿತು ಅಧ್ಯಯನ ನಡೆಸುವುದಾಗಿದೆ. ಇದು ಹಿಂದಿನ ಕಾಲದ ಜನರ ದಿನನಿತ್ಯದ ಜೀವನವನ್ನು ಕುರಿತು ಅರಿಯುವುದಾಗಿದೆ. ಕುಟುಂಬದ ಲಕ್ಷಣಗಳು, ಮನೆಯ ಜೀವನ, ಶ್ರಮಿಕರ ಜೀವನಕ್ರಮ, ಪ್ರಕೃತಿಯ ಬಗ್ಗೆ ಮನುಷ್ಯನಿಗಿರುವ ಅಭಿಪ್ರಾಯ, ಎಲ್ಲಾ ಯುಗಗಳಲ್ಲಿದ್ದ ಸಾಂಸ್ಕೃತಿಕ ಲಕ್ಷಣಗಳು. ಇವುಗಳೆಲ್ಲವನ್ನು ಅಧ್ಯಯನ ನಡೆಸಿದ ನಂತರ ಇತಿಹಾಸಜ್ಞನು ಧರ್ಮ, ಸಾಹಿತ್ಯ, ಸಂಗೀತ, ಕಲೆ, ವಾಸ್ತುಶಿಲ್ಪ ಕಲಿಕೆ, ಶಿಕ್ಷಣ ಮತ್ತು ಚಿಂತನೆ ಮುಂತಾದ ವಿಷಯಗಳನ್ನು ಸರಿಯಾದ ಕ್ರಮದಲ್ಲಿ ಅಧ್ಯಯನ ಮಾಡುವುದು ಸಾಮಾಜಿಕ ಇತಿಹಾಸದ ವಿಷಯವಾಗಿದೆಯೆನ್ನಬಹುದು.

### 2.3.8 ಜಾಗತಿಕ ಇತಿಹಾಸ

ಜಾಗತಿಕ ಇತಿಹಾಸ ಅಥವಾ ಪ್ರಪಂಚದ ಇತಿಹಾಸವೆನ್ನುವುದು ಇತ್ತೀಚಿನ ವರ್ಷಗಳಲ್ಲಿ ಇತಿಹಾಸ ಬರವಣಿಗೆಯ ಬಗೆಯಲ್ಲಿ ಒಂದು ಪ್ರಮುಖ ಆಯಾಮವೆನ್ನಬಹುದು. ಹೆಚ್.ಜಿ. ವೆಲ್ಸ್‌ರವರ 'Outline of World History' ಎಂಬ ಕೃತಿಯಲ್ಲಿ ಜಾಗತಿಕ ಇತಿಹಾಸವನ್ನು ಹೇಗೆ ಬರೆಯಬೇಕು ಹಾಗೂ ಅದರಲ್ಲಿ ಯಾವ ವಿಷಯಗಳನ್ನು ಒಳಗೊಂಡಿರಬೇಕು ಎಂಬುದನ್ನು ಈ ಕೃತಿಯು ತಿಳಿಸುತ್ತದೆ. ಈ ರೀತಿಯ ಅಧ್ಯಯನದ ಸಾಹಸವನ್ನು ಬಕ್ಕಲ್‌ರವರು ತಮ್ಮ Civilization of England ಗ್ರಂಥವನ್ನು ಬರೆದು ಇನ್ನು ಹೆಚ್ಚಿನ ಇತಿಹಾಸದ ಅಧ್ಯಯನಕ್ಕೆ ದಾರಿಮಾಡಿ ಕೊಟ್ಟಿದ್ದಾರೆನ್ನಬಹುದು. ಈ ದಿಶೆಯಲ್ಲಿ ವಿಲ್‌ಡ್ಯುರಂಟೆರವರ 'Story of Civilization' ಸಂಪುಟಗಳು ಪ್ರಮುಖವಾಗಿ ಹೆಸರಿಸಲ್ಪಡುವುದಾಗಿದ್ದು ಇದೊಂದು ಬಹುಮುಖ್ಯ ಪ್ರಯತ್ನವೆಂದೇ ಹೇಳಬಹುದು. ಜಾಗತಿಕ ಸಂಸ್ಥೆಯಾದ UNESCO ಮಾನವನ ಸಂಸ್ಕೃತಿಯನ್ನು ಅಂದಾಜು ಮಾಡುವ ವಿಷಯವನ್ನು ಹಲವು ಸಂಪುಟಗಳಲ್ಲಿ ಹೊರತರದಿರುವುದು ಈ ವಿಷಯದ ಪ್ರಾಮುಖ್ಯತೆಗೆ ಸಾಕ್ಷಿಯಾಗಿದೆಯನ್ನಬಹುದು.

### 2.3.9 ವೈಚಾರಿಕ ಪ್ರಜ್ಞೆಯ ಇತಿಹಾಸ

ಮನುಷ್ಯನ ಇತಿಹಾಸವನ್ನು ಸರಿಯಾದ ಕ್ರಮದಲ್ಲಿ ಬರೆಯಲು ಮೂಲ ಆದರ್ಶಗಳು ಮತ್ತು ಆದರ್ಶಗಳನ್ನು ಹೆಚ್ಚಿನ ಪ್ರಾಮುಖ್ಯತೆಗಾಗಿ ಇಟ್ಟುಕೊಂಡು ಅಧ್ಯಯನ ನಡೆಸಿದ ವೈಚಾರಿಕ ಪ್ರಜ್ಞೆಯ ಇತಿಹಾಸವು ಹೆಚ್ಚಿನ ಅಧ್ಯಯನದ ವಿಭಾಗವಾಗಿದೆಯನ್ನಬಹುದು. ಬಹಳ ಹಿಂದಿನ ಕಾಲದಿಂದ ಇತ್ತೀಚಿನವರೆಗೂ ಆದರ್ಶಗಳು, ನಂಬಿಕೆಗಳು, ಅಭಿಮತಗಳು ಮುಂತಾದವುಗಳ ಬಗ್ಗೆ ವಿಚಾರಶೀಲ ವರ್ಗಗಳು ನೀಡಿರುವ ವಿವರಣೆಗಳ ವಿಮರ್ಶೆಯಾಗಿ ಈ ಬಗೆಯ ಇತಿಹಾಸವು ಕಾಣಿಸಿಕೊಳ್ಳುತ್ತದೆ. ಮಾನವನ ಮನಸ್ಸಿನ ಪ್ರಗತಿಯ ಅಧ್ಯಯನವು ಇನ್ನಾವುದೇ ರೀತಿಯ ಇತಿಹಾಸದ ವಿಭಾಗಕ್ಕಿಂತ ಹೆಚ್ಚಿನ ಉಪಯೋಗಕರವಾಗಿರುವುದನ್ನು ಡಾ. ಜಾನ್ಸನ್‌ರವರು ತಿಳಿಸುತ್ತಾರೆ. ವಿಮರ್ಶೆಯ ಅಭಿವೃದ್ಧಿ ವಿಜ್ಞಾನ, ಕಲೆ, ತತ್ವಶಾಸ್ತ್ರ ಮತ್ತು ಕಲಿಕೆ ಮುಂತಾದ ವಿಷಯಗಳು ಈ ವೈಚಾರಿಕ ಪ್ರಜ್ಞೆಯ ಇತಿಹಾಸದ ಬೋಧನಾಶೀಲ ಹಾಗೂ ಆಸಕ್ತಿಯುತ ಅಧ್ಯಯನವಾಗಿದೆಯೆಂಬುದು ಕಂಡು ಬರುತ್ತದೆ. ಈ ಹೆಚ್. ಬಾರ್ನೆಸ್‌ರವರು 'An Intellect and Cultural History of the Western World' ಎಂಬ ಗ್ರಂಥವನ್ನು ಬರೆದಿದ್ದು ಇದನ್ನು ಆದರ್ಶದ ವಿಷಯಗಳ ಅಧ್ಯಯನದ ಉದ್ಗ್ರಂಥವಾಗಿದೆ ಎಂದು ಕರೆಯಲಾಗಿದೆ. ಇತಿಹಾಸ ಬರವಣಿಗೆ ರಾಜಕೀಯ ಚಿಂತನೆಯ

ಇತಿಹಾಸ, ಆರ್ಥಿಕ ಚಿಂತನೆಯ ಇತಿಹಾಸ ಮತ್ತು ವೈಜ್ಞಾನಿಕ ಇತಿಹಾಸ ಮುಂತಾದ ಅಧ್ಯಯನ ವಿಭಾಗಗಳು ವೈಚಾರಿಕ ಪ್ರಜ್ಞೆಯ ಇತಿಹಾಸದ ವರ್ಗಕ್ಕೆ ಸೇರಿದೆಯೆನ್ನಬಹುದು. ಸ್ಪೆಂಗ್ಲರ್‌ರ 'The Decline of the West' ಟಾಯನ್ಬಿಯವರ 'Study of History' ಇವುಗಳನ್ನು ಇಲ್ಲಿ ಹೆಸರಿಸಬಹುದಾಗಿದೆ. ಷಿಸ್ಲರ್‌ರವರ ಅಭಿಪ್ರಾಯದಲ್ಲಿ ಮಾನವ ಇತಿಹಾಸದ ಅಧ್ಯಯನವೆಂದರೆ ಆದರ್ಶ ವಿಷಯಗಳ ಇತಿಹಾಸವೆಂಬುದು ಪ್ರಸ್ತುತ ಪ್ರಚಲಿತವಾಗಿದೆ. ಇವು ಕಾಲಿಂಗ್ ವುಡ್‌ರವರ ಪ್ರಕಾರ ಇತಿಹಾಸವೆನ್ನುವುದು ಮನುಷ್ಯರ ಆದರ್ಶಗಳ ಅಭಿವೃದ್ಧಿ ಎನ್ನುತ್ತಾರೆ. ಈ ವೈಚಾರಿಕ ಇತಿಹಾಸವು ಮಾನವ ಏನು ಹೇಳುತ್ತಾನೆ. ಏನನ್ನು ಚಿಂತಿಸುತ್ತಾನೆ ಮತ್ತು ಅವನ ಮನಸ್ಸಿನಲ್ಲಿ ಏನು ನಡೆಯುತ್ತಿದೆ ಎಂಬ ವಿಷಯಗಳ ಪರಿಶೀಲನೆಯೆನ್ನಬಹುದು. ಈ ವಿಚಾರಶೀಲ ಇತಿಹಾಸಜ್ಞನು ಚಿಂತನೆಗಳ ಪರಿಣಾಮಗಳು ಹಾಗೂ ಚಿಂತನೆಗಳು ಮಾನವನ ಘಟನೆಗಳ ಬಗ್ಗೆ ಅಧ್ಯಯನದ ವಿಷಯವನ್ನು ತೀರ್ಮಾನ ಮಾಡುವ ಪ್ರಯತ್ನವೂ ಆಗಿದೆಯೆನ್ನಬಹುದು. ಇವನು ಮೌಲ್ಯಿಕ ತೀರ್ಮಾನಗಳ ಸಮಸ್ಯೆಯನ್ನು ಒಳಗೊಂಡಿದ್ದು ಇವನ್ನು ಇಲ್ಲಿ ಆದರ್ಶಗಳು ಮತ್ತು ನಡವಳಿಕೆಗಳಲ್ಲಿ ವ್ಯತ್ಯಾಸವನ್ನು ಗ್ರಹಿಸುವುದನ್ನು ಕಾಣುತ್ತೇವೆ. ತತ್ವಶಾಸ್ತ್ರ, ಸಾಹಿತ್ಯ, ಧರ್ಮಗಳು, ವಿಜ್ಞಾನ ಮತ್ತು ಕಲೆಗಳ ವಿಷಯಗಳನ್ನೊಳಗೊಂಡ ಒಂದು ಸಾರಾಂಶ ಅಥವಾ ಸಂಯೋಜನೆಯೇ ವೈಚಾರಿಕ ಪ್ರಜ್ಞೆಯ ಇತಿಹಾಸವಾಗಿರದೇ ಆದರ್ಶಗಳ ಭೂಪಟವೆಂಬುದಾಗಿದ್ದು, ಸಮಾಜದಲ್ಲಿ ಈ ಆದರ್ಶಗಳು ಯಾವ ರೀತಿಯ ಪರಿಣಾಮಗಳನ್ನು ಬೀರಿದೆಯೆಂಬುದರ ಹುಡುಕುವುದು ಮತ್ತು ಅರ್ಥಮಾಡಿಕೊಳ್ಳುವುದಾಗಿದೆ. ಈ ವೈಚಾರಿಕ ಇತಿಹಾಸದ ಅಧ್ಯಯನವು ಯಾರು ವೈಚಾರಿಕ ಮತ್ತು ಸಾಂಸ್ಕೃತಿಕ ಸಾಧನೆ ಮಾಡಿದರು ಎಲ್ಲಿ ಯಾವಾಗ ಮತ್ತು ಹೇಗೆ ಸಾಧಿಸಿದರು ಎಂಬುದನ್ನು ಅಧ್ಯಯನ ಮಾಡುತ್ತದೆ. ಇನ್ನು ಮುಂದೆ ಸಾಗಿ ಸಂಸ್ಕೃತಿಯ ಬಗ್ಗೆ ಮಾನವನ ಜ್ಞಾನ, ತಿಳುವಳಿಕೆಯ ಭಂಡಾರವನ್ನು ತಿಳಿಸುವುದೇ ವೈಚಾರಿಕ ಇತಿಹಾಸವಾಗಿದೆ ಎಂದೂ ಸಹ ಕೆಲವರು ಅಭಿಪ್ರಾಯ ಪಡುತ್ತಾರೆ. ಇದಲ್ಲದೇ ಈ ವೈಚಾರಿಕ ಇತಿಹಾಸವು ಸೃಜನಶೀಲ ಚಿಂತನೆಗಳು ಮತ್ತು ಸೃಜನಶೀಲವಲ್ಲದ ಅಂಶಗಳ ಮೇಲೆ ಇವುಗಳ ವೈಚಾರಿಕತೆಯ ಪ್ರಭಾವವನ್ನು ವಿವರಿಸುತ್ತದೆ. ವೈಚಾರಿಕ ಇತಿಹಾಸಜ್ಞನು ಕೇವಲ ಕತೆಗಾರನಾಗಿರದೇ ಉತ್ತಮ ಚಿಂತಕನಾಗಿರಬೇಕಾಗುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ವೈಚಾರಿಕ ಇತಿಹಾಸವು ಇತಿಹಾಸಕಾರರ ಮತ್ತು ಸಾಮಾಜಿಕ ವಿಜ್ಞಾನಗಳ ಚಿಂತಕನ ನಡುವಿನ ಸೇತುವೆಯಾಗಬಲ್ಲ ಒಂದು ಒಳ್ಳೆಯ ಪ್ರಾಕಾರವಾಗುತ್ತದೆ. ವೈಚಾರಿಕ ಇತಿಹಾಸವು ಇಂಗ್ಲೆಂಡ್, ಫ್ರಾನ್ಸ್ ಮತ್ತು ಜರ್ಮನಿ ದೇಶಗಳು ಕೊಡಮಾಡಿದ ಬಕ್ಕಲ್, ಕಾಮ್ಟೆ, ಮಾರ್ಕ್ಸ್, ಹೆಗೆಲ್, ಕ್ರೋಚೆ, ಸ್ಪೆಂಗ್ಲರ್, ಟಾಯ್ನ್‌ಬಿ ಮುಂತಾದ ಇತಿಹಾಸಕಾರರ ಬರವಣಿಗೆಗಳಿಂದ ವೈಚಾರಿಕ ಇತಿಹಾಸವು ವೈಶಿಷ್ಟ್ಯತೆಯನ್ನು ಸಾಧಿಸಿಯೆನ್ನಬಹುದು. ಈ ವೈಚಾರಿಕ ಇತಿಹಾಸವು ಒಂದು ತತ್ವ ಅಥವಾ ಆದರ್ಶವನ್ನು ಒಳಗೊಂಡಿದೆ. ಚಿಂತನೆಯ ನಿವಾಸವಾಗಿರುವ ತತ್ವಶಾಸ್ತ್ರದ ತವರು ಮನೆಯಾಗಿರುವ ಮತ್ತು ಅತ್ಯುನ್ನತ ವೈಚಾರಿಕತೆಯ ತೊಟ್ಟಿಲೆನಿಸಿರುವ ಭಾರತವು ಒಬ್ಬನೇ ಒಬ್ಬ ತತ್ವಜ್ಞಾನಿ ವೈಚಾರಿಕ ಇತಿಹಾಸಕಾರನನ್ನು ಕೊಡದೇ ಇರುವುದು ಒಂದು ವಿಷಾದದ ಸಂಗತಿಯೆನ್ನಬಹುದು. ಯಾವುದೇ ಒಂದು ದೇಶಕ್ಕೆ ಒಳ್ಳೆಯ ಹೆಸರು ಬರಬೇಕಾದರೆ ಹಾಗೂ ಪ್ರಪಂಚದ ವೈಚಾರಿಕತೆಯಲ್ಲಿ ಸಾಧನೆ ಮಾಡಬೇಕಾದರೆ ಹಲವು ವಿಚಾರಗಳು, ಆದರ್ಶಗಳನ್ನು ರೂಡಿಸಿಕೊಂಡಿದ್ದು ಅವುಗಳನ್ನು ಕಾಪಾಡಿಕೊಳ್ಳುವುದಲ್ಲದೇ, ಅವುಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುವುದು ಬಹುಮುಖ್ಯವೆನಿಸುತ್ತದೆ. ಈ ವೈಚಾರಿಕ ಇತಿಹಾಸದ ಅಧ್ಯಯನದಿಂದ ಸಾಕ್ರೆಟಿಸ್‌ನ ಗುಂಪಿನ ಸೋಲೋಮನ್‌ನಂತಹ ವೈಚಾರಿಕ ವ್ಯಕ್ತಿಗಳ ಗುಂಪಿಗೆ ಯಾವುದೇ ಒಬ್ಬ ವ್ಯಕ್ತಿಯು ಸೇರ್ಪಡೆಯಾಗಲು ಅವಕಾಶವಿರುತ್ತದೆ.

## 2.4 ಘಟಕದ ಸಾರಾಂಶ

ಈ ಘಟಕದ ಅಧ್ಯಯನವನ್ನು ನಡೆಸಿದ ನಂತರ ನಾವುಗಳೆಲ್ಲರೂ ಈ ಕೆಳಕಂಡ ವಿಷಯಗಳನ್ನು ಅರಿತುಕೊಂಡಂತಾಗಿದೆ. ಅವುಗಳು;

* ಇತಿಹಾಸವೆಂದರೇನು? ಮತ್ತು ಇತಿಹಾಸದ ಅಧ್ಯಯನದ ವಸ್ತು ವಿಷಯವೇನು ಎಂಬುದನ್ನು ತಿಳಿದುಕೊಂಡೆವು.
* ಇತಿಹಾಸದ ವಿಧಗಳನ್ನೂ ಹಾಗೂ ಇದರ ಅಧ್ಯಯನದಿಂದ ಇತಿಹಾಸ ಅಧ್ಯಯನ ವಿವಿಧ ವಿಭಾಗ/ಕ್ಷೇತ್ರಗಳ ಪರಿಚಯ ಮಾಡಿಕೊಂಡೆವು.

* ಈ ಘಟಕದ ಅಧ್ಯಯನದಿಂದ ಹಲವು ವಿದ್ವಾಂಸರು ಇತಿಹಾಸ ಮತ್ತು ಅದರ ಬೆಳವಣಿಗೆ ಮತ್ತು ಭವಿಷ್ಯದ ಬಗ್ಗೆ ನೀಡಿರುವ ಹಲವಾರು ವ್ಯಾಖ್ಯೆಗಳು ಮತ್ತು ವಿವರಣೆಗಳನ್ನು ಸಹ ಅರಿತುಕೊಂಡೆವು.

## 2.5 ಸ್ವಯಂ ಪರಿಶೀಲನಾ ಪ್ರಶ್ನೆಗಳು

1. ಇತಿಹಾಸದ ವಸ್ತು-ವಿಷಯ ಕುರಿತು ಚರ್ಚಿಸಿ.
2. ಇತಿಹಾಸದ ವಿಧಗಳಾವುವು? ವಿವರಿಸಿ.

## 2.6 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. ಸುಬ್ರಹ್ಮಣ್ಯಂ ಎನ್. : Historiography
2. ಕಾಲಿಂಗ್ ವುಡ್ ಆರ್.ಜಿ. : The Idea of History
3. ಹ್ಯಾರಿಸನ್ : The Meaning of History
4. ಡಾ. ಎ. ವಿ. ವೆಂಕಟರತ್ನಂ ಮತ್ತು ಡಾ. ಎಂ.ಬಿ. ಪದ್ಮ : ಇತಿಹಾಸ ಸಂಶೋಧನಾ ಮಾರ್ಗ
5. ಗೋಪಾಲ ಬಾ.ರಾ. : ಇತಿಹಾಸಶಾಸ್ತ್ರ ಮತ್ತು ಸಿದ್ಧಾಂತ


*ಡಾ. ಎ. ಸೋಮಶೇಖರ್*

## ಘಟಕ - 3 ಇತಿಹಾಸದ ಉದ್ದೇಶಗಳು, ಗುರಿ ಮತ್ತು ಉಪಯೋಗಗಳು

*ವಿಷಯಾನುಕ್ರಮಣಿಕೆ*


3.0 ಉದ್ದೇಶಗಳು

3.1 ಪೀಠಿಕೆ

3.2 ಇತಿಹಾಸದ ಉದ್ದೇಶಗಳು(ಗುರಿಗಳು)

3.3 ಇತಿಹಾಸದ ಉಪಯೋಗಗಳು

3.4 ಘಟಕದ ಸಾರಾಂಶ

3.5 ಸ್ವಯಂ ಪರಿಶೀಲನಾ ಪ್ರಶ್ನೆಗಳು

3.6 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 3.0 ಉದ್ದೇಶಗಳು

ನಲ್ಮೆಯ ಕಲಿಕಾಂಕ್ಷಿ, ಇತಿಹಾಸ ಸಂಶೋಧನೆಯಲ್ಲಿ ಈ ಪ್ರಮುಖ ಘಟಕದ ಅಧ್ಯಯನವನ್ನು ನಡೆಸಿದ ನಂತರ ಈ ಕೆಳಕಂಡ ವಿಷಯಗಳನ್ನು ತಿಳಿಯುವಿರಿ.

* ಇತಿಹಾಸ ಅಧ್ಯಯನಕ್ಕೆ ಪೀಠಿಕೆಯನ್ನು ತಿಳಿಯುವಿರಿ.
* ಇತಿಹಾಸ ಅಧ್ಯಯನದ ಉದ್ದೇಶಗಳು ಅಥವಾ ಇತಿಹಾಸದ ಗುರಿಗಳನ್ನು ಕುರಿತು ಅಧ್ಯಯನ ಮಾಡುವಿರಿ. ಅಲ್ಲದೆ,
* ಇತಿಹಾಸದ ಉಪಯೋಗಗಳೇನು ಎಂಬುದರ ಬಗ್ಗೆಯೂ ಸಹ ವಿಚಾರ ಮಾಡುವಿರಿ.

## 3.1 ವಿಷಯದ ಪೀಠಿಕೆ

ಯಾವುದೇ ದೇಶದ ಪ್ರಜೆಯಾದರೂ, ಅವನಿಗೆ ಇತಿಹಾಸದ ಜ್ಞಾನವಿರಬೇಕಾದುದು ಅತ್ಯಗತ್ಯವೆನ್ನಿಸುತ್ತದೆ. ಏಕೆಂದರೆ ಅವನು ತನ್ನ ದೇಶದ ಇತಿಹಾಸದ ಘಟನೆಗಳನ್ನು ತಿಳಿಯಬೇಕಾದುದು ಅವನ ಆದ್ಯಕರ್ತವ್ಯವೆನಿಸುತ್ತದೆ. ಈ ಘಟನೆಗಳು ಇವನ ಮುಂದಿನ ಜೀವನ ಮತ್ತು ಕಾರ್ಯಗಳಿಗೆ ಮಾರ್ಗದರ್ಶನ ನೀಡುತ್ತದೆ ಎಂಬುದನ್ನು ಅರಿಯಬೇಕು. ಯಾವುದೇ ಒಬ್ಬ ವ್ಯಕ್ತಿ ತನ್ನ ದೇಶದ ಹಿಂದಿನ ಇತಿಹಾಸದ ಘಟನೆಗಳನ್ನು ಅಧ್ಯಯನ ಮಾಡುವ ಮುನ್ನ ಇತಿಹಾಸದ ಉದ್ದೇಶಗಳು ಅಥವಾ ಇತಿಹಾಸದ ಗುರಿಗಳೇನು ಎಂಬುದನ್ನು ಅಧ್ಯಯನ ಮಾಡಬೇಕು. ಇತಿಹಾಸವು ನಮಗೆ ಏನು ತಿಳಿಸುತ್ತದೆ ಮತ್ತು ಇತಿಹಾಸದಲ್ಲಿ ವಸ್ತು ನಿಷ್ಠತೆಯನ್ನು ಹೇಗೆ ಅಳವಡಿಸಿಕೊಂಡು ಅಧ್ಯಯನ ನಡೆಸಲಾಗುತ್ತದೆ ಎಂಬುದನ್ನು ತಿಳಿಯುವುದು ಅವಶ್ಯ. ಇದಲ್ಲದೇ ಮನುಷ್ಯನ ಇತಿಹಾಸಧ ಅಧ್ಯಯನದಿಂದಾಗುವ ಉಪಯೋಗಗಳನ್ನು ತಿಳಿದುಕೊಳ್ಳುವುದು ಅತ್ಯವಶ್ಯಕವಾಗಿ ಕಾಣುತ್ತಿದ್ದು ಇತಿಹಾಸವನ್ನು ಹಲವಾರು ಉದ್ದೇಶಗಳಿಗೆ ಮಾನವನನ್ನು ಬಳಸಿಕೊಳ್ಳಲು ಸನ್ನದ್ಧವಾಗಬಲ್ಲದು. ಇದರಿಂದಾಗಿ ಇತಿಹಾಸದಲ್ಲಿ ಉದ್ದೇಶ ಮತ್ತು ಉಪಯೋಗಗಳು ಒಂದಕ್ಕೊಂದು ಬೆರೆತು ಹೋಗಿವೆಯೆಂದು ಹೇಳಬಹುದು. ಆದುದರಿಂದ ಇತಿಹಾಸಧ ಉದ್ದೇಶಗಳು ಮತ್ತು ಇತಿಹಾಸದ ಉಪಯೋಗಗಳನ್ನು ಅಧ್ಯಯನ ಮಾಡುವುದು ಅತ್ಯಾವಶ್ಯಕವೆನ್ನಿಸಿದೆ.

## 3.2 ಇತಿಹಾಸದ ಉದ್ದೇಶಗಳು (ಅಥವಾ ಗುರಿಗಳು)

ಇತಿಹಾಸದ ಉದ್ದೇಶವು ಒಂದು ರೀತಿಯ ಒಳ್ಳೆಯ ಉಲ್ಲಾಸ, ಸಂತೋಷವನ್ನು ಉಂಟುಮಾಡುವ ಒಂದು ಕವಿತೆಯಂತೆ ಕಾಣುವಂತಿರಬೇಕು. ಇತಿಹಾಸವು ಒಂದು ಶ್ರೇಷ್ಠ ಅಧ್ಯಯನದ ವಿಷಯವಾಗಿದ್ದು ಇದರ ಅಧ್ಯಯನಕ್ಕೆ ಜಾಗತಿಕ ಬೇಡಿಕೆಯಿದೆಯೆಂದು ಹೇಳಬಹುದು. ಇತಿಹಾಸದ ಮುಖ್ಯ ಉದ್ದೇಶವೆಂದರೆ ಸತ್ಯ ಹೇಳುವುದು ಮತ್ತು ತರ್ಕಬದ್ಧವಾದ ವಿವರಣೆ ನೀಡುವುದೇ ಆಗಿದೆ. ಇತಿಹಾಸವು ಜೀವನದ ಅರ್ಥವನ್ನು ತಿಳಿಸುವ ಸಾಧನವಾಗಿದೆ. ಇತಿಹಾಸಕಾರನು ಹೇಗೆ ಮತ್ತು ಏಕೆ ಜೀವಿಸಿದ್ದೇವೆ ಮತ್ತು ನಾನು ಎಲ್ಲಿಂದ ಬಂದಿದ್ದೇನೆ? ಎಂಬ ಹಲವು ಪ್ರಶ್ನೆಗಳನ್ನು ಹಾಕಿಕೊಂಡು ಈ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕುತ್ತಾ ಇದ್ದಾಗ ಅವನಿಗೆ ಉತ್ತರಗಳ ಜೊತೆಗೆ, ತಾನು ನಿರ್ಮಿಸಿದ ಸಂಸ್ಥೆಗಳು, ಮಾಡಿದ ಯುದ್ಧ ಕದನಗಳು ತಾನು ಇತರರೊಡನೆ ಮಾಡಿಕೊಂಡ ಶಾಂತಿ ಒಪ್ಪಂದಗಳು, ಮುಂತಾದವುಗಳ ಬಗ್ಗೆ ಮಾಹಿತಿಗಳು ದೊರೆಯುತ್ತಿದ್ದು ತನ್ನ ಎಲ್ಲಾ ಪ್ರಶ್ನೆಗಳಿಗೆ ಇತಿಹಾಸದ ಸಂಶೋಧನೆಯಲ್ಲಿ ಉತ್ತರಗಳನ್ನು ಹುಡುಕಿ ತನ್ನ ಆಶೋತ್ತರಗಳನ್ನು ಈಡೇರಿಸಿಕೊಳ್ಳುವನು. ಮತ್ತೊಂದು ವಿಧದಲ್ಲಿ ಹೇಳಬೇಕೆಂದರೆ ಇತಿಹಾಸವು ಮನುಷ್ಯನನ್ನು ಬುದ್ಧಿವಂತನನ್ನಾಗಿಸುವ ಮಗತ್ವವಾದ ಗುಣವನ್ನು ಹೊಂದಿರುವುದು ಸ್ಪಷ್ಟವಾಗುತ್ತದೆ. ಜೀವನ ಮತ್ತು ಇತರೆ ವಿಷಯಗಳಲ್ಲಿ ಹೆಚ್ಚಿನ ಫಲವನ್ನು ಪಡೆಯಲು ಇತಿಹಾಸವು ಬಹಳಷ್ಟು ನೆರವಾಗುತ್ತದೆ.

ಇತಿಹಾಸವು ಸರಿ ತಪ್ಪುಗಳ ನಿಯಮಗಳನ್ನು ಹಲವು ಶತಮಾನಗಳಿಂದ ಹಾದು ಬಂದ ವಿಷಯವನ್ನು ತಿಳಿಸುತ್ತದೆ. ಇದು ಮಾನವ ಸಮಾಜದಲ್ಲಿ ನಡೆಯುವ ಆಡಳಿತದಲ್ಲಿ ಸತ್ಯ ಮತ್ತು ನ್ಯಾಯವನ್ನು ತರುವ ವಿಷಯದಲ್ಲಿ ಮಾನವನ ಹೋರಾಟವನ್ನು

ತಿಳಿಸುತ್ತದೆ. ಮಾನವನ ಜನಾಂಗದ ಏಳು ಬೀಳು ಪ್ರಪಂಚದ ವಿಚಾರಧಾರೆಗಳು,. ಜೀವನದ ನಾಟಕದ ಕಾರ್ಯಗಳು ಮತ್ತು ನಡವಳಿಕೆಗಳು ಮತ್ತು ಒಳ್ಳೆಯದು ಮತ್ತು ಕೆಟ್ಟದವುಗಳ ನಡುವಿನ ಹೋರಾಟವನ್ನು ಇತಿಹಾಸವು ಪ್ರತಿಪಾದಿಸುತ್ತದೆ. ಇತ್ತೀಚಿನ ಮನುಷ್ಯನು ನಿಸರ್ಗವನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡದ್ದು ಮತ್ತು ನಿಸರ್ಗದ ಬಗ್ಗೆ ಹೆಚ್ಚಿನ ಜ್ಞಾನವನ್ನು ಪಡೆದುಕೊಂಡಿದ್ದರೂ, ಅವನು ತನ್ನನ್ನು ತಾನೇ ನಿಯಂತ್ರಣ ಮಾಡಿಕೊಳ್ಳಲು ಮತ್ತು ಅಲ್ಲದೇ ಅವನ ಸ್ವಯಂ ಜ್ಞಾನವೂ ಸಹ ಸಾಲದಾಗಿದ್ದು, ಮಾನವನು ತನ್ನ ಸ್ವಂತ ಚಿಂತನೆಗಳು, ಆಶಯಗಳು, ಆಸೆಗಳು ಮತ್ತು ವಿಷಯಾಸಕ್ತಿಗಳನ್ನು ತನ್ನ ಹಿಡಿತದಲ್ಲಿ ಇಟ್ಟುಕೊಳ್ಳಲಾಗದಿದ್ದಾಗ ಇವನು ಚಂದ್ರ ಮತ್ತು ಮರಿಗಳ ಗ್ರಹಕ್ಕೆ ರಾಕೆಟ್‌ಗಳನ್ನು ಕಳುಹಿಸಿರುವನು. ಆದ್ದರಿಂದ ಮಾನವನ ತಪ್ಪುಗಳನ್ನು ತಿಳಿದುಕೊಂಡು ಮುಂದಿನ ಜೀವನದಲ್ಲಿ ಒಳ್ಳೆಯ ಜೀವನವನ್ನು ನಡೆಸಲು ಸಹಾಯಕವಾಗುವ ಕಾರ್ಯವನ್ನು ಇತಿಹಾಸ ಮಾಡುವುದು. ಈ ಕಾರ್ಯದಿಂದ ಇತಿಹಾಸವು ಒಳ್ಳೆಯ ಸಾಮಾಜಿಕ ಕಾರ್ಯವನ್ನು ಮಾಡುವುದರಲ್ಲಿ ಪರಿಪೂರ್ಣವಾದ ಕಾರ್ಯವನ್ನು ಮಾಡುವುದು.

ಇತಿಹಾಸಜ್ಞರಾದ ಪಾಲಿಬಿಯಸ್ ಮತ್ತು ಥ್ಯೂಸಿಡೈಡಸ್‌ರವರು ಇತಿಹಾಸದ ಉದ್ದೇಶವು ರಾಜಕೀಯ ಕಲೆಯನ್ನು ತಿಳಿಸುವ ವಿಷಯವಾಗಿದೆ. ನಿಸಿರೋ ಎಂಬ ರಾಜಕೀಯತಜ್ಞನು ಇತಿಹಾಸವನ್ನು ಒಂದು ಉತ್ತಮ ನ್ಯಾಯಾಧೀಶನೆಂದು ಕರೆದಿದ್ದಾನೆ. ಡಯೋನಿಸಿಯಸ್ ಎಂಬುವವನು "ಇತಿಹಾಸವು ಉದಾಹರಣೆ ಸಹಿತ ತತ್ವಶಾಸ್ತ್ರವನ್ನು ಬೋಧಿಸುವುದಾಗಿದೆ" ಎನ್ನುತ್ತಾನೆ. ಇದು ಒಳ್ಳೆಯ ಅನುರೂಪದ ರಾಜಕೀಯ ಧುರೀಣರನ್ನು ತನ್ನ ಅಧೀನದಲ್ಲಿ ಇಟ್ಟುಕೊಳ್ಳತ್ತಾದೆಯಲ್ಲದೇ ಇತಿಹಾಸವು ರಾಜಕೀಯ ಮತ್ತು ಸಾಮಾಜಿಕ ವಿಜ್ಞಾನಗಳಿಗೆ ಒಳ್ಳೆಯ ವಿಷಯಗಳನ್ನು ಒದಗಿಸುವುದಾಗಿದೆ.

ಯಾವುದೇ ಒಂದು ದೇಶವು ತನ್ನ ಇತಿಹಾಸವನ್ನು ಮರೆತರೆ ಆ ದೇಶಕ್ಕೆ ಯಾವುದೇ ಭವಿಷ್ಯವಿಲ್ಲ. ಇತಿಹಾಸವು ಮಾನವನ ಅನುಭವಗಳ ಕಣಜವಾಗಿದೆ. ಇತಿಹಾಸವು ಒಳ್ಳೆಯ ವಿಷಯಗಳನ್ನು ಅಳವಡಿಸಿಕೊಳ್ಳಲು ಆರಿಸಿಕೊಂಡು ನಕಾರಾತ್ಮಕ ಮತ್ತು ಕೆಟ್ಟ ಪರಿಣಾಮ ಬೀರುವ ವಿಷಯಗಳನ್ನು ತಿರಸ್ಕರಿಸುವ ಕಾರ್ಯವನ್ನು ಮಾಡುತ್ತದೆ. ಈ ನಮ್ಮ ಪ್ರಪಂಚವು ಒಂದು ವಿವೇಚನಾಶೀಲ ವ್ಯವಸ್ಥೆ. ಇತಿಹಾಸವು ವಿವೇಚನೆಯ ದಾಖಲೆಯನ್ನು ಮಾಡುವುದು ಮತ್ತು ಮಾನವನ ಪ್ರಮುಖ ಉದ್ದೇಶವೆಂದರೆ ಏಕತೆ ಮತ್ತು ಪ್ರಗತಿಯನ್ನು ಸಾಧಿಸುವುದಾಗಿದೆ. ರಾಜಕೀಯ ಗಡಿಗಳು ಮತ್ತು ಸೈನ್ಯದ ಗಡಿಯನ್ನು ಮಾನವನಿಂದ ದೂರ ಸರಿಸಿ ಪ್ರಾಪಂಚಿಕ ಐಕ್ಯತೆಯಿಂದ ದೂರ ನಿಲ್ಲಿಸುವ ಕಾರ್ಯವನ್ನು ಇತಿಹಾಸವು ಮಾಡುತ್ತದೆ. ಮಾನವನು ಎಲ್ಲಾ ಕಡೆಯಲ್ಲಿಯೂ ಅದೇ ಅವಶ್ಯಕತೆ ಚಿಂತನೆ, ಆದರ್ಶಗಳು, ಮೌಲ್ಯಗಳನ್ನು ಹೊಂದಿವೆ. ಪ್ರಪಂಚದ ಎಲ್ಲಾ ಕಡೆಗಳಲ್ಲಿಯೂ ಸಾಮಾಜಿಕ ವಿಷಯಗಳು ಒಂದೇ ರೀತಿಯದಾಗಿರುತ್ತವೆ. ಮಾನವನ ಸಾಮಾಜಿಕ ಜೀವನದ ಬೆಳವಣಿಗೆಯು ಮುಂದೆ ಒಂದು ಸಂಸ್ಕೃತಿಯಾಗಿ ಮಾರ್ಪಡುವುದಲ್ಲದೇ ಸಾಮಾನ್ಯ ಪ್ರವೃತ್ತಿ ಮತ್ತು ಆದರ್ಶಗಳನ್ನು ಪ್ರದರ್ಶಿಸುವ ಕಾರ್ಯವನ್ನು ಇತಿಹಾಸವು ಮಾಡುತ್ತದೆ. ಆದರೆ ಕೆಲವೇ ಸಣ್ಣ ಪುಟ್ಟ ಬದಲಾವಣೆಯನ್ನು ಬಿಟ್ಟರೆ ಎಲ್ಲಾ ವಿಷಯಗಳು ಮತ್ತು ಆದರ್ಶಗಳಲ್ಲೂ ಪ್ರಾಚೀನ ಕಾಲದ ಎಲ್ಲಾ ನಾಗರೀಕತೆಗಳಲ್ಲಿ ನಾವು ಅದೇ ರೀತಿಯ ಲಕ್ಷಣಗಳನ್ನು ಗುರುತಿಸುತ್ತೇವೆ. ಈ ರೀತಿಯ ಲಕ್ಷಣಗಳು ಪ್ರಾಚೀ ಸಂಸ್ಕೃತಿ ಮತ್ತು ನಾಗರೀಕತೆಯನ್ನು ಪ್ರದರ್ಶಿಸುತ್ತಿದ್ದು ಆಧುನಿಕ ಕಾಲದ ನಾಗರೀಕತೆಯು ಸಾರಿಗೆ ಮತ್ತು ಸಂಪರ್ಕಗಳ ಅಭಿವೃದ್ಧಿಯ ಶಾಂತಿಯಿಂದಾಗಿ ಪ್ರಪಂಚವು ಒಂದೇ ಘಟಕವನ್ನಾಗಿಸಿರುವುದು ಕಂಡು ಬರುತ್ತದೆ. ಹೀಗೆ ಇತಿಹಾಸವು ಮಾನವ ಮತ್ತು ದೇವರುಗಳು ಪ್ರಮುಖವಾಗಿ ಭಾಗವಹಿಸುವ ಒಂದು ವಿಕಸನದ ಕಾರ್ಯವಾಗಿದ್ದು ಪ್ರಪಂಚದಲ್ಲಿ ಮಾನವರೆಲ್ಲರೂ ಒಂದಾಗಿ ಏಕತೆಯನ್ನು ಸಾಧಿಸುವ ಉದ್ದೇಶವನ್ನು ಹೊಂದಿರಬೇಕೆಂಬುದನ್ನು ತಿಳಿಸುವುದು ಇದರ ಒಂದು ಮೂಲ ಉದ್ದೇಶವಾಗಿದೆ.

ಇತಿಹಾಸವು ಬಹುದೊಡ್ಡ ಸಾಹಸ ಮತ್ತು ಎಲ್ಲಾ ಬಗೆಯ ಪ್ರವಾಸಗಳು ನೀಡುವ ಉಲ್ಲಾಸ ಮತ್ತು ಮನೋರಂಜನೆಯ ಕಾರ್ಯವನ್ನು ನಮ್ಮ ಇತಿಹಾಸವು ಮಾಡುತ್ತದೆ. ಕೆಲವು ವೇಳೆ ಜಟಿಲವಾದ ಸಮಸ್ಯೆಗಳನ್ನು ನಿವಾರಿಸಲು ತನ್ನ ವೈಚಾರಿಕತೆಯ ಬುದ್ಧಿಶಕ್ತಿಯನ್ನು ಉಪಯೋಗಿಸಲು ಇತಿಹಾಸವು ಸಹಾಯ ಮಾಡುತ್ತದೆ. ಇತಿಹಾಸವು ಮನುಷ್ಯನನ್ನು ಶಿಕ್ಷಿತನನ್ನಾಗಿ ಮಾಡುವುದಲ್ಲದೇ ಅವನ ಮನಸ್ಸನ್ನು ತರಬೇತಿಗೊಳಿಸುವ ಕಾರ್ಯವನ್ನು ಸಹ ಮಾಡುತ್ತದೆ. ಬೇಕನ್ ಹೇಳಿರುವಂತೆ "ಇತಿಹಾಸವು ಮನುಷ್ಯರನ್ನು ಬುದ್ಧಿವಂತನನ್ನಾಗಿಸುತ್ತದೆ" ಎಂಬುದು ಎಷ್ಟು ಸತ್ಯವೆನಿಸುತ್ತದೆ. ನಾವುಗಳು ಯಾವುದೇ ಪದ್ಧತಿ ಅಥವಾ ಉದ್ದೇಶಗಳನ್ನು

ಈಡೇರಿಸಿಕೊಳ್ಳಬೇಕಾದರೆ ಅಥವಾ ಅಳವಡಿಸಿಕೊಳ್ಳಬೇಕಾದರೆ ಆ ಪದ್ಧತಿಯ ಅಥವಾ ಆದರ್ಶದ ಇತಿಹಾಸವನ್ನು ತಿಳಿದುಕೊಳ್ಳುವುದು ಸಾಮಾನ್ಯವಾಗಿ ಮಾಡದಂತಹ ಕಾರ್ಯವಾಗಿದೆ. ಸಂಗೀತಗಾರ ಅಥವಾ ಗಣಿತತಜ್ಞ, ಅಥವಾ ತತ್ವಜ್ಞಾನಿ ತಾನು ತನ್ನ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧಿಸಲು ಅಥವಾ ಅವುಗಳನ್ನು ಅರ್ಥಮಾಡಿಕೊಳ್ಳಲು ಹೊಸ ಆಯಾಮವನ್ನು ಬಳಸಿಕೊಳ್ಳಲು ಈ ಹಿಂದೆ ನಡೆದು ಬಂದಿರುವ ವಿಷಯಗಳ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಆಸ್ಪತ್ರೆಗಳಲ್ಲಿ ಕೂಡ ಡಾಕ್ಟರುಗಳು ತಿಳಿಸುವ ರೋಗದ ಲಕ್ಷಣಗಳು ಮತ್ತು ಅವುಗಳ ಲಕ್ಷಣಗಳ 'ಇತಿಹಾಸ' ಎಂಬುದನ್ನು ದೊಡ್ಡ ಅಕ್ಷರಗಳಲ್ಲಿ ಬರೆದಿರುತ್ತಾರೆ. ಎಲ್ಲಾ ಸಂಸ್ಕೃತಿಗಳು ಆ ಸಂಸ್ಕೃತಿಗಳ ಮೂಲಗಳ ಬಗ್ಗೆ ತಿಳಿಯುವ ಕಾರ್ಯ ಅಥವಾ ಐತಿಹಾಸಿಕ ಹಿನ್ನೆಲೆಯನ್ನು ತೋರಿಸುತ್ತದೆ. ಇದು ಯಾವುದೇ ನಾಗರೀಕತೆಗೂ ಅಂದರೆ ಚೀನಾ, ಕ್ರೈಸ್ತ, ಹಿಂದೂ ಸಂಸ್ಕೃತಿ ಎಲ್ಲಾದಕ್ಕೂ ಸಹ ಅನ್ವಯಿಸುತ್ತದೆಂದು ಹೇಳಬಹುದು. ಇದು ಎಲ್ಲಾ ಪ್ರಮುಖ ವ್ಯಕ್ತಿಗಳಿಗೂ ಅನ್ವಯಿಸುತ್ತದೆ. ಉದಾ. ಇಂಗ್ಲೆಂಡಿನ ಚರ್ಚಿಲ್, ನೆಹರು ಮುಂತಾದವರು ಒಳ್ಳೆಯ ಆಡಳಿತಗಾರರೆಂದು ಹೆಸರು ಪಡೆದಿರುವುದಕ್ಕೆ ಕಾರಣ ಅವರು ಮೂಲವಾಗಿ ಇತಿಹಾಸದ ವಿದ್ಯಾರ್ಥಿಗಳಾಗಿರುವುದು ಮುಖ್ಯ.

ಒಮ್ಮೆ ಪ್ರಪಂಚದಲ್ಲೆ ಒಬ್ಬ ಉತ್ತಮ ವೈಚಾರಿಕ ವಿದ್ವಾಂಸರೆನಿಸಿರುವ ಬರ್ಟ್ರಾಂಡ್ ರಸ್ಸೇಲ್‌ರವರನ್ನು ಇತಿಹಾಸದ ಅವಶ್ಯಕತೆಯ ಬಗ್ಗೆ ಪ್ರಶ್ನಿಸಿದಾಗ ಅವರು "ಇತಿಹಾಸವು ಬಹಳಷ್ಟು ಪ್ರಮುಖವಾದದ್ದು, ಏಕೆಂದರೆ ಇತಿಹಾಸವು ನಿಮ್ಮ ಚಿಂತನೆಗಳು ಮತ್ತು ನಿಮ್ಮ ಮನೋಭಿಲಾಷೆಗಳಿಗೆ ಒಂದು ರೀತಿಯ ಸುಭದ್ರತೆ ಮತ್ತು ಆಳವಾದ ರೂಪವನ್ನು ನೀಡುವ ಕಾರ್ಯವನ್ನು ಮಾಡುತ್ತದೆ" ಎಂದು ಹೇಳಿದ್ದಾರೆ. ಪ್ರಸ್ತುತವು ಮಗುವಿನ ಹಿಂದಿನ ಜೀವನದ ಘಟನೆಯ ಪ್ರತೀಕವಾಗಿದೆ. ನಮ್ಮ ಪ್ರಸ್ತುತ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸ್ಥಿತಿಗಳು ಕೆಲವಾರು ಪ್ರಮುಖ ಅಂಶಗಳ ಪರಿಣಾಮಗಳಾಗಿದ್ದು ಅವುಗಳನ್ನು ಮುಂದುವರೆಸಿಕೊಂಡು ಹೋಗುವ ಕಾರ್ಯವಾಗಿದೆ. ಕಾರಣ ಮತ್ತು ಪರಿಣಾಮಗಳ ಸರಪಳಿಯು ಹಿಂದಿನ ಘಟನೆಗಳ ಹಿನ್ನೆಲೆಯೆನಿಸಿದೆ. ನಾವು 20 ನೇ ಶತಮಾನದಲ್ಲಿದ್ದು ಹಿಂದಿನ ಮಹಾಪುರುಷರಾದ ರಿಪ್ಪನ್, ಡಾಲ್‌ಹೌಸಿ, ಶಿವಾಜಿ, ಅಕ್ಬರ್, ಬಾಬರ್, ಹರ್ಷ, ಸಮುದ್ರಗುಪ್ತ, ಅಶೋಕ, ಬುದ್ಧ, ವ್ಯಾಸ ಮುಂತಾದ ಹಿಂದಿನ ವ್ಯಕ್ತಿ ಪುರುಷರನ್ನು ಕಾಣುತ್ತಿದ್ದು ಅಂದರೆ ನಾವು ಇಂದಿನ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಹಿಂದಿನ ಘಟನೆ ಮತ್ತು ಹಿನ್ನೆಲೆಯನ್ನು ಅರಿಯಬೇಕಾಗುತ್ತದೆ.

ಮಕ್ಕಳಿಗೆ ಇತಿಹಾಸವನ್ನು ಕಲಿಸುವುದು ಅವರಲ್ಲಿ ಜ್ಞಾಪಕಶಕ್ತಿ, ಕಲ್ಪನಾಶಕ್ತಿ ಮತ್ತು ತರ್ಕದಶಕ್ತಿಯನ್ನು ಬೆಳೆಸುವ ಕಾರ್ಯವನ್ನು ಮಾಡುತ್ತದೆ. ಇತಿಹಾಸವು ಉದಾಹರಣೆಯೊಂದಿಗೆ ತತ್ವಶಾಸ್ತ್ರವನ್ನು ಬೋಧಿಸುವ ವಿಷಯವಾಗಿದ್ದು, ಇದು ನೈತಿಕ ಮೌಲ್ಯವನ್ನು ಹೊಂದಿದೆ. ಇತಿಹಾಸದ ಅಧ್ಯಯನವು ಯುವ ಜನಾಂಗದ ಮನಸ್ಸಿನಲ್ಲಿ ಸರಿ ಮತ್ತು ತಪ್ಪುಗಳ ನೈತಿಕ ಕಟ್ಟಳೆಗಳನ್ನು ಮೂಡಿಸುತ್ತದೆ. ಈ ಅಧ್ಯಯನವು ಯುವ ಜನತೆಯಲ್ಲಿ ರಾಷ್ಟ್ರಭಕ್ತಿಯನ್ನು ಬೆಳೆಸಿ ತಮ್ಮ ದೇಶದ ಹಿನ್ನೆಲೆಯ ಬಗ್ಗೆ ಮತ್ತು ಹಿಂದಿನ ವೈಭವದ ಬಗ್ಗೆ ಜ್ಞಾನವನ್ನು ಹೊಂದಿ ತನ್ನ ದೇಶದ ಬಗ್ಗೆ ಒಲವನ್ನು ಬೆಳೆಸಿಕೊಳ್ಳುವಂತೆ ಮಾಡುತ್ತದೆ. ಈ ಇತಿಹಾಸದ ಉದ್ದೇಶವು ಹಿಂದಿನ ಕಾಲದ ಜ್ಞಾನವನ್ನು ಅರಿತು ಇಂದಿನ ಕಾಲದ ಇತಿಹಾಸವನ್ನು ಅರ್ಥಮಾಡಿಕೊಳ್ಳಲು ಅನುಕೂಲಮಾಡಿಕೊಡುವುದೇ ಆಗಿದೆ. ಇತಿಹಾಸ ಯಾವುದಕ್ಕೆ ಬೇಕಾಗಿದೆ? ಎಂಬ ಪ್ರಶ್ನೆಗೆ ಇತಿಹಾಸತಜ್ಞರಾದ ಕಾಲಿಂಗ್‌ವುಡ್‌ರವರು "ಇತಿಹಾಸವು ಮಾನವನ ಸ್ವಯಂ ಜ್ಞಾನದ ಅಧ್ಯಯನ-ಅಂದರೆ ನಿಮ್ಮ ಬಗ್ಗೆ ತಿಳಿಯಬೇಕೆಂದರೆ ಮೊದಲನೆಯದಾಗಿ, ಮನುಷ್ಯ ಹೇಗಿರಬೇಕು? ಎರಡನೆಯದಾಗಿ ಮನುಷ್ಯ ಯಾವ ರೀತಿಯವನಾಗಿರಬೇಕು? ಮತ್ತು ಮೂರನೆಯದಾಗಿ, ಮನುಷ್ಯ ಯಾವುದೇ ಒಬ್ಬನ ರೀತಿಯಲ್ಲಿರದೇ ವಿಶಿಷ್ಟ ವ್ಯಕ್ತಿಯಾಗಿರಬೇಕು" ಎಂಬುದನ್ನು ತಿಳಿಯುವುದೇ ಆಗಿದೆ ಎನ್ನುತ್ತಾರೆ.

ಲಾರ್ಡ್ ಆಕ್ಟನ್‌ರವರು ಇತಿಹಾಸದ ಅವಶ್ಯಕತೆಯನ್ನು ಹೀಗೆ ತಿಳಿಸುತ್ತಾರೆ. "ಹಿಂದಿನ ಕಾಲವು ತೊಂದರೆದಾಯಕವೂ ಹಾಗೂ ಭಾರವಾಗಿದೆಯೆಂದಾದರೆ ಅದರ ಅಧ್ಯಯನವು ಒಂದು ರೀತಿಯ ಸುರಕ್ಷಿತ ಮತ್ತು ಕ್ಷೇಮದಾಯಕ ಕಲ್ಪನೆಯಾಗಿರುತ್ತದೆ". ವಸ್ತು ನಿಷ್ಠತೆಯ ಇತಿಹಾಸದ ಅಧ್ಯಯನವು ಮಾನವ ಕುಲವನ್ನು ಧರ್ಮಾಂಧತೆ, ಏಕರೀತಿಯ ಅಭಿಪ್ರಾಯ ಮತ್ತು ಅಸೂಯೆಗಳ ಲಕ್ಷಣಗಳಿಂದ ರಕ್ಷಿಸುವ ಕೆಲಸವನ್ನು ಇತಿಹಾಸವು ಮಾಡುವುದು. ಲೆಕ್ಕಿ ಎಂಬ ವಿದ್ವಾಂಸರ ಪ್ರಕಾರ "ಮುಂದಿನ ವರ್ಷಗಳ ರೂಪಗಳು ಮತ್ತು ಲಕ್ಷಣಗಳನ್ನು ಅಧ್ಯಯನದಿಂದ ಅರ್ಥಮಾಡಿಕೊಳ್ಳುವ ವ್ಯಕ್ತಿಗಳು ತಮ್ಮ ಕಾರ್ಯಗಳ ವೈಖರಿಯನ್ನು ಅಂದಾಜು

ಮಾಡುವುದರಿಂದ ದೂರವಿರುವರು". ಎಲ್ಲಾ ವಿದ್ವಾಂಸರುಗಳ ಪ್ರಕಾರ ನಮ್ಮ ಮುಂದಿನ ಭವಿಷ್ಯವು ನಿಂತಿರುವುದು ಹಿಂದಿನ ಕಾಲದ ಬಗ್ಗೆ ಉತ್ತಮ ಜ್ಞಾನವನ್ನು ಹೊಂದಿರುವುದೇ ಆಗಿದೆ ಎನ್ನುತ್ತಾರೆ?

ಇತಿಹಾಸವು ಯುವ ಜನತೆಯನ್ನು ತಮ್ಮ ಬಲವನ್ನು, ವರ್ಧಿಸಿಕೊಳ್ಳಲು ಪ್ರೋತ್ಸಾಹ ನೀಡುವುದಲ್ಲದೇ ಅವರ ಜೀವನ ಸುಖಮಯವಾಗುವಂತೆ ತಿಳಿಸುತ್ತದೆ. ಅಲ್ಲದೇ ವಯಸ್ಕಾದವರನ್ನು ತಮ್ಮ ಜೀವನದ ಅವಶ್ಯಕ ಕಾರ್ಯಗಳನ್ನು ಸರಿಯಾದ ರೀತಿಯಲ್ಲಿ ನಡೆಸಲು ಉತ್ತೇಜನ ನೀಡುತ್ತದೆ. ಟ್ರಾವೆಲ್ಯನ್‌ರವರ ಪ್ರಕಾರ ಇತಿಹಾಸವು ಬಹುಮುಖ್ಯ ಕಾರ್ಯದಿಂದ ಕಾವ್ಯ ಶೈಲಿಯಲ್ಲಿ ಮಾಹಿತಿ ನೀಡುವುದು ಮತ್ತು ಮಹಾಕಾವ್ಯದಲ್ಲಿರುವಂತೆ ಆರಂಭ ಮತ್ತು ಅಂತ್ಯವಿಲ್ಲದ ವಿಷಯವನ್ನು ತಿಳಿಸುವುದು. ಇತಿಹಾಸದ ಮೌಲ್ಯವು ವೈಜ್ಞಾನಿಕವಲ್ಲ ಇದರ ನಿಜವಾದ ಮೌಲ್ಯವೆಂದ ಶೈಕ್ಷಣಿಕ ಅಭಿವೃದ್ಧಿ ಮತ್ತು ಮಾನವನ ಬುದ್ಧಿಶಕ್ತಿ ಮತ್ತು ಮುಂದಾಲೋಚನೆಯನ್ನು ಹೆಚ್ಚು ಮಾಡುವುದು. ಜ್ಞಾನವನ್ನು ವೃದ್ಧಿಸುವುದು ಮತ್ತು ಮುದವನ್ನು ನೀಡುವುದೇ ಆಗಿದೆ.

## 3.3 ಇತಿಹಾಸದ ಉಪಯೋಗಗಳು

ಇತಿಹಾಸದ ಉಪಯೋಗಗಳು ಹಲವು. ಇತಿಹಾಸವು ಮೂರು ಪ್ರಮುಖ ಹಾಗೂ ನಿಖರವಾದ ಉಪಯೋಗಗಳನ್ನು ತಿಳಿಸುತ್ತದೆ. ಅವುಗಳೆಂದರೆ ಒಂದು ಮಾನವರನ್ನು ಸಂತೋಷಗೊಳಿಸುವುದು, ಎರಡು ಜ್ಞಾನವನ್ನು ತಿಳಿಯುವಲ್ಲಿ ಹೆಚ್ಚಿನ ಸಹಾಯ ಮಾಡುವುದು ಮತ್ತು ಮೂರು ಮಾನವನು ಗುಣವನ್ನು ಹೆಚ್ಚಿಸುವ ಕಾರ್ಯಗಳನ್ನು ಮಾಡುವುದು. ಸುಮಾರು ಕ್ರಿ.ಶ. 19 ನೇ ಶತಮಾನದವರೆಗೆ ಇತಿಹಾಸವು ಸಾಹಿತ್ಯ ಕ್ಷೇತ್ರದ ಒಂದು ಶಾಖೆಯಾಗಿದ್ದುದು ಕಂಡು ಬರುತ್ತದೆ. ಉದಾಹರಣೆಗೆ ಲಿವಿ, ಟ್ಯಾಸಿಟಸ್, ಡಿ.ಕ್ವಿನ್ಸಿ, ಹ್ಯೂಮ್ ಮತ್ತು ಮೆಕಾಲೆಯವರ ಬರಹಗಳು ಸಾಹಿತ್ಯ ಶೈಲಿಯಲ್ಲಿದ್ದು ಅವುಗಳು ಓದುವಲ್ಲಿ ಎಲ್ಲಾ ವರ್ಗದ ಜನರೂ ರಮ್ಯತೆಯನ್ನು ಕಾಣುತ್ತಾರೆ. ಇದಲ್ಲದೆ ಸಾಹಿತ್ಯವನ್ನು ಬಿಟ್ಟರೆ ಮುದಗೊಳಿಸುವುದು ಮತ್ತು ವಿಷಯದ ಬಗ್ಗೆ ಆಸಕ್ತಿಯನ್ನು ಸೃಷ್ಟಿಸುವ ಕಾರ್ಯವನ್ನು ಮಾಡುವಲ್ಲಿ ಇತಿಹಾಸವು ಪ್ರಥಮ ವಿಷಯವಾಗಿದೆಯೆನ್ನಬಹುದು. ಏಕೆಂದರೆ ಇತಿಹಾಸದಲ್ಲಿ ಬರುವ ಸಾಮ್ರಾಜ್ಯಗಳ ಉದಯ ಮತ್ತು ಪತನ, ನಾಯಕರ ಸಾಹಸಗಳು. ಐತಿಹಾಸಿಕ ಕಾರ್ಯಗಳು, ಯುದ್ಧಗಳು, ವಿಜಯಗಳು, ಮಹಾ ವ್ಯಕ್ತಿಗಳು, ಕ್ರಾಂತಿಗಳು, ಕಲೆ, ಧರ್ಮ, ತತ್ವಶಾಸ್ತ್ರ, ಚಿಂತನೆಗಳು ಮುಂತಾದ ಅನೇಕ ಆಸಕ್ತಿಯುತ ವಿಷಯಗಳ, ಮಾಹಿತಿಗಳ ಇತಿಹಾಸದಲ್ಲಿ ನೈಜ ಕಥೆಗಳಂತೆ ಹೇಳಪಡುತ್ತವೆ. ಗ್ರೀಸ್ ದೇಶದಲ್ಲಿ ಐತಿಹಾಸಿಕ ಸಾಹಿತ್ಯಗಳು ಸಾಂಪ್ರದಾಯಿಕ ನೃತ್ಯ ಮತ್ತು ಸಂಗೀತದ ರೂಪದಲ್ಲಿ ಬೆಳವಣಿಗೆಯಾಗಿರುವುದು ಇತಿಹಾಸದಲ್ಲಿ ಪಟ್ಟಣಗಳು, ಜನತೆ ರಾಜರು, ದೇವಾಲಯಗಳು ಮುಂತಾದವುಗಳು ಸಂಪ್ರದಾಯ ಮತ್ತು ಕಥಾನಕಗಳಿಂದ ರೂಪುಗೊಂಡಿದ್ದು ಅವುಗಳ ಅಧ್ಯಯನವು ಓದುಗರಿಗೆ ಕಲಾತ್ಮಕ ಸಂತೋಷವನ್ನು ನೀಡುವುದಾಗಿದ್ದು ಇತಿಹಾಸವು ಸಾಹಿತ್ಯದಂತಹ ಕಾರ್ಯ ಮಾಡುತ್ತದೆಯೆಂಬುದು ಗೊತ್ತಾಗುತ್ತದೆ. ಇತಿಹಾಸದಲ್ಲಿ ಆಸಕ್ತಿ ಮತ್ತು ಕಲ್ಪನೆಯ ಗುಣಗಳಿದ್ದು, ಐತಿಹಾಸಿಕ ಘಟನೆಗಳು ಮತ್ತು ಸಾಹಸಗಳ ಅಧ್ಯಯನಗಳಲ್ಲಿ ಇತಿಹಾಸದುದ್ದಕ್ಕೂ ನಾವು ಗಮನಿಸುತ್ತೇವೆ. ಇತಿಹಾಸವು ಸರಳತೆ, ನೈಸರ್ಗಿಕತೆ, ಸೌಂದರ್ಯಗಳನ್ನು ವ್ಯಕ್ತಪಡಿಸುವ ಸಾಹಿತ್ಯದಂತೆ ಕಾರ್ಯ ನಿರ್ವಹಿಸುತ್ತದೆ. ಇತಿಹಾಸದ ವಸ್ತು ವಿಷಯವು ಹಿಂದಿನ ಘಟನೆಗಳ ನಿರೂಪಣೆಯಾಗಿದ್ದು, ಸಾಹಿತ್ಯದಲ್ಲಿರುವಂತೆ ಆಸಕ್ತಿಯುತವಾಗಿ, ಮುದವನ್ನು ನೀಡುವ ರೀತಿಯಲ್ಲಿ ಕಾರ್ಯ ನಿರ್ವಹಿಸುವ ಇತಿಹಾಸವು, ಸಾಹಿತ್ಯದಂತೆಯೇ ಕಾರ್ಯನಿರ್ವಹಿಸುವುದು ನಮಗೆ ಕಂಡುಬರುತ್ತದೆ.

ಇತಿಹಾಸವು ಮನುಷ್ಯನ ಜ್ಞಾನ ವೃದ್ಧಿಯ ಕಾರ್ಯವನ್ನು ನಿರ್ವಹಿಸುತ್ತದೆ. ಮನುಷ್ಯನ ವಿದ್ಯಾಭ್ಯಾಸ, ಜೀವನದ ಪಾತ್ರಗಳು ಮನುಷ್ಯನು ಹೇಗೆ ಜೀವನವನ್ನು ಅರ್ಥಬದ್ಧವಾಗಿ ನಡೆಸಿದ ಎಂಬುದನ್ನು ತಿಳಿಸುವ ಕಾರ್ಯವನ್ನು ಇತಿಹಾಸವು ಮಾಡುತ್ತದೆ ಮತ್ತು ಇತಿಹಾಸದಲ್ಲಿ ಆಸಕ್ತಿ ಮತ್ತು ಗತಕಾಲದ ಬಗ್ಗೆ ಗೌರವವನ್ನು ಮೂಡಿಸುವ ಕಾರ್ಯವನ್ನು ಕಾಣುತ್ತೇವೆ. ಇತಿಹಾಸವು ಮನುಷ್ಯನ ದಿನನಿತ್ಯದ ಕಾರ್ಯದಲ್ಲಿ ಪಾಲುಗೊಳ್ಳುವುದಲ್ಲದೇ ಅವನು ವೈಚಾರಿಕ ಜೀವನವನ್ನು ನಡೆಸಲು ಉತ್ತಮ ಪಾತ್ರವನ್ನು ತೋರಿಸಿಕೊಡುತ್ತದೆಯ ಯಾವುದೇ ಒಂದು ತತ್ವವೇ ಆಗಲಿ ಅಥವಾ ಒಂದು ಮುಖ್ಯ ವಿಷಯವಾಗಲೀ ತಾತ್ವಿಕವಾಗಿಯೇ ಆಗಲಿ ಅಥವಾ ಬುದ್ಧಿವಂತಿಕೆಯಿಂದ ಅರ್ಥವಾಗುವುದಿಲ್ಲ. ಏಕೆಂದರೆ ಈ ವಿಷಯಗಳನ್ನು ಐತಿಹಾಸಿಕವಾಗಿ ಹೇಳಿದರೆ ಮಾತ್ರ ಇವುಗಳು ಸಂಪೂರ್ಣವಾಗಿ ಅರ್ಥವಾಗುವುದು ಸಾಧ್ಯ. ಅಂದರೆ ಯಾವುದೇ ವಿಷಯವನ್ನು ಅರ್ಥಮಾಡಿಕೊಳ್ಳಲು ಅದರ ಹಿನ್ನೆಲೆ ತಿಳಿಯುವುದು

ಅತ್ಯವಶ್ಯಕ. ಒಬ್ಬ ವೈದ್ಯ ಒಬ್ಬ ರೋಗಿಯ ರೋಗದ ಲಕ್ಷಣಗಳನ್ನು ಅವನ ರೋಗದ ಹಿನ್ನೆಲೆ ಮತ್ತು ಲಕ್ಷಣಗಳನ್ನು ಸರಿಯಾಗಿ ತಿಳಿದುಕೊಳ್ಳದೇ ಸರಿಯಾದ ಪೂರ್ಣ ಮಾಹಿತಿಯಲ್ಲಿದ್ದರೆ ಮಾತ್ರ ರೋಗಕ್ಕೆ ಸರಿಯಾದ ಔಷಧಿಯನ್ನು ಕೊಡುವುದು ಸಾಧ್ಯವಾಗುತ್ತದೆ. ಆದ್ದರಿಂದಲೇ ಇತಿಹಾಸವನ್ನು ಮಾನವನ ನಿಸರ್ಗದ ಅಧ್ಯಯನವೆಂದು ಕರೆದಿದ್ದಾರೆ. ಇತಿಹಾಸವು ವರ್ತಮಾನಕಾಲವನ್ನು ಭೂತಕಾಲದೊಂದಿಗೆ ಸೇರಿಸುತ್ತದೆ. ಅಂದರೆ ಇತಿಹಾಸವು ಮಾನವ ಜನಾಂಗವು ತಾನು ಹಿಂದೆ ನಡೆದು ಬಂದ ರೀತಿಯನ್ನು ಮತ್ತು ಅದರ ಕಷ್ಟ ಸುಖಗಳನ್ನು ತಿಳಿಸುವುದಲ್ಲದೆ ಮುಂದಿನ ಭವಿಷ್ಯದ ಜೀವನವು ಒಳ್ಳೆಯದಾಗಿ ಮಾರ್ಪಡಲು ಒಳ್ಳೆಯ ಮಾರ್ಗವನ್ನು ಸೂಚಿಸುತ್ತದೆಯೆಂದು ಹೇಳಬಹುದು.

ಇತಿಹಾಸವು ಮನುಷ್ಯ ಬುದ್ಧಿವಂತನೂ ಹಾಗೂ ತನ್ನ ಜೀವನದ ಮೌಲ್ಯವನ್ನು ಹೆಚ್ಚಿಸಿಕೊಳ್ಳಲು ಸಹಾಯ ಮಾಡುತ್ತದೆ. ಇತಿಹಾಸವು ಸಂದರ್ಭಗಳ ಹಾಗೂ ಅವಶ್ಯಕತೆಗಳಿಗೆ ಅನುಗುಣವಾಗಿ ತಮ್ಮ ಕಲ್ಪನಾಶಕ್ತಿ ಮತ್ತು ಚಿಂತನೆಯನ್ನು ಮಾಡಲು ತಿಳಿಸುವುದು. ಉದಾ. ಒಬ್ಬ ಬುದ್ಧಿವಂತನು ತನ್ನ ಅನುಭವಗಳಿಂದ ಅನೇಕ ವಿಷಯಗಳನ್ನು ಕಲಿಯುವವನು ಆದ ಇನ್ನೂ ಬುದ್ಧಿವಂತನಾದ ಮನುಷ್ಯನು ಇತರರ ಅನುಭವಗಳೊಂದಿಗೆ ಹೆಚ್ಚಿನ ವಿಷಯಗಳನ್ನು ಅರಿಯುವನು. ಒಂದು ಮಗು ಬೆಂಕಿ ಸುಡುತ್ತದೆ ಎಂಬುದನ್ನು ತಿಳಿಯುವುದು ತಾವು ಬೆಂಕಿಯಲ್ಲಿ ಕೈಯಿಟ್ಟು ಸುಟ್ಟುಕೊಂಡಾಗಲೇ ತಿಳಿಯುವುದು. ಹೆಚ್ಚಿನ ಬುದ್ಧಿವಂತ ಮನುಷ್ಯ ಮಗುವಿನ ಅನುಭವದಿಂದಲೇ ಸುಡುವ ವಿಷಯವನ್ನು ತಿಳಿದುಕೊಂಡು ಅದನ್ನು ಪುನಃ ಕೈಸುಟ್ಟುಕೊಳ್ಳುವ ಪ್ರಯತ್ನ ಮಾಡುವುದಿಲ್ಲ. ಇತಿಹಾಸವು ಹಿಂದಿನ ವೈಭವಯುತ ಸಾಂಪ್ರದಾಯಿಕ ಜೀವನದ ವಿಷಯಗಳನ್ನು ತಿಳಿಸುವಲ್ಲಿ ಈ ಜೀವನಕ್ಕೆ ಯಾವ ವಿಷಯಗಳು ಕಾರಣವಾದವು ಎಂಬುದನ್ನು ತಿಳಿಸುತ್ತದೆ ಹಾಗೂ ಈ ಜೀವನದಲ್ಲಿ ಅಡೆತಡೆ ಒಡ್ಡುವ ಅಂಶಗಳು ಯಾವುವು ಎಂಬುದನ್ನು ಸಹ ತಿಳಿಸುತ್ತದೆ. ಒಬ್ಬ ಒಳ್ಳೆಯ ನಡತೆಯ ಪ್ರಜೆಯಾಗಲು ಕಾಲವನ್ನು ಹೇಗೆ ಉಪಯೋಗಿಸಿಕೊಳ್ಳಲು ಪ್ರಯತ್ನಿಸುವುದು ಮುಖ್ಯವಾದದ್ದು. ಏಕೆಂದರೆ ಅದು ಹಿಂದಿನ ಕಾಲದಲ್ಲಿಯ ಘಟನೆಗಳನ್ನು ತಿಳಿಸುವುದಲ್ಲದೇ ಭವಿಷ್ಯದ ರೂಪುರೇಖೆಯನ್ನು ಸಹ ತಿಳಿಸುತ್ತದೆ. ಇವುಗಳು ಭವಿಷ್ಯದ ಪ್ರಗತಿಗೆ ಬೇಕಾದ ಮುಖ್ಯ ವಿಷಯಗಳಾಗಿವೆ. ಹೀಗೆ ಇತಿಹಾಸವು ಮನುಷ್ಯನನ್ನು ಬುದ್ಧಿವಂತನಾಗಿಸುವ ಕಾರ್ಯವನ್ನು ಮಾಡುತ್ತದೆ.

ಈ ಮೇಲ್ಕಂಡ ಇತಿಹಾಸದ ಮೂರು ಉಪಯೋಗಗಳಲ್ಲದೇ, ಇತಿಹಾಸವು ಇತರೇ ಕ್ಷೇತ್ರಗಳನ್ನು ಅರಿಯುವಲ್ಲಿ ಬಹುಮುಖ್ಯ ಮೌಲ್ಯಯುತ ಕಾರ್ಯವನ್ನು ನಿರ್ವಹಿಸುತ್ತದೆ. ಮೊದಲನೆಯದಾಗಿ ನಾವುಗಳು ನಮ್ಮ ಇಂದಿನ ಪರಿಸರದ ಬಗ್ಗೆ ಜ್ಞಾನವನ್ನು ಪಡೆದಿರುವುದು ಅವಶ್ಯ. ಎರಡನೆಯದಾಗಿ, ನಾವು ಹಿಂದಿನ ವಿಷಯಗಳನ್ನು ಅರಿತಿದ್ದಾರೆ ಮಾತ್ರ ಇಂದಿನ ಕಾಲವನ್ನು ಪ್ರಶಂಸೆ ಮಾಡಲು ಸಾಧ್ಯ. ಏಕೆಂದರೆ ಬುದ್ಧಿವಂತನು ಸಾಕಷ್ಟು ಪ್ರಗತಿಯನ್ನು ಸಾಧಿಸಿರುತ್ತಾನೆ. ಇತಿಹಾಸವು ನಾವು ಹಿಂದೆ ಯಾವ ರೀತಿಯಲ್ಲಿ ಪ್ರಗತಿ ಸಾಧಿಸಿದ್ದೆವು ಮತ್ತು ಪ್ರಗತಿಗೆ ನಾವು ಎಷ್ಟು ಕೊಡುಗೆ ನೀಡಿದ್ದೇವೆ ಎಂಬುದನ್ನು ಬ್ಯಾರೊಮೀಟರ್ ತರಹ ಅಂದಾಜು ಮಾಡುವ ಕಾರ್ಯವನ್ನು ಇತಿಹಾಸವು ಮಾಡುವುದು. ಮೂರನೆಯದಾಗಿ ಇತಿಹಾಸವು ಸಮಾಜದ ನಡೆಯ ಗತಿಯನ್ನು ನಿಯಂತ್ರಿಸುವ ಸಾಮಾನ್ಯ ನಿಯಮಗಳನ್ನು ಚಿತ್ರಿಸುವುದು. ಈ ಮಾಹಿತಿಯ ಮೌಲ್ಯವು, ಈ ಸರಿನಿಯಮಗಳು ನಮ್ಮ ಕಾಲಕ್ಕೆ ಅಳವಡಿಕೆಯಾಗುತ್ತವೆಯೇ ಎಂಬುದನ್ನು ತಿಳಿಯುವುದು ಮತ್ತು ಜ್ಞಾನವು ಅವರನ್ನು ಬುದ್ಧಿಶಕ್ತಿಯಿಂದ ನಡೆಯಲು ಭವಿಷ್ಯಕ್ಕೆ ಮಾರ್ಗದರ್ಶನ ಮಾಡುತ್ತದೆ. ಇತಿಹಾಸವು ಜೀವನದ ಅರ್ಥವನ್ನು ತಿಳಿಸುವುದಲ್ಲದೇ, ಸಮಾಜಕ್ಕೆ ಬೇಕಾದ ಅವಶ್ಯಕತೆಯನ್ನು ಪೂರೈಸುವ ಕಾರ್ಯವನ್ನು ಮಾಡುತ್ತದೆ ಎನ್ನುವುದು ಗೊತ್ತಾಗುತ್ತದೆ.

ಸಾಮಾಜಿಕ ಕಟ್ಟಳೆಗಳು ನೈಸರ್ಗಿಕ ವಿಜ್ಞಾನಗಳಂತೆಯೇ ಇದ್ದು ಇವುಗಳು ಜಾಗತಿಕವಾಗಿದ್ದು ಇದರಿಂದ ನಾವು ಭವಿಷ್ಯವನ್ನು ನಿರ್ಧರಿಸಬಹುದಾಗಿದೆ. ಇತಿಹಾಸವು ನಮ್ಮ ಕಲ್ಪನೆ, ದೂರದೃಷ್ಟಿತ್ವವನ್ನು ಹೆಚ್ಚಿಸುವುದಲ್ಲೆ ಮನುಷ್ಯ ತನ್ನ ಹಿಂದಿನ ತಪ್ಪುಗಳನ್ನು ಸರಿಪಡಿಸಿಕೊಂಡು ಭವಿಷ್ಯವನ್ನು ಒಳ್ಳೆಯದಾಗಿ ಮಾಡಿಕೊಳ್ಳುವುದನ್ನು ತಿಳಿಸಬೇಕಾಗುತ್ತದೆ. ಇನ್ನೂ ಬೇರೆ ಬೇರೆ ರೀತಿಯಲ್ಲಿ ಇತಿಹಾಸದ ಉಪಯೋಗವನ್ನು ಕಾಣುತ್ತೇವೆ. ಇತಿಹಾಸವನ್ನು ಬಂದಿಸಿಡುವುದು ನೈತಿಕತೆ ಮತ್ತು ಧರ್ಮ, ರಾಜಕೀಯ ಅಥವಾ ಸಾಮಾಜಿಕ ಆರ್ಥಿಕ ಅಥವಾ ವೈಚಾರಿಕತೆ ವಿಷಯಗಳಾಗಿವೆ. ಇವುಗಳಲ್ಲಿ ನೈತಿಕತೆಯ ನಿಯಮಗಳು ಪ್ರಭಲವಾಗಿದ್ದು ಎಲ್ಲಾ ವಿಷಯಗಳಲ್ಲೂ ತನ್ನ ಅಸ್ತಿತ್ವವನ್ನು ಎಲ್ಲಾ ಕಾಲದಲ್ಲಿಯೂ ತೋರಿಸಿದೆ. ಇತಿಹಾಸದಲ್ಲಿ ನಾವು ನೋಡಿದ್ದೇವೆ. ಇತಿಹಾಸದ ಮಹತ್ವದ ಘಟನೆಗಳು ಯಾವುದೇ

ಒಬ್ಬ ರಾಜನಾದ ನೀರೋ ಅಥವಾ ಅಲೆಗ್ಝಾಂಡರ್, ನೆಪೋಲಿಯನ್ ಅಥವಾ ಕೈಸರ್‌ರವರು ಅಧಿಕಾರದಲ್ಲಿದ್ದಾಗ ನಡೆಯಲಿಲ್ಲ. ಆದರೆ ಯಾವಾಗ ಬೃಹತ್ ಧರ್ಮಗಳು ಹುಟ್ಟಿಕೊಂಡಾಗ, ಮಾನವನಲ್ಲಿ ಧೈರ್ಯವನ್ನು ಹೇಳಿಕೊಡುವುದು ಸ್ವಂತಿಕೆಯ ತ್ಯಾಗ, ಸಹಿಷ್ಣುತೆ, ಸ್ವಾತಂತ್ರ್ಯ, ಸಮಾನತೆ, ನ್ಯಾಯ ಅಂತಃಕರಣ ಒಂದೇ ರೀತಿಯ ಭಾವನೆಗಳು, ಸಾಮಾಜಿಕ ಮೌಲ್ಯತೆ, ಬೆಲೆಕಟ್ಟಲಾದ ಕಾರ್ಯಗಳು, ಚಿಂತನೆಗೆ ಬೆಲೆಕೊಡುವುದು ರಾಷ್ಟ್ರಭಕ್ತಿ ಮತ್ತು ಇತರೇ ಒಳ್ಳೆಯ ಗುಣಗಳು ಮನುಷ್ಯನನ್ನು ಎತ್ತರಕ್ಕೆ ತೆಗೆದುಕೊಂಡು ಹೋಗುವುವು. ಇವುಗಳು ನಿಜವಾದ ಇತಿಹಾಸದ ಬೋಧನೆಗಳು ಮತ್ತು ಇವುಗಳ್ನು ಎಲ್ಲಾ ವರ್ಗದ ತತ್ವಗಳೂ ಬೆಳೆಯುವುದು ಅವಶ್ಯಕತೆಯಿದೆ ಎಂಬುದು ಇತಿಹಾಸದ ಉಪಯೋಗ.

ಇತಿಹಾಸವು ಅನೇಕ ರಾಷ್ಟ್ರಗಳು ಮತ್ತು ಸಾಮ್ರಾಜ್ಯಗಳ ವಿಷಯಗಳನ್ನು ದಾಖಲಿಸುವುದಲ್ಲದೇ ಮತ್ತು ಇವುಗಳಲ್ಲಿ ಮಾನವರು ಯಾವ ರೀತಿ ಕಾರ್ಯ ನಿರ್ವಹಿಸುತ್ತಾರೆ ಮತ್ತು ಹೇಗೆ ಯಾವುದೇ ದೇಶವೂ ಒಂದೇ ರೀತಿಯ ನಿಯಮಗಳಿಗೆ ಭಾಗಿಯಾಗಿಲ್ಲವೆನ್ನುವುದು ಇತಿಹಾಸ ತಿಳಿಸುತ್ತದೆ. ಯುದ್ಧಗಳು ಹೇಗೆ ಮತ್ತು ಏಕೆ ನಡೆದವು ಅವುಗಳ ದುಷ್ಪರಿಣಾಮಗಳ ಬಗ್ಗೆ ಇತಿಹಾಸವು ತಿಳಿಸಿರುವವರು ಮುಂದೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ಇತಿಹಾಸವು ತಿಳಿಸುತ್ತದೆ. ಮಾನವನನ್ನು ಅಂಧಾಕಾರದಿಂದ ಹೊರಗೆ ತರಲು ಇತಿಹಾಸವು ಹಿಂದಿನ ಇತಿಹಾಸದ ಸಾಮಾಜಿಕ ನೈತಿಕ ಮತ್ತು ವೈಚಾರಿಕತೆಯ ವಿಷಯಗಳನ್ನು ಅವನಿಗೆ ತಿಳಿಸಿ, ಶಿಕ್ಷಿತನಾಗಿ ಮಾಡುತ್ತದೆ. ಜೀವನದ ಒಳ್ಳೆಯ ತತ್ವಗಳು ನಡವಳಿಕೆಗಳು ಸಾಮಾಜಿಕ ತಾಪಗಳು, ಜೀವನದ ಸವಾಲುಗಳು, ಮುಂತಾದವುವನ್ನು ಇತಿಹಾಸವು ತಿಳಿಸುತ್ತದೆ. ಅನೇಕ ರಾಷ್ಟ್ರಗಳು ಮತ್ತು ಸಾಮ್ರಾಟರು ಇತಿಹಾಸದ ಪಾಠಗಳನ್ನು ತಿಳಿಯದೇ ಹೇಗೆ ನಾಶವಾದವು ಎಂಬುದನ್ನು ಸಹ ಇತಿಹಾಸವು ತಿಳಿಸುತ್ತದೆ. ಇದಲ್ಲದೇ ಅನೇಕ ಸಂಸ್ಕೃತಿ ಮತ್ತು ನಾಗರೀಕತೆಗಳು ಹೇಗೆ ಹುಟ್ಟಿ ಬೆಳೆದು ಇಂದಿಗೂ ಸಹ ಹೇಗೆ ಮುಂದುವರಿದಿವೆ ಎಂಬುದನ್ನು ಸಹ ತಿಳಿಸುತ್ತದೆ ಇತಿಹಾಸ. ಇತಿಹಾಸವು ಕೇವಲ ವಿದ್ವಾಂಸರಿಗೆ ಮಾತ್ರವಲ್ಲದೇ ಜನಸಾಮಾನ್ಯರೂ ಸಹ ಇತಿಹಾಸಧ ಪಾಠಗಳನ್ನು ತಿಳಿದು ಉತ್ತಮ ಜೀವನ ನಡೆಸಬೇಕೆಂದು ತಿಳಿಸುವ ಕಾರ್ಯ ಮಾಡುತ್ತದೆ.

ಮನುಷ್ಯನ ಅರ್ಥೈಸುವಿಕೆಯನ್ನು ಹೆಚ್ಚುಗೊಳಿಸುವ ಕಾರ್ಯವನ್ನು ಮಾಡುವ ಮೂಲ ಉದ್ದೇಶವಿಟ್ಟುಕೊಂಡಿರುವ ಇತಿಹಾಸವು ತಾನು ತನ್ನ ಇತಿಹಾಸ ಬರವಣಿಗೆಯನ್ನು ವಸ್ತುನಿಷ್ಠತೆ ಹಾಗೂ ಸತ್ಯದ ನಿಯಮಕ್ಕೆ ಬದ್ಧವಾಗಿರಬೇಕು. ಇವುಗಳೆರಡನ್ನು ಸಾಧಿಸುವುದರಲ್ಲಿ ಇತಿಹಾಸಕಾರನು ತಪ್ಪು ಮಾಹಿತಿ ನೀಡುವುದು ಅರ್ಧ ಸತ್ಯವನ್ನು ತಿಳಿಸುವುದು. ಉತ್ಪ್ರೇಕ್ಷೆ ಮಾಡುವುದು ಅತೀ ಹೆಚ್ಚಿನ ರಾಷ್ಟ್ರೀಯತೆ, ವ್ಯಕ್ತಿ ಪೂಜೆ ಮಂತಾದುವನ್ನು ಬಿಟ್ಟು ಬಿಡುವ ಕಾರ್ಯವನ್ನು ಮಾಡಬೇಕಾಗುತ್ತದೆ. ಇತಿಹಾಸವು ಚಲನವಲನ ವಿಷಯವಾಗಿರುವುದರಿಂದ ಅದು ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡಿ ರಕ್ಷಿಸುವ ಕಾರ್ಯವನ್ನು ಮಾಡಬೇಕಾಗಿದೆ. ಏಕತೆಯ ಲಕ್ಷಣಗಳು, ಧಾರ್ಮಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಒಲವು ಹಿಂದಿನ ಘಟನೆಗಳ ಬಗ್ಗೆ ಪ್ರೀತಿ, ವಿಶ್ವಾಸ, ತಮ್ಮ ದೇಶಗಳ ರಾಷ್ಟ್ರೀಯ ಚಳವಳಿಗಳ ಮುಂತಾದವುಗಳ ಬಗ್ಗೆ ಆಸಕ್ತಿ ಇಟ್ಟುಕೊಂಡಿದ್ದರೆ ಒಳ್ಳೆಯ ಇತಿಹಾಸವನ್ನು ರಚಿಸಬಹುದಾಗಿದೆ. ಇದಕ್ಕೆ ಉದಾಹರಣೆ ಯಹೂದಿಗಳು ಇಂದಿಗೂ ತಮ್ಮ ರಾಷ್ಟ್ರೀಯ ಅಸ್ತಿತ್ವವನ್ನು ಬಿಡದೇ ಸನಾತನ ಕಾಲದ ಸಂಸ್ಕೃತಿ ಮತ್ತು ನಾಗರೀಕತೆಯನ್ನು ಮುಂದುವರಿಸಿಕೊಂಡು ಬಂದಿರುವುದು ಅವರು ಇತಿಹಾಸದ ಪಾಠಗಳನ್ನು ಅಥವಾ ಉಪಯೋಗಗಳನ್ನು ಕಲಿತಿರುವುದು ಕಾರಣ.

ಆರ್ನಾಲ್ಡ್ ಟಾಯನ್ಬಿಯವರ ಪ್ರಕಾರ ಇತಿಹಾಸವು ನಿಜವಾದ ಸಾಧನೆ ಮಾಡುವುದು. ಮುಗ್ಗಟ್ಟುಗಳು ಮತ್ತು ಅವನತಿಯ ಕಾಲದಲ್ಲಿ, ಇವುಗಳು ಬೃಹತ್ ಧರ್ಮಗಳ ಏಳ್ಗೆಗೆ ಕಾರಣವಾಗಿ ಮಾನವನ ಅವಶ್ಯಕತೆಗಳನ್ನು ಪೂರೈಸುವುದು. ಬುದ್ಧನು ತನ್ನ ಅರಮನೆ, ಪತ್ನಿ, ಸುತರು, ಐಷರಾಮಿ ಜೀವನ, ಬಿಟ್ಟು ಕಾಡಿಗೆ ಹೋದಾಗಲೇ ಬುದ್ಧನಾದದ್ದು. ಇಸ್ಲಾಂ ಧರ್ಮವು ಬೌದ್ಧ ಧರ್ಮ ಇಸ್ಲಾಂ ಕ್ರೈಸ್ತ ಧರ್ಮ ಮುಂತಾದವುಗಳು ಹುಟ್ಟಿ ಬೆಳೆದು ಪ್ರವರ್ದಮಾನಕ್ಕೆ ಬಂದ ಕಾಲವೇ ಐತಿಹಾಸಿಕ ಕಾಲವೆಂದು ಟಾಯನ್ಬಿಯವರು ಹೇಳುತ್ತಾರೆ. ಯಾವಾಗಲೂ ತೊಂದರೆಗಳು ಅಥವಾ ಕಷ್ಟಗಳು ಮನುಷ್ಯನಲ್ಲಿ ಒಂದು ಒಳ್ಳೆಯ ಯೋಚನೆಯನ್ನು ಹುಟ್ಟಿಸಿ ಸರಿಯಾದ ದಾರಿಯಲ್ಲಿ ನಡೆದು ಉತ್ತಮ ಸಾಧನೆ ಮಾಡುವಲ್ಲಿ ನೆರವಾಗುತ್ತದೆಂಬುದನ್ನು ಇತಿಹಾಸವು ತನ್ನ ಉಪಯೋಗದಲ್ಲಿ ತಿಳಿಸುತ್ತದೆ.

ಇತಿಹಾಸವು ಮಾನವನ ಪ್ರಗತಿಯು ಮೂರು ಮುಖ್ಯ ವಿಷಯಗಳಾದ ನೈಪುಣ್ಯತೆ, ವ್ಯವಸ್ಥೆ ಮತ್ತು ನಂಬಿಕೆಗಳ ಮೇಲೆ ನಿಂತಿದೆ. ಚಿಂತನೆಗಳು ಇತಿಹಾಸದ ಕಾರ್ಯವನ್ನು ನಿರ್ಧರಿಸಿ ತಮ್ಮ ಚಟುವಟಿಕೆಗಳಿಗೆ ರೂಪುಕೊಡುತ್ತದೆ. ನೈಪುಣ್ಯತೆಯ ಚಿಂತನೆಗಳನ್ನು

ಕಾರ್ಯಗಳಲ್ಲಿ ತೊಡಗಿಸಿ; ನಂಬಿಕೆಯು ಇವುಗಳನ್ನು ಹೆಚ್ಚು ಮಾಡುತ್ತದೆ. ಇವುಗಳೆಲ್ಲವೂ ವ್ಯವಸ್ಥಿತವಾಗಿ ನಡೆಯಲು ಇತಿಹಾಸ ನಿರ್ಧಾರದ ದೃಷ್ಟಿಯನ್ನು ನೀಡುತ್ತದೆ. ಮನುಷ್ಯ ತನ್ನ ಅಸ್ಥಿತ್ವ, ತಾನು ಜೀವಿಸುವ ಭಾವನೆ ಎಲ್ಲರೊಂದಿಗೆ ಬೆರೆತು ಉತ್ತಮ ಜೀವನ ನಡೆಸುವುದು ಇತಿಹಾಸಕ್ಕೆ ಅವನು ನೀಡುವ ಕೊಡುಗೆ. ಇವುಗಳನ್ನೆಲ್ಲಾ ಅರಿಯಲು ಇತಿಹಾಸದ ಹಿಂದಿನ ಘಟನೆಗಳನ್ನು ತಿಳಿಯಬೇಕು ಅಂದರೆ ಇತಿಹಾಸದ ಅಧ್ಯಯನ ನಡೆಸಬೇಕು.

## 3.4 ಘಟಕದ ಸಾರಾಂಶ

ಮೇಲೆ ಅಧ್ಯಯನ ನಡೆಸಿದ ಘಟಕದಿಂದ ನಾವು ಈ ಕೆಳಕಂಡ ವಿಷಯಗಳನ್ನು ತಿಳಿದುಕೊಂಡೆವು.

1. ಇತಿಹಾಸ ಅಧ್ಯಯನದ ಪ್ರಾಥಮಿಕ ಕಾರ್ಯಗಳು
2. ಇತಿಹಾಸದ ಘಟನೆಗಳ ಅಧ್ಯಯನದ ಪೀಠಿಕೆ
3. ಇತಿಹಾಸದ ಉದ್ದೇಶಗಳು ಮತ್ತು ಗುರಿಗಳು
4. ಇತಿಹಾಸದ ಮೂರು ಪ್ರಮುಖ ಉಪಯೋಗಗಳು
5. ಇತಿಹಾಸ ಬರವಣಿಗೆಯಲ್ಲಿ ವಸ್ತುನಿಷ್ಠತೆ ಮುಂತಾದವು.

## 3.5 ಸ್ವಯಂ ಪರಿಶೀಲನಾ ಪ್ರಶ್ನೆಗಳು

1. ಇತಿಹಾಸ ಉದ್ದೇಶಗಳು ಅಥವಾ ಗುರಿಗಳನ್ನು ಕುರಿತು ಬರೆಯಿರಿ.
2. ಇತಿಹಾಸದಲ್ಲಿ ಮೌಲ್ಯಗಳ ಪ್ರಾಮುಖ್ಯತೆಯನ್ನು ತಿಳಿಸಿ.
3. ಇತಿಹಾಸದ ಪ್ರಮುಖ ಉಪಯೋಗಗಳನ್ನು ವಿವರಿಸಿ.

## 3.6 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. ವೆಂಕಟರತ್ನಂ ಮತ್ತು ಪದ್ಮ : ಇತಿಹಾಸ ಸಂಶೋಧನಾ ಮಾರ್ಗ
2. ಬಿ.ಆರ್. ಗೋಪಾಲ್ : ಇತಿಹಾಸ ಶಾಸ್ತ್ರ ಮತ್ತು ಸಿದ್ಧಾಂತ
3. Sheik Ali .B. : History ; Its theory and Method
4. Rajayyan .K. : History in Theory and Method


*ಡಾ. ಎ. ಸೋಮಶೇಖರ್*

# ಘಟಕ - 4 ಸಮಾಜ ವಿಜ್ಞಾನಗಳು ಮತ್ತು ಇತರೇ ವಿಜ್ಞಾನಗಳೊಂದಿಗೆ ಇತಿಹಾಸದ ಸಂಬಂಧ

*ವಿಷಯಾನುಕ್ರಮಣಿಕೆ*


4.0 ಉದ್ದೇಶಗಳು

4.1 ಪೀಠಿಕೆ

4.2 ಇತಿಹಾಸ ಮತ್ತು ಸಮಾಜ ವಿಜ್ಞಾನಗಳೊಂದಿಗೆ ಸಂಬಂಧ

4.2.1 ಇತಿಹಾಸ ಮತ್ತು ಭೂಗೋಳ ಶಾಸ್ತ್ರ

4.2.2 ಇತಿಹಾಸ ಮತ್ತು ರಾಜ್ಯಶಾಸ್ತ್ರ

4.2.3 ಇತಿಹಾಸ ಮತ್ತು ಅರ್ಥಶಾಸ್ತ್ರ

4.2.4 ಇತಿಹಾಸ ಮತ್ತು ಸಮಾಜಶಾಸ್ತ್ರ

4.2.5 ಇತಿಹಾಸ ಮತ್ತು ಮನೋವಿಜ್ಞಾನ

4.2.6 ಇತಿಹಾಸ ಮತ್ತು ನೀತಿಶಾಸ್ತ್ರ

4.2.7 ಇತಿಹಾಸ ಮತ್ತು ಸಂಖ್ಯಾಶಾಸ್ತ್ರ

4.2.8 ಇತಿಹಾಸ ಮತ್ತು ಸಾಹಿತ್ಯ

4.3 ಇತಿಹಾಸ ಮತ್ತು ಇತರೇ ವಿಜ್ಞಾನಗಳೊಂದಿಗೆ ಇದರ ಸಂಬಂಧ

4.3.1 ಇತಿಹಾಸ ಮತ್ತು ಕಾಲಗಣನಾಶಾಸ್ತ್ರ

4.3.2 ಇತಿಹಾಸ ಮತ್ತು ಪ್ರಾಚೀನ ಲಿಪಿಶಾಸ್ತ್ರ

4.3.3 ಇತಿಹಾಸ ಮತ್ತು ಹಸ್ತಾಕ್ಷರಶಾಸ್ತ್ರ

4.3.4 ಇತಿಹಾಸ ಮತ್ತು ಸರ್ಕಾರಿ ದಾಖಲು ಪತ್ರಗಳ ಶಾಸ್ತ್ರ

4.3.5 ಇತಿಹಾಸ ಮತ್ತು ಮುದ್ರೆಗಳ ಅಧ್ಯಯನಶಾಸ್ತ್ರ

4.3.6 ಇತಿಹಾಸ ಮತ್ತು ಇತರೇ ವಿಷಯಗಳು

4.4 ಘಟಕದ ಪೀಠಿಕೆ

4.5 ಸ್ವಯಂ ಪರಿಶೀಲನಾ ಪ್ರಶ್ನೆಗಳು

4.6 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 4.0 ಉದ್ದೇಶಗಳು

ಈ ಘಟಕ 4 ರ ಅಧ್ಯಯನದಿಂದ ನಾವುಗಳು ಈ ಕೆಳಕಂಡ ವಿಷಯಗಳನ್ನು ತಿಳಿಯಲಿದ್ದೇವೆ:

* ಇತಿಹಾಸದ ಅರ್ಥವನ್ನು ತಿಳಿಯುವೆವು.
* ಇತಿಹಾಸವು ಸಮಾಜ ವಿಜ್ಞಾನಗಳಾದ ಭೂಗೋಳಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ ಮತ್ತು ಇತರೆ ವಿಷಯಗಳೊಂದಿಗಿನ ಸಂಬಂಧವನ್ನು ತಿಳಿಯುವೆವು.
* ಇತಿಹಾಸವು ಇತರೇ ವಿಜ್ಞಾನಗಳೊಂದಿಗೆ ಹೊಂದಿರುವ ಸಂಬಂಧಗಳು ಹಾಗೂ ಇನ್ನಿತರ ವಿಷಯಗಳ ಸಂಬಂಧವನ್ನು ಸಹ ತಿಳಿಯುವೆವು.

## 4.1 ಪೀಠಿಕೆ

ಇತಿಹಾಸವು ಮಾನವನ ಹಲವಾರು ಮುಖಗಳ ಅಧ್ಯಯನದ ವಿಷಯವಾಗಿದೆ. ಇತಿಹಾಸವು ಹಲವು ಸಮಾಜವಿಜ್ಞಾನಗಳೊಂದಿಗೆ ಸಂಬಂಧ ಹೊಂದಿದ್ದು, ಈ ಸಂಬಂಧಗಳ ವ್ಯವಸ್ಥಿತವಾದ ಅಧ್ಯಯನವು ಮಾನವನ ಇತಿಹಾಸದ ಹಲವಾರು ಮುಖಗಳನ್ನು ತಿಳಿಸುವುದು. ಹಲವು ವಿದ್ವಾಂಸರು ಹೇಳುವಂತೆ ಇತಿಹಾಸವು ಸಮಾಜ ವಿಜ್ಞಾನಗಳ ಕೇಂದ್ರ ವಿಷಯವಾಗಿದ್ದು, ಇದರ ಬೆಳವಣಿಗೆಗೆ ಇತರೇ ವಿಜ್ಞಾನಗಳೊಂದಿಗೆ ಒಳ್ಳೆಯ ಸಂಬಂಧವಿರಬೇಕೆಂದು ಅವರೆಲ್ಲರ ವಾದ. ಒಟ್ಟಾಗಿ ಹೇಳಬೇಕೆಂದರೆ ಇತಿಹಾಸವು ಇತರೆ ಸಮಾಜ ವಿಜ್ಞಾನಗಳೊಂದಿಗೆ ಹೊಂದಿರುವ ಪ್ರಮುಖ ಸಂಬಂಧವನ್ನು ಹೊಂದಿದೆ ಎಂದು ಹೇಳಬಹುದು. ಈ ಅಧ್ಯಯನವನ್ನು ಸವಿಸ್ತಾರವಾಗಿ ನೋಡೋಣ.

## 4.2 ಇತಿಹಾಸ ಮತ್ತು ಸಮಾಜ ವಿಜ್ಞಾನಗಳೊಂದಿಗಿನ ಸಂಬಂಧ

ಇತಿಹಾಸವು ಹತ್ತು ಹಲವು ವಿಷಯಗಳನ್ನು ಅಧ್ಯಯನ ಮಾಡುವ ವಿಷಯವಾಗಿರುವುದರಿಂದ, ಇದು ಕಲೆ ಮತ್ತು ವಿಜ್ಞಾನದ ಅನೇಕ ವಿಷಯಗಳೊಂದಿಗೆ ಸಂಬಂಧ ಹೊಂದಿರುವುದು ಕಂಡು ಬರುತ್ತದೆ. ಇತಿಹಾಸವು ಭೂಗೋಳಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಸಾಹಿತ್ಯ ಮುಂತಾದ ವಿಷಯಗಳೊಂದಿಗೆ ಸಂಬಂಧವನ್ನು ಹೊಂದಿದೆ. ಇತ್ತೀಚಿನ ವರ್ಷಗಳಲ್ಲಿ ಒಂದೇ ರೀತಿಯ ಸಂಶೋಧನಾ ವಿಧಾನಗಳು ಅಭಿವೃದ್ಧಿಯಾಗಿರುವುದರಿಂದ ಇತಿಹಾಸವು ವಿಜ್ಞಾನಗಳೊಂದಿಗೂ ಸಂಬಂಧವನ್ನು ಹೊಂದಿದೆಯೆಂಬುದು ತಿಳಿಯುತ್ತದೆ. ಈಗ ಇತಿಹಾಸವು ಸಮಾಜ ವಿಜ್ಞಾನಗಳೊಂದಿಗೆ ಹೊಂದಿರುವ ಸ್ನೇಹ ಸಂಬಂಧಗಳನ್ನು ತಿಳಿಯೋಣ.

### *4.2.1 ಇತಿಹಾಸ ಮತ್ತು ಭೂಗೋಳಶಾಸ್ತ್ರ*

ಇತಿಹಾಸ ಮತ್ತು ಭೂಗೋಳಶಾಸ್ತ್ರಗಳ ಬಹಳಷ್ಟು ಹತ್ತಿರದ ಸಂಬಂಧವನ್ನು ಹೊಂದಿರುವುದು ಜಾಗತಿಕ ವಿಷಯವಾಗಿದೆ. ಇತಿಹಾಸದ ಕೆಲವು ವಿಭಾಗಗಳ ಇತಿಹಾಸವನ್ನು ಭೂಗೋಳಶಾಸ್ತ್ರದ ಪ್ರಾಥಮಿಕ ಜ್ಞಾನವಿಲ್ಲದೇ ಅಧ್ಯಯನ ಮಾಡುವುದು ಬಹಳ ಕಷ್ಟಕರವಾದ ಕೆಲಸ. ಭೂಗೋಳಶಾಸ್ತ್ರವು ಇತಿಹಾಸದ ಅಧ್ಯಯನಕ್ಕೆ ಬಹಳಷ್ಟು ಉಪಯೋಗವೆನಿಸಿದೆ. ಇತಿಹಾಸ ಅಧ್ಯಯನಕ್ಕೆ ಕಾಲಗಣನಾಶಾಸ್ತ್ರವು ಒಂದು ಕಣ್ಣಾದರೆ ಭೂಗೋಳಶಾಸ್ತ್ರ ಅತ್ಯವಶ್ಯಕವಾದ ಇನ್ನೊಂದು ಕಣ್ಣಾಗಿದೆಯೆನ್ನಬಹುದು. ಇತಿಹಾಸ ಅಧ್ಯಯನಕ್ಕೆ ಕಾಲ ಮತ್ತು ಪ್ರದೇಶಗಳು ಅತ್ಯಾವಶ್ಯಕ ಅಂಶಗಳಾಗಿದ್ದು, ಇತಿಹಾಸಕ್ಕೆ ವಸ್ತುನಿಷ್ಠೆ ತಂದಿದೆ. ಇತಿಹಾಸವು ಒಂದು ನಾಟಕವಾಗಿದ್ದು, ಇದರ ಅನಾವರಣಕ್ಕೆ ಭೂಗೋಳಶಾಸ್ತ್ರವು ನಾಟಕದ ವೇದಿಕೆಯಾಗಿ ಕಾರ್ಯ ನಿರ್ವಹಿಸುವುದು. ಇವೆರಡರ ನಡುವಿನ ಗಾಢವಾದ ಸಂಬಂಧವನ್ನು ತಿಳಿಸುತ್ತದೆ. ಇತಿಹಾಸದಲ್ಲಿ ಭೂಗೋಳಶಾಸ್ತ್ರದ ಭೌಗೋಳಿಕ ಅಂಶಗಳ ಯಾವುದೇ ದೇಶದ ಏಳ್ಗೆಗೆ ಕಾರಣವಾಗುವುದಲ್ಲದೇ, ಆದೇಶದ ನೈಸರ್ಗಿಕ ಅಂಶಗಳು ಸಂಸ್ಕೃತಿ ಅಥವಾ ನಾಗರೀಕತೆಯೂ ಔನ್ನತ್ಯವನ್ನು ಸಾಧಿಸಲು ಕಾರಣವಾಗಿದ್ದು ಇದು ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ನಿಜವಾಗಿರುವುದು ಇತಿಹಾಸದ ಅಧ್ಯಯನದಿಂದ ತಿಳಿದುಬರುತ್ತದೆ. ಭೌಗೋಳಿಕ

ಅಂಶಗಳು ಹವಾಗುಣ, ಪ್ರಾದೇಶಿಕ ಸಮತೋಲನ, ನೀರಿನ ತೇವಾಂಶ, ಉಷ್ಣತೆ ಮುಂತಾದವು ಇತಿಹಾಸದ ಘಟನೆಗಳ ಮೇಲೆ ಪ್ರಭಾವ ಬೀರುವ ಅಂಶಗಳಾಗಿವೆ. ಹವಾಗುಣದ ಸಿದ್ಧಾಂತವನ್ನು ಅರಿಸ್ಟಾಟಲ್ ಮತ್ತು ಮಾಂಟೆಸ್ಕ್ಯೂರವರು ಪ್ರತಿಪಾದಿಸಿದ್ದಾರೆ. ಇತಿಹಾಸದ ಆರಂಭದ ಘಟನೆಗಳು ಶೀತ ಪ್ರದೇಶದಲ್ಲಿ ನಡೆದಿರುವುದು ಭೌಗೋಳಿಕ ಅಂಶಗಳ ಪ್ರಭಾವವನ್ನೂ ತಿಳಿಸುತ್ತದೆ. ಈ ಭೂಗರ್ಭಶಾಸ್ತ್ರ ಮತ್ತು ಭೂಗೋಳಶಾಸ್ತ್ರಗಳ ಕಾರಣದಿಂದಾಗಿಯೆ ಮಾನವನ ವಿಕಾಸವಾದವು ರೂಪುಗೊಂಡಿದ್ದು ಮಾನವನ ಅಸ್ತಿತ್ವಕ್ಕೆ ಒಂದು ಕಾರಣವಾಗಿದೆಯೆಂದು ಹೇಳಬಹುದು.

ಇತಿಹಾಸದ ಅಧ್ಯಯನಕ್ಕೆ ಭೂಗೋಳಶಾಸ್ತ್ರದ ಪ್ರಭಾವ ಎಷ್ಟಿದೆಯೆಂದರೆ ಯಾವುದೇ ಇತಿಹಾಸದ ಅಧ್ಯಯನ ತೆಗೆದುಕೊಂಡರೂ ಆ ಇತಿಹಾಸಕ್ಕೆ ಭೌಗೋಳಿಕ ಅಂಶಗಳ ಪ್ರಭಾವಗಳ ಬಗ್ಗೆ ಒಂದು ಅಧ್ಯಾಯವನ್ನು ಮೀಸಲಾಗಿಸಿರುವುದೇ ಮುಖ್ಯ ಸಾಕ್ಷಿಯಾಗಿದೆ. ಬ್ರಿಟನ್, ಜಪಾನ್ ಮತ್ತು ಗ್ರೀಸ್ ಮುಂತಾದ ರಾಷ್ಟ್ರಗಳ ಸ್ವಾಭಾವಿಕ ಸಿದ್ಧತೆಯು ಸಮುದ್ರ ತೀರ ಪ್ರದೇಶಗಳಿಂದ ಬೇರೆಯಾಗಿರುವುದೇ ಇವುಗಳ ಇತಿಹಾಸದ ಮೇಲೆ ಪ್ರಬಲ ಪರಿಣಾಮವನ್ನು ಮಾಡಿರುವುದು ಗೊತ್ತಾಗುತ್ತದೆ. ಈ ಕಾರಣದಿಂದಾಗಿಯೇ ಈ ದೇಶಗಳು ತಮ್ಮ ನೌಕಾ ನೆಲೆಗಳನ್ನು ಬಲಪಡಿಸಿಕೊಂಡು ಸಾಮ್ರಾಜ್ಯಗಳನ್ನು ಸ್ಥಾಪಿಸುವ ಕಾರ್ಯಗಳಲ್ಲಿ ತೊಡಗಲು ಕಾರಣವಾಯಿತೆನ್ನಬಹುದು. ಇನ್ನು ಭಾರತದ ಹಿಮಾಲಯ ಪರ್ವತ ಮತ್ತು ಅಸ್ಸಾಮಿನ ಕಾಡುಗಳು ಉತ್ತರ ಮತ್ತು ಪೂರ್ವ ಭಾಗದ ಪ್ರದೇಶಗಳನ್ನು ಶತ್ರುಗಳ ಧಾಳಿಗಳಿಂದ ರಕ್ಷಣೆ ಮಾಡಿದ್ದುದು ತಿಳಿಯುತ್ತದೆ. ಗೋಬಿ ಮತ್ತು ಮಂಗೋಲಿಯನ್ ಮರುಭೂಮಿಗಳು ಚೀನಾ ದೇಶವನ್ನು ಬೇರ್ಪಡೆಯಾಗಿ ಇಡಲು ಕಾರಣವಾಗಿವೆ. ಇನ್ನು ರಷ್ಯಾದ ಕೊರೆಯುವ ಚಳಿಯು ಆ ದೇಶವನ್ನು ಶತ್ರು ರಾಷ್ಟ್ರಗಳು ಮತ್ತು ನೆಪೋಲಿಯನ್ ಮತ್ತು ಹಿಟ್ಲರ್‌ರಂತಹವರಿಂದ ರಕ್ಷಿಸಿ, ಶತ್ರುಗಳು ಸೋಲನ್ನು ಅನುಭವಿಸಲು ಕಾರಣವಾಗಿದ್ದು ಇತಿಹಾಸ, ಈಜಿಪ್ಟಿನ ಭೂಗೋಳ ಆ ದೇಶದ ಪ್ರಾಚೀನ ನಾಗರೀಕತೆಯ ಅವಶೇಷಗಳನ್ನು ರಕ್ಷಿಸಿ ಇಡಲು ಕಾರಣವಾಗಿದೆ. ಸಿಂಧೂ ಮತ್ತು ಗಂಗಾ ನದಿಗಳು ನಮ್ಮ ದೇಶದ ಇತಿಹಾಸದ ಪ್ರಭಾವವನ್ನು ಬೀರಿರುವುದು ಎಲ್ಲರಿಗೂ ಗೊತ್ತಿದೆ. 15 ಮತ್ತು 16 ನೆ ಶತಮಾನಗಳು ಭೌಗೋಳಿಕ ಅನ್ವೇಷಣೆಗಳು ಮತ್ತು ಕೊಲಂಬಸ್‌ನ ಅಮೆರಿಕಾದ ಅನ್ವೇಷಣೆ, ಭಾರತಕ್ಕೆ ಹೊಸ ಮಾರ್ಗವನ್ನು ವಾಸ್ಕೋಡಗಾಮ ಕಂಡುಹಿಡಿದದ್ದು ಇವೆಲ್ಲವೂ ಭೌಗೋಳಿಕ ಅಂಶಗಳ ಪ್ರಭಾವವನ್ನು ಸ್ಪಷ್ಟಪಡಿಸುತ್ತದೆ. ನೆರೆಯ ಹಾವಳಿ ಬರಗಾಲ, ಭೂಕಂಪ, ಖನಿಜಗಳ ಸಂಪತ್ತು, ಮಣ್ಣಿನ ಫಲವತ್ತತೆ, ನದಿ, ಹುಲ್ಲುಗಾವಲು, ತೀರ ಪ್ರದೇಶ ಮುಂತಾದ ಅಂಶಗಳು ಹಲವು ಇತಿಹಾಸದ ಘಟನೆಗಳ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಿರುವುದು ಕಂಡು ಬರುತ್ತದೆ. ಇದರಿಂದಾಗಿ ಇತಿಹಾಸಕಾರರಿಗೆ ಇತಿಹಾಸದ ರಚನೆ, ಭೂಗೋಳದ ಅವಶ್ಯಕತೆ ಎಷ್ಟಿದೆ ಎಂಬುದು ತಿಳಿಯುತ್ತದೆ.

### *4.2.1 ಇತಿಹಾಸ ಮತ್ತು ರಾಜ್ಯಶಾಸ್ತ್ರ*

ಇತಿಹಾಸ ಮತ್ತು ರಾಜ್ಯಶಾಸ್ತ್ರಗಳು ಪರಸ್ಪರ ಸಂಬಂಧಗಳನ್ನು ಹೊಂದಿದ್ದು ಇದನ್ನು ರಾಜ್ಯಶಾಸ್ತ್ರಜ್ಞ ಪ್ರೊ. ಸೀಲೆಯವರು ಹೀಗೆ ತಿಳಿಸುತ್ತಾರೆ. "ರಾಜ್ಯಶಾಸ್ತ್ರವಿಲ್ಲದ ಇತಿಹಾಸವು ಹಣ್ಣಿಲ್ಲದಂತೆಯೂ ಇತಿಹಾಸವಿಲ್ಲದ ರಾಜ್ಯಶಾಸ್ತ್ರವು ಬೇರಿಲ್ಲದಂತೆ. ಪ್ರೊ. ಆಕ್ಟನ್‌ರವರು ಇವೆರಡು ವಿಷಯಗಳ ಸಂಬಂಧವನ್ನೂ "ರಾಜ್ಯಶಾಸ್ತ್ರವೆಂಬ ಒಂದು ವಿಷಯವನ್ನು ನದಿಯ ಮರಳಿನಲ್ಲಿ ಇಟ್ಟಂತಾಗಿದೆ" ಎನ್ನುತ್ತಾರೆ. ಇವರ ಪ್ರಕಾರ ಇತಿಹಾಸವು ಒಂದು ನದಿಯಂತಿದ್ದು ಇತರೇ ವಿಜ್ಞಾನಗಳು ನದಿಯೊಳಗಿನ ಕಣಗಳಂತೆ. ಇತಿಹಾಸದಲ್ಲಿ ರಾಜಕೀಯ ಅಂಶಗಳ ನಿರೂಪಣೆಯನ್ನು ರಾಜಕೀಯ ಸಂಸ್ಥೆಗಳ ಅಸ್ತಿತ್ವ, ಬೆಳವಣಿಗೆ ಮುಂತಾದವುಗಳನ್ನು ಅಧ್ಯಯನ ಮಾಡಿಯೇ ತಿಳಿಯುತ್ತೇವೆ. ರಾಜಕೀಯ ತತ್ವಜ್ಞಾನಿಗಳಾದ ಪ್ಲೇಟೋ ಮತ್ತು ಅರಿಸ್ಟಾಟಲ್‌ರವರು ತಮ್ಮ ರಾಜಕೀಯ ದರ್ಶನ ಅಥವಾ ಚಿಂತನೆಗಳನ್ನು ಗ್ರೀಕ್ ಪ್ರಪಂಚದ ರಾಜಕೀಯ ಸಂಸ್ಥೆಗಳ ಇತಿಹಾಸ ಅಧ್ಯಯನದಿಂದಲೇ ಪಡೆದುಕೊಂಡಿರುವುದನ್ನು ತಿಳಿಸುತ್ತಾರೆ. ಇತಿಹಾಸದ ಮುನ್ನಡೆಯು ರೂಸ್ಸೋನ ಸಾಮಾಜಿಕ ಒಡಂಬಡಿಕೆ ಮತ್ತು ಜಾನ್ ಆಸ್ಟಿನ್‌ರ ಪರಮಾಧಿಕಾರದ ಅಧ್ಯಯನದ ಪ್ರಭಾವದಿಂದ ನಡೆದಿರುವುದು ಕಂಡುಬರುತ್ತದೆ. ಈ ಎರಡೂ ವಿಜ್ಞಾನಗಳ ಸ್ನೇಹ ಸಂಬಂಧವನ್ನು ಹಲವು ವಿದ್ವಾಂಸರು ಉದಾಹರಣೆಗಳೊಂದಿಗೆ ವಿವರಿಸುವುದು. ಇವುಗಳ ಅನ್ಯೋನ್ಯತೆಗೆ ಸಾಕ್ಷಿ. ಇತಿಹಾಸವು ರಾಜಕೀಯ ಅಂಶಗಳು ಮತ್ತು ರಾಜಕೀಯ ಸಂಸ್ಥೆಗಳ ಜೊತೆಗೆ ನೇರವಾದ ಸಂಬಂಧ ಹೊಂದಿಲ್ಲ. ಹಾಗೆಯೇ ರಾಜ್ಯಶಾಸ್ತ್ರ ಯುದ್ಧ ಮತ್ತು ರಾಯಭಾರತ್ವದ ಜೊತೆಗೆ ನೇರಸಂಬಂಧವನ್ನು ಹೊಂದಿಲ್ಲ.

ಇತಿಹಾಸವು ಕಾಲಗಣನೆಗೆ ಪ್ರಾಮುಖ್ಯತೆಯನ್ನು ನೀಡುತ್ತದೆ. ಆದರೆ ರಾಜ್ಯಶಾಸ್ತ್ರ ಪ್ರಾಮುಖ್ಯತೆಯನ್ನು ನೀಡಿಲ್ಲ. ಇತಿಹಾಸವು ಘಟನೆಗಳನ್ನು ಅಧ್ಯಯನ ಮಾಡಿದರೆ ರಾಜ್ಯಶಾಸ್ತ್ರವು ಸಂಸ್ಥೆಗಳ ಬಗ್ಗೆ ಅಧ್ಯಯನ ಮಾಡುತ್ತದೆ. ಆದರೆ ಪರಿಶೋಧನಾ ವಿಷಯದಲ್ಲಿ ಎರಡೂ ಶಾಸ್ತ್ರಗಳು ಒಂದೇ ವಿಧಾನವನ್ನು ಅನುಸರಿಸುತ್ತವೆಯೆಂದು ಹೇಳಬಹುದು.

### *4.2.3 ಇತಿಹಾಸ ಮತ್ತು ಅರ್ಥಶಾಸ್ತ್ರ*

ಇತಿಹಾಸವು ಅರ್ಥಶಾಸ್ತ್ರದೊಂದಿಗೆ ಒಳ್ಳೆಯ ಸಂಬಂಧವನ್ನು ಹೊಂದಿದೆ. ಕಾಂಡೋರ್ಸೆಟ್, ಬಕಲ್, ಕಾಮ್ಟೆ, ಮಾರ್ಕ್ಸ್ ಮತ್ತು ಬ್ಯೂರಿಯವರ ಕಾಲದಿಂದಲೂ ಇತಿಹಾಸದ ಪ್ರಭಾವವು ಅರ್ಥಶಾಸ್ತ್ರದ ಬೆಳವಣಿಗೆಯ ಮೇಲೆ ಖಂಡಿತಾ ಆಗಿದೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. 1917 ರ ರಷ್ಯಾ ಕ್ರಾಂತಿಯ ನಂತರ ಅರ್ಥಶಾಸ್ತ್ರವು ಇತರೇ ವಿಷಯಗಳಿಗಿಂತ ಹೆಚ್ಚಿನ ಪ್ರಾಶಸ್ತ್ಯ ಪಡೆದಿರುವುದು ಕಂಡುಬರುತ್ತದೆ. ಮನುಷ್ಯನ ಜೀವನದ ಚಟುವಟಿಕೆಗಳು ಆರ್ಥಿಕ ಚಟುವಟಿಕೆಗಳಲ್ಲಿ ಹೆಚ್ಚಿನ ಪ್ರಾಮುಖ್ಯತೆ ಪಡೆದಿದ್ದು, ರಾಷ್ಟ್ರಗಳ ಅಭಿವೃದ್ಧಿ ಮತ್ತು ಆದೇಶದ ಸಂಸ್ಕೃತಿಯ ಬೆಳವಣಿಗೆಯನ್ನು ಸೂಚಿಸುವುದು ಇತಿಹಾಸದ ಮುಖ್ಯ ಕರ್ತವ್ಯವಾಗಿಸುವುದರಿಂದ ಅರ್ಥಶಾಸ್ತ್ರವು ಇತಿಹಾಸದ ಕಡೆಗೆ ಸಾಕಷ್ಟು ಗಮನ ನೀಡಿದೆಯೆಂದೆ ಹೇಳಬಹುದು. ಈ ಅಧ್ಯಯನ ಅವಶ್ಯಕತೆ ಬಹಳ ಅವಶ್ಯಕವೆಂಬುದನ್ನು ಅರ್ಥಶಾಸ್ತ್ರ ಮನಗಂಡಿದೆ. ಇತಿಹಾಸದ ಅನೇಕ ಘಟನೆಗಳಾದ ಯುದ್ಧ ಅಥವಾ ದಿಗ್ವಿಜಯ ವಸಾಹತು ನಿರ್ಮಾಣ ಅಥವಾ ಸಾಮ್ರಾಜ್ಯ ಸ್ಥಾಪನೆ ಮುಂತಾದವು. ಆರ್ಥಿಕ ಮೂಲ ಉದ್ದೇಶದಿಂದ ಕೂಡಿದ್ದುವೆಂಬ ಅಧ್ಯಯನವೂ ಸಹ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿದೆ. ಭಾರತೀಯ ಇತಿಹಾಸಕಾರರಾದ ಹಿರೇನ್ ಮುಖರ್ಜಿ, ಪಾಮೆದತ್, ಡಿ.ಡಿ. ಕೋಸಾಂಬಿ ಮಹಮ್ಮದ್ ಹಬೀಬ್ ಮುಂತಾದವರು ಮಾರ್ಕ್ಸ್‌ನ ಸಿದ್ಧಾಂತದಿಂದ ಪ್ರಭಾವಿತರಾಗಿ, ಇತಿಹಾಸದ ಘಟನೆಗಳನ್ನು ಈ ಸಿದ್ಧಾಂತದ ಆಧಾರದಲ್ಲಿ ವಿಶ್ಲೇಷಣೆ ಮಾಡಿದ್ದಾರೆ. ಇವರು ಆರ್ಥಿಕ ಬಲಗಳ ಮೇಲಿನ ವೃತ್ತಿನಿರತ ಜ್ಞಾನವು ಇತಿಹಾಸದ ವಿಷಯಗಳನ್ನು ಹೊಸ ಬೆಳಕಿನೊಂದಿಗೆ ನೀಡಿರುವುದು ಕಂಡುಬರುತ್ತದೆ. ಆರ್ಥಿಕ ವಿವರಣೆಯ ಮೂಲಕ ಸಮಾಜದ ಬೆಳವಣಿಗೆ ಮತ್ತು ಮಾನವನ ಆಶೋತ್ತರಗಳು ಇತಿಹಾಸದ ಮೂಲ ಅಂಶಗಳ ಅವಶ್ಯಕತೆಯ ಮೇಲೆ ಹಾದು ಹೋಗಿರುವುದನ್ನು ನಾವು ಕಾಣುತ್ತೇವೆ. ಗುಲಾಮ ಪದ್ಧತಿ, ಬಂಡವಾಳ ಸಾಹಿತ್ಯ, ಸಮಾಜವಾದ, ಊಳಿಗಮಾನ್ಯ ಪದ್ಧತಿ, ಸಾಮ್ರಾಜ್ಯ ಶಾಹಿತ್ವ ಮುಂತಾದವುಗಳು ಮಾನವನ ಇತಿಹಾಸದ ಪ್ರಮುಖ ಅಂಶಗಳಾಗಿವೆಯೆಂಬುದು ಅಧ್ಯಯನದಿಂದ ಕಂಡುಬರುತ್ತಿದೆ.

ಇಂದಿನ ಆಧುನಿಕ ಕಾಲದಲ್ಲಿ ಇತಿಹಾಸವು ಆರ್ಥಿಕ ಸಮಸ್ಯೆಗಳೊಂದಿಗೆ ಎಷ್ಟೊಂದು ನಿಕಟ ಸಂಬಂಧವನ್ನಿಟ್ಟುಕೊಂಡಿದೆಯೆಂದರೆ ಸ್ಪಷ್ಟವಾದ ಆರ್ಥಿಕ ಸಮಸ್ಯೆಗಳ ಜ್ಞಾನವಿಲ್ಲದೇ ಇತಿಹಾಸವನ್ನು ಪುನರ್ರಚಿಸುವುದು ಬಹಳಷ್ಟು ಕಷ್ಟವಾಗುತ್ತದೆ. ಇಪ್ಪತ್ತನೇ ಶತಮಾನದ ಇತಿಹಾಸವನ್ನು ಪುನರ್ರಚಿಸುವುದು ಬಹಳಷ್ಟು ಕಷ್ಟವಾಗುತ್ತದೆ. ಇಪ್ಪತ್ತನೇ ಶತಮಾನದ ಇತಿಹಾಸವನ್ನು ರಚಿಸುವ ಇತಿಹಾಸಕಾರರು, 20 ನೇ ಶತಮಾನದ 30 ರ ದಶಕದ ವಿಷಯ, ನ್ಯೂಡೀಲ್‌ನ ರಾಜಕೀಯ ಅಥವಾ 2ನೇ ಮಹಾಯುದ್ಧದ ನಂತರದ ಆರ್ಥಿಕ ಮತ್ತು ವಾಣಿಜ್ಯ ವ್ಯವಸ್ಥೆಗಳು ಮುಂತಾದುವನ್ನು ಅಧ್ಯಯನ ನಡೆಸದೇ ಬರೆಯುವ ಇತಿಹಾಸವು ಪರಿಪೂರ್ಣವಾಗುವುದಿಲ್ಲ ಎಂಬುದು ಕಂಡು ಬರುತ್ತದೆ. ಈ ಎಲ್ಲಾ ವಿಷಯಗಳನ್ನು ಅಧ್ಯಯನ ನಡೆಸಿದ ನಂತರ ಈ ಎರಡೂ ವಿಷಯಗಳು ಪರಸ್ಪರ ಒಳ್ಳೆಯ ಬಾಂಧವ್ಯವನ್ನು ಹೊಂದಿವೆಯೆಂದು ಕಂಡು ಬರುತ್ತದೆ.

### *4.2.4 ಇತಿಹಾಸ ಮತ್ತು ಸಮಾಜಶಾಸ್ತ್ರ*

ಇತಿಹಾಸ ಮತ್ತು ಸಮಾಜಶಾಸ್ತ್ರ ವಿಷಯಗಳ ಪರಸ್ಪರ ಸಂಬಂಧ ಹೊಂದಿರುವುದು ಕಂಡುಬರುತ್ತದೆ. ಸಮಾಜಶಾಸ್ತ್ರಜ್ಞರಾದ ಆಗಸ್ಟ್ ಕಾಮ್ಟೆ ಮುಂತಾದವರು ಇತಿಹಾಸ ಅಧ್ಯಯನದ ಬೆಳವಣಿಗೆಯ ಪ್ರಮುಖ ವ್ಯಕ್ತಿಗಳು. ಇದೇ ರೀತಿಯಲ್ಲಿ ಪ್ರಖ್ಯಾತ ಇತಿಹಾಸಕಾರರಾದ ಕಾರ್ಲ್‌ಮಾರ್ಕ್ಸ್ ಒಬ್ಬ ಪ್ರಖ್ಯಾತ ಸಮಾಜಶಾಸ್ತ್ರಜ್ಞ ಕೂಡ. ಇತಿಹಾಸ ಮತ್ತು ಸಮಾಜಶಾಸ್ತ್ರಗಳು ಸಮಾಜದಲ್ಲಿ ಮಾನವನ ಅಧ್ಯಯನವನ್ನು ನಡೆಸುವ ವಿಷಯಗಳಾಗಿವೆ. ಈ ಎರಡೂ ಶಾಸ್ತ್ರಗಳಲ್ಲಿ ಇರುವ ಭಿನ್ನತೆಯೆಂದರೆ ಅವೆರಡೂ ವಿಷಯಗಳ ಪ್ರಸ್ತಾಪಗಳಲ್ಲಿ ಮಾತ್ರ. ಮೂಲವಾಗಿ ಸಮಾಜಶಾಸ್ತ್ರ ಮತ್ತು ಇತಿಹಾಸಗಳೆರಡೂ ಅತ್ಯಂತ ಸಮೀಪವಾಗಿದ್ದವು. ಇತ್ತೀಚೆಗೆ ಈ

ಎರಡೂ ವಿಷಯಗಳು ಬೇರೆ ಬೇರೆಯಾಗಿದ್ದರೂ ಈ ಎರಡೂ ವಿಷಯಗಳು ಒಂದಕ್ಕೊಂದು ಪರಸ್ಪರ ಸಂಬಂಧವಿರುವುದು ಗೊತ್ತಾಗಿ ಹಲವು ವಿದ್ವಾಂಸರು ಇವುಗಳ ಅಧ್ಯಯನ ನಡೆಸಿದರು. ಈ ಎರಡೂ ವಿಷಯಗಳ ಅಧ್ಯಯನವನ್ನು ಒಂದಾಗಿ ಮಾಡುವ ಪ್ರಯತ್ನವನ್ನು ಮಾಡಿದವರಲ್ಲಿ ಎಮಿಲಿ ಡರ್ಖೀಮ್ ಮೊದಲಿಗನಾಗಿ, ಐತಿಹಾಸಿಕ ಅಂಶಗಳ ಅಧ್ಯಯನದಲ್ಲಿ ಪ್ರಾಯೋಗಿಕ ಹೋಲಿಕೆ ನಿಯಮ ಮುಂತಾದವುಗಳನ್ನು ಅಳವಡಿಸುವುದು ಪ್ರಮುಖ ಅಂಶವಾಗಿರುವುದನ್ನು ಇವನು ಪ್ರತಿಪಾದಿಸಿದನು. ಇನ್ನೊಬ್ಬ ಪ್ರಖ್ಯಾತ ಸಮಾಜಶಾಸ್ತ್ರಜ್ಞ ಮ್ಯಾಕ್ಸ್ ವೆಬ್ಬರ್‌ರವರು ಇತಿಹಾಸದ ಅಧ್ಯಯನದಲ್ಲಿ ಪ್ರಮುಖ ಪ್ರಭಾವವನ್ನು ಬೀರಿರುವುದನ್ನು ತೋರಿಸಿರುವರು. ವೆಬರ್ ಕೆಲವು ಪ್ರಮುಖ ಸಂಘ ಸಂಸ್ಥೆಗಳ ಅಧ್ಯಯನದ ಬಗ್ಗೆ ಅಧ್ಯಯನ ನಡೆಸಿದರು. ಹೀಗೆ ಇತಿಹಾಸ ಮತ್ತು ಸಮಾಜಶಾಸ್ತ್ರ ವಿಷಯಗಳು ಒಂದಕ್ಕೊಂದು ಸಂಬಂಧ ಹೊಂದಿರುವುದು ಕಾಣುತ್ತದೆ.

ಸಮಾಜಶಾಸ್ತ್ರವು ಇತಿಹಾಸವನ್ನು, ಬಹಳಷ್ಟು ಅವಲಂಬಿಸಿದೆ. ಸಮಾಜಶಾಸ್ತ್ರವು ಇತಿಹಾಸವನ್ನು ಹೆಚ್ಚಾಗಿ ಅವಲಂಬಿಸಿರುವುದು ಸಾಕಷ್ಟು ಕಂಡು ಬರುವುದಿಲ್ಲ. ಸಮಾಜಶಾಸ್ತ್ರ ಸಂಘ ಸಂಸ್ಥೆಗಳ ಬಗ್ಗೆ ಅಧ್ಯಯನ ಮಾಡುವುದಾಗಿರುವುದಲ್ಲದೇ ಮನುಷ್ಯ ಸಮಾಜ, ಇತಿಹಾಸದ ಸಂಪ್ರದಾಯ ಮತ್ತು ಪ್ರವೃತ್ತಿಗಳು, ಸಮಾಜದ ಅಧ್ಯಯನಗಳು ಮತ್ತು ಕ್ರಿಯಾತ್ಮಕ ಇವುಗಳು ನಿದ್ರಾವಸ್ಥೆಯ ಸಮಾಜದ ಅಧ್ಯಯನವಾಗಿರದೇ ಸಾಮಾಜಿಕ ಬದಲಾವಣೆ ಮತ್ತು ಅಭಿವೃದ್ಧಿಯನ್ನು ಅಧ್ಯಯನ ಮಾಡುವುದಾಗಿದೆ. ಇದು ಗುಂಪುಗಳ ಅಧ್ಯಯನ ಕಾರಣತಾ ವಾದವನ್ನು ಅಧ್ಯಯನ ಮಾಡುವುದು ಸಮಾಜಶಾಸ್ತ್ರದ ಪ್ರಮುಖ ಕಾರ್ಯವಾಗಿದೆ. ಇದಲ್ಲದೇ ಸಮಾಜಶಾಸ್ತ್ರವು ಸಾಮಾಜಿಕ ವರ್ತನೆಯ ಮಾದರಿಗಳು, ಜಾನಪದ, ಕುಟುಂಬದ ಜೀವನ ಸಂಪ್ರದಾಯಗಳು, ಉತ್ಸವಗಳು, ಹಬ್ಬಗಳು ಮುಂತಾದ ಸಾಮಾಜಿಕ ವಿಷಯಗಳನ್ನು ಅಧ್ಯಯನ ಮಾಡುವುದು. ಆದರೆ ಹಿಂದಿನ ಘಟನೆಗಳ ಬಗ್ಗೆ ಅಧ್ಯಯನ ನಡೆಸುವುದು ಇತಿಹಾಸಕಾರರ ಕಾರ್ಯ. ಈ ಸಾಮಾಜಿಕ ಸ್ಥಿತಿಗಳ ಜ್ಞಾನವಿಲ್ಲದೇ ಮಾಡಿದ ಇತಿಹಾಸದ ಅಧ್ಯಯನವು ಪರಿಪೂರ್ಣವಾಗುವುದಿಲ್ಲ ಮತ್ತು ಇತಿಹಾಸಕಾರನು ಸಾಮಾಜಿಕ ವಿಷಯಗಳನ್ನು ಅಧ್ಯಯನ ನಡೆಸುವಾಗ ಸಾಮಾಜಿಕ ವಿಷಯಗಳನ್ನು ತಿಳಿದುಕೊಂಡಿದ್ದು ಅಧ್ಯಯನ ಮಾಡಿದರೆ ಸರಿಯಾದ ಸಂಶೋಧನೆಯಾಗುತ್ತದೆ. ಟ್ರೆವೆಲ್ಯಾನ್‌ರವರ ಸೋಷಿಯಲ್ ಹಿಸ್ಟರಿ ಆಫ್ ಇಂಗ್ಲೆಂಡ್ ಒಂದು ಹಲವು ರೀತಿಯ ಸಾಮಾಜಿಕ ಚಟುವಟಿಕೆಗಳ ಬಗ್ಗೆ ಮಾಡಿದ ಅಧ್ಯಯನವು ಅಂದಿಮ ಸಮಾಜವು ಹೇಗಿದ್ದಿತು ಎಂಬುದನ್ನು ತಿಳಿಸುವ ಒಂದು ಜನಾನುರಾಗಿ ಇತಿಹಾಸವಾಗಿ ಮಾಡಿ ಬಂದಿದೆ. ಆದರೆ ಭಾರತೀಯ ಇತಿಹಾಸಕಾರರು ರಾಜಕೀಯ ಮತ್ತು ರಾಜವಂಶಗಳ ಇತಿಹಾಸವನ್ನು ಹೆಚ್ಚಾಗಿ ಅಧ್ಯಯನ ಮಾಡಿ, ಸಾಮಾಜಿಕ ಇತಿಹಾಸವನ್ನು ಅಸಡ್ಡೆ ಮಾಡಿರುವುದು ಕಂಡು ಬರುತ್ತದೆ. ಆದರೆ ಇತ್ತೀಚೆಗೆ ಇದು ಬದಲಾವಣೆಯಾಗಿದ್ದು, ಅಮೆರಿಕಾ ಸಂಸ್ಥಾನದಲ್ಲಿರುವಂತೆ ಸಾಮಾಜಿಕ ಇತಿಹಾಸವು ಜನಾನುರಾಗಿಯಾಗುತ್ತಿದೆ.

### *4.2.5 ಇತಿಹಾಸ ಮತ್ತು ಮನೋವಿಜ್ಞಾನ*

ಇತಿಹಾಸ ಮತ್ತು ಮನೋವಿಜ್ಞಾನಗಳು ಉತ್ತಮ ಬಾಂಧವ್ಯವನ್ನು ಹೊಂದಿದೆ. ಇತಿಹಾಸಕಾರನು ಮನುಷ್ಯನ ಉದ್ದೇಶ ಮತ್ತು ಕಾರ್ಯಗಳನ್ನು ಸಮಾಜದಲ್ಲಿ ವಿಶ್ಲೇಷಣೆ ಮಾಡುವಾಗ ಅವನು ಮನೋವೈಜ್ಞಾನಿಕ ಮಾಹಿತಿಗಳನ್ನು ತಿಳಿದುಕೊಂಡಿರಬೇಕು. ಇತಿಹಾಸಕಾರನು ಆಧುನಿಕ ಮನೋವಿಜ್ಞಾನದ ಅನ್ವೇಷಣೆಯನ್ನು ತಿಳಿದುಕೊಳ್ಳದಿದ್ದರೆ ಇತಿಹಾಸದ ಕೃತಿಯು ಕೇವಲ ಒಂದು ಕಥೆಯಾಗುತ್ತದೆ. ಇತಿಹಾಸ ಮತ್ತು ಮನೋವಿಜ್ಞಾನಗಳು ಇನ್ನು ಒಂದು ವಿಧದಲ್ಲಿ ಸಂಬಂಧಿಯಾಗಿವೆ. ಅದೆಂದರೆ ವೈಯಕ್ತಿಕ ಜೀವನ ಮತ್ತು ಇತಿಹಾಸಕಾರನ ಪರಿಸರ ಅವನ ನ್ಯಾಯತೀರ್ಮಾನದ ಮೇಲೆ ನೇರ ಸಂಬಂಧವನ್ನು ಹೊಂದಿದ್ದು ಮತ್ತು ಯಾವಾಗಲೂ ಅವನ ಲೆಖ್ಖಕ್ಕೆ ವಿರೋಧಿ ಭಾವನೆ ನೀಡಿ ಅದರಲ್ಲಿ ವಸ್ತು ನಿಷ್ಠತೆಯನ್ನು ತರಲು ಸಾಧ್ಯವಿಲ್ಲದಂತೆ ಮಾಡುತ್ತದೆ. ಮನೋವಿಜ್ಞಾನವು ಇತಿಹಾಸದ ಮೇಲೆ ಇರುವುದು ಹೆಚ್ಚಾಗಿದೆ. ಇತಿಹಾಸಜ್ಞರು ಇತಿಹಾಸದಲ್ಲಿ ಯುದ್ಧದ ಮೂಲವನ್ನು ಹೇಳುತ್ತಾರೆ ಆದರೆ ಯುದ್ಧದ ಪರಿಣಾಮಗಳನ್ನು ಅಸಡ್ಡೆ ಮಾಡುತ್ತಾರೆ. ಮನೋವಿಜ್ಞಾನದ ಅಧ್ಯಯನದಿಂದ ಇತ್ತೀಚೆಗೆ ಇತಿಹಾಸಕಾರರು ಯುದ್ಧದ ಪರಿಣಾಮಗಳನ್ನು ಸಹ ಅಧ್ಯಯನ ಮಾಡಲು ತೊಡಗಿದ್ದಾರೆ. ಸಮೂಹ ಮನೋವಿಜ್ಞಾನದ ತಿಳುವಳಿಕೆಯು ಇತಿಹಾಸಕಾರನು ಅನೇಕ ಕ್ರಿಯೆಗಳಲ್ಲಿ ಜನರ ಆತ್ಮದ ಬಗ್ಗೆ ವಿಮರ್ಶೆ ಮಾಡಬಹುದಾಗಿದೆ ಹೀಗೆ ಮನೋವಿಜ್ಞಾನದ ಅಧ್ಯಯನವು ಸಂಪ್ರದಾಯಿಕ ಇತಿಹಾಸದ ಅಧ್ಯಯನಕ್ಕೆ ಕಡಿವಾಣ ಹಾಕಿದೆಯೆಂದು ಹೇಳಬಹುದು.

### 4.2.6 ಇತಿಹಾಸ ಮತ್ತು ನೀತಿಶಾಸ್ತ್ರ

ಇತಿಹಾಸವು ನೀತಿಶಾಸ್ತ್ರದೊಂದಿಗೆ ಒಳ್ಳೆಯ ಸಂಬಂಧವನ್ನು ಹೊಂದಿದೆ. ಐತಿಹಾಸಿಕ ಘಟನೆಗಳು ಮತ್ತು ಪಾತ್ರಗಳ ಅಧ್ಯಯನದ ಮೇಲೆ ಇತಿಹಾಸಕಾರನು ತೀಕ್ಷ್ಣವಾದ ನ್ಯಾಯ ತೀರ್ಮಾನವನ್ನು ಮಾಡಲಾಗದಿದ್ದರೂ ಅವನು ಆ ಕಾಲದ ನೈತಿಕ ತತ್ವಗಳು ಜನರ ನಡತೆಗಳ ಬಗ್ಗೆ ಅವುಗಳ ಪ್ರಭಾವವನ್ನು ತಿಳಿದುಕೊಳ್ಳಬೇಕು. ಆದರೂ ಹಿಂದಿನ ಕಾಲದಲ್ಲಿ ಆಧುನಿಕ ಕಾಲದಲ್ಲಿಯಂತೆ ಯಾವುದೇ ರೀತಿಯ ತತ್ವಗಳಿಲ್ಲದಿರುವುದು ತಿಳಿದು ಬರುತ್ತದೆ. ಆದರೆ ಇತ್ತೀಚೆಗೆ ಈ ವಿಷಯದ ಬಗ್ಗೆ ಸಾಕಷ್ಟು ಸಂಶೋಧನೆ ನಡೆದಿದ್ದು ಇದರ ಉಪಯೋಗವನ್ನು ಇತಿಹಾಸಕಾರನು ಅರ್ಥಮಾಡಿಕೊಂಡು ನೀತಿಶಾಸ್ತ್ರವನ್ನು ತನ್ನ ವಿಷಯದ ನಿರೂಪಣೆಯಲ್ಲಿ ಅಳವಡಿಸಿಕೊಳ್ಳಬೇಕಾಗಿದೆ.

### 4.2.7 ಇತಿಹಾಸ ಮತ್ತು ಸಂಖ್ಯಾಶಾಸ್ತ್ರ

ಇಂದಿನ ಶತಮಾನಗಳಲ್ಲಿ ಕಂಪ್ಯೂಟರಿನ ಅನ್ವೇಷಣೆಯಿಂದಾಗಿ ಸಂಖ್ಯಾಶಾಸ್ತ್ರದ ದತ್ತಾಂಶಗಳು ಮತ್ತು ಅವುಗಳ ಸಂಗ್ರಹಗಳು ಇತಿಹಾಸ ರಚನೆಯಲ್ಲಿ ಪ್ರಭಾವಯುತವಾಗಿರುವುದು ಕಂಡು ಬರುತ್ತದೆ. ಈಗಿನ ಇತಿಹಾಸಜ್ಞರು ಹಿಂದಿನ ಕಾಲದಲ್ಲಿ ಉಪಯೋಗಿಸುತ್ತಿದ್ದ "ಬಹುಸಂಖ್ಯಾತ ಜನರು" "ಹೆಚ್ಚು ಸಹಕಾರ" ಮುಂತಾದ ಪದಗಳನ್ನು ಬಿಟ್ಟು ಸರಿಯಾದ ದತ್ತಾಂಶಗಳನ್ನು ನೀಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಹೀಗೆ ಸಂಖ್ಯಾಶಾಸ್ತ್ರವು ಇತಿಹಾಸದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ. ಇದೇ ರೀತಿಯಲ್ಲಿ ಐತಿಹಾಸಿಕ ಜನಾಂಗ ಸ್ಥಿತಿಯ ಅಧ್ಯಯನ ಅಂದರೆ, ಜನರ ಹುಟ್ಟು, ಸಾವು, ಸಂತಾನೋತ್ಪತ್ತಿ ವಲಸೆ ಮುಂತಾದವುಗಳ ಬಗ್ಗೆ ಮಾಹಿತಿಯನ್ನು ಪಡೆಯುವುದು ಅಷ್ಟು ಸುಲಭವಲ್ಲ. ಆದರೂ ಇವುಗಳ ಪೂರ್ಣ ಪ್ರಮಾಣದ ಸಂಗ್ರಹವು ಇತಿಹಾಸಕಾರನು ತನ್ನ ಸಂಶೋಧನೆಯಲ್ಲಿ ಉತ್ತಮ ಫಲವನ್ನು ನೀಡುವಲ್ಲಿ ಸಂಖ್ಯಾಶಾಸ್ತ್ರದ ಉಪಯೋಗ ಅತ್ಯಾವಶ್ಯಕ.

### 4.2.8 ಇತಿಹಾಸ ಮತ್ತು ಸಾಹಿತ್ಯ

ಸಾಹಿತ್ಯವು ಇತಿಹಾಸದೊಂದಿಗೆ ಉತ್ತಮ ಸಂಬಂಧ ಹೊಂದಿದ್ದು ವಿದ್ವಾಂಸರು ಇತಿಹಾಸವು ಸಾಹಿತ್ಯದ ಒಂದು ಶಾಖೆಯೆಂದು 19 ನೇ ಶತಮಾನದವರೆಗೂ ತಿಳಿದುಕೊಂಡಿದ್ದರು. ಆದರೆ ನಂತರ ಹಲವರು ಇವುಗಳನ್ನು ಬೇರ್ಪಡಿಸಿ ಇತಿಹಾಸವನ್ನು ವಿಜ್ಞಾನದ ಮಟ್ಟಕ್ಕೆ ತರಲು ಪ್ರಯತ್ನಪಟ್ಟರು. ಆದರೂ ಇತಿಹಾಸವು ಜೀವನದ ದಾಖಲೆಯಾದರೆ ಸಾಹಿತ್ಯವು ಜೀವನದ ಚಿತ್ರವೆನಿಸಿದೆ. ವಿದ್ವಾಂಸರು ಸಾಹಿತ್ಯದಲ್ಲಿ ಎಲ್ಲವೂ ಸರಿ ಆದರೆ ಹೆಸರು ಮತ್ತು ಕಾಲವಿಲ್ಲದೇ ಇದ್ದು, ಕಾಲ ಮತ್ತು ಹೆಸರುಗಳಿಲ್ಲದೇ ಇರುವ ಇತಿಹಾಸವು ತಪ್ಪಾಗಿರುವುದನ್ನು ಕಾಣುತ್ತಾರೆ. ಈ ಎರಡೂ ವಿಷಯದ ಅಧ್ಯಯನ ಒಂದೇ ಅದು ಸಮಾಜದಲ್ಲಿಯ ವ್ಯಕ್ತಿ ಅಥವಾ ಮನುಷ್ಯ. ಇತಿಹಾಸವು ವರ್ತಮಾನ ಮತ್ತು ಭವಿಷ್ಯವನ್ನು ತಿಳಿಸುತ್ತದೆ. ಇತಿಹಾಸ ಮತ್ತು ಸಾಹಿತ್ಯ ಎರಡೂ ಮಾನವನನ್ನು ಸಂತೋಷಗೊಳಿಸುತ್ತವೆ. ಈ ಎರಡೂ ವಿಷಯಗಳು ತಮ್ಮ ವಿಷಯ ವಸ್ತುಗಳಲ್ಲಿ ಕಲ್ಪನೆಗೆ ಬಹಳಷ್ಟು ಒತ್ತು ನೀಡುತ್ತವೆ. ಇದರಿಂದ ಇತಿಹಾಸವು ಒಂದು ಕಲೆಯಾಗಿ ಕಂಡು ಬರುತ್ತದೆ. ಇವುಗಳು ಚಿತ್ರಗಳು, ಮಾದರಿಗಳು ಮತ್ತು ಪಾತ್ರಗಳನ್ನು ಸೃಷ್ಟಿ ಮಾಡಿ ತೋರಿಸುತ್ತಿದ್ದವು. ಆದರೆ ಇತಿಹಾಸದಲ್ಲಿ ವಸ್ತು ನಿಷ್ಠತೆಯನ್ನು ಹಾಗೂ ಸತ್ಯಾ ಸತ್ಯತೆಯನ್ನು ಕಾಪಾಡುವುದು ಸಂಶೋಧನಾ ವಿಧಾನದಿಂದ ಮಾತ್ರ. ಆದರೂ ಇತಿಹಾಸಕಾರನು ತನ್ನ ವಿವರಣೆಯಲ್ಲಿ ಸಾಹಿತ್ಯವನ್ನು ಬಳಸಿಕೊಳ್ಳಬಹುದು. ರ್‍ಯಾಂಕೆಯು ಇದನ್ನು ಅಲ್ಲಗಳೆದ. ಆದರೆ ಗಿಬ್ಬನ್ ಸಾಹಿತ್ಯವನ್ನು ಚೆನ್ನಾಗಿ ಬಳಸಿಕೊಂಡನು. ಹೆರಡೋಟಸ್, ಥ್ಯುಸಿಡೈಡಸ್, ಲಿವಿ, ಟ್ಯಾಸಿಟಸ್, ಮೆಕಾಲೆ, ಟ್ರಾವೆಲ್ಯಾನ್ ಮುಂತಾದವರು ತಮ್ಮ ಗ್ರಂಥಗಳಲ್ಲಿ ಸಾಹಿತ್ಯವನ್ನು ಚೆನ್ನಾಗಿ ಬಳಸಿಕೊಂಡಿದ್ದಾರೆ. ಇದರಿಂದ ಇತಿಹಾಸ ಲೇಖನದ ಸೌಂದರ್ಯ ಹೆಚ್ಚಾಗಿದೆ. ಆದ್ದರಿಂದ ಸಾಹಿತ್ಯವು ಇತಿಹಾಸಕ್ಕೆ ಹೊಂದಿಕೊಂಡಂತಿದೆ. ಹೆಚ್ಚಿನ ಸಾಹಿತ್ಯದ ಉಪಯೋಗವನ್ನು ಇತಿಹಾಸದ ಬೆಳವಣಿಗೆಗೆ ಒಳ್ಳೆಯದಲ್ಲ.

## 4.3 ಇತಿಹಾಸ ಮತ್ತು ಇತರೆ ವಿಜ್ಞಾನಗಳೊಂದಿಗೆ ಇದರ ಸಂಬಂಧ

ಇತಿಹಾಸ ಶಾಖೆಯು ಇತಿಹಾಸ ರಚನೆಯಲ್ಲಿ ಇನ್ನೂ ಹಲವಾರು ವಿಷಯಗಳು ಮತ್ತು ವಿಜ್ಞಾನಗಳ ಅವಶ್ಯಕತೆಯನ್ನು ಕಂಡುಕೊಂಡಿದೆ. ಈ ವಿಜ್ಞಾನಗಳನ್ನು ನಾವು ಅಧೀನ ವಿಷಯಗಳು ಎಂದು ಕರೆಯುತ್ತೇವೆ. ಇವುಗಳೆಂದರೆ ಕಾಲಗಣನಾಶಾಸ್ತ್ರ, ಪ್ರಾಚೀನ ಲಿಪಿ ಶಾಸ್ತ್ರ, ಹಸ್ತಾಕ್ಷರಶಾಸ್ತ್ರ, ಸರ್ಕಾರಿ ದಾಖಲು ಪತ್ರಗಳು, ಮುದ್ರಾಶಾಸ್ತ್ರ ಮುಂತಾದವುಗಳು ಪ್ರಮುಖವಾದವುಗಳು. ಇವುಗಳ ಅವಶ್ಯಕತೆಗಳಿಗೆ ಕಾರಣ ಎಲ್ಲಾ ಅಧ್ಯಯನ ವಿಷಯಗಳು ಅಂತರ್ ಶಿಸ್ತಿನ ವಿಷಯಗಳಾಗಿರುವುದು. ಇತಿಹಾಸದ ಅಂಶಗಳ ಸ್ವಭಾವವು ಹೀಗಿದೆ ಎಂದರೆ ಒಂದು ಅಂಶವು ಇನ್ನೊಂದು ಅಂಶದ ನಡುವೆ ಆತ್ಮೀಯ ಸಂಬಂಧವಿರುವುದು. ಅಲ್ಲದೇ, ಆ ಅಂಶಗಳು ಸರಿಯಾದ ರೀತಿಯಲ್ಲಿ ಮಾಹಿತಿ ನೀಡಲು ಇತರೇ ವಿಜ್ಞಾನಗಳ ಸಹಾಯ ಬೇಕಾಗುತ್ತದೆ. ಇದರಿಂದ ಈ ಅಧೀನ ವಿಷಯಗಳು ಇತಿಹಾಸದ ಸಹಾಯಕ ವಿಷಯಗಳೆಂದು ಪರಿಗಣಿಸಲ್ಪಟ್ಟಿವೆ.

### *4.3.1 ಇತಿಹಾಸ ಮತ್ತು ಕಾಲಗಣನಾಶಾಸ್ತ್ರ*

ಕಾಲಗಣನಾಶಾಸ್ತ್ರ ಇತಿಹಾಸದಲ್ಲಿ ಬರುವ ನಿರೂಪಣೆಯನ್ನು ವ್ಯವಸ್ಥಿತ ರೀತಿಯಲ್ಲಿ ತಿಳಿಸಲು ಸಹಾಯ ಮಾಡುವ ಒಂದು ವಿಷಯ. ಇತಿಹಾಸದಲ್ಲಿ ಕಾಲವು ಒಂದು ಕೇಂದ್ರ ಬಿಂದು. ಕಾಲದ ಪರಿವೆಯಿಲ್ಲದೇ ಇರುವ ಇತಿಹಾಸವು ಇತಿಹಾಸದ ಇರುವಿಕೆಯನ್ನು ಅಲ್ಲಗೆಳೆಯುತ್ತದೆ. ಚಿಕ್ಕ ಮಕ್ಕಳಲ್ಲಿ ಮಕ್ಕಳ ಎಲ್ಲಾ ಚೇಷ್ಟೆಗಳನ್ನು ನಾವು ಸಹಿಸಿ ಅದನ್ನು ಹೊಗಳುತ್ತೇವೆ. ಆದರೆ ಅದೇ ಮಗು ದೊಡ್ಡದಾಗಿ ಇಂಥದೇ ಕೆಲಸವನ್ನು ಮಾಡಿದಾಗ ಅದನ್ನು ಖಂಡಿಸುವ ಕೆಲಸವನ್ನು ಮಾಡುವುದನ್ನು ಕಾಣುತ್ತೇವೆ. ಏಕೆಂದರೆ ಕಾಲವು ಇತಿಹಾಸದ ಹೃದಯವಿದ್ದಂತೆ. ಕಾಲಗಣನಾಶಾಸ್ತ್ರವನ್ನು ಬಹಳ ಹಿಂದೆಯೇ ಎರಡು ಉಪಯುಕ್ತತೆಗಾಗಿ ಕಂಡುಹಿಡಿದಿದ್ದರು. ಒಂದು ಧಾರ್ಮಿಕ ವಿಧಿಗಳ ಆಚರಣೆಗಾಗಿ ಕಾಲವನ್ನು ನಿರ್ಣಯಿಸುತ್ತಿದ್ದರು ಮತ್ತು ಇನ್ನೊಂದು ಕೃಷಿಯ ಕಾರ್ಯಗಳಿಗಾಗಿ ಕಾಲವನ್ನು ನಿರ್ಣಯ ಮಾಡುತ್ತಿದ್ದರು. ಇತ್ತೀಚಿಗಂತೂ ಎಲ್ಲಾ ಕಾರ್ಯಗಳಿಗೂ ಕಾಲದ ನಿರ್ಣಯವಿರುತ್ತದೆ ಇನ್ನು ಇತಿಹಾಸಕ್ಕಂತೂ ಕಾಲವೇ ಬಹಳ ಮುಖ್ಯ ಮತ್ತು ಅವಶ್ಯಕ.

### *4.3.2 ಇತಿಹಾಸ ಮತ್ತು ಪ್ರಾಚೀನ ಲಿಪಿಶಾಸ್ತ್ರ*

ಪ್ರಾಚೀನ ಲಿಪಿಶಾಸ್ತ್ರವೆಂದರೆ ಹಳೆಯ ಕಾಲದ ಬರವಣಿಗೆಯನ್ನು ಅಧ್ಯಯನ ಮಾಡುವ ಒಂದು ಪ್ರಮುಖ ವಿಷಯ. ಮನುಷ್ಯ ಕಾಲಕಾಲಕ್ಕೆ ಹಾಗೂ ಪ್ರದೇಶ, ಪ್ರದೇಶಗಳಲ್ಲಿ ತಮ್ಮ ಭಾಷೆಯ ಅಕ್ಷರಗಳನ್ನು ಸೃಷ್ಟಿಸಿದ್ದು ಒಂದು ವಿಸ್ಮಯ. ಈ ಒಂದೊಂದು ಅಕ್ಷರಗಳು ಕಾಲಕಾಲಕ್ಕೆ ಅನೇಕ ಬದಲಾವಣೆಗಳನ್ನು ಮಾಡಿಕೊಂಡು ವಿಕಸನಗೊಂಡು ಪರಿಪೂರ್ಣತೆಯನ್ನು ಪಡೆದ ವಿಷಯವನ್ನು ಪ್ರಾಚೀನ ಲಿಪಿಶಾಸ್ತ್ರ ತಿಳಿಸುತ್ತದೆ. ಈ ಲಿಪಿಶಾಸ್ತ್ರತಜ್ಞರು ಹಳೆಯ ಕಾಲದ ಗ್ರಂಥಗಳ ಹಸ್ತ ಪ್ರತಿಯನ್ನು ಓದುವುದಲ್ಲದೆ ಅದರ ಕಾಲವನ್ನು ನಿರ್ಧರಿಸುತ್ತಾರೆ. ಇದಲ್ಲದೇ ಇದು ಎಲ್ಲಿಂದ ಬಂದಿತು ಎಂಬುದನ್ನು ಸಹ ತಿಳಿಸುವರು. ಇಂದಿನ ಕಾಲದ ರೀತಿಯಲ್ಲಿಯೇ ಭಾಷೆಯ ಅಕ್ಷರಗಳನ್ನು ರೂಪಿಸುವ ಕಾರ್ಯಗಳನ್ನು ಮಾಡುವ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕೇಂದ್ರಗಳಿದ್ದುದು ನಮಗೆ ತಿಳಿದು ಬರುತ್ತದೆ. ಉದಾ. ಯೂರೋಪ್‌ನಲ್ಲಿ ಉಪಯೋಗಿಸುತ್ತಿದ್ದ ರೋಮನ್ ಅಕ್ಷರಗಳು ಹಲವಾರು ಬದಲಾವಣೆಗಳನ್ನು ಹೊಂದಿರುವುದು ಕಾಣುತ್ತದೆ. ಬೆಲ್ಜಿಯನ್ನರು ಡಚ್ಚರಿಗಿಂತ ವಿಭಿನ್ನವಾದ ವಿವರಣೆಯನ್ನು ಮತ್ತು ಇಂಗ್ಲೀಷರೇ ಬೇರೆ ಬೇರೆಯ ಬರವಣಿಗೆಯನ್ನು ಮಾಡುತ್ತಿದ್ದುದು ತಿಳಿಯುತ್ತದೆ. ಮುದ್ರಣ ಯಂತ್ರವನ್ನು ಅಭಿವೃದ್ಧಿಗೊಳಿಸುವ ಮುನ್ನ ಬರೆಯುವಾಗ ಉಪಯೋಗಿಸುತ್ತಿದ್ದ ಸಂಕೇತಾಕ್ಷರಗಳನ್ನು ಪಟ್ಟಿಮಾಡಿಕೊಟ್ಟಿರುವ ಕೆಲವು ನಿಘಂಟುಗಳನ್ನು ಸಹ ನಾವು ಕಾಣುತ್ತೇವೆ. ಆದರೆ ಭಾಷಾ ಲಿಪಿಶಾಸ್ತ್ರ ಪೂರ್ಣವಾದ ಅರ್ಥ ಬರುವುದನ್ನು ಹುಡುಕಿಕೊಡುತ್ತದೆ. ಇದು ಮಾನಸಿಕ ಸ್ವಾಸ್ಥ್ಯತೆ ಮತ್ತು ಬೃಹತ್ ನಿರ್ಮಾಣದ ಬೆಳವಣಿಗೆಯನ್ನೂ ಕೊಡುತ್ತದೆ. ಈ ರೀತಿಯ ಬೆಳವಣಿಗೆಯಿಂದ ಹೊರಬಂದ ಈ ಭಾಷಾ ಪ್ರಾಚೀನ ಲಿಪಿ ಶಾಸ್ತ್ರವನ್ನು ಇತಿಹಾಸದಲ್ಲಿ ಹೇರಳವಾಗಿ ಇತಿಹಾಸದ ಘಟನೆಗಳನ್ನು ಸರಿಯಾದ ರೀತಿಯಲ್ಲಿ ನಿರೂಪಿಸಲು ಉಪಯೋಗಿಸಲಾಗುತ್ತದೆ.

### 4.3.3 ಇತಿಹಾಸ ಮತ್ತು ಹಸ್ತಾಕ್ಷರಶಾಸ್ತ್ರ

ಹಸ್ತಾಕ್ಷರಶಾಸ್ತ್ರವೆಂದರೆ ಒಬ್ಬ ವ್ಯಕ್ತಿಯ ಕೈಬರಹದಿಂದ ಅವನ ನಡವಳಿಕೆಯನ್ನು ಕಂಡು ಹಿಡಿಯಬಹುದಾದ್ದನ್ನು ತಿಳಿಸುವ ಶಾಸ್ತ್ರವಾಗಿದೆ. ಕೈಬರಹ ಮತ್ತು ನಡವಳಿಕೆಗಳ ನಡುವೆ ಸಂಬಂಧವಿರುವುದನ್ನು ಸಂಶೋಧನೆ ನಿರೂಪಿಸಿದೆ. ಈ ಹಸ್ತಾಕ್ಷರಶಾಸ್ತ್ರವನ್ನು ವ್ಯವಸ್ಥಿತವಾಗಿ ಅಧ್ಯಯನ ಮಾಡಿ ಇತಿಹಾಸಕಾರನು ಇತಿಹಾಸದ ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಅಳೆಯಲು ಉಪಯೋಗಿಸುವ ಶಾಸ್ತ್ರವನ್ನು ನಾವು ಹಸ್ತಾಕ್ಷರಶಾಸ್ತ್ರಜ್ಞ ಎನ್ನುತ್ತೇವೆ. ಆದರೂ ಈ ಹಸ್ತಾಕ್ಷರಶಾಸ್ತ್ರದ ನೆರವಿನಿಂದ ಒಬ್ಬ ವ್ಯಕ್ತಿಯ ನಡತೆಯನ್ನು ನ್ಯಾಯ ನಿರ್ಣಯ ನೀಡುವ ಮುನ್ನ ನಾವು ಇನ್ನೂ ಕೆಲವು ಅಂಶಗಳ ಬಗ್ಗೆ ಗಮನ ಹರಿಸಬೇಕಾಗುತ್ತದೆ. ಅವುಗಳು ಬರವಣಿಗೆಯಲ್ಲಿ ಉಪಯೋಗಿಸಿದ ವಸ್ತು, ಕಾಲ ಮತ್ತು ಆ ವ್ಯಕ್ತಿ ಹೊಂದಿದ್ದ ಸ್ಥಾನ, ಅವನ ಆಸಕ್ತಿ, ಯಾವ ಸಂದರ್ಭ ಮುಂತಾದವುಗಳನ್ನು ಅರಿಯಬೇಕಾಗುತ್ತದೆ. ಏಕೆಂದರೆ ಒಬ್ಬ ವ್ಯಕ್ತಿ ರೈಲು ಚಲಿಸುತ್ತಿದ್ದಾಗ ಸರಿಯಾಗಿ ಹಸ್ತಾಕ್ಷರ ಬರೆಯದೇ ಇರಬಹುದು ಮತ್ತು ಇದು ಅವನ ನಿಜವಾದ ಬರವಣಿಗೆಯಾಗಿರದೇ ಇರಬಹುದು. ಅಲ್ಲದೇ ಈ ಬರವಣಿಗೆಯನ್ನು ಸಾವಕಾಶವಾಗಿ ಬರೆದಿದ್ದಾನೊ ಅಥವಾ ಅವಸರದಿಂದ ಬರೆದಿದ್ದಾರೋ ಎಂಬುದನ್ನು ತಿಳಿಯಬೇಕು. ಇದಲ್ಲದೇ ಇದನ್ನು ಬರೆದವರು ಯಾವ ಲಿಂಗಕ್ಕೆ ಸೇರಿದವರು, ಅವನ ವಯಸ್ಸು, ಅವನ ಆಸಕ್ತಿಯನ್ನು ಅವನ ಕಾರ್ಯ ವೈಖರಿಯ ಬಗ್ಗೆ ತಿಳಿಯಲು ಉಪಯೋಗಿಸುವರು. ಒಂದು ವಿಧದಲ್ಲಿ ಹೇಳಬೇಕೆಂದರೆ ಈ ಹಸ್ತಾಕ್ಷರಶಾಸ್ತ್ರ ನ್ಯಾಯ ತೀರ್ಮಾನವನ್ನು ತೆಗೆದುಕೊಳ್ಳುವಲ್ಲಿ ಅವಸರ, ಸ್ವಯಂ ಪ್ರವೃತ್ತಿ, ಸೋಮಾರಿತನ, ಎಚ್ಚರಿಕೆಯಿಲ್ಲದಿರುವುದು ಮುಂತಾದುವನ್ನು ತಿಳಿಸುತ್ತದೆ. ಆದರೆ ಇವುಗಳನ್ನು ವೈಜ್ಞಾನಿಕವೆಂದು ತಿಳಿಯಲಾಗದು. ಏಕೆದರೆ ಯಾವುದೇ ಡಾಕ್ಟರ್‌ಗಳ ಹಸ್ತಾಕ್ಷರ ನೋಡಿ ನಾವು ಅವರುಗಳ ನಡತೆಯನ್ನು ತೀರ್ಮಾನಿಸುವುದು ಕಷ್ಟ ಸಾಧ್ಯ.

### 4.3.4 ಇತಿಹಾಸ ಮತ್ತು ಸರ್ಕಾರಿ ದಾಖಲು ಪತ್ರಗಳ ಶಾಸ್ತ್ರ

ಸರ್ಕಾರಿ ದಾಖಲು ಪತ್ರಗಳೂ ಸರ್ಕಾರದ ಕಾರ್ಯ ವೈಖರಿ ಹಾಗೂ ಬರವಣಿಗೆಯನ್ನು ತಿಳಿಸುವ ಅಧ್ಯಯನವಾಗಿದೆ. ಇದು ಒಂದು ರೀತಿಯ ಸರ್ಕಾರದ ವಿವರಗಳನ್ನು ತಿಳಿಸುವ ಶಾಸ್ತ್ರ. ಕ್ರಿ.ಶ. 17 ನೇ ಶತಮಾನದಲ್ಲಿಯೇ ಈ ಶಾಸ್ತ್ರವು ಬೆಳವಣಿಗೆಗೆ ಬಂದಿದ್ದು, ಸರ್ಕಾರ ಆದೇಶಗಳನ್ನು ಬಹಳ ಕಠಿಣವಾಗಿ ಹಾಗೂ ಬಹಳ ಸುಲಭವಾಗಿ ಬದಲಾಯಿಸುವ ಸಾಮಾನ್ಯ ಆದೇಶಗಳಿರುವ ದಾಖಲೆಗಳನ್ನು ಸಹ ನಾವು ಕಾಣುತ್ತೇವೆ. ಏಕೆಂದರೆ ಸರ್ಕಾರೀ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುವ ಕಾರಕೂನರು ಹಿಂದೆ ಯಾವು ಯಾವ ರೀತಿಯಲ್ಲಿ ದಾಖಲೆ ಬರೆಯುತ್ತಿದ್ದರೋ ಅದೇ ರೀತಿಯ ಉಲ್ಲೇಖಗಳನ್ನು ಬರೆಯುವುದನ್ನು ಕಾಣುತ್ತೇವೆ. ಆದರೆ ಭಾಷಾಶಾಸ್ತ್ರ ಮತ್ತು ಲಿಪಿಶಾಸ್ತ್ರಗಳು ಸರ್ಕಾರಿ ದಾಖಲು ಪತ್ರಗಳನ್ನು ಸೇರಿಕೊಂಡರೆ ಉತ್ತಮ ರೀತಿಯ ಬರವಣಿಗೆಯಾಗುವುದರಲ್ಲಿ ಸಂದೇಹವಿಲ್ಲ.

### 4.3.5 ಇತಿಹಾಸ ಮತ್ತು ಮುದ್ರೆಗಳ ಅಧ್ಯಯನಶಾಸ್ತ್ರ

ಮುದ್ರೆಗಳ ಅಧ್ಯಯನಶಾಸ್ತ್ರವು ಆಕಾಲದಲ್ಲಿ ದೊರೆಯುತ್ತಿದ್ದ ಮುದ್ರೆಗಳನ್ನು ಅಧ್ಯಯನ ಮಾಡುತ್ತಿದ್ದು ಸರ್ಕಾರಿ ದಾಖಲು ಪತ್ರಗಳ ಪರಿಶೀಲನೆಯಂತೆಯೇ ಕಾರ್ಯ ನಿರ್ವಹಿಸುತ್ತಿದೆ. ಈ ಮುದ್ರಾ ಶಾಸ್ತ್ರ ಸರ್ಕಾರೀ ದಾಖಲುಗಳು ಸರಿಯಾಗಿ ಉಲ್ಲೇಖವಾಗಿಯೋ ಎಂಬುದನ್ನು ಮುದ್ರೆಗಳ ಮೂಲಕ ತಿಳಿಯುವುದಾಗಿದೆ. ಮುದ್ರೆ ಏಕೆ, ಹೇಗೆ ಮತ್ತು ಯಾವಾಗ ಹಾಕುತ್ತಿದ್ದರು ಎಂಬುದರ ಅಧ್ಯಯನವಲ್ಲದೇ ಅವರಲ್ಲಿ ಯಾವ ವಸ್ತು ತನ್ನ ಉಪಯೋಗಿಸಿರುವದು ಎಂಬುದನ್ನು ತಿಳಿಯಬಹುದು. ಸಾಮಾನ್ಯವಾಗಿ ಶೀತ ಪ್ರದೇಶಗಳಲ್ಲಿ ಅರಗನ್ನು ಮತ್ತು ಇಮಲಿಯಂತಹ ದೇಶವಲ್ಲಿ ಸೀಸವನ್ನು ಉಪಯೋಗಿಸುತ್ತಿದ್ದುದು ಕಂಡು ಬರುತ್ತದೆ. ಇದುವರೆಗೂ ಹರಪ್ಪಾ ಸಂಸ್ಕೃತಿಯ ಮುದ್ರೆಗಳನ್ನು ಪೂರ್ಣವಾಗಿ ಓದಿ ಅದರ ಅಧ್ಯಯನವನ್ನು ಮಾಡಲಾಗಿದೆ. ಹಾಗೆ ಮಾಡಿದಾಗ ಹೆಚ್ಚು ಹೆಚ್ಚಿನ ವಿಷಯಗಳು ನಮಗೆ ದೊರಕುತ್ತವೆ. ಈ ಮುದ್ರೆಗಳು ರಾಜನ ಸನ್ನದನ್ನು ಜಾರಿ ಮಾಡುವಾಗಲೂ ಉಪಯೋಗಿಸುತ್ತಿದ್ದರು ಮತ್ತು ಅಲ್ಲದೇ ರಾಜನ ಹೆಸರು ಬಿರುದು ಅವನ ರಾಜ್ಯದ ವಿಸ್ತಾರ, ಅವನ ಧರ್ಮ ಮತ್ತು ಯಾವ ವಂಶಕ್ಕೆ ಸೇರಿದ್ದು ಎಂಬುದನ್ನು ತಿಳಿಸುವುದಲ್ಲದೆ ಮುದ್ರೆಯನ್ನು ಒತ್ತಿರುವ ದಿನಾಂಕ ಮತ್ತು ಉದ್ದೇಶವನ್ನು ಸಹ ತಿಳಿಸುವುದು. ಏನೇ ಆದರೂ ಈ ಮುದ್ರೆಗಳು ತಮ್ಮ ಇತಿಹಾಸ ಬರವಣಿಗೆಯಲ್ಲಿ ಉಪಯುಕ್ತ ಮಾಹಿತಿ ಅಥವಾ ಮುಖ್ಯ ಅಂಶಗಳನ್ನು ತಿಳಿಸುವುದು.

### 4.3.6 ಇತಿಹಾಸ ಮತ್ತು ಇತರೇ ವಿಷಯಗಳು

ಇವುಗಳಲ್ಲದೇ ಇತಿಹಾಸಕ್ಕೆ ಸಹಾಯಹಸ್ತವನ್ನು ನೀಡಿರುವ ಅನೇಕ ಶಾಸ್ತ್ರಗಳಾದ ಪ್ರಾಕ್ತನಶಾಸ್ತ್ರ, ಶಾಸನಶಾಸ್ತ್ರ, ನಾಣ್ಯಶಾಸ್ತ್ರ, ಮಾನವಶಾಸ್ತ್ರ, ಭೌತಶಾಸ್ತ್ರ ಮುಂತಾದವುಗಳನ್ನು ಕಾಣುತ್ತೇವೆ. ಪ್ರಾಕ್ತನಶಾಸ್ತ್ರ, ಶಾಸನಶಾಸ್ತ್ರ ಹಾಗೂ ನಾಣ್ಯಶಾಸ್ತ್ರ ಇವುಗಳು ಇತಿಹಾಸದ ಅಧೀನಶಾಸ್ತ್ರಗಳಾಗಿದ್ದು ಇವುಗಳು ಮಾತೃಸ್ಥಾನದಲ್ಲಿರುವ ಇತಿಹಾಸದಂತಿರದೇ ಈ ಪತ್ರಶಾಸ್ತ್ರಗಳು ತಂತಮ್ಮ ಕಾರ್ಯಗಳಲ್ಲಿ ವೈಜ್ಞಾನಿಕತೆ ಮತ್ತು ಸಿದ್ಧಾಂತವನ್ನು ಹೊಂದಿವೆ. ಪ್ರಾಚೀನ ಭಾರತದ ಇತಿಹಾಸವು ಈ ಮೂರೂ ಶಾಸ್ತ್ರಗಳನ್ನು ಹೆಚ್ಚಾಗಿ ಅವಲಂಬಿಸಿದ್ದು ಹಲವು ಅಧ್ಯಾಯಗಳ ಅಧ್ಯಯನಕ್ಕೆ ಸಾಕಷ್ಟು ಸಹಕಾರಿಯಾಗಿ ನಿಂತಿವೆ. ಪುರಾತನಶಾಸ್ತ್ರಜ್ಞರಾದ ಸರ್‌ಜಾನ್ ಮಾರ್ಷಲ್ ಮುಂತಾದವರು ಈ ಪುರಾತತ್ವಶಾಸ್ತ್ರವನ್ನು ಉಪಯೋಗಿಸಿಕೊಂಡು ಹರಪ್ಪಾ ಸಂಸ್ಕೃತಿಯ ವಿಷಯಗಳನ್ನು ತಿಳಿಸಿದ್ದಾರೆ. ಪುರಾತನ ಸ್ಥಳಗಳ ಉತ್ಖನನ ಮತ್ತು ಅದರ ವಿಧಾನಗಳು, ಅವುಗಳನ್ನು ಬರೆದುಕೊಳ್ಳುವುದು. ಕಥೆಗಳನ್ನು ಓದುವುದು ಮತ್ತು ಅವುಗಳು ಯಾವ ರೀತಿಯಲ್ಲಿ ಬರೆಯಲ್ಪಟ್ಟಿವೆ ಎಂಬುದನ್ನು ಸಹ ಇದು ತಿಳಿಸುವುದು. ಇದು ಪ್ರಾದೇಶಿಕ ದೇಶೀಯ ಮತ್ತು ಜಾಗತಿಕ ಇತಿಹಾಸಕ್ಕೂ ಸಹ ಅನ್ವಯಿಸುತ್ತದೆ. ಭೌತಶಾಸ್ತ್ರ, ಎಂಜನಿಯರಿಂಗ್, ಫೋಟೋಗ್ರಫಿ, ಮುಂತಾದವುಗಳು ವೈಜ್ಞಾನಿಕವಾಗಿ ಕೆಲಸ ಮಾಡಲು ಸಹಾಯ ಮಾಡುವುವು. ಸಂಶೋಧಕರು ಭಾಷೆಗಳ ಸಂಪೂರ್ಣ ಜ್ಞಾನ, ಹಿಡಿತ ಮತ್ತು ಅವುಗಳ ಉಪಯೋಗವನ್ನು ತಿಳಿದಿರಬೇಕು. ಕರ್ನಾಟಕ ಇತಿಹಾಸವು ಹೆಚ್ಚಾಗಿ ಶಾಸನ ಶಾಸ್ತ್ರಗಳ ಸಹಾಯದಿಂದ ಈ ಪುನರ್ ರಚಿಸಿದ್ದಾಗಿದೆಯೆಂದು ಹೇಳಬಹುದು. ನೂರಾರು ಶಾಸನಗಳನ್ನು ಕೆತ್ತಿಸಿದ, ಬರೆಸಿದ ರಾಜವಂಶಗಳು ಎಲ್ಲಾ ಪ್ರದೇಶಗಳಲ್ಲೂ ಇದ್ದುದು ಕಂಡುಬರುತ್ತದೆ. ಇವುಗಳು ರಾಜಕೀಯ ಸಾಹಿತ್ಯ, ಯುದ್ಧಗಳು, ಧರ್ಮ, ಅನೇಕ ಸ್ಥಿತಿಗಳು, ಅಂತರರಾಷ್ಟ್ರೀಯ ಸಂಬಂಧಗಳು, ನಾಯಕರ ವ್ಯಕ್ತಿತ್ವ ಮುಂತಾದವುಗಳ ನಿರೂಪಣೆಯೂ ಆಗಿದೆ. ಬಿ.ಎಲ್. ರೈಸ್‌ರವರು ಸಾವಿರಾರು ಶಾಸನಗಳನ್ನು ಸಂಗ್ರಹಿಸಿ, ನಂತರದಲ್ಲಿ ವಿದ್ವಾಂಸರಾದ ಆರ್. ನರಸಿಂಹಾಚಾರ್ ಇದನ್ನು ವೃದ್ಧಿಸಿದರು. ಇವುಗಳು ಶಿಲಾಶಾಸನಗಳು ಅಥವಾ ತಾಮ್ರ ಪತ್ರದಲ್ಲಿ ಬರೆದವುಗಳು. ಈ ದಾಖಲೆಗಳನ್ನು ಸಂಪಾದಿಸಿ, ತರ್ಜುಮೆ ಮಾಡಿ, ಎಪಿಗ್ರಾಫಿಯಾ ಕರ್ನಾಟಕ ಎಂಬ ಸಂಪುಟದ ಹೆಸರಿನಲ್ಲಿ ಮುದ್ರಿಸಲಾಗಿದೆ. ಇವುಗಳಲ್ಲದೇ ಎಪಿಗ್ರಾಫಿಯಾ ಇಂಡಿಕಾ, ಮುಸ್ಲಿಮಿಕಾ, ಇಂಡಿಯನ್ ಆಂಟಿಕ್ವರಿ ಮುಂತಾದವುಗಳಲ್ಲಿ ಇತಿಹಾಸ ಜ್ಞಾನದ ಮಾಹಿತಿಗಳು ಸಿಗುತ್ತವೆ.

ಹೀಗೆ ಮೇಲೆ ತಿಳಿಸಿದ ಸಮಾಜವಿಜ್ಞಾನಗಳು ಅಧೀನ ಶಾಸ್ತ್ರಗಳು ಮತ್ತು ಇತರೇ ವಿಜ್ಞಾನಗಳು ಪರಸ್ಪರ ಒಳ್ಳೆಯ ಸಂಬಂಧವನ್ನು ಹೊಂದಿದ್ದು ಇತಿಹಾಸದ ಅಧ್ಯಯನವು ಪರಿಪೂರ್ಣವಾಗಿ ನಡೆದು ಇತಿಹಾಸ ಪುನರ್ ರಚನೆಗೆ ಸಹಾಯಕವಾಗಿವೆಯೆಂದರೆ ತಪ್ಪಾಗಲಾರದು.

## 4.4 ಘಟಕದ ಸಾರಾಂಶ

ಈ ಘಟಕದ ಅಧ್ಯಯನದ ನಂತರ ನಾವುಗಳು ಈ ಕೆಳಗಿನ ವಿಷಯಗಳನ್ನು ಅಧ್ಯಯನ ಮಾಡಿದೆವು.

* ಇತಿಹಾಸದ ವಿಷಯವನ್ನು ಪರಿಚಯ ಮಾಡಿಕೊಂಡೆವು.
* ಇತಿಹಾಸ ಮತ್ತು ಸಮಾಜ ವಿಜ್ಞಾನಗಳಾದ ಸಮಾಜಶಾಸ್ತ್ರ, ಭೂಗೋಳಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಇತರೆ ವಿಷಯಗಳ ಇತಿಹಾಸದೊಂದಿಗೆ ಹೊಂದಿರುವ ಸಂಬಂಧವನ್ನು ತಿಳಿದೆವು.
* ಇತಿಹಾಸ ಮತ್ತು ಇತರೆ ವಿಜ್ಞಾನಗಳಾದ ಪುರಾತನಶಾಸ್ತ್ರ, ಕಾಲಗಣನಾಶಾಸ್ತ್ರ ಮುಂತಾದವುಗಳ ಸಂಬಂಧವನ್ನು ಸಹ ಅರಿತೆವು.
* ಇತಿಹಾಸ ಮತ್ತು ಇತರೇ ಸಂಬಂಧಿತ ವಿಜ್ಞಾನಗಳ ಬಗ್ಗೆಯೂ ಸಹ ತಿಳಿಯಲಾಯ್ತು.

## 4.5 ಸ್ವಯಂ ಪರಿಶೀಲನಾ ಪ್ರಶ್ನೆಗಳು

1. ಇತಿಹಾಸ ಮತ್ತು ಇತರೇ ಸಮಾಜವಿಜ್ಞಾನಗಳ ಸಂಬಂಧವನ್ನು ಚರ್ಚಿಸಿ.
2. ಇತಿಹಾಸ ಮತ್ತು ಇತರೇ ಅಧೀನಶಾಸ್ತ್ರಗಳ ಪರಸ್ಪರ ಸಂಬಂಧವನ್ನು ವಿವರಿಸಿ.
3. ಇತಿಹಾಸಕ್ಕೆ ಬೇಕಾಗಿರುವ ಇತರೇ ವಿಜ್ಞಾನಗಳ ಸಹಾಯವನ್ನು ಕುರಿತು ವಿಮರ್ಶಿಸಿ.

## 4.6 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. Sheik Ali .B. : History; Its Theory and Method
2. Rajayyan .K. : History of Theory and Method
3. ವೆಂಕಟರತ್ನಂ ಮತ್ತು ಪದ್ಮ : ಸಂಶೋಧನಾ ಮಾರ್ಗ

## ಘಟಕ - 5 ವಿಜ್ಞಾನ ಮತ್ತು ಕಲೆಯಾಗಿ ಇತಿಹಾಸ

*ವಿಷಯಾನುಕ್ರಮಣಿಕೆ :*


5.0 ಉದ್ದೇಶಗಳು

5.1 ಪೀಠಿಕೆ

5.2 ಇತಿಹಾಸ ಒಂದು ವಿಜ್ಞಾನವಾಗಿ

5.3 ಇತಿಹಾಸ ಒಂದು ಕಲೆಯಾಗಿ

5.4 ಇತಿಹಾಸ ವಿಜ್ಞಾನ ಮತ್ತು ಕಲೆಯಾಗಿ

5.5 ಘಟಕದ ಸಾರಾಂಶ

5.6 ಸ್ವಯಂ ಪರಿಶೀಲನಾ ಪ್ರಶ್ನೆಗಳು

5.7 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 5.0 ಉದ್ದೇಶಗಳು

ಘಟಕ-5 ರ ಅಧ್ಯಯನದಿಂದ ನೀವು ಕೆಳಗಿನ ವಿಷಯಗಳನ್ನು ತಿಳಿದುಕೊಳ್ಳಬಹುದು.

* ಇತಿಹಾಸವನ್ನು ಒಂದು ಮಾನವೀಯ ವಿಷಯವಾಗಿ ತಿಳಿದುಕೊಳ್ಳುತ್ತೇವೆ.
* ಇತಿಹಾಸ ಒಂದು ವಿಜ್ಞಾನವಾಗಿದೆಯೆಂದು ತಿಳಿದುಕೊಳ್ಳತ್ತೇವೆ.
* ಇತಿಹಾಸವು ಒಂದು ಕಲೆಯ ವಿಷಯವಾಗಿದೆಯೆಂದು ಅರಿಯುವೆವು
* ಇತಿಹಾಸವನ್ನು ವಿಜ್ಞಾನ ಮತ್ತು ಕಲೆಯಾಗಿ ವಿಶ್ಲೇಷಣೆ ನಡೆಸುವೆವು

## 5.1 ಪೀಠಿಕೆ

ಇತಿಹಾಸವನ್ನು ಪ್ರಪಂಚದಲ್ಲಿ ಎಲ್ಲಾ ವ್ಯಕ್ತಿಗಳೂ ಅಧ್ಯಯನ ಮಾಡಬೇಕಾಗುತ್ತದೆ. ಇದರಿಂದ ಅವರು ತಮ್ಮ ಹಿಂದಿನ ಪೀಳಿಗೆಯ ಬಗ್ಗೆ ತಮ್ಮ ರಾಜ್ಯ - ನಾಡಿನ ಬಗ್ಗೆ, ಹಾಗೂ ಪ್ರಪಂಚದಲ್ಲಿ ಮಾನವ ಜನಾಂಗದ ಬಗ್ಗೆ ತಿಳಿಯಲು ಇತಿಹಾಸದ ಅಧ್ಯಯನ ಅತ್ಯಾವಶ್ಯಕ, ಈ ಅಧ್ಯಯನದಲ್ಲಿ ನಾವು ಇತಿಹಾಸದ ಕಾರ್ಯಗಳೇನು ? ಈ ಕಾರ್ಯಗಳೊಂದಿಗೆ ಇತಿಹಾಸವನ್ನು ಯಾವ ರೀತಿಯಲ್ಲಿ ಕಾಣುತ್ತೇವೆ ಎಂಬುದನ್ನು ತಿಳಿದುಕೊಳ್ಳುತ್ತೇವೆ. ಕೆಲವು ವಿದ್ವಾಂಸರ ಪ್ರಕಾರ ಇತಿಹಾಸವು ಒಂದು ವಿಜ್ಞಾನವೆಂದರೆ, ಮತ್ತೆ ಕೆಲವು ವಿದ್ವಾಂಸರು ಇತಿಹಾಸವು ಒಂದು ಕಲೆ ಎಂದು ವಾದಿಸುತ್ತಾರೆ. ಇನ್ನು ಮೂರನೇ ಗುಂಪಿನ ಕೆಲವು ವಿದ್ವಾಂಸರು ಇತಿಹಾಸವು ವಿಜ್ಞಾನವೂ ಹೌದು ಮತ್ತು ಕಲೆಯೂ ಹೌದೆನ್ನುತ್ತಾರೆ. ಈ ವೈವಿಧ್ಯಮಯ ಅಭಿಪ್ರಾಯವಿರುವುದರಿಂದ, ಇತಿಹಾಸ ವಿದ್ಯಾರ್ಥಿಗಳಾದ ನಾವು ಇತಿಹಾಸವು ನಿಜವಾಗಿಯೂ ಏನಾಗಿದೆ ? ಎಂಬುದನ್ನು ವಿಮರ್ಶಾತ್ಮಕವಾಗಿ ಚರ್ಚೆ ಮಾಡಬೇಕಾಗಿದೆ. ಈ ಚರ್ಚೆಯನ್ನು ವಿಸ್ತಾರವಾಗಿ ಈಗ ತಿಳಿಯೋಣ.

## 5.2 ಇತಿಹಾಸ ವಿಜ್ಞಾನವಾಗಿ

ಕ್ರಿ.ಶ.12ನೇ ಶತಮಾನದಿಂದಲೂ ಇತಿಹಾಸವು ವಿಜ್ಞಾನವೋ ಅಥವಾ ಕಲೆಯೋ ಎಂದು ಜಿಜ್ಞಾಸೆ ನಡೆಯುತ್ತಲೇ ಇದೆ. ಕೆಲವು ವಿದ್ವಾಂಸರು ಇತಿಹಾಸವು ಒಂದು ವಿಜ್ಞಾನ ಎಂದು ನಿಖರವಾಗಿ ಹೇಳುತ್ತಾರೆ. ಈ ರೀತಿ ವಾದಿಸುವ ವಿದ್ವಾಂಸರು ಮಾನವ ಜೀವಿಗಳು ಬದುಕಿನಲ್ಲಿ ತಮ್ಮದೇ ಆದ ನಿಖರವಾದ ಮತ್ತು ನಿರ್ಧರಿಸಲ್ಪಟ್ಟ ಜೀವನವನ್ನು ನಡೆಸುತ್ತಾರೆ. ಆದ್ದರಿಂದ ಈ ನಿಖರತೆಯನ್ನು ನಿರ್ಧಾರದ ತತ್ವಗಳನ್ನು ಅನುಸರಿಸಿದ ಜೀವನವನ್ನು ನೋಡಿದ ಕಾಂಡೋರೆಸಿಟ್ ಫ್ರಾನ್ಸಿನ ಒಬ್ಬ ಕ್ರಾಂತಿಕಾರಿ ಇತಿಹಾಸಕಾರನು ಈ ತತ್ವಗಳನ್ನು ಅನುಸರಿಸುವ ಇತಿಹಾಸವು ವಿಜ್ಞಾನದ ಗುಂಪಿಗೆ ಸೇರಬಹುದಾಗಿದೆ ಎನ್ನುತ್ತಾರೆ. 19ನೇ ಶತಮಾನದಲ್ಲಿ ನಡೆದ ಸಂಶೋಧನೆಗಳು ಇತಿಹಾಸವು ಒಂದು ರೀತಿಯ ವೈಜ್ಞಾನಿಕ ವಿಧಾನವನ್ನು ಅನುಸರಿಸುವಂತಾಗಿದೆಯೆನ್ನುವ ಅಧ್ಯಯನದಿಂದ ತಿಳಿದುಬಂದಿದೆ.

ಈ ನಿಟ್ಟಿನಲ್ಲಿ ಅಧ್ಯಯನ ಮಾಡುತ್ತಾ ವಿದ್ವಾಂಸರು ಇತಿಹಾಸ ಮತ್ತು ಇತರೇ ವಿಜ್ಞಾನಗಳ ಉದ್ದೇಶಗಳು ಒಂದೇ ಆಗಿದೆ. ಅದೆಂದರೆ ಸತ್ಯವನ್ನು ಕಂಡುಹಿಡಿಯುವುದು. ಈ ಉದ್ದೇಶಗಳ ಊಹಾಪ್ರತಿಜ್ಞೆ ಅಥವಾ ಸತ್ಯಾಂಶದ ಅರ್ಥವನ್ನು ವಿಚಾರ ಮಾಡುವಲ್ಲಿ ಅದರ ಸತ್ಯಾಂಶದ ನಿಷ್ಕರ್ಷೆಯಿಲ್ಲದುದರಿಂದ ಆ ಸತ್ಯಾಂಶವು ಹೀಗಿರಬಹುದೆಂದು ಊಹಿಸಿ ಮಾಡಿದ ಅಥವಾ ವಿಚಾರ ಮಾಡಲು ಆಧಾರವಾಗಿಟ್ಟುಕೊಂಡ ಒಂದು ಊಹೆ, ಕಲ್ಪನೆಗಳನ್ನು ತೂಗಿ ನೋಡಿ ಸಮತೋಲನ ಕಂಡುಹಿಡಿಯುವುದನ್ನು ಪ್ರಯತ್ನಿಸಲಾಯಿತು. ಸಮಾಧಾನವಿಲ್ಲದ ಕಡೆ ಅವುಗಳನ್ನು ಬಿಟ್ಟು ಪುನಃ ನ್ಯಾಯದ ಕಡೆ ಊಹೆಗಳನ್ನು ಕಲ್ಪಿಸಲಾಯಿತು. ಊಹೆಗಳನ್ನು ಅನಾವಶ್ಯಕವಾದರೂ ಒಪ್ಪಬೇಕಾದ ಸಂದರ್ಭ ಬಂದಾಗ, ಅಥವಾ ಕೇವಲ ಸಹಜ ಜ್ಞಾನವನ್ನೂ ಊಹಾ ಪ್ರತಿಜ್ಞೆಯಲ್ಲಿ ಸೇರಿಸಲಾಯಿತು. ಆದರೆ ವಿಜ್ಞಾನದ ಸಾರವೆಂದರೆ ಸಂಶೋಧನೆ ಮತ್ತು ನಿರ್ಧಾರಿತವಾಗಿ, ನಿಸ್ಸಂಶಯವಾಗಿ ಬೇರೆ ಯಾವ ಮಾರ್ಗವನ್ನು ಅನುಸರಿಸದೇ ಸತ್ಯಾನ್ವೇಷಣೆಯೇ

ಆಗಿದೆ. ವಿಜ್ಞಾನದ ಈ ಚಿರಸ್ಥಾಯಿ. ಈ ಆದರ್ಶದಿಂದ ಇತಿಹಾಸ ಸತ್ಯಾಸಂಧತೆ ಎಂಬ ಬಗ್ಗೆ ಭಾವನೆ (ಕಲ್ಪನೆ) ಉದ್ಭವವಾಯಿತು. ಒಂದು ಬರವಣಿಗೆಯ ಸತ್ಯಾಂಶ ಅರಿಯಲು ಇತರ ದಾಖಲೆಗಳ ಸಂಶೋಧನೆ, ಅವುಗಳ ಪರಿಶೀಲನೆ ಇತರರು ಕೊಟ್ಟ ಪ್ರಮಾಣ ಪತ್ರಗಳನ್ನು ಪರೀಕ್ಷಿಸುವುದು ಮತ್ತು ವಿಜ್ಞಾನಗಳ ಸಹಕಾರಗಳಿಂದ ದೃಢೀಕರಿಸಿಕೊಳ್ಳುವುದು ಮುಂತಾದ ನಾನಾ ಮಾರ್ಗಗಳನ್ನೂ ಇತಿಹಾಸ ಪದ್ಧತಿಯು ಅನುಸರಿಸುವ ಅವಶ್ಯಕತೆ ಕಂಡು ಬಂದಿತು.

ಇನ್ನು ಇಪ್ಪತ್ತನೇ ಶತಮಾನದ ಆದಿಭಾಗದಲ್ಲಿ ಕೆಲವು ನಿರ್ಧರಿತ ಚಿಂತನೆಗಳನ್ನು ಅನುಸರಿಸಿ ಇತಿಹಾಸವನ್ನು ವಿಜ್ಞಾನದ ಸಾಲಿಗೆ ಸೇರಿಸುವ ಪ್ರಯತ್ನ ಸಾಕಷ್ಟು ನಡೆಯಿತು. ಇದೇ ಅಭಿಪ್ರಾಯವನ್ನು ಅನುಸರಿಸಿ ಇಂಗ್ಲೇಂಡಿನ ಜೆ.ಬಿ.ಬ್ಯೂರಿಯವರು 1903ರಲ್ಲಿ " ಇತಿಹಾಸವು ಒಂದು ವಿಜ್ಞಾನವೇ, ಹೆಚ್ಚೂ ಇಲ್ಲ ಮತ್ತು ಕಡಿಮೆಯೂ ಇಲ್ಲ" ಎಂದಿದ್ದಾರೆ. ಈ ಅಭಿಪ್ರಾಯವು ಜಿಜ್ಞಾಸೆಯನ್ನು ವಿಚಾರ ಮಾಡುವಂತಾಯಿತು. ಬ್ಯೂರಿಯವರು ಮುಂದುವರಿದು ವರ್ಷದಿಂದ ವರ್ಷಕ್ಕೆ ಇತಿಹಾಸವು ತಪ್ಪುಗಳ ಸಾಲಿನಿಂದ ಹೊರಬಂದು ಪ್ರಭಲವಾಗಿರುವುದನ್ನು ಮಾನವರ ದೃಷ್ಟಿಯಲ್ಲಿ, ಜನ ಅಭಿಪ್ರಾಯಗಳನ್ನು ಸೃಷ್ಟಿಸಿ, ವೈಚಾರಿಕತೆಯನ್ನು ರಾಜಕೀಯ ಸ್ವಾತಂತ್ರ್ಯವನ್ನು ತಿಳಿಸಿ, ಇವೆಲ್ಲ ಚಿಂತನೆಗಳನ್ನು ಅಳವಡಿಸಿಕೊಂಡು, ಮುಂದಿನ ಭವಿಷ್ಯದ ಜೀವನವನ್ನು ಮುಂದಿನ ದಿನಗಳು, ವಾರಗಳು, ವರ್ಷ ಮತ್ತು ಶತಮಾನಗಳಲ್ಲಿ ತಾನು ಚಿಂತನೆ ಮಾಡುವುದರಲ್ಲಿ ಅವಕಾಶ ಮಾಡಿಕೊಳ್ಳಲಾಯಿತೇ ಹೊರತು, ಯಾವುದೇ ಸಂಕುಚಿತ ಅಂಶಗಳನ್ನು ಇಟ್ಟುಕೊಳ್ಳದೇ, ಸಾಹಿತ್ಯದ ಕಲೆ ಅಥವಾ ತತ್ವಜ್ಞಾನದ ಆದರ್ಶಗಳನ್ನು ಇಟ್ಟುಕೊಂಡಿರುವುದರಿಂದ ಇತಿಹಾಸವು ಒಂದು ವಿಜ್ಞಾನವೇ ಆಗಿದ್ದು, ಇದು ಹೆಚ್ಚೂ ಅಲ್ಲ ಕಡಿಮೆಯೂ ಅಲ್ಲ" ಎನ್ನುತ್ತಾರೆ.

ಈ ಚಿಂತನೆಯು 19 ಮತ್ತು 20ನೇ ಶತಮಾನಗಳಲ್ಲಿ ಮುಂದುವರಿಯಿತು. ಜರ್ಮನಿಯ ಒಬ್ಬ ಮಹಾನ್ ಇತಿಹಾಸಕಾರ ಲಿಯೋಪಾಲ್ಡ್ ವಾನ್ ರ್‍ಯಾಂಕೆಯು ಇವನು ಆಧುನಿಕ ಇತಿಹಾಸದ ಜನಕವೆಂದೆನಿಸಿಕೊಂಡು, ಇವನು ಇದೇ ಅಭಿಪ್ರಾಯವನ್ನು ಹೊಂದಿದ್ದು, ಇತಿಹಾಸದ ಪ್ರಮುಖ ಕಾರ್ಯವು "ಗತಕಾಲದ ವಿಷಯಗಳನ್ನು ನ್ಯಾಯ ತೀರ್ಮಾನ ಮಾಡುವುದಲ್ಲ ಮತ್ತು ಇಂದಿನ ಘಟನೆಗಳನ್ನು ಪ್ರಸ್ತುತಪಡಿಸಿ ಭವಿಷ್ಯದ ಕಾಲಕ್ಕೆ ಕೊಡುಗೆಯಾಗಿ ನೀಡುವುದಿಲ್ಲ, ಆದರೆ ಇದರ ಕಾರ್ಯ ಈ ಘಟನೆಗಳು ಹೇಗೆ ನಿಜವಾಗಿ ನಡೆದವು ಎಂಬುದನ್ನು ತೋರಿಸುವುದಾಗಿದೆ". ಇದೇ ಸಮಯದಲ್ಲಿ ಇದೇ ಅಭಿಪ್ರಾಯವನ್ನು ಫ್ರಾನ್ಸಿನಲ್ಲಿ ಆಗಸ್ಟ್‌ಕಾಮ್ಟೆಯವರೂ ಸಹ ಪ್ರತಿಧ್ವನಿಸುತ್ತಾರೆ. ಗಣಿತಶಾಸ್ತ್ರದ ಪ್ರಾಧ್ಯಾಪಕರಾದ ಇವರು ಇತಿಹಾಸದ ಸಂಖ್ಯೆಗಳ ನಿಯಮಗಳನ್ನು ನಿರಂತರವಾಗಿ ಬಳಸುವುದನ್ನು ಪ್ರತಿಪಾದಿಸುತ್ತಾರೆ. ಇವರು ಇತಿಹಾಸವನ್ನು "ವಾಸ್ತವಿಕ ತತ್ವಜ್ಞಾನ" ಎಂದು ಕರೆದಿದ್ದಾರೆ. ಇದರಿಂದ ಇತಿಹಾಸದಲ್ಲಿ ಅಸ್ವಾಭಾವಿಕ ಅಂಶಗಳನ್ನು ಹೂರತೆಗೆಯಲಾಗಿದೆ ಎಂದು ತಿಳಿಸಿರುತ್ತಾರೆ. ಥಾಮಸ್ ಬಕಲ್‌ರವರೂ ಸಹ ಇತಿಹಾಸವು ಒಂದು ವಿಜ್ಞಾನವೆಂದು ಅಭಿಪ್ರಾಯ ನೀಡಿದ್ದಾರೆ. ವಿಜ್ಞಾನದ ಮುಖ್ಯಗುರಿ ಭವಿಷ್ಯದ ನಿರ್ಧಾರ. ಈ ಕಾರ್ಯವನ್ನು ಇತಿಹಾಸಕಾರನೂ ಸಹ ಅಲ್ಲಿಯ ಸಂದರ್ಭಗಳನ್ನು ಅನುಸರಿಸಿ ಭವಿಷ್ಯವನ್ನು ನಿರ್ಧರಿಸುತ್ತಾನೆ. ಆದರೆ ಈ ಕಾರ್ಯದಲ್ಲಿ ಇತಿಹಾಸವು ವಿಫಲವಾಗಲು ಕಾರಣ ಇತಿಹಾಸಕಾರರು ಬಹಳಷ್ಟು ಕಾಲ ವ್ಯಕ್ತಿಗಳ ಮತ್ತು ಬಹುಜನರ ಸರಾಸರಿ ವಿಷಯಗಳನ್ನು ಅಧ್ಯಯನ ಮಾಡಿ ಅದರ ಫಲಿತಾಂಶಗಳನ್ನು ಒದಗಿಸದರೇ ವಿನಃ ಇದಕ್ಕೆ ವಿರುದ್ಧದ ಕಾರ್ಯವನ್ನು ಮಾಡಲಿಲ್ಲ. ಆದರೆ ವ್ಯಕ್ತಿಗತ ಕ್ರಿಯೆಗಳನ್ನು ನಾವು ನಿರ್ಧರಿಸಲಾಗುವುದಿಲ್ಲ. ಅಲ್ಲದೇ ಮಹಾನ್ ವ್ಯಕ್ತಿಗಳೂ ಸಹ ಇತಿಹಾಸದ ಪುಟಗಳಿಂದ ಮರೆಯಾಗುತ್ತಾರೆ. ಅವರೆಲ್ಲರೂ ಬಹು ಜನರಲ್ಲಿ ಒಬ್ಬರಾಗಿದ್ದು, ಯಾವುದೇ ಒಂದು ಸಂದರ್ಭದಲ್ಲಿ ಇತಿಹಾಸದಲ್ಲಿ ಬಂದು ಹೋಗುತ್ತಾರೆ. ಇದನ್ನು ಒಂದು ಆಯಾಮವೆಂದು ತಿಳಿಯದೇ ಸಾಮಾನ್ಯೀಕರಣ ಮಾಡಬಾರದು. ಉದಾಹರಣೆಗೆ ನ್ಯೂಟನ್ ಇಲ್ಲದೇ ಇದ್ದರೆ ಅವನ ಕೆಲಸವನ್ನು ಇನ್ನೊಬ್ಬನು ಮಾಡುತ್ತಿದ್ದನು. ನೆಪೋಲಿಯನ್ ಲೋದಿ ಯುದ್ಧದಲ್ಲಿ ನಿಧನನಾಗಿದ್ದರೆ ಇನ್ನೊಬ್ಬ ಫ್ರೆಂಚ್ ವ್ಯಕ್ತಿ ಆಸ್ಟರ್‌ಲಿಟ್ಸ್ ಯುದ್ಧವನ್ನು ಗೆಲ್ಲುತ್ತಿದ್ದನು. ಶಿವಾಜಿಯು ಹುಟ್ಟದಿದ್ದರೆ ಇನ್ನೊಬ್ಬ ಮರಾಠನು ರಾಜ್ಯ ಸ್ಥಾಪಿಸುತ್ತಿದ್ದನು. ಎಲ್ಲಾ ಜನರ ಸಹಾಯದಿಂದ ರಾಜ್ಯ ಕಟ್ಟಬಹುದೆಂದು ತೋರಿಸುತ್ತಿದ್ದನು. ಅವರು ರಾಜ್ಯದ ಭೌಗೋಳಿಕ ಸ್ಥಿತಿ, ಅಲ್ಲಿಯ ವಾತಾವರಣ ಮತ್ತು ಪ್ರಾದೇಶಿಕ ಹವಾಗುಣಗಳು ಇದರಲ್ಲಿ ಭಾಗಿಯಾಗುತ್ತಿರುವುದನ್ನು ಹಲವು ಘಟನೆಗಳಲ್ಲಿ ಕಾಣುತ್ತೇವೆ. ಯಾವುದೇ ದೇಶದ ಪ್ರದೇಶವು ಜ್ವಾಲಾಮುಖಿ ಅಥವಾ ಭೂಕಂಪನಗಳನ್ನು ಹೊಂದಿದ್ದರೆ, ಅವರು ಪವಾಡಗಳನ್ನು ನಂಬುತ್ತಿದ್ದರು ಮತ್ತು ಮೂಢನಂಬಿಕೆಗಳಿಗೆ ಒಳಗಾಗುತ್ತಿದ್ದರು. ಈಜಿಪ್ಟ್

ಮತ್ತು ಬ್ಯಾಬಿಲೋನಿಯಾಗಳಲ್ಲಿ ನಾಗರೀಕತೆಗಳು ಹುಟ್ಟಿದ್ದು, ಭೂಮಿಯ ಫಲವತ್ತತೆ ಮತ್ತು ಹಲವು ನದಿಗಳು ಸಾರಿಗೆಯನ್ನು ಸುಲಭ ಸಾಧ್ಯವಾಗಿಸಿದ್ದುದು ಇತಿಹಾಸದಲ್ಲಿ ಕಾಣುತ್ತೇವೆ. ಯಾವುದೇ ದೇಶವು ಬಂಜರಾಗಿದ್ದಲ್ಲಿ, ಆ ದೇಶ ಭೌಗೋಳಿಕ ವಿಸ್ತರಣೆಯನ್ನು ಬಯಸುತ್ತಿದ್ದಿತು. ಯಾವುದೇ ದೇಶದ ಹವಾಗುಣವು ಬಿಸಿಯಾಗಿದ್ದಲ್ಲಿ ಜನರು ಸೋಮಾರಿಗಳಾಗಲು ಸಾಧ್ಯವಾಗುವುದಿಲ್ಲ. ಆದರೆ ಈ ಎಲ್ಲಾ ಕಾರ್ಯಗಳಲ್ಲೂ ಒಂದು ಸರಾಸರಿಯಾಗಿ ಕಾಣುತ್ತಿದ್ದು, ಇವುಗಳು ಕೆಲವು ದೃಷ್ಟಿಕೋನದಲ್ಲಿ ಕಾಣಿಸುತ್ತವೆ.

ವಿದ್ವಾಂಸರಾದ ಬಕ್ಕಲ್‌ನ ಅಭಿಪ್ರಾಯಗಳು ಹಲವು ಇತಿಹಾಸಕಾರರ ಗುಂಪು ವಿರೋಧವನ್ನು ವ್ಯಕ್ತಪಡಿಸುವುದನ್ನು ಕಾಣುತ್ತೇವೆ. ಚರ್ಚ್ ಇತಿಹಾಸಕಾರರು ಇವನನ್ನು ವಿರೋಧಿಸಿದ್ದರು. ಮಾನವನ ವಿಷಯಗಳಲ್ಲಿ ದೈವೀಕ ಶಕ್ತಿಯು ತಲೆಹಾಕುವುದನ್ನು ಇವನು ವಿರೋಧಿಸಿದ್ದು ಇವರ ವಿರೋಧಿಗಳಾಗಲು ಕಾರಣ, ಕಾರ್ಲೈಲ್‌ರವರ ' ಮಹಾನ್ ವ್ಯಕ್ತಿ ' ನೀತಿಯು ಈ ಕಾಲದಲ್ಲಿ ಹೊರಬಂದಿತು. ಬಕ್ಕಲ್‌ರವರ ಪ್ರಕಾರ ಇತಿಹಾಸದಲ್ಲಿ ಘಟನೆಗಳ ಪರಿಸ್ಥಿತಿಗಳನ್ನು ನೋಡುತ್ತದೆಯೇ ಹೊರತು ವ್ಯಕ್ತಿಗಳನ್ನಲ್ಲ. ಮಾನವನನ್ನು ಬಿಟ್ಟು ಆ ಕಾಲದ ಮಹಿಮೆಯನ್ನು ಅನೇಕ ಅಚಾತುರ್ಯ ಕಾರಣಗಳು ಇವುಗಳಲ್ಲಿ ಬಹಳ ಪ್ರಮುಖರಾಗಿ ಕಾಣುತ್ತದೆ. ಇತಿಹಾಸವು ಯಾರು ಯಾರು ಅತವಾ ಜೀವನ ಚರಿತ್ರೆಗಳ ಧಾರಾವಾಹಿಗಳನ್ನೇ ನೋಡುತ್ತೇವೆ. ಬಕಲ್‌ನ ಅಭಿಪ್ರಾಯದಲ್ಲಿ ವ್ಯಕ್ತಿಗಳಿಗಿಂತ ಪ್ರವೃತ್ತಿಗಳಿಗೂ ಮತ್ತು ಆ ಕಾಲದ ಚೈತನ್ಯವನ್ನು ಆ ಕಾಲದ ವ್ಯಕ್ತಿಗಿಂತ ಹೆಚ್ಚಿನದೆಂದೂ ಅವುಗಲಿಗೆ ಆದ್ಯತೆ ಇರಬೇಕೆಂದು ಅಪೇಕ್ಷಿಸಿದನು. ಬ್ಯೂರಿಯೂ ಸಹ ಮಹಾಪುರುಷರೆನ್ನಿಸಿಕೊಳ್ಳುವವರು, ಆಕಸ್ಮಿಕವಾಗಿ ಅಧಿಕಾರಿಕ್ಕೆ ಒಂದು ಮುಂದೆ ಅವರು ಕಾಲದ ಮೇಲೆ ಯಾವ ಪ್ರಭಾವವನ್ನು ಬೀರುವರೆಂದು ಹೇಳುವುದು ಅನಿಶ್ಚಿತವೆಂದೂ ಹೇಳುತ್ತಾರೆ.

ಬಕಲ್‌ನ "ಹಿಸ್ಟ್ರಿ ಆಫ್ ಸಿವಿಲಿಜೇಷನ್ ಇನ್ ಇಂಗ್ಲೇಂಡ್" ಡಾರ್ವಿನ್ನನ "ಆರಿಜನ್ ಆಫ್ ಸ್ಪಿಷೀವ್ ಮತ್ತು ಡಿಸೆಂಟ್ ಆಫ್ ಮ್ಯಾನ್" ಈ ಗ್ರಂಥಗಳು ಇತಿಹಾಸಕಾರರ ಅಭಿಪ್ರಾಯಗಳ ಮೇಲೆ ಬಹುಕಾಲ ಪ್ರಭಾವವನ್ನುಂಟು ಮಾಡಿದವು. ಅವರು ನಿಸರ್ಗ ಆಕೃತಿಗೆ ಒಳಪಡುವುದು. ಉತ್ಕೃಷ್ಟವಾದುದು ಉಳಿಯುವುದು ಮುಂತಾದ ವಿಷಯಗಳು ನಾಗರೀಕತೆಯ ಸಮಸ್ಯೆಗಳಿಗೂ ಅನ್ವಯಿಸಿದವು. ಇತಿಹಾಸವು ತನ್ನ ವಿಷಯ ಸಂಗ್ರಹಣೆಯಲ್ಲಿ ವಿಜ್ಞಾನ ಮಾರ್ಗವನ್ನು ಅನುಸರಿಸುವುದೆಂದೂ, ಅದು ಗಣಿತದಂತೆ ನಿರ್ಧಿಷ್ಟ ರೇಖೆ, ನಿರ್ಧಿಷ್ಟ ನಿಯಮದಂತೆ ನಡೆಯಲು ಸಾಧ್ಯವಿಲ್ಲ. ಅದು ತನ್ನದೇ ಆದ ಸ್ಪಷ್ಟವಾದ ಸಕಾರಣವಾದ ಅಥವಾ ವಿಜ್ಞಾನ ಮಾರ್ಗವನ್ನು ಆಯ್ದುಕೊಳ್ಳುತ್ತದೆ. ಇತಿಹಾಸದಲ್ಲಿ ನೀಬೂರು ಮತ್ತು ರ‍್ಯಾಂಕೆ ಬಹಳ ಸೂಕ್ಷ್ಮವಾಗಿ ಪರಿಶೀಲಿಸುವ ವಿಜ್ಞಾನ ಮಾರ್ಗವನ್ನು ಅಳವಡಿಸಿದರು. ಎಲ್ಲಾ ಸತ್ಯಗಳೂ ಬಹಳ ಸ್ಪಷ್ಟವಾದ ವಿಧಾನಗಳನ್ನು ಒಳಗೊಂಡಿರುತ್ತವೆ. ಟ್ರೆವೆಲಿಯನ್ ಪ್ರಕಾರ ಇತಿಹಾಸದ ಎಲ್ಲಾ ವಿಷಯಗಳು ಅಭಿಪ್ರಾಯದಿಂದಲೇ ಪ್ರಾರಂಭವಾದವು, ಇವುಗಳನ್ನು ವೈಜ್ಞಾನಿಕವಾಗಿ ಪರಿಷ್ಕರಿಸಲಾಯಿತು. ಇತಿಹಾಸವು ಸತ್ಯವನ್ನೇ ಹೇಳುವಾಗ ಅದರ ಮೌಲ್ಯವೆಲ್ಲವೂ ವೈಜ್ಞಾನಿಕವೇ. ಹೀಗೆ ಬಕಲ್, ಕಂಡಾರ್‌ಸೆಟ್, ರ‍್ಯಾಂಕೆ ಮುಂತಾದವರ ಸತತ ಮತ್ತು ಪ್ರಬಲ ವಾದಗಳಿಂದ ಇತಿಹಾಸವು ವಿಜ್ಞಾನವೆನಿಸಿಕೊಂಡಿದೆಯೆಂದು ಹೇಳಬಹುದು.

## 5.3 ಇತಿಹಾಸ ಒಂದು ಕಲೆಯಾಗಿ

ವೈಜ್ಞಾನಿಕವಾದದ ಇತಿಹಾಸಕಾರರನ್ನು ವಿರೋಧಿಸುವ ಹಲವು ಇತಿಹಾಸಕಾರರು ಇತಿಹಾಸವು ಒಂದು ವಿಜ್ಞಾನವಾಗಲು ಸಾಧ್ಯವಿಲ್ಲ ಅದು ಒಂದು ಕಲೆಯೇ ಆಗಿದೆ ಎಂದು ವಾದಿಸುತ್ತಾರೆ. ಇಂಗ್ಲೇಡಿನ ಫ್ರೌಡ್ ಎಂಬುವವನು ಬಕಲ್ ಮತ್ತು ಕಾಮ್ಟೆಯವರನ್ನು ವಿರೋಧಿಸುತ್ತಾನೆ. ಇವನ ಪ್ರಕಾರ ಮನುಷ್ಯರ ಸ್ವಭಾವವನ್ನು ಸಾಮ್ಯಾನೀಕರಣಗೊಳಿಸಲು ಸಾಧ್ಯವಿಲ್ಲ. ಅವರ ಗುರಿಗಳನ್ನು ನಾವು ನಿಶ್ಚಿತವಾಗಿ ತಿಳಿಯಲು ಸಾಧ್ಯವಿಲ್ಲ. ಉದಾಹರಣೆಗೆ ಗಿಬ್ಬನ್ನನ ಪ್ರಕಾರ ದಿಗ್ವಿಯಗಳ ಕಾಲ ಮುಗಿಯಿತು ಎಂದನು. ಆದರೆ ಹಾಗೇ ಹೇಳಿದ ಮೂರು ವರ್ಷಗಳಲ್ಲೇ ನೆಪೋಲಿಯನ್ನನ ಯುದ್ಧಗಳು ಪ್ರಾರಂಭವಾದವು, ಕ್ರಿಮಿಯನ್ ಯುದ್ಧ(1855) ಇಂಗ್ಲೇಂಡಿನ ಯುದ್ಧ (1942) ಹೀಗಾಗಿ ಅಭಿಪ್ರಾಯಗಳನ್ನು ನಾವು ನಿಶ್ಚಿತವಾಗಿ ಹೇಳಲು ಸಾಧ್ಯವಿಲ್ಲ. ಆದುದರಿಂದ ಇತಿಹಾಸದಲ್ಲಿ ಎಲ್ಲಿಯೋ ಒಂದು ಕಡೆ ನೈತಿಕ ನಿಯಮಗಳನ್ನು ಮಾಡಿಕೊಂಡಿದ್ದೇವೆ. ಆ ನೀತಿಯುತ ಬದುಕಿಗೆ ದಂಡ ತೆರಬೇಕಾಗುತ್ತದೆ. ಆದ್ದರಿಂದ ನಿಶ್ಚಿತತೆ, ನಿರ್ಧಾರ ಮುಂತಾದವು ಇತಿಹಾಸದಲ್ಲಿ ನಡೆಯಲಾರವು. ವೈಜ್ಞಾನಿಕ ಇತಿಹಾಸಕಾರರ ವಾದವು ಹೇಗೆದೆಯೆಂದರೆ ಹಿಂದಿನ ದಿನದ ಕಥೆ, ಈ ದಿನದ ಖಾಲಿಜಾಗ ಮತ್ತು ನಾಳೆಯ ವ್ಯರ್ಥ ಪ್ರಯತ್ನದಂತಿದೆ "ಎಂದು ಫ್ರೌಢನು ಇತಿಹಾಸದ ವಿಜ್ಞಾನ ಸವಾಲಿಗೆ ಉತ್ತರ

ನೀಡುತ್ತಾನೆ. ಇತಿಹಾಸದಲ್ಲಿ ಆಕಸ್ಮಿಕಗಳು ವಿಜ್ಞಾನದ ಲೆಖ್ಖವನ್ನು ತಪ್ಪಾಗಿಸುತ್ತವೆ. ಪ್ಲೇಟೋ, ಅಲೆಗ್ಸಾಂಡರ್, ಸೈಂಟ್‌ಪಾಲ್, ಫ್ರೆಡರಿಕ್, ನೋಪೋಲಿಯನ್ ಮತ್ತು ಗಾಂಧಿ ಇವರುಗಳು ಇತಿಹಾಸದ ಅಲೆಗಳನ್ನು ಅಲುಗಾಡಿಸುವ ಶಕ್ತಿಯನ್ನು ಹೊಂದಿದ್ದಾರೆ. ಇವರ ತತ್ವಗಳು ವಿಜ್ಞಾನದಂತೆ ಕಂಡರೂ ಇವುಗಳನ್ನು ಭವಿಷ್ಯದ ಲೆಖ್ಖಾಚಾರಕ್ಕೆ ತೆಗೆದುಕೊಂಡು ಹೀಗೆಯೇ ನೆಡೆಯುತ್ತದೆಂಬುದನ್ನು ಹೇಳಲು ಸಾಧ್ಯವಿಲ್ಲ. ಇತಿಹಾಸದಲ್ಲಿ ಸತ್ಯವನ್ನು ವೈಜ್ಞಾನಿಕವಾಗಿ ತಿಳಿದುಕೊಳ್ಳದೇ ಸಂಶೋಧನಾ ವಿಧಾನದಿಂದ ತಿಳಿದುಕೊಳ್ಳಬಹುದು. ಏಕೆಂದರೆ ಕೆಲವಾರು ಕಾರಣಗಳನ್ನು ತಳಹದಿಯಾಗಿ ಇಟ್ಟುಕೊಂಡು ನಾವು ಇತಿಹಾಸವನ್ನು ನೋಡಲು ಆಗುವುದಿಲ್ಲ. ಉದಾಹರಣೆ:ಭಾರತೀಯ ಇತಿಹಾಸಕಾರನು ತಾನು ತನ್ನದೇಶದ ರಾಷ್ಟ್ರೀಯ ಹೋರಾಟ ಅಥವಾ ಭಾರತೀಯ ಸಂಸ್ಕೃತಿಯ ಬಗ್ಗೆ ಬರೆಯುವಾಗ ನಿಜವಾದ ವಸ್ತುನಿಷ್ಠತೆಯನ್ನು ಇಟ್ಟುಕೊಂಡು ಬರೆಯಲಾರ ? ಅವನು ಬ್ರಿಟೀಷ್ ಇತಿಹಾಸಕಾರನಿಗಿಂತ ವಿಭಿನ್ನವಾದ ಅಭಿಪ್ರಾಯವನ್ನು ಕೊಡಬಹುದು.

ಇತಿಹಾಸ ವಿಜ್ಞಾನವಲ್ಲವೆಂದು ವಾದಿಸುವ ಟೀಕೆಕಾರರು ಇತಿಹಾಸದ ದಾಖಲೆಗಳ ಸ್ವಭಾವವೇ ಇತಿಹಾಸವನ್ನು ವಿಜ್ಞಾನವೆಂದು ಕರೆಯಲಾಗುವುದಿಲ್ಲಎನ್ನುತ್ತಾರೆ. ವಿಜ್ಞಾನದಲ್ಲಿ ವಿಜ್ಞಾನಿ ಪ್ರಯೋಗಶಾಲೆಯಲ್ಲಿ ಪ್ರಯೋಗ ಮಾಡಿ ಬಂದ ಫಲಿತಾಂಶವನ್ನು ತಾಳೆ ನೋಡಿ, ಸಾಮಾನ್ಯೀಕರಣ ಮಾಡಿ ಮತ್ತೆ ಪುನಃ ಪ್ರಯೋಗ ಮಾಡಿ ನಿಯಂತ್ರಣಗೊಳಿಸಿ, ಅದನ್ನು ಪುನಃ ಬದಲಾಯಿಸಿ ವಿಷಯದ ಬಗ್ಗೆ ತನ್ನ ಅಭಿಪ್ರಾಯ ನೀಡುತ್ತಾನೆ. ಆದರೆ ಇತಿಹಾಸದಲ್ಲಿ ಪ್ರಯೋಗ ನಡೆಯುವುದಿಲ್ಲ. ಒಂದೇ ಅಬಿಪ್ರಾಯ ಬರುವುದಿಲ್ಲ. ನೆಪೋಲಿಯನ್, ಗಾಂಧಿ ಇನ್ನು ಮುಂತಾದವರ ಬಗ್ಗೆ ಒಂದೇ ಅಭಿಪ್ರಾಯ ಬರದೇ ಹಲವು ವಿಧದ ಅಭಿಪ್ರಾಯಗಳು ಹೊರಬರುತ್ತವೆ. ಹಾಗಾಗಿ ಇತಿಹಾಸದಲ್ಲಿ ವೈಜ್ಞಾನಿಕ ವಿಶ್ಲೇಷಣೆ, ಸಂಶೋಧನೆ ವಿಜ್ಞಾನದ ರೀತಿಯಲ್ಲಿ ಇಲ್ಲ.

ಇತಿಹಾಸಕಾರರು ಆದರ್ಶಗಳು ಅಥವಾ ಚಿಂತನೆಗಳ ಬಗ್ಗೆ ಯೋಚಿಸುತ್ತಾರೆ. ಈ ರೀತಿ ಬಂದ ಇತಿಹಾಸದ ಆದರ್ಶಗಳನ್ನು ವೈಜ್ಞಾನಿಕ ವಿಶ್ಲೇಷಣೆಯಿಂದ ಅದರ ಪ್ರಭಾವವನ್ನು ಕಡಿಮೆ ಮಾಡಲಾಗುವುದಿಲ್ಲ. ಏಕೆಂದರೆ ಈ ಆದರ್ಶಗಳು ಹಿಂದಿನ ಕಾಲದ ಘಟನೆಗಳಾಗಿರುತ್ತವೆ. ಅವುಗಳನ್ನು ಈಗ ತಂದು ಪ್ರಯೋಗಶಾಲೆಯಲ್ಲಿಟ್ಟು ಪರೀಕ್ಷೆ ಮಾಡಲಾಗುವುದಿಲ್ಲ. ಕಥೆ, ಕವನ, ನಾಟಕಗಳನ್ನು ನಾವು ಮಾಡಿ ಅದರ ಪ್ರಭಾವವನ್ನು ಕಡಿಮೆ ಮಾಡಲಾಗುವುದಿಲ್ಲ. ಜೆ.ಎಂ.ಟ್ರೆವೇಲ್ಯಾನ್‌ರವರು "ಇತಿಹಾಸದಲ್ಲಿ ದೊರೆಯುವ ಐತಿಹಾಸಿಕ ದಾಖಲೆಗಳನ್ನು ಇಟ್ಟುಕೊಂಡು ಅವುಗಳ ಬಗ್ಗೆ ಊಹೆಯನ್ನು ಮಾಡುವಂತಹವುಗಳಾಗಿವೆ. ಇತಿಹಾಸವು ವೈಚಾರಿಕ ಮತ್ತು ಚಿಂತನಾಶೀಲ ವಿಷಯಗಳನ್ನು ಅಧಯಯನ ಮಾಡುತ್ತದೆಂದರೂ, ಇದನ್ನು ವೈಜ್ಞಾನಿಕವೆಂದು ಕರೆಯಲಾಗದು. ವಿಜ್ಞಾನವು ಭೌತಿಕ ಪ್ರಪಂಚದ ವಿಷಯಗಳ ಮೇಲೆ ಸಂಶೋಧನೆ ಮಾಡುತ್ತದೆ ಮತ್ತು ಕಾರಣ ಮತ್ತು ಪರಿಣಾಮ ತತ್ವಗಳ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತದೆ. ಆದರೆ ಇಂತಹ ಕಾರ್ಯಗಳನ್ನು ಇತಿಹಾಸ ಮಾಡುವುದಿಲ್ಲ. ಇತಿಹಾಸವು ವಿಜ್ಞಾನದಂತೆ ಕೆಲವು ವಿಧಾನಗಳನ್ನು ಸಾಮಾನ್ಯ ವಿಧಿಗಳಾಗಿ ಉಪಯೋಗಿಸಲು ಸಾಧ್ಯವಿಲ್ಲ. ಉಪವಾಸದ ಬಗ್ಗೆ ಯಾವುದೇ ರೀತಿಯ ತತ್ವಗಳಾಗಲೀ ಅಥವಾ ಸಾಮಾನ್ಯೀಕರಣವನ್ನು ಮಾಡಲಾಗುವುದಿಲ್ಲ. ಏಕೆಂದರೆ ಈ ಉಪವಾಸದ ಬಗ್ಗೆ ಹಲವು ಬಗೆಯ ಅಭಿಪ್ರಾಯಗಳನ್ನು ವಿವಿಧ ವ್ಯಕ್ತಿಗಳು ನೀಡುವರು. ಒಬ್ಬ ಮನುಷ್ಯನ ಜೀವನವು ಎಲ್ಲಾ ಮನುಷ್ಯರಲ್ಲೂ ಒಂದೇ ಆಗಿರುವುದಿಲ್ಲ. ಉದಾ: ಸಾಕ್ರೆಟೆಸ್ ಗ್ರೀಕರಲ್ಲೆಲ್ಲಾ ಬುದ್ಧಿವಂತರಾದರೂ ಅವನು ದಂಡನೆಯಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಕಾನೂನಿನ ಅಡಿಯಲ್ಲಿ ಕೆಲವು ಕಾರಣಗಳಿಂದ ಅಪರಾಧಿ ನಿಪರಾಧಿಯಾಗಬಹುದು. ಟ್ರೆವಲ್ಯಾನ್‌ನ ಈ ಹೇಳಿಕೆಯನ್ನು ಎ.ಎಲ್.ರೌಸ್‌ರವರು ಒಪ್ಪಿಕೊಂಡು ಅದಕ್ಕೆ ತಮ್ಮ ಸಮ್ಮತಿ ನೀಡಿದ್ದು ಇತಿಹಾಸವು ಯಾವಾಗಲೂ ಕೂಡ ಕಲೆಯಾಗಿರುತ್ತದೆಂದು ತಿಳಿಸುತ್ತಾರೆ.

## 5.4 ಇತಿಹಾಸವು ವಿಜ್ಞಾನ ಮತ್ತು ಕಲೆಯಾಗಿ

ಇತಿಹಾಸವು ವಿಜ್ಞಾನದಲ್ಲಿರುವ ಅಂಶಗಳನ್ನೇ ಹೊಂದಿದ್ದರೂ ಹಲವು ವಿಚಾರಗಳು ಕಲೆಯ ಮಾಧರಿಯಲ್ಲಿರುತ್ತದೆ. ಆದ್ದರಿಂದಲೇ ಇತಿಹಾಸಕಾರರು ಇತಿಹಾಸವನ್ನು ವಿಜ್ಞಾನವೂ ಹೌದು ಮತ್ತು ಕಲೆಯೂ ಹೌದು ಎನ್ನುತ್ತಾರೆ. ಇದು ಒಂದು ರೀತಿಯ ತರ್ಕಶಾಸ್ತ್ರದಂತೆ ವಿಜ್ಞಾನವೆನ್ನಬಹುದು ಮತ್ತು ಕಲೆಯೂ ಎನ್ನಬಹುದು. ಕೆಲವು ಇತಿಹಾಸಕಾರರು ಇತಿಹಾಸವನ್ನು ವಿಜ್ಞಾನವೆಂದು ತಿಳಿದಿದ್ದರೂ ತಮ್ಮ ನಿರೂಪಣೆಯಲ್ಲಿ ವಿಷಯ ಪರವಾಗಿ ಕಲಾತ್ಮಕ ನಿರೂಪಣೆಯನ್ನು ನೀಡುತ್ತಾರೆ. ಇದನ್ನು ಅವರು ವಿಜ್ಞಾನಕ್ಕಿಂತ

ಹೆಚ್ಚೆಂದು ವಾದಿಸುತ್ತಾರೆ. ಕೆಲವೊಮ್ಮೆ ತಮ್ಮ ನಿರೂಪಣೆಯಲ್ಲಿ ತಪ್ಪು ಅಭಿಪ್ರಾಯವನ್ನು ತಂದರೂ ಸಹ, ವೈಜ್ಞಾನಿಕ ತತ್ವವನ್ನು ಪಡೆದು ವಿಷಯದೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತಾರೆ. ವಿಜ್ಞಾನವು ತನ್ನ ಮೂಲ ಅಂಶಗಳಲ್ಲಿ ಯಾವುದೇ ರೀತಿಯ ಭಿನ್ನತೆಯನ್ನು ತೋರಿಸುವುದಿಲ್ಲ. ಇತಿಹಾಸ ವಿಜ್ಞಾನವೂ ಆಗಿದ್ದು ಕಲೆಯೂ ಆಗಿರುವುದನ್ನು ನಿರೂಪಿಸುತ್ತಾರೆ. ಅಡಿಗೆ ಮಾಡುವುದು ಒಂದು ಕಲೆಯೆನ್ನುತ್ತೇವೆ. ಆದರೆ ಅಡಿಗೆಯನ್ನು ಬೇರೆ ಬೇರೆ ಪದಾರ್ಥಗಳನ್ನು ಹಾಕಿ ಕೆಲವರು ರುಚಿಕರವಾಗಿ ಮಾಡುತ್ತಾರೆ ಮತ್ತೆ ಕೆಲವರು ಅಷ್ಟೇ ಕೆಟ್ಟದಾಗಿ ತಯಾರಿಸುತ್ತಾರೆ. ಅದರಂತೆಯೇ ಗಿಬ್ಬನ್ ಮೆಕಾಲೆ, ಟ್ರೆವೆಲ್ಯಾನ್ ಅಥವಾ ಬ್ಯೂರಿಯವರು ಇತಿಹಾಸವನ್ನು ಒಂದು ರೀತಿಯ ಆಸಕ್ತಿಯುತ ಸಾಹಿತ್ಯದ ತುಂಡಾಗಿ ಮಾಡುತ್ತಾರೆ. ಇದೇ ವಿಷಯದಲ್ಲಿ ರ್ಯಾಂಕೆ, ಸ್ಪೆಂಗ್ಲರ್, ಬಕಲ್ ಮುಂತಾದವರು ವೈವಿಧ್ಯಮಯ ವೈಜ್ಞಾನಿಕ ವಿಷಯವನ್ನಾಗಿ ಕರೆದಿದ್ದಾರೆ. ಅನೇಕ ವಿದ್ವಾಂಸರು ಇತಿಹಾಸವು ಕಲೆ ಮತ್ತು ವೈಜ್ಞಾನಿಕವಾಗಿ ಕಾಣುವಂತೆ ನಿರೂಪಿಸಿದ್ದಾರೆ. ಈ ಉದಾಹರಣೆಗಳು ಇತಿಹಾಸವನ್ನು ವಿಜ್ಞಾನಕ್ಕಿಂತ ಎತ್ತರದಲ್ಲಿರುವ ಕಲಾಲೋಕಕ್ಕೆ ತೆಗೆದುಕೊಂಡು ಹೋಗುತ್ತದೆ.

ಇತಿಹಾಸದಲ್ಲಿ ದಾಖಲೆಗಳ ಸಂಗ್ರಹವು ಇಟ್ಟಿಗೆಯಂತಿದ್ದು, ಇವುಗಳನ್ನು ಉಪಯೋಗಿಸಿ ಕಟ್ಟಡಗಳ ನಿರ್ಮಾತೃ ಅರಮನೆ, ಚರ್ಚ್, ಮನೆ, ಅಥವಾ ಸೇತುವೆಯಾಗಿ ಮಾಡುತ್ತಾನೆ. ಈ ಕಾರ್ಯದಲ್ಲಿ ಇತಿಹಾಸಕಾರವು ವೈಜ್ಞಾನಿಕ ಅಥವಾ ಕಲಾತ್ಮಕ ವಿಷಯಗಳನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸುತ್ತಾನೆ. ಸಂಶೋಧನೆಯನ್ನು ಜನಾನುರಾಗಿ ಮಾಡಲು ಹೋಗಿ ಯಾವುದೇ ಒಂದು ನೀತಿಗೆ ಸಿಲುಕಿಕೊಳ್ಳಬಾರದು. ಉದಾ: ಜರ್ಮನ್ನರು ಸತ್ಯವನ್ನು ಎಣಿದರೆ ಫ್ರೆಂಚರು ಕಾದಂಬರಿಯ ರೀತಿಯಲ್ಲಿ ಶೃಂಗರಿಸುತ್ತಾರೆ. ರೂಸೋನ ಹೇಳಿಕೆಯು ಎಲ್ಲರಿಗೂ ಪ್ರಿಯವಾದರೂ ಅದರಲ್ಲಿ ಸತ್ಯತೆಯಿಲ್ಲವೆಂಬುದನ್ನು ಅದನ್ನು ಆಳವಾಗಿ ಅಧ್ಯಯನ ಮಾಡಿದಾಗ ತಿಳಿಯುತ್ತದೆ. ಮೆಕಾಲೆಯ ಇತಿಹಾಸವು ಎಲ್ಲ ರಂಗದಲ್ಲಿ ಇದ್ದರೂ ಕೆಲವು ವಿಷಯಗಳನ್ನು ಒಳ್ಳೆಯ ಬೆಳಕನ್ನು ಚೆಲ್ಲಿದರೂ, ಅವುಗಳನು ಹೆಚ್ಚಾಗಿ ಪ್ರಶಂಸಾತ್ಮಕವಾಗಿ ಕಾಣುತ್ತೇವೆ. ಹೆರಡೋಟಸ್, ಟ್ಯಾಸಿಟಸ್, ಡಿಕ್ಕಿನ್ಸಿ, ಲಿವಿ, ಹ್ಯೂಮ್, ಫ್ರೌಡ್ ಇದೇ ರೀತಿಯ ಶೈಲಿಯನ್ನು ಹೊಂದಿದ್ದು ವಿಷಯದ ನಿಖರತೆಗೆ ಬೆಲೆಯಿತ್ತಿಲ್ಲ.

ಇತಿಹಾಸವು ದಾಖಲೆಗಳ ಸಂಗ್ರಹ, ಅವುಗಳನ್ನು ಅಂದಾಜು ಮಾಡುವುದು ಮತ್ತು ಹೇಳಿಕೆಗಳನ್ನು ಸಿದ್ಧತೆ ಪಡಿಸುವುದು ಮುಂತಾದ ವಿಷಯಗಳಲ್ಲಿ ವಿಮರ್ಶೆ, ಸಾಮಾನ್ಯೀಕರಣ, ಮುಂತಾದ ವಿಷಯಗಳಲ್ಲಿ ಇತಿಹಾಸವು ವೈಜ್ಞಾನಿಕವಾಗಿ ಕಾರ್ಯನಿರ್ವಹಿಸುತ್ತದೆ. ಈ ವಿಷಯದಲ್ಲಿ ಲಾರ್ಡ್ ಆಕ್ಟನ್‌ರವರು ವಿಜ್ಞಾನವೇ ಆಗಲೀ ಅಥವಾ ಇತಿಹಾಸವೇ ಆಗಲೀ ಎರಡೂ ವೈಜ್ಞಾನಿಕ ಪದ್ಧತಿಯಲ್ಲಿ ಸಂಶೋಧನಾ ಕೆಲಸ ಮಾಡುತ್ತವೆ ಮತ್ತು ನಿರೂಪಣೆಯಲ್ಲಿ ಕಲೆಯಂತೆ ಕೆಲಸ ಮಾಡುತ್ತವೆಂದು ತಿಳಿಸುತ್ತಾರೆ. ಇತಿಹಾಸ ಸಂಶೋಧನೆಯಲ್ಲಿ ಎರಡು ಆಯಾಮಗಳನ್ನು ಕಾಣುತ್ತೇವೆ. ಒಂದು ಪ್ರಾಥಮಿಕ ಮತ್ತು ಎರಡು ಅಂತಿಮ ಆಯಾಮ. ಪ್ರಾಥಮಿಕವನ್ನು ನಾವು ವೈಜ್ಞಾನಿಕವೆಂದೂ ಮತ್ತು ಅಂತಿಮ ಆಯಾಮವನ್ನು ಕಲಾತ್ಮಕವೆಂದೂ ಕಾಣುತ್ತೇವೆ. ಬ್ಯೂರಿಯವರು "ವಿಜ್ಞಾನ ಮತ್ತು ಕಲೆ ಇಂದಿನ ಇತಿಹಾಸದ ಕ್ಷೇತ್ರದಲ್ಲಿ ಒಂದಾಗಿವೆ" ಎನ್ನುತ್ತಾರೆ.

ಕೆಲವೊಮ್ಮೆ ವಿಜ್ಞಾನ ಮತ್ತು ಇತಿಹಾಸಕಾರನ ನಡುವೆ ಭಿನ್ನತೆಯಿರುವುದನ್ನು ಕಾಣುತ್ತೇವೆ. ವಿಜ್ಞಾನಿಯ ತೀರ್ಮಾನಗಳು ನಿಖರವೂ, ನಿರ್ದಿಷ್ಟವೂ ಮತ್ತು ಬದಲಾವಣೆಯಾಗದಂತಹವು, ಆದರೆ ಇತಿಹಾಸಕಾರನ ತೀರ್ಮಾನಕ್ಕೆ ನಿರ್ಧಾರವಾಗಿಲ್ಲದವೂ ಮತ್ತು ಆಗಾಗ ಬದಲಾವಣೆಗೆ ಒಳಗಾದವುಗಳೂ ಆಗಿವೆ. ವಿಜ್ಞಾನಿಯು ಸಂಖ್ಯೆ, ಆಕೃತಿಗಳು, ಗ್ರಾಫ್‌ಗಳನ್ನೂ, ಇತಿಹಾಸಕಾರನು ವಿವರಣೆ, ನಿರೂಪಣೆ ಮುಂತಾದವನ್ನು ಹೊಂದಿರುತ್ತದೆ. ವಿಜ್ಞಾನಿ ವಾಸ್ತವಿಕತೆಯನ್ನೂ ಇತಿಹಾಸಕಾರ ವಿಷಯಕ್ಕೆ ಒತ್ತನ್ನು ನೀಡುತ್ತಾನೆ. ಇತಿಹಾಸಕಾರನು ಕಾಲವನ್ನು ಮೂಲವಾಗಿ ತೆಗೆದುಕೊಂಡರೆ ವಿಜ್ಞಾನಿಯೂ ಭೂ ಭಾಗವನ್ನು ತೆಗೆದುಕೊಂಡು ಸಂಶೋಧನೆ ನಡೆಸುತ್ತಾನೆ. ಇತಿಹಾಸವು ಮೂರು ರೀತಿಯ ಕಾರ್ಯವನ್ನು ಮಾಡುತ್ತದೆ ಅವುಗಳು, ವೈಜ್ಞಾನಿಕ, ಕಲ್ಪನಾತೀತ ಮತ್ತು ಸಾಹಿತ್ಯಕ ಕಾರ್ಯಗಳು. ಇದರಿಂದ ಇತಿಹಾಸವು ಕೇವಲ ವೈಜ್ಞಾನಿಕ ಅಲ್ಲ ಕಲೆಯೂ ಹೌದೆಂಬುದು ತಿಳಿದುಬರುತ್ತದೆ. ಆದರೆ ಇದು ವಿಜ್ಞಾನದ ಕೆಲಸವನ್ನೂ ಮಾಡಿ ಕಲೆಯ ವಿಷಯದಲ್ಲಿ ಒತ್ತನ್ನು ತನ್ನ ನಿರೂಪಣೆಯಲ್ಲಿ ನೀಡುತ್ತದೆ. ಒಂದು ರೀತಿಯಲ್ಲಿ ಇತಿಹಾಸವು ಜೀವನದ ವಿಮರ್ಶೆಯನ್ನು ಮಾಡುವಲ್ಲಿ ಕಲೆಯಂತೆ ಕೆಲಸ ಮಾಡಿದರೆ, ಇನ್ನೊಂದು ರೀತಿಯಲ್ಲಿ ಸತ್ಯವನ್ನು ಕಂಡು ಹಿಡಿಯುವಲ್ಲಿ ವಿಜ್ಞಾನವಾಗಿ ಕಾರ್ಯನಿರ್ವಹಿಸುತ್ತದೆ. ಇತಿಹಾಸವು ಛಾಯಚಿತ್ರವಾಗಿ ಕೆಲಸ ಮಾಡದೇ ಒಂದು ಶಿಲ್ಪಾಕೃತಿಯಲ್ಲಿ ಮಾನವನನ್ನು ಕಾಣುತ್ತದೆ. ಆದ್ದರಿಂದ ಇತಿಹಾಸವನ್ನು ವಿಜ್ಞಾನ ಮತ್ತು ಕಲೆಗಳ ನಡುವಿನ ಒಂದು ಪ್ರಮುಖ ವಿಷಯವೆಂದು ವಿದ್ವಾಂಸರು ಕರೆದಿದ್ದಾರೆ.

## 5.5 ಘಟಕದ ಸಾರಾಂಶ

ಈ ಘಟಕದ ಅಧ್ಯಯನದ ನಂತರ ನಾವುಗಳು ಕೆಳಗಿನ ಅಂಶಗಳನ್ನು ತಿಳಿದುಕೊಂಡೆವು:

* ಇತಿಹಾಸದ ಅರ್ಥವನ್ನು ತಿಳಿದುಕೊಂಡೆವು
* ಇತಿಹಾಸವು ಒಂದು ವಿಜ್ಞಾನವಾಗಿ ಕಾರ್ಯನಿರ್ವನಿರ್ವಹಿಸುತ್ತದೆಂದು ತಿಳಿಸುವ ವಿದ್ವಾಂಸರ ಅಭಿಪ್ರಾಯವನ್ನು ಅರಿತೆವು.
* ಇತಿಹಾಸವು ಒಂದು ಕಲೆಯಾಗಿ ನಿರೂಪಣೆಯನ್ನು ನೀಡುತ್ತದೆ ಎಂಬುದನ್ನು ತಿಳಿದೆವು.
* ಇನ್ನು ಕೆಲವುಇತಿಹಾಸಕಾರರು ಹೇಳುವಂತೆ ಇತಿಹಾಸವು ವಿಜ್ಞಾನವಾಗಿಯೂ ಕಾರ್ಯ ನಿರ್ವಹಿಸುತ್ತದೆ ಮತ್ತು ಇದು ಕಲೆಯಾಗಿಯೂ, ಕೆಲಸ ಮಾಡುತ್ತದೆಂಬುದನ್ನೂ ಸಹ ಅರ್ಥ ಮಾಡಿಕೊಂಡೆವು.

## 5.6 ಸ್ವಯಂ ಪರಿಶೀಲನಾ ಪ್ರಶ್ನೆಗಳು

1. ಇತಿಹಾಸವನ್ನು ವಿಜ್ಞಾನವಾಗಿ ಕಾಣುವ ಇತಿಹಾಸಕಾರರ ಪ್ರತಿಪಾದನೆಯನ್ನು ಪರಿಶೀಲಿಸಿ
2. ಇತಿಹಾಸವನ್ನು ಕಲೆಯಾಗಿ ಕಾಣುವ ಇತಿಹಾಸಕಾರರ ಹೇಳಿಕೆಗಳನ್ನು ಪರೀಕ್ಷಿಸಿ.
3. ಇತಿಹಾಸವನ್ನು ವಿಜ್ಞಾನ ಮತ್ತು ಕಲೆಯೆಂದು ಹೇಗೆ ಅಂದಾಜು ಮಾಡುವಿರಿ ? ತಿಳಿಸಿ.

## 5.7 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. Acton : Study of History
2. Colling Wood : The Idea of History
3. Trevelyan.G.M : Autobiography
4. ಎ.ವಿ.ವೆಂಕಟರತ್ನಂ ಮತ್ತು ಪದ್ಮ : ಸಂಶೋಧನಾ ಮಾರ್ಗ
5. ಬಾ.ರಾ.ಗೋಪಾಲ : ಇತಿಹಾಸ ದೃಷ್ಟಿ ಮತ್ತು ಸಿದ್ಧಾಂತ

# ಘಟಕ - 6 ಸಂಶೋಧಕನ ಅರ್ಹತೆಗಳು - ಸಂಶೋಧನಾ ವಿಷಯದ ಆಯ್ಕೆ

*ವಿಷಯಾನುಕ್ರಮಣಿಕೆ*


6.0 ಉದ್ದೇಶಗಳು

6.1 ಪೀಠಿಕೆ

6.2 ಸಂಶೋಧನೆ ಎಂದರೇನು?

6.3 ಸಂಶೋಧಕನ ಅರ್ಹತೆಗಳು

6.4 ಸಂಶೋಧನಾ ವಿಷಯದ ಆಯ್ಕೆ

6.5 ಘಟಕದ ಸಾರಾಂಶ

6.6 ಸ್ವಯಂ ಪರಿಶೀಲನಾ ಪ್ರಶ್ನೆಗಳು

6.7 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 6.0 ಉದ್ದೇಶಗಳು

ಈ ಘಟಕ 6 ರ ಅಧ್ಯಯನದಿಂದ ನಾವುಗಳು ಕೆಳಗಿನ ವಿಷಯಗಳನ್ನು ತಿಳಿಯಲಿದ್ದೇವೆ.

* ಸಂಶೋಧನೆ ಎಂದರೇನು? ಸಂಶೋಧನೆಯ ಅರ್ಥವೇನು? ಮತ್ತು ಸಾಮಾನ್ಯವಾಗಿ ಸಂಶೋಧನೆಯನ್ನು ಹೇಗೆ ಮಾಡಲಾಗುವುದು.
* ಸಂಶೋಧಕನಿಗೆ ನಿಜವಾಗಿಯೂ ಇರಬೇಕಾದ ಅರ್ಹತೆಗಳನ್ನು ಅರ್ಥಮಾಡಿಕೊಳ್ಳುವುದು.
* ಸಂಶೋಧನೆಗೆ ಮೊದಲು ಸಂಶೋಧನಾ ವಿಷಯದ ಆಯ್ಕೆ, ಈ ಆಯ್ಕೆಯಲ್ಲಿ ಅನುಸರಿಸಬೇಕಾದ ಚಿಂತನೆಗಳು ಮುಂತಾದವು.
* ಇದಲ್ಲದೇ ಸಂಶೋಧನಾ ಕಾರ್ಯವನ್ನು ಹೇಗೆ ಮುನ್ನಡೆಸಬೇಕು ಎಂಬಿವೇ ಮುಂತಾದ ವಿಷಯಗಳನ್ನು ತಿಳಿಯಬೇಕು.

## 6.1 ಪೀಠಿಕೆ

ಹಿಂದೆ ಗತಿಸಿದ ಘಟನೆಗಳನ್ನು ಸರಿಯಾದ ರೀತಿಯಲ್ಲಿ ಪ್ರಸ್ತುತಪಡಿಸುವ ಕಾರ್ಯದಲ್ಲಿ ಅಳವಡಿಸಿಕೊಳ್ಳುವ ಕಾರ್ಯ ವಿಧಾನವನ್ನು ಇತಿಹಾಸದಲ್ಲಿ ಇತಿಹಾಸ ಸಂಶೋಧನಾ ವಿಧಾನವೆಂದು ಕರೆಯಲಾಗುತ್ತದೆ. ಈ ವಿಧಾನವು ಇತಿಹಾಸವನ್ನು ಹೇಗೆ ಬರೆಯಬೇಕು (ಅಂದರೆ ಇದೇನು ಅಷ್ಟೊಂದು ಸುಲಭದ ಮಾತಲ್ಲ) ಎಂಬುದನ್ನು ತಿಳಿಸುತ್ತದೆ. ಈ ಬರವಣಿಗೆಯಲ್ಲಿ ವಸ್ತುನಿಷ್ಠತೆಯನ್ನು ಸಂಪೂರ್ಣವಾಗಿ ಕಾಪಾಡಲು ಸಾಧ್ಯವಿಲ್ಲವಾದರೂ, ಘಟನೆಗಳು ಹೇಗೆ ನಡೆದವು ಎಂಬುದನ್ನು, ಅವುಗಳು ಹೇಗೆ ನಡೆದವೋ ಹಾಗೆಯೇ ಹೇಳುವುದನ್ನು ಗುರಿಯಾಗಿ ಹೊಂದಿರುವುದನ್ನು ಕಾಣುತ್ತೇವೆ. ಈ ಘಟಕದಲ್ಲಿ ಸಂಶೋಧನೆ ಎಂದರೇನು? ಸಂಶೋಧಕನಿಗಿರಬೇಕಾದ ಅರ್ಹತೆಗಳೇನು? ಮತ್ತು ಸಂಶೋಧಕರು ಆಯ್ಕೆ ಮಾಡಿಕೊಳ್ಳಬೇಕಾದ ಸಂಶೋಧನಾ ವಿಷಯದ ಬಗ್ಗೆ ವಿವರವಾಗಿ ತಿಳಿಯಲಾಗುವುದು.

## 6.2 ಸಂಶೋಧನೆ ಎಂದರೇನು?

ಸಂಶೋಧನೆಯನ್ನು ಮಾಡುವವರಲ್ಲಿ ಮೊದಲು ಏಳುವ ಪ್ರಶ್ನೆ ಸಂಶೋಧನೆ ಎಂದರೇನು? ಇದು ಏನನ್ನು ಸೂಚಿಸುತ್ತದೆ ಎಂಬುದು. ಇದಕ್ಕೆ ಉತ್ತರ ಸಂಶೋಧನೆ ಎಂದರೆ ಒಬ್ಬ ವ್ಯಕ್ತಿಯು ಒಂದು ಪ್ರಮುಖ ಕಾರ್ಯ ಚಟುವಟಿಕೆಯನ್ನು ಆಯ್ಕೆ ಮಾಡಿಕೊಂಡಿದ್ದು, ಆ ಕಾರ್ಯದಿಂದ ಹೊಸ ವಿಷಯವನ್ನು ಹೊರತರುವುದು ಮತ್ತು ಇದುವರೆಗೂ ತಿಳಿದುಕೊಂಡಿರುವ ಜ್ಞಾನವನ್ನು ವಿಸ್ತಾರಗೊಳಿಸುವುದು ಮತ್ತು ಹೊಸ ವಿಷಯ ಮತ್ತು ತನ್ನದೇ ಆದ ಹೊಸ ವಿಷಯವನ್ನು ಸಮಾಜಕ್ಕೆ ಕೊಡುಗೆ ನೀಡುವುದೆಂಬುದು ಸಂಶೋಧನೆಯ ಅರ್ಥವನ್ನು ತಿಳಿಸುತ್ತದೆ. ಯಾವುದೇ ವಿಷಯದ ಬಗ್ಗೆ ಪರೀಕ್ಷಿಸಿ, ಅನ್ವೇಷಣೆ ನಡೆಸಿ, ಅದರ ಬಗ್ಗೆ ಹೊಸ ವಿಷಯಗಳು ಅಥವಾ ಹೊಸ ಅಂಶಗಳನ್ನು ಹೊರತಂದು ತಮ್ಮದೇ ಆದ ವಿಷಯ ವಿಶ್ಲೇಷಣೆಯನ್ನು ನೀಡುವುದೇ ಸಂಶೋಧನೆ. ಇದುವರೆಗೂ ಆ ವಿಷಯದ ಮೇಲೆ ಆಗಿರುವ ಸಂಶೋಧನೆಯನ್ನು ಪುನಃ ವಿಶ್ಲೇಷಿಸಿ ಹೊಸದಾಗಿ ಸಿಕ್ಕಿರುವ ಅಂಶಗಳನ್ನು ವಿಸ್ತಾರವಾಗಿ ವಿಶ್ಲೇಷಿಸುವುದು. ಈ ಸಂಶೋಧನೆಯ ವಿಷಯವಾಗಿದೆ. ಅಂದರೆ ಸಂಶೋಧನೆಯು ಮೂರು ಅಂಶಗಳನ್ನು ಒಳಗೊಂಡಿದೆ. ಅವುಗಳು;

1. ಹೊಸ ಅಂಶಗಳನ್ನು ಸೇರಿಸುವುದು
2. ಇರುವ ಆಧಾರಗಳನ್ನು ಹೊಸದಾಗಿ ವಿವರಿಸುವುದು
3. ಈ ಎಲ್ಲಾ ಅಂಶಗಳನ್ನು ಒಂದು ಚಿಂತನೆಯಾಗಿ ನೀಡುವುದು.

## 6.3 ಸಂಶೋಧಕನ ಅರ್ಹತೆಗಳು

ಸಂಶೋಧನೆಯೆಂದರೇನು ಮತ್ತು ಸಂಶೋಧನೆಯಲ್ಲಿ ಯಾವ ಯಾವ ವಿಷಯಗಳನ್ನು ಒಳಗೊಂಡಿವೆ ಎಂಬುದನ್ನು ತಿಳಿದ ನಂತರ ನಾವು ಸಂಶೋಧಕನೆಂದರೆ ಯಾರು? ಅವನ ಅರ್ಹತೆಗಳೇನು? ಅವನ ಆಸಕ್ತಿ ಅವನ ಕಾರ್ಯಕೌಶಲ್ಯ, ಮತ್ತು ಅವನಲ್ಲಿರುವ

ಭಾವನೆಗಳು ಮುಂತಾದವುಗಳ ಬಗ್ಗೆ ನಾವು ತಿಳಿಯಬೇಕಾಗುತ್ತದೆ. ಎಲ್ಲರೂ ಕೂಡಾ ಸಂಶೋಧಕ ಅಥವಾ ಇತಿಹಾಸಕಾರನಾಗಲೂ ಸಾಧ್ಯವಿಲ್ಲ. ಇದಲ್ಲದೇ, ಇತಿಹಾಸ ಅಧ್ಯಯನ ಮಾಡಿದವರು ಮಾತ್ರ ಸಂಶೋಧಕರಾಗಬೇಕೆಂದೇನೂ ಇಲ್ಲ. ಏಕೆಂದರೆ ನಮ್ಮಲ್ಲಿ ಉದಾಹರಣೆಗೆ ಕಾಮ್ಸೆಯು ಒಬ್ಬ ಗಣಿತಶಾಸ್ತ್ರಜ್ಞ, ಹೆಗೆಲ್ ಒಬ್ಬ ದಾರ್ಶನಿಕ, ಕ್ರೋಷೆ ಒಬ್ಬ ಮಂತ್ರಿ ಮತ್ತು ಕೋಸಾಂಬಿ ಇತಿಹಾಸದ ವೃತ್ತಿಗೆ ಸೇರಿದವರಲ್ಲ. ಆದರೆ ಇತಿಹಾಸ ಪ್ರಪಂಚದಲ್ಲಿ ಇವರೆಲ್ಲರೂ ಬಹಳ ಪ್ರಸಿದ್ಧ ಇತಿಹಾಸಕಾರರು ಮತ್ತು ಸಂಶೋಧಕರೆಂದು ಗುರುತಿಸಿಕೊಂಡಿರುವರು.

ಆದ್ದರಿಂದ ಇತಿಹಾಸಕಾರನಾಗಲು ಒಂದು ಮನಸ್ಸಿರಬೇಕು, ಆಸಕ್ತಿಯಿರಬೇಕು. ವಿಮರ್ಶಾತ್ಮಕ ಶಕ್ತಿ ತಾಂತ್ರಿಕ ಆಸಕ್ತಿ, ಇತಿಹಾಸ ವಿಷಯದಲ್ಲಿ ಜ್ಞಾನದಾಹ ಮತ್ತು ವಿಶ್ಲೇಷಣೆಯ ಭಾವನೆ ಇವೆಲ್ಲವೂ ಇತಿಹಾಸಕಾರನಾಗಲು ಇರುವಂತಹ ಪ್ರಾಥಮಿಕ ಸಂಶೋಧಕನ ಗುಣಗಳು.

ಸಂಶೋಧಕನಿಗೆ ಹಲವಾರು ಅರ್ಹತೆಗಳು ಅವಶ್ಯಕ. *ಪ್ರಥಮವಾಗಿ,* ಸಂಶೋಧಕನು ಕೆಲಸ ಮಾಡಲು ಇಚ್ಛೆ ಪಡಬೇಕು. ತನ್ನ ಆಯ್ಕೆಯ ವಿಷಯದ ಬಗ್ಗೆ ಆಸಕ್ತಿಯಿರಬೇಕು. ಕೆಲಸದಲ್ಲಿ ಕಷ್ಟಪಡುವ ಮತ್ತು ದುಡಿದೇ ತೀರುತ್ತೇನೆಂಬ ಬಯಕೆಯಿರಬೇಕು. ಏಕೆಂದರೆ ಇತಿಹಾಸದಲ್ಲಿ ಆಧಾರಗಳು ಅಷ್ಟು ಸುಲಭವಾಗಿ ದೊರೆಯುವುದಿಲ್ಲ. ಇವುಗಳು ಹಲವಾರು ಕಡೆ ಹರಡಿರುವುದರಿಂದ ಅವುಗಳನ್ನು ಒಂದು ಕಡೆ ಸೇರಿಸಿ ತಂದು ಅವುಗಳನ್ನು ವಿಶ್ಲೇಷಿಸುವುದಕ್ಕೆ ಸಾಕಷ್ಟು ಕಷ್ಟಪಡಬೇಕು ಮತ್ತು ಆ ವಿಷಯದ ಬಗ್ಗೆ ಆಸಕ್ತಿ ಇರಬೇಕಾದುದು ಬಹಳ ಮುಖ್ಯ. ಆದ್ದರಿಂದಲೇ ಇಂತಹ ವಿಷಯಗಳಲ್ಲಿ ಯಶಸ್ಸು ಪಡೆಯಲು ಟಾಯನ್ಬಿ, ವಿಂಟರ್‌ನಿಟ್ಸ್, ಫ್ಲೀಟ್, ಬಿ.ಎಲ್. ರೈಸ್ ಮತ್ತು ಮುಂತಾದವರು ಎಷ್ಟು ಕಷ್ಟಪಟ್ಟರು ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ.

*ಎರಡನೆಯ ಅರ್ಹತೆಯೆಂದರೆ* ವಿಚಾರವಂತಿಗೆಗಿಂತ ನೈತಿಕತೆಯಿರಬೇಕು. ಏಕೆಂದರೆ ಯಾವುದೇ ವಿಷಯದಲ್ಲಿ ಸರಿಯಾದ ಭಾವನೆಗಳನ್ನು ಬೆಳೆಸಿಕೊಂಡಿರಬೇಕು. ಯಾವುದೇ ವಿಷಯವನ್ನು ಹೆಚ್ಚಾಗಿಯೇ ಆಗಲಿ ಅಥವಾ ಕಡಿಮೆಯೆಂದಾಗಲೀ ಮಾಡುವುದಲ್ಲ ಆದರೆ ವಿಷಯವನ್ನು ಸರಿಯಾಗಿ ಹೇಳುವುದಕ್ಕೆ ನೈತಿಕಶಕ್ತಿ ಇರಬೇಕಾದುದು ಅವಶ್ಯಕತೆಯಿದೆ.

*ಮೂರನೆಯ ಅರ್ಹತೆಯೆಂದರೆ,* ಯಾವುದೇ ರೀತಿಯ ಅಜಾಗರೂಕತೆಯನ್ನು ತೋರಿಸದೇ ಶಾಂತಿಯಿಂದ ವರ್ತಿಸಬೇಕು. ಇಲ್ಲಿ ತಾಳ್ಮೆ ಬಹಳ ಮುಖ್ಯವಾದದ್ದು. ಯಾವುದೇ ವಿಷಯವನ್ನು ತಕ್ಷಣದಲ್ಲಿ ತೀರ್ಮಾನ ತೆಗೆದುಕೊಂಡಲ್ಲಿ ಯಾವ ರೀತಿಯ ಅನಾಹುತವಾಗುತ್ತದೆ ಎಂಬುದನ್ನು ತಿಳಿಯಬೇಕಾದಲ್ಲಿ ಸಂಶೋಧಕನಿಗೆ ತಾಳ್ಮೆ ಇರಬೇಕು.

*ನಾಲ್ಕನೆಯದಾಗಿ,* ವೈಚಾರಿಕತೆಯ ಭಾವನೆಗಳಿರಬೇಕು ಅಥವಾ ವಿಚಾರವಂತಿಕೆಯಿಂದ ಚಿಂತಿಸುವವನಾಗಿರಬೇಕು. ಏಕೆಂದರೆ ಯಾವುದೇ ವಿಷಯವನ್ನೂ ತಕ್ಷಣಕ್ಕೆ ಒಪ್ಪಿಕೊಳ್ಳದೇ ಆ ವಿಷಯಗಳನ್ನು ಯೋಚಿಸಿ ಅವುಗಳನ್ನು ಒರೆಹಚ್ಚಿ ನೋಡಿ ತೀರ್ಮಾನ ತೆಗೆದುಕೊಳ್ಳಬೇಕು. ಏನಾದರೂ ತಪ್ಪಾಗಿದ್ದಲ್ಲಿ ತಾವು ಅದನ್ನು ಒಪ್ಪಿಕೊಳ್ಳಬೇಕಾದ ಶಕ್ತಿಯನ್ನು ಹೊಂದಿರಬೇಕು. ಇದಲ್ಲದೇ ಸಾಮಾನ್ಯ ಜ್ಞಾನವನ್ನು ಸಹ ಹೊಂದಿರಬೇಕಾದುದು ಬಹಳ ಅತ್ಯಗತ್ಯ.

ಐದನೆಯದಾಗಿ, ಸಂಶೋಧಕನು ಯಾವುದೇ ರೀತಿಯ ಕಷ್ಟಗಳಿಗೆ ಒಳಹೋಗಬಾರದು. ಅಂದರೆ ಅವುಗಳಲ್ಲಿ ಪ್ರಮುಖವಾಗಿ ಕಾರ್ಯ ನಿರ್ವಹಿಸಲು ಅಶಕ್ತನಾಗಿರುವುದು, ವಿಮರ್ಶಾನೀತಿಯಲ್ಲಿ ಭಾವನಾತ್ಮಕನಾಗಿರುವುದು ಮತ್ತು ಭಾಷೆಗಳ ಮೇಲೆ ಧೃಡ ನಿಶ್ಚಯವಿಲ್ಲದಿರುವುದು ಇವುಗಳನ್ನು ಸಂಶೋಧಕನು ಹೊಂದಿರಬಾರದು. ಅಂದರೆ ಮಾನಸಿಕವಾಗಿ ಸಂಶೋಧಕನು ಗಟ್ಟಿಯಾಗಿದ್ದು ಕಾರ್ಯ ನಿರ್ವಹಿಸಬೇಕಾಗುತ್ತದೆ.

ಈ ಮೇಲೆ ತಿಳಿಸಿದ ಕೆಲವಾರು ಅರ್ಹತೆಗಳನ್ನು ಅರಿತ ನಂತರ ಸಂಶೋಧಕನು, ಕೆಲವು ಪ್ರಯೋಗಾತ್ಮಕ ವಿಷಯಗಳನ್ನು ಕೂಡ ತಿಳಿದಿರುವುದು ಅತ್ಯವಶ್ಯ. ಅವುಗಳಲ್ಲಿ ಆಧಾರಗಳಿಂದ ವಿಷಯಗಳನ್ನು ಬರೆದುಕೊಳ್ಳುವುದು, ನಿಬಂಧದ ಸಾರಾಂಶವನ್ನು ಬರೆದುಕೊಳ್ಳುವುದು. ಕಾರ್ಯದ ಯೋಜನೆ ಮುಂತಾದವುಗಳನ್ನು ತಿಳಿದಿದ್ದು ಈ ವಿಷಯಗಳನ್ನು ಸಂಶೋಧಕನು ತನ್ನ ಸಂಶೋಧನಾ ವಿಷಯದ ಬಗ್ಗೆ ಇರುವ ಆಧಾರಗಳನ್ನು ಸಂಗ್ರಹಿಸುವುದು. ಅವುಗಳನ್ನು ವಿಶ್ಲೇಷಿಸಿ, ಸಂಯೋಜಿಸುವ ಕಾರ್ಯಗಳನ್ನು ಮಾಡುವ ಕಾರ್ಯಗಳ ಮುನ್ನ ಈ ಪ್ರಯೋಗಾತ್ಮಕ ವಿಷಯಗಳನ್ನು ತಿಳಿಯಬೇಕು.

ಈ ಎಲ್ಲಾ ಕಾರ್ಯಗಳನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗಲು ಇತಿಹಾಸ ಸಂಶೋಧನಾ ವಿಧಾನವು ಸಂಶೋಧಕನಿಗೆ ಸಹಾಯಕಾರಿಯಾಗಿ ಬರುತ್ತದೆ. ಈ ವಿದಾನವನ್ನು ಅನುಸರಿಸಿದಲ್ಲಿ ಸಂಶೋಧಕನು ಸಾಕಷ್ಟು ವೇಳೆಯನ್ನು ಉಳಿಸಬಹುದು. ತನ್ನ ಶಕ್ತಿಯ ವ್ಯಯವನ್ನು ಕಡಿಮೆ ಮಾಡಿಕೊಳ್ಳಬಹುದು ಮತ್ತು ಅವನಲ್ಲಿ ಕಾರ್ಯನಿರ್ವಹಿಸುವಲ್ಲಿ ಶಕ್ತಿ ನೀಡುವುದು ಮುಂತಾದವುಗಳು ಪರಿಪೂರ್ಣವಾಗಿ ಕಾರ್ಯನಿರ್ವಹಿಸುತ್ತವೆ. ಆದ್ದರಿಂದಲೇ ಸಂಶೋಧಕನು ಮೇಲೆ ತಿಳಿಸಿದ ವಿಷಯಗಳನ್ನು ಸರಿಯಾಗಿ ತಿಳಿದುಕೊಂಡದ್ದೇ ಆದರೆ ಸಂಶೋಧನಾ ಕಾರ್ಯವು ಸುಸೂತ್ರವಾಗಿ ನಡೆಯುತ್ತದೆ.

## 6.4 ಸಂಶೋಧನಾ ವಿಷಯದ ಆಯ್ಕೆ

ಒಬ್ಬ ವ್ಯಕ್ತಿ ಸಂಶೋಧನೆಯನ್ನು ಮಾಡುವ ಮನಸ್ಸು ಮಾಡಿದ ನಂತರ ತನ್ನೆಲ್ಲಾ ಅರ್ಹತೆಗಳನ್ನು ಮನನ ಮಾಡಿಕೊಂಡ ನಂತರ ಅವನ ಎದುರಿಗೆ ಬರುವಂತಹ ಬಹುಮುಖ್ಯ ಪ್ರಶ್ನೆ ಎಂದರೆ ಸಂಶೋಧನಾ ವಿಷಯದ ಆಯ್ಕೆ. ಇದು ಬಹಳ ಕ್ಲಿಷ್ಟಕರವಾದ ಕಾರ್ಯವಾದರೂ ಬಹಳ ಮುಖ್ಯವಾಗಿದ್ದು, ಬಹಳಷ್ಟು ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕಾಗುತ್ತದೆ. ಸಂಶೋಧನಾ ವಿಷಯದ ಆಯ್ಕೆ, ಸಂಶೋಧನೆಯಲ್ಲಿ ಪರಮ ಮುಖ್ಯವಾಗಿದ್ದುದಾಗಿದೆ. ಸಂಶೋಧನಾ ವಿಷಯದ ಆಯ್ಕೆಯು ಒಂದು ರೀತಿಯಲ್ಲಿ ಜೀವನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವಂತೆಯೇ ಆಗಿದೆ. ಈ ರೀತಿಯ ಆಯ್ಕೆಯಲ್ಲಿ ಸರಿಯಾದ ರೀತಿಯಲ್ಲಿ ವರ್ತಿಸದಿದ್ದರೆ, ಜೀವನವೇ ನರಕವಾಗುವ ಹಾಗೆ, ಸಂಶೋಧನಾ ಕಾರ್ಯವೂ ಸಹ ಎಡವಿದಂತೆಯೇ ಆಗುತ್ತದೆ.

ಸಂಶೋಧಕನು ತನ್ನ ಆಸಕ್ತಿಯ ವಿಷಯಗಳಲ್ಲಿಯೇ ಆಯ್ಕೆ ಮಾಡಿಕೊಳ್ಳಬೇಕು. ಇದರಿಂದ ಅವನು ಆಸಕ್ತಿಯುತವಾಗಿ ಕಾರ್ಯ ನಿರ್ವಹಿಸಬಹುದು. ತನ್ನ ಒಳ್ಳೆಯ ಪ್ರಯತ್ನ ಮಾಡಬಹುದು ಮತ್ತು ಯಾವುದೇ ಸವಾಲನ್ನು ಎದುರಿಸಿ, ಫಲಿತಾಂಶಕ್ಕಾಗಿ ತನ್ನ ವೈಯಕ್ತಿಕ ಜವಾಬ್ದಾರಿಯನ್ನು ತೋರಿಸಬಹುದಾಗಿದೆ.

ಸಂಶೋಧಕನು ಆಯ್ಕೆ ಮಾಡಿಕೊಂಡ ವಿಷಯಕ್ಕೆ ಸಾಕಷ್ಟು ಆಧಾರಗಳು ಸಿಗಬೇಕು. ಏಕೆಂದರೆ ಸಂಶೋಧನಾ ಕಾರ್ಯವು ನಿಗಧಿತ ಸಮಯದಲ್ಲಿ ಮುಗಿಯುತ್ತದೆ. ಆಯ್ಕೆಯಾದ ವಿಷಯದ ಬಗ್ಗೆ ಗ್ರಂಥಗಳು ಹೆಚ್ಚಾಗಿ ಸಂಶೋಧಕನಿಗೆ ಗೊತ್ತಾಗುವ ಭಾಷೆಯಲ್ಲಿರಬೇಕಾದುದನ್ನು ಅವನು ಖಾತ್ರಿಪಡಿಸಿಕೊಳ್ಳಬೇಕು. ಈ ರೀತಿಯ ಗ್ರಂಥಗಳು ಯಾವುದೇ ಪ್ರದೇಶ ಅಂದರೆ ಸಂಶೋಧಕನಿಗೆ ಅಲ್ಲಿಗೆಲ್ಲಾ ಹೋಗಿ ತರಲಾರದ ಸ್ಥಿತಿಯಲ್ಲಿಲ್ಲದಿದ್ದರೂ ಕಷ್ಟವಾಗುತ್ತದೆ. ಇದಲ್ಲದೇ ಯಾವುದೇ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಗಿ, ಇತರೇ ವಿಷಯಗಳೊಂದಿಗೆ ಹೋಲಿಕೆಯನ್ನು ಮಾಡುವಂತಹ ವಿಷಯವನ್ನು ಆಯ್ಕೆ ಮಾಡಿಕೊಳ್ಳಬಾರದು. ಏಕೆಂದರೆ, ವ್ಯಕ್ತಿಗಳ ನಡುವೆ, ಘಟನೆಗಳ ನಡುವೆ, ದೇಶಗಳು ಮುಂತಾದವುಗಳ ನಡುವೆ ವಿವಿಧ ಅಭಿಪ್ರಾಯಗಳು ಬರುವುದರಿಂದ, ಇಂತಹ ಅಪಾಯಕಾರಿ ಆಯ್ಕೆಯನ್ನು ಮಾಡಿಕೊಳ್ಳಬಾರದು. ಸಂಶೋಧಕನು ಈ ಹಿಂದೆ ನಡೆದಿರುವಂತಹ ಸಂಶೋಧನೆಗಳ ವಿಷಯಗಳನ್ನು ಪರಿಶೀಲಿಸಬೇಕು. ಅದಕ್ಕಾಗಿ ಅವನು ಹೊಸ ಗ್ರಂಥಗಳು, ಗ್ರಂಥ ಋಣ, ಹಲವು ಲೇಖನಗಳು ಮುಂತಾದವನ್ನು ಅಳವಡಿಸಿಕೊಳ್ಳಬೇಕು.

ಇದಲ್ಲದೇ ಪ್ರಸ್ತುತ ಕಾಲವು ಒಂದು ರೀತಿಯ ವಿಶೇಷ ಅಧ್ಯಯನಗಳಿಗೆ ಹೆಚ್ಚಿನ ಪ್ರಾಮುಖ್ಯತೆಯಿರುವುದರಿಂದ ಅಂತಹ ವಿಷಯವನ್ನು ಬಹಳಷ್ಟು ಯೋಚಿಸಿ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಸಂಶೋಧನೆಯ ವಿಷಯವು ಒಂದು ಚಿಂತನೆ ಅಥವಾ ಆದರ್ಶಗಳನ್ನು ವ್ಯಕ್ತಪಡಿಸುವಂತಿರಬೇಕು. ಏಕೆಂದರೆ ಈ ಸಂಶೋಧನೆಯಿಂದ ಒಂದು ಹೊಸ ವಿಷಯ ಹೊರಬೀಳಬೇಕಾಗುತ್ತದೆ.

ಈ ಎಲ್ಲಾ ರೀತಿಯ ವಿಷಯಗಳನ್ನು ತಿಳಿದುಕೊಂಡು ನಾವು ಸಂಶೋಧನೆ ಮಾಡ ಹೊರಟರೂ ಹಲವು ಆತಂಕಗಳಿಗೆ ಒಳಗಾಗುವ ಸಾಧ್ಯತೆಯಿರುತ್ತದೆ. ಆದ್ದರಿಂದ ಮಾರ್ಗದರ್ಶಕನು ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ನೀಡಬೇಕಾಗುತ್ತದೆ. ಇಬ್ಬರೂ ಸೇರಿ ಒಳ್ಳೆಯ ಸಂಶೋಧನೆ ನಡೆಸಲು ಇವೆಲ್ಲಾ ಅತ್ಯವಶ್ಯಕವಾಗಿ ಕಾಣುತ್ತದೆ. ಇವರೀರ್ವರೂ ಸರಿಯಾದ ನಿರ್ದೇಶನದಲ್ಲಿ ನಡೆದರೆ ಸಂಶೋಧನೆಯು ಒಳ್ಳೆಯ ಪರಿಣಾಮವನ್ನು ಬೀರುವುದರಲ್ಲಿ ಸಂಶಯವೇ ಇಲ್ಲ.

## 6.5 ಘಟಕದ ಸಾರಾಂಶ

ಈ ಘಟಕದ ಅಧ್ಯಯನದ ನಂತರ ನಾವು ಈ ಪ್ರಮುಖ ಅಂಶಗಳನ್ನು ಅರ್ಥಮಾಡಿಕೊಂಡೆವು.

* ಸಂಶೋಧಕ ಯಾರು ಮತ್ತು ಈ ವಿಷಯಗಳಲ್ಲಿ ಯಾವ ರೀತಿಯ ಆಸಕ್ತಿಯನ್ನು ಹೊಂದಿರಬೇಕು ಎಂಬುದು
* ಸಂಶೋಧಕನ ಅರ್ಹತೆಗಳು ಯಾವುವು? ಮತ್ತು ಅವುಗಳನ್ನು ಅವನು ಹೇಗೆ ಪಡೆಯಬಲ್ಲ ಎಂಬುದು.
* ಸಂಶೋಧನಾ ವಿಷಯವನ್ನು ಆಯ್ಕೆ ಮಾಡುವಲ್ಲಿ ಸಂಶೋಧಕನು ಪಾಲಿಸಬೇಕಾದ ನಿಯಮಗಳು ಯಾವುವು ಎಂಬುದು.
* ಸಂಶೋಧನಾ ಕಾರ್ಯದಲ್ಲಿ ಸಂಶೋಧಕನು ಹೇಗೆ ಮುಂದುವರೆಯಬೇಕು ಎಂಬುದೆಲ್ಲವನ್ನು ತಿಳಿದುಕೊಳ್ಳಬೇಕು.

## 6.6 ಸ್ವಯಂ ಪರಿಶೀಲನಾ ಪ್ರಶ್ನೆಗಳು

1. ಸಂಶೋಧನಾಕಾರನಿಗಿರಬೇಕಾದ ಪ್ರಮುಖ ಅರ್ಹತೆಗಳನ್ನು ಚರ್ಚಿಸಿ.
2. ಸಂಶೋಧನಾ ಕಾರ್ಯಗಳ ಚಟುವಟಿಕೆಗಳಲ್ಲಿ ಯಾವುದಾದರೂ ಮಿತಿಗಳಿವೆಯೇ? ಚರ್ಚಿಸಿ.
3. ಇತಿಹಾಸದಲ್ಲಿ ಸಂಶೋಧಕನು ಸಂಶೋಧನಾ ವಿಷಯವನ್ನು ಆಯ್ಕೆ ಮಾಡಿಕೊಳ್ಳುವಾಗ ಎದುರಿಸುವ ಸಮಸ್ಯೆಗಳನ್ನು ಪರಿಶೀಲಿಸಿ.

## 6.7 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


| | | | |
|---|---|---|---|
| 1. | Elton .G.R. | : | The Practice of History |
| 2. | Renier .G.I. | : | History; Its purpose and Method |
| 3. | Rajayyan .K. | : | History in Theory and Method |
| 4. | ವೆಂಕಟರತ್ನಂ ಮತ್ತು ಪದ್ಮ | : | ಇತಿಹಾಸ ಸಂಶೋಧನಾ ಮಾರ್ಗ |
| 5. | Sheik Ali .B. | : | History; Its Theory and Method |


*ಡಾ. ಎ. ಸೋಮಶೇಖರ್*

# ಘಟಕ -7 ಬಾಹ್ಯ ವಿಮರ್ಶೆ ಮತ್ತು ಆಂತರಿಕ ವಿಮರ್ಶೆ

*ವಿಷಯಸೂಚಿ*


7.0 ಉದ್ದೇಶಗಳು

7.1 ಪೀಠಿಕೆ

7.2 ಬಾಹ್ಯ ವಿಮರ್ಶೆ

7.3 ಆಂತರಿಕ ವಿಮರ್ಶೆ

7.4 ಘಟಕದ ಸಾರಾಂಶ

7.5 ಸ್ವಯಂ ಪರಿಶೀಲನಾ ಪ್ರಶ್ನೆಗಳು

7.6 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 7.0 ಉದ್ದೇಶಗಳು

ಈ ಘಟಕ 7 ರಲ್ಲಿ ಹಲವು ವಿಷಯಗಳನ್ನು ತಿಳಿಯುತ್ತೀರಿ, ಅವುಗಳು;

* ಇತಿಹಾಸದಲ್ಲಿ ವಿಮರ್ಶೆಯ ಮಹತ್ವ ಮತ್ತು ಕಾರ್ಯ
* ವಿಮರ್ಶೆಯಲ್ಲಿ ಪ್ರಾಥಮಿಕವಾಗಿ ಬಾಹ್ಯ ವಿಮರ್ಶೆಯ ವಿಧಾನಗಳನ್ನು ಹೇಗೆ ಅಳವಡಿಸಿಕೊಳ್ಳುತ್ತೇವೆ.
* ಇತಿಹಾಸ ಬರವಣಿಗೆಯಲ್ಲಿ ಆಂತರಿಕ ವಿಮರ್ಶೆಯ ಮಹತ್ವ ಮತ್ತು ಆಂತರಿಕ ವಿಮರ್ಶೆಯ ಪ್ರಮುಖ ಕಾರ್ಯಗಳ ವಿಧಾನವನ್ನು ತಿಳಿಯುತ್ತೇವೆ.

## 7.1 ಪೀಠಿಕೆ

ಇತಿಹಾಸ ಸಂಶೋಧನೆಯಲ್ಲಿ ವಿಷಯದ ಆಯ್ಕೆ, ಸಂಶೋಧಕನ ಅರ್ಹತೆಗಳನ್ನು ತಿಳಿದ ನಂತರ ಬಹಳ ಪ್ರಮುಖವಾದ ಕಾರ್ಯವೆಂದರೆ ವಿಮರ್ಶೆ. ಈ ವಿಮರ್ಶೆಯಲ್ಲಿ ಎರಡು ವಿಧಗಳಿದ್ದು ಅವುಗಳನ್ನು ಬಾಹ್ಯ ಮತ್ತು ಆಂತರಿಕ ವಿಮರ್ಶೆ ಎನ್ನುತ್ತೇವೆ. ಬಾಹ್ಯ ವಿಮರ್ಶೆಯಲ್ಲಿ ಕರ್ತೃ, ಗ್ರಂಥದ ಕಾಲ ಮತ್ತು ಗ್ರಂಥದ ಸ್ಥಳ ಇವುಗಳನ್ನು ಪರಿಶೀಲಿಸಲಾಗುವುದು. ಇನ್ನು ಆಂತರಿಕ ವಿಮರ್ಶೆಯಲ್ಲಿ ಗ್ರಂಥ ಕರ್ತೃವು ಗ್ರಂಥಗಳಲ್ಲಿ ತಿಳಿಸಿರುವ ವಿಷಯಗಳು ಸತ್ಯವೋ ಅಲ್ಲವೋ ಎಂಬುದನ್ನು ತಿಳಿಯಲಾಗುವುದು. ಈ ಎರಡೂ ವಿಮರ್ಶೆಯ ನಂತರ ಸಂಶೋಧನೆಯಿಂದ ಹೊರಬಂದ ತೀರ್ಮಾನವನ್ನು ಪ್ರಕಟಿಸುವುದನ್ನು ಇಲ್ಲಿ ಅಧ್ಯಯನ ಮಾಡಲಾಗುವುದು.

## 7.2 ಬಾಹ್ಯ ವಿಮರ್ಶೆ

'ಹೂರಿಸ್ಟಿಕ್' ಎಂಬ ಪದ ಜರ್ಮನಿ ಭಾಷೆಯ ಪದ. ಸಾಮಾನ್ಯಾರ್ಥದಲ್ಲಿ ಅದನ್ನು ದಾಖಲೆಗಳ ಶೇಖರಣೆ ಎಂದು ಭಾಷಾಂತರಿಸಬಹುದಾಗಿದೆ. ವಿಸ್ತರಿಸಿ ಹೇಳುವುದಾದರೆ ಇದು ಶಿಕ್ಷಣ ಪದ್ಧತಿಯ ಒಂದು ಮಾರ್ಗ. ಎಲ್ಲ ವಿಷಯಗಳನ್ನು ತಾನಾಗಿ ತಿಳಿದುಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಕೊಡುವ ಶಿಕ್ಷಣ ಪದ್ಧತಿ. 'ದಾಖಲೆಗಳಿಲ್ಲದೆ ಇತಿಹಾಸವಿಲ್ಲ' ಎಂಬ ಮಾತನ್ನು ಇಲ್ಲಿ ಗಮನಿಸಬೇಕು. ಹೀಗೆ ವಿಷಯಗಳನ್ನು ಸಂಗ್ರಹಿಸುವುದೇ ಹ್ಯೂರಿಸ್ಟಿಕ್‌ನ ಪ್ರಥಮ ಕಾರ್ಯ. ದಾಖಲಾದ ವಿಷಯಗಳ ಬಗ್ಗೆ ಹೊಸ ನಿರೂಪಣೆ. ಹೊಸ ವಿಷಯ ಸಂಗ್ರಹಣೆ, ವಿಷಯಗಳ ವಿಶ್ಲೇಷಣೆ, ಸಂಯೋಜನೆ ಮುಂತಾದ ಕಾರ್ಯ ಕ್ರಮಗಳಿರುತ್ತವೆ. ಇವುಗಳ ಅರ್ಥ ಪ್ರಕಾಶಿಕೆ ಕೊನೆಯ ಹಂತವಾಗಿದೆ. ಇವುಗಳೆಲ್ಲವೂ ಸಂಶೋಧಕನ (ರಿಸರ್ಚರ್) ನಾನಾ ಮಾರ್ಗಗಳಾಗಿವೆ.

ಇತಿಹಾಸವು ಗತಿಸಿಹೋದ ವಿಷಯದ ಘಟನೆ ಆಗಿರುವುದರಿಂದ ಹಿಂದಿನ ಕಾಲದ ವಿಷಯಗಳು ಅಡಕವಾಗಿರುವ ಪ್ರಾಚ್ಯವಸ್ತು ಸಂಗ್ರಹಾಲಯ ಸಂಗ್ರಹಿಸಿರುವ ಶಿಲೆ, ಮಣ್ಣಿನ ಮುದ್ರಿಕೆ, ಶಿಲಾಶಾಸನಗಳು, ತಾಳೆಗರಿ ಮತ್ತು ಕಾಗದಗಳ ಮೇಲಿನ ಬರಹ, ಉಪಯೋಗಿಸುತ್ತಿದ್ದ ಉಪಕರಣಗಳು, ಪಾತ್ರೆಗಳು, ಆಯುಧಗಳು, ನಾಣ್ಯಗಳು, ಉಡಿಗೆ ತೊಡಿಗೆ ಇತ್ಯಾದಿ ವಸ್ತುಗಳಲ್ಲಡಗಿರುತ್ತವೆ ಎಷ್ಟೋ ವಿಷಯಗಳು ಬರಹಗಳ ರೂಪದಲ್ಲೋ, ಚಿನ್ಹೆಗಳ ರೂಪದಲ್ಲೋ ಇರಬಹುದು. ಹೀಗೆ ಇವೆಲ್ಲಾ ನಾನಾ ರೂಪದ ದಾಖಲೆಗಳೇ. ಇವುಗಳು ಆ ಕಾಲದ, ಆ ಜನರ ಯೋಜನೆಗಳು ಮತ್ತು ನಡೆಸಿದ ಕಾರ್ಯಗಳ ಗುರುತುಗಳು. ಕೆಲವು ಅವರ ಕಾಲದ ಘಟನೆಗಳ ಬಗ್ಗೆ ಪ್ರಬಲವಾದ ಸಾಕ್ಷ್ಯಗಳನ್ನು ಒದಗಿಸುತ್ತದೆ. ಆದರೆ ಅವೆಲ್ಲವೂ ಏಕ ಕಾಲಕ್ಕೆ ಒಬ್ಬ ಸಂಶೋಧಕನಿಗೆ ಬೇಕಾಗಿರುವುದಿಲ್ಲ. ಹೀಗೆ ಅವನು ತನ್ನ ಸಂಶೋಧನೆಯ ವಿಷಯ, ಅದರ ಗುರಿವ್ಯಾಪ್ತಿ, ಇತಿಮಿತಿಗಳ ಒಂದು ರೂಪುರೇಷೆಯನ್ನು ತಯಾರಿಸಿಕೊಂಡು ಮುಂದುವರೆಯುವುದು ಅವಶ್ಯಕ. ಸಂಶೋಧಕನು ಹ್ಯೂರಿಸ್ಟಿಕ್ ಪದ್ಧತಿಯಲ್ಲಿ ಎಲ್ಲವನ್ನು ತಾನೇ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಆದಕ್ಕಾಗಿ ಸಂಶೋಧನೆಯ ನಾನಾ ಘಟ್ಟಗಳನ್ನು ಮೊದಲೇ ಗುರ್ತಿಸಿ ಒಂದು ಸ್ಥೂಲರೂಪದ ಅಚ್ಚುಕಟ್ಟಾದ ಚೌಕಟ್ಟನ್ನು ಸಿದ್ಧಪಡಿಸಿಕೊಳ್ಳಬೇಕು. ಈ ಸಿದ್ಧತೆಯಲ್ಲಿ ನಾನಾ ಹಂತಗಳಿವೆ.

ಪ್ರತಿ ಸಂಶೋಧಕನು ಕಾರ್ಯದಲ್ಲಿ ತೊಡಗಿರುವಾಗ ವಿಷಯಗಳನ್ನು ಸಂಗ್ರಹಿಸುವುದು, ಹೊಸ ವಿಷಯಗಳನ್ನು ಸೇರಿಸುವುದು, ಗೊತ್ತಾಗಿರದ ವಿಷಯಗಳ ಬಗ್ಗೆ ಹೊಸ ನಿರೂಪಣೆ ಮಾಡುವುದು. ಹರಡಿರುವ ವಿಷಯಗಳನ್ನು ಸಂಯೋಜಿಸುವುದು, ಸಾಮಾನ್ಯೀಕರಣ ಮುಂತಾದ ನಾನಾ ಚಟುವಟಿಕೆಗಳಿರುತ್ತವೆ. ಹೊಸ ವಿಷಯಗಳನ್ನು ಸಂಗ್ರಹಿಸುವುದೇ 'ಹ್ಯೂರಿಸ್ಟಿಕ್' ಪದ್ಧತಿಯ ಮುಖ್ಯ ಕೆಲಸ. ಈ ಕೆಲಸದಲ್ಲಿ ತೊಡಗಿರುವಾಗ ವಿಶ್ಲೇಷಣೆ, ಸಂಯೋಜನೆ, ಅರ್ಥ ವಿವರಣೆ ಮಾಡುವುದು ಎಂಬ ಮೂರು ತಲೆ ಬರಹಗಳಲ್ಲಿ ವಿಷಯಗಳನ್ನು ಸಿದ್ಧಪಡಿಸಬೇಕಾಗುತ್ತದೆ. ಮೊದಲನೆಯದಾದ ವಿಶ್ಲೇಷಣೆಯಲ್ಲಿ ಸಂಶೋಧಕನು ಕೆಲವು ತಾಂತ್ರಿಕ ಪದ್ಧತಿಗಳನ್ನು ಅನುಸರಿಸಬೇಕು.

ಪ್ರಥಮವಾಗಿ ಸಂಶೋಧಕನು ಯೋಗ್ಯ ವಿಷಯವನ್ನು ಸೂಕ್ತ ಯೋಚನೆ ಮಾಡಿ ಆರಿಸಿಕೊಳ್ಳಬೇಕು. ಅದರಿಂದ ಸಾರ್ವಜನಿಕ ಉಪಯೋಗವಿದೆಯೇ? ಅದರಿಂದ ವಿಷಯದ ಬಗ್ಗೆ ಹೆಚ್ಚು ಬೆಳಕು ಬೀರಲು ಸಾಧ್ಯವೇ? ಅದು ತನ್ನ ಯೋಗ್ಯತೆಯಲ್ಲಿ ಬರತಕ್ಕ ವಿಚಾರವೆ? ವಿಷಯಕ್ಕೆ ಸಂಬಂಧಪಟ್ಟ ವಿಷಯ ಸಂಗ್ರಹಣೆಗೆ ಅವಕಾಶಗಳಿವೆಯೇ? (ಗ್ರಂಥಗಳು, ಪುಸ್ತಕ ಭಂಡಾರಗಳು, ಪ್ರಾಚ್ಯ ಸಂಶೋಧನಾಲಯಗಳು, ಮ್ಯಾಗಜೈನ್, ರಿಪೋರ್ಟ್‌ಗಳು, ಇತ್ಯಾದಿ) ಅವುಗಳನ್ನು ಉಪಯೋಗಿಸಲು ಅವಕಾಶಗಳಿವೆಯೆ? ವಿಷಯಗಳಿರುವ ಭಾಷೆಗಳಾವುವು? ತನಗೆ ಗೊತ್ತಿಲ್ಲದ ಭಾಷೆಗಳಲ್ಲಿದ್ದರೆ ಅವುಗಳ ಭಾಷಾಂತರ ಪಡೆಯಲು ಸೌಕರ್ಯಗಳಿವೆಯೇ? ಐತಿಹಾಸಿಕ ಘಟನೆಗಳು ನಡೆದ ಸ್ಥಳ, ಪ್ರದೇಶಗಳಿಗೆ ಹೋಗಿ ಬರಲು ಸಾಧ್ಯವೇ? ಇತರ ಗ್ರಂಥ ವಸ್ತು ಸಂಗ್ರಹಗಳು ಮತ್ತೆಲ್ಲಿ ದೊರಕುತ್ತವೆ? ಮುಂತಾದ ಪ್ರಶ್ನೆಗಳ ಸರಮಾಲೆಯನ್ನು ಮುಂದಿಟ್ಟುಕೊಂಡು ಸರಳ ಉತ್ತರಗಳನ್ನು ಕಂಡುಕೊಳ್ಳಬೇಕು. ಎಲ್ಲಕ್ಕೂ ಮುಖ್ಯವಾಗಿ ತಾನು ಆಯ್ಕೆ ಮಾಡಿರುವ ವಿಷಯ ಸರಿಯಾಗಿದೆಯೆ? ಎಂದು ಪುನಃ ಪುನಃ ಖಚಿತಪಡಿಸಿಕೊಳ್ಳಬೇಕು.

ಎರಡನೆಯದಾಗಿ ಸಂಶೋಧಕನು ತಾನು ಚುನಾಯಿಸಿರುವ ವಿಷಯದಲ್ಲಿ ಅಚ್ಚಾಗಿರುವ, ಬೆರಳಚ್ಚು ಸ್ಥಿತಿಯಲ್ಲಿರುವ ಎಲ್ಲ ಗ್ರಂಥಗಳ ಸ್ಥೂಲ ಪರಿಚಯವನ್ನಾದರೂ ಪಡೆದುಕೊಳ್ಳಬೇಕು. ತನಗೆ ಅವುಗಳಿಂದಾಗುವ ಉಪಯೋಗ, ತಾನು ಅವುಗಳಿಗಿಂತ ಹೆಚ್ಚು ಹೇಳುವ, ತನ್ನ ಸಂಶೋಧನೆಯಲ್ಲಿ ವಿಸ್ತರಿಸಬೇಕಾದ ವಿಷಯಗಳು ಹೆಚ್ಚು ಬೆಳಕು ಚೆಲ್ಲಬೇಕಾದ ವಿಷಯ (ಸ್ಥಳ)ಗಳು ಇವುಗಳನ್ನು ಸ್ಪಷ್ಟವಾಗಿ ಗುರುತಿಸಿಕೊಳ್ಳಬೇಕು. ಇಂಥ ವಿಷಯದಲ್ಲಿ ಸಂಶೋಧನೆ ಮಾಡಿರುವವರ ಉದ್ದೇಶ, ಅವರ ಇತಿಮಿತಿಗಳನ್ನೂ ತನ್ನ ಸಂಶೋಧನೆಗೆ ಅವರಿಂದಾಗುವ ಸಹಾಯವನ್ನು ತಿಳಿಯಬೇಕು. ಅವರು ಅನೇಕವಾಗಿ ತಮ್ಮ ಉದ್ದೇಶಗಳಿಗನುಸಾರವಾಗಿ ಅಲ್ಪವಾಗಿ ಮಾತ್ರ ಉಪಯೋಗಿಸಿಕೊಂಡಿರಬಹುದು. ಅಂಥದನ್ನು ಸಂಶೋಧಕನು ತನ್ನ ಉದ್ದೇಶಗಳಿಗಾಗಿ ಸಂಪೂರ್ಣ ಉಪಯೋಗಿಸಿಕೊಳ್ಳಬಹುದು.

ಮೂರನೆಯದಾಗಿ ಈ ಪದ್ಧತಿ ಅನುಸರಿಸುವವನು ಆ ಬಗ್ಗೆ ದೊರಕುವ ಎಲ್ಲ ಪುಸ್ತಕಗಳ ಪಟ್ಟಿ ಮಾಡಿ ಅದರಲ್ಲಿ ತನಗೆ ಬೇಕಾಗುವ ಅಧ್ಯಾಯಗಳು, ಟಿಪ್ಪಣಿಗಳನ್ನು ಗುರುತುಮಾಡಿಕೊಳ್ಳಬೇಕು. ಪ್ರಾಥಮಿಕವಾಗಿ ಎಷ್ಟೋ ಅಚ್ಚು ಕಾಣದ ಆಧಾರ ಗ್ರಂಥಗಳಿರಬಹುದು. ಕೆಲವು ದಾಖಲೆಗಳೂ ವಿದ್ವಾಂಸಕೂಟದ ನಡವಳಿಕೆಗಳು, ಖಾಸಗಿ ಪ್ರಬಂಧಗಳು, ಪತ್ರಗಳು ವಿಷಯ ಸಂಬಂಧ ನಿಯತಕಾಲ ಪತ್ರಿಕೆಗಳು ಖಾಸಗಿ ಕಾಗದಗಳು ಮತ್ತು ಇತ್ತೀಚೆಗೆ ಬರೆದ ಗ್ರಂಥಗಳು ಇವುಗಳ ಪರಿಚಯ ಚೆನ್ನಾಗಿ ಮಾಡಿಕೊಳ್ಳಬೇಕು. ಕೆಲವು ಅಚ್ಚಾದ ಪುಸ್ತಕಗಳ ಪುನಃ ಮುದ್ರಣದ ವಿಷಯದಲ್ಲಿ ಬದಲಾವಣೆ, ವಿಸ್ತರಣೆ ಅಥವಾ ಬಿಟ್ಟುಬಿಡಲಾಗಿರಬಹುದು. ಇವುಗಳನ್ನೂ ಸೂಕ್ಷ್ಮವಾಗಿ ತಿಳಿದುಕೊಳ್ಳಬೇಕು ನೋಡಬೇಕಾಗಿರುವ ಗ್ರಂಥಗಳ ಪಟ್ಟಿ ಬೆಳೆಯುತ್ತಲೇ ಇರುತ್ತದೆ.

ನಾಲ್ಕನೆಯದಾಗಿ, ತನ್ನ ಶೋಧನೆಯ ಬಗ್ಗೆ ಒಂದು ಸಾರಾಂಶವನ್ನೂ, ರೂಪುರೇಖೆಗಳನ್ನು ತಯಾರಿಸಿಕೊಳ್ಳಬೇಕು. ಹೀಗೆ ಸಂಶೋಧನೆಯ ವ್ಯಾಪ್ತಿ, ಸ್ವಭಾವಗಳನ್ನು ಚೆನ್ನಾಗಿ ಮನದಟ್ಟು ಮಾಡಿಕೊಳ್ಳಬೇಕು. ತಯಾರಿಸಿದ ಸಾರಾಂಶದಲ್ಲಿ ಮಾಡಬೇಕಾದ ಕೆಲಸದ ಬಗ್ಗೆ ಒಂದು ಪೀಠಿಕಾ ಪ್ರಕರಣ ಸೇರಿಸಿ ಅದರಲ್ಲಿ ಶೋಧನೆಯ ಬಗ್ಗೆ ತಿಳಿವಳಿಕೆ, ಆ ವಿಷಯದಲ್ಲಿ ಈಗಿರುವ ಭಿನ್ನಾಭಿಪ್ರಾಯಗಳು, ಬಂದಿರುವ ಸಂದೇಹಗಳು ಹೆಚ್ಚು ಗಮನಿಸಬೇಕಾದ ವಿಚಾರಗಳು, ಹೊಸ ಸಂಶೋಧನೆ, ಅದರ ಮುಂದಿನ ಪರಿಣಾಮಗಳನ್ನೂ ಸೂಚಿಸಬೇಕು. ಇದರ ಅಧ್ಯಾಯಗಳು ತರ್ಕ ಬದ್ಧವಾಗಿ, ಕಾಲಾನುಗುಣವಾಗಿ ಅಥವಾ ಕಾರಣ, ಪರಿಣಾಮಗಳ ಅನುಸಾರವಾಗಿ ತಯಾರಾಗಬೇಕು. ಸಂಶೋಧನ ಪ್ರಬಂಧದ ಕೊನೆಯಲ್ಲಿ ಸಾಧಿಸಿದ ವಿಷಯದ ಬಗ್ಗೆ ತಾತ್ಪರ್ಯ ಅಥವಾ ಚಿಕ್ಕ ಸಾರಾಂಶ ಸಿದ್ಧಪಡಿಸಬೇಕು. ಅದು ಪೀಠಿಕೆಯಲ್ಲಿ ಕಾಣಿಸಿದ ಸಮಸ್ಯೆ ಹೇಗೆ ಬಗೆಹರಿದಿದೆ ಎಂದು ಕಾಣಿಸಬೇಕು. ಹೀಗೆ ಮೊದಲು ಕಂಡ ಕೇವಲ ಅಸ್ಥಿಪಂಜರ ಈಗ

ರಕ್ತ ಮಾಂಸ ಭರಿತ ದೇಹವಾಗಿ ಅಂದವಾಗಿ, ಚಟುವಟಿಕೆಯಿಂದ ಕೂಡಿ ಎದ್ದು ಬರುವುದೇ ಎಂಬ ಸಂದೇಹ ಮೂಡಿ ಬುರಂವಿತರಬೇಕು. ಆಗ ಸಂಶೋಧನೆಯು ಫಲಭರಿತವಾದಂತೆ.

ಮೇಲ್ಕಾಣಿಸಿದ ಪ್ರಾಥಮಿಕ ಘಟ್ಟಗಳನ್ನು ಮುಗಿಸಿದ ನಂತರ ಸಂಶೋಧಕನು ತನ್ನ ವಸ್ತು ಸಂಗ್ರಹಾಲಯ, ಅಥವಾ ರಾಜ್ಯಮಟ್ಟದ ಪತ್ರಗಾರ, ಸಂಗ್ರಹಣ ಕಛೇರಿ, ಹಿಂದಿನ ದಾಖಲೆಗಳ ರಕ್ಷಣಾಸ್ಥಳ ಪ್ರಾಚೀನ ಲೇಖ ರಕ್ಷಾಗಾರ, (ಆರ್ಕ್‌ಈವ್ಸ್) ಗಳಲ್ಲಿ ಮುಂದಿನ ಕೆಲಸ ಕಾಣಬೇಕು (ಹ್ಯೂರಿಸ್ಟಿಕ್) ಅಲ್ಲಿ ಸಂಗ್ರಹಣ ಕಾರ್ಯ ಪ್ರಾರಂಭಿಸುವುದಕ್ಕೆ ಮೊದಲೇ ಲಿಖಿತ ಸಂಗ್ರಹಣ ಮಾರ್ಗವನ್ನು ಸ್ಪಷ್ಟಮಾಡಿಕೊಳ್ಳಬೇಕು. ವಿಷಯ ಸಂಗ್ರಹಣದ ಒಂದು ದೊಡ್ಡ ರಿಜಿಸ್ಟರ್ ಅಂಥ ಪುಸ್ತಕ, ಅಥವಾ ಆ ದಾಖಲೆ ಪುಸ್ತಕದಲ್ಲಿ ಒಂದೊಂದು ವಿಷಯಕ್ಕೂ ಒಂದು ಪುಟ ಅಥವಾ ಕೆಲವು ಪುಟಗಳನ್ನು ನಿಗಧಿಮಾಡಿ ಅಲ್ಲಿ ದಾಖಲಿಸುವ ಪದ್ಧತಿ ಇದೆ. ಆದರೆ ಅನುಭವಸ್ಥರ ಅಭಿಪ್ರಾಯದಂತೆ ಈ ಎರಡೂ ಮಾರ್ಗಗಳು ಹೆಚ್ಚು ಸೌಕರ್ಯ ಮಾಡಲಾರದಲ್ಲವೇ ಅನೇಕ ಕ್ಲಿಷ್ಟ ತೊಂದರೆಗಳನ್ನೂ ಉಂಟುಮಾಡುತ್ತದೆ. ಸಂಶೋಧನೆ ಬೆಳೆದಂತೆಲ್ಲಾ ವಿಷಯ ಸಂಗ್ರಹಣ ಕಾರ್ಯ ಅಲ್ಲಲ್ಲಿ ಹರಡಿ ಅಸ್ತವ್ಯಸ್ತಗೊಳ್ಳುತ್ತದೆ. ಅವುಗಳನ್ನು ಆಗಾಗ್ಗೆ ಉಪಯೋಗಿಸಿಕೊಳ್ಳುವುದೂ ಅಸಾಧ್ಯವಾಗುತ್ತದೆ. ಜ್ಞಾಪಕ ಶಕ್ತಿಯ ಮೇಲೆ ನಂಬಿದರೂ ಅದು ಕೈಕೊಡುತ್ತದೆ ಪದೇ ಪದೇ ಪುಟ ತಿರುಗಿ ಹುಡುಕಾಟ ನಡೆಸುವುದರಿಂದ ಅನಾವಶ್ಯಕವಾಗಿ ಹಾಳೆಗಳ ಆಯಸ್ಸು ಕಡಿಮೆಯಾಗಿ ಹರಿದೂ ಹೋಗುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಅಲ್ಲಿ ಹಾಕಿರುವ ತಲೆಬರಹಗಳಡಿಯಲ್ಲಿ ಅನೇಕ ಅನಾವಶ್ಯಕ ವಿಷಯಗಳು ಸಂಗ್ರಹವಾಗುತ್ತವೆ. ಇದಲ್ಲದೆ ಅಲ್ಲಿ ಇಲ್ಲಿ 'ಕ್ರಾಸ್ ರೆಫರೆನ್ಸ್' ಮಾಡಲು ಅನಾನುಕೂಲವಾಗುತ್ತದೆ. ಆದ್ದರಿಂದ ಈ ಪದ್ಧತಿಗಳನ್ನು ಖಂಡಿತವಾಗಿ ತ್ಯಜಿಸಲೇಬೇಕು.

ಆದರೆ ವಿಷಯ ಸಂಗ್ರಹಣಕ್ಕಾಗಿ ತೆಳು ಕಾಗದ ಅಥವಾ ಬಿಳಿ ಕಾಗದ ಹಾಳೆಗಳನ್ನುಪಯೋಗಿಸುವುದು ಒಳ್ಳೆಯ ಸಾಧನ. ಇವುಗಳನ್ನು 'ರಿಸರ್ಚ್ ಕಾರ್ಡ್' ಎನ್ನುತ್ತಾರೆ. ಇವುಗಳು ಎಲ್ಲವೂ ಒಂದೇ ಆಕಾರ (ಸೈಜ್) ಆಗಿ, ಜೊತೆಯಲ್ಲಿ ತೆಗೆದುಕೊಂಡು ಹೋಗಲು ಮತ್ತು ಚಿಕ್ಕ ಸ್ಥಳಗಳಲ್ಲಿ ಮರದ ಅಥವಾ ಸ್ಟೀಲ್ ಡ್ರಾಯರುಗಳಲ್ಲಿಡಲು ಅನುಕೂಲವಾಗುತ್ತದೆ. ಅವುಗಳೆಲ್ಲವೂ 5 ಇಂಚು ಉದ್ದ, 3 ಇಂಚು ಅಗಲವಾಗಿ ಕತ್ತರಿಸಿಟ್ಟುಕೊಳ್ಳಬೇಕು. ಪ್ರತಿ ಸಣ್ಣ ವಿಭಾಗ, ಯಾವ ವಿಷಯಕ್ಕೆ ಪ್ರತ್ಯೇಕ ಕಾರ್ಡುಗಳನ್ನಿಡಬೇಕು, ಅದರ ಎಡಗಡೆ ಭಾಗದ ಮೇಲ್ಗಡೆ ವಿಷಯದ ತಲೆಬರಹ (ಹೆಡ್ಡಿಂಗ್), ಬಲಗಡೆ ಭಾಗದ ಮೇಲ್ಗಡೆ ದಾಖಲೆಯ ತಾರೀಖು, ತಿಂಗಳು, ಇಸವಿ, ಎಡಗಡೆಯ ಮಾರ್ಜಿನ್‌ನಲ್ಲಿ ಆಕರ ಗ್ರಂಥದ ಪುಟಗಳನ್ನು ಕಾಣಿಸಬೇಕು. ಆದರೆ ಪ್ರತಿ ವಿಷಯಕ್ಕೂ ಪ್ರತ್ಯೇಕ ಕಾರ್ಡು ಇರುವುದನ್ನು ಖಚಿತಪಡಿಸಿಕೊಳ್ಳಬೇಕು. ಕಾರ್ಡಿನ ಕೊನೆಯ ಭಾಗದಲ್ಲಿ ಆಕರ ಗ್ರಂಥದ ಕರ್ತೃ, ಪುಸ್ತಕದ ಹೆಸರು. ಅದರ ಸಂಪುಟದ ಸಂಖ್ಯೆ, ಪ್ರಕಟವಾದ ವರ್ಷ ಮುಂತಾದುವನ್ನು ಕಾಣಿಸಬೇಕು. ಎಷ್ಟೋ ಸಂದರ್ಭಗಳಲ್ಲಿ ಪುಸ್ತಕದ, ಗ್ರಂಥಕರ್ತನ ಸಣ್ಣ ಹೆಸರು (ಇನಿಷಿಯಲ್ ಲೆಟರ್ಸ್) ಮತ್ತು ಸಂಕೋಚ ಸಂಕೇತಗಳನ್ನು ಉಪಯೋಗಿಸಬಹುದು. ಉದಾ. ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್ಸ್ - ವರ್ಷ, ಸಂಪುಟ March 1945, Vol.28, p. 252 ಎಂ.ಎಚ್. ಕೃಷ್ಣ M.H.K./H.C.I.P (ಹಿಸ್ಟ್ರಿ ಅಂಡ್ ಕಲ್ಚರ್ ಆಫ್ ಇಂಡಿಯನ್ ಪೀಪಲ್) R.C.M. (ಆರ್.ಸಿ. ಮುಜುಂದಾರ್) 1961 ಸಂ. 1 ಪು. 128) ಇತ್ಯಾದಿ. ಮತ್ತೊಂದು ಗಮನಿಸಬೇಕಾದ ಸಂಗತಿಯೆಂದರೆ ಒಂದೇ ಪತ್ರ, ಕಾಗದ, ಅಥವಾ ಪುಟ, ವಾಕ್ಯಗಳಲ್ಲಿಯೂ ಸಹ ಅನೇಕ ವಿಷಯಗಳಿಗೆ ಸಂಬಂಧ ವಿಷಯಗಳಿರುತ್ತವೆ. ಉದಾ. ಟಿಪ್ಪುವಿನ ರಾಜ್ಯಕ್ಕೆ ಭೇಟಿ ಮಾಡಿ ಬೇರೆಯವರಿಗೆ ಬರೆದ ಕಾಗದ ಒಂದರಲ್ಲೇ ಅವನು ಹಿಂದಿನ (ಮೈಸೂರು) ರಾಜರೊಡನೆ ಇದ್ದ ಸಂಬಂಧ, ರಾಜನೀತಿ, ನಾಣ್ಯಗಳು, ಆರ್ಥಿಕ ವಿಚಾರ, ಪರದೇಶಗಳೊಡನೆ ಸಂಪರ್ಕ, ಕಂದಾಯ ಪದ್ಧತಿ, ಹೊಸ ಶಕೆ ಪ್ರಾರಂಭಿಸಿದ್ದು ಈ ರೀತಿ ನಾನಾ ವಿಷಯಗಳು ಅಡಕವಾಗಿರಲು ಸಾಧ್ಯ. ಪ್ರತಿಯೊಂದು ವಿಷಯಕ್ಕೂ ಸಂಶೋಧಕನು ಬೇರೆ ಬೇರೆ ಪುಟಗಳಲ್ಲಿ ದಾಖಲೆಗಳನ್ನಿಡಬೇಕು. ಅನಂತರ ಪ್ರತಿದಿನದ ಕೊನೆಯಲ್ಲಿ ಪ್ರತಿ ವಿಷಯಕ್ಕೆ ಸಂಬಂಧಪಟ್ಟ ಹಾಳೆಗಳನ್ನು ಜೊತೆಯಾಗಿ ಕೂಡಿಸಬೇಕು. ಈ ಎಲ್ಲ ವಿಧಾನಗಳಿಂದ ಕೆಲಸ ಅಚ್ಚುಕಟ್ಟಾಗಿ ಅನಾವಶ್ಯಕ ಪುನರುಚ್ಚಾರ, ಹಿಂದೆ ಮುಂದೆ ಹುಡುಕಿ ಆಗುವ ಕಾಲದ ಅಪವ್ಯಯ ನಿಶ್ಚಿತವಾಗಿ ತಪ್ಪುತ್ತವೆ. ಸಂಶೋಧಕನು ತಾನು ಸಂಗ್ರಹಿಸಿದ ಪ್ರತಿ ಪುಟವನ್ನೂ ಒಂದೊಂದು ಕರೆನ್ಸಿ ನೋಟಿನಂತೆ ಕಳೆಯದೇ ಜೋಪಾನ ಮಾಡಬೇಕು. ಸಂಶೋಧಕನಿಗೆ ಒಂದು ಗ್ರಂಥಾಲೋಕನದಲ್ಲಿ ಬರುವ ಇತರ ಅಂಶಗಳೆಂದರೆ ಅದರಲ್ಲಿ ಕಾಣಿಸಿರುವ ಗ್ರಂಥಕರ್ತ, ಅವನ ಅರ್ಹತೆಗಳು ಅವನ ಇತರ ಗ್ರಂಥಗಳು, ಅರಿಕೆ, ಮುನ್ನುಡಿ, ಬಿನ್ನಹ, ನಿವೇದನೆ,

ಉಪೋದ್ಘಾತ (ಪ್ರಿಫೇಸ್) ಪರಿವಿಡಿ - ವಿಷಯಗಳ ತಲೆಬರಹ ಅನುಕ್ರಮಣಿಕೆ, ಪ್ರಸ್ತಾವನೆ ಆಧಾರ ವಾಙ್ಮಯ, ಸೂಚನೆ, ಪರಾಮರ್ಶಿತ ಗ್ರಂಥಗಳು, ಕೆಳಟಿಪ್ಪಣಿಗಳು, ಅನುಬಂಧ ಸಮಾರೋಪ, ತಿದ್ದುಪಡಿ ವಿಶೇಷ ಪದಗಳ ಅರ್ಥ, ಗ್ಲಾಸರಿ, ಚಿತ್ರಗಳು ಇತ್ಯಾದಿ.

ಹೀಗೆ ಕೆಲಸಕ್ಕೆ ಅವಶ್ಯಕವಾದ ವಿಷಯ ಚುನಾವಣೆ, ವಿಷಯಗಳ ಮೂಲ, ಪ್ರಾಥಮಿಕ, ದ್ವಿತೀಯ ಆಕರಗಳು, ಅಭ್ಯಾಸ, ಅವಶ್ಯಕ ಗ್ರಂಥಗಳ ಪಟ್ಟಿ, ವಿಷಯದ ಸಾರಾಂಶ, ಸಂಶೋಧನಾ ಕಾರ್ಯಗಳು (ರಟ್ಟು ಯಾ ಹಾಳೆ) ಇವುಗಳನ್ನು ಸಿದ್ಧಪಡಿಸಿಕೊಂಡು ದಾಖಲೆಗಳನ್ನು ಪುನಃ ಪರೀಕ್ಷಿಸಿ ಅವುಗಳನ್ನು ವಿಂಗಡಿಸಬೇಕು. ಈಗಾಗಲೇ ಬಾಹ್ಯವಿಚಾರ ವಿವರಣೆ, ವಿಮರ್ಶೆ, (ಹ್ಯೂರಿಸ್ಟಿಕ್) ಪ್ರಾರಂಭವಾಗುತ್ತದೆ. ನಂತರ ನಮಗೆ ದೊರಕಿರುವ ವಿಷಯಗಳೆಲ್ಲವೂ ಸತ್ಯವಾದುದೆಂದೂ, ಯಾವುದೂ ಕೃತಕ (ಖೊಟ್ಟಿ)ವಾಗಿ ಉದ್ದೇಶ ಪೂರ್ವಕವಾಗಿ ಸೃಷ್ಟಿಸಲ್ಪಟ್ಟಿಲ್ಲವೆಂದು ದೃಢಪಡಿಸಿಕೊಳ್ಳಬೇಕು. ಎಷ್ಟೋ ವಿದ್ವಾಂಸರು ತಮ್ಮ ಶ್ರಮದ ಅಂತ್ಯದಲ್ಲಿ ಅಥವಾ ಪುಸ್ತಕ (ಪ್ರಬಂಧ) ತಯಾರಾದ ನಂತರ ತಮ್ಮ ವಿಷಯಗಳು ಮುಖ್ಯವಾಗಿ ಶಿಲಾಶಾಸನ, ತಾಮ್ರಶಾಸನ, ಕಾಗದ ಪತ್ರಗಳು, ನಕಲಿಯಾದುವೆಂದು ತಿಳಿದು ವ್ಯಥೆ ಪಟ್ಟಿದ್ದಾರೆ. ಇಂಥ ಅನಾಹುತಗಳನ್ನು ತಪ್ಪಿಸಲು ಎಲ್ಲವನ್ನೂ ಮೊದಲೇ ದೃಢೀಕರಿಸಿಕೊಳ್ಳಬೇಕು ಆಯಾ ಕಾಲಗಳಲ್ಲಿಯೇ ಬರೆದ ಗ್ರಂಥಗಳು, ಪತ್ರಗಳು ನಕ್ಷೆಗಳು, ಚಿತ್ರಗಳು ಬಹಳವಾಗಿ ಒಪ್ಪಬಹುದಾದ ದಾಖಲೆಗಳು.

ಆದರೆ ಈ ದಾಖಲೆಗಳನ್ನು ಬಾಹ್ಯ ವಿಮರ್ಶನೆ ಯೇಹ್ಯೂರಿಸ್ಟಿಕ್ಸ್. ದಾಖಲೆಗಳು ಬಾಹ್ಯ ವಿಷಯಗಳಾದ್ದರಿಂದ ಈ ಹೆಸರಿದೆ. ಈ ಐತಿಹಾಸಿಕ ದಾಖಲೆಗಳ ವಿಮರ್ಶೆ ಇಲ್ಲಿ ವಿಶೇಷ ಅರ್ಥದಲ್ಲಿ ಉಪಯೋಗಿಸಲಾಗಿದೆ. ಅಂದರೆ ಇಲ್ಲಿ ಜಳ್ಳನ್ನು ಜಾಲಾಡಿ ಬಿಸಾಡಿ, ಅರ್ಥಪೂರ್ಣವಾದುದನ್ನು ಚುನಾಯಿಸಿ ಸಂಗ್ರಹಿಸುವುದೇ ಆಗಿದೆ. ಈ ಒರೆಗಲ್ಲಿನ ಮೇಲೆ ಪತ್ತೆ ಹಚ್ಚಿದಾಗ ಸತ್ಯ ಯಾವುದು, ಕೃತ್ರಿಮ ಯಾವುದೆಂದು ತಿಳಿದುಬರುತ್ತದೆ. ವಿಮರ್ಶೆ ಎಂದರೆ ಸತ್ಯಾಸತ್ಯತೆ ಹುಡುಕುವ ಉಪಕರಣ.

ಇಲ್ಲಿ ಬಾಹ್ಯ ವಿಮರ್ಶೆಯಲ್ಲಿ ಮೂರು ವಿಧಾನಗಳಿವೆ. ಮೊದಲನೆಯದಾಗಿ ಗ್ರಂಥ ಕರ್ತೃವಿನ ಸ್ಥಾಪನೆ. ಎರಡನೆಯದಾಗಿ ದಾಖಲೆಗಳನ್ನು ಸರಿಯಾದ ಸ್ಥಳಗಳಲ್ಲಿ ಸ್ಥಾಪಿಸುವುದು. ಮೂರನೆಯದಾಗಿ ದಾಖಲೆಯ ಕಾಲವನ್ನು ಸ್ಥಾಪಿಸುವುದು. ಇತಿಹಾಸ ಸಂಶೋಧನೆ ಎಂದರೆ ಸತ್ಯವಾಗಿ ನಡೆದ ಘಟನೆಗಳನ್ನು ಸರಿಯಾಗಿ ಪುನಃ ನಿರ್ಮಾಣ ಮಾಡಿ ಸತ್ಯ ಸ್ಥಾಪನೆ ಮಾಡುವುದಾಗಿದೆ. ನಮಗೆ ಸರಿಯಾದ ದಾಖಲೆ ಸಿಕ್ಕಿದಾಗ ಮಾತ್ರ ಇದು ಸಾಧ್ಯ. ಹಿಂದೆ ನಾನು ಗಮನಿಸಿದಂತೆ ಅನೇಕ ಸಂದರ್ಭಗಳಲ್ಲಿ ನಕಲಿ (ಖೊಟ್ಟಿ, ಕೃತಕ) ದೊರಕುವುದಾಗಿದೆ. ಇದನ್ನು ತಿಳಿಯಲು ದಾಖಲೆ ಮಾಡಿದವನ ಉದ್ದೇಶ. ಸ್ವಭಾವಗಳನ್ನು, ಅವನಿಗೆ ಆ ದಾಖಲೆ ಮಾಡುವ ಯೋಗ್ಯತೆ. ಅವನು ದಾಖಲೆಗಳನ್ನು ಒದಗಿಸಿಕೊಂಡ ಉದ್ದೇಶ, ಭಾವನೆಗಳನ್ನು ಬೇರೆ ವಿಧಾನಗಳಿಂದ ಒರೆಹಚ್ಚಿ ತಿಳಿಯಬೇಕು. ಈ ಪರೀಕ್ಷೆಗೆ ಒಳಪಡಿಸದಿದ್ದರೆ ನಮಗೆ ನಂಬಲರ್ಹವಾದ ವಿಚಾರಗಳು ತಿಳಿಯುವುದಿಲ್ಲ. ಹೀಗೆ ದಾಖಲೆ ದೊರೆತ ಕಾಲ, ಸನ್ನಿವೇಶ, ಸ್ಥಳ, ದಾಖಲೆಯನ್ನು ಬರೆದಿಟ್ಟ ಕಾಲ ಮುಂತಾದವೂ ಮುಖ್ಯ. ಆಯಾ ಸ್ಥಳ, ಕಾಲ, ಆ ಕಾಲದಲ್ಲಿ ಇದ್ದವನೇ ಬರೆದ ದಾಖಲೆಗಳು ಸತ್ಯಕ್ಕೆ ಬಹಳ ಹತ್ತಿರವಿರುತ್ತವೆ.

ಹೀಗೆ ಬಾಹ್ಯ ವಿಮರ್ಶೆಯು ಪ್ರಾಥಮಿಕ ಹಂತದಲ್ಲಿ ಸಂಶೋಧಕನಿಗೆ ಬೇಕಾದ ಸಲಕರಣೆಗಳನ್ನು ಒದಗಿಸುತ್ತವೆ. ಆದ್ದರಿಂದ ಅವುಗಳನ್ನು ಸರಿಯಾದ ರೀತಿಯಲ್ಲಿ ಒದಗಿಸಿಕೊಳ್ಳಬೇಕು. ಇದೇ ಬಾಹ್ಯ ವಿಮರ್ಶಾ ಪದ್ಧತಿಯ ಮುಖ್ಯ ಕೆಲಸವಾಗಿದೆ.

## 7.3 ಆಂತರಿಕ ವಿಮರ್ಶೆ

ವಿಶ್ಲೇಷಣಾ ಕಾರ್ಯ ರೀತಿಯಲ್ಲಿ ಎರಡನೆಯ ಮಾರ್ಗವು ಆಂತರಿಕ ವಿಮರ್ಶೆ (ಹರ್‌ಮಾನಿಟಿಕ್ಸ್) ಯಾಗಿದೆ. ಹಿಂದಿನ ಅಧ್ಯಾಯದಲ್ಲಿ ಬಾಹ್ಯ ವಿಚಾರ ವಿಮರ್ಶೆಯಲ್ಲಿ ದಾಖಲೆಗಳನ್ನು ಹುಡುಕುವುದು. ಅದರ ಸತ್ಯಾಸತ್ಯತೆ, ರಚನಾಕಾರನ ಸ್ಥಳ, ಕಾಲ ಅವುಗಳ ಪ್ರಾಮುಖ್ಯತೆ ಮುಂತಾದುವನ್ನು ತಿಳಿಯಲಾಯಿತು. ಈ ಆಂತರಿಕ ವಿಮರ್ಶೆಯಲ್ಲಿ ವಾಸ್ತವಾಂಶಗಳ ಸಂಕಲನ (ನಿಶ್ಚಯಾತ್ಮಕ ಗುಣ) ಅದರಲ್ಲಿ ಪದಾನುಸಾರ ಅರ್ಥಗ್ರಹಿಕೆ, ನಿಜವಾದ ಅರ್ಥಗ್ರಹಿಕೆ ಮತ್ತು ನಿರಾಕರಣಾತ್ಮಕ (ನಕಾರಾತ್ಮಕ) ಅರ್ಥವಿವರಣೆಗಳನ್ನು ಗಮನಿಸಬೇಕಾಗಿದೆ. ಹೀಗೆ ಇಲ್ಲಿ ದಾಖಲೆ (ಪುರಾವೆ)ಗಳಿಗಿಂತ ಅದರಲ್ಲಿರುವ ಹೇಳಿಕೆಗಳ ಪರಿಶೀಲನೆ ಮುಖ್ಯವಾಗಿದೆ. ಆದುದರಿಂದ ಈ ಕಾರ್ಯಕ್ರಮವನ್ನು ಮೇಲ್ಮಟ್ಟದ ವಿಮರ್ಶೆ ಎನ್ನಬೇಕು. ಎಲ್ಲ "ವಿಮರ್ಶೆಗಳಿಗೆ ವಿಶ್ಲೇಷಣೆ ಅಗತ್ಯ" ಮತ್ತು ಎಲ್ಲ "ವಿಮರ್ಶೆಯು

ವಿಶ್ಲೇಷಣೆಯೊಂದಿಗೆ ಪ್ರಾರಂಭವಾಗುತ್ತದೆ" ವಿಶ್ಲೇಷಣೆ ಒಂದು ಮನಸ್ಸಿನ ಚಟುವಟಿಕೆ. ಅದು ಎಷ್ಟು ಚುರುಕಾಗಿ ಕೆಲಸ ಮಾಡುವುದೋ ವಿಶ್ಲೇಷಣೆ ಅದು ಸ್ಪಷ್ಟವಾಗಿರುತ್ತದೆ. ವಿಶ್ಲೇಷಣೆಯಿಂದ ನಮಗೆ ಒಂದು ಸಮಸ್ಯೆಯ ಗಾಢತೆ ಮತ್ತು ಅಂತರ್ಯಗಳು ಮನದಟ್ಟಾಗುತ್ತವೆ.

ವಿಶ್ಲೇಷಣೆಯ ಮಾರ್ಗದಿಂದ ದಾಖಲೆ ಸೃಷ್ಟಿಸಿದವನ ಪ್ರಯತ್ನಗಳನ್ನು ತಿಳಿಯಲು ಸಾಧ್ಯ. ಆ ಪ್ರಯತ್ನದಲ್ಲಿ ಅವನ ವಿಚಾರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು. ಅವನ ಪ್ರತಿಯೊಂದು ಭಾವನೆಯು ಪ್ರತ್ಯೇಕವಾಗಿ ವಿಶ್ಲೇಷಿಸಲ್ಪಡಬೇಕು. ಇವುಗಳಲ್ಲಿ ಕೆಲವು ಸರಿಯಿರಬಹುದು, ಕೆಲವು ತಪ್ಪಾಗಿ ಕಾಣಬಹುದು. ಆಂತರಿಕ ವಿಮರ್ಶೆಯಿಂದ ಯಾವುದು ಸರಿ ಯಾವುದು ತಪ್ಪು ಎಂದು ತಿಳಿಯಬಹುದು. ಆಂತರಿಕ ವಿಮರ್ಶೆಯು ಬಹಳ ತೊಡಕಾದ ವಿಷಯ. ಬಾಹ್ಯ ವಿಮರ್ಶೆಯಲ್ಲಿ ನಡೆದ ಪ್ರತಿಕ್ರಿಯೆಯು ಪುನಃ ಅಭ್ಯಾಸ ಮಾಡಿ ಮತ್ತೆ ಪರಿಶೀಲಿಸಬೇಕು. ಈ ಕಾರ್ಯದಲ್ಲಿ ಎರಡು ವಿಧಾನಗಳಿವೆ. ಮೊದಲನೆಯದಾಗಿ ನಿಶ್ಚಯಾತ್ಮಕ (ವಾಸ್ತವಾಂಶ) ಗಳ ಸಂಕಲನ ಮತ್ತು ಅರ್ಥ ನಿರ್ಣಯ ಇದರಲ್ಲಿ ದಾಖಲೆಯ ಕರ್ತೃವು ತನ್ನ ಹೇಳಿಕೆ (ಉಕ್ತಿ)ಯಲ್ಲಿ ಏನು ಹೇಳಿದ್ದಾನೆಂದು ಅರ್ಥೈಸುವುದು. ಎರಡನೆಯದಾಗಿ ಅವನು ಯಾವ ಸಂದರ್ಭದಲ್ಲಿ ಅದನ್ನು ಮಾಡಿದ್ದಾನೆ ಎಂದು ತಿಳಿಯುವುದು ನಕಾರಾತ್ಮಕ ವಿಮರ್ಶೆ ಇದರ ಮುಖ್ಯ ಉದ್ದೇಶವೇನೆಂದರೆ ಕರ್ತೃವಿನ ಮನಸ್ಸನ್ನು ಮತ್ತು ಅವನು ಹೇಳಿರುವ ವಾಕ್ಯಾರ್ಥವನ್ನು ಸತ್ಯಶೋಧನೆಯ ದೃಷ್ಟಿಯಿಂದ ಶೋಧಿಸುವುದು ಅಥವಾ ತಾರ್ಕಣೆ ಮಾಡುವುದಾಗಿದೆ. ಇದರ ಉದ್ದೇಶ ಪದದ ಅರ್ಥಗ್ರಹಿಕೆಯೇ ಆಗಿದೆ. ಮತ್ತು ನಕಾರಾತ್ಮಕ ವಿಮರ್ಶೆ ಇದರ ಮುಖ್ಯ ಉದ್ದೇಶವೇನೆಂದರೆ ಕರ್ತೃವಿನ ಮನಸ್ಸನ್ನು ಮತ್ತು ಅವನು ಹೇಳಿರುವ ವಾಕ್ಯಾರ್ಥವನ್ನು ಸತ್ಯಶೋಧನೆಯ ದೃಷ್ಟಿಯಿಂದ ಶೋಧಿಸುವುದು ಅಥವಾ ತಾರ್ಕಣೆ ಮಾಡುವುದಾಗಿದೆ. ಇದರ ಉದ್ದೇಶ ಪದದ ಅರ್ಥಗ್ರಹಿಕೆಯೇ ಆಗಿದೆ. ಮತ್ತು ನಕಾರಾತ್ಮಕ ವಿಮರ್ಶೆಯಿಂದ ಆ ಹೇಳಿಕೆಯಲ್ಲಿರಬಹುದಾದ ಅಸತ್ಯತೆಯನ್ನು ತೆಗೆದುಹಾಕುವುದೇ ಆಗಿದೆ. ಆಂತರಿಕ ವಿಮರ್ಶೆಯ ಅವಶ್ಯಕತೆ ಏಕಾಗಿದೆ ಎಂದರೆ ಶೋಧಕನು ತನ್ನ ವಿಚಾರ ಸಂಗ್ರಹಣೆ ಮತ್ತು ದಾಖಲೆಗಳಿಗಾಗಿ ಹಿಂದೆ ಆಗಿರುವ ಘಟನೆಗಳನ್ನೇ ಅವಲಂಬಿಸಿರುತ್ತಾನೆ. ಅದರಲ್ಲಿ ಸತ್ಯವಾದ ಮತ್ತು ಅಸತ್ಯವಾದ ಅನೇಕ ವಿಷಯಗಳು ಕೂಡಿಯೇ ಇರುತ್ತವೆ. ಇವುಗಳ ಆಧಾರ ನೋಡಿದವು, ಅನುಭವ, ಅಥವಾ ಹೇಳಿಕೆ, ಕೇಳಿಕೆ ಮಾತುಗಳಾಗಿರಬಹುದು. ಇವೆಲ್ಲವನ್ನು ಸತ್ಯಾನ್ವೇಷಣೆಗೆ ಗುರಿಪಡಿಸಬೇಕೆಂಬುದರಲ್ಲಿ ಎಳ್ಳಷ್ಟೂ ಅನುಮಾನವಿಲ್ಲ. ಇವುಗಳನ್ನು ಉಪಯೋಗಿಸಿಕೊಳ್ಳುವ ಮೊದಲು ಅವನ್ನು ಸರಿಯಾದ ಪರೀಕ್ಷೆಗೆ, ವೀಕ್ಷಣೆಗೆ ಒಳಪಡಿಸುವುದೇ ಸಹಜವಾದ, ನ್ಯಾಯವಾದ ಮಾರ್ಗ. ಇದನ್ನು ನಿರ್ಧರಿಸುವ ವೈಜ್ಞಾನಿಕ ಸಂಶೋಧನೆಗಳಿಗೆ ಒಳಪಡಿಸುವುದರಿಂದ ಇದು ಆಂತರಿಕ ವಿಮರ್ಶೆಯ ಮುಖ್ಯಾಂಶ-ದಾಖಲೆಯ ಮೌಲ್ಯ ನಿರ್ಧಾರವಾಗುತ್ತದೆ. ಅನೇಕ ದಾಖಲೆಗಳು ಪರಿಪೂರ್ಣ ಜ್ಞಾನವಿಲ್ಲದೆ ಅಥವಾ ಯಾವುದೇ ಉದ್ದೇಶ ಸಾಧನೆಗಾಗಿ ಅಥವಾ ದುರುದ್ದೇಶ ಅಥವಾ ಪೂರ್ವಾಗ್ರಹ ಪೀಡಿತವಾಗಿ ತಯಾರಾಗಿರಬಹುದು. ದಾಖಲೆಕಾರ ಎಲ್ಲ ವಿಷಯಗಳನ್ನು ಸಂಗ್ರಹಿಸುವ ಅಥವಾ ಸಂಗ್ರಹವಾದುದನ್ನು ಪರಿಶೀಲಿಸದೆ, ಪರಿಷ್ಕರಿಸದೆ ಇತರ ಸಾಮಗ್ರಿಗಳೊಡನೆ ತಾಳೆ ಮಾಡದೆ ದಾಖಲಿಸಬಹುದು. ಭಾರತದ ಅನೇಕ ಆಸ್ಥಾನ ಇತಿಹಾಸಕಾರರು ತಮ್ಮ ದೊರೆಯನ್ನು ಪ್ರಶಂಸೆ ಮಾಡುವುದಲ್ಲದೇ ಮತ್ತೇನನ್ನೂ ದಾಖಲಿಸುತ್ತಿರಲಿಲ್ಲ. ಅವರ ಸೋಲು, ಕ್ರೌರ್ಯ, ಕೆಟ್ಟ ಕೆಲಸಗಳಿದ್ದರೂ ಅವನ್ನು ಕಾಣಿಸುತ್ತಿರಲಿಲ್ಲ. ಎಲ್ಲದರಲ್ಲೂ ಉತ್ಪ್ರೇಕ್ಷೆ, ಎಷ್ಟೋ ಐತಿಹಾಸಿಕವಲ್ಲದ ನಿಷ್ಪ್ರಯೋಜಕ ವಿಷಯಗಳನ್ನು ಸೊಗಸಾದ ರಂಜಕ ಸಾಹಿತ್ಯವನ್ನು ಉದ್ದೇಶಪೂರ್ವಕ ಸೇರಿಸಿ ಸಂತೋಷಪಡುತ್ತಿದ್ದರು. ಅವನ್ನೂ ಹೊಗಳುವ ಜನರಿದ್ದರು. ಇದು ಇತಿಹಾಸದ ವಿಷಯವಲ್ಲ. ಒಂದು ದೊಡ್ಡ ಬಂಡೆಯನ್ನು ಶ್ರಮದಿಂದ ಒಡೆದು ಒಂದು ತುಣುಕು ಚಿನ್ನವನ್ನು ಪಡೆಯುವಂತೆ ಇಂಥ ಸಾಮಗ್ರಿಯನ್ನು ಪರಿಶೋಧಕನು ಉಪಯೋಗಿಸಬೇಕು. ಎರಡನೆಯದಾಗಿ ಪರದೇಶಗಳಿಂದ ಬಂದ ಸಂಚಾರಿಗಳನ್ನು ಎಷ್ಟೋ ವಿಷಯಗಳನ್ನು ಕೇವಲ ಹೇಳಿಕೆಗಳನ್ನು ನಂಬಿ ಅಪರೂಪದ, ಅಸತ್ಯವಲ್ಲದ ವಿಷಯಗಳನ್ನು ನಂಬಿ ತಮ್ಮ ದಾಖಲೆಗಳನ್ನು ತುಂಬುತ್ತಾರೆ. ಅವರು ತಮ್ಮ ಕಣ್ಣನ್ನು ನಂಬಿದ್ದಕ್ಕಿಂತ ಕಿವಿಯನ್ನು ನಂಬಿ ಇತಿಹಾಸಕ್ಕೆ ಅಪಚಾರ ಮಾಡಿರುವುದುಂಟು. ಪೂರ್ವಾಗ್ರಹಪೀಡಿತ ಇತಿಹಾಸಕಾರರ ಪಡೆಯೂ ಸಾಕಷ್ಟು ಅನಾಹುತಕ್ಕೆ ಕಾರಣರಾಗಿದ್ದಾರೆ. ಭಾರತ ಚರಿತ್ರೆಯನ್ನು ಬರೆದ ಅನೇಕ ಬ್ರಿಟಿಷ್ ಚರಿತ್ರಾಕಾರರು ಬಹಳ ಶ್ರಮವಹಿಸಿ ಕೆಲಸ ಮಾಡಿ ಇತಿಹಾಸ ರಚಿಸಿದ್ದಾರೆ. ಆದರೆ ಹಿಂದಿನ ಭಾರತೀಯರು ಆಡಳಿತ ತಿಳಿಯದವರು, ಅಸಂಸ್ಕೃತರು, ಅಸಮರ್ಥರು ಎಂಬ ಭಾವನೆಯಿಂದ ಬರೆದು ತಮ್ಮ ಸಾಮ್ರಾಜ್ಯವಾದಿ ತತ್ವವನ್ನು ಪ್ರಚಾರ ಮಾಡಿದರು. ಇವರು ಪೂರ್ವಾಗ್ರಹ ಪೀಡಿತ ಮನೋಭಾವನೆ. ಇತಿಹಾಸ ತತ್ವಗಳಿಗೆ ಅಪಚಾರ ಹೀಗೆ ಬಹಳ ನಂಬಲರ್ಹವಾದುದೆಂದು ತಿಳಿಯಬಹುದಾದ ದಾಖಲೆಗಳೂ ಸತ್ಯಾಂಶವನ್ನು ಮರೆಮಾಚುವುದಲ್ಲದೆ ತಪ್ಪು ಅಭಿಪ್ರಾಯಗಳನ್ನು ಮೂಡಿಸುತ ವೆ. ಆದರೆ

ಇತಿಹಾಸಕಾರನು ಯಾವ ಪೂರ್ವಾಗ್ರಹಪೀಡಿತವಾಗಿದ್ದ ದಾಖಲೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಸತ್ಯವನ್ನು ಹೊರಗಡೆ ಈ ತಪ್ಪುಗಳನ್ನು ತೋರಿಸಿಕೊಡಬೇಕು: ಹೀಗೆ ಆಂತರಿಕ ವಿಮರ್ಶೆಯು ವಿಷಯಗಳನ್ನು ಸತ್ಯ ದೃಷ್ಟಿಯಿಂದ ಕಾಣುವುದು, ತಪ್ಪುಗಳನ್ನೂ ಸರಿಪಡಿಸುವುದು, ಭ್ರಮೆ ಕಾತರ್ಕಗಳನ್ನು ತ್ಯಜಿಸುವುದು ಮುಂತಾದ ಕಾರ್ಯಗಳನ್ನೂ ಮಾಡುತ್ತದೆ.

ಹೀಗೆ ಆಂತರಿಕ ವಿಮರ್ಶೆಯಲ್ಲಿ ವಾಸ್ತವಾಂಶಗಳೂ ನಕಾರಾತ್ಮ ವಿಷಯಗಳೂ ಸೇರಿವೆ. ವಾಸ್ತವಾಂಶ ವಿಮರ್ಶೆಯಲ್ಲಿ ದಾಖಲೆಯ ಭಾಷೆಯನ್ನು ತಿಳಿಯಬೇಕು. ಅದರ ಅರ್ಥವನ್ನು ವಿಶದವಾಗಿ ತಿಳಿಯಬೇಕು. ಇದನ್ನು ತಿಳಿದಾದ ಮೇಲೆ ಇಡೀ ಗ್ರಂಥವನ್ನು ಓದಿ ಆ ಪದದ ಅರ್ಥ ಎಲ್ಲ ಕಡೆ ಸಮಾನಾಗಿದೆಯೇ ಅಥವಾ ಬೇರೆ ಬೇರೆ ಅರ್ಥಗಳಿಗೆ ಅವಕಾಶ ಮಾಡಿಕೊಡುತ್ತದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು; ಮುಂದೆ ಈ ವಾಸ್ತವಾಂಶ ವಿಶ್ಲೇಷಣೆಯಲ್ಲಿ ಗ್ರಂಥದ ಸಾಮಾನ್ಯ ವಿಷಯಗಳನ್ನು ತಿಳಿಯಬೇಕು. ಮತ್ತು ಅದರ ಗ್ರಂಥಕರ್ತನ ಉದ್ದೇಶಗಳನ್ನು ತಿಳಿಯಬೇಕು. ಹೀಗೆ ದಾಖಲೆಯನ್ನು ವಿಶ್ಲೇಷಿಸುವುದೆಂದರೆ ಅದರ ಎಲ್ಲ ವಿಷಯಗಳನ್ನು ಬೇರ್ಪಡಿಸಿ, ಅದರ ಕರ್ತನ ಎಲ್ಲ ಭಾವನೆಗಳನ್ನು ತಿಳಿಯುವುದೇ ಆಗಿದೆ. ಹೀಗೆ ಈ ವಿಮರ್ಶೆಯಲ್ಲಿ ಎರಡು ಹಂತಗಳು ಕಂಡು ಬರುತ್ತವೆ. ಮೊದಲನೆಯದಾಗಿ ದಾಖಲೆಯ ಸಾಧಾರಣ (ಸಾಹಿತ್ಯಕ್ಕೆ) ಅರ್ಥ, ಎರಡನೆಯದಾಗಿ ಅದರ ನಿಜವಾದ ಅರ್ಥ ಗ್ರಹಿಕೆ, ಒಂದು ಗ್ರಂಥ ತಿಳಿಯಬೇಕಾದರೆ ಅದರ ಭಾಷೆಯ ಪರಿಚಯವಿರಬೇಕು. ಇತಿಹಾಸ ದಾಖಲೆಗಳು ಅನೇಕ ಭಾಷೆಗಳಲ್ಲಿರುತ್ತವೆ. ಆದ್ದರಿಂದ ಸಂಶೋಧಕನು ನಾನಾ ಭಾಷೆಗಳನ್ನು ಕಲಿತು ಅದರಲ್ಲಿ ತಕ್ಕಷ್ಟು ಪಾಂಡಿತ್ಯ ಪಡೆದಿರುವುದು ಒಳ್ಳೆಯದು. ಎಲ್ಲ ಭಾಷೆಗಳಲ್ಲಿಯೂ ಆಡುಭಾಷೆ. ಅಲಂಕಾರಿಕ ಭಾಷೆ, ಸಾಹಿತ್ಯ ಭಾಷೆ, ಗಾದೆ, ಒಡಪುಗಳು ಇತರ ಪ್ರಭೇದಗಳು ಇರುತ್ತವೆ. ಇವುಗಳ ಪರಿಚಯ ಇದ್ದಾಗ ಮಾತ್ರ ಮಾತಿನ ಅರ್ಥ ಚೆನ್ನಾಗಿ ಆಗುತ್ತದೆ. ಇದಲ್ಲದೆ ಅನೇಕ ಭಾಷೆಗಳಲ್ಲಿ ಪ್ರಾದೇಶಿಕ ವೈವಿಧ್ಯವೂ ಇರುತ್ತವೆ. ಮತ್ತೊಂದು ವಿಷಯವೆಂದರೆ ಕೆಲವು ಮಾತುಗಳು ಪದಪ್ರಯೋಗಗಳು ತಮ್ಮ ಮೊದಲಿನ ಅರ್ಥ ಕಳೆದುಕೊಂಡು ಬದಲಾಯಿಸಿದ ಅರ್ಥ ಕೊಡುತ್ತವೆ. ಕೆಲವು ಬಳಕೆಯಲ್ಲಿರುವುದಿಲ್ಲ. (ಉದಾ. ನಲ್ಲಿ ನೀರು ಬಂದ್ ಅದೆ, ಅಂದರೆ ಒಂದು ಪ್ರದೇಶದಲ್ಲಿ ನಲ್ಲಿ ನೀರು ಬಂದಿದೆ ಎಂದೂ ಮತ್ತೊಂದು ಪ್ರದೇಶದಲ್ಲಿ ನೀರು ಬಂದಾಗಿದೆ( ನಿಲ್ಲಿಸಲಾಗಿದೆ) ಎಂದೂ ಅರ್ಥ ಬರುತ್ತದೆ). ರಾಜನು ಅವನಿಗೆ ಹತ್ತು ವರಾಹ ಕೊಟ್ಟನು ಎಂದರೆ ಹತ್ತು ಚಿನ್ನದ ನಾಣ್ಯ ಕೊಟ್ಟನು ಎಂದಾಗುತ್ತದೆಯೇ ಹೊರತು ಹತ್ತು ಹಂದಿಗಳನ್ನಲ್ಲ 'ಗುಬ್ಬಿ ಹಾರಿತು' ಎಂದರೆ ಕೆಲವಡೆ ಬಟ್ಟೆಯ ಗುಂಡಿ ಬಿದ್ದು ಹೋಯಿತು ಎಂಬ ಅರ್ಥವಿದೆ. ಕನ್ನಡ ಭಾಷೆಯಲ್ಲಿ ಉತ್ತರ ಕನ್ನಡ ಕರಾವಳಿ ಕನ್ನಡ, ಮೈಸೂರು ಕನ್ನಡ ಎಂಬ ಪ್ರಭೇದಗಳಿವೆ. ಹಾಗೆಯೇ ಹಳೆಗನ್ನಡ ಮಧ್ಯ ಕಾಲದ ಕನ್ನಡ, ಆಧುನಿಕ ಕನ್ನಡ ಎಂಬ ವ್ಯತ್ಯಾಸಗಳೂ ಇವೆ. ಹೀಗೆ ವಾಸ್ತವಾಂಶಗಳ ಅರ್ಥ ನಿರ್ಣಯದಲ್ಲಿ ಪದಾನುಸಾರ ಅರ್ಥ ಮತ್ತು ನಿಜವಾದ ಅರ್ಥ ಗ್ರಹಿಕೆಯನ್ನು ದಾಖಲೆಗಳಿಂದ ತಿಳಿಯಬೇಕು. ಇದಲ್ಲದೆ ಒಂದು ಪದದ ವಿಶೇಷ ಅರ್ಥಗಳನ್ನು ಗ್ರಹಿಸಬೇಕು.

ವಾಸ್ತವಾಂಶ ವಿಮರ್ಶೆಯಲ್ಲಿ ಕೆಲವು ನಿಯಮಗಳನ್ನು ಪರಿಪಾಲಿಸಬೇಕಾಗುತ್ತದೆ. ಮೊದಲನೆಯದಾಗಿ ಪ್ರತಿ ಭಾಷೆಯು ತನ್ನ ಬದುಕಿನಲ್ಲಿ ಅನೇಕ ಬದಲಾವಣೆ ಹೊಂದುತ್ತಾ ಹೋಗುವುದು ಸಹಜ. ಕೆಲವು ಪದಗಳು ಒಂದೇ ವಿಷಯವನ್ನು ನಾನಾ ರೀತಿಯಲ್ಲಿ ಹೇಳಬಹುದು ಅಥವಾ ಸ್ವಲ್ಪ ವ್ಯತ್ಯಾಸ ಮಾಡಿಯೋ, ಅಲ್ಪ ಬದಲಾಯಿಸೋ, ಸಮಾನ ಅರ್ಥ ಬರುವ ಮಾತುಗಳನ್ನು ಉಪಯೋಗಿಸಬಹುದು. ಈ ವ್ಯತ್ಯಾಸ ಬದಲಾವಣೆಗಳನ್ನು ಸಂಶೋಧಕ ಕಂಡುಕೊಳ್ಳಬೇಕು. ಉದಾಹರಣೆಗೆ ಕನ್ನಡ ಕೀಳ್ಗುಣೆ, ಕಿಳ್ಗುಂಟೆ, ಕೀಳ್ಗುಂಟೆ, ಕೀಳ್ಗೊಂಟೆ, ಕೀಳ್ಗುಟೆ, ಕೀಳ್ಗೊಣ್ಚೆ, ಮುಂತಾದ ಅಲ್ಪ ವ್ಯತ್ಯಾಸದಲ್ಲಿದೆ. ಆ ಪದದ ಅರ್ಥ ಕೆಳಗಿನ ಕುಳಿ. ಸಾರಾಂಶ ಪದ ಒಂದು ಬಗೆಯ ವಿಶಿಷ್ಟವೀರ ಆತ್ಮಹತ್ಯೆ, ಬಲಿದಾನ ವಿವರಣೆ ಹೀಗಿದೆ. ವಿವರಣೆ ಅರ್ಥ ಹೀಗಿದೆ. ಒಡೆಯನು ತೀರಿಕೊಂಡಾಗ ಆತನು ಆಶ್ರಿತನು ತನ್ನ ಯಜಮಾನನ ಹೆಣದ ಕೆಳಗೆ ತನ್ನನ್ನು ಹೂಳಿಸಿಕೊಳ್ಳುವಿಕೆ. ಮುಂದೆ ಸಮಾನಾರ್ಥ ಪದಗಳು ಬಂದವು ಕೀಳ್ಗುಂಟೆ ಬದಲು "ವೇಳೆ ವಾಳಿ" ಎಂಬ ಪದ ಬಂತು. ಅದರಲ್ಲಿ ವೇಳೆ ಎಂದರೆ ಪ್ರತಿಜ್ಞಾ ಸೂಚಕ, ವೇಳಗೋಳ್ ಎಂಬುದು ಪ್ರತಿಜ್ಞಾಪರಿಪಾಲನೆ. 'ವೇಳೆವಾಳಿಗೆ ಪ್ರತಿಯಾಗಿ ಹೊಯ್ಸಳರ ಕಾಲಕ್ಕೆ 'ಗರುಡ' ಎಂಬ ಪದ ಬಳಕೆಗೆ ಬಂದಿತು. ಹೀಗೆ ಒಂದು ಪದದ ಅರ್ಥ ನಾನಾ ರೀತಿಯಾಗಿದ್ದು, ಬದಲಾವಣೆ ಹೊಂದಿರುತ್ತದೆ. ಇದೇ ರೀತಿ ಒಂದೇ ಸಮಾಜ ನಗರ ಸಂಸ್ಕೃತಿ, ಗ್ರಾಮಾಂತರ ಪ್ರದೇಶಗಳ ಪದ ಪ್ರಯೋಗದಲ್ಲೂ ವ್ಯತ್ಯಾಸಗಳಿರುತ್ತವೆ. ಇದಲ್ಲದೆ ಪ್ರತಿ ಗ್ರಂಥಕರ್ತನೂ ತನ್ನದೇ ಆದ ಶೈಲಿಯನ್ನೂ ಹೊಂದಿರುತ್ತಾನೆ. ಇದನ್ನು ಗಮನಿಸದಿದ್ದರೆ ಅನೇಕ ಪ್ರಮಾದಗಳಾಗುತ್ತವೆ. ಕೊನೆಯದಾಗಿ ಒಂದು ಪದ ಪ್ರಯೋಗವು ನಾನಾ ಉಪಯೋಗಗಳಲ್ಲಿ ಬೇರೆ ಬೇರೆ

ಅರ್ಥವನ್ನು ಸೂಚಿಸುತ್ತದೆ. ಶೇಕ್ಸ್‌ಪಿಯರ್‌ನ ಐತಿಹಾಸಿಕ ನಾಟಕ ಒಂದಾದ ಜೂಲಿಯಸ್ ಸೀಸರ್ ನಲ್ಲಿ ಮಾರ್ಕ್ ಆಂಟೋನಿಯು 'ಹಾನರಬಲ್' ಎಂಬ ಒಂದೇ ಪದವನ್ನು ತನ್ನ ಒಂದೇ ಪುಟ್ಟ ಭಾಷಣದಲ್ಲಿ ಆಗಾಗ್ಗೆ ಉಪಯೋಗಿಸಿ ಪ್ರತಿ ಸಲವು ಅದು ವಿಭಿನ್ನವಾದ ಅರ್ಥ ಕೊಡುವಂತೆ, ತನ್ನ ಅಭಿಪ್ರಾಯಗಳಿಗೆ ಹೊಂದಿಕೊಳ್ಳುವಂತೆ ಚಮತ್ಕಾರವಾಗಿ ಉಪಯೋಗಿಸುವುದು ಅದ್ಭುತವಾಗಿದೆ. ಇತಿಹಾಸ ಸಂಶೋಧನಾ ಪದಗಳನ್ನು ಅರ್ಥ ಮಾಡಿಕೊಳ್ಳುವ ಸಂದರ್ಭದಲ್ಲಿ ಇಂಥ ವಿಶೇಷಗಳನ್ನು ಗಮನಿಸುವ ಅರ್ಹತೆ ಪಡೆದಿರಬೇಕು. ಎಲ್ಲರಿಗೂ ಪರಿಚಿತವಾಗಿರುವ ಚಂದ್ರಹಾಸನ ಕಥೆಯಲ್ಲಿ ಒಂದು ಪದದ ಅಲ್ಪ ವ್ಯತ್ಯಾಸದಿಂದ ಪ್ರಾಣಕ್ಕೆ ಆಪತ್ತು ಒದಗಿದ ಸಂದರ್ಭ ಒಲಿಯುವಂತೆ ಆಯಿತು. ಇಷ್ಟಲ್ಲದೆ ಅನೇಕ ಸಂದರ್ಭಗಳಲ್ಲಿ ಹೀನಕೃತ್ಯ, ಕೊಲೆ ಮಾಡಿಲ್ಲದವರು ಅದು ಕರ್ತವ್ಯವೆಂದು ಬಹಿರಂಗವಾಗಿ ಹೇಳಿಕೊಂಡು ಗರ್ವ ಪಡುತ್ತಾರೆ. ಇಂಥ ವೈಪರೀತ್ಯ, ಅಂಥ ಸನ್ನಿವೇಶ, ಹೀನ ಕೃತ್ಯವನ್ನು ಹೊಗಳುವ ಸಮುದಾಯವಿರುವುದೇ ಇದಕ್ಕೆ ಕಾರಣ. ಇಂಥ ಸಂದರ್ಭಗಳಲ್ಲಿ ಕಾರಣ, ಸತ್ಯ ಇವುಗಳನ್ನು ಇತಿಹಾಸಕಾರನು ಸಮಯೋಚಿತವಾಗಿ, ತಾಳ್ಮೆಯಿಂದ ಪತ್ತೆ ಹಚ್ಚಬೇಕು. ಒಬ್ಬ ವ್ಯಕ್ತಿ ಬಹಳ ವರ್ಷಗಳನ್ನು ಸೆರೆಮನೆಯಲ್ಲಿ ಕಳೆದನೆಂಬ ಮಾತು ಸಂದರ್ಭೋಚಿತವಾಗಿ ಗೌರವಾಸ್ಪದವಾದ ಮಾತು ಆಗಿರುತ್ತದೆ. ಸ್ವಾತಂತ್ರ್ಯ ಹೋರಾಟದಲ್ಲಿ ಸೆರೆಮನೆಯಲ್ಲಿರಬೇಕಾಯಿತು. ಎನ್ನುವುದಕ್ಕೂ ಕೆಟ್ಟ ಕೆಲಸ ಮಾಡಿ ಜೈಲಿನಲ್ಲಿದ್ದರು ಎಂಬುದಕ್ಕೂ ವ್ಯತ್ಯಾಸವಿದೆ. ಬ್ರಿಟಿಷರಿಗೆ 'ವಿರೋಧಿ' ಗಳಾಗಿದ್ದ ಟಿಪ್ಪು, ಲಕ್ಷ್ಮೀಬಾಯಿ, ಕಿತ್ತೂರ ಚೆನ್ನಮ್ಮ ಇಂಥವರು ಅವರಿಗೆ ದ್ರೋಹಿಗಳಾಗಿದ್ದರೂ ಭಾರತದ ಸ್ವಾತಂತ್ರ್ಯ ಹೋರಾಟಗಾರರೂ, 'ರಾಷ್ಟ್ರಪ್ರೇಮಿ'ಗಳೂ ಆಗಿ ಗೌರವದ ಸ್ಥಾನ ಪಡೆದಿದ್ದಾರೆ. ಹೀಗೆ ಪದ ಸಮೂಹಗಳನ್ನು ಅರ್ಥೈಸಿಕೊಳ್ಳಬೇಕಾದಾಗ ಆ ಪದ ಪ್ರಯೋಗದ ಸನ್ನಿವೇಶದ ಸಂಪೂರ್ಣ ವಿಷಯ ಪರಿಚಯ ಮಾಡಿಕೊಂಡಾಗ ಯೋಗ್ಯವಾದ ಅರ್ಥ ದೊರಕುತ್ತದೆ. ಹೀಗೆಯೇ ನಾವು ಈಗ ಆಧುನಿಕವಾಗಿ ಉಪಯೋಗಿಸುವ ಮಾತುಗಳನ್ನು ಬಲವಂತವಾಗಿ ಹಿಂದಿನ ಸಂದರ್ಭಗಳಿಗೆ, ಬೇರೆ ಕಾಲ, ಬೇರೆ ದೇಶಗಳಿಗೆ ಹೇರಬಾರದು, ಹಿಂದೆ ಪ್ರಜಾನುರಾಗಿಗಳಾಗಿದ್ದ ಅಶೋಕ, ಅಕ್ಬರ್, ಕ್ರಾಮ್‌ವೆಲ್, ವಾಷಿಂಗ್‌ಟನ್ ಮುಂತಾದವರು ವಯಸ್ಕ ಮತದಾನದಿಂದ ಚುನಾಯಿತರಾದ ಪ್ರಜಾನುರಾಗಿಗಳಲ್ಲ.

ಹೀಗೆ ನಿಶ್ಚಯಾತ್ಮಕ ವಿಮರ್ಶೆಗೆ ಹೆಚ್ಚು ಕಾಲ ವ್ಯಯವಾಗುವುದಲ್ಲದೆ ಬಹಳ ತಾಳ್ಮೆಯೂ ಬೇಕು. ಪ್ರತಿಪದವನ್ನು ಆಯಾ ಕಾಲದ ಪದದ ಅರ್ಥವನ್ನು ಆಯಾದೇಶ, ಅವನ ಸನ್ನಿವೇಶ, ಅನುಭವಗಳನ್ನು ಗಮನಿಸಬೇಕು. ಹೀಗೆ ಒಳ್ಳೆಯ ಸಂಶೋಧಕನು ಹಿಂದೆ ವಿಷಯಗಳನ್ನು ದಾಖಲಿಸಿದವನ ಎಲ್ಲ ವ್ಯವಹಾರಗಳನ್ನು ಪುನರ್‌ರಚಿಸಿಕೊಳ್ಳಬೇಕು. ಆದರೆ ಒಂದು ಸಮಾಧಾನವೆಂದರೆ ಕೇವಲ ಕೆಲವು ಪದಗಳು ಮಾತ್ರ ಹೀಗೆ ವ್ಯತ್ಯಾಸವಾಗುತ್ತದೆಯೇ ಹೊರತು ಎಲ್ಲ ಪದಗಳಲ್ಲಿ ವಿಶೇಷವಾಗಿ ಅರ್ಥ ಕೊಡುವ ಜನಗಳ ಅಂತಸ್ಥನ್ನು ಸೂಚಿಸುವ, ಸಂಸ್ಥೆಗಳ, ಭಾವನೆಗಳನ್ನೂ ವ್ಯಕ್ತಪಡಿಸುವ ಮಾತುಗಳು ಒಂದೇ ಅರ್ಥ ಮಾಡಿಕೊಡಲಾರವು. ಇವುಗಳ ಕಾಲ ಕಾಲದ ಅರ್ಥವನ್ನು ಗಮನಿಸಿ ಗ್ರಂಥಗಳನ್ನು ಅರ್ಥೈಸಬೇಕು.

ಇದಾದ ನಂತರ ಯಥಾರ್ಥ ಅಥವಾ ನಿಜವಾದ ಅರ್ಥ ಕೊಡುವ ಪದಗಳನ್ನು ವಿಚ್ಛೇದಿಸಿ ಒಳ ಅರ್ಥವನ್ನು ತಿಳಿದುಕೊಳ್ಳಬೇಕು. ಗ್ರಂಥ ಕರ್ತನು ತನ್ನ ನಿಜವಾದ ಅರ್ಥವನ್ನು ಸಾಹಿತ್ಯ ಪ್ರಕಾರಗಳಾದ ಹೋಲಿಕೆ, ತಾತ್ಪಾರ್ಯ, ತಮಾಷೆ, ಉಪಮೆ, ಅನ್ಯೋಕ್ತಿ ರೂಪಲಂಕಾರ, ಉತ್ಪ್ರೇಕ್ಷೆ, ಸಂಕ್ಷೆಗಳಲ್ಲಿ ಹುದುಗಿಟ್ಟಿರಬಹುದು. ಉದಾಹರಣೆಗೆ ರೂಸೋ ತನ್ನ ಸೋಷಿಯಲ್ಸ್ ಕಾಂಟ್ರಾಕ್ಟ್ ಗ್ರಂಥದ ಮೊದಲ ವಾಕ್ಯ "ಮನುಷ್ಯನು ಸ್ವತಂತ್ರವಾಗಿ ಹುಟ್ಟುತಾನೆ; ಆದರೆ ಎಲ್ಲ ಕಡೆ ಸಂಕೋಲೆಗಳಿಗೆ ಸಿಲುಕಿದ್ದಾನೆ" ಎಂಬ ಸುಪ್ರಸಿದ್ಧ ಮಾತುಗಳು 'ದೇವರು ವರ ಕೊಟ್ಟರೂ ಪೂಜಾರಿ ಕೊಡಲಿಲ್ಲ' ಎಂಬ ಮಾತನ್ನು ಹೋಲುತ್ತದೆ. ಮನುಷ್ಯ ಜನ್ಮತಃ ಸ್ವತಂತ್ರನಾದರೂ ಸನ್ನಿವೇಶಗಳಿಗೊಳಗಾಗಿ ಅದನ್ನು ಅನುಭವಿಸಲಾರ. ಇದು ಮನುಷ್ಯನು ಸ್ವಯಂಮಾಡಳಿತಕ್ಕೆ ಪ್ರಯತ್ನಿಸಬೇಕೆಂಬ ವಿಶೇಷಾರ್ಥ ಹೊಂದಿದೆ. ಇದನ್ನು ಹೀಗೆ ಅರ್ಥ ವಿವರಸಬಹುದೇ ಹೊರತು ಇದೇ ಈ ಪದಗಳ ಅರ್ಥವಲ್ಲ. ಇದು ಹೀಗೆಯೇ ಇಷ್ಟೇ ಎಂದು ಖಡಾಖಂಡಿತವಾಗಿ ಹೇಳಲೂ ಅಸಾಧ್ಯ. ಇತರರು ಒಪ್ಪಲು ಅಸಾಧ್ಯ. ಅಂದರೆ ಅರ್ಥ ನಿರ್ಣಯ ಸರ್ವರಿಗೂ ಸಮಾಧಾನ ತರುವುದಿಲ್ಲ. ಅಧಿಕೃತ ದಾಖಲೆಗಳಲ್ಲಿ ಈ ರೀತಿಯ ಕಷ್ಟಗಳಿರುವುದಿಲ್ಲ. ಅಥವಾ ಐತಿಹಾಸಿಕ ಸನ್ನದು (ಛಾರ್ಟರ್) ಗಳ ವ್ಯಾಖ್ಯೆಗಳಿರುವುದಿಲ್ಲ. ಆದರೆ ವ್ಯಕ್ತಿಗಳ ದಾಖಲೆ ಪತ್ರಗಳು, ದಿನಚರಿ, ಸಾಹಿತ್ಯದಲ್ಲಿ ಕವನಗಳಲ್ಲಿ ಅದರ ಕರ್ತೃಗಳು ನಿಜವಾದ ಅರ್ಥವನ್ನೂ ಉದ್ದಿಷ್ಟವಾಗಿಯೋ ಮತ್ಯಾವ ಕಾರಣದಿಂದಲೋ ಬಚ್ಚಿಟ್ಟಿರಬಹುದು ಸೂಚ್ಯವಾಗಿಟ್ಟಿರಬೇಕು. ನಾನಾ ಅರ್ಥ ಬರುವಂತೆ ರಚಿಸಿರಬಹುದು. ಇತಿಹಾಸಕಾರರಲ್ಲಿ ರಮ್ಯತಾವಾದ ಪಂಥ (ರೊಮಾಂಟಿಸಿಸ್ಟ್) ದವರು ತಮ್ಮದೇ ಆದ ಒಂದು ಬರವಣಿಗೆಯ

ಶೈಲಿಯಲ್ಲಿ ಕಟ್ಟುಕಥೆ ಭಾವನಾ ಪ್ರದವಾದ ಇತ್ಯರ್ಥ. ಅನ್ಯೋಕ್ತಿಗಳನ್ನು ಉಪಯೋಗಿಸಿ ನಿಜವಾದ ಅರ್ಥವನ್ನು ಸುಲಭವಾಗಿ ಅರ್ಥವಾಗದ ಹಾಗೆ ನಿರೂಪಿಸಿದರು. ಇದು ಕರ್ತೃವಿಗೆ ಇದರ ಉದ್ದೇಶಗಳಿದ್ದಲು ಮತ್ತು ಆ ಕಾಲದ ಜನ ಅವರ ಅನ್ಯೋಕ್ತಿ. ಭಲಂಕಾರಭರಿತ ಮಾತುಗಳನ್ನು ಗ್ರಹಿಸಬಲ್ಲವರಾಗಿದ್ದರು. ಇಂಥದೇ ಧಾರ್ಮಿಕ ಗ್ರಂಥಗಳಲ್ಲೂ, ಪರಸ್ಪರ ಕಾಗದ ಪತ್ರಗಳಲ್ಲೂ, ಕಾದಂಬರೀ ಮುಂತಾದ ಸಾಹಿತ್ಯ ಪ್ರಕಾರಗಳಲ್ಲೂ ಕಂಡು ಬಂದವು. ಧಾರ್ಮಿಕ ಗ್ರಂಥಗಳಲ್ಲಿ ಉಪಮೆ, ದೃಷ್ಟಾಂತ, ಉಪಕಥೆ, ನೀತಿ ಕಥೆ, ದೃಷ್ಟಾಂತ ರೂಪಕ (ಪ್ಯಾರಬಲ್ಸ್) ಗಳಲ್ಲಿ ಇದನ್ನು ಧಾರಾಳವಾಗಿ ಉಪಯೋಗಿಸಿದರು. ಹೀಗೆ ಅವುಗಳ ವ್ಯಾಖ್ಯೆಯು ಮೂಲಗ್ರಂಥಕ್ಕಿಂತ ಗಾತ್ರವಾದವು ಇವುಗಳ ವಿವರಣೆ ಇಲ್ಲದೆ ಮೂಲವಾದ, ನಿಜವಾದ ಅರ್ಥವನ್ನು ತಿಳಿಯಲು ಅಸಾಧ್ಯವಾಗಿರುತ್ತದೆ.

ಈ ರೀತಿ ಪದಗಳ ಅರ್ಥವನ್ನು ತಿಳಿಯುವುದು ಆಂತರಿಕ ವಿಮರ್ಶೆಯ (ಹರ್ಮಿನ್ಯುಟಿಕ್) ಬಹು ವಿಸ್ತಾರವನ್ನು ನಿಜವಾದ ಅರ್ಥವನ್ನು ತಿಳಿಯಲು ಒಂದು ಸಾಧಾರಣ ನಿಯಮವಿದೆ. ಸಾಹಿತ್ಯದ ಮಾತು ಅರ್ಥವಾಗದ ಹಾಗೆ, ಅಸಂಬಧ ವಕ್ರ, ತದ್ವಿರುದ್ಧವಾಗಿದ್ದರೆ ಅದನ್ನು ವಕ್ರಾರ್ಥವೆಂದು ಸುಲಭವಾಗಿ ಗುರುತಿಸಬಹುದು. ಇದನ್ನು ತೀರ್ಮಾನಿಸಲು ನಾವು ಅದರ ಭಾಷೆಯನ್ನು ಚೆನ್ನಾಗಿ ತಿಳಿದಿರಬೇಕು. ಇಂಥ ವಕ್ರ ವಾಕ್ಯವನ್ನು ಇತರ ವಾಕ್ಯಗಳೊಡನೆ ಹೋಲಿಸಿ ನಿಜವಾದ ಅರ್ಥ ತಿಳಿಯಲು ಸಹಾಯವಾಗುವುದೇ ಎಂದು ಪರ್ಯಾಲೋಚಿಸಬೇಕು. ಹೀಗೆ ನಿಜಾರ್ಥದ ಕಡೆ ಬಂದರೂ ಅದು ಪರಿಪೂರ್ಣ ನಂಬಲರ್ಹವಾದ್ದಲ್ಲವಾದ್ದರಿಂದ ನಾವು ಕಡೇ ತೀರ್ಮಾನಕ್ಕೆ ಬರಬಾರದು. ಆದರೆ ಪ್ರತಿ ಸಂದರ್ಭದಲ್ಲೂ ಅನ್ಯೋಕ್ತಿ ಇರುವುದೆಂದು ಭಾವಿಸಲಾಗದು. ಇದನ್ನು ಹೈಪರ್ ಹರ್ಮಿನ್ಯೂಟಿಕ್ ಎನ್ನುತ್ತಾರೆ. ನಮಗೆ ನಿಜವಾದ ಅರ್ಥ ದೊರಕಿದಾಗ ವಾಸ್ತವಾಂಶಗಳ ವಿಶ್ಲೇಷಣೆ ಮುಕ್ತಾಯಗೊಳ್ಳುತ್ತದೆ. ಇದರಿಂದ ರಚನಾಕಾರನ ಭಾವನೆಗಳು, ಕಲ್ಪನೆಗಳು, ಇವುಗಳಿಂದ ಇತಿಹಾಸಿಕ ವಿಜ್ಞಾನಗಳು, ಇತಿಹಾಸದ ಕಲೆ, ಸಾಹಿತ್ಯ, ವಿಜ್ಞಾನ, ದರ್ಶನಗಳು, ನ್ಯಾಯ ಮುಂತಾದವು ತಿಳಿದು ಬರುತ್ತದೆ.

ಹೀಗೆ ಆಂತರಿಕ ವಿಮರ್ಶೆಯಿಂದ ದಾಖಲೆಗಳ ಸಾಹಿತ್ಯದ ಅರ್ಥ, ನಿಜವಾದ ಅರ್ಥಗಳು ಪ್ರಕಾಶಗೊಳ್ಳುತ್ತವೆ. ಪುರಾತನವಾದ ದಾಖಲೆಗಳಲ್ಲಿ ಈಗ ನಾವು ಮಾತನಾಡುವ ಭಾಷೆಗಳಲ್ಲದೆ, ಕಾಲ ಕಾಲಕ್ಕೆ ನಕಲು ಮಾಡಲ್ಪಟ್ಟಿವೆ. (ಟ್ರಾನ್ಸ್ ಕ್ರೈಬ್) ಅವುಗಳನ್ನು ನಕಲು ಮಾಡಿದವರಲ್ಲಿ ಕೆಲವರು ಪಾಂಡಿತ್ಯ ಪಡೆದವರಿದ್ದಾರೆ. ಕೆಲವರು ಸಂಪೂರ್ಣ ಪಾಂಡಿತ್ಯ ಪಡೆದವರಿಲ್ಲದಿರಬಹುದು. ನಕಲುಗಳನ್ನು ಬೇರೆ ಬೇರೆ ಕಾಲಗಳಲ್ಲಿ ಮಾಡಿರಬಹುದು. ಆಗ ತಪ್ಪುಗಳೂ, ವ್ಯತ್ಯಾಸಗಳೂ ಆಗಿರಬಹುದು. ವಿಮರ್ಶೆಯು ಅದನ್ನು ಸರಿಪಡಿಸುವ ಕರ್ತವ್ಯ ಹೊಂದಿರುತ್ತದೆ. ಆಂತರಿಕ ವಿಮರ್ಶೆಯ ದಾಖಲೆಯ ವಸ್ತು ವಿಶೇಷಗಳು, ಅವುಗಳಲ್ಲಿರುವ ಸಾಧಾರಣ ಅರ್ಥ, ರಚನಾಕಾರನ ಸತ್ಯ ಸಂಧತೆಯನ್ನು ಅವಲಂಬಿಸಿರುತ್ತವೆ. ಮೊದಲಲ್ಲಿ ದೊರಕಿರುವ ಪಠ್ಯವನ್ನು ನಾನಾ ರೀತಿಯಿಂದ ಸೂಕ್ಷ್ಮವಾಗಿ ಪರೀಕ್ಷಿಸಿ, ತತ್ಕಾಲದ ಪದಗಳ ಅರ್ಥವನ್ನು ನಿಶ್ಚಯಿಸಿ, ಕಾಲಗಣನಾ ದೋಷ (ಅನ್ಯಾಕ್ರಾನಿಸಮ್) (ಈಚಿನ ಕಾಲದ ವ್ಯಕ್ತಿ, ನಡವಳಿಕೆ, ಅಭಿಪ್ರಾಯ ಮೊದಲಾದುವನ್ನು ಅದರ ಹಿಂದಿನ ಕಾಲದ ಕಥೆಯಲ್ಲಿ ಸೇರಿಸುವ ದೋಷ-ಉದಾ ಟಿಪ್ಪುವು ಸಿಗರೇಟು ಸೇದುತ್ತಿದ್ದ, ಹೈದರನು ಕಾರಿನಲ್ಲಿ ಹೋದ ಇತ್ಯಾದಿ) ಇವುಗಳನ್ನು ಪತ್ತೆ ಹಚ್ಚಿ, ಗ್ರಂಥಕರ್ತನಲ್ಲಿ ಪಕ್ಷಪಾತ ಪ್ರೇರೇಪಣೆ ಮಾಡುವ ಉದ್ದೇಶ (ಬಯಾಸ್) ಮನಸ್ಸು ಕೆಡಿಸುವ ಉದ್ದೇಶ ಇಂಥ ಇದ್ದುವೇ ಮತ್ತು ಅವನ ಶೀಲ ಸ್ವಭಾವಗಳನ್ನೂ ಪತ್ತೆ ಮಾಡಿ ಅವನ ಗ್ರಂಥದ ಮೌಲ್ಯ ಮಾಪನ ಮಾಡಬೇಕಾಗುತ್ತದೆ. ಹೀಗೆ ವಾಸ್ತವಾಂಶಗಳ ಸಂಕಲನ ಅರ್ಥ ವಿವರಣೆಯಾಗಿ ನಿಶ್ಚಿಯತೆಯ ಹೇಳಿಕೆಯ ಸತ್ಯಾಂಶಕ್ಕೆ ಸಹಾಯವಾಗುತ್ತವೆ.

ವಿಮರ್ಶೆಯು ಸುಲಭ ಸಾಧ್ಯದ ಕೆಲಸವಲ್ಲ. ಅದು ಇನ್ನೊಬ್ಬರಿಂದ ಕಲಿಸಲಾಗುವುದಿಲ್ಲ. ಅದು ವ್ಯಕ್ತಿಗೆ ಬರುವ ಒಂದು ಕಲೆ, ಒಂದು ವರ, ಮನಸ್ಸಿನಲ್ಲಿ ಉದ್ಭವವಾಗುವ ಭಾವನೆ, ತಾನಾಗಿಯೇ ಹೊರಟು ಬರುವ ಸಿದ್ಧಿ ಬುದ್ಧಿ, ಇದರಿಂದ ಇದನ್ನು ಯಾವ ನಿಯಮಗಳಿಗೆ ಬದ್ಧಪಡಿಸಲು ಸಾಧ್ಯವಿಲ್ಲ. ಸಂಶೋಧಕನು ಪಠ್ಯದ ಪ್ರತಿ ಸಾಲನ್ನು ಶ್ರದ್ಧೆಯಿಂದ ಓದಿ ತಿಳಿಯಬೇಕು. ಯಾವ ಒಂದು ವಿಷಯವನ್ನು ನಿರೂಪಣೆ ಮಾಡುವಾಗ ಅದರಲ್ಲಿ ಅನಗತ್ಯವಾದ, ಅನಾವಶ್ಯಕವಾದ ವಿಷಯಗಳನ್ನು ಖಂಡಿತವಾಗಿ ಸೇರಿಸಲೇಬಾರದು. ಇಂಥವರಿಂದ ನಮ್ಮ ವಿಚಾರ ಧೋರಣೆಯನ್ನು ಹಿಂದೆ ಆದ ವಿಷಯಗಳೊಡನೆ ಸೇರಿಸುವುದರಿಂದ ಕಾಲಗಣನಾ ದೋಷ (ಅನ್ಯಾಕ್ರಾನಿಸಮ್) ಉಂಟಾಗುತ್ತದೆ. ಧಾರ್ಮಿಕ ಪಠ್ಯಗಳನ್ನು (ಟೆಕ್ಸ್, ಪೂಜ್ಯವೆಂದು ತಿಳಿಯಲ್ಪಟ್ಟ ಸಂಪ್ರದಾಯಗಳನ್ನು ಅಲೌಕಿಕ ಸಾಧನೆಗಳನ್ನು, ನಂಬಿಕೆಗಳನ್ನು ಅಲಂಕಾರಿಕ ಸಾಹಿತ್ಯಗಳನ್ನು, ಮೂಲ ಅರ್ಥ ವಿವರಣೆ ಕೊಡುವುದು ಕಷ್ಟಸಾಧ್ಯವಾದ ವಿಷಯ, ದಂತಕಥೆ, ಪುರಾಣಗಳ ಅರ್ಥವು ಅದನ್ನು ರಚಿಸಿದವರ ಅರ್ಥವನ್ನೆ ಅವಲಂಬಿಸಿರುತ್ತದೆ. ಮೂಲವು ಛಾಯೆಯೂ ಒಂದಾಗಿರುತ್ತವೆ. ಪುರಾಣಗಳನ್ನು

ಅರಿಯಲು ಅವುಗಳ ಸಂಕೇತಗಳ ಪರಿಚಯವೂ ನಮಗೆ ಅವಶ್ಯಕ. ಅದರ ಜೊತೆ ಅವುಗಳ ಕಲಾ ವಿನ್ಯಾಸ ಅಕ್ಷರ ವಿನ್ಯಾಸಗಳನ್ನು ತಿಳಿಯಬೇಕು. (ನಾವು ಸಾಧಾರಣ ಕಾಣುವ ಓಂ ಎಂಬ ಅಕ್ಷರ ಕ್ರಾಸ್ ಗುರುತುಗಳಲ್ಲಿ ಎಷ್ಟೋ ಅರ್ಥಗಳಿವೆ)ಇವುಗಳಲ್ಲದೆ ಪತ್ರದ ಕರ್ತವಿನ ಶೈಲಿ ಮತ್ತು ಕಲ್ಪನೆಗಳನ್ನು ಗಮನದಲ್ಲಿಟ್ಟಿರಬೇಕು. ಇದಲ್ಲದೆ ಅದು ಯಾವ ಸಂದರ್ಭದಲ್ಲಿ ಉಂಟಾಯಿತೆಂದು ತಿಳಿಯುವುದು ಅತಿ ಮುಖ್ಯವಾದದ್ದು.

ಕೊನೆಯದಾಗಿ ಐತಿಹಾಸಿಕ ಪುನರ್ರಚನೆಯಲ್ಲಿ ಶಿಸ್ತಿನ ಕ್ರಮವಿರಬೇಕು. ತಪ್ಪು ಹೆಜ್ಜೆ ಇಡುವ ಅನೇಕ ಸಂದರ್ಭಗಳು ಉಂಟಾಗುತ್ತವೆ. ಐತಿಹಾಸಿಕ ಪದ್ಧತಿಯು ಈ ತಪ್ಪುಗಳನ್ನು ತಪ್ಪಿಸಲು ತಿಳುವಳಿಕೆ ನೀಡುತ್ತದೆ. ಅದರಿಂದ ಈ ಪದ್ಧತಿಯಲ್ಲಿ ನಕರಾತ್ಮಕ ಮೌಲ್ಯಮಾಪನವೂ ಅಗತ್ಯವಾಗಿರುತ್ತದೆ. ಸಂಶೋಧಕನಿಗೆ ತಿರುಚುಮುರುಚಾದ ಮತ್ತು ಸ್ವಾರಸ್ಯವಾದ ವಿಷಯಗಳು ಎದುರಾಗುತ್ತವೆ. ಅನ್ವೇಷಕನಿಗೆ ಸಂಶಯವೇ ಪ್ರಥಮ ಹೆಜ್ಜೆ, ಇದೇ ನಿಯಮಬದ್ಧವಾದ ಸಂದೇಹ. ಪ್ರತಿಯೊಂದನ್ನು ಅನುಮಾನದಿಂದಲೇ ಕಂಡು ಮುಂದುವರಿಯಬೇಕು. ಸಂಪೂರ್ಣ ಸತ್ಯಾಂಶ ಶೋಧನೆ, ನಕರಾತ್ಮಕ ವಿವರಣೆಗಳಲ್ಲಿ ಸತ್ಯ ಶೋಧಕನಿಗೆ ತಾಳ್ಮೆಯ ವಿಮರ್ಶೆಯಿಂದ ನಿಜಸ್ವರೂಪ ತಿಳಿಯುತ್ತದೆ.

## 7.4 ಘಟಕದ ಸಾರಾಂಶ

ಈ ಘಟಕ 7ರಲ್ಲಿ ಕೆಳಗಿನ ವಿಷಯಗಳನ್ನು ಅರಿತೆವು.

* ಇತಿಹಾಸ ಸಂಶೋಧನೆಯಲ್ಲಿ ವಿಮರ್ಶೆಯ ಪ್ರಾಮುಖ್ಯತೆ ಹಾಗೂ ಅವುಗಳ ಅಳವಡಿಕೆ
* ವಿಮರ್ಶೆಯ ಪ್ರಥಮ ವಿಭಾಗವಾದ ಬಾಹ್ಯ ವಿಮರ್ಶೆಯಲ್ಲಿ, ಗ್ರಂಥ ಕರ್ತೃ, ಕಾಲ ಮತ್ತು ಪ್ರದೇಶ ಇವುಗಳ ಬಗ್ಗೆ
* ವಿಮರ್ಶೆಯ ಎರಡನೆಯ ಪ್ರಮುಖ ವಿಭಾಗದಿಂದ ಆಂತರಿಕ ವಿಮರ್ಶೆಯಲ್ಲಿ ಗ್ರಂಥಕರ್ತೃ ತಿಳಿಸಿರುವ ವಿಷಯಗಳು ಸರಿಯಾಗಿಯೋ, ಸತ್ಯವೋ, ಅಥವಾ ಇಲ್ಲವೋ ಎಂಬುದನ್ನು ಪರಿಶೀಲಿಸಿದೆವು.

## 7.5 ಸ್ವಯಂ ಪರಿಶೀಲನಾ ಪ್ರಶ್ನೆಗಳು

1. ಇತಿಹಾಸ ಸಂಶೋಧನೆಯಲ್ಲಿ ಬಾಹ್ಯ ವಿಮರ್ಶೆಯ ಪ್ರಮುಖ ಕಾರ್ಯವನ್ನು ತಿಳಿಸಿ.
2. ಇತಿಹಾಸ ಸಂಶೋಧನೆಯಲ್ಲಿ ಆಂತರಿಕ ವಿಮರ್ಶೆಯ ಪ್ರಾಮುಖ್ಯತೆಯನ್ನು ತಿಳಿಸಿ.

## 7.6 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. Sheik Ali .B. : History; Its Theory and Method
2. ವೆಂಕಟರತ್ನಂ ಮತ್ತು ಪದ್ಮ : ಇತಿಹಾಸ ಸಂಶೋಧನಾ ಮಾರ್ಗ
3. ಚೇತನ ಪಬ್ಲಿಕೇಷನ್ : ಇತಿಹಾಸ ಸಂಶೋಧನಾ ಮಾರ್ಗ.

# ಘಟಕ - 8 ನಕಾರಾತ್ಮಕ ವಿವರಣಾ ವಿಮರ್ಶೆ

*ವಿಷಯಾನುಕ್ರಮಣಿಕೆ*


8.0 ಉದ್ದೇಶಗಳು

8.1 ಪೀಠಿಕೆ

8.2 ನಕಾರಾತ್ಮಕ ವಿವರಣಾ ವಿಮರ್ಶೆ

8.3 ಘಟಕದ ಸಾರಾಂಶ

8.4 ಸ್ವಯಂ ಪರಿಶೀಲನಾ ಪ್ರಶ್ನೆಗಳು

8.5 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 8.0 ಉದ್ದೇಶಗಳು

ಘಟಕ 8 ರ ಅಧ್ಯಯನದಿಂದ ನಾವು ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

* ಇತಿಹಾಸ ಸಂಶೋಧನೆಯಲ್ಲಿ ಆಂತರಿಕ ವಿಮರ್ಶೆಯನ್ನು ನಡೆಸುವಾಗ ಹಲವು ವಿವರಣಾ ವಿಮರ್ಶೆಗಳನ್ನು ಕಾಣುತ್ತೇವೆ.
* ಆಂತರಿಕ ವಿಮರ್ಶೆಯಲ್ಲಿ ಸಕಾರಾತ್ಮಕ ವಿವರಣಾ ವಿಮರ್ಶೆ ಮತ್ತು ನಕಾರಾತ್ಮಕ ವಿವರಣಾ ವಿಮರ್ಶೆಯನ್ನು ವಿವರಿಸುತ್ತೇವೆ.
* ನಕಾರಾತ್ಮಕ ವಿವರಣಾ ವಿಮರ್ಶೆಯಲ್ಲಿ ಸಂಶೋಧಕನು ಗ್ರಂಥಕರ್ತೃ ಯಾವ ಯಾವ ವಿಷಯಗಳಿಗೋಸ್ಕರ ಈ ರೀತಿಯ ವಿಮರ್ಶೆಯ ತಪ್ಪುಗಳನ್ನು ಮಾಡುತಾನೆಂಬುದನ್ನು ತಿಳಿಯುತ್ತೇವೆ.

## 8.1 ಪೀಠಿಕೆ

ಇತಿಹಾಸ ಸಂಶೋಧನೆಯಲ್ಲಿ ವಿಮರ್ಶೆಯು ಬಹಳ ಪ್ರಾಮುಖ್ಯತೆಯನ್ನು ಹೊಂದಿದ್ದು, ಸಂಶೋಧನೆಯಲ್ಲಿ ದೊರಕುವ ಆಧಾರಗಳನ್ನು ವಿಮರ್ಶಾತ್ಮಕವಾಗಿ ಅಧ್ಯಯನ ನಡೆಸಿ ಅವುಗಳ ಮಾಹಿತಿಗಳನ್ನು ತೆಗೆದುಕೊಳ್ಳಬೇಕು. ವಿಮರ್ಶೆಯಲ್ಲಿ ಕಂಡುಬರುವ ನಕರಾತ್ಮಕ ವಿವರಣಾ ವಿಮರ್ಶೆಯಲ್ಲಿ ಗ್ರಂಥ ಕರ್ತೃ ಕೆಲವಾರು ಕಾರಣಗಳಿಂದ, ಅಥವಾ ಕೆಲವಾರು ದೌರ್ಬಲ್ಯಗಳಿಂದ ನಕಾರಾತ್ಮಕವಾಗಿ ವಿವರಣೆಯನ್ನು ನೀಡುವ. ಈ ವಿಷಯವನ್ನು ಸವಿಸ್ತಾರವಾಗಿ ಈ ಘಟಕದಲ್ಲಿ ಅಧ್ಯಯನ ನಡೆಸುತ್ತೇವೆ.

## 8.2 ನಕಾರಾತ್ಮಕ ವಿವರಣಾ ವಿಮರ್ಶೆ

ಇತಿಹಾಸ ರಚನಾ ವಿಭಾಗದಲ್ಲಿ ನಿಷೇಧಾತ್ಮಕ ವಿವರಣಾ ವಿಮರ್ಶೆಯು ಮೂರನೆಯ ಹಂತವಾಗಿದೆ. ಇದರ ಮುಖ್ಯ ಉದ್ದೇಶ ದಾಖಲೆಗಳಿರುವ ಸತ್ಯವನ್ನು ಹೊರಗೆಡುವುದೇ ಆಗಿದೆ. ಇತರ ವಿಮರ್ಶಾ ಮಾರ್ಗಗಳಿಂದ ದಾಖಲೆಯ (ಲೇಖನದ) ರಚನಾಕಾರನ ಭಾವನೆಗಳನ್ನು ತಿಳಿಯಬಹುದಾಗಿದೆ. ಅವು ಅವನು ಏನು ಹೇಳಲು ಬಯಸಿದ್ದಾನೆಂದು ತಿಳಿಸುತ್ತವೆ. ಆದರೆ ಅವನ ವಿಚಾರಗಳನ್ನು ಮಾಡುವಾಗ ಇದ್ದ ಬಾಹ್ಯ ವಿಚಾರಗಳನ್ನು ತಿಳಿಸಲಾರವು. ಹೀಗೆ ಆ ರಚನಾಕಾರನು ಹೇಗೆ ಹೇಳಬೇಕೆಂದು ಬಯಸಿದ್ದನೋ ಅದನ್ನು ತಿಳಿಸುವುದೇ ಹೊರತು ಅವನು ಏನು ಕಂಡ, ಮತ್ತು ನಿಜವಾಗಿ ನಡೆದ ಘಟನೆಯನ್ನು ತಿಳಿಸುವುದಿಲ್ಲ. ಇಲ್ಲಿ ಅನೇಕ ವಿಷಯಗಳ ವಿಚಾರ ಮಾಡಬೇಕು. ಮೊದಲನೆಯದಾಗಿ ಆ ರಚನಾಕಾರನು ನಡೆದ ವಿಷಯಗಳನ್ನು ಹೇಗೆ ತಿಳಿಸಬೇಕೆಂದು ಇಷ್ಟಪಟ್ಟಿದ್ದ. ಎರಡನೆಯದಾಗಿ ರಚನಾಕಾರನು ಯಾವುದನ್ನು ನಡೆಯಿತೆಂದು ನಂಬಿದನೋ ಅದು ವಾಸ್ತವವಾದ ಘಟನೆಯಿಂದ ಭಿನ್ನವಾಗಿರಬಹುದು ಮತ್ತು ಮೂರನೆಯದಾಗಿ ರಚನಾಕಾರನು ತಿಳಿಸಿರುವುದು ಮತ್ತು ಯಾವುದನ್ನು ನಂಬಿದ್ದನೋ ಆ ಎರಡೂ ಸತ್ಯವಾಗಿಲ್ಲದಿರಬಹುದು. ಏಕೆಂದರೆ ಅವು ಎರಡು ಸಂಬಂಧಪಟ್ಟ ವಿಷಯಗಳೇ ಆಗಿಲ್ಲದಿರಬಹುದು. ಮತ್ತಷ್ಟು ವಿಸ್ತರಿಸಿ ಹೇಳಬೇಕೆಂದರೆ ರಚನಾಕಾರನು ಹೇಳಿರುವುದು. ಅವನು ಏನನ್ನು ನಂಬಿದ್ದನೋ ಅದಲ್ಲ; ಅವನು ಸುಳ್ಳೇ ಹೇಳಿರಬಹುದು ಅವನು ನಂಬಿರುವುದು ನಡೆಯದಿದ್ದಿರಬಹುದು, ಏಕೆಂದರೆ ಅವನು ತಪ್ಪು ತಿಳಿದಿರಬಹುದು. ಆದರೆ ಸಾಧಾರಣವಾಗಿ ಎಲ್ಲರೂ ದಾಖಲೆಯಲ್ಲಿ ಬಂದಿರುವ ಎಲ್ಲ ವಿಷಯಗಳನ್ನು ನಂಬುವುದು; ಅದು ಲೇಖಕನು ಸುಳ್ಳೇ ಹೇಳಿರಲಾರನೆಂದೂ, ಮೋಸ ಹೋಗಿರಲಾರನೆಂದೂ, ಭಾವನೆ ಹೊಂದಿರುವುದೇ ಆಗಿದೆ. ಹೀಗೆ ಅದು ಸತ್ಯದಿಂದ ಬಹಳ ದೂರವಾಗಿ, ತಪ್ಪನೇ ಒಪ್ಪುವುದು ತೀರ ಸಾಧಾರಣವಾಗಿದೆ.

ನಿಷೇಧಾತ್ಮಕ ವಿವರಣಾ ವಿಮರ್ಶೆಯಲ್ಲಿ ಅಸತ್ಯದ ಕಗ್ಗಂಟನ್ನು ಬಿಡಿಸಬೇಕಾಗಿದೆ. ಇತಿಹಾಸದಲ್ಲೂ ವೈಜ್ಞಾನಿಕ ಸಂಶೋಧನೆಗಳ ಪದ್ಧತಿಯಿದ್ದಂತೆ ಕ್ರಮಬದ್ಧವಾದ ಸಂದೇಹವೇ ಮೊದಲ ಹೆಜ್ಜೆ. ಇತಿಹಾಸಕಾರನು ಪ್ರಥಮದಲ್ಲಿ ಪ್ರತಿ ಹೇಳಿಕೆಯನ್ನು ಸಂಶಯದಿಂದ ನೋಡಿ. ನಂತರ ಕೂಲಂಕುಷವಾಗಿ ನೋಡಿ ಯೋಗ್ಯ ಕಾರಣಗಳಿದ್ದಾಗ ಮಾತ್ರ ಒಪ್ಪಬೇಕು. ವಿಷಯದ ಬಗ್ಗೆ ತದ್ವಿರುದ್ಧ ಉಕ್ತಿಗಳು ಬರುವವರೆಗೆ ಸಂದೇಹ ಪಡೆದಿರಬಾರದು. ಹಿಂದೆ ನಡೆದ ಘಟನೆಗಳ ಬಗ್ಗೆ ಬಂದ ಎಲ್ಲ ವರದಿಗಳನ್ನು ವಿಶ್ವಾಸನೀಯವೆಂದು ನಂಬಬಾರದು. ಅಂದರೆ ಘಟನೆ ನಡೆದದ್ದು ನಿಜ ಅದರ ವಿವರಗಳೆಲ್ಲವೂ ತಪ್ಪಿನಿಂದ ಹೊರತಗಾವಿ ಎಂದು ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಯಾವುದೇ ದಾಖಲೆ ಕೈ ಸೇರಿದ ಕೂಡಲೇ ಅದನ್ನು ನಂಬಿ ಆತುರದ ಸ್ವಭಾವವನ್ನು ತಡೆಹಿಡಿಯಬೇಕು; ಯಾವುದೇ

ದಾಖಲೆಯಲ್ಲಿ ಸತ್ಯವೂ ಇರಬಹುದು. ಅಸತ್ಯವೂ ಇರಬಹುದು. ಆದ್ದರಿಂದ ಪ್ರತಿ ವಿಷಯವನ್ನು ಬೇರೆ ಬೇರೆಯಾಗಿಯೇ ವಿಮರ್ಶಿಸಬೇಕು. ವಿಶೇಷ ಕಾರಣಗಳಿದ್ದಾಗ ಮಾತ್ರ ಅದನ್ನು ನಂಬಬೇಕು. ಎರಡನೆಯದಾಗಿ ಇಡೀ ದಾಖಲೆಯನ್ನು ಒಂದೇ ವಿಮರ್ಶೆಗೆ ಒಳಪಡಿಸಕೂಡದು. ಆದರ ಬೇರೆ ಬೇರೆ ಭಾಗಗಳನ್ನು ಬೇರೆ ಬೇರೆಯಾಗಿಯೇ ವಿಚ್ಛೇಧಿಸಿ, ಕೆಲವು ಸಂದರ್ಭಗಳಲ್ಲಿ ವಾಕ್ಯ, ಮತ್ತು ವಾಕ್ಯದ ನಾನಾ ಭಾಗಗಳನ್ನೂ ಪರೀಕ್ಷಿಸಿ ವಿಮರ್ಶೆಗೆ ಒಳಪಡಿಸಬೇಕು. ಹೀಗೆ ವಿಮರ್ಶೆ ಮತ್ತು ವಿಚ್ಛೇದನೆ ಏಕ ಕಾಲಕ್ಕೆ ಆಗುತ್ತದೆ. ಇದರಿಂದ ವಿಮರ್ಶೆ ಎಂದರೆ ಅಸಂಖ್ಯಾತ ಕಾರ್ಯಗಳನ್ನು ನಡೆಸುವುದಾಗಿದೆ.

ಒಂದು ಹೇಳಿಕೆಯನ್ನು ಬರಹಕ್ಕಿಳಿಸಿದವನ ಮನಸ್ಸಿನ ನಾನಾ ಕ್ರಿಯೆಗಳನ್ನು ನಾವು ತಿಳಿಯಬೇಕು. ಇದನ್ನು ದೈಹಿಕವಾಗಿ ತಿಳಿಯಲು ನಮಗೆ ಸಾಧ್ಯವಿಲ್ಲ. ಆದ್ದರಿಂದ ವಿಮರ್ಶೆಯು ಅಪ್ರತ್ಯಕ್ಷ ಮತ್ತು ತಾತ್ಕಾಲಿಕ ಪರಿಹಾರದ ಘಟ್ಟದಿಂದ ಮುಂದೆ ಹರಿಯಲು ಆಗುವುದಿಲ್ಲ. ನಾವು "ವಿಶ್ವಾಸನೀಯ" ಮತ್ತು ಸತ್ಯದಛಾಯೆ ಕೊಡುವ ಹೇಳಿಕೆಯನ್ನು ನಂಬಲಿಚ್ಛಿಸುತ್ತೇವೆ. ಆದರೆ ಇದೊಂದು ಮೋಸದ ಛಾಯೆ ಅಷ್ಟೆ! ಬುದ್ಧಿವಂತಿಕೆ, ಶಕ್ತಿ ಉಪಾಯ ಮಾರ್ಗಗಳಾಗಬಲ್ಲವೆ ಹೊರತು ನೈಜಸತ್ಯವಲ್ಲ. ವಿಪುಲವಾಗಿ ಹೇಳಿದ್ದಾದ್ದರಿಂದ ಅದು ನಿಜ ಎಂಬ ಭ್ರಮೆ ಉಂಟಾಗಬಾರದು. ಇಂಥಹ ಪ್ರಯತ್ನಗಳು ಆ ಘಟನೆಗಳು ನಿಜವಾದದ್ದೆಂದು ನಂಬಿಸಲು ಮಾಡಿದ ಪ್ರಯತ್ನಗಳೆಂದು ಸಂದೇಹ ಪಡಬೇಕು. ನಮಗೆ ಮುಖ್ಯವಾಗಿ ಬೇಕಾದ್ದು ಆ ದಾಖಲೆಯ ಹಿಂದೆ. ಅದನ್ನು ತಯಾರು ಮಾಡಿದವನ ಮನಸ್ಸಿನ ಮನೋ ಪ್ರವೃತ್ತಿ ಮತ್ತು ಅವನ ಮನೋ ಪ್ರವೃತ್ತಿಗಳನ್ನು ಸರಿಯಾಗಿ ನಿರ್ವಹಿಸುತ್ತಿದ್ದಾನೆಯೇ ಇಲ್ಲವೇ ಎಂಬುದು, ಒಂದು ವಿಷಯವನ್ನು ದಾಖಲಿಸಿದವನ ಸ್ವಭಾವ, ಭಾವನೆಗಳು, ಅವನ ವೈಯಕ್ತಿಕ ಸಂದರ್ಭ, ಅದನ್ನು ಬರೆದ ಸಂದರ್ಭಗಳನ್ನು ತಿಳಿಯಬೇಕು. ರಚನಾಕಾರನ ಬಗ್ಗೆ ತಿಳಿಯಲಾಗದ್ದನ್ನೂ ಸಾಧಾರಣವಾಗಿ ಮನುಷ್ಯನ ಬುದ್ಧಿ ಮತ್ತು ಯೋಚನೆಗಳು ಕೆಲಸ ಮಾಡುವ ರೀತಿಯಿಂದ ಪತ್ತೆ ಹಚ್ಚಬೇಕು. ಇದರಲ್ಲಿ ಸಾಧಾರಣವಾಗಿ ಮನುಷ್ಯರು ವಿಷಯಗಳನ್ನು ಬದಲಾಯಿಸುವ ಅಥವಾ ತಿರುಗಿ ಹೇಳುವ ಸಂದರ್ಭಗಳನ್ನು ತಿಳಿಯಬೇಕು. ಇದರಿಂದ ವಿಷಯವನ್ನು ಸಂದೇಹಗಳಿಂದ ವಿಮರ್ಶಿಸಿ ಸತ್ಯ ನಿರ್ಧರಿಸಲು ಸಾಧ್ಯವಾಗುತ್ತದೆ. ಇವುಗಳಲ್ಲದೆ ವಿಶೇಷ ಸಂದರ್ಭದ ವಿಷಯಗಳನ್ನು ದಾಖಲಿಸಿದ ಬಗ್ಗೆ ವಿಶೇಷ ಉದ್ದೇಶಗಳಿದ್ದವೇ ಎಂಬುದನ್ನು ನಿರ್ಧರಿಸಿ ಅನುಮಾನ ಪಡುವುದಾಗಲೀ ಒಪ್ಪುವುದಾಗಲೀ ನಿಶ್ಚಯ ಮಾಡಿಕೊಳ್ಳಬಹುದು.

ನಕರಾತ್ಮಕ ವಿಮರ್ಶೆಯಲ್ಲಿ ಎರಡು ಸಮಸ್ಯೆಗಳು ಅಡಕವಾಗಿವೆ. ಒಂದನೆಯದು ದಾಖಲೆಗಾರನ ವಿಷಯದ ಬಗ್ಗೆ ಪರೀಕ್ಷೆ ರಚನಾಕಾರನು ವಿಷಯದಲ್ಲಿ ನಂಬಿಕೆ, ವಿಶ್ವಾಸ, ಶ್ರದ್ಧೆ ಉಳ್ಳವನಾಗಿದ್ದರೂ ನಿರೂಪಣೆಯಲ್ಲಿ ಸತ್ಯವಂತನಾಗಿರಲಾರನು. ಅವನ ಹೇಳಿಕೆಯ ಯಥಾರ್ಥವೆಂದು ತೋರಿದರೂ ಅವನು ತಪ್ಪನ್ನು ಗ್ರಹಿಸಿ ಆ ನಿರ್ಧಾರಕ್ಕೆ ಬಂದಿರಬಹುದು ಈ ಪ್ರಶ್ನೆಗಳು:

1. ಗ್ರಂಥಕರ್ತೃನು ಸ್ವಂತ ಲಾಭಕ್ಕಾಗಿ ಓದುಗರನ್ನು ಮೋಸಗೊಳಿಸುತ್ತಾನೆ. ಅಧಿಕೃತ ವರದಿಗಾರನು ಆಡಳಿತಗಾರನ ಎಲ್ಲ ಕಾರ್ಯಗಳನ್ನು ಮೆಚ್ಚಿ ಬರೆಯುತ್ತಾನೆ. ಇಲ್ಲಿ ವಿವೇಚನೆಗಾಗಲೀ, ಸತ್ಯಕ್ಕಾಗಲಿ ಎಳ್ಳಷ್ಟು ಬೆಲೆಯಿಲ್ಲ, ಮತ್ತೊಂದು ರೀತಿಯ ವರದಿಗಾರರಾದ ಚರಿತ್ರೆಯಲ್ಲಿ ಮಧ್ಯಕಾಲದ ಅಧಿಕೃತ ಚರಿತ್ರಕಾರರು (ಮಿಡಿವಲ್ ಕ್ರಾನಿಕಲರ್ಸ್) ರಾಜನ ಆಸ್ಥಾನದಲ್ಲಿದ್ದು, ಅವನ ಉಪ್ಪುಂಡು, ಅವನ ಆಜ್ಞೆಯಂತೆ ಇತಿಹಾಸ ರಚಿಸಿದ್ದರಿಂದ ಅದರಲ್ಲಿ ಹೊಗಳಿಕೆ, ಉತ್ಪ್ರೇಕ್ಷೆ, ಕೆಟ್ಟದ್ದನ್ನು ಮರೆಮಾಚುವ ಸೋಲನ್ನು ಮುಚ್ಚಿಡುವ ಸ್ವಭಾವಗಳೇ ವಿಪುಲವಾಗಿದ್ದವು. ಆಸ್ಥಾನವನ್ನು ಮೆಚ್ಚಿಸದಿದ್ದರೆ ಶಿಕ್ಷೆ, ಅನ್ನಕ್ಕೆ ಕಲ್ಲು ಮುಂತಾದ ಭಯವಿದ್ದದ್ದು ಸಹಜವೆ. ಇಲ್ಲಿ ನಮ್ಮ ವಿಚಾರಣಾ ವಿಮರ್ಶೆಯಲ್ಲಿ ರಚನಾಕಾರನ ಸಾಧಾರಣಾ ಉದ್ದಿಶ್ಯ ಮತ್ತು ಸಂದರ್ಭೋಚಿತ ಗುರಿಯನ್ನು ತಿಳಿಯಬೇಕು. ಇಲ್ಲಿ ರಚನಾಕಾರನು ಸ್ವಾರ್ಥಕ್ಕಾಗಿ ಸತ್ಯವನ್ನು ತಿಳಿದೂ ಅಸತ್ಯವನ್ನಾಗಿಸಿದ್ದಾನೆ.

2. ಗ್ರಂಥಕರ್ತೃನು ಅನೇಕ ಒತ್ತಾಯಗಳ ಸಂದರ್ಭಗಳಿಗನುಸಾರವಾಗಿ, ಸತ್ಯವನ್ನು ತ್ಯಜಿಸಬೇಕಾಗಿರುತ್ತದೆ. ಯಾವುದೋ ನಿಯಮ, ಸಂಪ್ರದಾಯ, ಸಾಮಾಜಿಕ ದಾಕ್ಷಿಣ್ಯ, ಅನೂಚಾನವಾಗಿ ಬಂದ ಪದ್ಧತಿಗಳ ಒತ್ತಡಕ್ಕೆ ಒಳಗಾಗಿ ತನ್ನ ಇಚ್ಛಾನುಸಾರ ನಡೆಯಲಾರದವನಾಗಿ ಸಮಾಜದ ಬಹಿಷ್ಕಾರಕ್ಕೆ ಬೆದರಿ, ದಾಖಲೆ ತಯಾರಿಸುತ್ತಾನೆ. ಹಿಂದಿನ ದುಷ್ಟ ಸಂಪ್ರದಾಯಗಳಾದ ಸತಿ ವರದಕ್ಷಿಣಾ ದೌರ್ಜನ್ಯ, ಜಾತಿ ವ್ಯತ್ಯಾಸಗಳು ಸರಿಯಲ್ಲವೆಂದು ಮನಸ್ಸಿಗೆ ಬಂದಿದ್ದರೂ ಸಮಾಜ ದಾಕ್ಷಿಣ್ಯಕ್ಕೆ ಒಳಗಾಗಿ, ನಿಜ ಹೇಳಲಾರದ ಪೇಚಾಟ ಸ್ಥಿತಿಯಲ್ಲಿದ್ದರು. ಅವರು ಹೇಳಿದ ವಿಷಯಗಳು, ಒಪ್ಪಿದ ನಂಬುಗೆಗಳು ಅವರ ಮನಸ್ಸಿಗೆ ವಿರುದ್ಧವಾಗಿದ್ದವು.

3. ಗ್ರಂಥಕರ್ತೃನು ಕರುಣಾಭಾವದಿಂದಲೋ, ದ್ವೇಷಭಾವದಿಂದಲೋ ಘಟನೆಗಳನ್ನು ಅಥವಾ ವ್ಯಕ್ತಿಗಳನ್ನು ನೈಜಸ್ಥಿತಿಯಿಂದ ಬಹು ವ್ಯತ್ಯಾಸವಾಗುವಂತೆ ಕಾಣಿಸುತ್ತಾನೆ. ಇದು ಅವನ ಮನೋದೌರ್ಬಲ್ಯ ಅಥವಾ ವಿಕಲ್ಪ. ಟಿಪ್ಪೂವನ್ನು ಮೆಚ್ಚುವವರು ಅವನಲ್ಲಿ ಯಾವ ಕೊರತೆಯನ್ನೂ ಕಾಣಲಾರರು; ಅವನನ್ನು ದ್ವೇಷಿಸುವವರು ಇಲ್ಲದ ತಪ್ಪುಗಳನ್ನು ಹೊರಿಸುತ್ತಾರೆ. ಆದರೆ ಇತಿಹಾಸ, ವ್ಯಕ್ತಿ ವಿಮರ್ಶಕನು ಈ ನ್ಯೂನತೆಗಳನ್ನು ಗಮನಿಸುತ್ತಾನೆ.

4. ಗ್ರಂಥಕರ್ತೃನು ಇತರರಿಂದ ಅಥವಾ ಸಮೂಹದಿಂದ ಉತ್ತೇಜಿಸಲ್ಪಟ್ಟು ಆತ್ಮ ಗೌರವಕ್ಕಾಗಿಯೋ ಗುಂಪಿನ ಹೆಚ್ಚಳಕ್ಕಾಗಿಯೋ ಬರೆದಿರುತ್ತಾನೆ. ಅನೇಕ ನಾಯಕರ (ಹೀರೋ)ಗಳ, ಮತಾನುಯಾಯಿಗಳ, ಅನುಯಾಯಿಗಳು ಇಂಥ ತಪ್ಪು ಧಾಂದಲೆಗಳಿಗೆ ಕಾರಣರಾಗಿರುತ್ತಾರೆ. ಇಂಥವರು ಯಾರಾದರೂ ಬಹಳ ಶ್ರೇಷ್ಠರೆಂದು ಹೇಳಿದರೆ ನಾವು ಅದನ್ನು ಸೂಕ್ಷ್ಮವಾಗಿ ಗಮನಿಸಬೇಕು. ಒಬ್ಬ ರಚನಾಕಾರನು ತನ್ನ ಅವಗುಣಗಳನ್ನು ಹೇಳಿಕೊಂಡಿದ್ದರೆ, ಅದಿಲ್ಲದೆ ಅವನು ಅದನ್ನು ಹೇಳಿರಲಾರನೆಂದು ತಿಳಿಯಬೇಕು. ಆದರೆ ಗರ್ವವು ಅವನ ಜವಾಬ್ದಾರಿಗಳನ್ನು ಹೊರಿಸಿ ಒಳ್ಳೆಯ ಕೆಲಸಕ್ಕೆ ಪ್ರೇರೇಪಿಸಬಹುದು.

5. ಗ್ರಂಥಕರ್ತೃನು ಸಾರ್ವಜನಿಕರನ್ನು ಸಂತೋಷಗೊಳಿಸಲು ಅಥವಾ ಭಯಂಕರ ಚಿತ್ರಣಗಳನ್ನು ಕಡಿಮೆ ಮಾಡಲು ಯತ್ನಿಸುತ್ತಾನೆ. ಇಂಥವನು ನೈತಿಕ ಜವಾಬ್ದಾರಿಯನ್ನು ಹೊತ್ತು ನಡೆದ ಇತಿಹಾಸ ಘಟನೆಗಳನ್ನು ಉದ್ದೇಶ ಪೂರ್ವಕವಾಗಿ ತಿರುಚು ಮುರುಚು ಮಾಡುತ್ತಾನೆ. ತನ್ನ ಗುಣ, ಗುಂಪು ಬಣಗಳಲ್ಲಿ ರಾಗ, ಉದ್ವೇಗಗಳನ್ನು ಹೆಚ್ಚಾಗುವಂತೆ ಮಾಡಬಹುದು. ಅವುಗಳಲ್ಲಿ ಅವನಿಗಾಗಲೀ ಅವನ ಬಣಕ್ಕಾಗಲಿ ಅದು ಅನುಭವಕ್ಕೆ ಬಂದಿಲ್ಲದಿರಬಹುದು. ಉದಾ: ಶಿಷ್ಟಾಚಾರ ವಿಧಿಗಳು, ಆಡಳಿತ ಪದ್ಧತಿಗಳು, ನೀತಿ ಸಂಹಿತೆಗಳು, ಭಾಷಣದ ವೈಖರಿ, ವಿನಯಶೀಲತೆ, ಇತ್ಯಾದಿ. ಇವು ಬಹಳ ತಪ್ಪು ಭಾವನೆ ಉಂಟು ಮಾಡುತ್ತವೆ. ಈ ರೀತಿಯ ವಾಡಿಕೆಯ ನುಡಿಕಟ್ಟುಗಳನ್ನು ನಾವು ಹುಡುಕಿ ತೆಗೆಯಲು ರಚನಾಕಾರನು ಯಾವ ರೀತಿಯ ಜನಗಳಿಗೆ ಇದನ್ನು ತಿಳಿಸಿದ ಮತ್ತು ಅವರ ನೀತಿ ನೆಲಗಟ್ಟು ಮತ್ತು ನಡವಳಿಕೆಯನ್ನು ನಾವು ತಿಳಿಯಬೇಕು.

6. ಗ್ರಂಥಕರ್ತೃನು (ಆಥರ್) ಸಾರ್ವಜನಿಕರನ್ನು ತನ್ನ ಸಾಹಿತ್ಯ, ಪ್ರೌಢಿಮೆಯಿಂದ ಬೆರಗುಗೊಳಿಸಲು ಪ್ರಯತ್ನಿಸುತ್ತಾನೆ. ಅವನು ಈ ಉದ್ದಿಶ್ಯಕ್ಕಾಗಿ ನಡೆದ ಸಂಗತಿಗಳನ್ನು ಅಲಂಕಾರಿಕವಾಗಿ ತನ್ನ ಸೌಂದರ್ಯೋಪಾಸನೀಯ (ಏಸ್ಥೆಟಿಕ್ಸ್) ನಿಮಿತ್ತವಾಗಿ ವಿಕಾರಗೊಳಿಸುತ್ತಾನೆ. ಇಲ್ಲದ ಸತ್ಯಗುಣಗಳನ್ನು ಹೇರಿ ತೃಪ್ತಿ ಪಡುತ್ತಾನೆ. ಇದನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿದರೆ ತೀರ ಬಾಲಿಶವಾಗಿ ಕಾಣುತ್ತದೆ. ಅಥವಾ ಅರ್ಧಮರ್ಧವಾದ ಅನಾಗರಿಕತೆಯ ಪ್ರತೀಕವಾಗಿರುತ್ತದೆ. ಇಂಥವು ಮಧ್ಯಮಕಾಲದ (ಮೀಡಿವಿಯಲ್) ಇತಿಹಾಸಕಾರರಲ್ಲಿ ಯಥೇಚ್ಛವಾಗಿ ಕಂಡು ಬರುತ್ತವೆ. ಇವು ಸಾಮಾನ್ಯರಲ್ಲಿ ನಿಜವೆಂಬ ಭ್ರಮೆ ಉಂಟುಮಾಡುತ್ತದೆ. ಪುರಾತನ ಇತಿಹಾಸಕಾರರಾದ ಹಿರಾಡೋಟಸ್, ಟಾಸಿಟಸ್ ಮತ್ತು ಜ್ಞಾನಪುನರುಜ್ಜೀವನ ಕಾಲದ ಇಟಲಿಯ ಇತಿಹಾಸಕಾರರಲ್ಲಿ ಈ ಮಿಥ್ಯೆ ದಾರಾಳವಾಗಿ ಕಂಡುಬರುತ್ತದೆ. ನಾವು ಒಬ್ಬನ ಮನಃಶಾಸ್ತ್ರವನ್ನು ತಿಳಿದುಕೊಳ್ಳುವಾಗ ಈ ರೀತಿಯ ಯೋಚನೆಯನ್ನು ಮಾಡಬೇಕು. ಹೀಗೆ ಹೆಚ್ಚು ಕಲಾತ್ಮಕವಾದ ವಿವರಣೆಗಳು ನಮ್ಮ ಕಕ್ಷೆಗೆ ಬಂದಾಗ ಅವನ್ನು ಮತ್ತಷ್ಟು ಸಂದೇಹ ದೃಷ್ಟಿಯಿಂದ ನೋಡಬೇಕು. ಗ್ರೀಕ್ ಯುಗದ ಅರಿಸ್ಟೋಫೇಸೀಸ್ ಮತ್ತು ಡೆಮೋಸ್ತನೀಸರು ಇಂತಹ ಪ್ರಭಾವಯುತ ಬರಹಗಾರರಾಗಿದ್ದರು. ಹೀಗೆ ವಿಪರೀತ ಚಿತ್ರಮಯವಾಗಿ ನಾಟಕೀಯವಾದ ಬರವಣಿಗೆಯನ್ನು ಅಪನಂಬಿಕೆಯಿಂದಲೇ ಕಾಣಬೇಕಾಗಿರುತ್ತದೆ. ಹೀಗೆ ಮೇಲ್ಕಾಣಿಸಿದ ಆರು ತಪ್ಪೆಣಿಸುವ ವಿಧಾನಗಳು ಇತಿಹಾಸದ ಮಾರ್ಗವನ್ನು ವಸ್ತುನಿಷ್ಠೆಯನ್ನೂ ಮರೆಯಾಗಿಸಿ ತಾವೇ ಮರೆಯುವ ಹೆಬ್ಬಂಡೆಗಳು.

ಎರಡನೆಯ ಪ್ರಶ್ನೆಗಳ ಸರಮಾಲೆಯಲ್ಲಿ ವಿಚಾರದ ಸತ್ಯತೆ ತಿಳಿಯಲು ನಮಗೆ ಮತ್ತೊಂದು ರೀತಿಯ ಕ್ಲಿಷ್ಟತೆಗಳು ಎದುರಾಗುತ್ತವೆ. ಇದರಲ್ಲಿ ರಚನಾಕಾರನು ಬಹಳ ವಿಶ್ವಾಸನೀಯವಾಗಿ ತಾನು ನಂಬಿದ ವಿಷಯಗಳನ್ನು ನಿಜವೆಂದು ದಾಖಲೆ ಮಾಡಲು ಸಿದ್ಧನಾಗಿರುತ್ತನಾದರೂ ಅವನು ಗ್ರಹಿಸಿದ, ಸಂಪಾದಿಸಿದ ವರ್ತಮಾನವು ತಪ್ಪಾಗಿರುತ್ತಾದ್ದರಿಂದ ಇಡೀ ಸಂಗತಿಯೇ ಅಸತ್ಯವಾಗುವುದು ಅನಿವಾರ್ಯವಾಗುತ್ತದೆ. ಈ ತಪ್ಪುಗಳನ್ನು ಈ ಪ್ರಶ್ನೆಗಳ ಸರಮಾಲೆಯನ್ನು ಉಪಯೋಗಿಸಿ ಪತ್ತೆ ಹಚ್ಚಬಹುದು.

1. ಗ್ರಂಥಕರ್ತೃನು ಸ್ವತಃ ಕಂಡ ವಿಷಯಗಳನ್ನು ದಾಖಲಿಸಿದ್ದಾನೋ ಅಥವಾ ಇನ್ನೊಬ್ಬರು ತಯಾರಿಸಿದ್ದ ಆಧರಿಸಿದ್ದಾನೆಂದೂ ತಿಳಿದರೆ, ತಿಳಿದ ವಿಷಯದಲ್ಲಿ ತಪ್ಪು ಸೇರಲು ಅವಕಾಶವಿರುತ್ತದೆ. 2. ಅವನು ತಾನೇ ಕಂಡ ವಿಷಯಗಳಾಗಿದ್ದಲ್ಲಿ ಅದನ್ನು ಮಾಮೂಲಿ ಸ್ಥಿತಿಯಲ್ಲಿ ಕಂಡನೋ? ಇದರಲ್ಲಿ ಸ್ವಲ್ಪವಾದರೂ ಭಯ, ಬಲವಂತ, ಅಥವಾ ಚಿತ್ತಭ್ರಮೆ, ವ್ಯಾಮೋಹ, ಭ್ರಮೆಗೊಳಪಟ್ಟಿದ್ದನೇ, ಪೂರ್ವಾಗ್ರಹಪೀಡಿತನಾಗಿದ್ದನೇ ಇವುಗಳಿಂದ ಈ ಘಟನೆಯ ಸತ್ಯಾಂಶ ನೋಡಲು ಅಡ್ಡಿಯುಂಟು ಮಾಡಿರಬಹುದು. 3. ಗ್ರಂಥಕಾರನು ಸ್ಪಷ್ಟವಾಗಿ, ಸ್ವಚ್ಛವಾಗಿ ವೀಕ್ಷಿಸುವ ಪರಿಪಾಠ ಹೊಂದಿದ್ದನೇ? ಇದನ್ನು ನಾನಾ ಕಾರಣಗಳಿಂದ ಕೆಲವರು ಸರಿಯಾಗಿ ನೋಡಲು ಸಮರ್ಥರಾಗಿರುತ್ತಾರೆ. ಅಂತಹ ಸಂದರ್ಭದಲ್ಲಿ ಅವರು ಸರಿಯೆಂದು ತಿಳಿದು ಬರೆದರೂ ಅದು ತಪ್ಪಾಗುತ್ತದೆ. 4. ರಚನಾಕಾರನು ಯಾವುದಾದರೂ ಪ್ರಬಲ ಪೂರ್ವಾಗ್ರಹಪೀಡಿತನಾಗಿದ್ದಾನೆ? ಅವನ ಅಸತ್ಯವನ್ನು ದಾಖಲಿಸಲು ಉದ್ದೇಶ, ದುರುದ್ದೇಶ, ಆಸಕ್ತಿ, ಪ್ರತಿಷ್ಠೆ, ಸಹಾನುಭೂತಿ, ಅಸಹಾನುಭೂತಿ ಇದ್ದು ಪೂರ್ವಾಗ್ರಹಕ್ಕೆ ಒಲಿಯಲು ತನಗೆ ಅರಿವಿಲ್ಲದೆಯೇ ತಪ್ಪು ಮಾಡಲು ಅವಕಾಶವಾಯಿತೆ ಎಂಬುದನ್ನು ನಾವು ಪತ್ತೆ ಮಾಡಬೇಕು. ಹೀಗೆ ನಿಜ ತಿಳಿಯಲು ಅನೇಕ ಪ್ರಶ್ನೆಗಳಿಗೆ ಉತ್ತರ ತಿಳಿಯಬೇಕು. ಆದರೆ ಇದನ್ನು ಪ್ರಜ್ಞಾಪೂರ್ವಕವಾಗಿ ಮಾಡಿದನೇ ಅಥವಾ ತಿಳುವಳಿಕೆ ಇಲ್ಲದೆ ಮಾಡಿದನೇ ಎಂಬುದನ್ನು ಗಮನದಲ್ಲಿಟ್ಟಿರಬೇಕು. 5. ದಾಖಲೆಗಾರನಿಗೆ ಸತ್ಯವಾದದ್ದನ್ನು ಕಾಣಲು ಅಡ್ಡಿ ಆತಂಕಗಳೇನಿದ್ದವೆಂಬುದನ್ನು ತಿಳಿಯಬೇಕು. ಯಾವ ಒಂದು ಘಟನೆಯು ದರ್ಶಕನಿಗೆ ಯಾವುದೇ ಒಂದು ವಿಷಯದಲ್ಲಿ ಆಸಕ್ತಿಯಾಗಲೀ, ಪೂರ್ವಾಗ್ರಹಪೀಡಿತ ಮನಸ್ಸಾಗಲಿ ಇರಬಾರದು. ಇವುಗಳಿದ್ದರೆ ತಪ್ಪೆಸಗಲು ಅವಕಾಶಮಾಡಿಕೊಟ್ಟಂತಾಗುತ್ತದೆ. ಯಾರೊಬ್ಬನಿಗೂ ಸರಿಯಾದ ಜವಾಬ್ದಾರಿ ವಹಿಸದಿದ್ದರೆ ಅವನು ಯೋಗ್ಯ ದಾಖಲೆಗಾರನಾಗಲಿ, ವಿಮರ್ಶಕನಾಗಲೀ ಆಗುವುದು ಸಾಧ್ಯವಿಲ್ಲ. ಇದರಿಂದ ದಾಖಲೆಗಾರನು ತನ್ನ ಕರ್ತವ್ಯದಲ್ಲಿ ನಿರಾಸಕ್ತನಾಗುತ್ತಾನೆ. 6. ದಾಖಲೆಗಾರನು ಘಟನೆ ಮತ್ತು ಕಾಲಗಳನ್ನು ಕಾಣಲು ಅಥವಾ ಕೇಳಲು ಯೋಗ್ಯವಾದ ಅನುಭವ ಮತ್ತು ಬುದ್ಧಿವಂತಿಕೆಯನ್ನು ಪಡೆದಿದ್ದೇನೆ ಎಂದು ತಿಳಿಯಬೇಕು. ನೋಡಿದ್ದನ್ನು ತತ್‌ಕ್ಷಣದಲ್ಲಿ ದಾಖಲಿಸಬೇಕು ನಂತರ ಬರೆದರೆ ಅದು ನೆನಪಿನ ದಾಖಲೆಯೇ ಹೊರತು ಘಟನೆಯ ದಾಖಲೆಯಲ್ಲ. ಅದು ಪೂರ್ಣ ಸತ್ಯವೂ ಆಗಲು ಸಾಧ್ಯವಿಲ್ಲ. 7. ದಾಖಲೆಗಾರನು ಉದಾಸೀನದಿಂದಲೂ, ಸೋಮಾರಿತನದಿಂದಲೂ ತನಗೆ ಯೋಗ್ಯತೆ ಇದ್ದರೂ, ಅದನ್ನು ದಾಖಲಿಸಲಾರದವನಿದ್ದಾನೆಯೇ? ಅವನು ಈ ಕೊರತೆಯಿಂದ ತನ್ನ ಊಹೆಗಳಿಂದ ಅನೇಕ ವಿಚಾರಗಳನ್ನು ಭರ್ತಿಮಾಡಿರಬಹುದು. 8. ಕೊನೆಯದಾಗಿ ಘಟನೆಗಳ ನೈಜ ಸ್ವರೂಪವೇನು? ಇಲ್ಲಿ ಕಣ್ಣಿಗೆ ಕಾಣುವುದು ಮಾತ್ರ ಸಾಕೆ? ಅದರ ಸ್ವರೂಪ ಅಷ್ಟಕ್ಕೇ ಸೀಮಿತಗೊಳ್ಳುತ್ತದೆಯೇ? ಅದು ಒಂದು ಗುಟ್ಟಾದ ವ್ಯಕ್ತಿಗತವಾದ ವಿಷಯವಿರಬಹುದು. ಅದು ವಿಸ್ತಾರವಾದ ಪ್ರದೇಶಕ್ಕೆ ಅಥವಾ ಬಹಳ ದೀರ್ಘಕಾಲಕ್ಕೆ, ಅಥವಾ ಒಟ್ಟಾರೆ ಸಮುದಾಯಕ್ಕೆ ಒಂದು ಸೈನ್ಯ ಸಂಬಂಧ ಆಚರಣೆ ಅಥವಾ ಸಮುದಾಯ ಸಂಪ್ರದಾಯ ಅಥವಾ ಒಂದು ದೀರ್ಘಾವದಿ ಕಾಲದ್ದಾಗಿರಬಹುದು. ಅಂಥ ಸಂದರ್ಭದಲ್ಲಿ ದಾಖಲೆಗಾರನು ಸಾಕಷ್ಟು ಮಾಹಿತಿಗಳನ್ನು ಪಡೆದಿದ್ದನೆ ಮತ್ತು ಎರಡನೆಯದಾಗಿ ಅವು ಸತ್ಯವನ್ನು ಒಳಗೊಂಡಿದ್ದವೇ ಎಂದು ತಿಳಿಯಬೇಕು. ಅವನು ಕೇವಲ ಗೂಡಾರ್ಥ, ಬುದ್ಧಿವಂತಿಕೆ, ಸಾಮಾನ್ಯೀಕರಣಗಳನ್ನು ಉಪಯೋಗ ಮಾಡಿದ್ದರೆ ಅನೇಕ ತಪ್ಪುಗಳಾಗುತ್ತವೆ.

ಈ ಮೇಲ್ಕಂಡ ಎರಡು ವಿಷಯಗಳು ದಾಖಲೆ... ತಾನೇ ಕಂಡಿದ್ದಾನೆಂಬ ಅಂಶವನ್ನು ಅನುಸರಿಸಿ ನಿರ್ಧರಿಸಲಾಗಿದೆ. ಆದರೆ ಪ್ರತ್ಯಕ್ಷ ದರ್ಶನವು ಎಲ್ಲ ಸಂದರ್ಭಗಳಲ್ಲೂ ಸಾಧ್ಯವಿಲ್ಲ. ಒಬ್ಬ ಮುಖ್ಯ ದಂಡನಾಯಕನು ಯುದ್ಧದ ವಿವರಣೆ ಕೊಟ್ಟಾಗ ಅದು ಸಂಪೂರ್ಣ ಅವನದಲ್ಲ. ಅವನು ತನ್ನ ಸಹಾಯಕ ಅಧಿಕಾರಿಗಳಿಂದ ಪಡೆದಿದ್ದು, ಆದ್ದರಿಂದ ಅದು ಎರಡನೆಯ ದರ್ಜೆಯ ಮಾಹಿತಿಯಾಗಿತ್ತದೆ. ಆದರೆ ಇಲ್ಲಿ ಪ್ರಮುಖ ವರದಿಗಾರ ಅಥವಾ ಅವನ ಏಜಂಟನ್ನು ವಿಮರ್ಶಿಸುವುದಿಲ್ಲ. ಪುರಾತನ ಅರಬ್ ಸಂಪ್ರದಾಯದವರು ತಮ್ಮ ಅಭಿಪ್ರಾಯಗಳಿಗೆ ಮೂಲದವರಾದ ಪರಂಪರೆಯನ್ನು ಅಥವಾ ಪ್ರಮಾಣಕ್ಕೆ ಕಾರಣೀಭೂತರನ್ನು 'ಇಸ್ನದ್' ಎಂಬುದಾಗಿ ಸೂಚಿಸುತ್ತಿದ್ದರು. ಆದರೆ ಹೇಳಿಕೆಯು ಆಧಾರವಿಲ್ಲದ್ದಾದರೆ ನಾವು ದಾಖಲೆಯ ಸ್ಥಿತಿಯನ್ನು ಸ್ಥೂಲವಾಗಿ ಏಕ ರೀತಿಯ ಪೂರ್ವಾಗ್ರಹಗಳನ್ನು ಹೊಂದಿವೆ ಎಂದು ವಿಚಾರಿಸಬೇಕು. ದ್ವಿತೀಯ ದರ್ಜೆಯ ಅಥವಾ ಮೂರನೆಯವರ ಹೇಳಿಕೆಯಲ್ಲಿ ಅದು ಮೂಲಾಧಾರವನ್ನು ಸೂಚಿಸದಿದ್ದರೆ ಏನೂ ಬೆಲೆಯಿಲ್ಲವೆಂದು ತಿಳಿಯಬೇಕು.

ಪುರಾಣ, ಉಪಕಥೆ, ಸಂಪ್ರದಾಯಗಳಲ್ಲಿರುವ ಸತ್ಯದ ಅಲ್ಪ ಅಂಶವನ್ನು ಬಹಳ ಶ್ರಮದಿಂದ, ತಾಳ್ಮೆಯಿಂದ ತೆಗೆಯಬೇಕು. ಇಂಥ ಮೂಲಗಳು ಹೆಚ್ಚಾಗಿ ಜಾನಪದಕ್ಕೆ ಸೇರಬೇಕೇ ಹೊರತು ಇತಿಹಾಸಕ್ಕಲ್ಲ. ಯಾವುದು ಯಥಾರ್ಥವಲ್ಲದ್ದೋ ಅಲ್ಲಲ್ಲಿ ತದ್ವಿರುದ್ಧವಾಗಿ ಕಾಣುವುದೋ, ಅಲೌಕಿಕವಾದದ್ದೋ, ಅಸಾಧ್ಯವಾಗಿ ಕಾಣುವುದೋ ಅದನ್ನು ತೆಗೆದುಹಾಕಬೇಕು.

ಹೀಗೆ ನಕಾರಾತ್ಮಕ ವಿಮರ್ಶೆಯ ಮುಖ್ಯ ಉದ್ದೇಶವೆಂದರೆ ತಪ್ಪಾಗುವ ಸಂದರ್ಭಗಳನ್ನು ತೆಗೆದುಹಾಕುವುದೇ ಆಗಿದೆ. ಮನುಷ್ಯನು ತಾನು ಹೇಳುವ ಮಾತನ್ನು ನಂಬುವರಿದ್ದರೆ ಸುಳ್ಳನ್ನು ಹೇಳಲು, ಸಾಧಿಸಲು ಸ್ವಲ್ಪವೂ ಹಿಂಜರಿಯುವುದಿಲ್ಲ. ಇವುಗಳನ್ನು ಪತ್ತೆ ಹಚ್ಚಲು ರಚನಾಕಾರನು ತನ್ನ ಹೇಳಿಕೆಯನ್ನು ನಂಬಿಸಲು ಇದನ್ನು ಸೇರಿಸಿದ್ದಾನೆಯೆ? ಮತ್ತು ರಚನಾಕಾರನ ಸಾಧಾರಣ ರೀತಿಗೆ ಇದು ವ್ಯತಿರಿಕ್ತವಾಗಿದೆಯೇ ಎಂದು ಪ್ರಶ್ನಿಸಿ ತಿಳಿಯಬಹುದು. ಇಂತಹ ಸಂದರ್ಭದಲ್ಲಿ 1. ಹೇಳಿಕೆಯಲ್ಲಿ ತಪ್ಪೊಪ್ಪಿಗೆ 2. ಮತ್ತು ನಾಗರೀಕರಾಗಲೀ ಮತಾಭಿಮಾನಿಗಳಾಗಲಿ ನಿಂದೆ, ಮಿಥ್ಯಾಪವಾದ, ಕಳಂಕ (ಕಾಲಮ್ನಿ) ಗಳಲ್ಲಿ ಪರಸ್ಪರ ಹೇಳಿದರೆ ನಾವು ಹೆಚ್ಚು ಪರೀಕ್ಷೆ ಮಾಡದೇ ಇದನ್ನು ಒಪ್ಪಬಹುದು. ಏಕೆಂದರೆ ಇಲ್ಲಿ ಅವನ ಉದ್ದಿಶ್ಯವು ತಪ್ಪಾಗಿರುವುದಿಲ್ಲ. ಇವರಲ್ಲಿ ಅವನು ಏಕೆ ಹಾಗೆ ಹೇಳಿದ ಮತ್ತು ಅದರಿಂದ ಏನು ಪರಿಣಾಮವನ್ನು ಮಾಡಲಿಚ್ಛಿಸಿದ ಎಂಬುದನ್ನು ಪರಿಶೀಲಿಸಬೇಕು. ಎರಡನೆಯದಾಗಿ ಹೇಳಿರುವ ವಿಷಯ ಎಲ್ಲರಿಗೂ ಪರಿಚಯವಿದ್ದು ತದ್ವಿರುದ್ಧವಾಗಿ ಹೇಳಿಕೆ ಕೊಟ್ಟು ಅದು ಪತ್ತೆಯಾಗುವ ಸಂಭವವಿದ್ದರೂ ಅವನು ಅದನ್ನು ಅಡ್ಡಿ ತಡೆಗಳಿಲ್ಲದೆ ಹೇಳಿದುದು. ಇದು ತಾತ್ಕಾಲಿಕವಾಗದೇ ಎಲ್ಲ ಕಾಲಕ್ಕೂ ಬಹಳ ಕಾಲದವರೆಗೂ ಪರಿಣಾಮ ಉಂಟು ಮಾಡುವ ಹೇಳಿಕೆ ಇರಬಹುದು.

3. ಹೇಳಿದ ವಿಷಯಗಳ ರಚನಾಕಾರನ ಉದಾಸೀನದಿಂದಲೂ, ಯಾವ ಆಸೆಯೂ ಇಲ್ಲದೆ ತಪ್ಪು ಅಭಿಪ್ರಾಯಗಳನ್ನು ಉಂಟು ಮಾಡುವವನಾಗಿದ್ದವೇ? ಇವು ಆ ರಚನಾಕಾರನು ಪ್ರಾಸಂಗೀಕವಾಗಿ ಹೇಳಿರುವ ಸಂಘ ಸಂಸ್ಥೆಗಳು, ವಸ್ತುಗಳು, ವ್ಯಕ್ತಿಗಳು ಮುಂತಾದುವಕ್ಕೆ ಅನ್ವಯಿಸುತ್ತವೆ. ಯಾವ ಒಂದು ಘಟನೆಯ ವಿವರಣೆ ಕೊಡುವಾಗ ಸಂಪೂರ್ಣ ಸುಳ್ಳಿನಿಂದಲೇ ಅದನ್ನು ವಿವರಿಸಲು ಸಾಧ್ಯವಿಲ್ಲ. ರಚನಾಕಾರನು ವಿಷಯಗಳನ್ನು ಚುನಾಯಿಸಿ ಅದನ್ನು ಸತ್ಯದಿಂದ ತುಂಬಲೆತ್ನಿಸುತ್ತಾನೆ.

4. ಘಟನೆಗೆ ಒಂದು ಸತ್ಯ ಸ್ವರೂಪವಿಲ್ಲದಿದ್ದರೆ ಅದನ್ನು ವಿಶದಪಡಿಸಲು ಸಾಧ್ಯವಿಲ್ಲ. ಅದು ಒಂದು ಗೊತ್ತಾದ ಘೋಷಿತ ಯುದ್ಧದಂತೆ, ಪ್ರಕಟಿಸಿದ ಶಾಂತಿ ಕರಾರುಗಳಂತೆ ಜಗಜ್ಜಾಹಿರ, ಅದನ್ನು ತಪ್ಪಾಗೆಣಿಸಲು ಸಾಧ್ಯವಿಲ್ಲ. ಒಂದು ಘಟನೆಯ ಸ್ವರೂಪ ಅಲ್ಪಕಾಲದ್ದೇ, ದೀರ್ಘಕಾಲದ್ದೇ? ಜನಗಳನ್ನು ಅದನ್ನು ನೋಡಲವಕಾಶವಿತ್ತೇ? ಉದಾಹರಣೆ ಒಂದು ಕಾಳಗ, ಒಂದು ಪದ್ಧತಿ, ಒಂದು ಯುದ್ಧ ಇತ್ಯಾದಿ. ಇವುಗಳನ್ನು ಸಾಧಾರಣ ವೀಕ್ಷಣೆಯಿಂದಲೇ ಸಾಧ್ಯವಾಗಬಹುದು - ಹೇಗೆಂದರೆ ಅವು ಒಂದು ಊರು, ಒಬ್ಬ ಮನುಷ್ಯ, ಒಂದು ಸಮುದಾಯ, ಒಂದು ಸರೋವರ, ಒಂದು ಸಂಪ್ರದಾಯ, ಇವುಗಳನ್ನು ಕಾಣುವ ಹಾಗೆಯೇ ಕಾಣಬಹುದಾಗಿದೆ.

ಹೀಗೆ ನಕಾರಾತ್ಮಕ ವಿಮರ್ಶೆಯಿಂದ ದಾಖಲೆಯಲ್ಲಿ ಹೇಳಿರುವ ಸತ್ಯಾಂಶ ಮತ್ತು ಸಮಂಜತೆಯನ್ನು ತಿಳಿಯಬಹುದಾಗಿದೆ. ಈ ಪದ್ಧತಿಯಲ್ಲಿ ನಾವು ದಾಖಲೆಯಲ್ಲಿ ಕಾಣಿಸಿರುವ ವಿಷಯಗಳು ರಚನಾಕಾರನ ಸಾಮಾಜಿಕ ಸ್ಥಾನ, ದೇಶ, ಪಕ್ಷ, ಮತ, ಧರ್ಮ, ಸಂಸಾರ, ಆಸಕ್ತಿಗಳು, ಮನೋಭಾವನೆಗಳು, ಪೂರ್ವಾಗ್ರಹಗಳು, ಭಾಷಾ ಪದ್ಧತಿಗಳು, ಕಾರ್ಯವಿಧಾನ, ಘಟನೆ ತಿಳಿಯುವ ಮಾರ್ಗ, ಸಂಸ್ಕೃತಿ, ಯೋಗ್ಯತೆ, ಮನಸ್ಸಿನ ನ್ಯೂನತೆಗಳನ್ನು ತಿಳಿಯುತ್ತೇವೆ. ನಾವು ದಾಖಲೆಯನ್ನು ಓದಿ, ಅದನ್ನು ವಿಶ್ಲೇಷಿಸಿ ಅದರ ಭಾಷೆ ಸರಳವಾಗಿಯೂ ಸ್ಪಷ್ಟವಾಗಿಯೂ ಇದೆಯೆ? ಅದರ ಪ್ರತಿ ಹೇಳಿಕೆಯೂ ಸರಿಯಾಗಿದೆಯೆ? ತಪ್ಪುಗಳಿವೆಯೆ? ಅದು ಉದ್ದಿಶ್ಯಪೂರಕವೇ, ಇಲ್ಲವೇ ಎಂಬುದನ್ನು ತಿಳಿಯುತ್ತೇವೆ.

ಇತಿಹಾಸ ರಚನಾ ವಿಧಾನದಲ್ಲಿ ಅನೇಕ ಪ್ರಶ್ನೆಗಳನ್ನು ಕೇಳಿ ಸಮಂಜಸ ಉತ್ತರ ಪಡೆಯುವುದೇ ಆಗಿದೆ. ಇದರ ಮುಖ್ಯ ಉಪಕರಣ ವಿಶ್ಲೇಷಣೆ ಇದು ತೀಕ್ಷ್ಣವಾದ ಮತ್ತು ಸತ್ಯಾನ್ವೇಷಣದ ಮಾರ್ಗ ಅನುಸರಿಸುತ್ತದೆ. ಹೀಗೆ ಅನೇಕ ಪ್ರಶ್ನೆಗಳನ್ನು ಕೇಳಿ, ಅವುಗಳ ಉತ್ತರಗಳನ್ನು ಸಂಘಟಿಸಿ ಸತ್ಯನಿರೂಪಣೆ ಮಾಡುವುದು. ಹೀಗೆ ಪ್ರಶ್ನಾವಳಿಯೇ ಈ ಮಾರ್ಗದ ಮುಖ್ಯ ನೆಲೆಗಟ್ಟು,

ಹೀಗೆಯೇ ವಿಶ್ಲೇಷಣೆಯೇ ಈ ಎಲ್ಲ ಕಾರ್ಯ [illegible] ಆಶ್ರಿ. ಸಂದೇಹವೇ ಹೊರಡುವ ಮುನ್ನ ಮುಖ್ಯ ಸೂಚಿ ಮತ್ತು ಇತಿಹಾಸ ಪುನರ್ ನಿರ್ಮಾಣದಲ್ಲಿ ಗಣನೀಯ ಪಾತ್ರ ವಹಿಸುವುದಾಗಿಯೂ, ಮುಖ್ಯ ಗುರಿಯೂ ಆಗಿದೆ. ನಕಾರಾತ್ಮಕ ಮೌಲ್ಯವೇ ಪೂರ್ಣ ವಿಧಾನವಾಗಿರುವುದರಿಂದ ಅದು ಎಲ್ಲ ತಪ್ಪುಗಳನ್ನು ನಿವಾರಿಸಲು ಸಹಾಯವಾಗುತ್ತದೆ. ಹೀಗೆ ತಪ್ಪುಗಳು, ತಪ್ಪು ಅಭಿಪ್ರಾಯಗಳು ನಿವಾರಣೆ ಆದಾಗ ಉಳಿಯುವುದೇ ಸತ್ಯ. ಇವೇ ಇತಿಹಾಸದ ತಿರುಳು (ಹೃದಯ) ಮತ್ತು ಚೈತನ್ಯ (ಆತ್ಮವೂ) ಆಗಿದೆ.

## 8.3 ಘಟಕದ ಸಾರಾಂಶ

ಈ ಘಟಕದ ಅಧ್ಯಯನದ ನಂತರ ನಾವು ಕೆಳಗಿನ ಕೆಲವು ಅಂಶಗಳನ್ನು ಅರಿತುಕೊಂಡೆವು.

* ಆಂತರಿಕ ವಿಮರ್ಶೆಯ ಪ್ರಾಮುಖ್ಯತೆ
* ಆಂತರಿಕ ವಿಮರ್ಶೆಯ ಪರಿಶೀಲನಾ ವಿಧಗಳು
* ಆಂತರಿಕ ವಿಮರ್ಶೆಯಲ್ಲಿ ಕಾಣಬರುವ ನಕಾರಾತ್ಮಕ ವಿವರಣಾ ವಿಮರ್ಶೆಯಲ್ಲಿ ಯಾವ ಯಾವ ವಿಷಯಗಳಿಗೋಸ್ಕರ ಗ್ರಂಥ ಕರ್ತೃ ವಿವರಣೆಯನ್ನು ಮರೆಮಾಚುತ್ತಾನೆ ಎಂಬುದನ್ನು ಅರಿತೆವು.

## 8.4 ಸ್ವಯಂ ಪರಿಶೀಲನಾ ಪ್ರಶ್ನೆಗಳು

1. ಸಂಶೋಧನೆಯಲ್ಲಿ ನಕಾರಾತ್ಮಕ ವಿವರಣಾ ವಿಮರ್ಶೆಯಲ್ಲಿ ಗ್ರಂಥಕರ್ತೃವಿನ ಕಾರ್ಯವಿಧಾನವನ್ನು ಚರ್ಚಿಸಿ.
2. "ನಕಾರಾತ್ಮಕ ವಿವರಣಾ ವಿಮರ್ಶೆಯು ಒಂದು ಸಂಶೋಧನೆಯ ಪ್ರಮುಖ ಘಟ್ಟ" ಪರಿಶೀಲಿಸಿ.

## 8.5 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. ಗೋಪಾಲ .ಬಾ.ರಾ. : ಇತಿಹಾಸ ಸಿದ್ಧಾಂತ
2. ವೆಂಕಟರತ್ನಂ ಮತ್ತು ಪದ್ಮ : ಇತಿಹಾಸ ಸಂಶೋಧನಾ ಮಾರ್ಗ

# ಘಟಕ -9 ಸಂಯೋಜನಾ ಕಾರ್ಯಗಳು - ಸಂಶೋಧನಾ ಪ್ರಬಂಧದ ಯೋಜನೆ ರಚನಾತ್ಮಕ ಸಮರ್ಥನೆ - ಸಮಂಜಸ ಸಾಮಾನ್ಯೀಕರಣ

*ವಿಷಯಾನುಸೂಚಿ*


9.0 ಉದ್ದೇಶಗಳು

9.1 ಪೀಠಿಕೆ

9.2 ಸಂಯೋಜನಾ ಕಾರ್ಯಗಳು

9.3 ಸಂಶೋಧನಾ ಪ್ರಬಂಧದ ಯೋಜನೆ

9.4 ರಚನಾತ್ಮಕ ಸಮರ್ಥನೆ

9.5 ಸಮಂಜಸ ಸಾಮಾನ್ಯೀಕರಣ

9.6 ಘಟಕದ ಸಾರಾಂಶ

9.7 ಸ್ವಯಂ ಪರಿಶೀಲನಾ ಪ್ರಶ್ನೆಗಳು

9.8 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 9.0 ಉದ್ದೇಶಗಳು

ಈ ಘಟಕದ ಉದ್ದೇಶವೆಂದರೆ, ಸಂಶೋಧನೆಯಲ್ಲಿ ವಿಮರ್ಶೆಯ ನಂತರ ಸಂಯೋಜನಾ ಕಾರ್ಯಗಳಿಂದ ಪ್ರಬಂಧದ ಯೋಜನೆ, ರಚನಾತ್ಮಕ ಸಮರ್ಥನೆ ಮತ್ತು ಸಮಂಜಸ ಸಾಮಾನ್ಯೀಕರಣದ ಕಾರ್ಯಗಳನ್ನು ಸಂಶೋಧಕನು ವಿಷಯಕ್ಕೆ ಮತ್ತು ಮಾಹಿತಿಯ ಉದ್ದೇಶಕ್ಕೆ ಯಾವುದೇ ಚ್ಯುತಿ ಬರದೇ ಇರುವ ರೀತಿಯಲ್ಲಿ ಮಾಡುವಂತಹ ವಿಷಯವನ್ನು ಇಲ್ಲಿ ಅಧ್ಯಯನ ಮಾಡುತ್ತೇವೆ.

## 9.1 ಪೀಠಿಕೆ

ಈ ಘಟಕದಲ್ಲಿ ಇತಿಹಾಸ ಸಂಶೋಧನೆಯ ಪ್ರಮುಖವಾದ ಕಾರ್ಯವಾದ ಸಂಶೋಧನಾ ಕಾರ್ಯಗಳನ್ನು ಮಾಡಲಾಗುವುದು. ಈ ಕಾರ್ಯದಲ್ಲಿ ಸಂಶೋಧಕನು ತಾನು ಸಂಯೋಜನಾ ಕಾರ್ಯಗಳಲ್ಲಿ ಪ್ರಮುಖವಾಗಿ ಪ್ರಬಂಧವನ್ನು ಸಿದ್ಧಪಡಿಸಲು ಒಂದು ಯೋಜನೆಯನ್ನು ತಯಾರಿಸಿ ಆ ಯೋಜನೆಯಲ್ಲಿ ಕಾಣಬರುವ ಮಾಹಿತಿಗಳಿಗೆ ರಚನಾತ್ಮಕ ಸಮರ್ಥನೆಯನ್ನು ತಿಳಿಸಬೇಕು ಮತ್ತು ತಾನು ನಡೆಸಿದ ಸಂಶೋಧನೆಯಿಂದ ಹೊರಬಂದ ವಿಷಯಗಳನ್ನು ಎಲ್ಲರೂ ಒಪ್ಪುವ ರೀತಿಯಲ್ಲಿ ಸಮಂಜಸ ಸಾಮಾನ್ಯೀಕರಣ ವಿಷಯವನ್ನು ತಿಳಿಸಬೇಕಾಗಿದೆ. ಈ ಕಾರ್ಯವನ್ನು ಸಂಶೋಧಕನು ಹೇಗೆ ನಿರ್ವಹಿಸುತ್ತಾನೆ ಎಂಬುದನ್ನು ಇಲ್ಲಿ ತಿಳಿಯೋಣ.

## 9.2 ಸಂಯೋಜನಾ ಕಾರ್ಯಗಳು

ಹಿಂದಿನ ಘಟನೆಗಳ ಐತಿಹಾಸಿಕ ಪುನರ್ರಚನೆಯಲ್ಲಿ ಎರಡು ವಿಧವಾದ ಕಾರ್ಯಕ್ರಮಗಳಿವೆ. ಇವು ವಿಭಜನಾಕಾರ್ಯ ಮತ್ತು ಸಂಯೋಜನ ಕಾರ್ಯಗಳು ವಿಭಜನಾಕಾರ್ಯದಲ್ಲಿ ಸಂಗ್ರಹಣೆ, ಪರಿಶೀಲನೆ ದತ್ತಾಂಶದ ನೈಜತ್ವ ಪರೀಕ್ಷೆ ಮುಂತಾದ ಕಾರ್ಯಗಳಿದ್ದರೆ ಸಂಯೋಜನಾಕಾರ್ಯದಲ್ಲಿ ಒಗ್ಗೂಡಿಸುವುದು, ಕ್ರಮವಾಗಿ ಜೋಡಿಸುವುದು, ವಿವರಣೆ ಮತ್ತು ದತ್ತಾಂಶದ ವಿವರಗಳನ್ನು ಅರ್ಥಪೂರ್ಣವಾಗಿಯೂ, ಸ್ವಾರಸ್ಯಕರವಾಗಿಯೂ ಆಗುವಂತೆ ನಿರೂಪಣೆ ಮಾಡುವುದು ಮುಂತಾದ ಕಾರ್ಯಗಳಿವೆ.

ಸಂಯೋಜನಾ ಕಾರ್ಯದಲ್ಲಿ ದೊರಕಿದ ಐತಿಹಾಸಿಕಗಳನ್ನು ಆದಷ್ಟು ಚಿಕ್ಕದಾಗಿ ಭೇದಿಸಿ, ಪ್ರತಿ ಸಣ್ಣ ಭಾಗವನ್ನು, ಕಲ್ಪನೆಯನ್ನು ಪರೀಕ್ಷಿಸಿ ಅದು ಅಸಲಿಯೋ, ನಕಲಿಯೋ, ಸತ್ಯವೋ, ಅಸತ್ಯವೋ, ನಂಬಿಕೆಗೆ ಅರ್ಹವಾದುದ್ದೋ, ನಂಬಿಕೆಗೆ ಅನರ್ಹವಾದುದ್ದೋ ಎಂಬುದನ್ನು ತಿಳಿಯುವ ಒಂದು ವಿಧಾನವಾಗಿದೆ. ಇದನ್ನು ಸರಿಯಾಗಿ ಮಾಡದಿದ್ದರೆ ನಿಜಾಂಶ ದೊರಕದೆ ಇತಿಹಾಸ ಪುನರ್ರಚನೆಯ 'ಆಕಾಶದಲ್ಲಿ ಮೀನು ಹಿಡಿಯುವ ಪ್ರಯತ್ನದ ಹಾಗೆ' ನಿರರ್ಥಕವಾಗುತ್ತದೆ. ಸರಿಯಾಗಿ ಪ್ರಯತ್ನದಿಂದ ಎಚ್ಚರಿಕೆಯ ಫಲವಾಗಿ ಪ್ರತಿ ವಿಷಯವನ್ನು ಉಪಯೋಗಿಸಿ, ಪ್ರತಿಯೊಂದು ಇಟ್ಟಿಗೆಯ ಸರಿಯಾದ ಜೋಡಣೆಯಿಂದ ಕಟ್ಟಡ ನಿರ್ಮಾಣವಾಗುವಂತೆ, ಇತಿಹಾಸ ನಿರ್ಮಾಣ ಮಾಡಬೇಕು. ಹೀಗೆ ಮೊದಲನೆಯ ಕರ್ತವ್ಯವೆಂದರೆ ವಿಜ್ಞಾನಿಯು ಎಲ್ಲ ತಂತ್ರಗಳನ್ನು ಉಪಯೋಗಿಸಿ ದತ್ತಾಂಶಗಳನ್ನು ಪರೀಕ್ಷಿಸಿ ನಿರ್ಧಾರಕ್ಕೆ ಬರುವಂತೆ, ಇತಿಹಾಸಕಾರನೂ ಮಾಡಬೇಕು. ಎರಡನೆಯದಾಗಿ ಕಲಾಕಾರನು ಸ್ವಚ್ಛಂದವಾಗಿ ವರ್ತಿಸಿ ಸುಂದರ ಕಲಾಕೃತಿಯನ್ನು ಸೃಷ್ಟಿಸುವಂತೆ ಇತಿಹಾಸಕಾರನು ದೊರೆತ ದತ್ತಾಂಶದಿಂದ ಉತ್ತಮ ಸಾಹಿತ್ಯ ರಚಿಸಬೇಕು. ಹೀಗೆ ಐತಿಹಾಸಿಕ ಸಂಯೋಜನೆಯು ಒಂದು ಅಪೂರ್ವ ಕಾರ್ಯವಾಗಿದೆ.

ಐತಿಹಾಸಿಕ ವಿಭಾಗದಲ್ಲಿ ಸಂಯೋಜನಾ ಕಾರ್ಯವೇ ಎರಡನೆಯ ಮುಖ್ಯ ಹಂತ. ಇತಿಹಾಸದ ಮೂಲವಸ್ತುಗಳು ನಾನಾ ಕಾರಣಗಳಿಂದ ಹತ್ತಾರು ಕಡೆ ಅವ್ಯವಸ್ಥಿತವಾಗಿ ಹಂಚಿ ಹರಡಿವೆ. ಇಂಥ ಸರಕುಗಳನ್ನು ಪ್ರಥಮತಃ ಒಂದು ಕಡೆ ಕೂಡಿಸಿ ಉಪಯುಕ್ತ ಮತ್ತು ಸಂಬಂಧಿಸಿದ ವಿಷಯಗಳನ್ನು ಮಾತ್ರ ತನ್ನ ಗಮನದಲ್ಲಿಟ್ಟು, ಅವುಗಳನ್ನು ಐತಿಹಾಸಿಕ ದತ್ತಾಂಶಗಳಿಗನುಸಾರವಾಗಿ ವ್ಯವಸ್ಥಿತವಾಗಿ ವಿಂಗಡಿಸಿ, ಗಮನದಲ್ಲಿಟ್ಟು, ಅವುಗಳನ್ನು ಐತಿಹಾಸಿಕ ದತ್ತಾಂಶಗಳಿಗನುಸಾರವಾಗಿ ವ್ಯವಸ್ಥಿತವಾಗಿ ವಿಂಗಡಿಸಿ, ಅವುಗಳನ್ನು ಒಂದು ಸಾಮಾನ್ಯೀಕರಿಸಬೇಕು. ಉದಾಹರಣೆಗೆ ಶಿವಾಜಿಯ ಅಥವಾ ಅಕ್ಬರನ ವಿಷಯವಾಗಿ ಆ ಕಾಲದಲ್ಲೇ ಬರೆದ ಬೇರೆ ಬೇರೆ ಲೇಖಕರು ಒಂದೇ ವಿಷಯದ ಬಗ್ಗೆ ಬೇರೆ ಬೇರೆಯಾದ ವಿಭಿನ್ನವಾದ ಅಭಿಪ್ರಾಯಗಳನ್ನು ಸೂಚಿಸಿರುವುದುಂಟು. ಆ ಕಾಲದಲ್ಲಿ ಭೇಟಿ ಮಾಡಿದ ಪ್ರವಾಸಿಕರು ಬರೆದ ವಿಷಯಗಳು ಬೇರೆಯಾಗಿಯೇ ತದ್ವಿರುದ್ಧವಾಗಿಯೋ ಕಾಣಿಸಿರಬಹುದು. ಇಂಥ ಸಂದರ್ಭಗಳಲ್ಲಿ ಇತಿಹಾಸಕಾರನು ತನ್ನ ಸಂಯೋಜನೆಯಲ್ಲಿ ಸಾಧ್ಯವಾದಷ್ಟು ಭಿನ್ನತೆಗಳನ್ನು ಕಡಿಮೆ ಮಾಡಿ, ಅಭಿಪ್ರಾಯಗಳನ್ನು ಸಾಮಾನ್ಯವಾಗಿ ಒಪ್ಪಬಹುದಾದ ರೀತಿಯಲ್ಲಿ ತನ್ನ ಕಾರ್ಯ ಜರುಗಿಸಬೇಕು.

ಇತಿಹಾಸ ಸಂಶೋಧಕನು ಮತ್ತೆ ಕೆಲವು ವಿಷಯಗಳನ್ನೂ ಗಮನದಲ್ಲಿಟ್ಟಿರಬೇಕು. ಪ್ರತಿಯೊಂದು ಇತಿಹಾಸ ಘಟನೆಗೂ ಒಂದು ಸ್ಥಳ, ಒಂದು ಕಾಲ, ಮತ್ತು ಒಂದು ಪ್ರದೇಶದ ಹಿನ್ನೆಲೆ ಇದೆ. ಇವುಗಳ ಕಾರಣ ಪರಿಣಾಮ ಸಂಬಂಧಗಳು ಇವೆ. ಇತಿಹಾಸಕಾರನಿಗೆ ದೊರಕುವ ಸಂಗತಿಗಳನ್ನು ಈ ಕೆಳಗೆ ಕಾಣಿಸಿರುವ ಮೂರು ಮೂಲಗಳಿಂದ ಒದಗುತ್ತವೆ. (1) ವಸ್ತು ವಿಶೇಷಗಳಾದ ಸ್ಮಾರಕ, ಭೌತ ಸ್ಥಿತಿಗಳು, ಕಲೆ ಮತ್ತು ಉದ್ಯೋಗಗಳ ಉತ್ಪನ್ನಗಳು, (2) ಮನುಷ್ಯರ ಚಟುವಟಿಕೆಗಳು, ಅವಕ ಕೆಲಸಗಳು, ಸಾಧನಗಳು ಮತ್ತು ವೈಫಲ್ಯಗಳು ಮತ್ತು (3) ಚಲನ ಪ್ರೇರಕಗಳು, ಕಲ್ಪನೆಗಳು ಮುಂತಾದ ಭಾವನಾ ರೂಪ, ವಿಷಯಗಳು, ಇವುಗಳಲ್ಲಿ ಮೂರನೆಯದರಲ್ಲಿ ಮನಸ್ಸಿಗೆ ಸಂಬಂಧಪಟ್ಟ ಕಾರ್ಯಚರಣೆಗಳೇ ಇವೆ. ಈ ಮನಸ್ಸಿನ ವ್ಯಾಪಾರವನ್ನು ಪುನಃ ಮೂರು ಭಾಗ ಮಾಡಬಹುದು: (1) ರಚನಾಕಾರನ ಮನಸ್ಸಿನ ಕಲ್ಪನೆಗಳು ಮತ್ತು ಅದನ್ನು ಹೇಳುವುದು. (2) ಗ್ರಂಥ ಕರ್ತರು ತಮ್ಮ ಸಮಕಾಲೀನ ಇತರ ಗ್ರಂಥ ಕರ್ತರಲ್ಲಿ ಕಂಡು ಬಂತೆಂದು ಹೇಳಲಾದ ವಿಷಯಗಳು ಮತ್ತು (3) ದಾಖಲಾದ ವಿಷಯಗಳಿಗೆ ಸಂಬಂಧಪಟ್ಟ ಚಟುವಟಿಕೆಗಳಿಗೆ ಕಾರಣವಾದ ಪ್ರಚೋದನೆಗಳು. ಹೀಗೆ ಕಣ್ಣಿಗೆ ಕಾಣುವ ವಸ್ತುಗಳು, ಮನುಷ್ಯ ಚಟುವಟಿಕೆ ಮತ್ತು ಮನೋವ್ಯಾಪಾರಗಳು ಇತಿಹಾಸ ತಿಳುವಳಿಕೆಗೆ ವಸ್ತುಗಳಾಗಿವೆ. ಇವುಗಳೆಲ್ಲವನ್ನೂ ನೇರವಾಗಿ (ಪ್ರತ್ಯಕ್ಷ) ತಾನೇ ಕಾಣಲಾಗದಿದ್ದರೂ, ಇತರರು ಕಂಡ ವಿಷಯಗಳನ್ನು ಮತ್ತು ಊಹಿಸಿ ತೀರ್ಮಾನಿಸಿದ ವಿಷಯಗಳನ್ನು ಇಲ್ಲಿ ಸೇರಿಸಲಾಗಿದೆ.

ಈ ವಿಷಯಗಳು ವ್ಯಕ್ತಿಗತವಾದರೂ ಅಸತ್ಯವೇನಲ್ಲ. ಮಾನವ ಸ್ವಭಾವಗಳು ಈಗಲೂ ಹಿಂದಿನ ಕಾಲದಲ್ಲಿದ್ದಂತೆಯೇ ಇವೆ. ಆದರೆ ಇವು ಸಂಭವನೀಯವೆಂದು ಪರಿಗಣಿಸಲಾಗುವುದಿಲ್ಲ. ಉದಾಹರಣೆಗೆ ಬುದ್ಧ, ಅಶೋಕ, ಗಾಂಧೀಜಿಯಂಥವರು ಈಗ ಇಲ್ಲ ಮತ್ತು ಅವರಂತೆ ಮನಸ್ಸನ್ನು ಹೊಂದಿರುವುದಾಗಲೀ, ಆ ಅನುಭವಗಳನ್ನು ಪಡೆಯುವುದಾಗಲೀ ಸಾಧ್ಯವಿಲ್ಲ. ಇಂಥವು ಕೇವಲ ದಾಖಲೆಗಳನ್ನು ನೋಡುವುದರಿಂದ ಒದಗಲಾರವು. ಇತಿಹಾಸಕಾರನು ಸಂಗತಿಗಳನ್ನು ವಿಮರ್ಶಿಸಿ ತಪ್ಪುಗಳನ್ನು ಸರಿಪಡಿಸಿ ಈಗಿನ ಸಂದರ್ಭದಲ್ಲಿ ನಡೆಯುತ್ತಿರುವ ಘಟನೆಗಳಿಗೆ ಹೋಲಿಸಿ, ಬೇಕಾದಲ್ಲಿ ಮನಃಶಾಸ್ತ್ರ, ಸಮಾಜಶಾಸ್ತ್ರ ಮತ್ತು ಇತರ ವಿಜ್ಞಾನಗಳ ವಿಷಯಗಳ ಜ್ಞಾನವನ್ನು ಹೊಂದಿಸಿ ನಿರ್ಧರಿಸಬಹುದು. ಹೀಗಾಗಿ ಸಂಯೋಜನ ಕಾರ್ಯವು ಇವುಗಳ ಪ್ರಾಥಮಿಕ ತಂತ್ರಜ್ಞಾನವನ್ನು ಒಳಗೊಂಡಿರುತ್ತದೆ.

## 9.3 ಸಂಶೋಧನಾ ಪ್ರಬಂಧದ ಯೋಜನೆ

ಮುಂದಿನ ಹಂತದಲ್ಲಿ ಸಂಗತಿಗಳನ್ನು ಒಂದು ನಿರ್ದಿಷ್ಟ ಪ್ರಕಾರ ವರ್ಗೀಕರಿಸಿಕೊಳ್ಳಬೇಕು. ಇವುಗಳಲ್ಲಿ ಕಾಲ, ಪ್ರದೇಶ, ಮತ್ತು ವ್ಯಕ್ತಿ ದೇಶಗಳಿಗೆ ಸಂಬಂಧಪಟ್ಟ ಹಾಗೆ ವಿಂಗಡಿಸಿಕೊಳ್ಳಬಹುದು. ಇವು ಕಾಲ ಕ್ರಮಪಟ್ಟಿ (ಕ್ರಾನಾಲಜಿ) ಮತ್ತು ಸಂಬಂಧಪಟ್ಟ ಸ್ವರೂಪ (ಜಿಯಾಗ್ರಫಿಕಲ್) ಗಳೂ ಆಗಿರುತ್ತವೆ. ಹಿಂದೆ ಈ ರೀತಿ ವಿಂಗಡನೆಗೆ ಯಾವ ವ್ಯವಸ್ಥಿತ ಮಾರ್ಗವೂ ಇರಲಿಲ್ಲ. ಹಾಗಾಗಿ ಪುರಾತನ ಇತಿಹಾಸಕಾರರಾದ ಲೀವಿ ಮತ್ತು ಟಾಸಿಟಸ್‌ರು ಪ್ರವಾಹ, ಸಾಂಕ್ರಾಮಿಕ ರೋಗ ಹಬ್ಬುವಿಕೆಯನ್ನು ಯುದ್ಧ ಸೈನ್ಯ ದಾಳಿಗಳೊಡನೆ ಸೇರಿಸಿದ್ದರು. ಈ ಅವೈಜ್ಞಾನಿಕ ವಿಂಗಡನೆಯನ್ನು ವಿರೋಧಿಸಿ 19 ನೇ ಶತಮಾನದಲ್ಲಿ ಇತರ ಶಾಸ್ತ್ರಗಳಾದ ಭಾಷೆ, ಸಾಹಿತ್ಯ, ಕಲೆ, ನ್ಯಾಯಶಾಸ್ತ್ರ, ರಾಜಕೀಯ, ಆರ್ಥಿಕ ಮತಧರ್ಮಗಳು ಉಂಟಾದಂತೆ ಇತಿಹಾಸವೂ ಅನುಸರಿಸಿತು. ಒಂದೇ ವಿಧವಾದ ಜಾತಿಗೆ (ಸ್ಪೀಷೀಸ್) ಸೇರಿದ ವಿಷಯಗಳನ್ನು ಒಂದೇ ವರ್ಗದ ಅಡಿಯಲ್ಲಿ ತರುವುದಾಗಿದ್ದಿತು. ಅದರ ಒಂದು ಮಾದರಿಯನ್ನು ಇಲ್ಲಿ ಕಾಣಿಸಲಾಗಿದೆ.

1. ವಸ್ತುಗಳ ಸ್ಥಿತಿ: ಇದರಲ್ಲಿ ಮನುಷ್ಯ ವಿಜ್ಞಾನ (ಆನ್‌ಥ್ರೋಪಾಲಜಿ), ಪ್ರಜಾಸಂಖ್ಯಾಶಾಸ್ತ್ರ (ಡೆಮೋಗ್ರಫಿ), ಸಮುದಾಯ (ನಂಬರ್) ಲಿಂಗ (ಸೆಕ್ಸ್) ವಯಸ್ಸು, ಹುಟ್ಟು, ಸಾವು, ರೋಗಗಳು ಮತ್ತು ಪರಿಸರ (ಎನ್‌ವಿರಾನ್‌ಮೆಂಟ್) ಮತ್ತು ಇತರ ಸಜಾತೀಯ ವಿಷಯಗಳು.
2. ಬೌದ್ಧಿಕ ಚಟುವಟಿಕೆಗಳು: ಭಾಷೆಗಳು, ಕಲೆ, ವಿಜ್ಞಾನ, ಸಂಗೀತ, ತತ್ವ, ಮತ್ತು ಧರ್ಮ, ನೀತಿ, ಇತ್ಯಾದಿ.
3. ಸಮಾಜ ಸಂಸ್ಥೆಗಳು: ಕುಟುಂಬ, ಸಂಪ್ರದಾಯಗಳು, ನಡವಳಿಕೆ, ಸಮಾಜಧರ್ಮಗಳು, ಆಮೋದಗಳು, ಹಬ್ಬ, ಉತ್ಸವಗಳು, ಕಾಲಕಳೆಯುವ ಕಾರ್ಯಗಳು, ಆಹಾರ, ಬಟ್ಟೆ, ವಸತಿ, ಗೃಹೋಪಕರಣಗಳು, ಆಂತರಿಕ ಜೀವನ.

4. ಆರ್ಥಿಕ ಸ್ಥಿತಿಗಳು: ಉತ್ಪಾದನೆ, ವಸ್ತು ಉಪಯೋಗ, ಹಂಚಿಕೆ, ಸಂಚಾರ ವ್ಯವಸ್ಥೆ, ವಾಣಿಜ್ಯ, ಹಣಕಾಸು ವ್ಯವಹಾರ, ಉದ್ಯೋಗ, ಕಂದಾಯ ಉತ್ಪನ್ನಗಳ ಮೂಲ ವೆಚ್ಚ ಇತ್ಯಾದಿ.

5. ಸಾರ್ವಜನಿಕ ಸಂಸ್ಥೆಗಳು: ರಾಜಕೀಯ ಸಂಸ್ಥೆಗಳು, ಆಡಳಿತ ವ್ಯವಸ್ಥೆ, ರಾಜ್ಯಾಂಗ ವಿಚಾರಗಳು, ಶಾಸನ ಸಂಬಂಧ ಸುಧಾರಣೆಗಳು, ರಾಜಕೀಯ ಇತ್ಯರ್ಥಗಳು, ಅವುಗಳ ಪ್ರಭಾವ, ಮತದಾನ ಪದ್ಧತಿ, ರಾಜದೂತ ವ್ಯವಹಾರ, ಯುದ್ಧ, ಶಾಂತಿ, ಅಂತರರಾಷ್ಟ್ರೀಯ ಸಮಸ್ಯೆಗಳು, ಇತ್ಯಾದಿ.

ಇವುಗಳು ಪೂರ್ಣವೆಂದು ಹೇಳಲಾಗುವುದಿಲ್ಲ. ಇತಿಹಾಸದ ಇವುಗಳನ್ನು ಸುವ್ಯವಸ್ಥಿತವಾಗಿ ಅಭ್ಯಾಸ ಮಾಡಿ ಮೂಲ ವಿಷಯಗಳೊಡನೆ ಸಂಯೋಜಿಸಬೇಕು. ವಿಷಯಗಳನ್ನು ಕಾಲಾನುಕ್ರಮವಾಗಿ ಅಥವಾ ಪ್ರದೇಶ ವಿಂಗಡನೆಯ ಪದ್ಧತಿಯಂತೆಯೂ ಉಪವಿಭಾಗಗಳಾದ ಕಾಲ, ದೇಶ ಮತ್ತು ರಾಷ್ಟ್ರಗಳ ಸಂಬಂಧ ಉಪವಿಂಗಡನೆ ಮಾಡಬಹುದು. ಇವುಗಳನ್ನು ತರ್ಕಬದ್ಧವಾಗಿ, ನಾನು ವಿಷಯಗಳ ವಿಂಗಡನೆಯಾಗಿ ಪರಿಗಣಿಸಬಹುದು. ಯಾವುದೇ ಒಂದು ಮಾರ್ಗವನ್ನು ಕಡ್ಡಾಯ ಮಾಡಲು ಸಾಧ್ಯವಿಲ್ಲ. ಅವುಗಳು ರಚನಾಕಾರನ ಒಲವು, ಓದುಗಾರರ ರುಚಿಯನ್ನನುಸರಿಸಿ ಭಿನ್ನವಾಗಿರುತ್ತವೆ.

ಕೆಲವು ಸಂದರ್ಭಗಳಲ್ಲಿ ಮುಖ್ಯವಾಗಿ ವ್ಯಕ್ತಿಗಳ ಚಟುವಟಿಕೆಗೆ ಸಂಬಂಧಪಟ್ಟಂತೆ ವಿಷಯಗಳನ್ನು ಸಂಯೋಜಿಸಲು ಕಷ್ಟವಾಗುತ್ತದೆ. ಕೆಲವು ವಿಷಯಗಳು ವ್ಯಕ್ತಿಗಳು ತಾತ್ಕಾಲಿಕ ಪ್ರಾಮುಖ್ಯತೆ ವಹಿಸಿದ್ದರೆ ಕೆಲವು ವಿಷಯಗಳು ಕೆಲವು ವ್ಯಕ್ತಿಗಳ ಕೆಲಸ ದೀರ್ಘಕಾಲದ ಸಾಮೂದಾಯಿಕ ಪ್ರಭಾವ ಉಳ್ಳವಾಗಿರುತ್ತವೆ. ಜರ್ಮನಿಯ ಇತಿಹಾಸಕಾರರಲ್ಲಿ ಒಂದು ಪಂಗಡ ನಾಗರೀಕತೆಯ ಬೆಂಬಲಿಗರಾಗಿದ್ದಾರೆ. ಮತ್ತೊಂದು ಗುಂಪು ಸಂಪ್ರದಾಯಗಳನ್ನು ಬೆಂಬಲಿಸುತ್ತದೆ. ಫ್ರಾನ್ಸ್‌ನಲ್ಲಿ ಒಂದು ಕಡೆ ಸಂಸ್ಥೆಗಳ ಇತಿಹಾಸ ನಡವಳಿಕೆ ಭಾವನೆಗಳು ಮುಂದಾಗಿದ್ದರೆ ಕೆಲವರಿಗೆ ಇತಿಹಾಸದ ಕಾಳಗಗಳ ವಿಷಯವೇ ಹೆಚ್ಚು ಗ್ರಾಹ್ಯವಾಗಿದೆ. ನ್ಯಾಯವಾಗಿ ಅಂಥ ಭಿನ್ನಾಭಿಪ್ರಾಯಗಳಿಗೆ ಯಾವ ಅವಶ್ಯಕತೆಯೂ ಇಲ್ಲ. ಇತಿಹಾಸದಲ್ಲಿ ಸಾಮಾನ್ಯ ವಿಷಯಗಳು, ಸಾಹಸ ಕಾರ್ಯಗಳ ವಿವರಗಳೂ ಮಿಶ್ರವಾಗಿ ಇದ್ದೇ ಇರುತ್ತದೆ. ಇದರಿಂದಾಗಿಯೇ ಇತಿಹಾಸವು ಕಲೆಯೇ ವಿಜ್ಞಾನವೇ ಎಂಬ ಜಿಜ್ಞಾಸೆ ಉಂಟಾಗಿದ್ದರೂ ಅದು ಎರಡು ವಿಷಯಗಳ ನಿಯಮಗಳನ್ನು ಅನುಸರಿಸುತ್ತದೆ ಎಂಬ ಸಮಾಧಾನವಿದೆ.

ಉದಾಹರಣೆಗೆ ಒಂದು ಗುಂಪಿನ ನಡವಳಿಕೆಯನ್ನು ತೀರ್ಮಾನ ಮಾಡಬೇಕಾದ ಪ್ರಸಂಗ ಬಂದಿತೆನ್ನೋಣ. ಆಗ ಮೊದಲಲ್ಲೆ ನಾವು ಪ್ರತಿ ಸಮುದಾಯವು - ಜೀವಶಾಸ್ತ್ರದ ವಿಂಗಡನೆಯಂತೆ - ಒಂಧೇ ಭಾಷೆ, ಒಂದೇ ಸಂಪ್ರದಾಯ ನಡವಳಿಕೆ ಹೊಂದಿವೆ ಎಂದು ತಿಳಿದು ಮುಂದುವರಿಯುತ್ತೇವೆ. ಆದರೆ ಆಳವಾದ ಅಭ್ಯಾಸ ಮಾಡತೊಡಗಿದಾಗ ಇದರ ವಿಸ್ತಾರ, ತೊಡಕುಗಳು ಕಂಡುಬರುತ್ತವೆ. ಇಂಗ್ಲೀಷ್ ಜನಾಂಗವೆಂದರೆ ಅದರಲ್ಲಿ ಇಂಗ್ಲೆಂಡಿನ, ಸ್ಕಾಟ್‌ಲೆಂಡ್‌ನ, ವೇಲ್ಸ್‌ನು ಐರ್‌ಲೆಂಡಿನ ಸ್ವಲ್ಪ ಜನ ಹೇಗೆ ಒಳಗುಂಪುಗಳಾಗಿರುತ್ತವೆ. ಭಾರತೀಯರೆಂದರೆ ಅದರಲ್ಲಿ ನಾನಾ ಭಾಷೆಯ, ನಾನಾ ಪ್ರದೇಶದ, ನಾನಾ ಮತಧರ್ಮಗಳ, ಒಳಜಾತಿಗಳ, ನಾನಾ ವರ್ಣಸಂಕರದ (ರೇಸಸ್-ಇಂಡೋ ಆರ್ಯನ್, ಮಂಗೊಲಾಯ್ಡ್ ಇಂಡೊ ಟರ್ಕಿಷ್) ಜನಗಳಿದ್ದಾರೆ. ಕೆನಡಾ ರಾಷ್ಟ್ರೀಯನು ಫ್ರೆಂಚ್ ಭಾಷೆಯ ಫ್ರಾನ್ಸ್ ಸಂಪ್ರದಾಯಗಳ ಪಂಗಡದವನಾಗಿದ್ದರೂ ಬ್ರಿಟಿಷ್ ಚಕ್ರಾಧಿಪತ್ಯ ಸಮುದಾಯಕ್ಕೆ ಸೇರಿದವನಾಗಿರುತ್ತಾನೆ. ಹೀಗೆ ಒಂದು ಮತ್ತೊಂದರ ಗುಣಗಳನ್ನು ಹೊಂದಿಕೊಂಡಿರುತ್ತದೆ. ಇಂಥವು ವಿಶ್ಲೇಷಣೆಯೂ ಹೌದು ಸಂಯೋಜನೆಯೂ ಹೌದು ಎನಿಸುತ್ತವೆ. ಕನ್ನಡ ನಾಡಿನ ಪ್ರದೇಶದಲ್ಲಿ ಎಷ್ಟು ಉಪಭಾಷೆಯ, ನಾನಾ ರೀತಿಯ ಉಚ್ಛಾರವುಳ್ಳ ಜನರಿಲ್ಲ, ಇವು ಏಕೆ, ಹೇಗೆ, ಯಾವಾಗ ಉಂಟಾದುವು ಎಂಬ ಪ್ರಶ್ನೆಗಳನ್ನೇಳಿಸಿ ಕುತೂಹಲಪಡಿಸುತ್ತವೆ. ಇದಲ್ಲದೆ ಒಂದು ಸಮುದಾಯ ಎಲ್ಲ ಜನರೂ, ಎಲ್ಲ ಸಂದರ್ಭಗಳಲ್ಲೂ ಏಕ ರೀತಿಯ ಭಾವನೆ, ಏಕ ರೀತಿ ಚಟುವಟಿಕೆಗಳನ್ನು ಹೊಂದಿರುವುದಿಲ್ಲ. ಆದರೂ ಒಬ್ಬರ ಚಟುವಟಿಕೆ ಮತ್ತೊಬ್ಬರನ್ನು ಪ್ರಭಾವಗೊಳಿಸುತ್ತದೆ. ಇವೆಲ್ಲ ಹೇಗೆ ಹುಟ್ಟಿಕೊಂಡವು ಎಂಬುದೇ ಪ್ರಶ್ನೆ. ಇದರ ಹುಟ್ಟಿನಲ್ಲಿ ಕಾಲ, ಪ್ರದೇಶ, ಇದರ ನಾನಾ ಹಂತಗಳು ಮತ್ತು ಇದನ್ನು ಪತ್ತೆ ಮಾಡಲು ಮಾಡಿದ ಪ್ರಯತ್ನಗಳಾವುವು ಎಂಬುದನ್ನು ನಾವು ಅಭ್ಯಸಿಸಬೇಕು.

ಇತಿಹಾಸಕಾರನು ದತ್ತಾಂಶಗಳನ್ನು ಸಂಕೀರ್ಣವಾಗಿ ಆಸಕ್ತಿಯನ್ನು ಹುಟ್ಟಿಸುವಂತೆ, ಒಂದನ್ನೊಂದು ಸಕಾರಣವಾ ಹಿಂಬಾಲಿಸುವಂತೆ ಜೋಡಿಸಬೇಕು. ಇದರಲ್ಲಿ ಇದು ದೊಡ್ಡ ವಿಷಯ (ಮಹತ್ತರ), ಇದು ಅಲ್ಪ ಎಂಬ ವಿಂಗಡನೆಗೆ ಹೋಗಬಾರದ ಪ್ರತಿಯೊಂದು ಘಟನೆಯೂ ಒಂದು ಬೀಜದಂತೆ ನಿಗೂಢವಾಗಿದ್ದು ಸಂದರ್ಭ ದೊರೆತಾಗ ಬೆಳೆದು ಮಹತ್ತರವಾಗುತ್ತದೆ. ಎಂಟ ಹೆನ್ರಿಯು ತನ್ನ ಮೂರನೆ ಮದುವೆಗೆ ಆನಿಬೋನಳನ್ನು ಚುನಾಯಿಸಿದ್ದು ಒಂದು ಮಾಮೂಲು ವಿಷಯವಾಗಿತ್ತಾದರೂ ಅದರಿಂ ಇಂಗ್ಲೆಂಡಿನ ಇತಿಹಾಸದಲ್ಲಿ ಮಹತ್ತರ ಬದಲಾವಣೆಗೆ ಕಾರಣವಾಯಿತು. ಇಂಗ್ಲೆಂಡಿನಲ್ಲಿ ಮತ ಸುಧಾರಣಾ ಕ್ರಮದಿಂದ ಪ್ರಾಟೆಸ್ಟೆಂಟ ಮತ್ತು ಪ್ರಾಬಲ್ಯಕ್ಕೆ ಬರಲು ಕಾರಣವಾಯಿತು. ಗಾಂಧೀಜಿಯವರು ದಂಡಿಯಲ್ಲಿ ಸರ್ಕಾರದ ಆಜ್ಞೆ ವಿರೋಧಿಸಿ ಉಪ್ಪಿನ ಸತ್ಯಾಗ್ರಹ ನಡೆಸಿದ್ದು ಭಾರತದ ಇತಿಹಾಸವನ್ನು ಬದಲಾಯಿಸುವ ದೊಡ್ಡ ಘಟನೆಯಾಯಿತು. ಹೀಗೆ ಯೂರೋಪಿನ ಕಲಾ ಮಾದರಿಯಲ್ಲಿ ರ್ಯಾಫೇಲ್ ಮೈಕಲ್ ಎಂಜಿಲೋಗಳ ಸ್ವಪ್ರಯತ್ನ, ಮತ್ತು ತಂದ ಬದಲಾವಣೆಯಿಂದ ಕಲಾ ಪರಂಪರೆಯಲ್ಲಿ ಭಾರಿ ಬದಲಾವಣೆಗಳಾದವು ಅಕ್ಬರ್, ಬಾಬರ್, ಮಾರ್ಟಿನ್ ಲೂಥರ್, ನಾನಕ್, ಶಿವಾಜಿ, ನಿಪೋಲಿಯನ್, ಚರ್ಚಿಲ್ಲರ ಆಡಳಿತ ಪದ್ಧತಿಗಳು, ಸೇನಾ ಚಾತುರ್ಯ ದಿಟ್ಟತನಗಳು ಮನುಷ್ಯ ಸಮುದಾಯದಲ್ಲಿ ಮುಖ್ಯ ಘಟನೆಗಳನ್ನು ತಂದವು. ಹೀಗೆ ಸಂಯೋಜನಾ ಕಾರ್ಯದಲ್ಲಿ ಬಹಳ ಚುರುಕಾ ಮತ್ತು ಬುದ್ಧಿವಂತಿಕೆಯಿಂದ ತಿಳಿದ ವಿಷಯಗಳನ್ನು ಸೇರಿಸಿಕೊಳ್ಳಬೇಕಾಗುತ್ತದೆ. ತಿಳಿದ ವಿಷಯಗಳ ಪರಸ್ಪರ ಸಂಬಂಧವನ್ನು ಅವಲೋಕಿಸಬೇಕಾಗುತ್ತದೆ. ಈ ಕ್ರಮದಲ್ಲಿ 'ನಿಂತು ಹೊರಡಿ' ಎಂಬ ಘೋಷಣೆ ಬಹಳ ಸಹಾಯಕವಾಗುತ್ತದೆ. ಇದರಿಂದ ಪ್ರ ಹಂತದಲ್ಲೂ 'ಘಟ್ಟಿತನ' ಬರುತ್ತದೆ. ಇತಿಹಾಸದ ಬೆಳವಣಿಗೆ 'ಒಂದು ತಾಳಬದ್ಧವಾದ ನಡವಳಿಕೆ' ಎಂಬ ಉಕ್ತಿಯಿದೆ. ಇತಿಹಾಸಕಾರನ ಈ ತಾಳಬದ್ಧತೆ ಎಲ್ಲಿ ಹೇಗೆ ಆಯಿತೆಂದು ಪತ್ತೆ ಮಾಡಬೇಕು. ಇದನ್ನು ಸಂಯೋಜನಾತ್ಮಕವಾಗಿರಬೇಕು. ಹೀಗೆ ದಾಖಲೆಗಳಲ್ಲಿಯೇ ಇವುಗಳ ಮೂಲವನ್ನು ಪತ್ತೆಹಚ್ಚಿ ಅದರ ಸತ್ಯ ಅಥವಾ ಭದ್ರತೆಯನ್ನು ತೀರ್ಮಾನಿಸಿ ಅದನ್ನು ಯೋಗ್ಯ ಸ್ಥಳದಲ್ಲಿ ಸ್ಥಾಪಿಸಬೇಕು. ಆದರೆ ಇವೆಲ್ಲವೂ ಮನಸ್ಸಿನ ಕ್ರಿಯೆಗಳು ಆದರೆ ಸುಸಂಗತಿಗಳ ಬುದ್ಧಿವಂತ ಜೋಡಣೆ ಇದಾಗಿದೆ.

ಹೀಗೆ ಇತಿಹಾಸಿಕ ನಿಬಂಧನೆಯ ತಯಾರಿಕೆಯಲ್ಲಿ ಕ್ರಮಬದ್ಧವಾಗಿ ಮುಂದುವರೆಯಲು, ಸರಿಯಾದ ವಿಷಯ ಚುನಾಯಿಸುವುದು. ಈಗ ದೊರಕಿರುವ ವಿಷಯಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಮುಂದೆ ನಡೆಯಬೇಕಾದ ವಿಷಯದ ಬಗ್ಗೆ ಯೋಚಿಸಿ, ರೂಪುರೇಷೆಗಳನ್ನು ತಯಾರಿಸಿ, ನಡೆದ ಕಾಲದ ಘಟನೆಗಳನ್ನು ಆ ಕಾಲದ ರಚನೆಗಳಿಂದ ತಿಳಿದು, ಕಣ್ಣಾರೆ ಕಂಡವ ದಾಖಲೆಗಳನ್ನು ಓದಿ, ಅಲ್ಲಲ್ಲಿ ಬರುವ 'ಖೋಟಾ' ವಿಷಯಗಳನ್ನು ತೆಗೆದು ಹಾಕಿ, ಅಸತ್ಯಗಳನ್ನು ತ್ಯಜಿಸಿ, ತನ್ನ ನಿಬಂಧನೆಯನ್ನು ರೂಪಿಸಬೇಕು. ಇದನ್ನು ಆಂತರಿಕ ಮತ್ತು ಬಾಹ್ಯ ವಿಮರ್ಶೆಗೆ ಗುರಿಪಡಿಸಿ ಸತ್ಯ ಸ್ಥಾಪಿಸಬೇಕು. ಹೀಗೆ ಸಂಯೋಜನೆಯ ಕಾರ ಮುಗಿಯುತ್ತದೆ. ಇದು ಸತ್ಯಾನ್ವೇಷಣೆಯ ಪ್ರಥಮ ಘಟ್ಟ ಇದಾದ ನಂತರವೇ ಇದರ ಮತ್ತೆರಡು ಮುಖಗಳಾದ ರಚನಾತ್ಮಕ ವಿಚಾ ಶೀಲತೆ ಮತ್ತು ಸಮಂಜಸ ಸಾಮಾನ್ಯೀಕರಣದ ಕಾರ್ಯರಂಭವಾಗುತ್ತವೆ. ಹೀಗೆ ಸಂಯೋಜನಾ ಕಾರ್ಯವೇ ಇತರ ಕಾರ್ಯಗಳ ಬುನಾದಿಯಾಗಿದೆ.

## 9.4 ರಚನಾತ್ಮಕ ಸಮರ್ಥನೆ

ರಚನಾತ್ಮಕ ವಿಚಾರ ಶೀಲತೆಯು ಸಂಯೋಜನಾ ಕಾರ್ಯದ ಒಂದು ಮುಖ್ಯ ಭಾಗವಾಗಿದೆ. ಸಂಶೋಧನಾ ಕಾರ್ಯದಲ್ಲಿ ಬಿಟ್ಟು ಹೋಗಿರುವ ಖಾಲಿ ಜಾಗಗಳನ್ನು ಭರ್ತಿ ಮಾಡುವುದೇ ಇದರ ಮುಖ್ಯ ಉದ್ದೇಶವಾಗಿದೆ. ಇತಿಹಾಸ ಸಂಶೋಧನೆಯಲ್ಲಿ ನಾನಾ ಮೂಲಗಳಿಂದ ವಿಷಯ ಸಂಗ್ರಹವಾಗುತ್ತಿರುವಾಗ ಅವುಗಳಲ್ಲಿ ಕೆಲವೆಡೆ ಅಪೂರ್ಣತೆ ಉಂಟಾದಾಗ ಇಂಥ ಕೊರತೆಗಳಾಗುವುದು ತೀರ ಸಹಜವಾಗಿದೆ. ಇತಿಹಾಸದಲ್ಲಿ ಎಷ್ಟೋ ಘಟನೆಗಳ ಕಾರಣಗಳು ರಹಸ್ಯವಾಗುಳಿಯುತ್ತವೆ. ನಮ್ಮ ಎದುರಿಗೆ ನಡೆದ ಘಟನೆಗಳ ವಿಚಾರದಲ್ಲಿ ಇಂಥ ಅಪೂರ್ಣತೆ ಇರುವಾಗ ಹಿಂದಿನ ಎಷ್ಟೋ ನೂರಾರು, ಸಾವಿರಾರು ವರ್ಷಗಳ ಹಿಂದೆ ನಡೆದ ಘಟನೆಗಳ ಬಗ್ಗೆ ಇಂಥ ನ್ಯೂನತೆಗಳಿರುವುದು ವಾಸ್ತವ, ವಿಜ್ಞಾನದಲ್ಲಿ ಈ ರೀತಿಯಾದಿಲ್ಲ ಪುನಃ ಪ್ರಯೋಗ ಮಾಡಿ ಸಮಸ್ಯೆಯ ಪರಿಹಾರ ಮಾಡಿಕೊಳ್ಳಬಹುದಾಗಿದೆ. ಇತಿಹಾಸದಲ್ಲಿ ಇದು ಸಾಧ್ಯವಿಲ್ಲವಾದ್ದರಿಂದ ಅದಕ್ಕೆ ಉಳಿದಿರುವ ಮಾರ್ಗವೆಂದರೆ ರಚನಾತ್ಮಕ ವಿಚಾರಶೀಲತೆ.

ಈ ರಚನಾತ್ಮಕ ವಿಚಾರ ಶೀಲತೆಯ ವ್ಯವಧಾನದಲ್ಲಿ, ಬೇರೆಲ್ಲ ಮಾರ್ಗಗಳಿಂದ ವಿಷಯದ ಬಗೆ ಹರಿಯದಿದ್ದಾಗ ತರ್ಕಶಾಸ್ತ್ರ ಒಪ್ಪಲ್ಪಟ್ಟಿರುವ ಕಾರಣ ಪೂರ್ವ ಊಹೆ ಮಾಡಬೇಕಾಗಿದೆ. ತಿಳಿದು ಬಂದಿರುವ ಎಲ್ಲ ವಿಷಯಗಳನ್ನು ದಾಖಲೆಗಳ ಮೂಲಕ ಸಂಗ್ರಹಿಸಿ

ನಂತರ ಸರಿಯಾದ ತೀರ್ಮಾನಕ್ಕೆ ಬಂದು, ಕೊನೆಯದಾಗಿ ಹೊಸ ವಿಷಯಗಳ ಕಡೆ ಗಮನವಿಡುತ್ತಾನೆ. ಈ ಹಂತದಲ್ಲಿ ತರ್ಕದ ಊಹಾ ಪದ್ಧತಿಗಳನ್ನು ಉಪಯೋಗಿಸುತ್ತಾನೆ. ಊಹೆಯು ಸರಿಯಾಗಿ ನಡೆದಿದ್ದಲ್ಲಿ ತೀರ್ಮಾನಗಳೂ ಸರಿಯಾಗಿರುತ್ತವೆ. ಕಾರಣಪೂರ್ವ ಊಹೆಗಳ ಪರಿಣಾಮವಾಗಿ ತರ್ಕದಲ್ಲಿ ಬರುವ "ಮತ್ತೊಂದನ್ನು ಅನುಮಾನಿಸುವುದಕ್ಕೆ ಹಿಂದಿನ ಆಧಾರ ವಚನ" (ಪ್ರಿಮೈಸೆಸ್) ಗಳನ್ನು ಅವಲಂಬಿಸಬೇಕಾಗುತ್ತದೆ. ಮೊದಲ ಆಧಾರವನ್ನು ಸರ್ವಸಮ್ಮತ ಸರ್ವಕಾಲಿಕವಾದ ವಿಷಯಗಳನ್ನೊಳಗೊಂಡಿರುವಂತೆ ಎರಡನೆಯದನ್ನು ಈ ಕೊರತೆಯ ಸಂದರ್ಭಕ್ಕೆ ಆದಷ್ಟು ಸಹಾಯಕವಾಗುವಂತೆ ಊಹೆಗಳನ್ನು ಮಾಡಿಕೊಳ್ಳಬೇಕು. ಈ ತರ್ಕಬದ್ಧ ಊಹೆಗಳಲ್ಲಿ ಯಾವುದೇ ದಾಖಲೆ ರಹಿತವಾಗಿರುವುದರಿಂದ ಅವುಗಳನ್ನು ಆದಷ್ಟು ಮಟ್ಟಿಗೆ ಮನುಷ್ಯ ಸ್ವಭಾವದ ಚೌಕಟ್ಟಿನಲ್ಲಿರುವಂತೆ ಸೂಚಿಸಬೇಕು. ಮುಂದಾಗುವ ತಪ್ಪುಗಳನ್ನು ತಪ್ಪಿಸಲು ಕೆಲವು ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಬೇಕು.

(1) ಇವುಗಳಲ್ಲಿ ವಿಶ್ಲೇಷಣೆಯ (ಅನಾಲಿಸಸ್) ನಿಯಮಗಳಾದ ವಿಮರ್ಶೆ, ಪರೀಕ್ಷೆ, ಉದಾಹರಣೆ. ದೃಗೋಚರದಿಂದ ಮಾಡುವ ತೀರ್ಮಾನಗಳು ಮುಂತಾದ ಮಾರ್ಗಗಳನ್ನು ಬಿಟ್ಟು ಯೋಜನಾಬದ್ಧವಾಧ ವಿಚಾರಲಹರಿ, ತರ್ಕ, ಇತರ ವಿಷಯಗಳಿಂದ ಎರವಲು ಪಡೆಯುವುದು. ಮುಂತಾದ ಮಾರ್ಗಗಳನ್ನು ಅನುಸರಿಸಬೇಕು. (2) ರಚನಾಕಾರನು ಹೇಳದಿರುವುದನ್ನು ಸೇರಿಸಬಾರದು, ಅಥವಾ ದಾಖಲೆಗಳಿಂದ ಊಹಿಸಬೇಕೆ ಹೊರತು ಆದ್ದರಿಂದ ಬಾಹ್ಯವಾದ ವಿಚಾರಗಳನ್ನು ಸೇರಿಸಬಾರದು ಅಥವಾ ಹೇಳಿರುವ ವಿಷಯವನ್ನು ತನ್ನ ಅನುಕೂಲಕ್ಕೆ ತಕ್ಕಂತೆ ತಿರುಚಬಾರದು ಅಥವಾ ಪತ್ರದ ವಿಷಯದಲ್ಲಿನ ಕೊರತೆಗಳನ್ನು ವಿಸ್ತರಿಸಬಾರದು. (3) ದಾಖಲೆಗಳ ನೆರವಾದ ಪರೀಕ್ಷೆಗಳಿಂದ ದೊರಕುವ ವಿಷಯಗಳನ್ನು ವಿಚಾರ ಸೇರಿಸಬೇಕಾಗಿ ಬಂದಾಗ ಅದು ಹೇಗೆ ಸೇರ್ಪಡೆಯಾಯಿತೆಂದು ತಿಳಿಸಬೇಕು. (4) ಯೋಚಿಸಲಸಾಧ್ಯವಾದ ತೀರ್ಮಾನಗಳನ್ನು ಮಾಡಬಾರದು. (5) ಅನುಮಾನಗಳಿದ್ದಾಗ ತೀರ್ಮಾನಗಳನ್ನೂ ಬಿಡಬೇಕು. (6) ಊಹೆಗಳಿಂದಲೇ ದಾಖಲೆಯ ತುಂಬಿದ್ದರೆ ರಚನಾತ್ಮಕ ವಿಚಾರಶೀಲತೆಯ ಮಾರ್ಗವನ್ನು ಉಪಯೋಗಿಸಲೇಬಾರದು. ಅನುಮಾನಗಳಿದ್ದ ಕಡೆ ತಮ್ಮ ಅಭಿಪ್ರಾಯಗಳನ್ನು ನಿರ್ಧಾರದಲ್ಲಿ ತುರುಕಬಾರದು.

ವಿಚಾರಶೀಲತೆಯಲ್ಲೇ ಎರಡು ಮಾರ್ಗಗಳಿವೆ. ಮೊದಲನೆಯದು ನಕಾರಾತ್ಮಕ ವಿವೇಚನೆ (ನೆಗೇಟಿವ್ ರೀಸನಿಂಗ್) ಎರಡನೆಯದು ವಾಸ್ತವಾಂಶ ವಿವೇಚನೆ (ಪಾಸಿಟಿವ್ ರೀಸನಿಂಗ್) ನಕಾರಾತ್ಮಕ ವಿವೇಚನೆಯನ್ನು "ಮೌನದಿಂದ ತರ್ಕ" (ಆರ್ಗ್ಯೂಮೆಂಟ್ ಫ್ರಮ್ ಸೈಲೆನ್ಸ್) ಎಂದೂ ಕರೆಯಲಾಗುತ್ತದೆ. ದಾಖಲೆಯಲ್ಲಿಲ್ಲದ ಯಾವುದೋ ಒಂದು ವಿಷಯದ ಬಗ್ಗೆ ನಾವು ತರ್ಕಬದ್ಧವಾಗಿ ಊಹೆ ಮಾಡುತ್ತೇವೆ. ಈ ಕಾರ್ಯ ಮನುಷ್ಯನ ಸ್ವಭಾವವನ್ನನುಸರಿಸುವುದಾಗಿದೆ. ಎಷ್ಟೋ ಜೀವನದ ಎಷ್ಟೋ ಸಂದರ್ಭಗಳಲ್ಲಿ ಮೌನವು ಸಮ್ಮತಿಯನ್ನು ಸೂಚಿಸುವಂತೆ ಇತಿಹಾಸದ ದಾಖಲೆಗಳಲ್ಲಿ ಹೇಳಿರದ ವಿಷಯಗಳು, ಘಟನೆಗಳೂ ಇದ್ದಿರಲಾರವು ಇದಕ್ಕೂ ಕಾರಣಗಳಿರುತ್ತವೆ. ಕಾಲದ ಹಾವಳಿ, ಧ್ವಂಸ ಪರಿಣಾಮವಾಗಿ ನಮಗೆ ದಾಖಲೆಗಳು ನಾಪತ್ತೆಯಾಗಿರಬಾರದು ಅಥವಾ ಗಮನಕ್ಕೆ ಬಾರದಿರಬಹುದು ಅಥವಾ ಅಜಾಗರೂಕತೆಯಿಂದಲೋ ಉದಾಸೀನತೆಯಿಂದಲೋ ದಾಖಲೆಗಾರನು ಬಿಟ್ಟಿರಲೂಬಹುದು. ಅಥವಾ ದಾಖಲೆಗಾರನು ಅದನ್ನು ಬಿಡಬೇಕೆಂಬ ಒತ್ತಾಯವೂ ಇರಬಹುದು. ಇದರಿಂದ ಸ್ಥೂಲವಾಗಿ ಹೇಳಬಹುದಾದರೆ ಪುರಾತನ ಅಥವಾ ಮಧ್ಯಕಾಲದ ಇತಿಹಾಸದಲ್ಲಿ ಈ ರಚನಾತ್ಮಕ ವಿಚಾರಶೀಲತೆ ಹೆಚ್ಚು ಪ್ರಯೋಜನವಾಗಲಾರದು ಮತ್ತು ಆಧುನಿಕ ಕಾಲದ ಇತಿಹಾಸದಲ್ಲಿ ಇದರಿಂದ ಸ್ವಲ್ಪ ಉಪಯೋಗವಾಗಬಹುದು. ಇತಿಹಾಸದ ಬಹುಪಾಲಿನ ವಿಷಯಗಳಾದ ಕಾಳಗಗಳು, ಯುದ್ಧಗಳು, ಸೈನ್ಯ ಕಾರ್ಯಾಚರಣೆ, ಕ್ರಾಂತಿ ಮತ್ತು ಸುಧಾರಣೆ ಮುಂತಾದ ದೀರ್ಘಕಾಲದ ಘಟನೆಯನ್ನು ಬಚ್ಚಿಡಲು ಸಾಧ್ಯವಿಲ್ಲ. ಇಂಥ ವಿಷಯಗಳಲ್ಲಿ ಬಿಟ್ಟುಹೋಗಿರಬಹುದಾದ ವಿಷಯಗಳನ್ನು ನಕಾರಾತ್ಮಕ ವಿಧಾನಗಳಿಂದ ಭರ್ತಿ ಮಾಡಲು ಸಾಧ್ಯತೆಗಳಿವೆ. ಆದರೆ ಸರ್ಕಾರದ ಕೆಲವು ರಹಸ್ಯ ದಾಖಲೆಗಳು, ಪತ್ರಗಳು, ಸೂಚನೆಗಳು ರಹಸ್ಯಗಳಾಗಿಯೇ ಇರುತ್ತವೆ. ಆದ್ದರಿಂದ ಅವುಗಳಿರಲಿಲ್ಲವೆಂದೇ ಸಾಧಿಸಲಾಗದ್ದು ಇನ್ನೂ ಕೆಲವು ಕಾರಣಗಳಿಗಾಗಿ ಉದ್ದಿಶ್ಯವಾಗಿಯೋ ಅನಪೇಕ್ಷಿತವಾಗಿ ಕೆಲವು ದಾಖಲೆಗಳಿರುವುದಿಲ್ಲ. ಸರ್ಕಾರದ ಆದೇಶವೇ ಹಾಗಿರಬಹುದು ಮತ್ತು ರಕ್ಷಣಾ ವ್ಯವಸ್ಥೆ, ಪರದೇಶ ವ್ಯವಹಾರಗಳು ಸಾರ್ವಜನಿಕವಾಗುವುದಿಲ್ಲ. ಇದೇ ರೀತಿ ಸಾರ್ವಜನಿಕರು ಸರ್ಕಾರದ ಬಗ್ಗೆ ಮಾಡಿದ ಟೀಕೆಗಳು, ದೂರುಗಳು, ಸರ್ಕಾರದ ತಪ್ಪುಗಳು, ಕೊರತೆಗಳು, ಬೆಳಕು ಕಾಣುವುದಿಲ್ಲ. ಇಲ್ಲಿ ಇತಿಹಾಸಕಾರನು ಶ್ರಮವಹಿಸಿದೆ ಯೋಚಿಸದೇ ಇದ್ದು, ಆದೇಶದ ಆಡಳಿತವು ಉತ್ತಮ ಸ್ಥಿತಿಯಲ್ಲಿತ್ತೆಂದು ದಾಖಲಿಸಬಹುದು. ಇಂಥ ತೀರ್ಮಾನಗಳಿಂದ ಇತಿಹಾಸದ ಸತ್ಯತೆಗೆ ಧಕ್ಕೆ ಬರುತ್ತದೆ. ರಚನಾತ್ಮಕ ವಿಚಾರಶೀಲತೆಯ ನಕಾರಾತ್ಮಕ ತರ್ಕ ಇಂಥ ಸಂದರ್ಭಗಳಲ್ಲಿ ಉಪಯೋಗಕ್ಕೆ ಬರುತ್ತದೆ.

ವಾಸ್ತವಾಂಶ ವಿವೇಚನೆಯು ಎರಡನೇ ಮಾರ್ಗವಾಗಿದೆ. ಇದು ಹೆಚ್ಚು ಪ್ರಯೋಜನಕಾರಿಯಾಗಿ ಕಂಡು ಬಂದಿದೆ. ಅನೇಕ ವಿಷಯಗಳು ದಾಖಲೆಯಿಂದ ತಿಳಿದು ಬರುತ್ತದೆ. ಅದರಲ್ಲಿ ಕಂಡು ಬರೆದಿರುವ ಅನೇಕ ವಿಷಯಗಳನ್ನು ಊಹೆ ಮಾಡಬೇಕಾಗಿ ತಿಳಿಯಬೇಕಾಗಿದೆ. ಈ ಸಂದರ್ಭದಲ್ಲಿ ವಾಸ್ತವಾಂಶ ವಿವೇಚನೆ ಸಹಾಯಕ್ಕೆ ಬರುತ್ತದೆ. ಇತಿಹಾಸದ ಮೂಲ ನಿಯಮವನ್ನನುಸರಿಸಿ ಹೋಲಿಕೆ (ಸಾದೃಶ್ಯ)ಯು ಇಂದಿನ ಮತ್ತು ಹಿಂದಿನ ವಿಷಯಗಳನ್ನು ವಿಶದಪಡಿಸುತ್ತದೆ. ಉದಾಹರಣೆಗೆ ಹಿಂದಿನ ಒಂದು ಅಭಿವೃದ್ಧಿ ಹೊಂದಿದ ಸಮಾಜದಲ್ಲಿ ಅದರ ನಾನಾ ಮುಖ್ಯ ಕಾರ್ಯಕ್ರಮಗಳ ಪರಿಚಯ, ಆರ್ಥಿಕ, ಔದ್ಯೋಗಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ವಿಚಾರಗಳ ಬಗ್ಗೆ ಸಾಕಷ್ಟು ಪುರಾವೆಗಳಿದ್ದು, ಮತ ಧರ್ಮಾಚರಣೆ ಮತ್ತು ಸಹನೆಗಳ ಬಗ್ಗೆ ಏನೂ ತಿಳಿಯದಿದ್ದರೂ, ಅವು ಸಹ ಸುವ್ಯವಸ್ಥಿತವಾಗಿತ್ತೆಂದು ಊಹಿಸಬೇಕಾಗಿದೆ. ಏಕೆಂದರೆ ಅವು ಇಲ್ಲದೆ ಶಾಂತಿ ಅಭಿವೃದ್ಧಿಗಳು ಸಾಧ್ಯವಾಗಿರಲಾರವು. ಹೀಗೆ ಕಾರಣ ಪರಿಣಾಮಗಳು ಒಂದನ್ನೊಂದು ಹೊಂದಿಕೊಂಡಿರುತ್ತವೆಯಾದ್ದರಿಂದ ಊಹೆಯು ತಪ್ಪಾಗಲಾರದು. ಒಂದು ವರ್ಗದ ಪರಿಚಯದಿಂದ ಮತ್ತೊಂದು ವರ್ಗದ ಪರಿಚಯವನ್ನು ವಾಸ್ತವಾಂಶ ವಿವೇಚನೆಯಿಂದ ಅರಿಯಬಹುದಾಗಿದೆ. ಇದರಲ್ಲೂ ಕೆಲವು ಎಚ್ಚರಿಕೆಗಳನ್ನು ಗಮನದಲ್ಲಿಟ್ಟಿರಬೇಕು. ಮೊದಲನೆಯದಾಗಿ ಎಲ್ಲವೂ ಮಾನವನ ಅನುಭವದ ಮಟ್ಟಕ್ಕೊಳಪಟ್ಟಿರಬೇಕು. ಒಂದು ನೈಜವಾದ ಒಪ್ಪಲಾದ, ದಾಖಲಾದ ವಿಷಯದಿಂದ ಮತ್ತೊಂದು ಅದೇ ರೀತಿಯ ವಿಷಯವನ್ನು ಸಕಾರಣವಾಗಿ ಊಹಿಸಬಹುದಾಗಿದೆ. ಆದರೆ ಮೂಲದ ವಿಷಯವೇ ಅಸಾಧುವಾಗಿ, ಅಸತ್ಯವಾಗಿದ್ದರೆ ಅದನ್ನು ಹೋಲಿಸಿ ಹೊರಗೆಡುವ ಊಹೆಯೂ ನಿಜವಾಗಿರುವುದಿಲ್ಲ. ಮೂಲವು ಮತ್ತು ಊಹೆ ಮಾಡಿರುವ ವಿಷಯವೂ ಯಾವುದಾದರೊಂದು ರೀತಿಯಲ್ಲಿ ಸಂಬಂಧಪಟ್ಟಿರಬೇಕು, ನಿಜಕ್ಕೆ ನಿಜ ಬೆಸೆಯಬಹುದೇ ಹೊರತು ಸುಳ್ಳು ಸೇರಲಾರದು. ಎರಡನೆಯದಾಗಿ ಯಾವುದಾದರೊಂದು ವಿಷಯದ ಮೇಲೆ ಸಂಪೂರ್ಣ ಮಾಹಿತಿ ಸಿಕ್ಕಿದ ನಂತರವೇ ಯಾವುದೊಂದು ಉದ್ದಿಷ್ಟ ವಿಷಯದ ಮೇಲೆ ವಾಸ್ತವಾಂಶ ವಿವೇಚನೆ ಆರಂಭಿಸಬೇಕು ಯಾವ ಒಂದು ವಿಷಯದ ಮೇಲೆ ಪೂರ್ಣ ವಿಷಯ ತಿಳಿಯದೆ, ಮುಂದಿನ ಊಹೆಗೆ ತೊಡಗಬಾರದು. ಉದಾಹರಣೆಗೆ ಜಾರ್ಜ್ ಟೌನ್, ವೆಲ್ಲಿಂಗ್‌ಟನ್ ಐರ್ಲೆಂಡ್ ಎಂಬ ಹೆಸರನ್ನು ಕೇಳಿದಾಕ್ಷಣ ಅವು ಇಂಗ್ಲೆಂಡಿನಲ್ಲೋ ಅಮೆರಿಕಾದಲ್ಲೋ ಇವೆ ಎಂಬ ಆತುರದ ನಿರ್ಣಯಕ್ಕೆ ಬರಬಾರದಷ್ಟೆ. ಇವು ಊಹೆಗಳಾಗಬಹುದಲ್ಲದೆ ಸತ್ಯಾಂಶಗಳಾಗಿರಲಾರವು. ಊಹೆಗಳು ಒಂದು ಕತ್ತಿಯ ಎರಡು ಹರಿತಬಾಯಿಗಳಿದ್ದಂತೆ ಇರುವುದರಿಂದ ಜಾಗೂರೂಕತೆಯಿಂದ ಉಪಯೋಗಿಸಬೇಕು. ಇತಿಹಾಸದ ಪುನರ್ರಚನೆಯಲ್ಲಿ ಅಲ್ಲಲ್ಲಿ ಬಿಟ್ಟು ಹೋಗಿರುವ ಘಟನೆ, ಸಂಧರ್ಭಗಳನ್ನು ಯೋಗ್ಯವಾದ ಊಹೆಗಳಿಂದ ಭರ್ತಿಮಾಡಬಹುದಾಗಿದೆ. ಇದು ರಚನಾತ್ಮಕ ವಿಚಾರ ಶೀಲತೆಯಿಂದ ಸಾಧ್ಯ.

## 9.5 ಸಮಂಜಸ ಸಾಮಾನ್ಯೀಕರಣ

ಸಂಯೋಜನಾ ಕಾರ್ಯದಲ್ಲಿ ಮೂರನೆ ಮುಖ್ಯವಾದ ಚಟುವಟಿಕೆ ಎಂದರೆ ಸಮಂಜಸ ಸಾಮಾನ್ಯೀಕರಣ, ಇದನ್ನೇ ತರ್ಕಬದ್ಧ ಅಥವಾ ಸೂತ್ರವನ್ನು ನಿಯತಗೊಳಿಸುವ ಕಾರ್ಯವೆನ್ನಬಹುದು. ಇದು ಬಹಳ ತ್ರಾಸದಾಯಕವಾದರೂ ಬಹಳ ಮುಖ್ಯವಾದದ್ದಾಗಿದೆ. ಇದೇ ಸಂಶೋಧನಾ ಕಾರ್ಯದ ಮುಕುಟ. ಇತರ ಎಲ್ಲ ಕಾರ್ಯಗಳನ್ನೂ ಸಂಯೋಜಿಸಿ ಮುಖ್ಯ ಫಲಿತಾಂಶವನ್ನೊದಗಿಸುವುದಾಗಿದೆ. ಇದು ನಿಬಂಧ ಅಥವಾ ವಿಷಯ ಪ್ರತಿಪಾದನೆಯನ್ನು ಸಕಾರಣವಾಗಿ, ಖಂಡಿತವಾಗಿ ಒಂದು ಪ್ರಕಾರದಲ್ಲಿ ಹೇಳುವುದಾಗಿದೆ. ಇದನ್ನೇ ಉಪಸಂಹಾರ, ಮುಕ್ತಾಯ, ಇಡೀ ಕಾರ್ಯದ ಸಾರ, ಅಥವಾ ಪ್ರಶಂಸೆ ಎನ್ನಬಹುದು. ಇಂಥ ಸೂತ್ರಗಳಿಂದಲೇ ವಿಜ್ಞಾನವು ಇತಿಹಾಸದ ಸರಿಸಮಾನವಾಗಿ ಪ್ರತಿಷ್ಠಿತವಾಗಿ ನಿಲ್ಲಲು ಅವಕಾಶವಾಗಿದೆ.

ಇತಿಹಾಸವು ವಿಜ್ಞಾನದ ಪಂಕ್ತಿಯಲ್ಲಿರಲು ತನಗೆ ದೊರಕುವ ಎಲ್ಲ ಅಸಿದ್ಧ ಸಂಗತಿಗಳನ್ನು ಕೂಡಿಸಿ, ಪರಿಷ್ಕರಿಸಿ ಸಣ್ಣ ವಿಭಾಗಗಳಾಗಿ ವಿಂಗಡಿಸಿ ಸೂತ್ರಗಳಾಗಿ ಪರಿವರ್ತನೆಗಳಾಗಲು ಸಿದ್ಧಪಡಿಸಬೇಕು. ಹೀಗೆ ತಯಾರಾದ ವಿಷಯವು ಕಾರ್ಯಾಚರಣೆಗೆ ಸಿದ್ಧವಾಗುತ್ತದೆ. ಇದು ತತ್ವಗಳ ಸಾರದಂತೆ ಪರಿವರ್ತನೆಯಾಗುತ್ತದೆ. ತನಗೆ ದೊರಕಿರುವ ವಿಪುಲ ಸಾಮಗ್ರಿಗಳ ಆಂತರಿಕ ಸಂಬಂಧವನ್ನು ತಿಳಿಸಬೇಕು. ಇತರ ವಿಜ್ಞಾನಗಳಂತೆ ತನ್ನಲ್ಲಿ ಕಂಡುಬಂದ ಅಸಾಧಾರಣ ವಿಷಯಗಳನ್ನು ಒಂದು ಸೂತ್ರಕ್ಕೆ ಒಳಪಡಿಸಬೇಕು.

ಈ ಸೂತ್ರವು ಅತಿ ಸೂಕ್ಷ್ಮವೂ ಅತಿ ಸ್ಥೂಲವು ಆಗಿರದೆ, ಯಾವ ಅನಾವಶ್ಯಕವನ್ನೂ ಸೇರಿಸದೇ ಯಾವ ಮುಖ್ಯವಾದದ್ದನ್ನೂ ಬಿಡದೆ, ಯಾವ ಅನುಮಾನಗಳಿಗೂ ಒಳಪಡದೆ ಸ್ಪಷ್ಟವಾಗಿರಬೇಕು. ಇಂಥ ಸೂತ್ರವನ್ನು ಹೇಗೆ ಸಿದ್ಧಪಡಿಸಬೇಕೆಂಬುದು ಮುಂದಿನ ಸಮಸ್ಯೆಯಾಗಿದೆ. ಇತಿಹಾಸದಲ್ಲಿ ಇದನ್ನು ರೂಪಿಸಬೇಕಾದರೆ ಎಲ್ಲ ಸಾಧಾರಣ ವಿಷಯಗಳನ್ನು ಅಪರೂಪದ ವಿಷಯಗಳನ್ನು ಸಂಗ್ರಹಿಸಿ, ಪುನರುಕ್ತಿಗಳನ್ನು ಅಸಂಭವಗಳನ್ನು ತೆಗೆದು ಹಾಕಿ, ವ್ಯಕ್ತಿಗತವಾದ ವಿಷಯಗಳನ್ನು ಪರಿಷ್ಕರಿಸಿ ಅವುಗಳಲ್ಲಿ ಸಾಧಾರಣವಾದ, ನಿರ್ವಿವಾದ, ವಿಷಯಗಳನ್ನು ಮಾತ್ರ ಸೇರಿಸಬೇಕು. ಇದು ಯಾವ ಪ್ರದೇಶ, ಯಾವ ಕಾಲದಲ್ಲಿ, ಎಷ್ಟು ಕಾಲದಲ್ಲಿ ಆಯಿತೆಂದೂ, ಇವುಗಳಿಂದ ಸಮುದಾಯಕ್ಕೂ, ಸಂಘಗಲಿಗೂ ಹೇಗೆ ಉಪಯೋಗವಾಯಿತೆಂದು ತಿಳಿಸಬೇಕು. ಉದಾಹರಣೆಗೆ ಯಾವುದೋ ಒಂದು ಅಭ್ಯಾಸ ಹೇಗೆ ಬೆಳೆಯಿತೆಂದು ಪರಿಚಯಮಾಡಿಕೊಳ್ಳಬೇಕಾಗಿದೆ. ಇದರಿಂದ ಸಾಧಾರಣವಾಗಿ ಅಭ್ಯಾಸಗಳು ಹೇಗೆ ಉದ್ಭವವಾಗುತ್ತವೆ ಎಂದು ತಿಳಿಯಬೇಕು. ಅಭ್ಯಾಸವು ಇದ್ದಕ್ಕಿದ್ದಂತೆ ಪ್ರಾರಂಭವಾಗಿ, ಸಾಧಾರಣವಾಗಿ ಎಲ್ಲರಲ್ಲೂ ಹರಡಿ ಅನುಕರಣದಿಂದ ಸಾಮಾನ್ಯ ಉಪಯೋಗಕ್ಕೆ ಬರುತ್ತದೆ. ಇವು ಸಾಂಪ್ರದಾಯಿಕವಾಗಿ, ವಂಶಪಾರಂಪರ್ಯವಾಗಿಯೂ ಹರಡಿ ಖಾರ್ಯಂ ಆಗಿ ಸಮಾಜದಲ್ಲಿ ಸ್ಥಾನ ಪಡೆಯುತ್ತವೆ. (ಉದಾ. ಸತಿ ಪದ್ಧತಿ, ಬೀಡಿ, ಸಿಗರೆಟ್ ಸೇದುವುದು, ಹೆಂಡ, ಕಾಫಿ ಸೇವನೆ ಇತ್ಯಾದಿ ಅಥವಾ ರಾಜ ಪರಂಪರೆ, ಮಂತ್ರಿ ಪರಂಪರೆ ಇತ್ಯಾದಿ) ಇವುಗಳಲ್ಲಿ ಕೆಲವು ಸಮಾಜಕ್ಕೆ ಹಾನಿ ತರಬಹುದು. ಸರ್ಕಾರದ ಈ ಬಗೆಯ ನಿರೋಧ ಕಾನೂನುಗಳೂ ನಿರುಪಯೋಗವಾಗುತ್ತವೆ. ಇದರ ಬಗ್ಗೆ ಕೆಲವು ನಾಗರೀಕರು ಸರ್ಕಾರವನ್ನು ಬಲವಾಗಿ ಟೀಕಿಸಬಹುದು. ಹೀಗೆ ಮುಂದೆ ಸುಧಾರಣೆಗಳೂ, ತಡೆಗಳೂ ಬರಬಹುದು. ಹೀಗೆ ಒಂದು ಅಭ್ಯಾಸದ ಹುಟ್ಟು, ಬೆಳವಣಿಗೆ, ಪ್ರಸಾರ, ವಿರೋಧ, ಬದಲಾವಣೆ, ಸುಧಾರಣೆ ನಿರ್ಮೂಲನವಾಗುತ್ತದೆ. ಇತಿಹಾಸಕಾರನು ಈ ಹಂತಗಳನ್ನು ಗುರ್ತಿಸುತ್ತಾನೆ. ಅವುಗಳ ಸ್ವಭಾವ ತಿಳಿಯುತ್ತಾನೆ ಮತ್ತು ಅವುಗಳನ್ನು ತಕ್ಕ ಪದಗಳಲ್ಲಿ ವಿವರಿಸುತ್ತಾನೆ. ಇವು ಸಾಧಾರಣ ವಿಷಯಗಳಾಗಿ ಎಲ್ಲ ಕಾಲ ಎಲ್ಲ ಪ್ರದೇಶಗಳಿಗೂ ಅನ್ವಯಿಸುತ್ತವೆ.

ಇದೇ ಸೂತ್ರಗಳನ್ನು ಅಪರೂಪದ ವಿಷಯಗಳಿಗೆ ವ್ಯಕ್ತಿಗಳಿಗೆ ಹೊಂದಿಸಲು ಕಷ್ಟವಾಗುತ್ತದೆ. ಇಂಥ ಸಂದರ್ಭದಲ್ಲಿ ವಿಷಯಗಳು ಅಥವಾ ವ್ಯಕ್ತಿಗಳು ಸಮಾಜದ ಉನ್ನತಿ, ಬದಲಾವಣೆಗೆ ಕಾರಣರಾಗಿದ್ದರೆ ಅಂಥವರು ವಿಷಯ ತಿಳಿಯಬಹುದು. ಅಂಥವರಲ್ಲಿ ಕಲಾಕಾರರು, ವಿಜ್ಞಾನಿಗಳು, ಸೇನಾನಿಗಳು, ಮತ ಪ್ರವರ್ತಕರು, ನಾಯಕರು, ರಾಜಕಾರಣ ಧುರೀಣರು, ದಾರ್ಶನಿಕರು ಮುಂತಾದವರಿರುತ್ತಾರೆ. ಅಂಥವರ ಜೀವನವನ್ನು ಅಧ್ಯಯನಕ್ಕತೆ ಚುನಾಯಿಸಿಕೊಳ್ಳಬಹುದು. ಒಂದು ಸೂತ್ರ ಸಿದ್ಧವಾಗಬೇಕಾದರೆ ಅವರ ಜೀವನ ಮತ್ತು ಗುಣಗಳನ್ನು ವೀಕ್ಷಿಸಬೇಕು. ಇವುಗಳು ಅವನ ವ್ಯಕ್ತಿ ಚಿತ್ರಣಕ್ಕೆ ಅಥವಾ ಅವನ ಮನಸ್ಸು ತಿಳಿಯಲು ಸಹಾಯವಾಗುತ್ತದೆ. ಆದರೂ ಯಾವನೊಬ್ಬ ಮನುಷ್ಯ ಜೀವನವನ್ನು ತಿಳಿಯಲು ಬಹಳ ಕಷ್ಟವಾಗುತ್ತದೆ. ಉದಾಹರಣೆಗೆ ಅಲೆಕ್ಸಾಂಡರ್‌ನ ಜೀವನದ ಬಗ್ಗೆ ಭಿನ್ನವಾದ ವಿಷಯಗಳಿವೆ. ಅಪರೂಪದ ಘಟನೆ ಅಥವಾ ಅಪರೂಪದ ಮನುಷ್ಯನ ವಿಚಾರ ತಿಳಿಯುವುದೂ ಅವಶ್ಯಕ. ಆ ಸಂದರ್ಭದಲ್ಲಿ ಸೂತ್ರ ಮಾಡುವುದೂ ಅವಶ್ಯಕ.

ಒಂದು ಅಸಾಧಾರಣ ಲಕ್ಷಣ (ವ್ಯಕ್ತಿ ಸಂಗತಿ) ವನ್ನು ಕುರಿತು ಮಾಡುವ ಸಾಮಾನ್ಯೀಕರಣದಲ್ಲಿ ನಾವು ನಮಗೆದುರಾಗುವ ಸಮಸ್ಯೆಗಳ ವಿಷಯದಲ್ಲಿ ಎರಡು ವಿಧವಾದ ಸ್ವಾಭಾವಿಕ ಪ್ರಲೋಭನೆಗಳಿಗೆ ಒಳಗಾಗದಂತೆ ಎಚ್ಚರವಹಿಸಬೇಕು. ವ್ಯಕ್ತಿಯ ವಿಚಾರದಲ್ಲಾದರೆ ಅವನು ಪ್ರಖ್ಯಾತನಾಗಿದ್ದರೆ, ಅವನ ಆತ್ಮ ಪ್ರಶಂಸೆಯನ್ನು, ಉನ್ನತ ಹೇಳಿಕೆಗಳನ್ನು ಸುಲಭವಾಗಿ ಒಪ್ಪಬಾರದು. ಅದಲ್ಲದೆ ಅಂಥವನನ್ನು ಇತರ ಊಹಾಮಹಾಪುರುಷರೊಡನೆ ಹೋಲಿಸಿ, ಗಡಿಬಿಡಿ ಮಾಡಿಕೊಳ್ಳಬಾರದು. ಘಟನೆಗಳ ಬಗ್ಗೆ ಸೂತ್ರ ನಿರೂಪಣೆ ಬೇರೆ ರೀತಿಯದ್ದಾಗಿರುತ್ತದೆ. ಅನೇಕ, ಸಣ್ಣ ಸಂಗತಿಗಳೂ ಸೇರಿ ಒಂದು ಸಾಮಾನ್ಯ ನಿರ್ಣಯಕ್ಕೆ ಬರಬೇಕು. ಸಂಗತಿಗಳನ್ನು ಸಂಯೋಜಿಸಿ ಅನುಪಯುಕ್ತವಾದದ್ದನ್ನು ತ್ಯಜಿಸಿ, ಉಳಿದವನ್ನು ಸಂಘಟಿಸಿ ಅವುಗಳ ಸ್ವರೂಪ, ವಿಸ್ತಾರಗಳನ್ನನುಸರಿಸಿ ಹ್ರಸ್ವ ಮಾಡಿ ಸಾಮಾನ್ಯೀಕರಣದ ಸೂತ್ರ ತಯಾರಿಸಬೇಕು. ಅಶೋಕನ ಧೋರಣೆಗಳನ್ನು ತಿಳಿಯುವಾಗ ಅವನ ಬುದ್ಧಿವಂತಿಕೆ, ಅವನ ಜ್ಞಾನ ಪ್ರಸಾರದ ಇಂಗಿತ, ಅವು ಹೇಗೆ ಅಪರೂಪದವೂ ಸ್ವಯಂಕಲ್ಪಿತವಾದವು. ಅವು ಹೇಗೆ ಬುದ್ಧ ಧರ್ಮದಿಂದ ಪ್ರೇರಿತವಾದವೆಂದು ತಿಳಿಯಬೇಕು. ಅವುಗಳಿಂದ ಮೌರ್ಯ ಚಕ್ರಾಧಿಪತ್ಯಯ ಮತ್ತು ಪರದೇಶಗಳಲ್ಲಿ ಜನಗಳ ಮೇಲೆ ಬಲವಾದ ಪ್ರಭಾವ ಬೀರಿದವೆಂಬುದನ್ನು ಕಾಣಿಸಬೇಕು. ಇಲ್ಲಿ ವ್ಯಕ್ತಿಯ ಮನಸ್ಸು, ಅಭಿಪ್ರಾಯ, ನಡವಳಿಕೆ, ಕಾರ್ಯ ತತ್ಪರತೆಗಳನ್ನು ಗಮನಿಸಿ ಸೂತ್ರಗಳನ್ನು ರೂಪಿಸಬೇಕು.

ಘಟನೆಗಳ ವಿಷಯದಲ್ಲಿ ಮತ್ತಷ್ಟು ಹುಷಾರಾಗಿ ಅದರ ಹಿಂದಿರುವ ವ್ಯಕ್ತಿಗಳು ಉದ್ದೇಶ, ಅದರ ಬಗ್ಗೆ ಅವರದೇ ಅಭಿಪ್ರಾಯ, ಅದನ್ನು ಕಂಡ ಇತರರ ಅಭಿಪ್ರಾಯ ಮುಂತಾದ ಸಮಸ್ಯೆಗಳನ್ನು ತಿಳಿಯಲು ಸೂತ್ರ ನಿರೂಪಣೆಗೆ ತೊಡಗಬೇಕು.

ಒಂದು ಸೂತ್ರವನ್ನನುಸರಿಸಬೇಕಾದಾಗ ಅದರ ಪ್ರಮಾಣ (ಗಾತ್ರ) ಮತ್ತು ಗುಣವನ್ನೂ ತಿಳಿಯಬೇಕು. ಇದನ್ನು ತಿಳಿಯಲು ಸಹಾಯಕ ಅಂಶಗಳು:

1. ತಪಸೀಲಾದ ಅಳತೆಗಳು (ಮೆಶರ್‌ಮೆಂಟ್): ಇವು ಸಾಧಾರಣವಲ್ಲದೆ ಮನೋವಿಜ್ಞಾನಕ್ಕೆ ಸಂಬಂಧಪಟ್ಟ ಸಂಗತಿ ತಿಳಿಯಲು ಸಹಾಯಕವಾಗುತ್ತದೆ.
2. ಎಣಿಕೆ (ಗಣನೆ, ಎನ್ಯೂಮರೇಷನ್): ಇದು ಸಂಖ್ಯಾಶಾಸ್ತ್ರಕ್ಕೆ ಸೇರಿದೆ. ಇದನ್ನು ಸಂಗತಿಗಳ ವಿಷಯ ತಿಳಿಯಲೂ ಸಹಾಯಕವಾಗುತ್ತದೆ. ಇದರಲ್ಲಿ ಸಂಖ್ಯಾಬಲ ಮುಖ್ಯವಲ್ಲ. ಸಂಗತಿಗಳಿಗೆ ದೊರಕಿದ ಗಣನೆ ಮುಖ್ಯ.
3. ಮೌಲ್ಯ ನಿರ್ಣಯ(ವ್ಯಾಲ್ಯೂಯೇಷನ್): ಇದು ಒಂದು ಎಣಿಕೆಗೆ ಸಂಬಂಧಿಸಿದ ಕಾರ್ಯ. ಇತಿಹಾಸದ ದಾಖಲೆಗಳು ಹೇರಳವಾಗಿದ್ದು, ಫಲಿತಾಂಶವು ಅನುಮಾನವೆನಿಸಿದಾಗ ಇತಿಹಾಸಕಾರನು ಮನಸ್ಸಿನಲ್ಲಿ ಒಂದು ಚಿತ್ರ ಕಲ್ಪಿಸಿಕೊಂಡು ಅದರ ಮೌಲ್ಯ ನಿರ್ಣಯ ಮಾಡುತ್ತಾನೆ. ಸಂಗತಿಗಳು ಕೇವಲ ಭಾವನಾರೂಪದ (ಅಬ್‌ಸ್ಟ್ರಾಕ್ಟ್) ಆಗಿರುವಾಗ ಇದರ ಉಪಯೋಗ ಹೆಚ್ಚು.
4. ಮಾದರಿ ಪರೀಕ್ಷೆ (ಸ್ಯಾಂಪಲಿಂಗ್): ಇದು ಸಹ ಎಣಿಕೆಯ ಒಂದು ವಿಭಾಗ. ಒಂದೇ ರೀತಿಯ ಅನೇಕ ವಿಷಯಗಳು ಸೇರಿದಾಗ ಇದು ಪರಿಶೀಲನೆಗೆ ಬರುತ್ತದೆ. ಅವುಗಳನ್ನು ಚುನಾಯಿಸುವಾಗ ಅದನ್ನು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿರುವಂತೆ ಗಮನ ವಹಿಸಬೇಕು.

ಸಾಮಾನ್ಯೀಕರಣವೆಂದರೆ ಅದನ್ನು ಆದಷ್ಟು ಸೂಲಭವನ್ನಾಗಿ ಮಾಡುಲ ಸಾಧನ. ಆದರೆ ಒಂದೆರಡು ಮಾದರಿ ಪರೀಕ್ಷೆಗಳಿಂದ ಸಾಮಾನ್ಯೀಕರಣ ತಪ್ಪಾಗುತ್ತವೆ. ಇದಕ್ಕಾಗಿ ಮಾದರಿ ಪರೀಕ್ಷೆಯನ್ನು ಅಚ್ಚುಕಟ್ಟಾಗಿ ಮಾಡಬೇಕು. ಇದನ್ನು ನಿರ್ಧಾರಿತವನ್ನಾಗಿ ಮಾಡಲು ಒಂದು ನಾನಾ ವಿಧವಾದ ಸೀಮಿತಗಳನ್ನು ಕಲ್ಪಿಸಿಕೊಂಡಿರಬೇಕು. ಈ ಮಿತಿಗಳಲ್ಲಿ ಇವು ಸೇರಿವೆ. 1. ಸಾಮಾನ್ಯೀಕರಣ ಮಿತಿಯನ್ನು ನಿರ್ಧರಿಸಬೇಕು. ಇದರಲ್ಲಿ ದೇಶ, ಪಂಗಡ, ವರ್ಗ, ಕಾಲ ಇವು ಸೇರಿವೆ. ತೀರವ ವಿಸ್ತಾರವಾದ ಕ್ಷೇತ್ರವನ್ನು ಸಾಮಾನ್ಯೀಕರಣಕ್ಕೆ ಸೇರಿಸಬಾರದು. 2. ಎಲ್ಲ ಸಂಗತಿಗಳೂ ಒಂದನ್ನೊಂದು ಬಹುಮಟ್ಟಿಗೆ ಹೋಲುವಂತಿರಬೇಕು. ತೀರ ಅಸಹಜವಾದುದನ್ನು ಈ ಗುಂಪಿಗೆ ಸೇರಿಸಬಾರದು. 3. ಮಾದರಿ ಪರೀಕ್ಷೆ ಸಂಗತಿಗಳು ಸರಿಯಾದ ಪ್ರಾತಿನಿಧ್ಯ ಹೊಂದಿರಬೇಕು. 4. ಮಾದರಿ ಪರೀಕ್ಷೆಗೆ ಚುನಾಯಿಸಿರುವ ಸಂಗತಿಗಳು ಸಾಮಾನ್ಯೀಕರಣದ ವ್ಯಾಪ್ತಿಗೆ ಒಳಪಟ್ಟು ಮಿತಿಯುಳ್ಳದ್ದಾಗಿರಬೇಕು. ಹೀಗೆ ಒಂದು ಸಮಗ್ರ ವಿಷಯಕ್ಕೆ ಸಂಬಂಧಿಸಿದ ಒಂದು ಸೂಕ್ತಿಯನ್ನು, ನಿಯಮವನ್ನು ರಚಿಸಬೇಕು. ಈ ಸಂದರ್ಭದಲ್ಲಿ ಆ ವಿಷಯಕ್ಕೆ ಸಂಬಂಧ ಪಡದವುಗಳನ್ನು ಬಿಟ್ಟು, ಏಕ ರೂಪತೆಯನ್ನು ಹೊಂದುವಂತೆ ಮಾಡಬೇಕು. ಹೀಗೆ ಆ ಸಂಗತಿ - ಭಾಷೆ, ಮತ, ಧರ್ಮ, ಕಲೆ, ಆರ್ಥಿಕ ಅವ್ಯವಸ್ಥೆ, ಸಮಾಜ ಮತ್ತು ಸರ್ಕಾರ - ಒಂದು ವ್ಯವಸ್ಥೆಯ ನಾನಾ ಮುಖಗಳನ್ನು ಸೆರಿಸುತ್ತದೆ.

ಸಂಬಂಧ ಪಡೆಯದ ನಿಯಮಗಳಿಂದ ಏನೂ ತೀರ್ಮಾನ ಮಾಡಲು ಸಾಧ್ಯ. ಆದ್ದರಿಂದ ವಿಷಯಗಳನ್ನು ಸಂಬಂಧಿಸಿದ ಇತರ ವಿಷಯಗಳೊಡನೆ ಹೋಲಿಸಿ ಇತ್ಯರ್ಥ ಮಾಡಬೇಕು. ಆದರೆ ಪ್ರಾಣಿ ಶಾಸ್ತ್ರದ ನಿಯಮಗಳನ್ನು ಇಲ್ಲಿ ಯಥಾ ಒಪ್ಪುವುದು ಸಾಧ್ಯವಿಲ್ಲ. ಇತಿಹಾಸದಲ್ಲಿ ಮನುಷ್ಯನೇ ಮುಖ್ಯವಸ್ತು. ಮನುಷ್ಯರಲ್ಲಿ ನಾವು ಕಾಣುವುದು ವಿಭನ್ನತೆಗಳೇ. ಒಬ್ಬನಂತೆ ಮತ್ತೊಬ್ಬನಿಲ್ಲ, ಒಂದು ಸಮಾಜದಂತೆ ಮತ್ತೊಂದಿಲ್ಲ ಇತ್ಯಾದಿ. ಆದರೂ ಈ ವಿಭಿನ್ನತೆಯಲ್ಲಿ ಒಂದು ಏಕತೆ ಕಾಣಬಹುದಾಗಿದೆ. ನಾನಾ ಸಮುದಾಯಗಳ ವೀಕ್ಷಣೆ ಮಾಡಿ, ಅದರಲ್ಲಿ ಯಾವುದಾದರೊಂದು ವಿಭಾಗವನ್ನು ಚುನಾಯಿಸಿ - ಉದಾಹರಣೆಗೆ ಅಲ್ಲಿಯ ಮತಧರ್ಮ ಅಥವಾ ಸರ್ಕಾರ ಇತ್ಯಾದಿ ಇವು ಎಲ್ಲಿ ಸಮವಾಗಿದೆ ಎಲ್ಲಿ ಭಿನ್ನವಾಗಿದೆ ಎಂದು ಹೇಳಲು ಸಾಧ್ಯ. ಇದರಿಂದ ಸ್ವಾನುಭವಸಿದ್ಧ ವಿಷಯಗಳು ಕಂಡುಬರುತ್ತವೆ. ಹೀಗೆ ಇಲ್ಲಿ ಇತಿಹಾಸ ತತ್ವವೊಂದನ್ನು ಖಾಯಂ ಆಗಿ ಸಿದ್ಧಪಡಿಸಬಹುದು.

ಕೆಲವರು ಭೌತಾತೀತ ವಿದ್ಯೆಗನುಗುಣವಾಗಿ (ಮೆಟಫಿಸಿಕಲ್) ಮಾನವನ ಚಟುವಟಿಕೆಗಳು ವಿಷಯಾತೀತ, (ಟ್ರಾನ್ಸ್‌ಡೆಂಟಲ್) ಎಂದೂ, ದೈವಾಯುತ್ತ ಅಥವಾ ದೈವಿಕ (ಪ್ರಾವಿಡೆನ್‌ಷಿಯಲ್) ಎಂದೂ ತಿಳಿದಿರುತ್ತಾರೆ. ಹೀಗೆ 19 ನೇ ಶತಮಾನದಲ್ಲಿ ಹೆಗಲ್, ಮಾರ್ಕ್ಸ್, ಕಾಂಟೆ, ಬಕಲ್ ಈ ತತ್ವಗಳನ್ನು ನಂಬಿದವರಾದ್ದರಿಂದ ಇತಿಹಾಸ ಸೃಷ್ಟಿಯಲ್ಲೂ ಇದನ್ನು ಸೇರಿಸಿದರು. ಕ್ಯಾಂಟಿನ ತತ್ವಶಾಸ್ತ್ರ ಇದನ್ನು ಅನುಭವದಲ್ಲಿ ಸೇರಿರುವ ಮತ್ತು ಅನುಭವಕ್ಕೆ ಅವಶ್ಯಕವಾದ ಆದರೆ ಅನುಭವ ಜನ್ಯವಲ್ಲದ ವಿಷಯ ಎಂದು ವಿಶದ ಪಡಿಸಿದನು. ಇದರಿಂದ ಎಲ್ಲ ಘಟನೆಗಳು ದೈವಜ್ಞಾನದ ಪರಿಧಿಯಲ್ಲಿವೆ ಎಂದು ತಿಳಿದಿದ್ದರು. ಹೀಗೆ ಇತಿಹಾಸವು ವಿಚಾರ ಅಥವಾ ವಿವೇಚನೆ ಮಾಡುವ (ರ್‍ಯಾಷನಲ್) ಬುದ್ಧಿಶಕ್ತಿಗೆ ಗೋಚರವಾಗುವ ವಿಷಯವೆಂದು ಗ್ರಹಿಸಲಾಯಿತು. ಪ್ರತಿಯೊಂದು ಸಂಸ್ಥೆಯಂತೆ ಕಾರಣವನ್ನು ಸಮಾಜದ ನಡವಳಿಕೆಯಲ್ಲೇ ಇದೆ ಎಂದು ತಿಳಿಯಲಾಯಿತು. ಇದೇ ಹೆಗಲನ ಮುಖ್ಯತತ್ವ. ಇದನ್ನು ಅವನ ಅನುಯಾಯಿಗಳಾದ ರ್‍ಯಾಂಕೆ, ಮಾಮಸನ್, ಡಾಯ್‌ಸೆನ್ ಮುಂತಾದ ಜರ್ಮನರು, ಟೇನ್, ಮಿಷೆ ಮುಂತಾದ ಫ್ರೆಂಚರೂ ಒಪ್ಪಿದರು. ಇದು ಸಾಮಾನ್ಯ ಮನುಷ್ಯರು ಹಳೆಯ ದೈವಜ್ಞರ (ಥಿಯಾಲಜಿಕಲ್ ಥಿಯರಿ) ಅಭಿಪ್ರಾಯವನ್ನು ಮನ್ನಿಸಿದಂತೆಯೇ ಆಯಿತು. ಇದು ಸಮಾಧಾನಕರವೆಂದು ತೋರಿಸಿದರೂ ಅವೈಜ್ಞಾನಿಕವಾದುದಾಗಿದೆ. ಏಕೆಂದರೆ ನಮ್ಮ ವಿಚಾರ ಶಕ್ತಿ ಅಥವಾ ಧಾರೆಯಂತೆ ಜಗತ್ತಿನಲ್ಲಿ ಎಲ್ಲವೂ ನಡೆದಿಲ್ಲ. ಇವೆಲ್ಲವೂ 'ಮಾನವನ ಪ್ರಗತಿ' ಎಂಬ ಮಾತಿಗೆ ಪುರಸ್ಕಾರ ನೀಡಲಾರವು.

ಹೀಗೆ ಅನೇಕ ವಿಚಾರ ಪಂಥಗಳು ವಿದ್ವಾಂಸರಿಂದ ಹೇಳಲ್ಪಟ್ಟಿವೆ. ಅವುಗಳ ಇತಿಹಾಸ ಸಂಯೋಜನೆಯ ಉತ್ಪನ್ನಗಳೇ ಆಗಿವೆ. ಇವೆಲ್ಲವು ಇತಿಹಾಸವನ್ನು ವಿಜ್ಞಾನದ ಸಮೀಪಕ್ಕೆ ತಂದಿವೆ ಮತ್ತು ಮನುಷ್ಯನ ಅನುಭವಗಳನ್ನು ಬಹಳ ಸಂಗ್ರಹವಾಗಿ, ಸಾರವತ್ತಾಗಿ ತಿಳಿಸಿವೆ. ಹೀಗೆ ಎಲ್ಲ ಕಾರಣಗಳ ಕಾರ್ಯ ಸಂಬಂಧವನ್ನು ಎಲ್ಲರಿಗೂ ಒಪ್ಪಿಗೆಯಾಗುವಂತೆ ಮಾಡುವುದೇ ಮುಂದಿನ ಕರ್ತವ್ಯವಾದ ಕ್ರಮಬದ್ಧತೆಯ ಮುಖ್ಯ ಕೆಲಸವಾಗಿದೆ.

## 9.6 ಘಟಕದ ಸಾರಾಂಶ

ಈ ಘಟಕದ ಅಧ್ಯಯನದ ನಂತರ ನಾವು

* ಸಂಯೋಜನಾ ಕಾರ್ಯಗಳು ಇತಿಹಾಸ ಸಂಶೋಧನೆಯಲ್ಲಿ ಯಾವ ಮಹತ್ವವನ್ನು ಹೊಂದಿದೆ ಎಂಬುದನ್ನು ತಿಳಿದುಕೊಂಡೆವು.
* ಈ ಕಾರ್ಯಗಳಲ್ಲಿ ಪ್ರಾಥಮಿಕ ಕಾರ್ಯವಾದ ಸಂಶೋಧನಾ ಪ್ರಬಂಧವನ್ನು ಹೇಗೆ ಬರೆಯಬೇಕು ಎಂಬುದರ ಬಗ್ಗೆ ಒಂದು ಯೋಜನೆಯನ್ನು ತಿಳಿದೆವು.
* ಸಂಶೋಧಕನಿಗೆ ದೊರೆತ ಮಾಹಿತಿಯನ್ನು ಅನುಸರಿಸಿ ರಚನಾತ್ಮಕ ಸಮರ್ಥನೆಯನ್ನು ಹೇಗೆ ಅವನು ಮಾಡುತ್ತಾನೆ ಎಂಬುದನ್ನು ಸಹ ತಿಳಿದುಕೊಂಡೆವು.
* ಎಲ್ಲ ಕಾರ್ಯಗಳೂ ಮುಗಿದ ನಂತರ ಸಂಶೋಧನೆಯಲ್ಲಿ ಹೊರತಂದ ವಿಷಯಗಳನ್ನು ಹೇಗೆ ಸಮಂಜಸವಾಗಿ ಸಾಮಾನ್ಯೀಕರಣ ಮಾಡುವ ಎಂಬುದು ನಮಗೆ ತಿಳಿದುಬರುತ್ತದೆ.

## 9.7 ಸ್ವಯಂ ಪರಿಶೀಲನಾ ಪ್ರಶ್ನೆಗಳು

1. ಇತಿಹಾಸ ಸಂಶೋಧನೆಯಲ್ಲಿ ಸಂಯೋಜನಾ ಕಾರ್ಯಗಳ ವಿವಿಧ ಹಂತಗಳನ್ನು ವಿವರಿಸಿ.
2. ಇತಿಹಾಸ ಸಂಶೋಧನಾ ಪ್ರಬಂಧವನ್ನು ಬರೆಯುವಲ್ಲಿ ಸಂಶೋಧಕನು ನಿರ್ವಹಿಸುವ ಕಾರ್ಯಗಳನ್ನು ತಿಳಿಸಿ.

## 9.8 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. Sheik Ali. B. : History; Its Theory and Method
2. Rajayyan .K. : History in theory and Method
3. ಚೇತನಾ ಪಬ್ಲಿಕೇಷನ್ : ಇತಿಹಾಸ ಸಂಶೋಧನಾ ಮಾರ್ಗ

# ಘಟಕ - 10 ಸಂಶೋಧನೆಯ ವಿವರಣೆ ಮತ್ತು ಸಂಶೋಧನಾ ಅಂಶಗಳ ಸಮರ್ಪಕ ಜೋಡಣೆ

*ವಿಷಯಸೂಚಿ*


10.0 ಉದ್ದೇಶಗಳು

10.1 ಪೀಠಿಕೆ

10.2 ಸಂಶೋಧನೆಯ ವಿವರಣೆ

10.3 ಸಂಶೋಧನಾ ಅಂಶಗಳ ಸಮರ್ಪಕ ಜೋಡಣೆ

10.4 ಘಟಕದ ಸಾರಾಂಶ

10.5 ಸ್ವಯಂ ಪರಿಶೀಲನಾ ಪ್ರಶ್ನೆಗಳು

10.6 ಹೆಚ್ಚಿನ ಅಧ್ಯಯನದ ಗ್ರಂಥಗಳು

## 10.0 ಉದ್ದೇಶಗಳು

ಈ ಘಟಕದ ಅಧ್ಯಯನದ ಉದ್ದೇಶಗಳು

* ಸಂಶೋಧನೆಯಲ್ಲಿ ಕಾಣಬರುವ ಮಾಹಿತಿಗಳನ್ನು ಯಾವ ರೀತಿಯಲ್ಲಿ ವಿವರಿಸುತ್ತಾರೆ ಎಂಬುದು
* ಸಂಶೋಧನೆಯಿಂದ ಹೊರ ಬಂದ ವಿಷಯಗಳನ್ನು ಯಾವ ಯಾವ ವಿಷಯಗಳಿಂದ ಸಮರ್ಪಕವಾಗಿ ಜೋಡಿಸುವರು ಎಂಬುದನ್ನು ನಾವು ತಿಳಿಯುತ್ತೇವೆ.

## 10.1 ಪೀಠಿಕೆ

ಇತಿಹಾಸ ಸಂಶೋಧನೆಯಲ್ಲಿ ವಿವರಣೆಗಳಿಗೆ ಏನು ಪ್ರಾಮುಖ್ಯತೆಯಿದೆ ಮತ್ತು ವಿವರಣೆಯನ್ನು ಸಂಶೋಧಕನು ಯಾವ ರೀತಿಯಲ್ಲಿ ನೀಡುತ್ತಾನೆ ಮತ್ತು ಯಾವುದೇ ರೀತಿಯ ಆಮಿಶಕ್ಕೆ ಒಳಪಡದೇ ನೀಡುತ್ತಾನೆ ಹಾಗೂ ಸಂಶೋಧನೆಯಿಂದ ಹೊರಬಂದ ಪ್ರಮುಖ ಅಂಶಗಳನ್ನು ಯಾವ ರೀತಿಯಲ್ಲಿ ಜೋಡಣೆ ಮಾಡಿ ಸಮಾಜಕ್ಕೆ ತಿಳಿಸುತ್ತಾನೆ ಎಂಬುದನ್ನು ನಮಗೆ ತಿಳಿಯಲು ಈ ಘಟಕವು ಅನುವು ಮಾಡಿಕೊಡುತ್ತದೆ.

## 10.2 ಸಂಶೋಧನೆಯ ವಿವರಣೆ

ಇತಿಹಾಸ ರಚನೆಯಲ್ಲಿ ಅರ್ಥ ಪ್ರಕಾಶಿಕೆ ಕೊನೆಯ ಅಥವಾ ಆಖೈರು ಕಾರ್ಯಕ್ರಮ. ಆದ್ದರಿಂದ ಹಿಂದಿನ ಎಲ್ಲ ಕಾರ್ಯ ಕ್ರಮಗಳು ವ್ಯವಸ್ಥಿತವಾಗಿ ನಡೆದಿವೆ ಎಂಬುದನ್ನು ಖಚಿತಪಡಿಸಿಕೊಳ್ಳುತ್ತದೆ. ಇದು ಕಲಾತ್ಮಕವಾಗಿ ಸಾಹಿತ್ಯಾತ್ಮಕವಾಗಿ ಸಿದ್ಧಗೊಳ್ಳಬೇಕು. ಇತಿಹಾಸಕಾರನು ಪ್ರತಿ ವಿಷಯವನ್ನು ಅಥವಾ ನಿರ್ಬಂಧವನ್ನು ಬೇರೆ ಬೇರೆಯಾಗಿ ಹೇಳಬಹುದಾಗಿದ್ದರಿಂದ ಅವನೇ ಯಾವ ಮಾರ್ಗವು ಸಂಗತಿಗೆ ಹೊಂದಿಕೊಳ್ಳುತ್ತೆಂಬುದನ್ನು ನಿರ್ಧರಿಸಬೇಕು. ಪ್ರತಿ ವಿದ್ವಾಂಸನ ಮುಖ್ಯ ಉದ್ದೇಶವೆಂದರೆ ಬಹು ಎಚ್ಚರಿಕೆಯ ಅನ್ವೇಷಣೆ (ಶೋಧನೆ). ಇವರ ಪರಿಣಾಮವಾಗಿ ಯಾವುದೋ ಒಂದು ಹೊಸದೂ, ಮೂಲಭೂತವೂ, ವಿಶೇಷವೂ, ಅದ್ವಿತೀಯವೂ ಆದ ವಿಷಯವನ್ನು ಪ್ರಸಿದ್ಧಪಡಿಸಿ ಅದರ ಮೂಲಕ ಇತಿಹಾಸದ ದಿಗಂತವನ್ನು ವಿಸ್ತರಿಸುವುದೇ ಆಗಿರುತ್ತದೆ. ಮೊದಲನೆಯದಾಗಿ ಯಾವುದೇ ಅಪ್ರಕಟಿತ ವಿಷಯದ ಮೇಲೆ ಬೆಳಕು ಚೆಲ್ಲಿ ಹೊಸ ವಂಶ ಈವರೆಗೂ ಪತ್ತೆಯಾಗದಿದ್ದ ಯುದ್ಧ, ಸೈನ್ಯಾಚರಣೆ, ಗೊತ್ತಿಲ್ಲದ ವ್ಯಕ್ತಿ ಪರಿಚಯ, ಇತ್ಯಾದಿ ವಿಷಯಗಳನ್ನು ಸಾಹಿತ್ಯಶಾಸ್ತ್ರ ಪ್ರಾಕ್ತನ ಸಂಶೋಧನೆಗಳ ಆಧಾರದಿಂದ ಸಾಧರ ಪಡಿಸುವುದು; ಎರಡನೆಯದಾಗಿ ಈವರೆಗೆ ಪತ್ತೆಯಾಗಿರುವ ವಿಷಯಗಳ ಬಗ್ಗೆ ಪುನರ್ ಪರಿಶೀಲನೆಗೆ ಸಾಧ್ಯವಾಗುವಂಥ ವಿಷಯಗಳನ್ನು ಬದಲಾಯಿಸಲು, ಮತ್ತಷ್ಟು ಹೆಚ್ಚಿಸಲು ಅವಕಾಶವಿದ್ದಡೆ ಹೊಸ ಸಿದ್ಧಾಂತಗಳನ್ನು ರೂಪಿಸುವುದು. ಹೀಗೆ ನಮಗೆ ಸಿಂಧೂ ನಾಗರಿಕತೆ ಚೋಳರು, ಗಂಗರು, ಸೇವುಣರು, ಮುಂತಾದವರ ಬಗ್ಗೆ ಹೆಚ್ಚು ವಿಷಯಗಳನ್ನು ಸಂಶೋಧಕರು ಪ್ರಕಟಿಸಿದ್ದಾರೆ. ಮೂರನೆಯದಾಗಿ, ಬಹಳ ಪ್ರತಿಷ್ಠಿತ ವಿದ್ವಾಂಸರು ಶ್ರಮದ ಫಲವಾಗಿ ದತ್ತಾಂಶದ ಬಗ್ಗೆ ಒಂದು ಹೊಸ ದಾರ್ಶನಿಕ ತತ್ವವೇ ರೂಪುಗೊಳ್ಳುತ್ತದೆ. ಇವು ಮೂಲಭೂತವಾಗಿಯೂ ಸರ್ವಕಾಲಿಕ, ಸರ್ವಾನುಮತವಾಗಿಯೂ ಇದು, ಇತಿಹಾಸಕ್ಕೆ ಕೀರ್ತಿ ತರುತ್ತವೆ.

ಹೀಗೆ ಸಂಶೋಧಕನು ತಾನು ಮೇಲ್ಕಾಣಿಸಿರುವ ಯಾವ ಬಗೆಯ ಅನ್ವೇಷಣೆಯನ್ನು ನಡೆಸುತ್ತಿರುವನೆಂದು ತೀರ್ಮಾನಿಸಿ ಅದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿಕೊಳ್ಳಬೇಕು. ಮೊದಲನೆಯದಾಗಿ ಈವರೆಗೂ ಪ್ರಕಟವಾಗಿಲ್ಲದ ವಿಷಯದ ಬಗ್ಗೆ ಹೊಸ ವಿಷಯಗಳು ಪ್ರಾಪ್ತವಾಗುವ ಬಗ್ಗೆ ಆದರೆ ತನ್ನ ಕಾರ್ಯವನ್ನು ಈ ರೀತಿ ರೂಪಿಸಿಕೊಳ್ಳಬೇಕು. ಉದಾಹರಣೆಗೆ ಕರ್ನಾಟಕದ ರಾಜ ಟಿಪ್ಪು ಸುಲ್ತಾನನ ಬಗ್ಗೆ ಎಂದು ತಿಳಿಯೋಣ. ಅವನು ಪರದೇಶಗಳೊಡನೆ ನಾನಾ ರೀತಿಯ ವ್ಯಾಪಾರ, ರಾಜಕೀಯ, ಸಾಮಾಜಿಕ ಇತ್ಯಾದಿ ಸಂಪರ್ಕ ಹೊಂದಿದ್ದನೆಂದು ತಿಳಿದಿದೆ. ಆ ಬಗ್ಗೆ ಹೆಚ್ಚು ತಿಳಿಯಬೇಕಾದರೆ ಆ ಕಾಲದ ರಾಜರು, ಆಡಳಿತಗಾರರು, ವ್ಯಾಪಾರ ಸಂಘ ಸಂಸ್ಥೆಗಳು, ಕ್ರಿಶ್ಚಿಯನ್ ಮತ ಪ್ರಚಾರಕರು, ತಂತ್ರಜ್ಞರು ಮುಂತಾದವರೊಡನೆ ಅವನು ಕಾಗದ ಪತ್ರ ಬರೆದಿರುತ್ತಾನೆ. ಅಂಥವು ಇಂಗ್ಲೆಂಡಿನ, ಫ್ರಾನ್ಸಿನ, ಪೋರ್ಚುಗಲ್, ಹಾಲೆಂಡ್, ತುರ್ಕಿ, ಇರಾನಂ, ರಾಷ್ಟ್ರಗಳ ಸರ್ಕಾರಿ ಗ್ರಂಥಾಲಯ, ವ್ಯಕ್ತಿ ಸಂಸ್ಥೆಗಳ

ಭಂಡಾರಗಳಲ್ಲಿಯೂ ಇವೆ. ಅವುಗಳನ್ನು ಅಲ್ಲಿಯ ಸಂಸ್ಥೆಗಳು ತಯಾರಿಸಿರುವ ಕ್ಯಾಟಲಾಗ್ ಪಟ್ಟಿಗಳಲ್ಲೂ ಕಾಣಬಹುದಾಗಿದೆ. ಅವು ನಾನಾ ಭಾಷೆಗಳಲ್ಲೂ ಇವೆ. ಆ ರಾಜ್ಯಗಳಿಗೆ ಭೇಟಿ ಕೊಡಬೇಕಾದ ಅವಶ್ಯಕತೆ ಇಲ್ಲ. ಅವುಗಳ ಮೈಕ್ರೊ ಫಿಲಂ, ಫೋಟೋಸ್ಟಾಟ್ ನಕಲುಗಳನ್ನು ಪಡೆದೋ ಪುಸ್ತಕಗಳನ್ನೇ ಎರವಲು ಪಡೆದೋ ಸಂಶೋಧನೆ ಮಾಡಬಹುದು. (ಕೆಲವು ವರ್ಷಗಳ ಹಿಂದೆ ಗಿದ್ವಾನಿ ಎಂಬ ಭಾರತ ವಿದ್ವಾಂಸರು ಆ ಸ್ಥಳಗಳಿಗೂ ಭೇಟಿಕೊಟ್ಟು, ಅಲ್ಲಿಯ ದಾಖಲೆಗಳನ್ನೂ ಪರಿಶೀಲಿಸಿದ ಸ್ವೋರ್ಡ್ ಆಫ್ ಟಿಪ್ಪು ಸುಲ್ತಾನ್ ಎಂಬ ಕಾದಂಬರಿ ರಚಿಸಿದ್ದಾರೆ) ಸಂಶೋಧಕನಿಗೆ ತನಗೆ ಬೇಕಾದ ಎಲ್ಲಾ ಸಾಮಗ್ರಿಗಳು ಸಿಕ್ಕುವುದು ಕಷ್ಟವಲ್ಲ. ಉತ್ಸಾಹ, ಮನಸ್ಸಿದ್ದರೆ ಎಲ್ಲ ರೀತಿಯ ಸಹಾಯ ದೊರಕಿ ಸಂಶೋಧನೆ, ಯಶಸ್ವಿಯಾಗಬಲ್ಲದು, ಎರಡನೇ ರೀತಿಯ ಅನ್ವೇಷಣೆಯಲ್ಲಿ ದೈಹಿಕ ಶ್ರಮಕ್ಕಿಂತ ಮಾನಸಿಕ ಕಸರತ್ತೇ ಹೆಚ್ಚು. ಹಳೆಯ ವಿಷಯಗಳನ್ನು ಹೊಸ ಸಂಶೋಧನೆಗಳ ಮೂಲಕ ವಿಸ್ತರಿಸಿ, ಮೆರಗು ಕೊಟ್ಟು, ಹೊಸ ನಿರೂಪಣೆ ಕೊಡುವುದು ಸಾಧ್ಯ. ಮೂರನೆ ಅನ್ವೇಷಕ ಪದ್ಧತಿಯಲ್ಲಿ ಹೊಸ ದಾರ್ಶನಿಕ ಅಥವಾ ತತ್ವ ನಿರೂಪಣೆ ಮಾಡುವುದೇ ಕಾರ್ಯವಾದರೂ ಇದು ಬಹಳ ತ್ರಾಸದಾಯಕವೂ, ಕುಶಾಗ್ರಬುದ್ಧಿ ಕೆಲಸವೂ ಆಗಿದೆ. ಇದು ಹೊಸ ಸಂಶೋಧನೆಯಲ್ಲ, ನಿರೂಪಣೆಯೂ ಅಲ್ಲ. ಯಾವುದಾದರೊಂದು ಸಾಧಾರಣ ಘಟನೆಯನ್ನು ಅದರ ಕಾರಣಗಳ ಮೂಲಕ ವಿವರಿಸಿ ಅದರ ಆಂತರಿಕ ಕಾರಣಗಳನ್ನು ತಿಳಿದು ಹೊಂದಿಸಿ, ಎಲ್ಲವನ್ನು ಒಂದು ಸೂತ್ರದ ರೂಪದಲ್ಲಿ ಹೇಳಬೇಕಷ್ಟೆ. ಇದು ಸರ್ವಸಮ್ಮತವಾಗಿ ಎಲ್ಲ ಕಾಲ ದೇಶಗಳಲ್ಲಿ ಆಗಿರುವ, ಆಗಬಹುದಾದ ನಿಯಮವಾಗಬೇಕು. ಕಾರ್ಲೈಲನು ಮಹನೀಯರ ಬಗ್ಗೆ ಹೇಳಿರುವ ಸೂತ್ರ ಮಾರ್ಕ್ಸ್‌ನ ಆರ್ಥಿಕ ತೀರ್ಮಾನ ಪದ್ಧತಿ, ಹೆಗಲನ ಆದರ್ಶವಾದಿತ್ವ, ಸ್ಪೆಂಗ್ಲರನ ಆವರ್ತ ಪದ್ಧತಿ, ಟಾಯ್ನಬಿ ಅವರ ಸವಾಲು-ಜವಾಬು ಇಂಥ ಸಾಮಾನ್ಯ ನಿಯಮಗಳಾಗಿವೆ. ಆದರೆ ಕೆಲವರು ತಮ್ಮ ತೀರ್ಮಾನಗಳನ್ನು ಇಂಥ ನಿಯಮಗಳಿಗೆ ಒಪ್ಪುವಂತೆ ಮಾಡುತ್ತಾರೆ. ಇದನ್ನು ಬ್ಯೂರಿಯು ತಪ್ಪು ಎಂದು ಹೇಳಿ ಹಾಸಿಗೆ ಇದ್ದಷ್ಟು ಕಾಲು ಚಾಚು ಎಂಬ ಸಂಕುಚಿತ ವ್ಯವಸ್ಥೆ ಆಗುತ್ತದೆ ಎಂದು ಟೀಕಿಸಿದ್ದಾನೆ. ತೀರ್ಮಾನಗಳು ಸ್ವಂತ ಸೌಕರ್ಯಕ್ಕಾಗಿರದೇ ಅವು ಅವಶ್ಯಕತೆಯನ್ನು ಅವಲಂಬಿಸಿರಬೇಕೆಂದು ಇದರ ಅಭಿಪ್ರಾಯ.

ಇತಿಹಾಸದ ಪುನರ್‌ರಚನೆಯಲ್ಲಿ ಬುದ್ಧಿಯ ಕೆಲಸ ಬಹಳ ಹೆಚ್ಚು. ಅದಕ್ಕಾಗಿ ಏಕಾಗ್ರತೆ ಇರಲೇಬೇಕು. ಇದು ಹಿಂದಿನ ಕೆಲಸಗಳಿಗಿಂತ ಹೆಚ್ಚು ಪಟ್ಟು ಉತ್ತಮವಾದದ್ದೆಂದು ಸಾಧಿಸುವ ಯತ್ನದಲ್ಲಿ ಅವಶ್ಯಕವೆನಿಸಿದೆ. ಇದು ಬರವಣಿಗೆಯ ರೂಪದಲ್ಲಿ ಬಂದಾಗ ವಿಷಯವು ಅತ್ಯಂತ ಸರಳವಾಗಿ, ಸುಲಭವಾದ ಭಾಷೆಯಲ್ಲಿರಬೇಕು. ಅದು ಸ್ವಾರಸ್ಯವಾಗಿ ಎಲ್ಲರ ಗಮನ ಸೆಳೆಯಲು ಕಲಾತ್ಮಕವಾಗಿಯೂ ಸೊಗಸಾದ ಸಾಹಿತ್ಯದ ನಿರೂಪಣಾ ಮಾರ್ಗವನ್ನು ಅನುಸರಿಸಬೇಕು. ಇದು ಒಂದು ಕಾದಂಬರಿಯ ಸ್ವಾರಸ್ಯವಾದ ಶೈಲಿಯನ್ನು ಹೊಂದಿರಬೇಕು. ಈ ರೀತಿಯ ಬರವಣಿಗೆಗೆ ಗಿಬ್ಬನ್, ಮೆಕಾಲೆ ಮುಂತಾದವರು ಪ್ರಖ್ಯಾತರಾಗಿದ್ದಾರೆ. ಇತಿಹಾಸದ ಘಟನೆಗಳು ಒಂದರ ಹಿಂದೆ ಒಂದರಂತೆ ಬಂದು ಅದ್ಭುತವಾದ ಮೆರವಣಿಗೆಯು ಕಣ್ಮುಂದೆ ಹಾದು ಹೋದಂತೆ ಮಾಡಲು ಸಾಧ್ಯ. ಹಾಗಾಗಲು ಪ್ರಯತ್ನಿಸಬೇಕು. ಇದು ಒಂದು ಉತ್ತಮ ನಾಟಕದ ಆಕ್ಟ್ ಸೀನ್‌ಗಳಂತೆ ಒಂದನ್ನೊಂದು ಹೊಂದಿಕೊಂಡು, ಬಿಗಿಯಾಗಿದ್ದರೂ ಹಾಸ್ಯದ ಹೊನಲುಗಳನ್ನು ಒಳಗೊಂಡಿರಬೇಕು.

ಇತಿಹಾಸಕಾರನು ತನಗೆ ಬೇಕಾದ ಸಮಸ್ತ ವಿಷಯಗಳನ್ನು ಸಂಗ್ರಹಿಸಿ ಬರೆಯಲು ಪ್ರಾರಂಭಿಸಿದಾಗ ತಾನೇ ಈ ವಿಚಾರಗಳಲ್ಲಿ ಅತ್ಯಂತ ಹೆಚ್ಚಿನ ಪಾಂಡಿತ್ಯ ಪಡೆದಿರುವನೆಂದೂ, ಬಹಳ ಅಚ್ಚುಕಟ್ಟಾಗಿ ನಿರೂಪಣೆ ಮಾಡುತ್ತಿರುವನೆಂದೂ ಹೆಮ್ಮೆಯಿಂದ, ಆತ್ಮವಿಶ್ವಾಸದಿಂದ ಮುಂದುವರೆಯಬೇಕು. ಭಾರತದ ಅಖಂಡ ಚರಿತ್ರೆಯನ್ನು ಪ್ರಪ್ರಥಮವಾಗಿ ಬರೆದ ವಿನ್ಸೆಂಟ್‌ಸ್ಮಿತ್‌ರವರು ಬರೆದ 'ಆಕ್ಸ್‌ಫರ್ಡ್ ಹಿಸ್ಟರಿ ಆಫ್ ಇಂಡಿಯಾ' ದಲ್ಲಿ ಇಂಥ ಆತ್ಮಾಭಿಮಾನ ಕಂಡು ಬರುತ್ತದೆ. ನಿಯಮಗಳನ್ನು ಅವಶ್ಯಕವಾಗಿ ಅನುಸರಿಸಬೇಕು. ಹೊಸ ವಿಷಯಗಳನ್ನು ಹೇಳುವಾಗ ಆ ಅಭಿಪ್ರಾಯಗಳನ್ನು ಮೂಲಗಳೊಡನೆ ತಿಳಿಸಬೇಕು. ತನ್ನ ಸ್ವಂತ ಅಭಿಪ್ರಾಯ, ತೀರ್ಮಾನಗಳನ್ನು ಹಾಗೆಂದೇ ಖಚಿತವಾಗಿ ತಿಳಿಸಬೇಕು. ಇಂಥ ಮತ್ತು ಇಂಥದೇ ವಿಷಯ ಹೇಳುವಾಗ ಆ ಅಭಿಪ್ರಾಯಗಳನ್ನು ಮೂಲಗಳೊಡನೆ ತಿಳಿಸಬೇಕು. ತನ್ನ ಸ್ವಂತ ಅಭಿಪ್ರಾಯ, ತೀರ್ಮಾನಗಳನ್ನು ಹಾಗೆಂದೇ ಖಚಿತವಾಗಿ ತಿಳಿಸಬೇಕು. ಇಂಥ ಮತ್ತು ಇಂಥದೇ ವಿಷಯ ಹೇಳುವಾಗ ಅವುಗಳನ್ನು ಅಡಿ ಟಿಪ್ಪಣಿಗಳಲ್ಲಿ ಅವುಗಳ ಗ್ರಂಥ ಕರ್ತ, ಗ್ರಂಥದ ಹೆಸರು, ಸಂಪುಟ ಅಥವಾ ಭಾಗ, ಪುಟದ ಸಂಖ್ಯೆಗಳನ್ನು ಅನೇಕ ಆವೃತ್ತಿ ಅಚ್ಚಾಗಿದ್ದರೆ ಉಪಯೋಗಿಸಿದ ಗ್ರಂಥ, ಅಚ್ಚಾದ ವರ್ಷ ಇವುಗಳನ್ನು ದಾಖಲಿಸಬೇಕು. ಇಂಥ ಅಡಿ ಟಿಪ್ಪಣಿಗಳ ಸಂಖ್ಯೆ, ಮುಂತಾದವು ತೀರಾ ಹೆಚ್ಚಾಗದೇ, ಬೇಸರ ತರಿಸದಂತೆ ಒಂದು ಇತಿಮಿತಿಗೆ ಒಳಪಟ್ಟಿರಬೇಕು.

## 10.3 ಸಂಶೋಧನಾ ಅಂಶಗಳ ಸಮರ್ಪಕ ಜೋಡಣೆ

ಕೊನೆಯದಾಗಿ ಒಂದು ಉತ್ತಮ ಸಮತೋಲನದ ಆಧಾರ ಮತ್ತು ಸಹಾಯಕ ಗ್ರಂಥಗಳ ಪಟ್ಟಿಯನ್ನು ಕಾಣಿಸಬೇಕು. ಕೆಲವು ಅಚ್ಚಾಗದ ದಾಖಲೆಗಳನ್ನು ಉಪಯೋಗಿಸಿದ್ದರೆ ಅವುಗಳನ್ನು ಇಂಥ ಪಟ್ಟಿಯ ಮೊದಲಲ್ಲೇ ಕಾಣಿಸಬೇಕು. ಕಣ್ಣಾರೆ ಕಂಡವರ, ಪ್ರವಾಸಿಗರ ದಿನಚರಿಗಳ, ಸಮಕಾಲೀನ ದಾಖಲೆಗಳ, ಸರ್ಕಾರದ ಕಾಗದ ಪತ್ರಗಳ ದಾಖಲೆಗಳು ಮುಂತಾದ ಸಾಹಿತ್ಯ ಪ್ರಕಾರಗಳು ಪ್ರಥಮ ದಾಖಲೆಗಳೆನಿಸಿಕೊಳ್ಳುತ್ತವೆ. ಶಾಸನಗಳು, ನಾಣ್ಯಗಳು, ಮುದ್ರೆಗಳು, ಅಗೆತದಲ್ಲಿ ದೊರೆತ ವಸ್ತುಗಳು ಪ್ರಾಕ್ತನ ಶಾಖಾಮೂಲಗಳು, ಕೈ ಬರಹದ ದಾಖಲೆಗಳು ನಾನಾ ಭಾಷೆಗಳಲ್ಲಿರುತ್ತವೆ. ದ್ವಿತೀಯ ದರ್ಜೆಯ ಮೂಲಗಳೆಂದರೆ ಆ ಕಾಲದಲ್ಲಿ ಸೃಷ್ಟಿಸಲ್ಪಟ್ಟ ಸಾಹಿತ್ಯ ಮತ್ತು ಇತರ ಈ ರೀತಿ ಬರವಣಿಗೆಗಳು. ಅವುಗಳನ್ನು ಸಾಧಾರಣವಾಗಿ ಗ್ರಂಥಕರ್ತನ ಅಕಾರಾದಿಯಾಗಿ ಜೋಡಿಸುವುದು ಪದ್ಧತಿ. ಒಳ್ಳೆಯ ಸಂಶೋಧಕನು ತಾನು ಉಪಯೋಗಿಸಿದ ಮುಖ್ಯ ಹಸ್ತ ಪ್ರತಿ ಮತ್ತು ಮೂಲ ವಸ್ತುಗಳನ್ನು ಒಂದು ಸಂಕ್ಷಿಪ್ತವಾಗಿ ತಿಳಿಸುತ್ತಾನೆ. ಮುಖ್ಯ ಮೂಲಗಳ ಬಗ್ಗೆ ವಿಮರ್ಶಾತ್ಮಕವಾದ ಸಂಕ್ಷಿಪ್ತ ಬರವಣಿಗೆ ಮೂಲಕ ಕಾಣಿಸುತ್ತಾನೆ. ಇಂಥ ಮೂಲಗಳು ಹೇಗೆ ಆ ಬಗ್ಗೆ ಉತ್ಕೃಷ್ಟವಾದುವು ಎಂಬುದನ್ನು ಕಾಣಿಸಬೇಕು. ದಾಖಲೆಯ ಕೊನೆಯಲ್ಲಿ ಉಪಯೋಗಿಸಿದ ನಕ್ಷೆಗಳು, ಸಂಖ್ಯಾಪಟ್ಟಿ, (ಟೇಬಲ್ಸ್) ಚಿತ್ರಗಳು, ಮುಂತಾದುವನ್ನು ಕಾಣಿಸಬೇಕು. ಹೆಚ್ಚಿನ ಸೇರ್ಪಡೆ (ಅನುಬಂಧ, ಪರಿಶಿಷ್ಟ) ಯಲ್ಲಿ ಇತರ ದತ್ತಾಂಶ ಹೆಚ್ಚಾಗಿ ತಿಳಿದಿರುವ ವಿಷಯಗಳು, ಇತರ ವ್ಯತಿರಿಕ್ತ ವಿಷಯಗಳನ್ನು ಕಾಣಿಸಬೇಕು. ಕೊನೆಯದಾಗಿ (ಇಂಡೆಕ್ಸ್‌ನಲ್ಲಿ) ಗ್ರಂಥ ವಿಷಯ ಅಕಾರಾದಿ ಸೂಚಿಯಲ್ಲಿ ಮುಖ್ಯ ವಿಷಯಗಳನ್ನು ಮೂಲ ಗ್ರಂಥದಲ್ಲಿ ಕಾಣಿಸಿರುವ ಪುಟ, ಮುಖ್ಯ ಘಟನೆಗಳು, ವ್ಯಕ್ತಿಗಳು, ಸ್ಥಳಗಳು ಮುಂತಾದವನ್ನು ಥೀಸಿಸ್‌ನಲ್ಲಿ ಕಾಣಿಸಬೇಕು. ಈ ಸಂಶೋಧನಾ ಗ್ರಂಥದ ಪ್ರಾರಂಭದಲ್ಲಿ ಪ್ರಸ್ತುತ ವ್ಯಾಪ್ತಿ ತಿಳಿಸುವ ಮುನ್ನುಡಿ ಗ್ರಂಥ ಕರ್ತನಲ್ಲದೆ ಇತರರ ಮುನ್ನುಡಿ (ಫೋರ್‌ವರ್ಡ್) ಇರಬೇಕಾಗುತ್ತದೆ.

ಇತಿಹಾಸದ ಸಂಶೋಧನೆಯನ್ನು ತಯಾರು ಮಾಡುವಾಗ ಕೆಲವು ಸಾಧಾರಣ ಉಪಯೋಗಿಸಿರುವ ಸಂಕೇತಾಕ್ಷರಗಳು ಮತ್ತು ಅವುಗಳ ವಿಸ್ತರಣ ಮತ್ತು ಒಂದು ಪೀಠಿಕೆ ಸಹ ಇರಬೇಕು. ಮುನ್ನುಡಿಯಲ್ಲಿ ಈ ಕಾರ್ಯದ ಅವಶ್ಯಕತೆ ಏನಿತ್ತು ಮತ್ತು "ಯಾರ್‍ಯಾರ ನೆನೆಯಲಿ"ಎಂಬುದಿರಬೇಕು. ಪ್ರಸ್ತಾವನೆಯಲ್ಲಿ ಈ ಕಾರ್ಯದ ಹಿನ್ನೆಲೆ ಮತ್ತು ಸಮಸ್ಯೆಗಳೇನೆಂಬುದನ್ನು ಕಾಣಿಸಬೇಕು. ಇದರಲ್ಲಿ ಸಮಸ್ಯೆಗಳಿಗೆ ಹೇಗೆ ಉತ್ತರ ಕಾಣಿಸಲು ಯತ್ನಿಸಲಾಗಿದೆ ಎಂದು ದಾಖಲಿಸಬೇಕು. ಈ ಪ್ರಸ್ತಾವನೆಯೇ ಸವಾಲಾಗಿ ಥೀಸಿಸ್ ದಾಖಲೆ - ಪ್ರಬಂಧವೇ - ಉತ್ತರವಾಗಿರುತ್ತದೆ. ಕೆಲವು ಸಂದರ್ಭಗಳಲ್ಲಿ ಮೊದಲಲ್ಲಿ ಇದರ ತಿರುಳು (ಸಾರಾಂಶ) ಸಂಗ್ರಹವಾಗಿ ಕೊಡುವುದೂ ಸಂಪ್ರದಾಯ ಇಂಥವು ಸಂಕ್ಷಿಪ್ತವಾಗಿ ಮೂನ್ನೂರು ನಾಲ್ಕುನೂರು ಪದಗಳನ್ನೊಳಗೊಂಡಿದ್ದರೆ ಸಾಕು. ಇಲ್ಲಿಗೆ ಸಂಶೋಧನೆಯು ಸಂಪೂರ್ಣವಾಯಿತು. ಮುನ್ನುಡಿಯನ್ನು ಆಯಾ ಭಾಗದ ವಿದ್ವಾಂಸರು ಬರೆದು ಅದರಲ್ಲಿರುವ ಮುಖ್ಯಾಂಶಗಳನ್ನು ಓದುಗರ ಗಮನಕ್ಕೆ ತಂದು ವಿಷಯಗಳ ಪ್ರಾಮುಖ್ಯತೆಯನ್ನು ಸಂಕ್ಷಿಪ್ತವಾಗಿ ತಿಳಿಸಿಕೊಡುತ್ತಾರೆ. ಇದೇ ಇಡೀ ಸಂಶೋಧಕನಿಗೆ ಕಿರೀಟವಿದ್ದಂತೆ.

ಹೀಗೆ ಅರ್ಥಪ್ರಕಾಶಿಕೆಯೂ ಬಹಳ ಶ್ರಮದಾಯಕ ಕ್ಲಿಷ್ಟಕರವಾದ ಕಾರ್ಯ. ಇದರಲ್ಲಿ ಬುದ್ಧಿವಂತಿಕೆಯ ಪಾತ್ರ ಹೆಚ್ಚು. ಇಲ್ಲಿ ವಿಷಯಗಳನ್ನು ಅಚ್ಚುಕಟ್ಟಾಗಿ ಸಿದ್ಧಪಡಿಸುವುದೇ ಮುಖ್ಯ. ಕಷ್ಟಪಟ್ಟು ಸಿದ್ಧಪಡಿಸಿದ ವಸ್ತುಗಳನ್ನು ಸೊಗಸಾಗಿ ಆಕರ್ಷಕವಾಗಿ ತೋರುವಂತೆ ಮಾಡುವ ಕಲೆಯೇ ಇದು - ಅಂಗಡಿಯವರು ಗಾಜಿನ ಒಳಹಲಗೆಗಳಲ್ಲಿ ವಸ್ತುಗಳನ್ನಿಟ್ಟು ಗಿರಾಕಿಯನ್ನಾಕರ್ಷಿಸುವಂತೆ ಸಂಶೋಧನ ಕಾರ್ಯ ಸೊಗಸಾದ ಸಾಹಿತ್ಯವಾಗಿ ಓದುಗರ ಮನಸ್ಸನ್ನು ಆಕರ್ಷಿಸಿ, ಅದನ್ನು ಅವರು ಸ್ವಾಧೀನ ಪಡಿಸಿಕೊಳ್ಳಬೇಕೆಂಬ ಆಸೆಯನ್ನು ಹುಟ್ಟಿಸುವಂತದಾಗಿರಬೇಕು. ಒಂದು ಸಂಶೋಧನೆಯು ಒಂದು ಸೂಜಿಗಲ್ಲು ತನ್ನತ್ತ ಎಲ್ಲ ಪದಾರ್ಥಗಳನ್ನು ಸೆಳೆದಿಟ್ಟುಕೊಳ್ಳುವಂತೆ ಎಲ್ಲರ ಗಮನವನ್ನು ತನ್ನತ್ತ ಆಕರ್ಷಿಸಬೇಕು. ಇದೇ ಆ ಮಹಾ ಬುದ್ಧಿವಂತಿಕೆಯ ಕಾರ್ಯದ ಫಲಿತಾಂಶ ಫಲ.

## 10.4 ಘಟಕದ ಸಾರಂಶ

ಈ ಘಟಕ 10 ರಲ್ಲಿ ನಾವುಗಳು ಇತಿಹಾಸ ಸಂಶೋಧಕನು ಸಂಶೋಧನೆ ಕಾರ್ಯದಲ್ಲಿ ಕೊನೆಯ ಕಾರ್ಯಗಳನ್ನು ಯಾವ ರೀತಿಯಲ್ಲಿ ನಿರ್ವಹಿಸಿದನು ಎಂಬುದನ್ನು ತಿಳಿದೆವು ಅವುಗಳು;

* ಸಂಶೋಧಕನು ತಾನು ನಡೆಸಿದ ಸಂಶೋಧನೆಯಲ್ಲಿ ತನಗೆ ವಿಷಯದ ಬಗೆ ದೊರೆತ ಮಾಹಿತಿಗಳನ್ನು ಹೇಗೆ ವಿವರಿಸುವುದು ಎಂಬುದನ್ನು ತಿಳಿದುಕೊಂಡೆವು.
* ಇದಲ್ಲದೇ ಸಂಶೋಧಕನ ಈ ಸಂಶೋಧನೆಯಿಂದ ದೊರೆತ ಮಾಹಿತಿಗಳ ಅಂಶಗಳನ್ನು ಹೇಗೆ ಸಮರ್ಪಕವಾಗಿ ಜೊಡಿಸುವುದು ಎಂಬುದನ್ನು ತಿಳಿದೆವು.

## 10.5 ಸ್ವಯಂ ಪರಿಶೀಲನಾ ಪ್ರಶ್ನೆಗಳು

1. ಇತಿಹಾಸ ಸಂಶೋಧನೆಯಲ್ಲಿ ಸಂಶೋಧನೆಯ ವಿವರಣೆ ಹಾಗೂ ಸಂಶೋಧನಾ ಅಂಶಗಳ ಸಮರ್ಪಕ ಜೋಡಣೆಯ ಬಗ್ಗೆ ವಿವರಿಸಿ.
2. ಇತಿಹಾಸ ಸಂಶೋಧಕನ ಅಂತಿಮ ಹಂತದ ಕಾರ್ಯ ವಿಧಾನಗಳನ್ನು ತಿಳಿಸಿ.

## 10.6 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


| | | | |
|---|---|---|---|
| 1. | Sheik Ali .B. | : | History; Its Theory & Method |
| 2. | Rajayyan .K. | : | History in Theory and Method |
| 3. | ವೆಂಕಟರತ್ನಂ ಮತ್ತು ಪದ್ಮ | : | ಇತಿಹಾಸ ಸಂಶೋಧನಾ ಮಾರ್ಗ |

# ಘಟಕ - 11 ಇತಿಹಾಸದಲ್ಲಿ ವಾಸ್ತವಿಕತೆ ನಿರೂಪಣೆ

*ವಿಷಯಾನುಕ್ರಮಣಿಕೆ*


11.0 ಉದ್ದೇಶಗಳು

11.1 ಪೀಠಿಕೆ

11.2 ಇತಿಹಾಸದಲ್ಲಿ ವಾಸ್ತವಿಕತೆ

11.3 ಘಟಕದ ಸಾರಾಂಶ

11.4 ಸ್ವಯಂ ಪರಿಶೀಲನಾ ಪ್ರಶ್ನೆಗಳು

11.5 ಹೆಚ್ಚಿನ ಅಧ್ಯಯನದ ಗ್ರಂಥಗಳು

## 11.0 ಉದ್ದೇಶಗಳು

ಈ ಘಟಕದ ಅಧ್ಯಯನದಲ್ಲಿ ನಾವು ಇತಿಹಾಸ ನಿರೂಪಣೆಯಲ್ಲಿ ವಸ್ತುನಿಷ್ಠತೆ ಅಥವಾ ವಾಸ್ತವಿಕತೆಯನ್ನು ವಿವರಿಸುವುದನ್ನು ತಿಳಿದುಕೊಳ್ಳುತ್ತೇವೆ. ಈ ವಾಸ್ತವಿಕತೆ ನಿರೂಪಣೆಯಲ್ಲಿ ಸಂಶೋಧಕ ಅಥವಾ ಇತಿಹಾಸಕಾರ ಹೇಗೆ ಕಾರ್ಯನಿರ್ವಹಿಸುತ್ತಾನೆಂಬುದನ್ನು ಸಹ ಅಧ್ಯಯನ ಮಾಡುತ್ತೇವೆ.

## 11.1 ಪೀಠಿಕೆ

ಇತಿಹಾಸವನ್ನು ವಿವರಿಸುವ ಇತಿಹಾಸಕಾರನು ತನಗೆ ಮನಸ್ಸಿಗೆ ಬಂದ ಹಾಗೆ ವಿಷಯಗಳನ್ನು ನಿರೂಪಿಸುವ ಹಾಗಿಲ್ಲ. ಅವನು ಈ ನಿರೂಪಣೆಯಲ್ಲಿ ವಸ್ತುನಿಷ್ಠತೆ ಅಥವಾ ವಾಸ್ತವಿಕತೆಯನ್ನು ಕಾಪಾಡಬೇಕು, ಇಲ್ಲದಿದ್ದಲ್ಲಿ ನಿರೂಪಣೆಗೆ ಯಾವುದೇ ರೀತಿಯ ಬೆಲೆ ಇರುವುದಿಲ್ಲ. ಇದಕ್ಕಾಗಿಯೇ ಇತಿಹಾಸಕಾರನು ಇತಿಹಾಸ ನಿರೂಪಣೆಯಲ್ಲಿ ಒಬ್ಬ ನ್ಯಾಯಾದೀಶನಂತೆ ಕಾರ್ಯ ನಿರ್ವಹಿಸಬೇಕು ಎಂಬುದಾಗಿ ವಿವರಿಸುತ್ತಾರೆ. ಇದನ್ನು ಈ ಘಟಕದಲ್ಲಿ ಅಧ್ಯಯನ ಮಾಡುತ್ತೇವೆ.

## 11.2 ಇತಿಹಾಸದಲ್ಲಿ ವಾಸ್ತವಿಕತೆ

ಇತಿಹಾಸ ಕಲೆಯು ಸತ್ಯ ಶೋಧನೆಯಲ್ಲಿ ವಿಜ್ಞಾನದಷ್ಟೇ ನಿಖರವಾಗಿರುವುದಾಗಿದೆ. ಇದು ಕಷ್ಟಸಾಧ್ಯವಾದರೂ ವಾಸ್ತವಿಕತೆಯ ಬೆನ್ನಟ್ಟಿ ಹಿಂದಿನ ಘಟನೆಗಳ ಪುನರ್‌ರಚನೆಯಲ್ಲಿ ಭಾವನಾಪರವಶವಾಗದೆ, ವೈಜ್ಞಾನಿಕವಾಗಿ, ನಿಷ್ಪಕ್ಷಪಾತವಾಗಿರುವುದೇ ಇತಿಹಾಸದ ಧ್ಯೇಯ, ಇದರಿಂದ ವ್ಯಕ್ತಿ ನಿಷ್ಠೆಯನ್ನು ತ್ಯಜಿಸಿ ಇತಿಹಾಸಕಾರನು ನ್ಯಾಯಾಧೀಶನಂತೆ ಸಂದರ್ಭವನ್ನು ಸೂಕ್ಷ್ಮವಾಗಿ ಅವಲೋಕಿಸಿ, ಎಲ್ಲ ಸಾಕ್ಷ್ಯಗಳನ್ನೂ ಕ್ರೋಢೀಕರಿಸಿ ಯಾವ ಭಯ, ದಾಕ್ಷಿಣ್ಯಕ್ಕೊಳಗಾಗದೆ ತನ್ನ ತೀರ್ಪನ್ನು ಹೇಳಬೇಕು. ಇತಿಹಾಸವು ವಾಸ್ತವಾಂಶಗಳನ್ನು ನಗ್ನ ಸತ್ಯದಂತೆ ಹೇಳಬೇಕು. ಮಾನವನಿಗೆ ಸಹಜವಾಗಿ ಅನೇಕ ಆಸೆ (ದುರಾಸೆ) ಗಳ ಪೂರ್ವಾ ಗ್ರಹ, ವೈಯಕ್ತಿಕ ಇಷ್ಟ, ಅನಿಷ್ಟ, ಸಹಾನುಭೂತಿ, ಸ್ವಭಾವಸಿದ್ಧ ವೈರ, ರಾಷ್ಟ್ರೀಯ ಅಥವಾ ಪ್ರಾದೇಶಿಕ ಆಕರ್ಷಣೆ, ಭಾಷಾ ಮತ್ತು ಮತೀಯ ಧರ್ಮ ಸಂಪರ್ಕ, ಪರಿಣಾಮವಾಗಿ ವಾಸ್ತವಾಂಶದ ಗುರಿಮುಟ್ಟಲು ಬಾಧಕಗಳಾಗಿರುತ್ತವೆ. ಇತಿಹಾಸಕಾರನ ಔದ್ಯೋಗಿಕ ಘನತೆ ಮತ್ತು ಯೋಗ್ಯ ತರಬೇತಿಗಳು ಇವುಗಳನ್ನು ಮೆಟ್ಟಿ ಔದಾರ್ಯವನ್ನು ಹೊಂದಿರಬೇಕು.

ಇತಿಹಾಸಕಾರನು 'ವಾಸ್ತವ' ಮನೋಭಾವನೆ ಹೊಂದಲು ಸಾಧ್ಯವೇ ಎಂಬುದು ಒಂದು ಪ್ರಶ್ನೆಯಾಗಿ ನಾನಾ ವಾಗ್ವಾದಗಳಿಗೆ ಪ್ರೇರಕವಾಗಿದೆ. ಇದು ಭಾವನಾರೂಪದ್ದಾಗಿ (ಅಬ್‌ಸ್ಟ್ರಾಕ್ಟ್) ರುವ ಜ್ಞಾನ. ಆದುದರಿಂದ ಸಂಗತಿಗಳು ಅವನಿಗೆ ಗೋಚರವಾದ ವಿಷಯ, ಅಭಿಪ್ರಾಯಗಳಿಗನುಗುಣವಾಗಿರುತ್ತದೇ ಹೊರತು ನಿಜವಾದ, ನಡೆದ, ಘಟನೆಯಾಗಿಲ್ಲದಿರಬಹುದು. ಆದ್ದರಿಂದ ಇದು ವ್ಯಕ್ತಿನಿಷ್ಠವಾಯಿತೇ ಹೊರತು ವಸ್ತುನಿಷ್ಠವಾಗಲಿಲ್ಲ. ಇವು ಈ ಕರ್ತೃವಿನ ಬಾಹ್ಯಾವಿಚಾರ ಜ್ಞಾನದಿಂದ ಬಂದಿಲ್ಲವಾಗದೇ ಮನಸ್ಸಿನಿಂದ ಬಂದಿದ್ದಾಗಿರುತ್ತದೆ. ಹೀಗಾಗಿ ವಿಷಯವು ವಸ್ತುಸ್ಥಿತಿಯನ್ನು ಬಿಟ್ಟು ಇತಿಹಾಸಕಾರನ ಮನಸ್ಸಿನ ಭಾವನೆಗಳಂತೆ ಬರೆಯಲ್ಪಟ್ಟಾಗಿರುತ್ತದೆ. ಹೀಗಾಗಿ ನಿಜವೇ ತೊಂದರೆಗೊಳಗಾಗುತ್ತದೆ. ಹೀಗಾಗಿ ವಿಷಯ ವ್ಯಕ್ತಿಯೂ ಸರಿಯಾಗಿ ದಾಖಲಿಸಲ್ಪಡದೆವುಗಳಾಗಿ ಚರಿತ್ರೆಯ ವ್ಯತಿರಿಕ್ತವಾಗುತ್ತದೆ.

ಹೀಗಾಗಲು ಕಾರಣಗಳೇನೆಂದರೆ ಅದು ಉದ್ದಿಶ್ಯ ಪೂರ್ವಕವಾಗಿರಬಹುದು ಅಥವಾ ಗೊತ್ತಿಲ್ಲದೆ ಆಗಿರಬಹುದು. ಕರ್ತೃವು ತನ್ನ ಆಸಕ್ತಿ, ಪೂರ್ವಾಗ್ರಹ, ಸಂಪ್ರದಾಯ ಅಥವಾ ಇನ್ನೊಬ್ಬರ ಆಶೋತ್ತರಗಳನ್ನನುಸರಿಸುವ ಆಸೆ ಮುಂತಾದವುಗಳಿಗಾಗಿ ಹೀಗಾಗಿರಬಹುದು. ಕರ್ತೃವು ತನ್ನ ಮನಸ್ಸಿಗೆ ಒಪ್ಪಿದನ್ನು ಗ್ರಹಿಸಿ ತನಗಿಷ್ಟವಿಲ್ಲದ್ದನ್ನು ಗಮನಿಸದಿರಬಹುದು. ಇದಲ್ಲದೆ ಹಿಂದೆ ನಡೆದ ವಿಷಯಗಳೆಲ್ಲವನ್ನೂ ಸರಿಯಾಗಿ ಜೋಪಾನವಾಗಿಟ್ಟಿಲ್ಲದಿರಬಹುದು ಮತ್ತು ಹಿಂದೆ ದಾಖಲಿಸಿದವರು ಸಂಗತಿಯ ಎಲ್ಲ ವಿಷಯಗಳನ್ನು ವಿಸ್ತಾರವಾಗಿ ಬರೆಯದಿರಬಹುದು. ಕೆಲವನ್ನು ಬಿಟ್ಟಿರಬಹುದು. ಹೀಗಾಗಿ ಮುಂದೆ ಅದನ್ನವಲಂಬಿಸಿದವರು ಸ್ಪಷ್ಟತೆಯ ಕೊರತೆಯನ್ನನುಭವಿಸಿರಬಹುದು ಮತ್ತು ಉಳಿದ ವಿಷಯದಲ್ಲಿ ತಮಗೆ ಬೇಕಾದ್ದನ್ನು ಮಾತ್ರ ತೆಗೆದುಕೊಂಡ ಕಾರಣಗಳಿಂದ ಇಡೀ

ಸಂಗತಿಯು ಅಪೂರ್ಣವಾಗಿಯೂ ಕೊರತೆಗಳುಳ್ಳದಾಗಿಯೂ ಆಗಿರುತ್ತದೆ. ಇವುಗಳಲ್ಲದೆ ಅವನ ದೃಷ್ಟಿಕೋನ, ಅರ್ಥನಿರೂಪಣೆ, ಸ್ವಂತ ಬುದ್ಧಿವಂತಿಕೆ, ಸಾಮಾಜಿಕ, ಆರ್ಥಿಕ ರಾಜ್ಯನೀತಿ ಮುಂತಾದವುಗಳ ಬಗ್ಗೆ ತನ್ನದೇ ಆದ ಸಿದ್ಧಾಂತಗಳಿರುವುದು ಮುಂತಾದ ಕಾರಣಗಳೂ ಸಂಗತಿಯ ಸತ್ಯ ದಾಖಲೆಗೆ ಬೇರೆ ರೂಪಕೊಡಲನುವಾಗಬಹುದಾಗಿದೆ.

ವೈಯಕ್ತಿಕ ಕತೆ (ದೃಷ್ಟಿ) ಯು ನಾನಾ ಪೂರ್ವಾಗ್ರಹಪೀಡಿತ ವಿಷಯಗಳು ಪ್ರತಿಯೊಂದು ತಾವಾಗಿಯೂ ಅಥವಾ ಒಂದನ್ನೊಂದು ಸೇರಿಯೋ ಆಗುತ್ತದೆ. ಇದಕ್ಕೆ ಬಲುಮುಖ್ಯವಾಗಿ ಪಕ್ಷೀಯ ಭಾವನೆ (ಪಾರ್ಟಿಸಾನ್) ಗಳೇ ಆಗಿವೆ. ಇವುಗಳು ಭಿನ್ನ ಅಭಿಪ್ರಾಯಗಳು, ರಾಜಕೀಯ ಒಲವು, ಸಾಮೂಹಿಕ ಪೂರ್ವಾಗ್ರಹಗಳು ಮುಂತಾದ ಕಾರಣಗಳಿಂದ ಉಂಟಾಗುತ್ತವೆ. ಮಧ್ಯಕಾಲದ ಚರಿತ್ರಕಾರನಾದ ಸಂಟ್ ಆಗಸ್ಟಿನ್‌ಗೆ ದೇವಾತಾಶಾಸ್ತ್ರ (ಇಲ್ಲಿ ಬೈಬಲ್ ಆಧಾರಿತ) ಆಧಾರಿತ ಅಭಿಪ್ರಾಯಗಳು ಕ್ಯಾಂಟ್, ಹೆಗಲ್, ಸ್ಪೆಂಗ್ಲರ್, ಟಾಯ್ನಬಿ ಮುಂತಾದವರಿಗೆ ದಾರ್ಶನಿಕ ಆಧಾರಗಳು, ಕ್ರೋಷೆ, ಬಕಲ್, ಕಾರ್ಲ್‌ಮಾರ್ಕ್ಸ್ ಮುಂತಾದವರಿಗೆ ವಾಸ್ತುವಾದಗಳು ಮುಖ್ಯವಾಗಿ ಕಂಡು ಇತಿಹಾಸವನ್ನು 'ತಮ್ಮ ಮೂಗಿನ ನೇರಕ್ಕೆ' ಅವರವರ ಸಿದ್ಧಾಂತಗಳಿಗನುಗುಣವಾಗಿ ಬರೆದರೆ. ಹೀಗಾಗಿ ಇವುಗಳಲ್ಲಿ ಅಪೂರ್ಣ ಅಥವಾ ಅಭಾವಗಳುಂಟಾದುದು ಸಹಜವೇ. ಹರ್ಷಚರಿತ್ರದ ಬರಹಗಾರ ಬಾಣ, ಅಕ್ಬರ್‌ನಾಮ ಬರೆದ ಅಬುಲ್‌ಫಜಲ್ ತಮ್ಮ ಧೀರೋದ್ಧಾತನಲ್ಲಿ ಇರಬಹುದಾದ ಅವಗುಣಗಳನ್ನು ಗುರುತಿಸಲಾರದಷ್ಟು ತನ್ಮಯರಾಗಿದ್ದರು. ಮಧ್ಯಮ ಯುಗೀನ ಕಾಲದ ಯೂರೋಪಿನ ಬರಹಗಾರರು ಕ್ಯಾಥೋಲಿಕ್ ಅಥವಾ ಪ್ರಾಟೆಸ್ಟೆಂಟ್ ಭಾವನೆಗಳನ್ನು ಹೊಗಳುತ್ತಾ ಕೊರತೆಗಳನ್ನು ಸ್ವಭಾವಿಕವಾಗಿಯೇ ಮುಚ್ಚಿಡುತ್ತಿದ್ದರು. ಹೀಗೆಯೇ ಸ್ವಮತ ವಿಜೃಂಭಣೆ ವರ್ಣದ್ವೇಷ ಭಾವನೆ, ಬಣಗಳ ಸಂಬಂಧ, ಭಾಷಾ ಒಲವು, ರಾಷ್ಟ್ರೀಯ ಭಾವನೆ, ರಾಜಕೀಯ ಪಂಗಡ ಭಾವನೆ, ಸಾಮೂಹಿಕ ಹಿಂಜರಿಯುವ ಪ್ರವೃತ್ತಿಗಳ ಕಾರಣಗಳು ಇತಿಹಾಸ ಬರವಣಿಗೆಯಲ್ಲಿ ಪ್ರಭಾವ ಬೀರಿವೆ. 1857 ರಲ್ಲಿ ಭಾರತದಲ್ಲಿ ನಡೆದ ರಾಜಕೀಯ ಘಟನೆಯನ್ನು ವೀರ ಸಾವರ್ಕರರು ಭಾರತೀಯರಲ್ಲಿ ರಾಷ್ಟ್ರಾಭಿಮಾನವನ್ನು ಬ್ರಿಟಿಷರ ವಿರುದ್ಧ ಎತ್ತಿ ಕಟ್ಟಲು ಪ್ರಥಮ ಭಾರತ ಸ್ವಾತಂತ್ರ್ಯ ಭಾವನೆಯನ್ನು ಮಂದಗೊಳಿಸಲು (ನಿಕೃಷ್ಟ ಮಾಡಲು) ಕೇವಲ ಸಿಪಾಯಿದಂಗೆ ಎಂದರು: ಕೆಲವರು ಅದನ್ನು ಶ್ರೀಮಂತ ಜಮೀನ್ದಾರರು ಕಳೆದುಕೊಂಡ ಭೂಮಿಯನ್ನು ಪಡೆಯಲು ನಡೆಸಿದ ಸಂಚು ಎಂದರು; ಕೆಲವರು ಅದು ದರ್ಬಾರಕ್ಕೊಳಗಾದ ಭೂಮಿ ಹೀನರು ನಡೆಸಿದ ದಂಗೆ ಎಂದರು; ಕೆಲವರು ಅದನ್ನು ಭಾರತದ ಮತಧರ್ಮಾಭಿಮಾನಿಗಳ ಬುದ್ಧಿವಂತ ನಾಯಕರು ಬ್ರಿಟಿಷರು ತಮ್ಮ ಆಡಳಿತದಲ್ಲಿ ತಂದ ಸಮಾಜ ಸುಧಾರಣೆಯನ್ನು ಪ್ರತಿಭಟಿಸಲು ಮಾಡಿದ ತಂತ್ರ ಎಂದರು. ಹೀಗೆ ಪ್ರತಿಯೊಂದು ಗುಂಪೂ ಒಂದು ಪಕ್ಷೀಯ ಭಾವನೆ ಹೊಂದಿದ್ದ ಕಾರಣಗಳನ್ನು ಹೇಳಿರುವುದರಿಂದ ಅದರಲ್ಲಿ ಹುದುಗಿರುವ ಸತ್ಯಾಂಶವೇ ಬಲಿಯಾಗಿದೆ ಎಂಬ ಭಾವನೆ ಮೂಡುತ್ತದೆ. ಇದು ನಿಜವಾದ ಇತಿಹಾಸಕಾರನ ಮುಂದೆ ಬರುವ ಜಟಿಲ ಪ್ರಶ್ನೆ. ಇತಿಹಾಸ ದಾರ್ಶನಿಕರು ಹೀಗೆ ಸಾಧಾರಣವಾಗಿ ತಮ್ಮದೇ ಆದ ಒಂದು ಚುನಾಯಿತ ಮಾರ್ಗವನ್ನನುಸರಿಸಿ ಇತಿಹಾಸವು ಒಂದು ನಿರ್ದಿಷ್ಟ ಮಾದರಿಯಲ್ಲಿ ರಚನೆಯಾಗುತ್ತದೆ ಎನ್ನುತ್ತಾರೆ.

ವಾಸ್ತವಿಕತೆಯ ಅಜ್ಞಾನ ಕಾರಣದಿಂದಲೂ ಬಲಿಯಾಗುತ್ತದೆ. ಮೂಲ ವಿಷಯಗಳನ್ನು ದೊರಕಿಸಿಕೊಳ್ಳಲಾಗದ ಸಂದರ್ಭ ಮತ್ತು ದೊರಕಿದ ದತ್ತಾಂಶ (ಸಾಧನ) ಗಳನ್ನು ತಿಳಿಯಲು ಅಸಮರ್ಥರಾಗಿರುವುದು ಇವೇ ಅದಕ್ಕೆ ಮುಖ್ಯ ಕಾರಣಗಳು. ಈಗಿನ ಸಮುದಾಯಗಳು ಸತ್ಯಾಂಶ ಪ್ರಕಟಿಸಲು ಅಡ್ಡಿ ಆತಂಕಗಳನ್ನೊಡ್ಡಿ ವಿಷಯ ಪ್ರಸಾರಕ್ಕೆ ಮಾರಕವಾಗಿಯೋ ಅದನ್ನು ಕಡಿಮೆ ಮಾಡಿಯೋ ಅಥವಾ ತಮ್ಮ ಭಾವನೆಗಳಿಗನುಸಾರ ಪ್ರಸಾರ ಮಾಡಬೇಕೆಂದೋ ಸೂಚನೆಗಳನ್ನೋ ಬಲವಂತವನ್ನೋ ಪ್ರಕಟಿಸುತ್ತಾರೆ. ಕಮ್ಯುನಿಸ್ಟ್ ರಾಷ್ಟ್ರಗಳಾದ ರಷ್ಯಾ, ಚೈನಾಗಳಲ್ಲಿ ಈ ಪಕ್ಷೀಯ ಭಾವನೆ ಬಲವಾಗಿದೆ. ಹೀಗೆ ಹಿಂದಿನ ಕಾಲದಂತೆ ಈಗಲೂ ಇತಿಹಾಸಕಾರನೂ ಯಾವುದೇ ಉದ್ದಿಶ್ಯ ಸಾಧನೆಯ ಹರಿಕಾರರಾಗಿರಬೇಕಾಗಿದೆ. ಇದಲ್ಲದೆ ಕೆಲವರು ತಮ್ಮ ಉದ್ದಿಶ್ಯಗಳ ಸಾಧನೆಗೆ ಇತಿಹಾಸಕಾರರಾಗಿದ್ದಾರೆ. ತಮ್ಮ ಅಭಿಪ್ರಾಯಗಳನ್ನು ಪ್ರಭಾವಯುತವಾಗಿ ಪರಿಣಾಮಕಾರಿಯಾಗಿ ಹೇಳಲವಕಾಶ ದೊರಕುತ್ತದೆ. ಕೆಲವು ಸಂದರ್ಭಗಳಲ್ಲಿ ಒಲವು ಪ್ರೇರಣೆಗಳು ಐತಿಹಾಸಿಕ ತಪ್ಪುಗಳನ್ನೊಳಗೊಂಡಿದ್ದರೂ ಸ್ವಾರಸ್ಯಕರವಾಗಿರುತ್ತದೆ. ಇದಕ್ಕೆ ಮೆಕಾಲೆ ಬರೆದ ಇತಿಹಾಸವು ಒಳ್ಳೆಯ ಉದಾಹರಣೆಯಾಗಿದೆ.

ಇತಿಹಾಸ ರಚನಾಕಾರನು ಮನುಷ್ಯನಿಗೆ ಸಾಧ್ಯವಾದಷ್ಟು ಮಟ್ಟಿಗೆ ನಿಜವನ್ನು ವಿಶ್ವಾಸನೀಯವಾಗಿ ದಾಖಲಿಸಬೇಕು. ಆಗ ಅದು ವಾಸ್ತವಿಕತೆಯ ಸಮೀಪಕ್ಕಾದರೂ ಬರುತ್ತದೆ. ಇವುಗಳನ್ನು ಆದಷ್ಟು ಕಡಿಮೆ ಮಾಡಲು ವಿಮರ್ಶೆ, ದತ್ತಾಂಶಗಳನ್ನು ಆಗಾಗ್ಗೆ ಪರಿಶೀಲಿಸಬೇಕು. ಇತಿಹಾಸಕಾರನು ಕೆಲವೇ ಆಧಾರಗಳನ್ನು ಅವಲಂಬಿಸಿದರೆ ಆಗುವ ತಪ್ಪುಗಳನ್ನು ಮತ್ತಷ್ಟು ಆಧಾರಗಳನ್ನು ಪರಿಶೀಲಿಸಿದರೆ ಅವನ ನೋಟದ ದಿಗಂತ ವಿಸ್ತಾರವಾಗುತ್ತದೆ. ಹೊಸ ವಿಷಯಗಳನ್ನು ಸೇರಿಸಲು ಪ್ರಾಕ್ತನ ಸಂಶೋಧನೆ, ಶಾಸನ, ಸಾಹಿತ್ಯಗಳು ಸಹಾಯವಾಗುತ್ತವೆ. ನಿಜವಾದ ಅನ್ವೇಷಕರಿಗೆ ಇವು ದೊರಕುವುದು ಕಷ್ಟವಲ್ಲ. ಅದಮ್ಯ ಉತ್ಸಾಹ, ಮೇರೆಯಿಲ್ಲದ ತಾಳ್ಮೆಗಳು ಸಹಾಯಕವಾದರೆ ಉದಾಸೀನ ಸೋಮಾರಿತನಗಳು ಅಡ್ಡಿಗಳಾಗಿ ವ್ಯಕ್ತಿ ನಿಷ್ಠತೆಗಳಾಗುತ್ತವೆ. ಸತತ ಪ್ರಯತ್ನದಿಂದ ಪಕ್ಷೀಯ ಭಾವನೆಗಳು ತೊಲಗುತ್ತವೆ. ಅಷ್ಟಲ್ಲದೆ ಕುತೂಹಲ, ವಿಚಾರಪರತೆ, ಒಗಟುಗಳನ್ನೊಡೆಯುವ, ವಿಮರ್ಶಾತ್ಮಕ ಬುದ್ಧಿಯು ಇತಿಹಾಸದಲ್ಲಿ ವಾಸ್ತವಿಕತೆ ಸಾಧಿಸಲು ಸಹಾಯವಾಗುತ್ತದೆ. ಇತಿಹಾಸಕಾರನು ಮುಂದುವರೆಯಲು ಅನಿಶ್ಚಿತವಾದ, ಸಂದೇಹಪಡುವ ಪ್ರವೃತ್ತಿ ಸಹಜವಾಗಿ ಬೇಕಾದ ಸಂಶೋಧನಾ ಉಪಕರಣ. ಇದನ್ನು ಸಂದೇಹ ನಿವೃತ್ತಿಯಾಗಿ ಬಲವಾದ ನೆಲೆಯೂರುವವರೆಗೆ ಉಳಿಸಿಕೊಳ್ಳಬೇಕು. ಇತಿಹಾಸಕಾರನು ತನ್ನ ವಿವೇಚನೆಗೆ ಸಂಬಂಧಪಟ್ಟ ವಿಷಯದ ವ್ಯಕ್ತಿ, ಘಟನೆ, ನಡವಳಿಕೆಯನ್ನು ಅದರ ನಿಜವಾದ ಸಂದರ್ಭದಲ್ಲಿ ಕಾಣುವ ಐತಿಹಾಸಿಕ ಪ್ರಜ್ಞೆ ಯನ್ನು ಅಗತ್ಯವಾಗಿ ಬೆಳೆಸಿಕೊಳ್ಳಬೇಕು. ಘಟನೆಗಳನ್ನು ನ್ಯಾಯವಾಗಿ ವಿಮರ್ಶಿಸಿ ಅದರಲ್ಲಿರುವ ಅಂತ ಸತ್ವಗಳನ್ನು ಕಾಣುವ ದೃಷ್ಟಿ ಬೆಳೆಸಿಕೊಳ್ಳಬೇಕು. ಹೀಗೆ ಹೊರಗೆ ಕಾಣುವುದಕ್ಕಿಂತ ಒಳಗಿರುವುದನ್ನು, ಒಬ್ಬ ಪತ್ತೆದಾರಿಯಂತೆ, ಕಾಣಬರುವ ಬುದ್ಧಿ ಬೆಳೆಸಿಕೊಳ್ಳಬೇಕು. ಇದಲ್ಲದೆ ತನ್ನ ಸಾಮಾನ್ಯ ಬುದ್ಧಿಯನ್ನು ಉಪಯೋಗಿಸಿ ಯಾವುದು ಸಾಧ್ಯ. ಯಾವುದು ಅಸಂಭವದ್ಧ ಎಂದು ತಿಳಿಯಬೇಕು. ಇತಿಹಾಸಕಾರನ ಸಾಮಾನ್ಯೀಕರಣ ಮತ್ತು ತೀರ್ಮಾನಗಳು ಸಾಕಷ್ಟು ದತ್ತಾಂಶಗಳ ಆಧಾರಗಳ ಮೇಲೆ ರೂಪಿತವಾಗಿ ಸಮತೋಲನ ದೃಷ್ಟಿಯಲ್ಲಿರಬೇಕು. ಸಮುದಾಯದಲ್ಲಿ ಕೆಲವರು ಕೆಟ್ಟವರಿರುವುದರಿಂದ ಎಲ್ಲರೂ ಕೆಟ್ಟವರೆಂದೂ, ಕೆಲವು ಶ್ರೀಮಂತರು ಕಾಣಿಸುವುದರಿಂದ ಎಲ್ಲರೂ ಶ್ರೀಮಂತರೆಂದೋ ಆತುರ ತೀರ್ಮಾನಕ್ಕೆ ಬರಬಾರದು. ಇತಿಹಾಸಕಾರನು ಬದಲಾಗದ ಸಿದ್ಧಾಂತಗಳನ್ನು ರೂಪಿಸುವ ಧಾರ್ಷ್ಟ್ಯಕ್ಕೆ ಹೋಗದೆ ತನ್ನ ಅಭಿಪ್ರಾಯಗಳನ್ನು ತನ್ನ ಸಂಶೋಧನೆಯ ಮಿತಿಯಲ್ಲಿಟ್ಟಿರಬೇಕು. ತನ್ನ ಸಂಶೋಧನಾ ಪರಿಣಾಮವನ್ನು ಸತ್ಯವಾಗಿ ನಿರೂಪಿಸಬೇಕೇ ಹೊರತು ಜನಪ್ರಿಯತೆಯ ಪ್ರಭಾವಕ್ಕಾಗಿ ತದ್ವಿರುದ್ಧವಾಗಿ ನಿರೂಪಿಸಬಾರದು.

ಎಷ್ಟೋ ಸಂದರ್ಭಗಳಲ್ಲಿ ಇತಿಹಾಸವನ್ನು ಸಾಮಾಜಿಕ, ರಾಜಕೀಯ ಅಥವಾ ಆರ್ಥಿಕ ಉದ್ದೇಶಗಳಿಗಾಗಿ ಉಪಯೋಗಿಸಲ್ಪಡುತ್ತಿದೆ. ರಾಷ್ಟ್ರೀಯ ಭಾವನೆ ಉನ್ಮತ್ತತೆಗೊಳಿಸುವುದಕ್ಕಾಗಿ, ಜನಾಂಗಗಳ ಹೆಚ್ಚಳವನ್ನು ಪ್ರಚಾರ ಮಾಡುವುದಕ್ಕಾಗಿ ಇತರರನ್ನು ಹಿಯಾಳಿಸುವುದಕ್ಕಾಗಿ ಯುವಕರನ್ನು ಉತ್ತೇಜನಗೊಳಿಸುವುದಕ್ಕಾಗಿ ಇಂಥ ಅಪಾಯಕಾರಿ ವಿನಾಶಕಾರಿ ಪ್ರವೃತ್ತಿಗಳು ಆಗಿಂದ್ದಾಗ್ಗೆ ಸ್ಫೋಟಗೊಳ್ಳುತ್ತವೆ. ಫಾಸಿಸ್ಟ್ ರಾಜ್ಯಗಳಾದ ಇಟಲಿ ಮತ್ತು ಜರ್ಮನಿಯ ನಾಜಿ ಸಂಘಗಳಿಂದಾಗಿ ಪ್ರಪಂಚದಲ್ಲಿ ಯುದ್ಧ, ಪ್ರಾಣಹಾನಿ, ಆರ್ಥಿಕ ಹಾನಿ, ಅನೇಕ ಊರು ಉತ್ಪಾದನಾ ಕೇಂದ್ರಗಳ ನಾಶಗಳುಂಟಾದವು. ಬ್ರಿಟಿಷರು ತಾವೇ ಉತ್ಕೃಷ್ಟ ಜನಾಂಗದವರೆಂಬ ಆತ್ಮ ಪ್ರಶಂಸೆಯ ಉದ್ಧಟತನದ ಪ್ರತಿನಿಧಿಗಳಾದ ಲಾರ್ಡ್ ಡಾಲ್ ಹೌಸಿ ಮತ್ತು ಲಾರ್ಡ್ ಕರ್ಜನ್ ಮುಂತಾದವರಿಂದ ಭಾರತದ ಜನಗಳು ಹೀನಾಯವಾಗಿ ಕಾಣಲ್ಪಟ್ಟರು. ಅಮೆರಿಕಾ ಸಂಯುಕ್ತ ಸಂಸ್ಥಾನರು ತನ್ನ ಐಶ್ವರ್ಯದ ಮದದಿಂದ ಸ್ವಯಂ ಘೋಷಿತ ಪ್ರಪಂಚದ ರಕ್ಷಕನೆಂಬ ಅಹಂಕಾರದ ಬಿರುದುಕೊಟ್ಟು ಜಗತ್ತಿನ ಎಲ್ಲ ರಾಷ್ಟ್ರಗಳ ಆಂತರಿಕ ವ್ಯವಹಾರದಲ್ಲೂ ಯಾವ ಮುಚ್ಚು ಮರೆಯಿಲ್ಲದೆ, ಪ್ರವೇಶ ಮಾಡುತ್ತಿದೆ. ಇದು ಐತಿಹಾಸಿಕ ವಾಸ್ತವಿಕತೆಯ ಮೇರೆ ಮೀರಿ ಇತಿಹಾಸದ ವಿರೋಧಾಭಾಸಗಳಾಗಿವೆ.

ಇತಿಹಾಸದ ಕೆಲವು ವಿಭಾಗಗಳು ವ್ಯಕ್ತಿತ್ವದ ಪ್ರಭಾವಕ್ಕೊಳಪಡುವುದು ಸಹಜವಾಗಿದೆ. ಸಮಾಜ ಇತಿಹಾಸವು ಈ ಮಿತಿಗೆ ಸೇರಿದ್ದಾಗಿದೆ. ಸಮಾಜ ಸಂಸ್ಥೆಗಳ ಉಗಮ ವಿಚಾರವಾಗಿ ಒಬ್ಬ ಇತಿಹಾಸಕಾರ ಮತ್ತೊಬ್ಬನಿಂದ ಭಿನ್ನಾಭಿಪ್ರಾಯ ಉಳ್ಳವನಾಗಿದ್ದಾನೆ. ಇದಲ್ಲದೆ ಐತಿಹಾಸಿಕ ಆಂತರಿಕ ಅಸತ್ಯಗಳ ಫಲವಾಗಿ ಅವು ವ್ಯಕ್ತವಾಗುವ ಸಂಭವಗಳೂ ಇವೆ. ದತ್ತಾಂಶಗಳನ್ನು ಪರೀಕ್ಷಿಸಲಾಗದಿರುವುದು. ಜ್ಞಾಪಕ ಶಕ್ತಿಯನ್ನೆ ಬಲವಾಗಿ ನಂಬಿರುವುದು, ಬಿಟ್ಟು ಹೋಗಿರುವ ಸಂಗತಿಗಳನ್ನು ಊಹೆಯಿಂದಲೇ ಭರ್ತಿಮಾಡಿಕೊಳ್ಳುವ ಸ್ವಭಾವಗಳು ಇಂಥ ತಪ್ಪಿಗೆ ಕಾರಣಗಳಾಗುತ್ತವೆ. ಇವುಗಳಲ್ಲದೆ ಭಾಷಾಶಾಸ್ತ್ರ, ಸಂಬಂಧ ದೋಷಗಳು, ತಪ್ಪಾಗಿರುವ

ವಿಚಾರಣಾ ಹಾಗೂ ಪ್ರಶ್ನೆಗಳ ಪದ್ಧತಿ, ತಪ್ಪಾದ ಹೋಲಿಕೆ ಮುಂತಾದವುಗಳಿಂದಲೂ ತಪ್ಪುಗಳಾಗುತ್ತವೆ. ತಪ್ಪು ಉದಾಹರಣೆ, ಹೋಲಿಕೆಗಳಿಂದಾಗಿ ತಪ್ಪು ತೀರ್ಮಾನಗಳುಂಟಾಗುತ್ತವೆ. ಕಾಲಾಭಾಸಗಳಿಂದಲೂ ದೊಡ್ಡ ತಪ್ಪುಗಳಾಗುತ್ತವೆ. ಎಷ್ಟೋ ಸಂದರ್ಭಗಳಲ್ಲಿ ಹೆಚ್ಚು ಒತ್ತು ಕೊಡುವುದಕ್ಕಾಗಿ ಉಪಯೋಗಿಸುವ ಪ್ರಕೃತಿಗೆ (ಕಲ್ಲು, ಇಟ್ಟಿಗೆ, ಗಾರೆ ಇತ್ಯಾದಿ) ಮಾನವ ಸ್ವರೂಪ ಆರೋಪಿಸುವ ಸ್ವಭಾವವು ತರ್ಕಬದ್ಧವಲ್ಲದ, ಒಪ್ಪಿಗೆಯಾಗಲೊಲ್ಲದ, ತಪ್ಪಿಗೆ ಅವಕಾಶ ಕಲ್ಪಿಸುತ್ತದೆ.

ವೈಯಕ್ತಿಕ ದೃಷ್ಟಿಯಿಂದ ಸಂಗತಿಗಳನ್ನು ತಮ್ಮ ಅಭಿಪ್ರಾಯಗಳಿಗನುಸಾರವಾಗಿ ತಿರುಚಿ ಹೇಳುವುದು ಬಹಳ ಅಪಾಯಕಾರಿ. ಇದೊಂದು ಬೋಧನಾತ್ಮಕ ತಪ್ಪು ತನ್ನ ರಾಷ್ಟ್ರದ ಬಗ್ಗೆ ಅನಾವಶ್ಯಕ ಗೌರವ, ಇತರರ ಬಗ್ಗೆ ತಿರಸ್ಕಾರ ಮತ್ತು ಇದರಲ್ಲಿರುವ ಗುಣದ ಬಗ್ಗೆ ಉದಾಸೀನತೆ ಮುಂತಾದವೂ ಇತಿಹಾಸಕಾರ (ಸತ್ಯಾನ್ವೇಷಣೆಯಲ್ಲಿರುವವ) ನಲ್ಲಿರಬಹುದಾದ ಅವಗುಣಗಳಾಗಿವೆ. ಕೆಲವು ಭಾರತದ ಬ್ರಿಟಿಷ್ ಇತಿಹಾಸಕಾರರಿಗೆ ಹಿಂದೂಗಳ ಚರಿತ್ರೆ ಬಗ್ಗೆ ತಾತ್ಸಾರ, ಹೀಗೆ ಎಷ್ಟೋ ಸಾಂಸ್ಕೃತಿಕ ಗುಂಪುಗಳು ಇತರರ ಬಗ್ಗೆ ಅಸಹನೆ, ತಮ್ಮದರ ಬಗ್ಗೆ ಅತ್ಯುತ್ಸಾಹಗಳಿರುವುದು ಸಹಜ. ಫ್ರಾನ್ಸಿನ ಇತಿಹಾಸಕಾರನ ಮಾತು ಸಮಗೆ ಎಚ್ಚರಿಕೆ. ದೇಶಾಭಿಮಾನವು ಒಂದು ಸದ್ಗುಣ, ಆದರೆ ಇತಿಹಾಸವು ಒಂದು ವಿಜ್ಞಾನ; ಇವುಗಳೆರಡನ್ನು ಅಪಾರ್ಥಮಾಡಿಕೊಳ್ಳಬಾರದು. ಮೂಲ ಗ್ರಂಥವನ್ನು ಬಹಳ ಜಾಗರೂಕತೆಯಿಂದ ಅಭ್ಯಾಸ ಮಾಡಬೇಕೆಂದು ಅಭಿಪ್ರಾಯ ಪಟ್ಟಿದ್ದಾನೆ.

ಇತಿಹಾಸದ ವಿಪರೀತವಾದ ಅಲಂಕಾರ ಭಾಷೆ ವಾಗ್ಮೀಯತೆಗಳನ್ನು ಅನುಸರಿಸುವುದು ವಾಸ್ತವಿಕತೆಯನ್ನು ತಿಳಿಯಲು ಅಡ್ಡಿಗಳಾಗುತ್ತವೆ. ಯೂರೋಪಿನ ಜ್ಞಾನೋದಯ ಕಾಲದವರು ಅನಾವಶ್ಯಕವಾಗಿ ಹಿಂದಿನ ಗ್ರೀಕ್ ಮತ್ತು ರೋಮನ್ನರ ಬರವಣಿಗೆ ಶೈಲಿಯನ್ನು ಉಪಯೋಗಿಸಿ ಸುಲಭಾರ್ಥಕ್ಕೆ ತೊಂದರೆಯನ್ನೊಡ್ಡಿದರು. ಚರಿತ್ರೆಯಲ್ಲಿ ಸಾಹಿತ್ಯಭಾಗಕ್ಕಿಂತ ಸತ್ಯ ಸಂಗತಿ ಸರಳವಾಗಿ ಹೆಚ್ಚಿನ ಸ್ಥಾನ ಪಡೆದಿರಬೇಕು. ಇತಿಹಾಸದ ವಾಸ್ತವಿಕತೆಯಲ್ಲಿ ದೇಶಾಭಿಮಾನ, ಇತಿಹಾಸ ದರ್ಶನಗಳು ಒಂದು ಮಿತಿಯನ್ನು ಮೀರಿದರೆ ಅವು ಸತ್ಯ ಶೋಧನೆಗೆ ಆತಂಕವನ್ನೊಡ್ಡುತ್ತವೆ. ಇತಿಹಾಸಕಾರ ಬ್ಯೂರಿಯ ಅಭಿಪ್ರಾಯದಂತೆ ಹೆಗಲ್, ಕೋಟೆ ಮತ್ತು ಕ್ರೂಸೆ ಮುಂತಾದ ದಾರ್ಶನಿಕರು ಇತಿಹಾಸ ವ್ಯಾಪ್ತಿಯನ್ನು ಬಹಳ ಬಲವಂತವಾಗಿ ಕಿರಿದು ಮಾಡುವ ವಿಮರ್ಶಕರಾಗಿದ್ದಾರೆಂದು, ಅವರಿಗೆ ತಮ್ಮ ಅಭಿಪ್ರಾಯಗಳೇ ಸೂಕ್ಷ್ಮ, ಅವೇ ಆಕೈರು ಯೋಚನೆ, ಅವೇ ಕಾಲಗತಿಯಲ್ಲಿ ಕೊನೆಯ ಹಂತ ಎಂಬುದಾಗಿ ತಿಳಿದಿದ್ದರು. ಆದ್ದರಿಂದ ಇತಿಹಾಸದ ವಿಶಾಲ ದೃಷ್ಟಿಗೆ ಮೇರೆಯನ್ನು ಹಾಕುವ ಪ್ರಯತ್ನ ನಡೆದಂತಾಯಿತು.

ಅಂತಿಮ ತೀರ್ಮಾನಕ್ಕಾಗಿ ಇತಿಹಾಸ ರಚನೆಯಲ್ಲಿ ವಾಸ್ತವಿಕತೆಯು ಬಹಳ ಮುಖ್ಯ ಪಾತ್ರ ವಹಿಸುವುದಾಗಿದೆ. ಇವುಗಳಿಗೆ ಅಡ್ಡಿ ಬರುವ ತಪ್ಪು, ಪೂರ್ವಾಗ್ರಹ, ದೇಶಾಭಿಮಾನ, ಪುರಾಣ ದೇವತಾಶಾಸ್ತ್ರ, ವೈಯಕ್ತಿಕ ಆಸೆ, ದುರಾಸೆಗಳನ್ನು ವಿಸ್ತಾರವಾಗಿ ಚರ್ಚಿಸಲಾಗಿದೆ. ಇತಿಹಾಸಕಾರನು ಈ ಪ್ರಚೋದನೆಗಳನ್ನು ಬದಿಗೊತ್ತಿ ತನ್ನ ಸ್ವಾರಸ್ಯಭಾವಬುದ್ಧಿ (ಇಂಟಿಗ್ರಿಟಿ) ಯನ್ನು ನಿರ್ದಾಕ್ಷಿಣ್ಯವಾಗಿ ಸ್ಥಾಪಿಸಿ ತನ್ನ ಸಿದ್ಧಾಂತಗಳನ್ನು ಒತ್ತಿ ಹೇಳಬೇಕು; ಅದನ್ನು ಆದಷ್ಟು ಸ್ವಾರಸ್ಯವಾಗಿ ಊಟಕ್ಕೆ ಉಪ್ಪಿನ ಕಾಯಿಯ ರುಚಿಯಂತೆ, ಹಿತಮಿತವಾಗಿ ಹೇಳಬೇಕು.

## 11.3 ಘಟಕದ ಸಾರಾಂಶ

ಈ ಘಟಕದ ಅಧ್ಯಯನದ ನಂತರ ನಾವು,

* ಇತಿಹಾಸ ವಿಷಯ ನಿರೂಪಣೆಯಲ್ಲಿ ಇತಿಹಾಸಕಾರನು ಹೇಗೆ ಕಾರ್ಯ ನಿರ್ವಹಿಸಬೇಕು ಎನ್ನುವ ನೀತಿನಿಯಮಗಳನ್ನು ಅನುಸರಿಸಬೇಕು.
* ವಿಷಯ ನಿರೂಪಣೆಯಲ್ಲಿ ಯಾವುದೇ ಭಿನ್ನ ಬೇದಭಾವಗಳನ್ನು ತರಬಾರದು.
* ವಸ್ತುನಿಷ್ಟತೆಯ ನಿರೂಪಣೆಯನ್ನು ಮಾಡಬೇಕು ಹಾಗೂ
* ವಸ್ತು ನಿಷ್ಟತೆಯನ್ನು ಕಾಪಾಡುವಲ್ಲಿ ಒಬ್ಬ ನ್ಯಾಯಮೂರ್ತಿಯಂತೆ ಕಾರ್ಯ ನಿರ್ವಹಿಸಬೇಕು ಎಂಬುದನ್ನು ಸಹ ಈ ಘಟಕದಲ್ಲಿ ಅಧ್ಯಯನ ಮಾಡಿ ತಿಳಿದುಕೊಂಡೆವು.

## 11.4 ಸ್ವಯಂ ಪರಿಶೀಲನಾ ಪ್ರಶ್ನೆಗಳು

1. ಇತಿಹಾಸ ನಿರೂಪಣೆಯಲ್ಲಿ ವಸ್ತುನಿಷ್ಟತೆಯ ಪ್ರಾಮುಖ್ಯತೆ ತಿಳಿಸಿ.
2. ವಾಸ್ತವಿಕತೆಯ ನಿರೂಪಣೆಯು ಒಬ್ಬ ನ್ಯಾಯಾಧೀಶನ ಕಾರ್ಯಕ್ಕೆ ಹೋಲುವುದನ್ನು ವಿಮರ್ಶಾತ್ಮಕವಾಗಿ ಚರ್ಚಿಸಿ.

## 11:5 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. ವೆಂಕಟರತ್ನಂ ಮತ್ತು ಪದ್ಮ : ಇತಿಹಾಸ ಸಂಶೋಧನಾ ಮಾರ್ಗ
2. ಚೇತನ ಪಬ್ಲಿಕೇಷನ್ಸ್ : ಇತಿಹಾಸ ಸಂಶೋಧನಾ ಮಾರ್ಗ
3. Sheik Ali .B. : History, Its Theory and Methods

# ಘಟಕ -12

## ಗ್ರೀಕರ ಇತಿಹಾಸ ಬರವಣಿಗೆ -ಹೆರೊಡೋಟಸ್, ಥೂಸಿಡೈಡಿಸ್ ಹಾಗೂ ಇತರ ಗ್ರೀಕ್ ಇತಿಹಾಸ ಬರಹಗಾರರು

ರಚನೆ


12.0 ಉದ್ದೇಶಗಳು

12.1 ಪರಿಚಯ

12.2 ಪ್ರಾಚೀನ ಗ್ರೀಕ್ ಭಾಷಣ ಲೇಖಕರು

12.3 ಪ್ರಾರಂಭದ ಗ್ರೀಕ್ ಕಥನಕಾರರು

12.4 ಹೆರೊಡೋಟಸ್

12.5 ಥೂಸಿಡೈಡಿಸ್

12.6 ಜೆನೋಫನ್

12.7 ಪಾಲಿಬಿಯಸ್

12.8 ಸಂಕ್ಷಿಪ್ತ ಅವಲೋಕನ

12.9 ಸ್ವಂತ ಅಧ್ಯಯನಕ್ಕೆ ಪ್ರಶ್ನೆಗಳು

12.10 ಹೆಚ್ಚಿನ ಅಧ್ಯಯನಕ್ಕೆ ಬೇಕಾದ ಗ್ರಂಥಗಳು

## 12.0 ಉದ್ದೇಶಗಳು

ಈ ಘಟಕವನ್ನು ಅಧ್ಯಯನ ಮಾಡಿದ ನಂತರ ಈ ಕೆಳಗಿನ ಅಂಶಗಳನ್ನು ನೀವು ತಿಳಿಯುವಿರಿ.

* ಗ್ರೀಕ್ ಇತಿಹಾಸ ಲೇಖನದ ಪ್ರಮುಖ ಲಕ್ಷಣಗಳು
* ಭಾಷಣ ಲೇಖಕರಿಂದ ಪ್ರಾರಂಭವಾದ ಇತಿಹಾಸ ಲೇಖನ
* ಪ್ರಾರಂಭದ ಕಥನಕಾರರ ಪ್ರಯತ್ನಗಳು
* ಹೆರಡೋಟಸ್‌ನ ಶ್ರೇಷ್ಠ ಕೊಡುಗೆ, ಅವನನ್ನು ಇತಿಹಾಸದ ಜನಕ ಎಂದು ಪರಿಗಣಿಸಿದ್ದು.
* ಆತನ ವಿಷಯ ಶೈಲಿ ಮತ್ತು ಮಾರ್ಗ
* ಥೂಸಿಡೈಡಿಸ್ -ವೈಜ್ಞಾನಿಕ ಇತಿಹಾಸದ ಜನಕನೆಂದು ಪರಿಗಣಿಸಿದ್ದು
* ಆತನ ವಿಷಯ ಮಾರ್ಗ ಮತ್ತು ಶೈಲಿ
* ಇತರ ಗ್ರೀಕ್ ಇತಿಹಾಸಲೇಖಕರಾದ ಜೆನೋಫನ್ ಮತ್ತು ಪಾಲಿಬಿಯಸ್‌ರ ಕೊಡುಗೆಗಳು

## 12.1 ಪರಿಚಯ

ಇತಿಹಾಸ ಲೇಖನದ ಪ್ರಾರಂಭವಾದದ್ದು ಗ್ರೀಕರ ಪ್ರಜ್ಞೆಯಿಂದ ಎನ್ನುವುದು ಸ್ಥಿರಪಟ್ಟಿರುವ ವಿಷಯವಾಗಿದೆ. ಇತರ ಎಲ್ಲಾ ಸ್ವಾಭಾವಿಕ ಶಾಸ್ತ್ರಗಳು ಗ್ರೀಕರ ಮನ ಸೆಳೆದಂತೆ ಇತಿಹಾಸ ಲೇಖನವೂ ಗ್ರೀಕರ ಗಮನವನ್ನು ಸೆಳೆಯಿತು. ಈ ಕಾರಣದಿಂದ ಗ್ರೀಕರು ಇತಿಹಾಸ ಲೇಖನದ ಬೆಳವಣಿಗೆಯಲ್ಲಿ ಮೂಲ ಕರ್ತೃಗಳೆನಿಸಿದರು. ಕ್ರಿ.ಪೂ. 6ನೇ ಶತಮಾನಕ್ಕಿಂತ ಮೊದಲು ಗ್ರೀಕ್‌ನಲ್ಲಿಯೂ ಗತಕಾಲದ ಘಟನೆಗಳನ್ನು ದಾಖಲಿಸುವ ಅಭ್ಯಾಸವಿರಲಿಲ್ಲ. ಕ್ರಿ.ಪೂ. 6ನೇ ಶತಮಾನದಲ್ಲಿ ಉಂಟಾದ ಪದ್ಯ ಹಾಗೂ ಭಾಷಣ ಕಲೆಯ ಸಂಯೋಗದಿಂದ ಇತಿಹಾಸ ಲೇಖನ ಉತ್ಪನ್ನವಾಯಿತು. ಗ್ರೀಕರು ಇತಿಹಾಸ ರಚನೆಯನ್ನು ಒಂದು ಪ್ರಜ್ಞಾಪೂರ್ವಕವಾದ ಕಲೆಯಾಗಿ ಬೆಳೆಸಿ, ಇತಿಹಾಸ ಲೇಖನದಲ್ಲಿಯೂ ಮೊದಲಿಗರೆನಿಸಿದರು. ಸಮಕಾಲೀನ ಸಮಾಜದ ಪರಿಸ್ಥಿತಿಗಳನ್ನು ಕುರಿತು ಲಾವಣಿ ಅಥವಾ ಲಘು ಕಾವ್ಯಗಳನ್ನು ಹಾಡುತ್ತಿದ್ದ ಹಾಡು ಕವಿಗಳು ಪ್ರಾರಂಭದ ಇತಿಹಾಸ ಲೇಖಕರಾಗಿದ್ದರು. ಹೆರೋಡಟಸ್‌ನ ಕಾಲದಿಂದ ಗ್ರೀಕರು ಘಟಿಸಿದ ಘಟನೆಗಳನ್ನು ಸರಳ ಗದ್ಯದ ರೂಪದಲ್ಲಿ ವಿವರಿಸಲು ಪ್ರಾರಂಭಿಸಿದರು. ಅದು ಪದ್ಯದ ಪ್ರಭಾವದಿಂದ ಸಂಪೂರ್ಣವಾಗಿ ಹೊರತಾಗಿದ್ದು, ಸಾಹಸ ಗಾಥೆಗಳಷ್ಟೇ ಆಸಕ್ತಿಯನ್ನು ಹುಟ್ಟಿಸುವಂತಿದ್ದವು. ಪ್ರಾರಂಭದ ಬರಹಗಾರರು ತಮ್ಮ ಸರಳ ಗದ್ಯಗಳಲ್ಲಿ ಪಟ್ಟಣಗಳ ಮೂಲ, ಜನತೆ, ರಾಜಕುಮಾರರು, ಮತ್ತು ದೇವಾಲಯಗಳಿಗೆ ಸಂಬಂಧಿಸಿದಂತೆ ಅನೇಕ ಐತಿಹ್ಯಗಳನ್ನು ಮತ್ತು ಸಂಪ್ರದಾಯಗಳನ್ನು ಚಿತ್ರಿಸಿದರು. ಕ್ರಿ.ಪೂ. 6ನೇ ಶತಮಾನದಿಂದ ಐತಿಹಾಸಿಕ ಬರಹಗಳನ್ನು ರಚಿಸಲು ಪ್ರಾರಂಭವಾಯಿತು. ಹೀಗೆ ಐತಿಹಾಸಿಕ ಬರಹ ಪ್ರಾರಂಭವಾದದ್ದು ಮೊದಲಿಗೆ ಐಯೋನಿಯದಲ್ಲಿ. ಇದು ಗ್ರೀಕರ ಮಹಾಕಾವ್ಯದ ಜನ್ಮ ಸ್ಥಳವಾಗಿತ್ತು ಹಾಗೂ ಪ್ರಪಂಚದ ಮೊಟ್ಟ ಮೊದಲ ಇತಿಹಾಸದ ತೌರು ಮನೆಯಾಗಿತ್ತು.

## 12.2 ಪ್ರಾಚೀನ ಗ್ರೀಕ್ ಭಾಷಣ ಲೇಖಕರು

ಭಾಷಣಗಳ ಲೇಖಕನಾದ ಮಿಲೆಟ್ಸ್‌ನ ಹೆಕಟಿಯುಸ್‌ನು ಹೆರೋಡಟಸ್‌ನಿಗಿಂತ ಮುಂಚಿನವನು. ಹೆರೋಡೊಟಸ್‌ನು ಹೆಕಟಿಯಸ್‌ನಿಂದ ಬಹಳ ಪ್ರಭಾವಿತಗೊಂಡಿದ್ದನು. ಗ್ರೀಕ್‌ನ್ನು ಇತಿಹಾಸ ಲೇಖನಕಾರರು ಲಾವಣಿಕಾರರಿಂದ ಸ್ಫೂರ್ತಿಯನ್ನು ಪಡೆಯಲು ಲಾವಣಿಗಳು ಸಮ ಕಾಲೀನ ಸಮಾಜದ ಸ್ಥಿತಿಗಳನ್ನು ಬಿಂಬಿಸುತ್ತಿದ್ದವು. ಗ್ರೀಕ್‌ನ ಪ್ರಸಿದ್ಧ ಕವಿಯಾದ ಹೋಮರ್‌ನು ಇಂತಹ ಲಾವಣಿಕಾರರ ಗುಂಪಿಗೆ ಸೇರಿದವನಾಗಿದ್ದನು. ಹಾಗಾಗಿ, ಹೋಮರನ ಪದ್ಯಗಳು ಐತಿಹಾಸಿಕ ವಸ್ತುಗಳನ್ನು ತಿಳಿಸುತ್ತಿದ್ದವು. ಹೆಸಾಯಿಡ್ ಎಂಬ ಮತ್ತೊಬ್ಬ ಕವಿಯು ಗ್ರೀಕರ ದೇವಾನುದೇವತೆಗಳ ಪೂರ್ವಜರ ವ್ಯಾಖ್ಯಾನವನ್ನು ಚಿತ್ರಿಸಿದ್ದಾನೆ. ಈತನು ಮಹಾಪುರುಷರ, ಶೂರಬಲ್ಲರ

ಮತ್ತು ದೊರೆಗಳ ವಂಶವೃಕ್ಷಗಳನ್ನು ಚಿತ್ರಿಸುವವರಿಗೆ ಮಾದರಿಯಾದನು. ಈ ರೀತಿಯಲ್ಲಿ ಲಾವಣಿಗಳು ಐತಿಹಾಸಿಕ ಸಾಹಿತ್ಯದ ಉದಯದಲ್ಲಿ ಪ್ರಥಮ ಹೆಜ್ಜೆಯೆನಿಸಿದವು. ಈ ಲಾವಣಿಗಳನ್ನು ಸಾರ್ವಜನಿಕರನ್ನು ರಂಜಿಸಲು ಹಾಡಲಾಗುತ್ತಿತು, ಆದರೆ ಈ ಲಾವಣಿಗಳು ಸಮಕಾಲೀನ ಘಟನೆಗಳನ್ನು ಆಧರಿಸಿರುತ್ತಿದ್ದವು. ಆದ್ದರಿಂದ ಭಾಷಣಕಾರರು ಕಲ್ಪನೆಯಿಂದ ಇತಿಹಾಸದ ಪರಿವರ್ತನಾಕಾರರಾದರು. ಇದರಿಂದ ಕಲ್ಪನೆಯಿಂದ ಲಾವಣಿಗಳಾಗಿಯೂ ಲಾವಣಿಗಳಿಂದ ಇತಿಹಾಸವಾಗಿಯೂ ಬೆಳವಣಿಗೆಯಾದುದನ್ನು ಗ್ರೀಸ್‌ನಲ್ಲಿ ಕಾಣಬಹುದು. ಆದರೆ ಭಾರತದಲ್ಲಿ ಇಂತಹ ಬದಲಾವಣೆಯನ್ನು ಕಾಣಲಾಗುವುದಿಲ್ಲ. ಗ್ರೀಸ್‌ನ ಭಾಷಣಕಾರರಿಗೆ, ಸ್ಥಳೀಯ ಇತಿಹಾಸ, ಅವರ ಆಸಕ್ತಿಯ ವಿಷಯವಾಯಿತು. ಅವರು ತಮ್ಮ ಸಮಕಾಲೀನ ಘಟನೆಗಳನ್ನು ಅವುಗಳು ಎಲ್ಲಿ ಘಟಿಸಿದುವೆಂದೂ, ಎಲ್ಲಿ ಅವರು ವಾಸವಾಗಿರುತ್ತಿದ್ದರು ಎಂಬುದನ್ನು ಕುರಿತು ಬರೆಯುತ್ತಿದ್ದರು. ಹಾಗಾದಾಗ ಅಂತಹ ಘಟನೆಗಳನ್ನು ಅವರು ಕೂಲಂಕುಶವಾಗಿ ವೀಕ್ಷಿಸುತ್ತಿದ್ದಿರಬಹುದು.

ಈ ಭಾಷಣಕಾರರು ಜನರಲ್ಲಿ ಐತಿಹಾಸಿಕ ಘಟನೆಗಳ ಬಗ್ಗೆ ಆಸಕ್ತಿಯನ್ನು ಹುಟ್ಟಿಸಿದರು. ಅವರು ತಮ್ಮ ಬರಹಗಳ ಮೂಲಕ ಇತಿಹಾಸವನ್ನು ಆನಂದವನ್ನು ಕೊಡುವ ವಿಷಯವನ್ನಾಗಿಸಿದರು. ಹೆಚ್ಚು ಹೆಚ್ಚು ಜನರ ಗಮನವನ್ನು ಸೆಳೆಯಲು, ಹಿತವಾಗುವಂತೆ ತಿಳಿಸುತ್ತಿದ್ದರು. ಕೇಳುಗರಿಗೆ ತಮ್ಮ ಭಾಷಣ ತೃಪ್ತಿಯನ್ನು ಕೊಡಬೇಕಾಗಿತ್ತು ಅವರ ಭಾಷಣಗಳ ಸಾಹಿತ್ಯದ ಶೈಲಿ ಹೇಗಿತ್ತೆಂದರೆ ತಮ್ಮ ಸುತ್ತ ನಡೆಯುವ ದೈನಂದಿನ ಚಟುವಟಿಕೆಗಳ ಬಗ್ಗೆ ತಿಳಿಯುತ್ತಿದ್ದಲ್ಲದೆ, ಅವುಗಳನ್ನು ಕೇಳಿ ತಿಳಿದು ರೋಮಾಂಚನಗೊಳ್ಳುತ್ತಿದ್ದರು ಹೀಗೆ ದೈನಂದಿನ ಚಟುವಟಿಕೆಗಳನ್ನು ಅವರಿಗೆ ತಿಳಿಸುತ್ತಿದ್ದುದಲ್ಲದೆ, ಸಾಮಾಜಿಕ ಅವಶ್ಯಕತೆಯನ್ನು ಪೂರೈಸಲಾಗುತ್ತಿತ್ತು. ಇದರಿಂದ ಮುಂದಿನ ಪೀಳಿಗೆಗೆ ಹಿಂದೆ ಏನು ನಡೆಯಿತೆಂಬುದನ್ನು ತಿಳಿಸಲು ಮಾಹಿತಿ ಸಂಗ್ರಹವಾದಂತಾಯಿತು. ಇತಿಹಾಸವನ್ನು ಕಥೆಯ ರೂಪದಲ್ಲಿ ವಿವರಿಸಿದಾಗ ಅದು ಜನರನ್ನು ಹೆಚ್ಚು ಆಕರ್ಷಿಸುತ್ತದೆ. ಗ್ರೀಕರು ನಡೆದ ಘಟನೆಗಳನ್ನು ಕಥೆಗಳ ಮೂಲಕ ಹೇಳುವುದರಲ್ಲಿ ನಿಷ್ಣಾತರಾಗಿದ್ದರು. ಅವರ ವಿಮರ್ಷಾತ್ಮಕವಾದ ಮಾರ್ಗ, ಇತಿಹಾಸ ವಸ್ತು ನಿಷ್ಠವಾಗಿಯೂ, ಮತ್ತು ವೈಜ್ಞಾನಿಕವಾಗಿ ರೂಪುಗೊಳ್ಳಲು ನೆರವಾಯಿತು.

## 12.3 ಪ್ರಾರಂಭದ ಇತಿಹಾಸಕಾರರು

ಪ್ರಾರಂಭದ ಇತಿಹಾಸಕಾರರಲ್ಲಿ ಹೋಮರ್, ಬಹಳ ಜನಪ್ರಿಯವಾದವನು, ಪ್ರಾಚೀನ ಗ್ರೀಕರ ಇತಿಹಾಸವನ್ನು ಹೋಮರನು ತನ್ನ ಈಲಿಯಡ್ ಮತ್ತು ಓಡೆಸ್ಸಿ ಗ್ರಂಥಗಳಲ್ಲಿ, ವಿವರಿಸಿದ್ದಾನೆ. ಡಯೋನಿಷಿಯಸ್ ಹ್ಯಾಲಿಕಾರ್‌ನ್‌ಸಸ್ ಎಂಬುವವನು ಪರ್ಶಿಕ ಎಂಬ ಗ್ರಂಥವನ್ನು ರಚಿಸಿದ್ದಾನೆ. ಈ ಗ್ರಂಥವು ಐದು ಸಂಪುಟಗಳಿಂದ ಕೂಡಿದ್ದು ಪರ್ಶಿಯಾದ ಇತಿಹಾಸವನ್ನು ತಿಳಿಸುತ್ತದೆ. ಈತನು ಇತಿಹಾಸವು ದೃಷ್ಟಾಂತಗಳಿಂದ ಭೋಧಿಸಲ್ಪಡುವ ತತ್ವಶಾಸ್ತ್ರವೆಂದು ವ್ಯಾಖ್ಯಾನಿಸುತ್ತಾನೆ. ಚರಾನ್ ಎಂಬ ಮತ್ತೊಬ್ಬ ಲೇಖಕನು ಡಯೋನಿಷಿಯಸನ ಸಮಕಾಲೀನನಾಗಿದ್ದು ಹಿಸ್ಟರಿ ಆಫ್ ಗ್ರೀಸ್ ಮತ್ತು ಹಿಸ್ಟರಿ ಆಫ್ ಪರ್ಶಿಯ ಎಂಬ ಎರಡು ಗ್ರಂಥಗಳನ್ನು ಬರೆದಿದ್ದಾನೆ. ಹೆಸೋಟಿಯಸ ಎಂಬುವನು ಗ್ರೀಕ್ ಐತಿಹಾಸಿಕ ಬರವಣಿಗೆಗೆ ಅಸ್ಥಿಭಾರವನ್ನು ಹಾಕಿದನು. ಈತನು ಗ್ರೀಕಿನ ಮೇಲೆ ಪರ್ಶಿಯನ್ನರ ದಾಳಿ ನಡೆದದ್ದನ್ನು ಕಣ್ಣಾರೆ ಕಂಡಿದ್ದನು. ಅಲ್ಲದೆ ಈತನು ಅನೇಕ ರಾಜಕೀಯ ನಿಯೋಗಗಳಲ್ಲಿ ಉತ್ತಮ ರಾಯಭಾರಿಯಾಗಿ ಕೆಲಸ ನಿರ್ವಹಿಸಿ ಸಮಕಾಲೀನ ಘಟನೆಗಳನ್ನು ಚೆನ್ನಾಗಿ ತಿಳಿದವನಾಗಿದ್ದನು. ಈತನು ವ್ಯಾಪಕವಾದ ಪ್ರವಾಸದ ಅನುಭವವನ್ನು ಹೊಂದಿದ್ದು ಐತಿಹಾಸಿಕ ವಿಷಯಗಳ ಬಗ್ಗೆಯೂ ಸಾಕಷ್ಟು ಅನುಭವವನ್ನು ಹೊಂದಿದ್ದನು. ಈತನು ಇತಿಹಾಸವನ್ನು ಕಟ್ಟು ಕಥೆಗಳಿಂದ ಬಿಡುಗಡೆಗೊಳಿಸಿದನು. ಅಲ್ಲದೆ ಇತಿಹಾಸವನ್ನು ಕುರಿತಂತೆ ಪರ್ಶಿಯನ್ ಸಾಮ್ರಾಜ್ಯ ಮತ್ತು ಪಾಶ್ಚಿಮಾತ್ಯ ಯುರೋಪಿನ ಇತಿಹಾಸ ಎಂಬ ಗ್ರಂಥವನ್ನು ಬರೆದನು.

ಹೀಗೆ ಡಯೋನೀಷಿಯಸ್, ಚರಾನ್, ಹೆಕಾಟಿಯಸ್, ಎಂಬ ಪ್ರಾಚೀನ ಗ್ರೀಕರಿಂದ ಐತಿಹಾಸಿಕ ಬರವಣಿಗೆಗಳು ಸೃಷ್ಟಿಯಾದವು. ಇವರು ನಗರಗಳು ಮತ್ತು ದೇಶಗಳು ರಾಜಕೀಯ, ಸೈನಿಕ, ಮತ್ತು ಸಾಹಿತ್ಯದ ಬೆಳವಣಿಗೆಗಳನ್ನು ಕುರಿತು ವಿವರಣೆ ನೀಡಿದ್ದಾರೆ. ಮಾಹಿತಿಯನ್ನು ನೀಡುವ ಉದ್ದೇಶದಿಂದ ಸ್ಥಳೀಯ ಮತ್ತು ಪ್ರಾದೇಶಿಕವಾಗಿ ಪ್ರಾಮುಖ್ಯತೆಯನ್ನು ಹೊಂದಿದ ಎಲ್ಲ ವಿಷಯಗಳನ್ನು

ತಮ್ಮ ಗ್ರಂಥಗಳಲ್ಲಿ ನೀಡಿದ್ದಾರೆ. ಅವರ ಬರಹಗಳು ಯಾವುದೇ ವಿಮರ್ಶೆಗೆ ಗುರಿಯಾಗಬಾರದೆಂಬ ಉದ್ದೇಶವನ್ನು ಹೊಂದಿದ್ದು ಗತಕಾಲದ ಘಟನೆಗಳಿಗೆ ಪ್ರಾಮುಖ್ಯತೆಯನ್ನು ಕೊಡಲಿಲ್ಲ. ಅವರು ಮುಖ್ಯವಾಗಿ ತಮ್ಮ ಗಮನವನ್ನು ಸಮಕಾಲೀನ ಘಟನೆಗಳ ಮೇಲೆ ಕೇಂದ್ರೀಕರಿಸಿದ್ದರು. ಆದರೆ ಪರ್ಶಿಯನ್ ಯುದ್ಧವು ಪ್ರಾರಂಭವಾದ್ದು ಇತಿಹಾಸ ಲೇಖನದ ಬೆಳವಣಿಗೆಗೆ ಹೊಸ ಮಾರ್ಗವನ್ನು ನೀಡಿತು. ಗ್ರೀಕರು ಪರ್ಶಿಯನ್ನರ ಮೆಲೆ ವಿಜಯವನ್ನು ಸಾಧಿಸಿದ್ದು ಇತರ ಜನತೆಯ ಇತಿಹಾಸವನ್ನು ಬರೆಯಲು ಅವಕಾಶವನ್ನು ಒದಗಿಸಿತು. ಈ ಎಲ್ಲಾ ಪ್ರಾರಂಭದ ಇತಿಹಾಸಕಾರರ ಪರಿಶ್ರಮದ ಫಲವಾಗಿ ಗ್ರೀಕ್‌ನಲ್ಲಿ ಹೆರೋಡೋಟಸ್, ಥೂಸಿಡೈಡಿಸ್ ಮತ್ತು ಪಾಲಿಬಿಯಸ್ ಅವರುಗಳ ಕಾಲದಲ್ಲಿ ಇತಿಹಾಸವನ್ನು ಕುರಿತ ಬರವಣಿಗೆಗಳು ಪರಾಕಾಷ್ಠತೆಯನ್ನು ತಲುಪಿದವು.

ಹಿಸ್ಟರಿ ಅಥವಾ ಇತಿಹಾಸ ಎಂಬ ಪದ ಗ್ರೀಕ್ ಮೂಲದ್ದಾಗಿದ್ದು ಅದರ ಅರ್ಥ ವಿಚಾರಣೆ, ಸಂಶೋಧನೆ, ಮತ್ತು ಪರಿಶೋಧನೆ, ಇದರಿಂದ ಇತಿಹಾಸದ ವಿವಿಧ ಮುಖಗಳಾದ ದೊಡ್ಡ ದೇಶಗಳು ಮತ್ತು ಚಿಕ್ಕ ನಗರಗಳು, ಯುದ್ದಗಳು ಮತ್ತು ದಂಡಯಾತ್ರೆಗಳು, ರಾಜಕೀಯ ಸಂಸ್ಥೆಗಳು ಮತ್ತು ಸಾಮಾಜಿಕ ಸ್ಥಿತಿಗಳು, ಸಾಹಿತ್ಯದ ಬೆಳವಣಿಗೆ ಮತ್ತು ಸೈನಿಕ ಕಥನಗಳು ಇವುಗಳನ್ನು ಕುರಿತು ಬರೆಯುವ ಆಸಕ್ತಿಯನ್ನು ವಹಿಸಿದರು.

## 12.4 ಹೆರೊಡೋಟಸ್

ಹೆರೊಡೋಟಸ್‌ನನ್ನು ಇತಿಹಾಸದ ಜನಕ ಎಂದು ಕರೆದಿರುವುದು ಸಮಂಜಸವಾಗಿದೆ, ಈತನು ಸುಮಾರು ಕ್ರಿ.ಪೂ.480ರಲ್ಲಿ ಐಯೋನಿಯಾದ ಹೆಲಿಕಾರ್‌ನೆಸಸ್‌ನಲ್ಲಿ ಜನಿಸಿದನು. ಈ ಕಾಲವು ಗ್ರೀಸ್‌ನಲ್ಲಿ ಅಥನ್ಸ್‌ನ ವೈಭವದ ಕಾಲವಾಗಿತ್ತು ಹೆರೋಡೋಟಸನು ವಿದ್ಯಾರ್ಥಿಯಾಗಿದ್ದಾಗ ಗ್ರೀಕ್ ಪದ್ಯಗಳನ್ನು ಅಧ್ಯಯನ ಮಾಡಿದ್ದನು. ಹೋಮರನ ಕಾವ್ಯದಿಂದ ಬಹಳ ಪ್ರಭಾವಿತನಾಗಿದ್ದನು. ಹೆಸೆಬಿಯಸ್‌ನ ಗ್ರಂಥಗಳಿಂದ ಗದ್ಯಗಳನ್ನು ರಚಿಸುವ ಕಲೆಯನ್ನು ಕಲಿತನು. ಯುರೋಪಿನ ಬಹುಭಾಗಗಳಲ್ಲಿ ಪ್ರವಾಸಮಾಡಿದ್ದನು. ಈತನು ಥ್ರೇಸ್, ಸ್ಕಿಥಿಯ, ಈಜಿಪ್ಟ್, ಮತ್ತು ಬ್ಯಾಬಿಲೋನ್‌ಗಳಿಗೆ ಭೇಟಿ ನೀಡಿದ್ದನು. ಇದರ ಪರಿಣಾಮವಾಗಿ, ಈ ದೇಶಗಳಲ್ಲಿದ್ದ ರಾಜಕೀಯ ಬೆಳವಣಿಗೆಗಳ ಬಗ್ಗೆ ಜ್ಞಾನವನ್ನು ಸಂಪಾದಿಸಿದನು. ಇವನು ತನ್ನ ದೇಶಕ್ಕೆ ಹಿಂದಿರುಗಿದ ನಂತರ, ತನ್ನ ದೇಶವು ಒಬ್ಬ ಅಪಹರಣಕಾರನ ಆಳ್ವಿಕೆಗೆ ಒಳಪಟ್ಟಿದೆ ಎಂದು ತಿಳಿದನು. ಈತನು ಹಲವು ನೋಬಲ್‌ರನ್ನು ಕೊಂದು ಆಳ್ವಿಕೆ ನಡೆಸುತ್ತಿದ್ದನು. ಹೆರೊಡೋಟಸ್‌ನಿಗೆ ತಾನು ಅಲ್ಲಿ ಉಳಿಯಲು ಅನುಕೂಲವಾದ ವಾತಾವರಣವಿಲ್ಲವೆಂದು ಮನದಟ್ಟಾಯಿತು. ಆದ್ದರಿಂದ ಸಮೋಸ್ ಎಂಬಲ್ಲಿಗೆ ಹೊರಟನು. ತನ್ನ 40ನೆಯ ವಯಸ್ಸಿನಲ್ಲಿ ಅಥೆನ್ಸ್‌ಗೆ ಬಂದನು. ಪೆರಿಕ್ಲಿಯಸ್‌ನ ಆಸ್ಥಾನದಲ್ಲಿ 4 ವರ್ಷಗಳ ಕಾಲ ಇದ್ದನು. ನಂತರ ಇಟಲಿಯಲ್ಲಿ ಅಥೇನಿಯಾದ ವಸಾಹತುವಾಗಿದ್ದ ಥುರೀ ಎಂಬಲ್ಲಿಗೆ ಬಂದು ನಿಂತನು. ಸುಮಾರು ಕ್ರಿ.ಪೂ.430ರಲ್ಲಿ ಹೆರೋಡೊಟಸ್ ಕಾಲವಾದನು.

ಗ್ರೀಸ್‌ನಲ್ಲಿ ಪೆರಿಕ್ಲಿಯನ್ ಕಾಲವು ಅದ್ವಿತೀಯವಾದ ಬರಹಗಾರರನ್ನು ಹೊಂದಿತ್ತು. ಅವರಲ್ಲಿ ಹೆರೋಡೊಟಸನು ಬಹಳ ಮುಖ್ಯವಾದವನು. ತನ್ನ ಗ್ರಂಥ ರಚನೆಗೆ ಬೇಕಾದ ವಿಷಯವನ್ನು ಸಂಗ್ರಹಿಸಲು ಬಹಳ ಕಷ್ಟಪಟ್ಟನು. ತನ್ನ 'ಹಿಸ್ಟರಿ' ಎಂಬ ಗ್ರಂಥವನ್ನು ರಚಿಸಲು, ಯುದ್ಧಗಳ ನಿಲುಗಡೆ ಮತ್ತು ಒಪ್ಪಂದದ ದಾಖಲೆಗಳನ್ನು ಉಪಯೋಗಿಸಿಕೊಂಡನು. ಅಷ್ಟೇ ಅಲ್ಲದೆ, ವಿಮರ್ಶಾತ್ಮಕ ವಿಚಾರಣೆಯಿಂದ ಸೂಕ್ಷ್ಮವಾಗಿ ಗಮನಿಸುವುದರಿಂದ, ಪ್ರವಾಸಿಗಳು ಮತ್ತು ಪುರೋಹಿತರನ್ನು ಭೇಟಿಮಾಡುವುದರಿಂದ ವ್ಯಾಪಕ ಪ್ರವಾಸಗಳಿಂದ ವಿಷಯಗಳನ್ನು ಸಂಗ್ರಹಿಸುತ್ತಿದ್ದನು. ಹೆರೋಡೊಟಸ್‌ನು ಪರ್ಶಿಯನ್ ಯುದ್ಧಗಳನ್ನು ತನ್ನ ಇತಿಹಾಸದ ವಿಷಯವನ್ನಾಗಿ ಆರಿಸಿಕೊಂಡನು. ತನ್ನ ಗ್ರಂಥದಲ್ಲಿ ಹಲವಾರು ವಿಷಯಗಳನ್ನು ಕುರಿತಂತೆ, ವಿವರವಾದ ವರದಿಯನ್ನು ನೀಡಿದ್ದಾನೆ. ಈತನ ಇತಿಹಾಸದ ವಸ್ತು ವಿಷಯವೆಂದರೆ, ಗ್ರೀಕರಿಗೂ ಪರ್ಶಿಯನ್ನರಿಗೂ ನಡೆದ ಯುದ್ಧವಾಗಿದೆ ಈತನು ಅನೇಕ ಘಟನೆಗಳನ್ನು ಉದಾಹರಣೆಗಳ ಮೂಲಕ ಮತ್ತು ಕಥೆಗಳ ರೂಪದಲ್ಲಿ ವಿವರಿಸಿದ್ದಾನೆ. ಅದರಲ್ಲಿ ಬಹಳ ಮುಖ್ಯವಾದದ್ದು, ಭೌಗೋಳಿಕ ಅಂಶಗಳು, ಐತಿಹಾಸಿಕ ಘಟನೆಗಳು ಮತ್ತು ಐತಿಹಾಸಿಕ ಕಾಲ. ಈತನು ಏಷ್ಯದ ಮೊದಲ ರಾಜಕುಮಾರನು, ಲಿಡಿಯಾದ ರಾಜನೂ ಆಗಿದ್ದ ಕ್ರೊಸೆಸ್ ಗ್ರೀಕರ ಮೇಲೆ ಧಾಳಿ ಮಾಡಿದನೆಂದು ಹೇಳಿದ್ದಾನೆ. ಅಲ್ಲದೆ ಆತನ ವಂಶವೃಕ್ಷವನ್ನು ಮತ್ತು ಶ್ರೇಷ್ಠತೆಯನ್ನು ಮತ್ತು ಅವನತಿಯನ್ನು ವಿವರಿಸಿದ್ದಾನೆ.

ನಂತರ ಹೆರೋಡೊಟಸ್‌ನು ಮೆದಿನಾ ರಾಜ್ಯದ ಬಗೆಯೂ ವಿವರಿಸಿದ್ದಾನೆ. ಮತ್ತೊಬ್ಬ ಏಷ್ಯಾದ ದೊರೆಯಾಗಿದ್ದ ಸೈರಸ್ ಪರ್ಶಿಯಾದ ರಾಜನೂ ಆಗಿದ್ದನು. ಸೈರಸ್‌ನ ಉತ್ತರಾಧಿಕಾರಿಯಾಗಿ ಬಂದ ಕ್ಯಾಂಬೆಸಿಸ್, ಏಷ್ಯಾ ಮೈನರ್ ಮತ್ತು ಈಜಿಪ್ಟ್‌ನ್ನು ವಶಪಡಿಸಿಕೊಂಡನು. ಕಡೆಯ ದೊರೆಗಳಾದ ಡೇರಿಯಸ್ ಮತ್ತು ಜೆರೆಕ್ಸಸ್‌ರು ಗ್ರೀಕ್ ಪ್ರದೇಶಗಳನ್ನು ಗೆದ್ದುಕೊಳ್ಳಲು ನಿರ್ಧರಿಸಿದರು. ಈ ಯುದ್ಧಗಳನ್ನು ಕುರಿತು ಬರೆಯುವಾಗ ಹೆರೋಡಟಸ್‌ನು ಒಂದು ಘಟನೆಯಿಂದ ಮತ್ತೊಂದು ಘಟನೆಗೆ ಸಂಪರ್ಕವನ್ನು ಕಲ್ಪಿಸುತ್ತಾನೆ. ಒಂದು ಘಟನೆಯೊಂದಿಗೆ ಮತ್ತೊಂದು ಘಟನೆಯನ್ನು ಬೆಸೆಯುತ್ತಾ ಹೋದಂತೆ, ಗ್ರೀಕ್ ಮತ್ತು ಪರ್ಶಿಯನ್ನರ ನಡುವೆ ನಡೆದ ಯುದ್ಧ ವಿಸ್ತಾರವಾಗುತ್ತಾ ಹೋಗುತ್ತದೆ. ಹೆರೋಡೊಟಸ್‌ನು ಇಷ್ಟೆಲ್ಲಾ ವಿಸ್ತಾರವಾದ ಘಟನಾವಳಿಗಳನ್ನು ವಿವರಿಸದೆ ಇದ್ದಲ್ಲಿ, ನಮಗೆ ಪರ್ಶಿಯಾದ ಬಗ್ಗೆ ಏನೇನು ತಿಳಿಯುತ್ತಿರಲಿಲ್ಲ. ಅಷ್ಟೇ ಅಲ್ಲದೆ, ಸೈರಸ್‌ನ ನಂತರ ಪರ್ಶಿಯಾದ ಸ್ಥಿತಿ ಏನಾಯಿತೆಂಬುದನ್ನು ಕೂಡ ಹೆರೋಡೋಟಸ್‌ನು ವರ್ಣಿಸಿದ್ದಾನೆ. ಸೈರಸ್‌ನ ನಂತರ ಏಷ್ಯಾ ಮತ್ತು ಈಜಿಪ್ಟ್ ಕ್ಯಾಂಬೆಸೆಸ್‌ನ ಅಧಿಕಾರಕ್ಕೆ ಒಳಪಟ್ಟವೆಂದು ಹೇಳಿದ್ದಾನೆ. ಕೆಲವು ಗ್ರೀಕ್ ರಾಜ್ಯಗಳಾದ ಲಿಡಿಯಾ, ಈಜಿಪ್ಟ್, ಬೇಬಿಲೋನ್ ಮತ್ತು ಸಿಥಿಯಾ ಗಳನ್ನು ಕುರಿತಂತೆ ವಿಸ್ತಾರವಾದ ವರ್ಣನೆಯನ್ನು ಕೊಟ್ಟಿದ್ದಾನೆ.

ಹೆರೋಡೋಟಸ್‌ನು ತನ್ನ ಕೃತಿಯಲ್ಲಿ ತಾನು ಏಕೆ ಪರ್ಶಿಯಾ ಮತ್ತು ಗ್ರೀಕ್ ಯುದ್ಧಗಳನ್ನು ಕುರಿತು ಬರೆದನೆಂದು ಹೀಗೆ ಹೇಳುತ್ತಾನೆ: ನನ್ನ ವಿಚಾರಣೆಗಳಿಂದ ಉತ್ಪತ್ತಿಯಾದ ಫಲಿತಾಂಶವನ್ನು ನಾನು ಕೊಡುತ್ತಿದ್ದೇನೆ. ಮನುಷ್ಯ ತಾನು ಏನು ಮಾಡಿದ ಎನ್ನುವುದು ಪ್ರಪಂಚದ ನೆನಪಿನಿಂದ ಅಳಿದು ಹೋಗಬಾರದೆಂದೂ, ಅವನ ಸಾಧನೆಗಳು, ಅದು ಗ್ರೀಕರದ್ದಾಗಿರಬಹುದು, ಅಥವ ಯಾವುದೇ ಹೊರದೇಶದವನಾಗಿರಬಹುದು, ಅದನ್ನು ಹೇಳದೆ, ಬಿಡಬಾರದು ಎನ್ನುವುದು ನನ್ನ ಕೃತಿ ರಚನೆಯ ಉದ್ದೇಶ ಮತ್ತು ಗ್ರೀಕ್ ಮತ್ತು ಪರ್ಶಿಯನ್ನರ ಯುದ್ಧಕ್ಕೆ ಕಾರಣವಾದ ಅಂಶಗಳನ್ನು ತಿಳಿಸಿದ್ದೇನೆ. ಹೆರೋಡೋಟಸ್‌ನ ಕೃತಿಯಾದ 'ಹಿಸ್ಟರಿ'9 ಭಾಗಗಳಾಗಿ ವಿಭಾಗಿಸಲಾಗಿದೆ. ಪ್ರತಿಯೊಂದು ಭಾಗವು ಗ್ರೀಕ್ ದೇವತೆಗಳಾದ 9 ಮ್ಯೂಸಸ್ ಹೆಸರಿನಲ್ಲಿವೆ. ಈ ಎಲ್ಲ ದೇವತೆಗಳೂ ಜ್ಞಾನದೇವತೆಗಳು ವಿವಿಧ ಶಾಖೆಗಳ ಅದಿದೇವತೆಗಳು. ಅವುಗಳಲ್ಲಿ ಮೊದಲನೆಯದು ಕ್ಲಿಯೋ ಅಥವಾ ಇತಿಹಾಸ ಮತ್ತು ಪದ್ಯಗಳ ದೇವತೆ. ಆದರಂತೆ, ಇತರ ಮ್ಯೂಸಸ್‌ಗಳಾದ ಥೈಲ, ಇರಾಟೊ, ಮತ್ತು ಷಿಂಬರ್‌ಪೆ ಕಲೆ, ವಿಜ್ಞಾನ, ತತ್ವಶಾಸ್ತ್ರಗಳನ್ನು ಪ್ರತಿನಿಧಿಸುತ್ತಿದ್ದವು. ಆದರೆ ಕ್ಲಿಯೋಗೆ ಬಹು ದೊಡ್ಡ ಸ್ಥಾನವನ್ನು ಕೊಡಲಾಗಿತ್ತು. ಮೊದಲ 5 ಭಾಗಗಳಲ್ಲಿ ಪೂರ್ವ ಮತ್ತು ಪಶ್ಚಿಮ ದೇಶಗಳಲ್ಲಿ ನಡೆದ ಪ್ರಾರಂಭಿಕ ಸಂಘರ್ಷಗಳನ್ನು ಗ್ರೀಸ್‌ನ ಬೆಳವಣಿಗೆಯನ್ನು ವಿವರಿಸಿದ್ದಾನೆ. 6ನೆಯ ಭಾಗದಲ್ಲಿ ಐಯೋನಿಯನ್ ದಂಗೆಯನ್ನು ಮತ್ತು ಮರಥಾನ್ ದಂಡಯಾತ್ರೆಯನ್ನು ವಿವರಿಸಿದ್ದಾನೆ. ಕಡೆಯ ಮೂರು ಭಾಗಗಳಲ್ಲಿ ಪರ್ಶಿಯನ್ನರಿಗೂ ಮತ್ತು ಗ್ರೀಕರಿಗೂ ನಡೆದ ವಿವಿಧ ಯುದ್ಧಗಳ ಸಂಪೂರ್ಣ ವಿವರವನ್ನು ನೀಡಿದ್ದಾನೆ.

ಹೆರೋಡಟಸ್‌ನ 'ಹಿಸ್ಟರಿ' ವ್ಯವಸ್ಥಿತವಾದ ಅಧ್ಯಯನವಾಗಿದೆ, ಯೋಜನೆಯ ಪ್ರಕಾರ ರಚಿಸಲಾಗಿದೆ. ಇದರಲ್ಲಿ ಮೂರು ವಿಭಾಗಗಳಿದ್ದು, ಪ್ರತಿಯೊಂದು ವಿಭಾಗವೂ ಮೂರು ಭಾಗಗಳಿಂದ ಕೂಡಿದೆ. ಮೊದಲ ವಿಭಾಗವು ಸೈರಸ್ ಮತ್ತು ಕಾಂಬೆಸಿಸ್‌ನ ಆಳ್ವಿಕೆಯನ್ನು, ಮತ್ತು ಡೇರಿಯಸ್‌ನ ಸಿಂಹಾಸನಾರೋಹಣವನ್ನು ತಿಳಿಸುತ್ತಾರೆ. ಎರಡನೆಯ ವಿಭಾಗವು ಜಿರಕ್ಸನ್‌ನ ಆಳ್ವಿಕೆಯನ್ನು ಮತ್ತು ಮೂರನೇ ವಿಭಾಗವು ಗ್ರೀಕ್ ಮತ್ತು ಪರ್ಶಿಯನ್ನರ ಯುದ್ಧಗಳಲ್ಲಿ ವಿವರಿಸುತ್ತದೆ. ಹೆರೋಡೊಟಸ್‌ನ ಹಿಸ್ಟರಿಯಿಂದ, ಆತನ ಕೇಂದ್ರಾಸಕ್ತಿಯು ಪಶ್ಚಿಮ ಏಷ್ಯದಿಂದ, ಪೂರ್ವ ಯುರೋಪ್ ಮತ್ತು ಗ್ರೀಕ್ ಭೂಮಿಯ ಕಡೆಗೆ ವಾಲುತ್ತದೆ ಎಂಬುದು ನಮಗೆ ತಿಳಿದುಬರುತ್ತದೆ. ಅಲ್ಲದೆ ಕಾಲಗಣನೆಯನ್ನು ನಿಖರವಾಗಿ ಹೇಳಿದ್ದಾನೆ ಹೆರೋಡೊಟಸ್, ಪರ್ಶಿಯಾ ದೊಡ್ಡ ಶಕ್ತಿಯಾಗಿ ಬೆಳೆದದ್ದು, ಮತ್ತು ನಂತರ ಗ್ರೀಕ್ ಮತ್ತು ಪರ್ಶಿಯನ್ನರ ನಡುವೆ ನಡೆದ ಯುದ್ಧಗಳು, ಅಂತಿಮವಾಗಿ, ಗ್ರೀಕರ ವಿಜಯವನ್ನು ವಿವರಿಸುತ್ತವೆ.

ಹೆರೋಡೊಟಸ್‌ನು, 'ಇತಿಹಾಸ' ವನ್ನು ರಚಿಸಲು ಮೂಲ ಮಾಹಿತಿಗಳನ್ನು ಆಧಾರವಾಗಿಟ್ಟುಕೊಂಡನು. ಅಲ್ಲದೆ ನಿಖರವಾದ ಮಾಹಿತಿ ಸಂಗ್ರಹಣೆಗಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಭೇಟಿನೀಡಿದನು. ಹಲವಾರು ಸಮಕಾಲೀನ ಘಟನೆಗಳನ್ನು ತಾನೇ ವೀಕ್ಷಿಸಿದನು. ಈತನ ಬರವಣಿಗೆಯಲ್ಲಿ ಕಂಡುಬರುವ ಮತ್ತೊಂದು ಮಹತ್ವದ ವಿಷಯವೆಂದರೆ, ಒಗ್ಗಟ್ಟು ಈತನ ಕೃತಿಯಲ್ಲಿ ಕಂಡುಬರುವ ಸ್ಥಿರತೆ ಮತ್ತು ಅವಿಚ್ಛಿನ್ನತೆ ನಿಜವಾಗಲೂ ಮೆಚ್ಚುವಂತಹುದು. ಅಲ್ಲದೆ, ಈತನ ಬರವಣಿಗೆಯ ಮತ್ತೊಂದು

ಲಕ್ಷಣವೆಂದರೆ, ಶಕ್ತಿಯುತವಾದ ಶೈಲಿ. ಹೆರೋಡೊಟಸ್‌ನು ಅತಿಮಾನವಶಕ್ತಿಯಲ್ಲಿ ನಂಬಿಕೆಯಿಟ್ಟಿದ್ದನು. ಆತನ ಪ್ರಕಾರ ಯಾವುದೇ ಘಟನೆಗಳೂ ಅತಿಮಾನವಶಕ್ತಿಯಿಂದ ಘಟಿಸುತ್ತದೆ ಎಂದು ತಿಳಿಸಿದ್ದನು ಜೆರಾಕ್ಸ್‌ಸ್‌ನು ಅತಿ ಪರಾಕ್ರಮದಿಂದ ಹೋರಾಡಿದರೂ ದೇವರ ನಿರ್ಣಯದ ಮುಂದೆ ಗೆಲ್ಲಲಾಗಲಿಲ್ಲ. ದೈವದ ಬಗ್ಗೆ ಆತನಿಗೆ, ನಿಖರವಾದ ಕಲ್ಪನೆಯಿಲ್ಲದಿದ್ದರೂ, ಅತಿ ಮಾನವಶಕ್ತಿಯು ಜನತೆಯ ವ್ಯವಹಾರದಲ್ಲಿ ಮತ್ತು ದೇಶಗಳ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡುತ್ತದೆಂದು ನಂಬಿದ್ದನು. ದೈವಗಳು ಶತ್ರುಗಳಿಗೆ ಸರಿಯಾದ ಶಿಕ್ಷೆಯನ್ನು ಕೊಡುವನೆಂದು ತಿಳಿದಿದ್ದನು.

ಹೆರೋಡೊಟಸ್‌ನು ಐತಿಹಾಸಿಕ ಬರವಣಿಗೆಯ ಬೆಳವಣಿಗೆಗೆ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾನೆ. ಇತಿಹಾಸದ ಲೇಖನ ಕಲೆಗೆ ಹೆರೋಡೋಟಸ್‌ನು ನೀಡಿದ ಮಹತ್ವದ ಕೊಡುಗೆಯಿಂದ ಅವನನ್ನು ಇತಿಹಾಸದ ಜನಕನೆಂದು ಕರೆಯಲಾಗಿದೆ. ಡಯೋನೇಷಿಯಸ್ ಅರ‍್ಯೆಯಾ ಮತ್ತು ಲೂಸಿನ್, ಇವರುಗಳು ಹೆರೋಡೋಟಸ್‌ನ ಶ್ರೇಷ್ಠತೆಯನ್ನು ಮೆಚ್ಚಿದ್ದಾರೆ. ಹೆರೋಡೋಟಸ್‌ನು ತನ್ನ ಮಹತ್ವಪೂರ್ಣ ಕೃತಿಯಾದ 'ಹಿಸ್ಟರಿ'ಯನ್ನು ರಚಿಸದಿದ್ದಲ್ಲಿ ಪ್ರಾಚೀನ ಗ್ರೀಸ್ ಮತ್ತು ಪರ್ಶಿಯಾದ ಇತಿಹಾಸವು ಮುಂದಿನ ಪೀಳಿಗೆಗೆ ತಿಳಿಯುತ್ತಿರಲಿಲ್ಲ. ಈತನು ತನ್ನ ಕೃತಿಯಲ್ಲಿ ವ್ಯವಸ್ಥಿತವಾಗಿ ಮೂರು ಅಂಶಗಳನ್ನು ತಿಳಿಸಿದ್ದಾನೆ. ಅವು ಭೌಗೋಳಿಕ ವಿವರಣೆ, ಘಟನೆಗಳ ಕಾಲಗಣನೆ ಮತ್ತು ಐತಿಹಾಸಿಕ ಮಾಹಿತಿಗಳನ್ನು ಒಳಗೊಂಡಿದೆ. ಇತಿಹಾಸವನ್ನು ಒಂದು ನಿರ್ದಿಷ್ಟವಾದ ತನ್ನದೇ ಆದ ಶೈಲಿ ಮತ್ತು ಉದ್ದೇಶವುಳ್ಳ ಶಾಖೆಯನ್ನಾಗಿ ಮಾಡಿದ ಹೆಗ್ಗಳಿಕೆ ಹೆರೋಡೋಟಸನದು. ಅವನ ಮೂಲಭೂತ ಉದ್ದೇಶ ಮಾಹಿತಿಯನ್ನು ಪ್ರಸಾರ ಮಾಡುವುದಾಗಿತ್ತು. ಅವನ ಬರಹ ಆಕರ್ಷಕ ಶೈಲಿಯಿಂದ ಕೂಡಿದ್ದ ಸ್ಪಷ್ಟ ಮತ್ತು ಸರಳವಾಗಿತ್ತು. ಅಲ್ಲದೆ ಅವನ ಆಳವಾದ ಸಂಶೋಧನೆ, ಪರಿಶೋಧನೆ, ಮತ್ತು ಹೆಣೆಯಿಲ್ಲದ ಕುತೂಹಲ, ಇವೆಲ್ಲವೂ ಅವನ ಬರಹದಲ್ಲಿ ಕಾಣುವ ವಿಶೇಷ ಲಕ್ಷಣಗಳಾಗಿದ್ದವು.

ಸಿಸಿರೋ ಹೆರೋಡೊಟಸನನ್ನು ಇತಿಹಾಸದ ಜನಕನು ಹೌದು ಹಾಗೂ ಸುಳ್ಳುಗಾರನು ಹೌದು ಎಂದು ಕರೆದಿದ್ದಾನೆ. ಅರಿಸ್ಟಾಟಲ್ ಅವನನ್ನು ಕಥೆ ಹೇಳುವವನೆಂದು ಹೇಳಿದ್ದಾನೆ. ಅವನು ವಸ್ತು ನಿಷ್ಠತೆಯುಳ್ಳ ಇತಿಹಾಸಕಾರನಾದರೂ, ಘಟನೆಗಳ ಸಮಾನವಾದ ವಿವರಣೆಗಳನ್ನು ನೀಡುವುದರಲ್ಲಿ ವಿಫಲನಾಗಿದ್ದಾನೆ. ಹೆರೋಡೊಟಸನು ಅಥೆನ್ಸ್‌ನ ಬಗ್ಗೆ ವಿಶೇಷವಾದ ಪ್ರೇಮವನ್ನು ಹೊಂದಿದ್ದರೂ, ಪರ್ಶಿಯಾದ ಇತಿಹಾಸನವನ್ನು ಬರೆಯುವಾಗ ಅದರ ಶ್ರೇಷ್ಠತೆಯನ್ನು ಕಡೆಗಣಿಸಿರುವುದಿಲ್ಲ ಎಂದು ಹೇಳಿದ್ದಾರೆ.

ಆದರೂ ಹೆರೋಡೋಟಸನ ಬರಹಗಳು ಕೆಲವು ಟೀಕೆಗಳಿಗೆ ಗುರಿಯಾಗಿವೆ. ಅವನು ಇತರ ಜನತೆಯ ಭಾಷೆಗಳನ್ನು ಅರ್ಥಮಾಡಿಕೊಳ್ಳುವುದರಲ್ಲಿ ವಿಫಲನಾಗಿದ್ದನು. ಆದ್ದರಿಂದ ಸಂಪೂರ್ಣವಾದ ನಿಖರವಾದ ಮಾಹಿತಿಯನ್ನು ಕಲೆಹಾಕುವುದರಲ್ಲಿ ಅಡ್ಡಿಯಾಯಿತು. ಆತನಿಗೆ ಪರ್ಶಿಯನ್ ಮತ್ತು ಈಜಿಪ್ಷಿಯನ್-ಭಾಷೆಗಳು ತಿಳಿದಿರಲಿಲ್ಲ. ಎರಡನೆಯದಾಗಿ ಮತ್ತೊಬ್ಬರು ಹೇಳಿದ್ದನ್ನು ನಂಬುವ ದೌರ್ಬಲ್ಯ ಹೆರೋಡೋಟಸನಿಗಿತ್ತು. ಅವನಿಗೆ ದೊರಕಿದ ಅಧಿಕಾರಿಗಳ ದಾಖಲೆಗಳು ಮತ್ತು ಲಿಖಿತ ವರದಿಗಳಿಗಿಂತ ಮೌಖಿಕ ಹೇಳಿಕೆಗಳಿಗೂ ಮತ್ತು ತಾನೇ ವೀಕ್ಷಿಸಿದ ದೃಷ್ಟಾಂತಗಳಿಗೆ ಹೆಚ್ಚು ನಂಬಿಕೆಯಿಟ್ಟಿದ್ದನು. ಮೂರನೆಯದಾಗಿ ಅವನ ಶೈಲಿಯಲ್ಲಿ ಹೊಂದಿದ್ದ ಅತ್ಯುತ್ಸಾಹ, ದತ್ತಾಂಶಗಳ ಖಚಿತತೆಯನ್ನು ತಿಳಿಯುವುದರಲ್ಲಿ ಅಡ್ಡಿಯಾಗಿದ್ದವು. ಈ ಕಾರಣಗಳಿಂದ ಕೆಲವು ವೇಳೆ ಮಾನವರನ್ನು ಮತ್ತು ಘಟನೆಗಳನ್ನು ವಸ್ತುನಿಷ್ಠವಾಗಿ ತೀರ್ಮಾನಿಸಲು ವಿಫಲನಾಗಿದ್ದನು. ನಾಲ್ಕನೆಯದಾಗಿ ಘಟನೆಗಳನ್ನು ವಿವರಿಸುವಾಗ ಗಂಭೀರವಾದ ತೊಡಕುಗಳನ್ನು ಕಾಣಬಹುದು. ಒಮ್ಮೊಮ್ಮೆ ತನ್ನ ಮುಖ್ಯಬಿಂದುವಿನಿಂದ ಸಣ್ಣಪುಟ್ಟ ವಿವರಣೆಯ ಕಡೆ ಗಮನಹರಿಸಿರುವುದೂ ಉಂಟು. ಭೌಗೋಳಿಕ ಅಂಶಗಳನ್ನು ತಿಳಿಸುವಾಗ ಇದ್ದಕಿದ್ದಹಾಗೆ ಮಧ್ಯದಲ್ಲಿ ಐತಿಹಾಸಿಕ ವ್ಯಕ್ತಿಗಳನ್ನು ಕೈಬಿಟ್ಟಿರುವುದೂ ಉಂಟು. ಇದೇ ಕಾರಣದಿಂದ ಥೂಸಿಡೈಡಿಸನು, ಹೆರೋಡೋಟಸನು ವ್ಯಾಪಕವಾದ ವಿವರಣೆಯನ್ನು ಕೊಡುವಾಗ ಸಣ್ಣ ಪುಟ್ಟ ಘಟನೆಗಳಿಗೆ ಅವಕಾಶವನ್ನು ಕೊಟ್ಟು ಪ್ರಮುಖವಾದ ಘಟನೆಗಳನ್ನು ವಿವರಿಸುವುದನ್ನು ಬಿಟ್ಟಿದ್ದಾನೆಂದು ಹೇಳಿದ್ದಾನೆ. ಐದನೆಯದಾಗಿ ಹೆರೋಡೋಟಸನಿಗೆ ಐತಿಹಾಸಿಕ ವಿಮರ್ಶೆಯನ್ನು ಅವನ ಬರಹಗಳಲ್ಲಿ ಕಾಣುವುದಿಲ್ಲ. ಇಷ್ಟೆಲ್ಲಾ ನ್ಯೂನತೆಗಳು ಹೆರೋಡೋಟಸ್‌ನ ಬರಹಗಳಲ್ಲಿ ಕಂಡುಬಂದರೂ, ಪ್ರಪಂಚದ ಚರಿತ್ರೆಲೇಖನಕಾರರಲ್ಲಿ ಮೊದಲ ಮತ್ತು ಶ್ರೇಷ್ಠ ಇತಿಹಾಸಕಾರನೆಂಬುದಾಗಿ ಹೇಳಲಾಗಿದೆ.

## 12.5 ಥೂಸಿಡೈಡಿಸ್

ಗ್ರೀಸ್ ಸೃಷ್ಟಿಸಿದ ಮತ್ತೊಬ್ಬ ಪ್ರಮುಖ ಇತಿಹಾಸಕಾರ ಥೂಸಿಡೈಡಿಸ್. ಈತನ ಪ್ರಾರಂಭಿಕ ಜೀವನದ ಬಗ್ಗೆ ನಿಖರವಾದ ಮಾಹಿತಿ ದೊರೆಯುವುದಿಲ್ಲ. ಈತನು ಕ್ರಿ.ಪೂ. 460ರಲ್ಲಿ ಅಥೇನಿಯಾದ ಶ್ರೀಮಂತ ಕುಟುಂಬವೊಂದರಲ್ಲಿ ಜನಿಸಿದನೆಂದು ತಿಳಿದುಬರುತ್ತದೆ. ಥೂಸಿಡೈಡಿಸ್ ಸಾಹಿತ್ಯ ಮತ್ತು ಕಲೆಯನ್ನು ಅಧ್ಯಯನ ಮಾಡಿದ್ದನು. ಅತೇನಿಯನ್ ಸೈನ್ಯದಲ್ಲಿ ಜನರಲ್‌ನಾಗಿ ಸೇವೆಸಲ್ಲಿಸಿದ್ದನು ಸ್ಪಾರ್ಟ ಅಥೇನಿಯದ ಮೇಲೆ ಆಕ್ರಮಣ ಮಾಡಿದಾಗ, ಅದನ್ನು ರಕ್ಷಿಸಲಿಲ್ಲವೆಂಬ ಆಪಾದನೆಯ ಮೇಲೆ ಥೂಸಿಡೈಡಿಸ್‌ನನ್ನ. 20 ವರ್ಷಗಳ ಕಾಲ ಗಡೀಪಾರು ಮಾಡಲಾಯಿತು. ಈ ಕಾಲದಲ್ಲಿ ಅವನು ಹಲವಾರು ಸ್ಥಳಗಳನ್ನು ಸಂದರ್ಶಿಸಿದನು. ಅಲ್ಲದೆ, ಸ್ಪಾರ್ಟ ಮತ್ತು ಅಥೇನ್ಸ್‌ಗಳ ನಡುವೆನಡೆದ ಯುದ್ಧದ ಗತಿಯ ಬಗ್ಗೆ ಅನೇಕ ಮಾಹಿತಿಗಳನ್ನು ಸಂಗ್ರಹಿಸಿದನು. ಕ್ರಿ.ಪೂ.404ರಲ್ಲಿ ಯುದ್ಧಾನಂತರ ಒಪ್ಪಂದ ಏರ್ಪಟ್ಟ ಮೇಲೆ ಅವನು ಅಥೇನ್ಸ್‌ಗೆ ಹಿಂದುರಿಗಿದನು. ಆದರೆ ಸ್ವಲ್ಪ ಕಾಲದಲ್ಲಿಯೇ ಮರಣ ಹೊಂದಿದನು.

ಥೂಸಿಡೈಡಿಸ್‌ನು ಫೆಲೊಪೆನೀಷಿಯನ್ ಯುದ್ಧಗಳ ಚರಿತ್ರೆ ಎಂಬ ಗ್ರಂಥವನ್ನು ರಚಿಸಿದನು. ಈತನು ತನ್ನ ಬರವಣಿಗೆಗೆ, ಗ್ರೀಕ್‌ನ, ಎರಡು ಒಕ್ಕೂಟಗಳಾದ ಸಿಟಿ ಸ್ಟೇಟ್ಸ್‌ಗಳ ನಡುವೆ ನಡೆದ ಯುದ್ಧದ ವಸ್ತುವನ್ನು ತೆಗೆದುಕೊಂಡನು. ಈ ಯುದ್ಧದಲ್ಲಿ ಒಂದು ಒಕ್ಕೂಟ ಅಥೇನ್ಸ್‌ನವರ ಮುಖಂಡತ್ವವನ್ನು ಮತ್ತೊಂದು ಒಕ್ಕೂಟ ಸ್ಪಾರ್ಟನ್ನರ ಮುಖಂಡತ್ವವನ್ನು ಹೊಂದಿದ್ದರು. ಈ ಯುದ್ಧಗಳನ್ನು ಥೂಸಿಡೈಡಿಸ್‌ನು ತಾನೇ ಸ್ವತಃ ವೀಕ್ಷಿಸಿದ್ದನು. ಈತನು ಈ ಯುದ್ಧದ ಸಮಕಾಲೀನನಾಗಿದ್ದನು. ತನ್ನ ಬರವಣಿಗೆಗಾಗಿ ತನಗೆ ದೊರತಿದ ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸಿದನು. ಈ ಎಲ್ಲಾ ಮಾಹಿತಿಗಳನ್ನು ಆಧರಿಸಿ, ರಚಿಸಿದ ತನ್ನ ಗ್ರಂಥ ಶ್ರೇಷ್ಠ ಕೃತಿಯಾಗಬೇಕೆಂದು ಆಶಿಸಿದ್ದನು. ತಾನು ಅಥೇನಿಯನ್ ಸೈನ್ಯದಲ್ಲಿ ಜನರಲ್ ಆಗಿದ್ದಾಗ, ಯುದ್ಧದ ಬೆಳವಣಿಗೆಯನ್ನು ಎಚ್ಚರಿಕೆಯಿಂದ ವೀಕ್ಷಿಸಿದ್ದನು. ತಾನು ಕೇಳಿದ ಅನೇಕ ಭಾಷಣಗಳನ್ನು ದಾಖಲು ಮಾಡಿಕೊಂಡಿದ್ದನು. ಮೈತ್ರಿಕೂಟದ ರಾಜ್ಯಗಳಿಗೂ ಭೇಟಿನೀಡಿ, ಯುದ್ಧ ಖೈದಿಗಳಿಂದಲೂ ಮಾಹಿತಿಯನ್ನು ಸಂಗ್ರಹಿಸಿದನು. ಈತನನ್ನು ಅಥೇನ್ಸ್‌ನಿಂದ ಹೊರಹಾಕಿದ ನಂತರ ಸ್ಪಾರ್ಟನ್ನರನ್ನು ಭೇಟಿ ಮಾಡಿ ಅವರಿಂದ ಯುದ್ಧದ ಬಗ್ಗೆ ಹೆಚ್ಚಿನ ವಿಷಯವನ್ನು ಸಂಗ್ರಹಿಸಿದನು.

ಕ್ರಿ.ಪೂ.431ರಲ್ಲಿ ಗ್ರೀಕ್ ರಾಜ್ಯಗಳಲ್ಲಿ ಯುದ್ಧ ಪ್ರಾರಂಭವಾಯಿತು. ಯುದ್ಧ ಪ್ರಾರಂಭವಾದ ಕೂಡಲೇ ಥೂಸಿಡೈಡಿಸ್ ತನ್ನ ಬರವಣಿಗೆಗೆಯನ್ನು ಪ್ರಾರಂಭಿಸಿದನು. ಅಲ್ಲದೆ, ಯುದ್ಧ ನಿಲ್ಲುವವರೆಗೂ ತನ್ನ ಬರವಣಿಗೆಯನ್ನು ಮುಂದುವರಿಸಿದನು. ತನ್ನ ಕೃತಿಗೆ 'ಪೆಲೋಪೊನೇಷಿಯನ್ ಯುದ್ಧದ ಚರಿತ್ರೆ' ಎಂಬ ಹೆಸರನ್ನು ಕೊಟ್ಟನು. ತನ್ನ ಕೃತಿಯಲ್ಲಿ ಕ್ರಿ.ಪೂ 411ರ ವರೆಗೆ ನಡೆದ ಎಲ್ಲಾ ಘಟನೆಗಳನ್ನು ಬರೆದಿದ್ದಾನೆ. ಆದರೂ ಇದು ಅಪೂರ್ಣವಾಗಿದೆ. ಆತನ ಕಡೆಯ ವಾಕ್ಯವೂ ಅಪೂರ್ಣವಾಗಿದೆ. ಈ ಯುದ್ಧವು 27ವರ್ಷಗಳವರೆಗೆ ನಡೆಯಿತು. ಈತನ ನಂತರದ ಇತಿಹಾಸಕಾರರು, ಥೂಸಿಡೈಡಿಸ್‌ನ ಕೃತಿಯನ್ನು ಕಾಲಗಣನೆಯ ಆಧಾರದ ಮೇಲೆ 8 ಭಾಗಗಳನ್ನಾಗಿ ವಿಂಗಡಿಸಿದರು.

ಈತನ ಕೃತಿಯು ಸಂಕ್ಷಿಪ್ತ ಪೀಠಿಕೆಯೊಂದಿಗೆ ಪ್ರಾರಂಭವಾಗುತ್ತದೆ. ನಂತರ ಗ್ರೀಕ್ ದೇಶದ ಬೆಳವಣಿಗೆಯನ್ನು ಮಿನೋಯನ್ ಕಾಲದಿಂದ ಪರ್ಶಿಯನ್ ಯುದ್ಧಗಳವರೆಗೆ ವಿವರಿಸುತ್ತಾ ಹೋಗುತ್ತಾನೆ. ಇದುವರೆಗೆ ಈ ವಿಷಯವನ್ನು ಕಡೆಗಣಿಸಿದುದಕ್ಕೆ ಕೆಲವು ಪಾಠಗಳನ್ನು ಬರೆದು, ನಂತರ ಕೇಂದ್ರ ವಿಷಯವನ್ನು ವಿವರಣೆ ಮಾಡಿದ್ದಾನೆ.

ಇತಿಹಾಸಕಾರನಾಗಿ ಥೂಸಿಡೈಡಿಸನು ಹೆರೋಡೋಟಸ್‌ನನ್ನು ಮೀರಿಸಿದ್ದಾನೆ. ಥೂಸಿಡೈಡಿಸ್‌ನ ಬರವಣಿಗೆಯಲ್ಲಿ ಖಚಿತತೆ ಇದೆ. ಹೆರೋಡೊಟಸ್‌ನು 'ಏನು' ಎನ್ನುವ ಮೊದಲ ಪ್ರಶ್ನೆಗೆ ಮಾತ್ರ ಸೀಮಿತವಾದರೆ ಥೂಸಿಡೈಡಿಸನು 'ಹೇಗೆ' ಮತ್ತು 'ಏಕೆ' ಎನ್ನುವ ಪ್ರಶ್ನೆಗಳಲ್ಲೂ ಹೆಚ್ಚು ಆಸಕ್ತಿಯನ್ನು ವಹಿಸಿದನು. ಈತನು ಹೆರೋಡೊಟಸ್‌ನಿಗಿಂತ 13ವರ್ಷ ಚಿಕ್ಕವನಾಗಿದ್ದನು. ಆದರೆ, ತಮ್ಮ ಬರವಣಿಗೆಗಳಲ್ಲಿ ಉಪಯೋಗಿಸಿದ ತಂತ್ರಾಂಶಗಳು ಇಬ್ಬರಲ್ಲೂ ವಿಭಿನ್ನವಾಗಿದ್ದವು. ಥೂಸಿಡೈಡಿಸ್‌ನು ಘಟನೆಗಳನ್ನು ವಿವರಿಸುವಾಗ ಯುದ್ಧದ ಕಾರಣಗಳನ್ನು ತಿಳಿದುಕೊಳ್ಳುವುದು ಯುದ್ಧದ ಪ್ರಚೋದನೆಗಳನ್ನು ಅನ್ವೇಷಿಸುವುದು, ಮತ್ತು ಕಾರ್ಯವಿಧಾನವನ್ನು ವಿವರಿಸುವುದು ಮುಂತಾದ ಉದ್ದೇಶಗಳನ್ನು ಹೊಂದಿದ್ದು, ಅದರಂತೆಯೇ ತನ್ನ ಕೃತಿಯನ್ನು ರಚಿಸಿದ್ದಾನೆ.

ಥೂಸಿಡೈಡಿಸ್‌ನು ತನ್ನ ಬರಹದಲ್ಲಿ ಅಳವಡಿಸಿದ ಮತ್ತೊಂದು ತಂತ್ರವೆಂದರೆ, ಸ್ಪಷ್ಟವಾದ ಮಾಹಿತಿಗಳು ದೊರೆಯದಿದ್ದಲ್ಲಿ ಹಿಂದಕ್ಕೆ ತಿಳಿಯದಿರುವ ವಿಷಯಗಳಿಗೆ ಹೋಗಿ ಆಗಬಹುದಾದ ಘಟನೆಗೆ ಸಂಬಂಧಿಸಿದ ಕಾರಣಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದನು. ಇತಿಹಾಸವನ್ನು ರಚಿಸುವಾಗ ಆಧಾರಗಳು ದೊರಕಿದರೆ ಇತಿಹಾಸ ರಚನೆ ಸುಲಭವಾಗುತ್ತಿತ್ತು. ಆದರೆ ಆಧಾರಗಳೇ ಇಲ್ಲದಿದ್ದ ಕಾಲದಲ್ಲಿ ಇತಿಹಾಸ ರಚನೆಗೆ ಪ್ರಯತ್ನಪಟ್ಟದ್ದು ಕಷ್ಟಸಾಧ್ಯವಾದ ರಚನೆಯಾಗಿತ್ತು. ಇದೇ ಕೆಲಸವನ್ನು ಜರ್ಮನ್ ಇತಿಹಾಸಕಾರರಾದ ನೈಬೂರ, ರ‍್ಯಾಂಕೆ, ಮೆಮ್ಸನ್, ಕಾರ್ಯಗತಗೊಳಿಸಿದರು. ಥೂಸಿಡೈಡಿಸನು ಈ ತಂತ್ರಾಂಶದ ಮೂಲ ವ್ಯಕ್ತಿಯಾದನು.

ಥೂಸಿಡೈಡಿಸನು ಇತಿಹಾಸ ರಚನೆಯಲ್ಲಿ ವೈಜ್ಞಾನಿಕ ಮಾರ್ಗವನ್ನು ಅನುಸರಿಸಿದ್ದಾನೆ. ಇತಿಹಾಸ ರಚನೆಯಲ್ಲಿ ವೈಜ್ಞಾನಿಕ ಮಾರ್ಗವನ್ನು ಅನುಸರಿಸಿದವರಲ್ಲಿ ಈತನೇ ಮೊದಲಿಗನು. ಹೆರೋಡೋಟಸ್‌ನು ಇತರರು ಏನು ಹೇಳುತ್ತಿದ್ದರು, ಅದನ್ನು ನಂಬುತ್ತಿದ್ದನು. ಆದರೆ ಥೂಸಿಡೈಡಿಸನು ಇನ್ನೊಬ್ಬರು ಹೇಳಿದ್ದನ್ನು ಕುರಿತು ಚಿಂತಿಸಿ ಅವುಗಳ ಸತ್ಯಾಸತ್ಯತೆಯನ್ನು ವಿಮರ್ಶೆ ಮಾಡಿನೋಡುತ್ತಿದ್ದನು. ಈತನು ತರ್ಕಬದ್ಧವಾದ ವಿವೇಚನಾ ಮಾರ್ಗವನ್ನು ಅನುಸರಿಸುತ್ತಿದ್ದನು. ತನ್ನ ಕೃತಿಯ ಬಗ್ಗೆ ಹೀಗೆ ಹೇಳುತ್ತಾನೆ. "ನಾನು ಬರೆದ ಇತಿಹಾಸವು ರಮ್ಯತೆಯಿಂದ ಕೂಡಿದ್ದರೆ ಹೆಚ್ಚು ಆಸಕ್ತಿಯಿಂದ ಕೂಡಿರುತ್ತಿತ್ತು. ಆದರೆ ಗತಕಾಲದ ಸತ್ಯವನ್ನು ತಿಳಿಯುವ ಪರಿಶೋಧಕರಿಗೆ ಉಪಯೋಗವಾಗುವುದಾದರೆ ಅದು ನನಗೆ ನೆಮ್ಮದಿಯನ್ನು ತರುತ್ತದೆ" ಎಂದು ಹೇಳಿದ್ದಾನೆ. ಈತನು ಆರಿಸಿಕೊಂಡ ವಿಷಯಗಳು ವಿಮರ್ಷಾತ್ಮಕ ಮಾರ್ಗದಿಂದ ಕೂಡಿರುತ್ತಿದ್ದವು. ಈ ವಿಷಯದಲ್ಲಿ ಈತನು ಎರಡುಸಾವಿರ ವರ್ಷಗಳ ನಂತರ ರ‍್ಯಾಂಕೆಯು ಪ್ರತಿಪಾದಿಸಿದ ಮಾರ್ಗವನ್ನು ಮುಂದಾಗಿಯೇ ಗ್ರಹಿಸಿದ್ದನು. ಥೂಸಿಡೈಡಿಸನು ತನ್ನ ಕೃತಿಯಲ್ಲಿ ಮಾನವ ಜೀವನದ ಎಲ್ಲ ಮಜಲುಗಳನ್ನು ತೆಗೆದುಕೊಂಡಿದ್ದಾನೆ. ಆರ್ಥಿಕ ಇತಿಹಾಸವನ್ನು ಕುರಿತು ಬರೆದ ಇತಿಹಾಸಕಾರರಲ್ಲಿ ಈತ ಮೊದಲನೆಯವನು. ಅಥೆನ್ಸ್‌ನ ಆರ್ಥಿಕ ಸ್ಥಿತಿಯನ್ನು ಕುರಿತು ಅತ್ಯುತ್ತಮವಾಗಿ ವರದಿ ಮಾಡಿದ್ದಾನೆ. ಅಥೆನ್ಸ್‌ನ ಸಂಪತ್ತು ಮತ್ತು ಸಂಪನ್ಮೂಲಗಳ ಬಗ್ಗೆ ಬಹಳ ಚಿಕ್ಕದಾಗಿ ವಿವರಣೆ ನೀಡಿದ್ದಾನೆ. ಹಾಗೆಯೇ ಗ್ರೀಸ್‌ನ ಆರ್ಥಿಕ ಭದ್ರತೆಯ ಬಗ್ಗೆಯೂ ಹೇಳಿದ್ದಾನೆ. ಇಷ್ಟೇ ಅಲ್ಲದೆ ಆ ಕಾಲದ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆಯೂ ವಿವರಣೆ ನೀಡಿದ್ದಾನೆ. ಆ ಕಾಲದ ಜನತೆಯ ದೈನಂದಿನ ಜೀವನದ ಬಗ್ಗೆ ಅತ್ಯುತ್ತಮವಾದ ವಿವರಣೆ ನೀಡಿದ್ದಾನೆ. ಯುದ್ಧ ಕೌಶಲ್ಯವನ್ನು ಇತಿಹಾಸದ ಒಂದು ಲಕ್ಷಣವೆಂದು ಮೆಚ್ಚುಗೆಯನ್ನು ಸೂಚಿಸಿದ ಗ್ರೀಕ್ ಇತಿಹಾಸಕಾರರಲ್ಲಿ ಥೂಸಿಡೈಡಿಸ್ ಮೊದಲನೆಯವನು. ಅಲ್ಲದೆ ಯುದ್ಧಾನಂತರದ ಪರಿಣಾಮಗಳನ್ನು ಈತನು ವಿವರಿಸಿದ್ದಾನೆ. ಯುದ್ಧ ನಿಲುಗಡೆಯ ನಂತರ ಜನರು ಬಹಳ ಕಷ್ಟವನ್ನು ಅನುಭವಿಸುತ್ತಾರೆಂದು ಹೇಳಿದ್ದಾನೆ. ಅಷ್ಟೇ ಅಲ್ಲದೆ ಯುದ್ಧಾನಂತರದ ಸಾಮಾಜಿಕ, ನೈತಿಕ, ಮಾನಸಿಕ ಸ್ಥಿತಿಗಳನ್ನು ವಿವರಿಸಿದ್ದಾನೆ. ಹೀಗೆ ಈತನ ಇತಿಹಾಸವು ಮಾನವನ ಜೀವನದ ಎಲ್ಲಾ ಮಜಲುಗಳ ಅಧ್ಯಯನವಾಗಿದೆ.

ಥೂಸಿಡೈಡಿಸನು ಒಬ್ಬ ನೀತಿ ಭೋದಕನೆನಿಸಿದ್ದಾನೆ. ಈತನ ಇತಿಹಾಸದಲ್ಲಿ ನೀತಿ ಭೋದನೆಯು ಎದ್ದುಕಾಣುವ ಅಂಶವಾಗಿದೆ. ಆದ್ದರಿಂದ ಇವನು ಇತಿಹಾಸಕಾರನೊ, ತತ್ವಜ್ಞಾನಿಯೋ, ನಿರ್ಧರಿಸುವುದು ಕಷ್ಟವಾಗುತ್ತದೆ. ಥೂಸಿಡೈಡಿಸನ ತತ್ವಜ್ಞಾನವು ಶುದ್ಧ ತರ್ಕದ ಮೇಲೆ ಆಧಾರವಾಗಿದೆ. ಈ ದಿಶೆಯಲ್ಲಿ ಥೂಸಿಡೈಡಿಸನು ತತ್ವಜ್ಞಾನಿಯಾಗಿ ನಮ್ಮ ಅಪಾರ ಗೌರವಕ್ಕೆ ಪಾತ್ರನಾಗಿದ್ದಾನೆ. ಈತನ ನೈತಿಕ ಅಭಿಪ್ರಾಯಗಳು ಅಗಾಧ ಪ್ರಜ್ಞೆಯಿಂದ ಕೂಡಿದ್ದು ಇತಿಹಾಸವು ಚಾರಿತ್ರ್ಯದ ಸಂಕೇತವನ್ನು ಭೇದಿಸಿಕೊಂಡು ಹೋಗುತ್ತದೆ.

ಜನತೆಯ ಶಾಂತಿ ಮತ್ತು ಸಂತೋಷಗಳಿಗೆ ಸಂಬಂಧಿಸಿದಂತೆ ಥೂಸಿಡೈಡಿಸನು ಕೆಲವು ಹೇಳಿಕೆಗಳನ್ನು ನೀಡಿದ್ದಾನೆ. ಅವನ ಪ್ರಕಾರ 'ಧೈರ್ಯಶಾಲಿಯಾದ ಪ್ರತಿವ್ಯಕ್ತಿಯೂ ಯುದ್ಧವನ್ನು ಬಯಸುವುದಿಲ್ಲ' ಸಾಮಾನ್ಯವಾಗಿ, ಧೈರ್ಯ, ಬಲ, ಮತ್ತು ಅಧಿಕಾರಗಳನು ಯುದ್ಧಗಳಿಗೆ ಕಾರಣವಾಗುತ್ತವೆ. ಆದರೆ ಥೂಸಿಡೈಡಿಸನ ಪ್ರಕಾರ ದುರಾಸೆ, ಆಸೆ, ಕೀಳರಿಮೆ, ಇವು ಯುದ್ಧಗಳಿಗೆ ಕಾರಣವಾಗುತ್ತವೆ. ಥೂಸಿಡೈಡಿಸನು ಯುದ್ಧಗಳು ನೈತಿಕ ಮಟ್ಟವನ್ನು ಕಡಿಮೆ ಮಾಡುತ್ತವೆಂದು ಅಲ್ಲದೆ ಅವುಗಳು ದುಃಖಕ್ಕೆ ಕಾರಣವಾಗುತ್ತವೆಂದು ಹೇಳಿದ್ದಾನೆ. "ನ್ಯಾಯವನ್ನು ಅಲಕ್ಷಿಸಿ ಅನುಕೂಲಕ್ಕೆ ತಕ್ಕಂತೆ ನಡೆಯುವ ಪ್ರವೃತ್ತಿಗಿಂತ ನ್ಯಾಯವಾದ ನಡತೆ ಉತ್ತಮವಾದುದು" "ಅದೃಷ್ಟವನ್ನು ಹಿಂಬಾಲಿಸಿ ಬರುತ್ತದೆ ದುಷ್ಕರ್ಮ ಫಲ" ಕೀರ್ತಿಕಾಮನೆ ಪತನಕ್ಕೆ ಪಥ' "ಪ್ರತೀಕಾರ ನ್ಯಾಯಬದ್ಧವಾಗಿದ್ದರೂ, ಹಾಗೂ ಹಿತವಾಗಿದ್ದರೂ ಯಾವಾಗಲೂ ಜಯಪ್ರದವಾಗುವುದಿಲ್ಲ" ನ್ಯಾಯವಾದುದನ್ನು ಧರ್ಮವಾದುದನ್ನು ಭಗವಂತನು ಸಂರಕ್ಷಿಸುತ್ತಾನೆ" ಮರಣದಂಡನೆಯು ಅಪರಾಧವನ್ನು ಅಳಿಸಿ ಹಾಕುವುದಿಲ್ಲ". "ಅತೀವ ಉಗ್ರಶಿಕ್ಷೆಯು ಅನುಚಿತವಾದುದು" "ರಾಜಕೀಯ ಅನ್ಯಾಯವು

ಹಿಂಸೆಗಿಂತ ಪರಮ ನೀಚವಾದುದು". ಕಟ್ಟಳೆ ಕಾನೂನನ್ನು ಉಲ್ಲಂಘಿಸುವ ದುರ್ಬಲರನ್ನು ಗೋಳಾಡಿಸುವ," "ವಿಚಾರ ಮಾಡದೆ ನಂಬುವ, ಅಸೂಯೆ ಪಡುವ, ತಪ್ಪು ಎಸಗುವ, ದುರಭಿಮಾನಪಡುವ ಪ್ರವೃತ್ತಿ ಮತ್ತು ಚಂಚಲತೆ ಮಾನವ ಸ್ವರೂಪ, ಅದು ಮೂಲಭೂತವಾಗಿ ಒಂದೇ ಆಗಿರುತ್ತದೆ". ಹೀಗೆ ಅವನು ನೀಡಿರುವ ನೈತಿಕ ತತ್ವಗಳು ಮಾನವನ ಅನುಭವ, ವಿವೇಕ, ಜ್ಞಾನ ಹಾಗೂ ಸತ್ಯದ ತಿರುಳೇ ಆಗಿದೆ. ಅಷ್ಟೇ ಅಲ್ಲದೆ ಇವುಗಳು ಸಮಗ್ರ ಮಾನವ ಕುಲಕ್ಕೆ ಸದಾಚಾರದ ನಿಯಮವೇ ಆಗಿವೆ. ಥೂಸಿಡೈಡಿಸನು ವಿಚಾರವಾದದ ಬೆಳಕಿನಲ್ಲಿ ಐತಿಹಾಸಿಕ ಘಟನೆಗಳನ್ನು ಪರಿಶೀಲಿಸಿ ನೈತಿಕ ತತ್ವಗಳನ್ನು ನಿರೂಪಿಸಿ ಜಗತ್ತಿನ ನೀತಿ ಬೋಧಕ ಚರಿತ್ರೆ ಲೇಖಕರಲ್ಲಿ ಅತಿ ಶ್ರೇಷ್ಠನಾದವನು. ಅವನು ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿದನು ಮತ್ತು ರಾಜಪ್ರಭುತ್ವ ನಿರಂಕುಶಾಧಿಪತ್ಯ, ಕುಲೀನ ಪ್ರಭುತ್ವ, ಧನಿಕರ ಪ್ರಭುತ್ವ, ಇವುಗಳನ್ನು ತಳ್ಳಿಹಾಕಿದನು.

ಇಂತಹ ಅಮೂಲ್ಯ ಕೊಡುಗೆಗಳನ್ನು ನೀಡಿದ ಥೂಸಿಡೈಡಿಸನಲ್ಲಿ ಕೆಲವು ಕುಂದುಗಳೂ ಇದ್ದವು. ಅವನು ಬಳಸಿದ ಕಾಲಗಣನಾ ಕ್ರಮ ಅತ್ಯಂತ ತೊಡಕಾಗಿದ್ದಿತು. ಅನೇಕ ಕಡೆ ಅವನ ಶೈಲಿಯು ಬಹು ಬಿಗಿಯಾಗಿದ್ದಿತು. ಇವು ಮುಖ್ಯವಾಗಿ ಥೂಸಿಡೈಡಿಸನ ಕೃತಿಯಲ್ಲಿ ಕಂಡುಬರುವ ನ್ಯೂನತೆಗಳು.

ಇಷ್ಟಾದರೂ ಥೂಸಿಡೈಡಿಸನು ಇತಿಹಾಸ ರಚನಾ ಕೌಶಲ್ಯದಲ್ಲಿ ಅತ್ಯುನ್ನತ ಶಿಖರವನ್ನು ಮುಟ್ಟಿದನು. ಈತನು ಇತಿಹಾಸದ ಬರವಣಿಗೆಯಲ್ಲಿ ವಿಮರ್ಶಾತ್ಮಕವಾದ ಪರಿಶೀಲನೆ, ವಸ್ತುನಿಷ್ಠ ವಿಶ್ಲೇಷಣೆ, ಸತ್ಯಾಸತ್ಯತೆಯ ಪರಿಶೀಲನೆ, ಘಟನೆಗಳ ಜೋಡಣೆ, ಈ ಎಲ್ಲಾ ವಿಷಯಗಳಿಂದ ಅತ್ಯಂತ ಉತ್ಕೃಷ್ಟವಾದ ಇತಿಹಾಸ ರಚನಾಕಾರನಾದನು. ವಸ್ತುನಿಷ್ಠತೆಗೆ ಹೆಚ್ಚಿನ ಆದ್ಯತೆ ನೀಡಿ ವಿಷಯವನ್ನು ಅಧ್ಯಯನ ಮಾಡಿ ಸಿದ್ಧಾಂತವನ್ನು ರೂಪಿಸಿದ್ದರಿಂದ ಗ್ರೀಸ್‌ನ ವಸ್ತುನಿಷ್ಠ ಇತಿಹಾಸಕಾರನೆಂದು ಕರೆಯಲ್ಪಟ್ಟಿದ್ದಾನೆ. ಹೆರೋಡೋಟಸನ ಅತ್ಯುತ್ತಮ ಉತ್ತರಾಧಿಕಾರಿಯಾಗಿ ಬಂದ ಥೂಸಿಡೈಡಿಸನು ಇತಿಹಾಸದ ಬರವಣಿಗೆಯನ್ನು ವೈಜ್ಞಾನಿಕವಾಗಿ ರೂಪಿಸುವುದರಲ್ಲಿ ತನ್ನದೇ ಆದ ಛಾಪನ್ನು ಒತ್ತಿದ್ದಾನೆ. ಕೆಲವು ಅಂಶಗಳಲ್ಲಿ ಹೆರೋಡೋಟಸನನ್ನು ಮೀರಿಸಿದ ಉತ್ಕೃಷ್ಟ ಹಾಗೂ ಶ್ರೇಷ್ಠ ಇತಿಹಾಸ ರಚನಾಕಾರನಾಗಿದ್ದಾನೆ. ಥೂಸಿಡೈಡಿಸನು ಏಕ ವ್ಯಕ್ತಿಯಾಗಿ ಇಂದಿನ ಇತಿಹಾಸ ರಚನಾಕಾರರಿಗೆ ಭದ್ರಬುನಾದಿಯನ್ನು ಹಾಕಿಕೊಟ್ಟನೆಂದು ಜೆ.ಬಿ.ಬ್ಯುರಿಯವರು ಹೇಳಿರುವುದು ಸರಿಯಾಗಿಯೇ ಇದೆ.

## 12.6 ಜೆನೋಫನ್

ಸುಮಾರು ಕ್ರಿ.ಪೂ.430ರಲ್ಲಿ ಜೆನೋಫನ್ನನೂ ಕೂಡ ಅಥೆನ್ಸ್‌ನಲ್ಲಿಯೆ ಜನಿಸಿದನು. ಈತನು ಸಾಕ್ರೆಟಿಸನ ಶಿಷ್ಯನಾಗಿದ್ದು ತತ್ವಶಾಸ್ತ್ರವನ್ನು ಅಧ್ಯಯನ ಮಾಡಿದನು. ನಂತರ ಪರ್ಶಿಯಾದ ಸೈರಸನಲ್ಲಿ ಸೇವೆಗೆ ಸೇರಿದನು. ಪರ್ಶಿಯಾದಲ್ಲಿ ನಡೆದ ಅಂತರ್‌ಯುದ್ಧದಲ್ಲಿ ರಾಜಕುಮಾರನು ಕೊಲ್ಲಲ್ಪಟ್ಟು ಹತ್ತು ಸಾವಿರ ಗ್ರೀಕ್ ಸೈನಿಕರು ಸೇನಾಧಿಕಾರಿ ಇಲ್ಲದೆ ಅತಂತ್ರವಾದರು. ಪರ್ಶಿಯನ್ನರಿಗೆ ಶರಣಾಗಲು ಅವರು ನಿರಾಕರಿಸಿದರು. ಇಂತಹ ಹೊತ್ತಿನಲ್ಲಿ ನಾಯಕತ್ವದ ಗುಣಗಳನ್ನು ಹೊಂದಿದ್ದ ಜೆನೋಫೆನನನ್ನು ಗ್ರೀಕ್ ಸೈನಿಕರ ಸೇನಾಧಿಪತಿಯನ್ನಾಗಿ ಮಾಡಲು ನಿರ್ಧರಿಸಿದರು. ಈ ರೀತಿಯಾಗಿ ಬಹಳ ಪ್ರಯಾಸದಿಂದ ಈ ಸೈನಿಕರನ್ನು ಏಷ್ಯಾ ಮೈನರ್ ಮೂಲಕವಾಗಿ ಕರೆದುಕೊಂಡು ಹೋಗಿ ಕಡೆಗೆ ಸ್ಪಾರ್ಟಾದ ಸೇವೆಯಲ್ಲಿ ಸೇರಿದರು. ನಂತರ ಈತನು ಎಲಿಸ ಎಂಬಲ್ಲಿ ನಿಂತನು. ಅವನ ಸೈನಿಕ ಅನುಭವ ಮತ್ತು ಅವನಲ್ಲಿದ್ದ ತತ್ವಜ್ಞಾನ ಅವನಿಗೆ ಹಲವಾರು ಗ್ರಂಥಗಳನ್ನು ರಚಿಸಲು ಅನುಕೂಲವಾಯಿತು. ಈತನು ಕ್ರಿ.ಪೂ.354ರಲ್ಲಿ ಮರಣ ಹೊಂದಿದನು. ಈತನ ಮೊದಲ ಕೃತಿ 'ಮೆಮೊರಬಿಲಿಯಾ'. ಇದು ತನ್ನ ಗುರುವಾದ ಸಾಕ್ರೆಟಿಸನೊಂದಿಗೆ ತನ್ನ ಅನುಭವದ ಕಥನಗಳನ್ನು ತಿಳಿಸುತ್ತದೆ. ಅಲ್ಲದೆ ಪ್ರಾಚೀನ ಗ್ರೀಕರ ಸಾಮಾಜಿಕ ಜೀವನದ ವರದಿಯನ್ನು ಕೂಡ ನೀಡುತ್ತದೆ. 'ಅನಾಬೋಸಿಸ್' ಎಂಬ ಈತನ ಮತ್ತೊಂದು ಕೃತಿಯು 'ಸೈರಸ ದ ಎಂಗರ್' ನ ಸೈನಿಕ ಕಾರ್ಯಾಚರಣೆಯನ್ನು ಮತ್ತು ಹತ್ತುಸಾವಿರ ಗ್ರೀಕ್ ಸೈನಿಕರ ಹಿನ್ನೆಡೆಯನ್ನು ವಿವರಿಸುತ್ತದೆ. 'ದಿ ಹೆಲೆನಿಕಾ' ಎಂಬ ಈತನ ಕೃತಿ ಇತಿಹಾಸ ಲೇಖನದಲ್ಲಿ ಅತ್ಯುತ್ತಮವಾದದ್ದು. ಇದು ಏಳು ಪ್ರಧಾನ ಭಾಗಗಳಿಂದ ಕೂಡಿದ್ದು ಥೂಸಿಡೈಡಿಸನ ಪೆಲೆಪೊನೇಷಿಯನ್ ಯುದ್ಧದ ಮುಂದುವರಿದ ಭಾಗವಾಗಿದೆ. ಥೂಸಿಡೈಡಿಸನು ಅರ್ಧಕ್ಕೆ ನಿಲ್ಲಿಸಿದ್ದ ವಿಷಯವನ್ನು ಮುಂದುವರೆಸಿಕೊಂಡು ಹೋದನು. ಆದರೆ ಅದರ ಶೈಲಿ ಯಥಾರ್ಥತೆ, ವಸ್ತುನಿಷ್ಠತೆ ಅಷ್ಟೇನು

ಸಮರ್ಪಕವಾಗಿರಲಿಲ್ಲ. ಆದರೆ ಪ್ರಾಚೀನ ಗ್ರೀಕರ ಕೊನೆಗಾಲದ ಇತಿಹಾಸವನ್ನು ತಿಳಿಸಲು ಸಮರ್ಪಕವಾಗಿದೆ. ಜೆನೋಫೆನನು ಹೆರೋಡೋಟಸ, ಮತ್ತು ಥೂಸಿಡೈಡಿಸರಿಗೆ ಹೋಲಿಸಿದರೆ ಅಂತಹ ಶ್ರೇಷ್ಠ ಇತಿಹಾಸಕಾರನಾಗಿರಲಿಲ್ಲ. ಈತನ ನಂತರ ಇತಿಹಾಸ ರಚನೆಯು ಅಷ್ಟೇನೂ ಬೆಳವಣಿಗೆಯನ್ನು ಕಾಣಲಿಲ್ಲ. ಅಲೆಗ್ಸಾಂಡರನ ಆಕ್ರಮಣ, ಹೆಲೆನಿಸ್ಟಿಕ್ ನಾಗರೀಕತೆಯ ಹರಡುವಿಕೆ ಇತಿಹಾಸ ಲೇಖನಕ್ಕೆ ಆಸಕ್ತಿಯುತವಾದ ವಿಷಯವನ್ನು ಒದಗಿಸಿದರೂ ಕೂಡ ಅಷ್ಟೇನೂ ಬರಹಗಾರರು ದರ ಕಡೆ ಗಮನಹರಿಸಲಿಲ್ಲ.

## 12.7 ಪಾಲಿಬಿಯಸ್

ಕಡೆಯ ಗ್ರೀಕ್ ಇತಿಹಾಸಕಾರರಲ್ಲಿ ಪಾಲಿಬಿಯಸ್‌ನು ಪ್ರಮುಖ ಪಾತ್ರವನ್ನು ವಹಿಸಿದ್ದಾನೆ. ಈತನು ಸುಮಾರು ಕ್ರಿ.ಶ. 208ರಲ್ಲಿ ಮೆಗಾಪೋಲಿಸ್‌ನಲ್ಲಿ ಜನಿಸಿದನು. ಕ್ರಿ.ಪೂ.168ರಲ್ಲಿ ಪಿಡ್ನಾ ಯುದ್ಧದಲ್ಲಿ ರೋಮನ್ನರು ಗ್ರೀಕರನ್ನು ಸೋಲಿಸಿದರು. 1000ಗ್ರೀಕ್ ಸೆರೆಯಾಳುಗಳೊಂದಿಗೆ, 30ವರ್ಷದ ಪಾಲಿಬಿಯಸ್‌ನನ್ನು ರೋಮ್‌ಗೆ ಕಳುಹಿಸಲಾಯಿತು. ರೋಮಿಗೆ ತೆರಳಿದ ಪಾಲಿಬಿಯಸ್‌ನು ರೋಮ್ ನಗರವನ್ನು ಬಹುವಾಗಿ ಮೆಚ್ಚಿದನು. ಅಲ್ಲಿನ ಕುಲೀನ ಮನೆತನದ ಸಂಪ್ರದಾಯಗಳು ಮತ್ತು ರಾಜಕೀಯ ವ್ಯವಸ್ಥೆಯನ್ನು ಬಹುವಾಗಿ ಮೆಚ್ಚಿದನು. 16 ವರ್ಷಗಳ ನಂತರ ಗ್ರೀಸ್‌ಗೆ ಹಿಂದಿರುಗಿದನು. ಸುಮಾರು ಕ್ರಿ.ಪೂ. 126 ರಲ್ಲಿ ತನ್ನ 82 ನೆಯ ವಯಸಿನಲ್ಲಿ ಮರಣಹೊಂದಿದನು. ತನ್ನ ಕೃತಿಯಾದ 'ಹಿಸ್ಟರೀಸ್' ನಲ್ಲಿ 40ಭಾಗಗಳಾಗಿ ವಿಂಗಡಿಸಿದ್ದಾನೆ. ಪಾಲಿಬಿಯಸ್‌ನ 40ಭಾಗಗಳಲ್ಲಿ ಮೊದಲ ಐದು ಭಾಗಗಳು ಒಳ್ಳೆಯ ಸ್ಥಿತಿಯಲ್ಲಿವೆ. ಉಳಿದವು ಭಾಗಗಳಲ್ಲಿ ಅನೇಕ ಭಾಗಗಳು ಕಳೆದುಹೋಗಿವೆ. ಆತನ ಸಮಗ್ರ ಕೃತಿಯು ಕ್ರಿ.ಪೂ. 221 ರಿಂದ 144 ರ ನಡುವಣ 53ವರ್ಷಗಳ ಇತಿಹಾಸವನ್ನು ತಿಳಿಸುತ್ತದೆ. ಅದು ರೋಮನ್ನರ ಉನ್ನತಿಯನ್ನು ವಿಸ್ತರಣೆಯನ್ನು ಗ್ರೀಕರ ಅವನತಿಯನ್ನು ವಿವರಿಸುತ್ತದೆ. ಈತನು ರೋಮ್‌ನ ಸಾರ್ವಭೌಮತ್ವವನ್ನು, ರಾಜಕೀಯ ಇತಿಹಾಸವನ್ನು ವರ್ಣಿಸಿದ್ದಾನೆ. ಅಂದರೆ ರೋಮ್ ಸಾಮ್ರಾಜ್ಯದ ಇತಿಹಾಸ ಈತನ ಕೃತಿ ರಚನೆಯ ಕೇಂದ್ರ ವಿಷಯವಾಗಿದೆ. ಪಾಲಿಬಿಯಸ್‌ನ ಕೃತಿಯು ಮೂರು ಲಕ್ಷಣಗಳಿಂದ ಕದೆ. ಆಡಳಿತದ ದಸ್ತಾವೇಜುಗಳನ್ನು ಆಕಾರಗಳಾಗಿ ಬಳಸಿಕೊಂಡಿರುವುದು. ಸ್ಥಳವರ್ಣನೆ ಮತ್ತು ಸಮಕಾಲೀನ ಪ್ರಪಂಚದ ರಾಜಕೀಯ ವ್ಯವಹಾರಗಳನ್ನು ಕುರಿತು ನೀಡಿರುವ ವಿವರಣೆ ಪಾಲಿಬಿಯಸ್‌ನ ಶ್ರೇಷ್ಠತೆಯ ಪ್ರತೀಕವಾಗಿದೆ.

## 12.8 ಸಂಕ್ಷಿಪ್ತ ಅವಲೋಕನ

ಇತಿಹಾಸ ಲೇಖನ ಕಲೆ ಗ್ರೀಕರಿಂದ ಆದ ಬೆಳವಣಿಗೆ ಎನ್ನುವುದು ಸರ್ವವಿದಿತವಾದದ್ದು. ಈ ಕಲೆ ಕ್ರಿ.ಪೂ.5ನೇ ಶತಮಾನದಲ್ಲಿ ಹೆರೋಡೋಟಸ್‌ನಿಂದ ಮೊದಲಾಯಿತು. ಇವನಿಗಿಂತ ಪೂರ್ವದಲ್ಲಿ ಭಾಷಣ ಲೇಖಕರು ಸಮಕಾಲೀನ ಘಟನೆಗಳನ್ನು ದಾಖಲಿಸುತ್ತಿದ್ದರು. ನಂತರ ಪ್ರಾರಂಭದ ಕಥನಕಾರರಾದ ಹೋಮರ್, ಡೆಯೋನಿಷಿಯಸ್, ಚರಾನ್ ಎಂಬುವವರನ್ನು ಕಾಣುತ್ತೇವೆ. ಆದರೆ ಹೆರೋಡೋಟಸ್ ಅತ್ಯಂತ ಉತ್ತಮ ಇತಿಹಾಸಕಾರನೆಂಬುವುದರಲ್ಲಿ ಸಂದೇಹವಿಲ್ಲ. ಅಲ್ಲದೆ, ಈತನನ್ನು ಇತಿಹಾಸದ ಜನಕನೆಂದೂ ಕರೆಯಲಾಗಿದೆ. ಈತನ ಕೃತಿ 'ಹಿಸ್ಟರಿ' ಕೇಂದ್ರ ವಿಷಯ ಗ್ರೀಕ್ ಮತ್ತು ಪರ್ಶಿಯನ್ನರ ನಡುವೆ ನಡೆದ ಯುದ್ಧ. ಈ ಕಾಲದ ಮತ್ತೊಬ್ಬ ಪ್ರಸಿದ್ಧ ಇತಿಹಾಸಕಾರ ಥೂಸಿಡೈಡಿಸ್. ಈತನೂ ಗ್ರೀಕ್ ದೇಶದವನಾಗಿದ್ದು, ಪೆಲೊಪೋನೀಷಿಯನ್ ಯುದ್ಧದ ಇತಿಹಾಸ ಎಂಬುದು ಇತನ ಪ್ರಸಿದ್ಧ ಕೃತಿಯಾಗಿದೆ. ಥೂಸಿಡೈಡಿಸ್‌ನು ನಿಖರತೆ, ಸ್ಪಷ್ಟತೆ, ವಸ್ತು ನಿಷ್ಟತೆಗಳಿಗೆ ಹೆಸರಾಗಿದ್ದಾನೆ. ಗ್ರೀಸ್ ದೇಶವು ಸೃಷ್ಟಿಸಿದ ಇತಿಹಾಸಕಾರರಲ್ಲಿ ಥೂಸಿಡೈಡಿಸ್‌ನು ಧ್ರುವತಾರೆಯಂತೆ ಪ್ರಜ್ವಲಿಸಿದ್ದಾನೆ. ಇಂತಹ ಶ್ರೇಷ್ಠ ಇತಿಹಾಸಕಾರರನ್ನಲ್ಲದೆ, ಗ್ರೀಸ್ ಜೆನೋಫನ್ ಮತ್ತು ಪಾಲಿಬಿಯಸ್ ನಂತಹ ಇತಿಹಾಸಕಾರರನ್ನು ಸೃಷ್ಟಿಸಿತು. ಅದರೆ ಇವರು ಹೆರೋಡೊಟಸ್ ಮತ್ತು ಥೂಸಿಡೈಡಸ್‌ರ ಎತ್ತರಕ್ಕೆ ಏರಲಾಗಲಿಲ್ಲ. ಇತಿಹಾಸ ಲೇಖನ ಕಲೆಯ ಮೂಲ ಪುರುಷರು ಗ್ರೀಕರು ಎಂಬುದನ್ನು ಪ್ರಪಂಚ ಮರೆಯುವಂತಿಲ್ಲ. ಈ ದಿಶೆಯಲ್ಲಿ, ಹೆರೋಡೊಟಸ್ ಮತ್ತು ಥೂಸಿಡೈಡಿಸ್‌ನಂತಹ ಮಹಾ ಇತಿಹಾಸಕಾರರನ್ನು ಜಗತ್ತಿಗೆ ನೀಡಿದ ಗ್ರೀಸ್ ದೇಶಕ್ಕೆ ಇತಿಹಾಸಕಾರರು ಚಿರಋಣಿಗಳಾಗಿರಬೇಕಾಗಿದೆ ಹಾಗೂ ಗ್ರೀಸ್ ಅಪೂರ್ವ ಗೌರವವನ್ನು ಪಡೆದಿದೆ.

## 12.9 ಸ್ವಂತ ಅಭ್ಯಾಸಕ್ಕೆ ಪ್ರಶ್ನೆಗಳು

1. ಪ್ರಾಚೀನ ಗ್ರೀಸ್‌ನಲ್ಲಿ ಇತಿಹಾಸ ಲೇಖನ ಕಲೆಯ ಬೆಳವಣಿಗೆಯನ್ನು ಕುರಿತು ಬರೆಯಿರಿ.
2. ಇತಿಹಾಸ ಲೇಖನ ಕಲೆಯ ಬೆಳವಣಿಗೆಗೆ ಹೆರೋಡೋಟಸ್ ಮತ್ತು ಥೂಸಿಡೈಡಿಸರ ಕೊಡುಗೆಯನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

## 12.10 ಹೆಚ್ಚಿನ ಅಧ್ಯಯನಕ್ಕೆ


1. History in Theory and Method : K.Rajayyan
2. History : Its Theory and Method : Prof. B.Sheik Ali
3. A Text book of Histriography : E. Sreedharan
4. Historiography Ancient, Medieval and Modern : Ernst Breisach


ಪ್ರೊ. ಶಿವಣ್ಣ

# ಘಟಕ -13

## ರೋಮನ್ ಇತಿಹಾಸ ಲೇಖನ ಕಲೆ-ಕ್ಯಾಟೊ, ಲಿವಿ, ಟ್ಯಾಸಿಟಸ್ ಮತ್ತು ಇತರರು

13.0 ಉದ್ದೇಶಗಳು

13.1 ಪೀಠಿಕೆ

13.2 ಕ್ಯಾಟೊ (234-149 ಕ್ರಿ.ಪೂ)

13.3 ಜೂಲಿಯಸ್ ಸೀಸರ್ ಮತ್ತು ಇನ್ನಿತರರ ಆತ್ಮಕಥನಗಳು

13.4 ಲಿವಿ ( ಕ್ರಿ.ಪೂ. 59-ಕ್ರಿ.ಶ.17)

13.5 ಕಾರ್ನಿಲಿಯಸ್ ಟ್ಯಾಸಿಟಸ್(ಕ್ರಿ. ಶ.55-120)

13.6 ಇತರ ರೋಮನ್ ಇತಿಹಾಸಕಾರರು.

13.7 ರೋಮನ್ ಇತಿಹಾಸ ಲೆಖನ ಕಲೆಯ ಲಕ್ಷಣಗಳು

13.8 ಸಂಕ್ಷಿಪ್ತ ಅವಲೋಕನ

13.9 ಸ್ವಯಂ ಪರೀಕ್ಷೆಯ ಪ್ರಶ್ನೆಗಳು

13.10 ಪರಾಮರ್ಶನ ಗ್ರಂಥಗಳು.

## 13.0 ಉದ್ದೇಶಗಳು

ಈ ಘಟಕವನ್ನು ಅಧ್ಯಯನ ಮಾಡುವುದರಿಂದ ನೀವು ತಿಳಿದು ಕೊಳ್ಳುವ ಅಂಶಗಳೆಂದರೆ

* ರೋಮನ್ ಇತಿಹಾಸ ಲೇಖನ ಕಲೆಯ ಮೇಲೆ ಗ್ರೀಕರ ಪ್ರಭಾವ
* ಆತ್ಮ ಕಥನಗಳ ಐತಿಹಾಸಿಕ ಮಹತ್ವ
* ಟೈಟಸ್ ಲಿವಿಯು ತನ್ನ ಗ್ರಂಥ History of Romeನಲ್ಲಿ ರೋಮನ್ ಸಾಮ್ರಾಜ್ಯವನ್ನು ಕುರಿತು ನೀಡಿರುವ ವಿವರಣೆ.
* ರೋಮನ್ ಇತಿಹಾಸ ಲೇಖನ ಕಲೆಯ ಪ್ರಖ್ಯಾತ ಇತಿಹಾಸ ಕಾರ ಟ್ಯಾಸಿಟಸ್‌ನ ವಿಮರ್ಶಾತ್ಮಕ ವಿವರಣೆಗಳಿಂದ ಕೂಡಿದ ಅನೇಕ ಕೃತಿಗಳು
* ರೋಮನ್ ಇತಿಹಾಸ ಲೇಖನ ಕಲೆಯ ವಿಶೇಷ ಲಕ್ಷಣಗಳು.

## 13.1 ಪೀಠಿಕೆ

ಗ್ರೀಕರ ನಂತರ ರೋಮನ್ನರು ಕೂಡ ಇತಿಹಾಸ ಲೇಖನ ಕಲೆಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಆದರೆ ಅವರ ಕೊಡುಗೆ ಗ್ರೀಕರ ಕೊಡುಗೆಯಷ್ಟು ಮಹತ್ವದ್ದಾಗಿಲ್ಲ. ರೋಮನ್ನರು ಹೆಚ್ಚಿನ ಮಟ್ಟಕ್ಕೆ ಅನುಕರಣೀಯರು ಎಂಬುದು ಮನದಟ್ಟಾಗುತ್ತದೆ. ಆದರೆ ಗ್ರೀಕರು ಆಳವಾದ ಪಾಂಡಿತ್ಯ ಮತ್ತು ವಿಮರ್ಶಾತ್ಮಕ ವಿಧಾನಕ್ಕೆ ಖ್ಯಾತಿಗಳಿಸಿದ್ದರು. ಅವರ ಶೈಲಿಯು ಕೂಡ ಆಕರ್ಷಣೀಯವಾಗಿತ್ತು. ಪ್ರಾರಂಭದಲ್ಲಿ ರೊಮನ್ನರು ಲ್ಯಾಟಿನ್‌ನಲ್ಲಿ ಬರೆಯದೆ ಗ್ರೀಕ್ ಭಾಷೆಯಲ್ಲಿ ಇತಿಹಾಸವನ್ನು ಬರೆದರು. ಗ್ರೀಕರು ರೋಮನ್ನರ ಐತಿಹಾಸಿಕ ಚಿಂತನೆಯ ಮೇಲೆ ಹೆಚ್ಚು ಪ್ರಭಾವ ಬೀರಿದರು. ಇತಿಹಾಸದ ಚಿಂತನೆ ರೋಮನ್ನರಿಗೆ ಸ್ವಕೀಯದ್ದಾಗಿರಲಿಲ್ಲ. ಇಂತಹ ಚಿಂತನೆ ಅವರಿಗೆ ಬಂದದ್ದು ಗ್ರೀಕರನ್ನು ರೋಮನ್ನರು ರಾಜಕೀಯ ದೃಷ್ಟಿಯಿಂದ ಗೆದ್ದು ಕೊಂಡು ತಮ್ಮ ಪರಮಾಧಿಕಾರವನ್ನು ಸ್ಥಾಪಿಸಿದರು. ಆದರೆ, ಗ್ರೀಕರ ಸಾಂಸ್ಕೃತಿಕ ಪ್ರಭಾವ ರೋಮನ್ ಸಾಮ್ರಾಜ್ಯದ ಮೇಲೆ ಹಲವು ವರ್ಷಗಳ ಕಾಲ ಪ್ರಭಾವ ಬೀರಿತು. ಅನಂತರ ರೋಮನ್ನರು ತಮ್ಮದೇ ಆದ ಸಾಂಸ್ಕೃತಿಕ ಮೌಲ್ಯಗಳ ಬಗ್ಗೆ ಆಲೋಚನೆ ನಡೆಸಲು ಪ್ರಾರಂಭಿಸಿದರು ಎರಡನೆಯ ಪೂನಿಕ್ ಯುದ್ಧದ ವರೆಗೆ ರೋಮ್ ತನ್ನ ದೇಶದ ಇತಿಹಾಸವನ್ನು ಬರೆಯಲಿಲ್ಲ ಅದು ಇತಿಹಾಸವನ್ನು ಸೃಷ್ಟಿಸುವುದರಲ್ಲಿ ಮಗ್ನವಾಗಿತ್ತು. 500 ವರ್ಷಗಳ ಕಾಲ ರೋಮ್ ಇತಿಹಾಸಕಾರರನ್ನೇ ಹೊಂದಿರಲಿಲ್ಲ. ಆದರೆ ಅನಂತರ ರೋಮನ್ನರಲ್ಲಿ ಐತಿಹಾಸಿಕ ಪ್ರಜ್ಞೆ ಉದಯಿಸಲು ಪ್ರಾರಂಭಿಸಿತು. ಇಂತಹ ಬದಲಾವಣೆಗೆ ಕಾರಣ ಗ್ರೀಕರ ಪ್ರಭಾವ ರೋಮನ್ನರು ಹೆರೊಡೋಟಸ್, ಥೂಸಿಡೈಡಿಸ್, ಪೊಲಿಬಿಯಸ್ ಗ್ರಂಥಗಳನ್ನು ಓದಿದ ಮೇಲೆಇತಿಹಾಸದ ಬರವಣಿಗೆಯ ಕಡೆ ಇದುವರೆಗೆ ಹೊಂದಿದ್ದ ತಾತ್ಸಾರವನ್ನು ಕೊನೆಗೊಳಿಸಿದರು. ಅವರು ಕೂಡ ಗ್ರೀಕರಂತೆ ತಮ್ಮ ಸಾಧನೆಗಳನ್ನು ದಾಖಲಿಸಬೇಕೆಂದು ನಿರ್ಧರಿಸಿದರು. ಅವರು ಗ್ರೀಕರಿಂದ ಇತಿಹಾಸ ಬರವಣಿಗೆಯ ವಿಧಾನವನ್ನು ಕಲಿತರು ಈ ರೀತಿಯಾಗಿ ರೋಮನ್ ಇತಿಹಾಸಲೇಖನ ಕಲೆಯು ಗ್ರೀಕರ ಪ್ರಭಾವದಿಂದ ಉದಯಿಸಿದ ಕಲೆ.

## 13.2 ಕ್ಯಾಟೊ ( ಕ್ರಿ. ಪೂ. 234 -149)

Origines ಕೃತಿಯನ್ನು ರಚಿಸಿದ ಕ್ಯಾಟೊ ರೋಮನ್ ಇತಿಹಾಸ ಲೇಖನ ಕಲೆಯಲ್ಲಿ ಕ್ರಾಂತಿಕಾರಕ ಬದಲಾವಣೆಗೆ ಕಾರಣನಾದನು. ಏಳು ಭಾಗಗಳಿಂದ ಕೂಡಿರುವ ಕೃತಿಯನ್ನು ತನ್ನ ಜೀವಿತದ ಕೊನೆಯ ವರ್ಷದ ವರೆಗೂ ಬರೆದನು. ಆದರೆ ಈ ಪುಸ್ತಕದ ಅನೇಕ ಭಾಗಗಳು ಕಳೆದು ಹೋಗಿವೆ. ವಿಷಯದ ಪ್ರಸ್ತಾಪ , ಶೈಲಿ, ಸ್ಪೂರ್ತಿ, ಮತ್ತು ಭಾಷೆ ಈ ಕಾಲದಿಂದ ಸಂಪೂರ್ಣ ಬದಲಾವಣೆ ಕುರಿತು ವ್ಯತ್ಯಾಸವನ್ನು ಕಾಣಬಹುದಾಗಿದೆ. ಕ್ಯಾಟೊವನ್ನು ರೊಮನ್ ಇತಿಹಾಸ ಲೇಖನ ಕಲೆಯ ಪಿತಾಮಹನೆಂದು

ಕರೆಯಬಹುದು. ಈತನು ಇತಿಹಾಸ ಲೇಖನ ಕಲೆಯಲ್ಲಿ ಒಂದು ಹೊಸ ನಮೂನೆ ಪ್ರಾರಂಭಿಸಿದನು. ಲ್ಯಾಟಿನ್ ಇತಿಹಾಸ ಲೇಖನ ಕಲೆಗೆ ಒಂದು ಹೊಸರೂಪನೀಡಿದನು. ಈತನೆ ಲ್ಯಾಟಿನ್ ಭಾಷೆಯಲ್ಲಿ ಇತಿಹಾಸವನ್ನು ರಚಿಸಿದ ಮೊದಲನೆಯ ನಿಜವಾದ ಬರಹಗಾರ. ಸಾರ್ವಜನಿಕ ಕ್ಷೇತ್ರದಲ್ಲಿ ಪ್ರಸಿದ್ಧನೆನಸಿಕೊಂಡಿದ್ದರೂ ಅವನ ಪ್ರಾರಂಭಿಕ ಜೀವನ ಹಾಗೂ ಅವನ ವೃತ್ತಿ ಜೀವನದ ಬಗ್ಗೆ ಹೆಚ್ಚಿನ ಮಾಹಿತಿಇಲ್ಲ. ನಮಗೆ ಕ್ಯಾಟೊ ಹೆಚ್ಚು ಗೊತ್ತಿರುವುದು ಅವನು ಕೊನೆಯ ಹಂತದಲ್ಲಿ ಸೈನ್ಯದಲ್ಲಿ ಹೊಂದಿದ್ದ Censor ದರ್ಜೆಯಿಂದ. ಅವನು ಪ್ರಸಿದ್ದನಾಗಿರುವುದು ಕ್ಯಾಟೊ ಸೆನ್‌ಸಾರ್ ಎಂದೇ. ಅವನು ತನ್ನ ಗ್ರಂಥದ ಪೀಠಿಕೆಯಲ್ಲಿ ಕ್ಯಾಟೊ ವಿದ್ಯಾಭ್ಯಾಸದ ಸ್ವರೂಪ ಮತ್ತು ಮಹತ್ವವನ್ನು ಕುರಿತು ವಿವರಿಸಿದ್ದಾನೆ. ಇದರ ಜೊತೆಗೆ ವಿದ್ಯಾಭ್ಯಾಸದಲ್ಲಿ ಇತಿಹಾಸ ಸ್ಥಾನವನ್ನು ಕುರಿತು ವಿವರಿಸಿದ್ದಾನೆ.

ಇತಿಹಾಸದ ಬೋಧನೆಯ ಮುಖ್ಯ ಉದ್ದೇಶ ಯುವಕರಿಗೆ ದೇಶಭಕ್ತಿ ಮತ್ತು ನೈತಿಕ ಗುಣಗಳ ಬಗ್ಗೆ ತಿಳಿಸಿಕೊಡುವುದು. ಕ್ಯಾಟೋನಗ್ರಂಥ ಜನಾಂಗೀಯ, ಭೌಗೋಳಿಕ ಮತ್ತು ಆರ್ಥಿಕ ಅಂಶಗಳ ಬಗ್ಗೆ ಮಾಹಿತಿಯನ್ನು ಒದಗಿಸಿಕೊಡುತ್ತದೆ. ಅವನು ಇಟಲಿಯ ಬುಡಕಟ್ಟು ಜನಾಂಗಗಳಿಗೆ, ಸಂಬಂಧಿಸಿದ ಸಂಪ್ರದಾಯಗಳು ಮತ್ತು ಕಾನೂನು, ಭಾಷೆ ಮತ್ತು ಸಂಸ್ಥೆಗಳ ಬಗ್ಗೆ ವಿವರಿಸಿರುವವನು. ಅವನು ರಚಿಸಿರುವ ಇತಿಹಾಸದ ಮುಖ್ಯ ಲಕ್ಷಣವೆಂದರೆ ಅದು ಯಾವುದೇ ಒಬ್ಬ ವ್ಯಕ್ತಿಯ ಹೆಸರನ್ನು ಕೂಡ ಉಲ್ಲೇಖಿಸದೆ ಇತಿಹಾಸವನ್ನು ರಚಿಸಿರುವುದು. ಅವನು ಯಾವುದೇ ಒಬ್ಬ ವ್ಯಕ್ತಿಗೆ ಮಹತ್ವನೀಡಲು ಇಚ್ಛಿಸಲಿಲ್ಲ. ಆದರೆ ಸಾಮೂಹಿಕ ಸಾಧನೆಗೆ ಮಹತ್ವ ನೀಡಿದನು. ಅವನು ರೋಮನ್ ಸಾಮ್ರಾಜ್ಯದಲ್ಲಿ ಉಂಟಾಗದ ಎಲ್ಲಾ ದಿಗ್ವಿಜಯಗಳಿಗೆ ಸಾಮಾನ್ಯ ಸೈನಿಕರು ಕಾರಣ ವೆಂಬುದನ್ನು ಮಂಡಿಸಿದನು. ಕೇವಲ ದಂಡನಾಯಕರುಗಳಿಗೆಮಾತ್ರ ಗೆಲುವಿನ ಗೌರವ ದೊರಕಬಾರದೆಂದು ಹೇಳಿದನು. ಅವನ Originesಪುಸ್ತಕದಲ್ಲಿ ದೊರಕುವ ಒಂದೇ ಒಂದು ನಾಮಪದವೆಂದರೆ ಸುರುಸ್. ಇದು ರೋಮನ್ ಸೈನ್ಯದಲ್ಲಿ ಒಂದು ಆನೆಯ ಹೆಸರಾಗಿತ್ತು. ಆದ್ದರಿಂದ ಕ್ಯಾಟೊ ರೋಮ್‌ನ ಒಬ್ಬ ಮಹಾನ್ ವಿದ್ವಾಂಸ. ಅವನು ಐತಿಹಾಸಿಕ ಬರವಣಿಗೆಯಲ್ಲಿ ಒಂದು ಹೊಸ ಬೆಳವಣಿಗೆಗೆ ಕಾರಣನಾಗಿದ್ದನು.

## 13.3 ಜೂಲಿಯಸ್ ಸೀಸರ್‌ನ ಮತ್ತು ಇನ್ನಿತರರ ಆತ್ಮಕಥನಗಳು

ಲ್ಯಾಟಿನ್ ಐತಿಹಾಸಿಕ ಆತ್ಮ ಕಥನಗಳು ರೋಮನ್ ಗಣರಾಜ್ಯದ ಕೊನೆಯ ಶತಮಾನದಲ್ಲಿ (ಕ್ರಿ. ಪೂ.100) ಕಾಣಿಸಿಕೊಂಡವು. ಆದರೆ ಈ ಆತ್ಮಕಥನಗಳೆಲ್ಲವನ್ನು ಬರೆದವರು ಪ್ರಮುಖವಾಗಿ ಸೈನಿಕರು ಮತ್ತು ದಂಡನಾಯಕರುಗಳು. ಸೆಂಪ್ರೊನಿಯಸ್ ಅಸೆಲ್ಲಿಯೊ ಹದಿನಾಲ್ಕು ಭಾಗಗಳನ್ನೊಳಗೊಂಡಿದ್ದ ತನ್ನ ಆತ್ಮಕಥನವನ್ನು ಸುಲ್ಲನ ಕಾಲದಲ್ಲಿ ಬರೆದನು. (ಕ್ರಿ. ಪೂ. 90 ಮತ್ತು 80 ರ ನಡುವೆ)ತನ್ನ ಗ್ರಂಥದಲ್ಲಿ ಅಸೆಲ್ಲಿಯೊ ಹೇಗೆ ಮತ್ತು ಏತಕ್ಕೆ ಘಟನಾವಳಿಗಳು ನಡೆಯುತ್ತವೆ ಎಂಬುದನ್ನು ಅರಿಯಲು ತಿಳಿಯಬೇಕೆಂದು ಬರೆದಿರುವನು. ಸುಲ್ಲನು ಅದೇ ರೀತಿ ಅವುಗಳ ಪರಿಣಾಮಗಳೇನು ಎಂಬುದನ್ನು ಅರ್ಥಮಾಡಿಕೊಳ್ಳಲು ಯತ್ನಿಸಿರುವೆನು ಎಂಬುದಾಗಿ ತಿಳಿಸಿರುವನು. ಸಲ್ಲನು ತನ್ನ ಆತ್ಮ ಕಥನವನ್ನು ಇಪ್ಪತ್ತು ಭಾಗಗಳಲ್ಲಿ (Twenty Books) ಬರೆದನು. ಆದರೆ ಪುಸ್ತಕ ಈ ಎಲ್ಲಾ ಭಾಗಗಳು ಕಳೆದು ಹೋಗಿವೆ. ಪ್ಲುಟಾರ್ಕನು ಎರಡನೆಯ ಶತಮಾನದಲ್ಲಿ ಸುಲ್ಲನ ಪುಸ್ತಕಗಳನ್ನು ಉಪಯೋಗಿಸಿಕೊಂಡು ತನ್ನ ಪುಸ್ತಕವನ್ನು ಬರೆದನು ಕಾರ್ನಿಲಿಯಸ್ ಸಿಸೆನ್ ತನ್ನ ಆತ್ಮಕಥನವನ್ನು 23 ಭಾಗಗಳಲ್ಲಿ (Twenty three books) ಬರೆದನು. ಇದು ಪ್ರಮುಖವಾಗಿ ಸುಲ್ಲ ಮತ್ತು ಮಾರಿಯಸ್‌ನ ನಡುವೆ ನಡೆದ ಆಂತರಿಕ ಯುದ್ಧವಾಗಿತ್ತು.

ಆತ್ಮ ಕಥನ ಬರಹಗಾರರಲ್ಲಿ ಅತ್ಯಂತ ಪ್ರಸಿದ್ಧರೆನಿಸಿಕೊಂಡವನು ಸಲ್ಲುಲಿಸ್ಟ್‌ಮತ್ತು ಜೂಲಿಯಸ್ ಸೀಸರ್. ಸಲ್ಲುಲಿಸ್ಟ್‌ನ ಅತ್ಯಂತ ಪ್ರಮುಖ ಗ್ರಂಥಗಳೆಂದರೆ Conspiracy of catiline ಮತ್ತು Jugurthine war ಜೂಲಿಯಸ್ ಸೀಸರ್ ( ಕ್ರಿ. ಪೂ.100) Commentaries on his Gallic war ಹದಿನೈದು ಭಾಗಗಳಲ್ಲಿ ಮತ್ತು Commentaries on Civil war, ಮೂರು ಭಾಗಗಳಲ್ಲಿ ರಚಿಸಿದ್ದಾನೆ. ಸೀಸರ್‌ನ ಉದ್ದೇಶ ಮುಖ್ಯವಾಗಿ ಸಾರ್ವಜನಿಕರಿಂದ ತನ್ನ ಪರವಾಗಿ ಪ್ರಚಾರ ವನ್ನು ಗಳಿಸಿಕೊಳ್ಳುವುದಾಗಿತ್ತು.

## 13.4 ಲಿವಿ (ಕ್ರಿ. ಪೂ. 59 ರಿಂದ ಕ್ರಿ.ಶ. 17)

ಲಿವಿ ಮತ್ತು ಟ್ಯಾಸಿಟಸ್ ಅವರನ್ನು ರೋಮ್ ಇತಿಹಾಸ ಲೇಖನ ಕಲೆಯ ಪ್ರಸಿದ್ಧ ಇತಿಹಾಸ ಕಾರರೆಂದು ಪರಿಗಣಿಸಲಾಗಿದೆ. ರಾಷ್ಟ್ರೀಯ ಇತಿಹಾಸಕಾರನೆಂದು ಪರಿಗಣಿಸಲ್ಪಟ್ಟಿದ್ದ ಟಿಟಸ್‌ಲಿವಿಯು ಅಗಸ್ಟಸ್ ಸೀಸರ್‌ನ ಸಮಕಾಲೀನ ನಾಗಿದ್ದನು. ಅವನು ಒಬ್ಬ ಶ್ರೀಮಂತ ನಾಗಿದ್ದುದಲ್ಲದೆ ಒಬ್ಬ ಪ್ರಸಿದ್ಧ ವಿದ್ವಾಂಸನು ಕೂಡ ಆಗಿದ್ದನು. ಅವನು ಸರ್ಕಾರದ ಯಾವುದೇ ಹುದ್ದೆಗೆ ಸೇರಲು ಪ್ರಯತ್ನಿಸಲಿಲ್ಲ. ಅವನು ಒಬ್ಬ ವಿದ್ವಾಂಸನಾಗಿ ಸಾರಸ್ವತ ಲೋಕದಲ್ಲಿ ಬೆಳೆಯಲು ತೀರ್ಮಾನಿಸಿದನು. ಅವನು ಅಗಸ್ಟಸ್ ಸೀಸರ್‌ನ ಆಪ್ತಮಿತ್ರನಾಗಿದ್ದನು. ಅವನು ಹೊರೆಸ್ ವರ್ಜಿಲ್‌ನ ಜೊತೆ ನಿಕಟ ಸಂಪರ್ಕ ಹೊಂದಿದ್ದನು. ತನ್ನ ಕೊನೆಯ ನಲವತ್ತಾರು ವರ್ಷಗಳನ್ನು ತನ್ನ ಭವ್ಯ ಇತಿಹಾಸ ರಚನೆಯಲ್ಲಿ ಸದುಪಯೋಗಪಡಿಸಿಕೊಂಡನು. The History of Rome ಗ್ರಂಥವನ್ನು ಬಹಳ ಅದ್ದೂರಿಯಾಗಿ ಬರೆದನು. ಆದರೆ 142(Books) ಪ್ರಧಾನಭಾಗಗಳಲ್ಲಿ ನಮಗೆ ದೊರೆತಿರುವುದು 35 ಮಾತ್ರ. ಲಿವಿಯ ರೊಮನ್ ಇತಿಹಾಸಧ ಮೊದಲನೆ ಭಾಗ ಕ್ರಿ.ಪೂ. 29ರಲ್ಲಿ ಕಾಣಿಸಿಕೊಂಡಿತು. ತನ್ನ ಗ್ರಂಥದ ಪೀಠಿಕೆಯಲ್ಲಿ ರೋಮನ್ ಇತಿಹಾಸವನ್ನು ಎರಡು ಪ್ರಮುಖ ಕಾಲಗಳನ್ನಾಗಿ ವಿಂಗಡಿಸಿರುವನು- ಪ್ರಾಚೀನ ಮತ್ತು ಮಧ್ಯಕಾಲೀನ. ಯೂರೋಪಿನ ಇನ್ನಿತರ ರಾಜ್ಯಗಳೊಡನೆ ರೋಮ್ ಪೈಪೋಟಿ ನಡೆಸಿ ತನ್ನ ವೈಭವವನ್ನು ಸ್ಥಾಪಿಸಿದುದು ಲಿವಿಯ ಮೇಲೆ ಹೆಚ್ಚು ಪ್ರಭಾವ ಬೀರಿತು. ರೋಮ್‌ನಗರವು ಸತತವಾದ ಬದಲಾವಣೆಗಳನ್ನು ಕಂಡಿತು. ಗಣರಾಜ್ಯ ಪತನವಾಗಿ ರೋಮ್ ಸಾಮ್ರಾಜ್ಯ ಸ್ಥಾಪಿತವಾಯಿತು. ರೋಮನ್ ತನ್ನ ಪ್ರತಿಸ್ಪರ್ಧಿಗಳನ್ನೆಲ್ಲ ಶರವೇಗದಲ್ಲಿ ಸದೆಬಡಿದು ತನ್ನ ಪರಮಾಧಿಕಾರವನ್ನು ಸ್ಥಾಪಿಸಿತು. ಲಿವಿಯು ಮುಂದಿನ ಜನಾಂಗಕ್ಕೆ ರೋಮನ್ ಭವ್ಯತೆಯ ಬಗ್ಗೆ ಬರೆದಿಡುವ ಮಹಾದಾಸೆ ಹೊಂದಿದ್ದನು. ಇದರ ಪ್ರಕಾರ ಪುಸ್ತಕದ ಪ್ರಸ್ತಾವನೆಯಲ್ಲಿ " ನಾನು ರೋಮ್ ಜನರ ಇತಿಹಾಸವನ್ನು ನಗರ ಸ್ಥಾಪನೆಯಾದ ದಿನದಿಂದ ಪ್ರಾರಂಭಿಸಿ ನನ್ನ ದಿನಗಳವರೆಗೆ" ಬರೆಯುವ ದೃಷ್ಟಿಯಿಂದ ರೋಮನ್ ಇತಿಹಾಸದ ಕೃತಿಗೆ From Foundation of the city" ಎಂಬ ಶೀರ್ಷಿಕೆಯನ್ನು ನೀಡಿದುದಾಗಿ ತಿಳಿಸಿರುವನು. ರೋಮನ್ ಇತಿಹಾಸ ಅವನ ಜೀವಿತ ಅವದಿಯ ಸಾಧನೆಯಾಗಿತ್ತು. ರೋಮನ್ನರ ಇತಿಹಾಸವನ್ನು ರೋಮನ್ ಸ್ಥಾಪನೆಯಾದ ದಿನದಿಂದ ಬರೆಯುವ ಉದ್ದೇಶದಿಂದ ಬಹಳ ತಾಳ್ಮೆಯಿಂದ ಬೇಕಾದ ಸಾಂಪ್ರದಾಯಿಕ ದಾಖಲೆಗಳನ್ನು ಕಲೆಹಾಕಿ ಅದನ್ನು ವಿಶ್ಲೇಷಿಸಿದನು.

ಲಿವಿಯ ಇತಿಹಾಸ ಮಾನವತೆಗೆ ಸಂಬಂಧಿಸಿದ್ದು, ಅದರ ಉದ್ದೇಶ ಮಾನವನ ಸಾಧನೆಗಳನ್ನು ಚಿತ್ರಿಸುವುದಾಗಿದೆ. ಒಬ್ಬ ದಾರ್ಶನಿಕ ಇತಿಹಾಸ ಕಾರನಾಗಿದ್ದ ಲಿವಿಯು ಇತಿಹಾಸವು ಬೋಧಪ್ರದವಾಗಿದೆ. ಅದು ಮುಖ್ಯವಾಗಿ ಸದ್ಗುಣ ಹಾಗೂ ನೈತಿಕತೆಯನ್ನು ಭೋದಿಸಬೇಕೆಂದು ತಿಳಿಸಿರುವನು ಅದು ದೇಶಭಕ್ತಿಯನ್ನು ಹೆಚ್ಚಿಸಬೇಕು. ಶಿಸ್ತನ್ನು ಮೂಡಿಸಬೇಕು. ಮತ್ತು ಮನುಷ್ಯರನ್ನು ಪರಯುಕ್ತ ನಾಗರೀಕರನ್ನಾಗಿ ಮಾಡಬೇಕು ಎಂಬುದಾಗಿ ವಿವರಿಸಿದನು. ಅವನು ತನ್ನ ಸಮಕಾಲೀನ ರೋಮನ್ ಜನತೆಯ ಗಮನಕ್ಕೆ ತಂದದ್ದುದ್ದೇನೆಂದರೆ ಪ್ರಾಚೀನ ಕಾಲದಲ್ಲಿ ರೋಮನ್ನರು ಸರಳ ಜೀವನ ನಡೆಸಿದರು ಹಾಗೂಅವರು ಲಂಚಕೋರರಾಗಿರಲಿಲ್ಲ ಎಂದು ಕಿವಿಮಾತು ಹೇಳಿದನು. ಗ್ರೀಸ್ ಇತಿಹಾಸಕಾರ ಹೆರೋಡೋಟಸ್‌ನ ರೀತಿಯೇ ಇತಿಹಾಸದ ವಿವರಣೆಯನ್ನು ಬಹಳ ಆಕರ್ಷಣೀಯವಾಗಿ ವಿವರಿಸಿದ್ದಾನೆ. ರೋಮನ್ ಇತಿಹಾಸ ರಾಷ್ಟ್ರಾಭಿಮಾನಕ್ಕೆ ಒತ್ತುಕೊಟ್ಟ ಇತಿಹಾಸವಾಗಿತ್ತು. ಆದ್ದರಿಂದ ಈ ಅಭಿಮಾನ ಬೆಳೆಯುವುದಕ್ಕೆ ಇತಿಹಾಸವನ್ನು ಒಂದು ಅಸ್ತ್ರವನ್ನಾಗಿ ಬಳಸಿಕೊಳ್ಳಲಾಯಿತು. ರೋಮನ್ನರಿಗೆ ಇತಿಹಾಸ ಒಂದು ಕಲೆಯಾಗಿತ್ತು. ಅದು ಒಂದು ವಿಮರ್ಶಾತ್ಮಕ ವಿಜ್ಞಾನವಾಗಿರಲಿಲ್ಲ. ಆದರೆ ಗ್ರೀಕರಿಗೆ ಇತಿಹಾಸ ಒಂದು ಕಲೆಯೂ ಹಾಗೂ ಒಂದು ವಿಮರ್ಶಾತ್ಮಕ ವಿಜ್ಞಾನವೂ ಆಗಿತ್ತು. ಲಿವಿಯು ಒಬ್ಬ ಪ್ರಾಮಾಣಿಕ ವಿದ್ವಾಂಸನೆಂದು ಖ್ಯಾತಿಗಳಿಸಿದ್ದನು. ಆಕರಗಳ ಬಳಕೆಯ ನ್ಯೂನತೆಗಳು ಕಂಡು ಬರುತ್ತವೆ. ಅವನ ಬರವಣಿಗೆಗಳನ್ನು ಬಳಸಿಕೊಂಡಿದುದರ ಬಗ್ಗೆ ಮಾಹಿತಿಇಲ್ಲ. ಆಕರಗಳ ವಿಮರ್ಶಾತ್ಮಕ ಅಧ್ಯಯನ ನಡೆಸಲಿಲ್ಲ. ಪ್ರಮುಖವಾಗಿ ಭೌಗೋಳಿಕ ಅಂಶಗಳು ಮತ್ತು ಸಾಹಿತ್ಯದ ಆಕರಗಳ ಬಗ್ಗೆ ಮತ್ತೊಮ್ಮೆ ಪರಾಮರ್ಶಿಸಿ ವಿವರಿಸುವುದರ ಕಡೆ ಗಮನ ಹರಿಸಲಿಲ್ಲ. ಲಿವಿಯು ವಿಮರ್ಶಾತ್ಮಕವಾಗಿ ಬರೆಯಲು ಪ್ರಯತ್ನಿಸಿದರೂ ಕ್ರಮಬದ್ಧ ವಿಮರ್ಶಾತ್ಮಕ ವಿವರಣೆ ನೀಡುವ ಮಾರ್ಗವನ್ನು ಅನುಸರಿಸುವ ಪದ್ಧತಿ ತಿಳಿಯಲಿಲ್ಲ. ಕಥೆಗಳನ್ನು ಬಹಳ ಎಚ್ಚರಿಕೆಯಿಂದ ಉಪಯೋಗಿಸಿಕೊಂಡನು. ಆದರೆ ರೋಮನ್ ಅಸ್ತಿತ್ವಕ್ಕೆ ಸಂಬಂದಿಸಿದಂತೆ ಇದ್ದ ಎಲ್ಲಾ ಸಂಪ್ರದಾಯಗಳನ್ನು ತನಗೆ ಗೊತ್ತಿದ್ದಂತೆ ಯಥಾವತ್ತಾಗಿ ಬರೆದಿರುವನು.

ಹಾಗೂ ಕಾಲಗಣನೆಗೆ ಸಂಬಂಧಿಸಿದಂತೆ ಅನೇಕ ತಪ್ಪುಗಳಿರುವುದನ್ನು ನಾವು ಕಾಣಬಹುದು. ಆದರೆ ಅವನ ಬರವಣಿಗೆಯ ಶೈಲಿ ಹಾಗೂ ಗುಣಮಟ್ಟವನ್ನು ಕುರಿತು ಅವನು ಗ್ರಂಥ ಬರೆದು 1900 ವರ್ಷಗಳಾದರೂ ಯಾರೂ ಕೂಡ ಅಲ್ಲಗಳೆದಿಲ್ಲ.

ವಿವರಣಾತ್ಮಕ ಶಕ್ತಿ ಹಾಗೂ ಅವನ ಸಾಹಿತ್ಯಾತ್ಮಕ ಲಕ್ಷಣ ಅವನ ಇತಿಹಾಸ ರಚನೆಯಲ್ಲಿ ಕಂಡು ಬರುವ ಅಮೋಘ ಲಕ್ಷಣಗಳು. H.E. ಬರ್‌ನೆಸ್ ಅವರು ಲಿವಿಯು ರೋಮನ್‌ಸಾಧನೆಯನ್ನು ವೈಭವೀಕರಣ ಗೊಳಿಸಿ ರೋಮನ್ನರನ್ನು ರಾಷ್ಟ್ರೀಯತೆಯ ಬಗ್ಗೆ ಹುರುದುಂಬಿಸಿದನು ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ.

## 13.5 ಕಾರ್ನಿಲೀಯಸ್ ಟ್ಯಾಸಿಟಸ್ (ಕ್ರಿ.ಶ. 55-120)

ರೋಮನ್ ಇತಿಹಾಸ ಲೇಖನ ಕಲೆಯಲ್ಲಿ ಅತ್ಯಂತ ಶ್ರೇಷ್ಠ ವ್ಯಕ್ತಿ ಎಂದರೆ ಕಾರ್ನಿಲೀಯಸ್‌ಟ್ಯಾಸಿಟಸ್. ಕ್ರಿ. ಶ. 55ರಲ್ಲಿ ಜನಿಸಿ ಕ್ರಿ.ಶ. 120 ರಲ್ಲಿ ಮರಣ ಹೊಂದಿದನು. ಅವನು ಶ್ರೀಮಂತ ಕುಟುಂಬಕ್ಕೆ ಸೇರಿದ್ದವನು. ಅವನು ಒಳ್ಳೆಯ ವಿದ್ಯಾಭ್ಯಾಸ ಪಡೆದನು. ಅವನಿಗೆ ಭಾಷಣ ಕಲೆಯಲ್ಲಿ ತರಬೇತಿ ನೀಡಲಾಯಿತು. ನ್ಯಾಯವಾದಿಯಾಗಿ ಸೇವೆ ಸಲ್ಲಿಸಿದನು. ಸರ್ಕಾರದಲ್ಲಿ ಉನ್ನತ ಹುದ್ದೆಯನ್ನು ಅಲಂಕರಿಸಿದನು. ಅವನು ಕಿರಿಯ ಪ್ಲಿನಿಯ ಜೊತೆ ನಿಕಟ ಸಂಪರ್ಕ ಹೊಂದಿದ್ದನು. ಟ್ಯಾಸಿಟಸ್‌ನು ಜೂಲಿಯಸ್ ಅಗ್ರಿಕೋಲನ ಮಗಳನ್ನು ವಿವಾಹವಾದನು. ಅಗ್ರಿಕೋಲನು ರೋಮನ್ ಗವರ್ನರ್ ಆಗಿ ಬ್ರಿಟನ್ನಿನಲ್ಲಿ ಸೇವೆ ಸಲ್ಲಿಸುತ್ತಿದ್ದನು. ಟ್ಯಾಸಿಟಸ್ ಅತ್ಯುತ್ತಮ ಐತಿಹಾಸಿಕ ಗ್ರಂಥಗಳ ರಚನೆಯಿಂದಾಗಿ ರೋಮನ್ ಸಾಮ್ರಾಜ್ಯದಲ್ಲಿ ಅತ್ಯಂತ ಪ್ರಸಿದ್ಧ ವಿದ್ವಾಂಸನೆಂಬ ಖ್ಯಾತಿಗೆ ಪಾತ್ರನಾಗಿದ್ದನು.

ಟ್ಯಾಸಿಟಿಸ್‌ತನ್ನ ಬರವಣಿಗೆಯ ಕೆಲಸವನ್ನು Life of Agricola ಎಂಬ ಗ್ರಂಥವನ್ನು ರಚಿಸುವುದರ ಮೂಲಕ ಪ್ರಾರಂಭಿಸಿದನು.ಅವನ ಮಾವ ಕ್ರಿ.ಶ. 93ರಲ್ಲಿ ಮರಣ ಹೊಂದಿದನು. The Life of Agricola, ಒಂದು ಐತಿಹಾಸಿಕ ಜೀವನ ಚರಿತ್ರೆಯಾಗಿದ್ದು, ಅದು ಬ್ರಿಟನ್ನಿನಲ್ಲಿ ರೋಮನ್ನರ ಯುದ್ಧಗಳ ಬಗ್ಗೆ , ರೋಮನ್ನರ ಆಳ್ವಿಕೆಯ ಕಾಲದಲ್ಲಿ , ಅಲ್ಲಿಯ ಜನಜೀವನ ಅಗ್ರಿಕೊಲನ ಆಡಳಿತ ಮೊದಲಾದ ವಿಷಯಗಳ ಬಗ್ಗೆ ಈ ಗ್ರಂಥದಲ್ಲಿ ವಿವರಿಸಿರುವನು. ಇನ್ನಿತರ ಅವನ ಗ್ರಂಥಗಳೆಂದರೆ Dialogue on orators, Germania, Annals, Historiae. ಶೀರ್ಷಿಕೆಯೇ ಸೂಚಿಸುವಂತೆ Dialogue on orators ಆ ಕಾಲದಲ್ಲಿ ಭಾಷಣಗಳಿಗೆ ನೀಡಿದ್ದ ಮಹತ್ವವನ್ನು ಕುರಿತು ವಿವರಿಸಿತ್ತದೆ. Germania ಪ್ರಾಚೀನ ಜರ್ಮನರ ಸಂಪ್ರದಾಯ , ನಂಬಿಕೆ ಮತ್ತು ಅಭಿರುಚಿಗಳ ಬಗ್ಗೆ ವಿವರಣೆ ನೀಡಿರುವನು. ಮೊದಲನೆಯ ಭಾಗದಲ್ಲಿ ಜರ್ಮನಿಯ ವಿವರಣೆ ಸಂಸ್ಥೆಗಳು ಮತ್ತು ಪದ್ಧತಿಗಳ ಬಗ್ಗೆ ಮಾಹಿತಿ ದೊರಕುತ್ತದೆ. ಎರಡನೆಯ ಭಾಗದಲ್ಲಿ ವಿವಿಧ ಜರ್ಮನ್ ಬುಡಕಟ್ಟುಗಳ ಬಗ್ಗೆ ವಿವರಿಸಲಾಗಿದೆ ಅನಾಲ್ಸ್‌ನಲ್ಲಿ ಜೂಲಿಯನ್ ಸಂತತಿಯ ಬಗ್ಗೆ ಟೈಬೀರಸ್‌ನಿಂದ ನಿರೊವರೆಗೆ ಒಂದು ಚಿತ್ರದೊರಕುತ್ತದೆ. ( ಕ್ರಿ. ಶ. 14ರಿಂದ 68ರ ವರೆಗೆ ) Historiae ಈ ಸಂತತಿಯ ವಿವರಣೆಯನ್ನು ನಿರೊನಿಂದ ಹಿಡಿದು ಡೊಮಿಟಿಯನ್ (ಕ್ರಿ. ಶ. 96) ಆಳ್ವಿಕೆಯವರೆಗೆ ತಿಳಿಸುತ್ತದೆ.

ಟ್ಯಾಸಿಟಸ್‌ನು ತನ್ನ ಗ್ರಂಥಗಳ ಬರವಣಿಗೆಯಲ್ಲಿ ಆಕರಗಳನ್ನಾಗಿ ಇನ್ನಿತರ ಇತಿಹಾಸ ಗ್ರಂಥಗಳು, ಭಾಷಣಗಳು, ಕಾಗದ ಪತ್ರಗಳು ಮತ್ತು ಹಳೆಯ ಕುಟುಂಬಗಳು ಸಂಪ್ರದಾಯಗಳ್ಳನು ಬಳಸಿ ಕೊಂಡಿದ್ದಾನೆ. ಟ್ಯಾಸಿಟಸ್‌ನು ಅನೇಕ ಉನ್ನತ ಹುದ್ದೆಗಳನ್ನ ಅಲಂಕರಿಸಿದ್ದುದರಿಂದ ಸಾಮ್ರಾಜ್ಯದ ಅನೇಕ ಪ್ರಮುಖ ವ್ಯಕ್ತಿಗಳನ್ನು ಭೇಟಿ ಮಾಡಿ ತನ್ನ ಗ್ರಂಥಗಳಿಗೆ ಬೇಕಾದ ಮಾಹಿತಿಯನ್ನು ಪಡೆಯುವುದರಲ್ಲಿ ಯಶಸ್ವಿಯಾದನು. ಅವನು ಸಮಕಾಲೀನ ಘಟನಾವಳಿಗಳ ಮಾಹಿತಿ ಪಡೆದುಕೊಳ್ಳುವುದರಲ್ಲಿ ಯಶಸ್ವಿಯಾದನು. ಅನೇಕ ಪತ್ರಗಾರಗಳಿಂದ ಹಾಗೂ ಸಮಕಾಲೀನ ಐತಿಹಾಸಿಕ ಗ್ರಂಥ ಗಳಿಂದಲೂ ಮಾಹಿತಿಯನ್ನು ಕಲೆಹಾಕಿದನು. ಗ್ರೀಕ್ ಇತಿಹಾಸಕಾರರ ಪೈಕಿ ಪ್ಲೂಟಾರ್ಕ್‌ನ ಗ್ರಂಥಗಳಿಂದ ಹೆಚ್ಚು ಮಾಹಿತಿಯನ್ನು ಸಂಗ್ರಹಿಸಿದನು. ಜರ್ಮನಿಯ ಗ್ರಂಥವನ್ನು ರಚಿಸುವುದಕ್ಕೋಸ್ಕರ ಅವನು ರೋಮನ್ ಸಾಮ್ರಾಜ್ಯದ ಉತ್ತರದ ಗಡಿಗಳಲ್ಲಿ ಸೇವೆ ಸಲ್ಲಿಸುತ್ತಿದ್ದ ಅಧಿಕಾರಿಗಳಿಂದ ಜರ್ಮನರ ಬಗ್ಗೆ ಮಾಹಿತಿಯನ್ನು ಗಳಿಸಿಕೊಂಡನು. ಅದೇ ರೀತಿ ಪ್ಲಿನಿಯು ರಚಿಸಿದ್ದ History of German wars ಗಳಿಂದಲೂ ಜರ್ಮನಿಯ ಗ್ರಂಥವನ್ನು ಬರೆಯಲು

ಮಾಹಿತಿ ಸಂಗ್ರಹಿಸಿದನು ಈ ರೀತಿಯಾಗಿ ತನ್ನ ಐತಿಹಾಸಿಕ ಗ್ರಂಥವನ್ನು ರಚಿಸುವ ಉದ್ದೇಶದಿಂದ ದೊರಕತಕ್ಕ ಎಲ್ಲಾ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿದನು. ಈ ಆಕರವನ್ನು ತನ್ನದೇ ಆದ ರೀತಿಯಲ್ಲಿ ವಿವರಣೆ ನೀಡಿ ಹಾಗೂ ತನ್ನದೇ ಆದ ಶೈಲಿಯಲ್ಲಿ ಬರೆದನು. ಗ್ರೀಕ್ ಇತಿಹಾಸ ಕಾರರಂತೆಯೇ ಟ್ಯಾಸಿಟಸ್‌ನನ್ನು ಕೂಡ ಒಬ್ಬ ವಿಮರ್ಶಾತ್ಮಕ ವಿದ್ವಾಂಸನೆಂದು ಕರೆಸಿಕೊಳ್ಳುವ ಅರ್ಹತೆಯನ್ನು ಹೊಂದಿದ್ದಾನೆ. ಅವನು ಘಟನಾವಳಿಗಳನ್ನು ಸಮರ್ಪಕವಾಗಿ ವಿಶ್ಲೇಷಣೆ ಮಾಡುವ ಸಾಮರ್ಥ್ಯ ಹೊಂದಿದ್ದನು ಹಾಗೂ ಒಬ್ಬ ವ್ಯಕ್ತಿಯ ಮನಸ್ಸನ್ನು ಹಾಗೂ ಅವನ ಗುಣವನ್ನು ಅಳೆಯುವ ಸಾಮರ್ಥ್ಯ ಪಡೆದಿದ್ದನು. ಅವನು ಸಮಾಜದಲ್ಲಿ ಎಂತಹ ಪ್ರಭಾವ ವ್ಯಕ್ತಿಯಾದರೂ ಟೀಕೆಮಾಡಲು ಹಿಂಜರಿಯಲಿಲ್ಲ. ಅವನು ಎಷ್ಟೊಂದು ನಿರ್ಭೀತಿಯಿಂದ ಬರೆಯುತ್ತಿದ್ದನೆಂದರೆ ಚಕ್ರವರ್ತಿಯೂ ಕೂಡ ಅವನ ವಿಮರ್ಶಾತ್ಮಕ ಟಿಪ್ಪಣಿಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿರಲಿಲ್ಲ. ಅವನು ತನ್ನ ಗ್ರಂಥದಲ್ಲಿ ಚಿತ್ರಿಸಿರುವ ಪ್ರಮುಖ ವ್ಯಕ್ತಿಗಳ ಕಲ್ಪನೆಗಳ, ಉದ್ದೇಶಗಳ ಹಾಗೂ ಬುದ್ದಿ ಚಾತುರ್ಯತೆಯನ್ನು ಅಳೆಯುವುದರಲ್ಲಿ ನಿಪುಣನೆನಿಸಿಕೊಂಡಿದ್ದನು.

ಟ್ಯಾಸಿಟಸ್‌ನ ಪ್ರಕಾರ ಇತಿಹಾಸಕಾರನ ಮುಖ್ಯ ಕರ್ತವ್ಯ ಮನುಷ್ಯರ ಕಾರ್ಯ ಚಟುವಟಿಕೆಗಳನ್ನು ತಿಳಿದುಕೊಳ್ಳುವುದು (ಅಳೆಯುವುದು) ಒಳ್ಳೆಯ ವ್ಯಕ್ತಿಗಳ ಒಳ್ಳೆಯ ಸಾಧನೆಗಳನ್ನು ಮುಂದಿನ ಪೀಳಿಗೆಗೆ ಸಂರಕ್ಷಿಸಿಡುವುದು. ಅದೇ ರೀತಿ ದುಷ್ಟರ ನಡವಳಿಕೆಗಳ ಬಗ್ಗೆ ಖಂಡಿಸುವುದರ ಮೂಲಕ ಮುಂದಿನ ಪೀಳಿಗೆಗೆ ಬರೆದಿಡುವುದು. ಇವು ಇತಿಹಾಸ ಕಾರನ ಮುಖ್ಯ ಕೆಲಸಗಳು. ಯಾವ್ಯಾವ ರೋಮನ್ ಚಕ್ರವರ್ತಿಗಳ ಬಗ್ಗೆ ತನ್ನ ಗ್ರಂಥಗಳಲ್ಲಿ ನಿಂದಿಸಿರುವನೊ ಅವರೆಲ್ಲರು ಟ್ಯಾಸಿಟಸ್‌ಗೆ ದುಷ್ಟರು.

ಅನೇಕ ರೀತಿಯಲ್ಲಿ ಟ್ಯಾಸಿಟಸ್‌ನ ಶೈಲಿ ವಿಶೇಷತೆಯಿಂದ ಕೂಡಿದೆ. ಕೇವಲ ಕೆಲವರು ಮಾತ್ರ ಅವನ ಶೈಲಿಗೆ ಸರಿಸಾಟಿಯಾಗಿ ನಿಲ್ಲಬಲ್ಲರು. ಈ ಸುಂದರ ಶೈಲಿಯು ನೇಕ ಭಾವನೆಗಳಿಂದ ಕೂಡಿ ತುಂಬ ಅರ್ಥ ಗರ್ಬಿತವಾಗಿದೆ. ವಿದ್ವಾಂಸರುಗಳು ಹೊರೇಸನ್ನು ಹೊರತುಪಡಿಸಿ ಟ್ಯಾಸಿಟಸ್‌ನನ್ನು ಉಲ್ಲೇಖಿಸುವಷ್ಟು ಇನ್ನಾವ ರೋಮನ್ ವಿದ್ವಾಂಸನ ಅಭಿಪ್ರಾಯಗಳ ಬಗ್ಗೆ ಉಲ್ಲೇಖಿಸುವುದಿಲ್ಲ. ಅವನು ಮಾನವನ ಸ್ವಭಾವವನ್ನು ಚನ್ನಾಗಿ ಅಧ್ಯಯನ ಮಾಡಿ ಅವನ ಸಾರ್ವತ್ರಿಕ ಗುಣಗಳ ಬಗ್ಗೆ ಹಲವು ಹೇಳಿಕೆಗಳನ್ನು ಸದಾ ಜ್ಞಾಪಕದಲ್ಲಿಟ್ಟುಕೊಳ್ಳುವುದು ಸೂಕ್ತ.

ಯುದ್ದದಲ್ಲಿ ಸಾಮಾನ್ಯವಾಗಿ ಪ್ರತಿಯೊಬ್ಬ ದಂಡನಾಯಕನು ಗೆಲುವಿಗೆ ತಾನೇ ಕಾರಣನೆಂದು ಹೇಳಿಕೊಳ್ಳುತ್ತಾನೆ. ಆದರೆ ಸೋತಾಗ ಅವರಾರು ಸೋಲಿಗೆ ಕಾರಣ ತಾವು ಎಂದು ಹೇಳಿಕೊಳ್ಳುವುದಿಲ್ಲ.

ಹತ್ತಿರದ ಸಂಬಂಧಿಗಳ ದ್ವೇಷ ತೀಕ್ಷ್ಣವಾಗಿರುವಷ್ಟು ಇನ್ನಾರದು ಆಗಿರುವುದಿಲ್ಲ.

ರಾಜ್ಯದಲ್ಲಿ ಲಂಚಗುಳಿತನ ಹೆಚ್ಚಿದಂತೆಲ್ಲ ಕಾನೂನುಗಳು ಜಾಸ್ತಿಯಾಗುತ್ತವೆ.

ಕ್ರೂರ ರಾಜರುಗಳು ತಮ್ಮ ದಬ್ಬಾಳಿಕೆಯ ಆಳ್ವಿಕೆಯಿಂದಾಗಿ ಅಪ್ರಸಿದ್ದರಾದರೆ ಅಂತಹವರಿಂದ ತೊಂದರೆಗೊಳಗಾದವರು ಪ್ರಸಿದ್ದರಾಗುತ್ತಾರೆ.

ಮೇಲೆ ತಿಳಿಸಿರುವಂತೆ ಅವನ ಭಾಷೆ ಅನೇಕ ಭಾವನೆಗಳಿಂದ ತುಂಬಿದೆ. ಆದ್ದರಿಂದ ಅವನ ಗ್ರಂಥದ ಅಧ್ಯಯನ ಉಪಯುಕ್ತ. ಅವನ ಭಾಷೆಯ ಪ್ರೌಢಿಮೆ, ಅಪಾರ ವಿವರಣೆ ಮತ್ತು ಮಾಹಿತಿಗಳ ಸಂಪತ್ತು ಅವನ ಬರವಣಿಗೆಯ ಶ್ರೇಷ್ಟಲಕ್ಷಣಗಳಾಗಿವೆ. ರೋಮನ್ನರು ಅಧಿಕಾರದಲ್ಲಿದ್ದಾಗ ಪಾಶ್ಚಿಮಾತ್ಯ ಯೂರೋಪಿನ ಪರಿಸ್ಥಿತಿಗಳನ್ನು ಅರ್ಥಮಾಡಿಕೊಳ್ಳಲು ಅನುಕೂಲವಾಗುತ್ತದೆ. ಅದರಲ್ಲೂ ವಿಶೇಷವಾಗಿ ಜರ್ಮನಿಯ ಪ್ರಮುಖವಾಗಿ ಜರ್ಮನಿಕ್ ಬುಡಕಟ್ಟು ಕುಟುಂಬಗಳ ಸಂಪ್ರದಾಯ ಹಾಗೂ ಇನ್ನಿತರ ಸಾಮಾಜಿಕ ವ್ಯವಸ್ಥೆಯನ್ನು ಅರಿತುಕೊಳ್ಳಲು ಅನುಕೂಲವಾಗುತ್ತದೆ. ಜರ್ಮನಿಕ್ ಬುಡಕಟ್ಟು ಜನಾಂಗಗಳು ಎಷ್ಟರ ಮಟ್ಟಿಗೆ ರೋಮನ್ ಸಾಮ್ರಾಜ್ಯಗಳ ಸವಾಲನ್ನೊಡ್ಡುತ್ತಿದ್ದವು ಎಂಬುದನ್ನು ಅವನು ವಿವರಿಸಿರುವನು Annals ಮತ್ತು Historiae ರೋಮನ್ ಸಾಮ್ರಾಜ್ಯದ ಆಡಳಿತಕ್ಕೆ ಸಂಬಂಧಿಸಿದಂತೆ ಸಾಕಷ್ಟು ಮಾಹಿತಿಯನ್ನು ಒದಗಿಸುತ್ತವೆ. ಮುಂದಿನ ಪೀಳಿಗೆಗೆ ಅನುಕೂಲವಾಗುವಂತೆ

ರಾಜಕೀಯದಲ್ಲಿ ಬರತಕ್ಕ ಬೇಕಾದಷ್ಟು ಸದ್ಗುಣಗಳು ಮತ್ತು ದುರ್ಗುಣಗಳ ಬಗ್ಗೆ ವಿವರಿಸಿದ್ದಾನೆ. ಒಳ್ಳೆಯ ಜನರು ಕೆಲವು ಸಮಯ ದುಷ್ಟ ರಾಜರುಗಳ ತುಳಿತಕ್ಕೆ ಕಾರಣರಾಗುತ್ತಾರೆ ಎಂದು ಎಚ್ಚರಿಕೆ ನೀಡಿದನು.

ಐತಿಹಾಸಿಕ ಬರವಣಿಗೆಗೆ ಟ್ಯಾಸಿಟಸ್ ಅಮೋಘವಾದ ಕೊಡುಗೆಯನ್ನು ನೀಡಿದ್ದಾನೆ. ಆದರೆ ಅವನ ಬರವಣಿಗೆಯಲ್ಲಿ ಕೆಲವು ನ್ಯೂನತೆಗಳು ಕಂಡು ಬರುತ್ತವೆ. ವಸ್ತುವಿಷಯಕ್ಕೆ ಸಂಬಂಧಿಸಿದಂತೆ ಅವನ ವ್ಯಾಪ್ತಿ ಸಂಕುಚಿತ ಮತ್ತು ಪಕ್ಷಪಾತ ಎಂಬ ಎರಡು ದೋಷಗಳು ಎದ್ದು ಕಾಣುತ್ತವೆ. ನಮಗೆ ದೊರಕಿರುವ ಅವನ ಗ್ರಂಥಗಳಿಂದ ತಿಳಿದುಬರುವುದೇನೆಂದರೆ ಓದುಗನಿಗೆ ಟ್ಯಾಸಿಟಸ್‌ನು ರೋಮ್ ಸಾಮ್ರಾಜ್ಯದ ಇತಿಹಾಸ ಬರೆದನೊ ಅಥವಾ ರೋಮ್ ನಗರದ ಇತಿಹಾಸವೂ ಎಂಬ ಗೊಂದಲ ಬರುತ್ತದೆ. ವ್ಯಾಪ್ತಿಯ ಮೇಲೆ ಸಂಕುಚಿತ ರೋಮ್ ಸಾಮ್ರಾಜ್ಯದ ಬಗ್ಗೆ ದೀರ್ಘ ವಿವರಣೆ ನೀಡುವುದರಲ್ಲಿ ಅವನ ಕೃತಿ ವಿಫಲವಾಗುತ್ತದೆ. ರೋಮನ್ ಚಕ್ರವರ್ತಿಗಳ ಸಾಮ್ರಾಜ್ಯಶಾಹಿಯ ನೀತಿಯ ಬಗ್ಗೆ ವಿವರಣೆ ನೀಡುವುದಿಲ್ಲ ಪ್ರಾಂತ್ಯಗಳಲ್ಲಿ ಉತ್ತಮ ಆಡಳಿತದ ಬಗ್ಗೆ ಹಾಗೂ ಅವುಗಳ ಸಂಪದ್ಭರಿತೆಯ ಬಗ್ಗೆ ಟ್ಯಾಸಿಟಸ್ ಮಾಹಿತಿಯನ್ನು ನೀಡುವುದರಲ್ಲಿ ಅಸಮರ್ಥನಾಗಿದ್ದಾನೆ. ಅವನು ರಾಜಕೀಯ ವ್ಯವಸ್ಥೆಯ ಮೇಲೆ ಆರ್ಥಿಕ ಅಂಶಗಳು ಬೀರತಕ್ಕ ಪ್ರಭಾವಗಳ ಬಗ್ಗೆ ಹೆಚ್ಚುಜ್ಞಾನ ಹೊಂದಿರಲಿಲ್ಲವೆಂಬುದು ಅರ್ಥವಾಗುತ್ತದೆ. ಜನಜೀವನದ ಸ್ಥಿತಿಗಳ ಬಗ್ಗೆ ಕೈಗಾರಿಕೆ, ವ್ಯಾಪಾರ, ವೈಜ್ಞಾನಿಕ ಬೆಳವಣಿಗೆ ಸ್ತ್ರೀಯರ ಸ್ಥಾನ, ಕಾವ್ಯದ ಬೆಳವಣಿಗೆ, ತತ್ವಶಾಸ್ತ್ರ, ಮತ್ತು ಕಲೆ ಮೊದಲಾದ ಅಂಶಗಳ ಬಗ್ಗೆ ಹೆಚ್ಚು ಮಾಹಿತಿ ನೀಡಿಲ್ಲ. ಈ ರೀತಿಯಲ್ಲಿ ಅವನು ಪ್ರಮುಖ ವ್ಯಕ್ತಿಗಳ ಬಗ್ಗೆ ಹಾಗೂ ಪ್ರಮುಖ ಘಟನಾವಳಿಗಳನ್ನು ವಿವರಿಸುವುದನ್ನು ಬಿಟ್ಟರೆ ಉಳಿದ ಅಂಶಗಳು ಅವನು ರಚಿಸಿರತಕ್ಕ ಗ್ರಂಥಗಳಲ್ಲಿ ಸ್ಥಾನ ಪಡೆದಿಲ್ಲ. ಮತ್ತೊಂದು ಪ್ರಮುಖ ನ್ಯೂನತೆ ಎಂದರೆ ಅವನ ಪಕ್ಷಪಾತ ಅವನು ಸಾಮಾನ್ಯವಾಗಿ ಚಕ್ರವರ್ತಿಗಳನ್ನು ಮಾನವ ಪಿಶಾಚಿಗಳು ಎಂಬುದಾಗಿ ವಿವರಿಸಿದ್ದಾನೆ. ಅವನು ಸದಾ ಚಕ್ರವರ್ತಿಗಳ ವಿರೋಧಿಗಳಾಗಿದ್ದ ಸೆನೆಟರ್‌ಗಳ ಪರವಾಗಿದ್ದನು. ಅವನೇ ಗಣರಾಜ್ಯದಲ್ಲಿ ನಂಬಿಕೆ ಇಟ್ಟಿದ್ದವನು. ಆದ್ದರಿಂದ ಸಾಮ್ರಾಜ್ಯನೀತಿಯ ರೋಮನ್ ಚಕ್ರವರ್ತಿಗಳ ವಿರೋಧಿಯಾಗಿದ್ದನು. ಆದ್ದರಿಂದ ಟ್ಯಾಸಿಟಸ್‌ನ ದುರ್ಬಲತೆ ಏನೆಂದರೆ ಸತ್ಯವನ್ನು ವಂಚಿಸಿದಂತಾಯಿತು. ಟ್ಯಾಸಿಟಸ್‌ನ ಗ್ರಂಥಗಳನ್ನು ಓದಿದಾಗ ಅವನೊಬ್ಬ ಸಾಹಿತ್ಯದ ಪ್ರತಿಭಾನ್ವಿತ ಬರಹಗಾರ ಎಂದೆನಿಸುತ್ತದೆ. ಆಕಸ್ಮಿಕವಾಗಿ ಅವನು ದಾರಿ ತಪ್ಪಿ ಇತಿಹಾಸ ವಿಮರ್ಶಕನಾಗಿರಬಹುದೆಂದು ಭಾಸವಾಗುತ್ತದೆ. ಅವನ ವಿವರಣೆಗಳು ರಂಜನ ಕಾವ್ಯದಂತೆ ಕಾಣಿಸುತ್ತವೆ. ಆದರೆ ಅವುಗಳ ಸತ್ಯಾಂಶವನ್ನು ಪರೀಕ್ಷಿಸಬೇಕಾಗುತ್ತದೆ. ಮೇಲೆ ತಿಳಿಸಿದ ನ್ಯೂನತೆಗಳನ್ನು ಬಿಟ್ಟರೆ ಅವನ ಬರವಣಿಗೆಗಳಿಂದ ತಿಳಿದು ಕೊಳ್ಳುವುದೆಂದರೆ ಟ್ಯಾಸಿಟಸ್ ಒಬ್ಬ ಚಿಂತಕನೆಂದು ಕರೆಯುವುದಕ್ಕಿಂತಲೂ ಕಲೆಗಾರನೆಂದು ವರ್ಣಿಸಬಹುದು. ಘಟನೆಗಳ ವಿವರಣೆಯನ್ನು ನೀಡುವಾಗ ಕೆಲವು ಕಡೆ ಘಟನೆಗಳು ಏಕೆ ಮತ್ತು ಹೇಗೆ ನಡೆದವು ಎಂಬುದನ್ನು ಚರ್ಚಿಸಲು ಪ್ರಯತ್ನ ನಡೆಸಿರಬಹುದು ಆದರೆ ಅವನು ಘಟನಾವಳಿಗಳ ಪರಸ್ಪರ ಸಂಬಂಧವನ್ನು ಹಾಗೂ ಕಾರಣಗಳನ್ನು ವಿವರಿಸಲು ಪ್ರಯತ್ನ ನಡೆಸಿಲ್ಲ. ಮೇಲ್ನೋಟಕ್ಕೆ ಕಾಣುವಂತಹ ವಿಷಯಗಳಿಗೆ ಹೆಚ್ಚು ಮಹತ್ವ ನೀಡಿದುದರಿಂದ ಅನೇಕ ಹಲವು ಪ್ರಮುಖ ಘಟನಾವಳಿಗಳು ಗಮನಕ್ಕೆ ಬರದಂತಾದವು. ಐತಿಹಾಸಿಕ ಸಾಹಿತ್ಯಕ್ಕೆ ಟ್ಯಾಸಿಟಸ್ ನೀಡಿರುವ ಕೊಡುಗೆಯನ್ನು ಪರಿಗಣಿಸಿದರೆ ಅವನೊಬ್ಬ ದೈತ್ಯವ್ಯಕ್ತಿ ಎಂದು ಕಾಲಿಂಗ್ ವುಡ್ ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ. ಆದರೆ ಅವನೊಬ್ಬ ನಿಜವಾದ ಇತಿಹಾಸಕಾರನೆಯೆ ಎಂಬುದರ ಬಗ್ಗೆಯು ಆಶ್ಚರ್ಯ ವ್ಯಕ್ತಪಡಿಸಬೇಕಾಗುತ್ತದೆ ಎಂಬುದಾಗಿ ಅದೇ ವಿದ್ವಾಂಸರು ತಿಳಿಸಿರುವರು. ರೋಮನ್ನರ ಐತಿಹಾಸಕ ಚಿಂತನೆಯ ಬರಡು ಪ್ರದೇಶದಲ್ಲಿ ಲಿವಿ ಮತ್ತು ಟ್ಯಾಸಿಟಸ್ ಇಬ್ಬರು ಅಕ್ಕಪಕ್ಕದಲ್ಲಿ ನಿಂತಿರುವ ದೊಡ್ಡ ಸ್ಮಾರಕಗಳೆಂದು ( ಮಹಾನ್ ಇತಿಹಾಸಕಾರರು) ಕಾಲಿಂಗ್‌ವುಡ್ ಅಭಿಪ್ರಾಯ ಪಟ್ಟಿದ್ದಾರೆ.

## 13.6 ಇನ್ನಿತರ ರೋಮನ್ ಇತಿಹಾಸಕಾರರು

ಕ್ಯಾಟೊ, ಸೀಸರ್, ಲಿವಿ ಮತ್ತು ಟ್ಯಾಸಿಟಸ್ ಸುಪ್ರಸಿದ್ಧ ಇತಿಹಾಸಕಾರರ ಜೊತೆಗೆ ಇನ್ನು ಕೆಲವರು ರೊಮನ್ ಇತಿಹಾಸಕಾರರು ಇದ್ದಾರೆ. ಆದರೆ ಅವರು ಅಷ್ಟೊಂದು ಪ್ರಮುಖರೆನಿಸಿಕೊಂಡಿಲ್ಲ ಟ್ರೊಗ್ ಪಾಂಪಿಯಸ್‌ನು ಲಿವಿಯ ಸಮಕಾಲೀನನಾಗಿದ್ದನು ಅವನು Hellenistic and oriental world ಎಂಬ ಕೃತಿಯನ್ನು ರಚಿಸಿದ್ದಾನೆ. ಇದು ವಿಶ್ವದ ಇತಿಹಾಸ ರಚನೆಗೆ ಮಾಡಿದ ಮೊದಲನೆ ಪ್ರಯತ್ನ. ಆದರೆ ಈ ಕೃತಿಯು ಕಳೆದು ಹೋಗಿದೆ. ಈ ಗ್ರಂಥದ ಸಾರಾಂಶವನ್ನು ಸಿದ್ಧಪಡಿಸಿದ್ದ ಜಸ್ಟಿನ್‌ನ ಗ್ರಂಥ ದೊರಕಿದೆ.

ಸಲ್ಲುಸ್ಟನ್ ಬಗ್ಗೆಯು ಉಲ್ಲೇಖಿಸಬೇಕು. ಥೂಸಿಡೈಡ್ಸ್‌ನ ರೀತಿಯ ಇತಿಹಾಸ ಬರೆಯಲು ಅವನು ಪ್ರಯತ್ನ ಪಟ್ಟು ವಿಫಲನಾದನು. ಸ್ಯುಟೋನಿಕಸ್ ಟ್ರಾನ್‌ಖ್ವಿಲಸ್ ಒಂದು ಐತಿಹಾಸಿಕ ಶೈಲಿಯ ಮತ್ತು ವಿಷಯ ಜೋಡಣೆ ಮಾದರಿಯನ್ನು ಸಿದ್ಧಪಡಿಸಿದನು. ಈತನು The Lives of the caesars ಎಂಬ ಗ್ರಂಥವನ್ನು ಬರೆದನು. ಈ ಗ್ರಂಥದಲ್ಲಿ ರಾಜಕೀಯ ಇತಿಹಾಸವನ್ನು ವಿವರಿಸುವುದರ ಜೊತೆಗೆ ರೋಮನ್ನರ ಪ್ರಮುಖ ಸ್ಮಾರಕಗಳ ಬಗ್ಗೆ ವಿವರಿಸುವನು. ಲುಕ್ರೆಟಿಯಸ್ ಐತಿಹಾಸಿಕ ಸಂಗತಿಗಳನ್ನು ಆಧುನಿಕ ಜೈವಿಕ ಸಿದ್ಧಾಂತದ ವಿಕಾಸದ ರೀತಿಯಲ್ಲಿ ವಿವರಿಸಲು ಪ್ರಯತ್ನಿಸಿದನು. ಅವನು ರಚಿಸಿದ De Rerun Natura ಒಂದು ಅಮೂಲ್ಯ ಕೃತಿ ಎಂದು ಪರಿಗಣಿಸಬಹುದು. ಈ ಎಲ್ಲಾ ಇತಿಹಾಸಕಾರರು ಗ್ರೀಕ್ ಇತಿಹಾಸಕಾರರ ಮಾದರಿಯಲ್ಲಿಯೇ ಬರೆದರು.

## 13.7 ರೋಮನ್ ಇತಿಹಾಸಲೇಖನ ಕಲೆಯ ಲಕ್ಷಣಗಳು

ಪ್ರಾಚೀನ ರೋಮನ್ ಸುಪ್ರಸಿದ್ಧ ಇತಿಹಾಸಕಾರರಾಗಿ ಲಿವಿ ಮತ್ತು ಟ್ಯಾಸಿಟಸ್ ಅಕ್ಕಪಕ್ಕದಲ್ಲಿ ಸಮನಾಗಿ ನಿಲ್ಲುತ್ತಾರೆ. ಲಿವಿಯು ರೋಮನ್ 770 ವರ್ಷಗಳ ಕಾಲದ ಇತಿಹಾಸವನ್ನು ಬರೆದನು. ಆದರೆ ಅವನು ಸಂಪೂರ್ಣವಾಗಿ ಯಶಸ್ವಿಯಾಗಲಿಲ್ಲ ಏಕೆಂದರೆ ಅನೇಕ ಅಂಶಗಳ ಬಗ್ಗೆ ಹೆಚ್ಚಿನ ವಿವರಣೆಯನ್ನು ಕೊಡಲು ಸಾಧ್ಯವಾಗಲಿಲ್ಲ. ಟ್ಯಾಸಿಟಸ್‌ನು ಹೊಸ ವಿಷಯಗಳ ಬಗ್ಗೆ ತನ್ನದೇ ಆದ ಒಂದು ಹೊಸ ವಿಧಾನದಲ್ಲಿ ಇತಿಹಾಸ ಬರೆದನು. ಆದರೂ ಕೂಡ ವಿಶ್ಲೇಷಣ ಕಾರ್ಯದಲ್ಲಿ ವಿಫಲನಾದನು.

ಎರಡನೆ ಶತಮಾನದ ವೇಳೆಗೆ ಸಾಂಸ್ಕೃತಿಕ ಗುಣಮಟ್ಟ ಕಡಿಮೆ ಯಾದುದರಿಂದ ಐತಿಹಾಸಿಕ ಬೆಳವಣಿಗೆಯ ಮೇಲೂ ಅದು ಪ್ರಭಾವ ಬೀರಿತು. ಗ್ರಂಥಗಳೂ ಕೂಡ ಕಡಿಮೆ ಆದವು. ಬಂದ ಗ್ರಂಥಗಳ ಗುಣಮಟ್ಟವು ಕೂಡ ಕಡಿಮೆಯಾಯಿತು. ಇಂತಹ ಐತಿಹಾಸಿಕ ಬೆಳವಣಿಗೆಯು ಕುಂಟಿತಗೊಂಡಿದುದಕ್ಕೆ ಹಲವು ಕಾರಣಗಳನ್ನು ನೀಡಬಹುದು. ಒಂದು ಪ್ರಮುಖ ಕಾರಣವೆಂದರೆ ಇತಿಹಾಸಕಾರರು ಕೂಡ ರಾಜಕೀಯ ವ್ಯಕ್ತಿಗಳ ಪರವಾಗಿ ಕೆಲಸ ಮಾಡಲು ಪ್ರಾರಂಭಿಸಿದರು. ಇದರ ಪರಿಣಾಮವೆಂದರೆ ಆಳ್ವಿಕೆ ನಡೆಸುತ್ತಿದ್ದವರನ್ನು ಹೊಗಳಿ ಬರೆಯುವ ಕೆಲಸ ಪ್ರಾರಂಭವಾಯಿತು. ಎರಡನೆಯದಾಗಿ ರೋಮನ್ ಸಾಮ್ರಾಜ್ಯವಿಸ್ತಾರವಾಗಿ ಸ್ಥಾಪಿತ ಗೊಂಡು ಶಾಂತಿ ನೆಲಸಿತ್ತು. ಯಾವುದೇ ಬಹುಮುಖ್ಯ ರಾಜಕೀಯ ಘಟನೆಗಳು ಈ ಕಾಲದಲ್ಲಿ ಜರುಗಲಿಲ್ಲ. ಆದ್ದರಿಂದ ಇತಿಹಾಸಕಾರರನ್ನು ಕೆರಳಿಸುವ ಘಟನಾವಳಿಗಳು ನಡಯದೆ ಇದ್ದದ್ದು ಮತ್ತೊಂದು ಪ್ರಬಲ ಕಾರಣ

ಈಗಾಗಲೆ ಅನೇಕ ಬಾರಿ ತಮ್ಮ ಗಮನಕ್ಕೆ ತಂದಿರುವಂತೆ ರೋಮನ್ನರು ಐತಿಹಾಸಾಕ ಬರವಣಿಗೆಯನ್ನು ಗ್ರೀಕರಿಗಿಂತ ಕೀಳಮಟ್ಟದಲ್ಲಿದ್ದವರು. ಯಾವ ರೋಮನ್ ಇತಿಹಾಸಕಾರನು ಕೂಡ ಹೆರೊಡೋಟಸ್ ಅಥವಾ ಥೂಸಿಡೆಡ್ಸ್‌ನ ಮಟ್ಟಕ್ಕೆ ಏರಲಿಲ್ಲ. ರೋಮನ್‌ಗೆ ಒಂದು ಸಮೃದ್ಧ ಐತಿಹಾಸಿಕ ಹಿನ್ನಲೆ ಇದ್ದರೂ, ಅದರ ದಾಖಲಾತಿಯ ಕಡೆ ಗಮನ ಹರಿಸಲಿಲ್ಲ. ಅವರು ಇತಿಹಾಸವನ್ನು ರಚಿಸುವುದಕ್ಕಿಂತ ಇತಿಹಾಸವನ್ನು ಸೃಷ್ಟಿಸುವುದರಲ್ಲಿ ಮಗ್ನರಾಗಿದ್ದರು. ರೋಮನ್ ಇತಿಹಾಸಕಾರರು ಇತಿಹಾಸವನ್ನು ಬರೆಯುವ ಉತ್ಸಾಹ ತೋರುವ ವೇಳೆಗೆ ರೋಮನ್ ಸಾಮ್ರಾಜ್ಯ 500 ವರ್ಷಗಳ ಗಡಿದಾಟಿ ಒಂದು ಪ್ರಬಲ ಸಾಮ್ರಾಜ್ಯವೆನಿಸಿಕೊಂಡಿತ್ತು. ಅವರು ಗ್ರೀಸ್ ವಿದ್ವತ್ ಲೋಕದೊಡನೆ ಸಂಪರ್ಕ ಬೆಳಸಿದ ನಂತರವೇ ಇತಿಹಾಸದ ಬರವಣಿಗೆಯ ಕೆಲಸದಲ್ಲಿ ಆಸಕ್ತಿತೋರಲು ಪ್ರಾರಂಭಿಸಿದರು. ಅನಂತರ ರೋಮನ್ ಇತಿಹಾಸಕಾರರು ಅನೇಕ ಬೃಹತ್ ಗ್ರಂಥಗಳನ್ನು ರಚಿಸಿದರು. ಆದರೆ ಅವರು ಗ್ರೀಕರು ನೀಡಿದ್ದ ಗುಣಮಟ್ಟವನ್ನು ಕಾಪಾಡಲು ವಿಫಲರಾದರು. ಎಷ್ಟೊಂದು ಐತಿಹಾಸಿಕ ರಾಶಿ ಇತ್ತೆಂದರೆ ಅವುಗಳೆಲ್ಲವನ್ನು ಉಪಯೋಗಿಸಿಕೊಂಡು ಬರೆಯಲು ಎಷ್ಟೋಶತಮಾನಗಳು ಬೇಕಾದವು. ಗ್ರೀಕ್‌ನಲ್ಲಿ ಇತಿಹಾಸ ಬರವಣಿಗೆಯ ಕೆಲಸ ಸ್ವಾಭಾವಿಕವಾಗಿ ಬೆಳೆದು ಬಂದದ್ದಾಗಿತ್ತು. ಆದರೆ ರೋಮನ್ ಇತಿಹಾಸದ ಬೆಳವಣಿಗೆ ವಿದೇಶಿಯರ ಪ್ರಭಾವದಿಂದ ಬಂದದ್ದಾಗಿತ್ತು. ಇದು ಗ್ರೀಸ್‌ನಿಂದ ಪಡೆದುಕೊಂಡದ್ದಾಗಿತ್ತು.

ರೋಮನ್ ಸಾಮ್ರಾಜ್ಯವು ಹೆಚ್ಚಿನ ಸಂಖ್ಯೆಯಲ್ಲಿ ದಂಡನಾಯಕರುಗಳನ್ನು ಆಡಳಿತಗಾರರನ್ನು ಮತ್ತು ಚಕ್ರವರ್ತಿಗಳನ್ನು ಸೃಷ್ಟಿಸುವಲ್ಲಿ ಖ್ಯಾತಿಪಡೆದಿದೆ. ಅವರು ಇತಿಹಾಸದ ವಸ್ತುವಿಷಯದ ಮೇಲೆ ಹೆಚ್ಚಿನ ಪ್ರಭಾವ ಬೀರಿದರು. ಇತಿಹಾಸಕಾರರು ಆದ್ದರಿಂದ

ಇಂತಹ ಮಹಾನ್‌ವ್ಯಕ್ತಿಗಳ ಬಗ್ಗೆ ಇತಿಹಾಸ ರಚಿಸುವುದಕ್ಕೆ ಮುಂದಾದರು ಆದರೆ ಉಳಿದ ವಿಷಯಗಳಿಗೆ ಸಂಬಂಧಿಸಿದಂತೆ ಯಾವುದೇ ಆಲೋಚನೆ ಮಾಡಲಿಲ್ಲ. ಅವರು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಅಥವಾ ಇನ್ನಾವುದೇ ವಿಷಯಗಳ ಬಗ್ಗೆ ರಚಿಸಲು ಪ್ರಯತ್ನ ನಡೆಸಲಿಲ್ಲ. ಅವರು ಅರಬ್ ಅಥವಾ ಗ್ರೀಕ್ ಇತಿಹಾಸ ಕಾರರಂತೆ ಸ್ಥಳದಿಂದ ಸ್ಥಳಕ್ಕೆ ಭೇಟಿ ನೀಡಿ ಸಾಕಷ್ಟು ವಿಷಯವನ್ನು ಸಂಗ್ರಹಿಸುವುದರಲ್ಲಿ ಆಸಕ್ತಿ ವಹಿಸಲಿಲ್ಲ. ಅವರು ಸಾಮಾನ್ಯವಾಗಿ ಸಾಮ್ರಾಜ್ಯದ ವಿವಿಧ ಪ್ರಾಂತ್ಯಗಳಿಂದ ಹಾಗೂ ದಂಡನಾಯಕರುಗಳಿಂದ ಆಸ್ಥಾನಕ್ಕೆ ತಲುಪಿದ ವರದಿಗಳಆಧಾರದಗಳ ಮೇಲೆ ತಮ್ಮ ಇತಿಹಾಸ ಗ್ರಂಥಗಳನ್ನು ರಚಿಸಿದರು. ಆದ್ದರಿಂದ ಅವರು ಸಮಗ್ರ ಹಾಗೂ ವಿಮರ್ಶಾತ್ಮಕ ಇತಿಹಾಸವನ್ನು ರಚಿಸುವುದರಲ್ಲಿ ವಿಫಲರಾದರು.

ಎಲ್ಲಾ ವಿವಾದಾತ್ಮಕ ಅಂಶಗಳು ಹಾಗೂ ಅನುಮಾನದಿಂದ ಕೂಡಿದ ವಿಷಯಗಳ ಬಗ್ಗೆ ರೋಮನ್ ಇತಿಹಾಸಕಾರರು ಗಮನ ಹರಿಸಲಿಲ್ಲ. ಅವರು ಕೇವಲ ರೋಮನ್ನರ ವೈಭವ ಸಾಧನೆಗಳನ್ನು ಮಾತ್ರ ಬರೆದರು ಕ್ಯಾಟೊ, ಸೀಸರ್, ಲಿವಿ ಮತ್ತು ಟ್ಯಾಸಿಟಸ್ ಇಂತಹ ಕೆಲಸಗಳ್ಳನು ಮಾತ್ರ ನಿರ್ವಹಿಸಿದರು. ಜೀವನ ಚರಿತ್ರೆಗಳನ್ನು ಬರೆಯುವುದರಲ್ಲಿ ರೋಮನ್ನರು ಖ್ಯಾತಿಗಳಿಸಿದರು. ಆದರೆ ಕೇವಲ ಜೀವನ ಚರಿತ್ತೆ ಇತಿಹಾಸವಾಗುವುದಿಲ್ಲ. ಗ್ರೀಕ್ ಇತಿಹಾಸಲೇಖನ ಕಲೆಯಲ್ಲಿ ಮಾನವತೆಯ ಮೆರಗು ಇರುವುದನ್ನು ಕಾಣಬಹುದಾಗಿದೆ. ಆದರೆ ರೋಮನ್ ಇತಿಹಾಸ ಲೇಖನ ಕಲೆ ಇಂತಹ ವಿಷಯಗಳನ್ನು ಹೊಂದಿಲ್ಲ. ಗ್ರೀಕ್ ಇತಿಹಾಸ ಲೇಖನ ಕಲೆಯು ಎಲ್ಲಾ ಅಂಶಗಳನ್ನು ಅಳವಡಿಸಿಕೊಂಡಿದೆ. ಆದರೆ ರೋಮನ್ ಇತಿಹಾಸ ಇದನ್ನು ಸಾಧಿಸುವುದರಲ್ಲಿ ವಿಫಲವಾಗಿದೆ.

## 13.8 ಸಂಕ್ಷಿಪ್ತ ಅವಲೋಕನ

ಗ್ರೀಕರ ನಂತರ ಇತಿಹಾಸ ಲೇಖನ ಕಲೆಯ ಬೆಳವಣಿಗೆಗೆ ಕೊಡುಗೆ ನೀಡಿದವರು ರೋಮನ್ನರು. ರೋಮನ್ನರ ಐತಿಹಾಸಿಕ ಚಿಂತನೆಯ ಮೇಲೆ ಗ್ರೀಕರು ಅಗಾಧ ಪ್ರಭಾವ ಬೀರಿದರು. ಸುಮಾರು 500 ವರ್ಷಗಳ ಕಾಲ ರೋಮ್ ಇತಿಹಾಸಕಾರರನ್ನುಹೊಂದಿರಲಿಲ್ಲ. ಕ್ಯಾಟೊ ರೋಮನ್ ಇತಿಹಾಸ ಲೇಖನ ಕಲೆಗೆ ಕ್ರಾಂತಿಕಾರಕ ತಿರುವು ನೀಡಿದನು. ಅವನ ಗ್ರಂಥ origines ಇತಿಹಾಸದ ಬಗ್ಗೆ ಲ್ಯಾಟಿನ್ ಭಾಷೆಯಲ್ಲಿ ರಚಿತವಾದ ಮೊಟ್ಟಮೊದಲನೆಯ ಗ್ರಂಥ. ಲಿವಿ ಮತ್ತು ರೋಮನ್‌ನ ಇತಿಹಾಸ ಕಾರರಲ್ಲಿ ಅಗ್ರಗಣ್ಯರು ಲಿವಿಯು ಅಗಸ್ಟಸ್ ಚಕ್ರವರ್ತಿಯ ಸಮಕಾಲೀನ. ಅವನು ರೋಮ್ ಇತಿಹಾಸ ಬರೆದವನು. ಇದು ರೋಮನ್ ಸಾಮ್ರಾಜ್ಯದ ಬಗ್ಗೆ ತಿಳಿದುಕೊಳ್ಳಲು ಬಹಳ ಉಪಯುಕ್ತವಾಗಿದೆ. ಅವನ ಇತಿಹಾಸದ ವರ್ಣನೆ ದಾರ್ಶನಿಕ ಅಂಶಗಳಿಂದ ಕೂಡಿದೆ. ಅವನ ಶೈಲಿಯಂತು ಎಲ್ಲರ ಮೆಚ್ಚುಗೆ ಪಡೆದಿದೆ. ರೋಮ್ ಇತಿಹಾಸ ಲೇಖನ ಕಲೆಯಲ್ಲಿ ಅತ್ಯಂತ ಪ್ರಸಿದ್ಧ ಇತಿಹಾಸ ಇತಿಹಾಸ ಕಾರನೆಂದರೆ ಕಾರ್ನಿಲಿಯಸ್ ಟ್ಯಾಸಿಟಸ್. ಅವನು ಅನೇಕ ಗ್ರಂಥಗಳ್ಳನು ಬರೆಯುವುದರ ಮೂಲಕ ರೋಮನ್ ಇತಿಹಾಸ ಕಲೆಯನ್ನು ಸಮೃದ್ಧ ಗೊಳಿಸಿದ್ದಾನೆ. Life of Agricola, Dialogue on orators, Germenia, Annals ಮತ್ತು Historiae ಇವನ ಅಮೂಲ್ಯ ಗ್ರಂಥಗಳು. ಗ್ರೀಕ್ ಇತಿಹಾಸ ಕಾರರಂತೆಯೆ ಟ್ಯಾಸಿಟಸ್‌ನನ್ನು ಕೂಡ ವಿಮರ್ಶಾತ್ಮಕ ಇತಿಹಾಸಕಾರನೆಂದು ಕರೆಯಬಹುದಾಗಿದೆ. ಚಕ್ರವರ್ತಿಗಳನ್ನು ಕೂಡ ಟೀಕಿಸಲು ಅವನು ಹಿಂಜರಿಯಲಿಲ್ಲ. ಇನ್ನಿತರಇತಿಹಾಸ ಕಾರರೆಂದರೆ ಟ್ರಾನ್ ಖ್ಯೂಲಸ್ ಹಾಗೂ ಇನ್ನು ಕೆಲವರು. ಆದರೆ ಇವರ ಕೊಡುಗೆ ಅಂತಹ ಪ್ರಮುಖವಲ್ಲ. ಇತಿಹಾಸ ಲೇಖನ ಕಲೆಯಲ್ಲಿ ಗ್ರೀಕರಷ್ಟು ರೋಮನ್ನರು ಪರಿಶ್ರಮ ಹೊಂದಿರಲಿಲ್ಲ. ಹೆರೋಡೋಟಸ್ ಅಥವಾ ಥೂಸಿಡೈಡಸ್ ರ ಮಟ್ಟಕ್ಕೆ ಯಾವ ರೋಮನ್ ಇತಿಹಾಸಕಾರನು ಏರಲಿಲ್ಲ. ರೋಮನ್ ಇತಿಹಾಸ ಲೇಖನ ಕಲೆಯೆ ಗ್ರೀಕರ ಇತಿಹಾಸ ಲೇಖನ ಕಲೆಯಿಂದ ಪ್ರಭಾವಿತಗೊಂಡಿದೆ. ರೋಮನ್ನರು ಪ್ರಮುಖವಾಗಿ ರಾಜಕೀಯ ಇತಿಹಾಸಕ್ಕೆ ಮಾತ್ರ ಪ್ರಾಮುಖ್ಯತೆ ನೀಡಿದರು.

## 13.9 ಸ್ವಯಂ ಪರೀಕ್ಷೆಯ ಪ್ರಶ್ನೆಗಳು

1. ಇತಿಹಾಸ ಲೇಖನ ಕಲೆಯ ಬೆಳವಣಿಗೆಗೆ ರೋಮನ್ನರ ಕೊಡುಗೆಗಳನ್ನು ವಿವರಿಸಿ.
2. ರೋಮನ್ ಇತಿಹಾಸ ಲೇಖನ ಕಲೆಗೆ ಕಾರ್ನಿಲೀಯಸ್ ಟ್ಯಾಸಿಟಸ್‌ನ ಕೊಡುಗೆಗಳನ್ನು ವಿಮರ್ಶಾತ್ಮಕವಾಗಿಬರೆಯಿರಿ.

## 13.10 ಪರಾಮರ್ಶನ ಗ್ರಂಥಗಳು

K. Rajayyan : History in Theory and Method

B. Sheik Ali: History : Its Theory and Method

E. Sreedharan : A Text Book of Historiography

ಡಾ|| ಎ. ವಿ. ವೆಂಕಟರತ್ನಂ: ಇತಿಹಾಸ ಸಂಶೋಧನಾ ಮಾರ್ಗ

ಡಾ||ಎಂ. ಬಿ. ಪದ್ಮ

ಪ್ರೊ. ಶಿವಣ್ಣ

# ಘಟಕ - 14

## ಕ್ರೈಸ್ತ ಇತಿಹಾಸ ಲೇಖನಕಲೆ - ಸಂತ ಅಗಸ್ಟಿನ್ ಮತ್ತು ಇತರರು

ರಚನೆ


14.0 ಉದ್ದೇಶಗಳು

14.1 ಪೀಠಿಕೆ

14.2 ಕ್ರೈಸ್ತ ಐತಿಹಾಸಿಕ ಪ್ರಜ್ಞೆಯ ಬೆಳವಣಿಗೆ

14.3 ಯುಸೆಬಿಯಸ್ ( ಕ್ರಿ. 260-340)

14.4 ಸಂತ ಅಗಸ್ಟಿನ್

14.5 ಇತರ ಚರ್ಚ್ ಇತಿಹಾಸಕಾರರು

14.5.1 ಗ್ರಿಗೊರಿ( ಕ್ರಿ.ಶ. 539-594)

14.5.2 ಬೆಡೆ( ಕ್ರಿ.ಶ. 673-735)

14.6 ಚರಿತ್ರೆಗಳು ಮತ್ತು ವೃತ್ತಾಂತಗಳು

14.7 ಇತಿಹಾಸ ಲೇಖನ ಕಲೆಯ ಗುಣಗಳು

14.8 ಸಂಕ್ಷಿಪ್ತ ಅವಲೋಕನ

14.9 ಸ್ವಯಂ ಪರೀಕ್ಷೆಯ ಪ್ರಶ್ನೆಗಳು

14.10 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 14.0 ಉದ್ದೇಶಗಳು

ಈ ಘಟಕವನ್ನು ಅಧ್ಯಯನ ಮಾಡುವುದರಿಂದ ನೀವು ತಿಳಿದುಕೊಳ್ಳುವ ಅಂಶಗಳೆಂದರೆ

* ಮಧ್ಯಕಾಲೀನ ಯುಗದಲ್ಲಿ ಕ್ರೈಸ್ತ ಇತಿಹಾಸ ಲೇಖನ ಕಲೆಯ ಬೆಳವಣಿಗೆ
* ಕ್ರೈಸ್ತ ಧರ್ಮದ ಉದಯ ಹಾಗೂ, ಇತಿಹಾಸ ಲೇಖನ ಕಲೆಯ ಬೆಳವಣಿಗೆಯ ಮೇಲೆ ಅದರ ಪ್ರಬಾವ
* ಚರ್ಚ್ ಇತಿಹಾಸ ಲೇಖನ ಕಲೆಯ ಪಿತಾಮಹ ಯುಸೆಬಿಯಸ್ ಕೊಡುಗೆ
* ಚರ್ಚ್ ಇತಿಹಾಸ ಲೇಖನ ಕಲೆಯ ಅತ್ಯಂತ ಪ್ರಸಿದ್ಧ ಇತಿಹಾಸಕಾರ ಸಂತ ಅಗಸ್ಟಿನ್ ಭೂನಗರ ಮತ್ತು ದೇವನಗರ ಎಂಬ ಎರಡು ನಗರಗಳ ವಿವರಣೆ
* ಚರ್ಚ್ ಇತಿಹಾಸ ಲೇಖನ ಕಲೆಯ ಇನ್ನಿತರ ಇತಿಹಾಸಕಾರರು
* ಚರಿತ್ರೆಗಳು ಮತ್ತು ವೃತ್ತಾಂತಗಳು
* ಚರ್ಚ್ ಇತಿಹಾಸ ಲೇಖನ ಕಲೆಯ ಪ್ರಮುಖ ಲಕ್ಷಣಗಳು

## 14.1 ಪೀಠಿಕೆ

ಚರ್ಚ್ ಇತಿಹಾಸ ಲೇಖನಕಲೆಯು ಗ್ರೀಕೊ-ರೋಮನ್ ಕಾಲದ ಇತಿಹಾಸಲೇಖನ ಕಲೆಗಿಂತ ಭಿನ್ನವಾದುದು. ಮದ್ಯಕಾಲೀನ ಯುಗದಲ್ಲಿ ಪ್ರಮುಖವಾಗಿ ಕ್ರೈಸ್ತಸನ್ಯಾಸಿಗಳು ಯೂರೋಪಿನಲ್ಲಿ ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದ ಇತಿಹಾಸವನ್ನು ರಚಿಸಿದರು. ಅವರು ಕ್ರೈಸ್ತಧರ್ಮವೇ ನಿಜವಾದ ಧರ್ಮ ಎಂದು ಪ್ರಬಲವಾಗಿ ನಂಬಿದ್ದರು. ಮಾನವನ ಎಲ್ಲಾ ಚಟುವಟಿಕೆಗಳಿಗೆ ಚರ್ಚ್ ಪ್ರಬಲ ಕಾರಣವೆಂದು ಪರಿಗಣಿಸಿದರು. ಮದ್ಯಕಾಲಿನ ಯೂರೋಪಿನಲ್ಲಿ ಬಹುತೇಕ ವಿದ್ವಾಂಸರು ಚರ್ಚಿನ ಬಗ್ಗೆ ಬರೆದರು. ಕೇವಲ ಕೆಲವೇ ಮಂದಿ ಮಾತ್ರ ಸಮಕಾಲೀನ ಘಟನಾವಳಿಗಳನ್ನು ಕುರಿತು ಬರೆದರು.

## 14.2 ಕ್ರೈಸ್ತ ಐತಿಹಾಸಿಕ ಪ್ರಜ್ಞೆಯ ಬೆಳವಣಿಗೆ

ಕ್ರೈಸ್ತ ಧರ್ಮದ ಉದಯ ಪಾಶ್ಚಿಮಾತ್ಯ ವಿದ್ವಾಂಸರ ಗಮನವನ್ನು ಬಹಳ ದೀರ್ಘಕಾಲದ ವರೆಗೆ ಸೆಳೆಯಲಿಲ್ಲ. ಪಶ್ಚಿಮ ಏಷ್ಯಾದ ಅವಿದ್ಯಾವಂತರ ನಡುವೆ ಚರ್ಚ್ ಸಾಮಾನ್ಯ ಪ್ರಾರಂಭವನ್ನು ಕಂಡಿತ್ತು. ವಿಶಾಲ ರೋಮನ್ ಸಾಮ್ರಾಜ್ಯದಲ್ಲಿ ಯೇಸು ಕ್ರಿಸ್ತನು ತನ್ನ ಬೋಧನೆಯನ್ನು ಪ್ರಾರಂಭಿಸಿದ ಸ್ಥಳವಾದ ಪ್ಯಾಲಿಸ್ಟೀನ್ ಒಂದು ಅಪ್ರಮುಖ ಹಾಗೂ ಯಾವುದೋ ಒಂದು ಮೂಲೆಯಲ್ಲಿರುವ ಸ್ಥಳವೆನಿಸಿಕೊಂಡಿತ್ತು. ಆದ್ದರಿಂದ ಪಾಶ್ಚಿಮಾತ್ಯರು ಪಶ್ಚಿಮ ಏಷ್ಯಾದಲ್ಲಿ ಉಂಟಾಗುತ್ತಿದ್ದ ಯಾವುದೇ ಬೆಳವಣಿಗೆಗಳಿಗೆ ಹೆಚ್ಚಿನ ಮಹತ್ವವನ್ನು ನೀಡಲಿಲ್ಲ. ಆದರೆ ಈ ಪರಿಸ್ಥಿತಿ ಬಹಳ ಕಾಲ ಮುಂದುವರಿಯಲಿಲ್ಲ. ಕ್ರೈಸ್ತಧರ್ಮ ಏಷ್ಯಾದ ಗಡಿಯನ್ನು ದಾಟಿ ಗ್ರೀಸ್ ಮತ್ತು ರೋಮ್‌ಗಳಿಗೆ ಹರಡಿತು. ಇದರ ಪರಿಣಾಮವಾಗಿ ಅಧಿಕ ಸಂಖ್ಯೆಯಲ್ಲಿ ಕ್ರೈಸ್ತಧರ್ಮಕ್ಕೆ ಮತಾಂತರ ಗೊಂಡರು. ಕ್ರೈಸ್ತಧರ್ಮ ಹರಡುವುದನ್ನು ತಡೆಗಟ್ಟಲು ರೋಮನ್ ಚಕ್ರವರ್ತಿಗಳಿಗೆಸಾಧ್ಯವಾಗಲಿಲ್ಲ. ಪ್ರಮುಖವಾಗಿ ರೋಮನ್ ಚಕ್ರವರ್ತಿಗಳಾದ ನೀರೊ ಮತ್ತು ಡಯೊಲಿಷಿಯನ್‌ಕ್ರೈಸ್ತ ಧರ್ಮವನ್ನು ದಮನ ಮಾಡಲು ಪ್ರಯತ್ನ ನಡೆಸಿದರು. ಆದರೂ ಕೂಡ ಅನೇಕರು ಕ್ರೈಸ್ತ ಧರ್ಮದ ಪ್ರಚಾರಕ್ಕಾಗಿ ತಮ್ಮ ಪ್ರಾಣ ಕಳೆದುಕೊಂಡು ಹುತಾತ್ಮರಾದರು. ಸರ್ಕಾರ ಎಷ್ಟೇದಮನ ಕಾರ್ಯ ಮುಂದುವರಿಸಿದರೂ ಕ್ರೈಸ್ತರ ಪ್ರಭಾವ ದಿನೇದಿನೇ ಹೆಚ್ಚಾಯಿತು. ಚಕ್ರವರ್ತಿ ಕಾನ್‌ಸ್ಟೆಂಟೈನ್ ಕ್ರೈಸ್ತಧರ್ಮವನ್ನು ಹತ್ತಿಕ್ಕಲು

ಸಾಧ್ಯವಿಲ್ಲವೆಂದು ಮನಗಂಡಾಗ ಕ್ರಿ.ಶ. 313ರಲ್ಲಿ ಒಂದು ಆಜ್ಞೆಯನ್ನು ಹೊರಡಿಸುವುದರ ಮೂಲಕ ರೋಮನ್ ಸಾಮ್ರಾಜ್ಯದಲ್ಲಿ ಅದಕ್ಕೆ ಮಾನ್ಯತೆ ನೀಡಿದನು. ಈ ರೀತಿಯಾಗಿ ಯೂರೋಪ್ ಸಂಪೂರ್ಣವಾಗಿ ಕ್ರೈಸ್ತ ಧರ್ಮದ ಪ್ರಭಾವಕ್ಕೊಳಗಾಯಿತು. ಈ ಧರ್ಮ ಅಗಸ್ಟಿನ್ ಕಾಲದಿಂದ ಮಾರ್ಟಿನ್ ಲೂಥರ್ ಕಾಲದ ವರೆಗೆ ತನ್ನ ಸರ್ವಾಧಿಕಾರತ್ವವನ್ನು ಸ್ಥಾಪಿಸಿತ್ತು.

ಬೈಬಲ್ ಗ್ರಂಥವು ಕೂಡ ಐತಿಹಾಸಿಕ ಮಹತ್ವವನ್ನು ಹೊಂದಿದೆ. ಅದು ಐತಿಹಾಸಿಕ ಘಟನೆಗಳು ಜರುಗುವುದಕ್ಕೆ ತನ್ನದೇ ಆದ ಒಂದು ಯೋಜನೆಯನ್ನು ರೂಪಿಸಿಕೊಂಡಿದೆ. ಇದು ಭೂತ ಕಾಲದಿಂದ ಹಿಡಿದು ಭವಿಷತ್ ಕಾಲದ ವರೆಗೆ ಇರುವ ಐತಿಹಾಸಿಕ ಘಟನೆಗಳ ಒಂದು ಯೋಜನೆ. ಈ ಯೋಜನೆಯು ಹಲವು ಘಟನೆಗಳನ್ನು ಆಧಾರವಾಗಿಟ್ಟುಕೊಂಡು ರೂಪಿಸಲಾಗಿದೆ. ಬೈಬಲ್‌ನ ಹಳೆಯ ಒಡಂಬಡಿಕೆಯಲ್ಲಿ (old Testament) ಅನೇಕ ಐತಿಹಾಸಿಕ ಅಂಶಗಳು ಯಹೂದಿಗಳಿಗೆ ಸಂಬಂಧಿಸಿದಂತೆ ಇರುವುದನ್ನು ಕಾಣಬಹುದಾಗಿದೆ. ಅದೇ ರೀತಿ ಹೊಸ ಒಡಂಬಡಿಕೆಯಲ್ಲಿ (New Testament) ಕ್ರೈಸ್ತ ಧರ್ಮದ ಪ್ರಚಾರದ ಮಾಹಿತಿ ಇರುವುದನ್ನು ಕಾಣಬಹುದಾಗಿದೆ. ಹೇಗೆ ಕ್ರೈಸ್ತದರ್ಮ ಪ್ಯಾಲಿಸ್ಟಿನ್‌ನಿಂದ ರೋಮನ್ ಸಾಮ್ರಾಜ್ಯದ ವರೆಗೆ ಹರಡಿತು ಎಂಬ ಅಂಶವು ಬೈಬಲ್‌ನ ಐತಿಹಾಸಿಕ ಮಹತ್ವವನ್ನು ಹೆಚ್ಚಿಸಿದೆ.

ಕ್ರೈಸ್ತಧರ್ಮದ ಇತಿಹಾಸದ ಬರವಣಿಗೆಯು ಕ್ರೈಸ್ತಧರ್ಮದ ಉದಯದ ದಿನಗಳಿಂದಲೇ ಪ್ರಾರಂಭವಾಗಲಿಲ್ಲ. ಕ್ರೈಸ್ತಧರ್ಮದ ಅನುಯಾಯಿಗಳಲ್ಲಿ ಐತಿಹಾಸಿಕ ಪ್ರಜ್ಞೆ ಬೆಳೆಯಲು ಹಲವು ಶತಮಾನಗಳು ಬೇಕಾದವು. ಆದರೆ ಅದರ ಇತಿಹಾಸ ರಚನೆಗೆ ಬಹಳ ದೀರ್ಘಕಾಲ ಬೇಜವಾಬ್ದಾರಿಯಿಂದಿರಲು ಸಾಧ್ಯವಿರಲಿಲ್ಲ. ಕ್ರೈಸ್ತಧರ್ಮದ ಘಟನಾವಳಿಗಳನ್ನು ಬರೆದಿಡುವುದನ್ನು ಮುಂದೂಡಲು ಸಾಧ್ಯವಿರಲಿಲ್ಲ. ಕ್ರೈಸ್ತಧರ್ಮವೇ ಇತಿಹಾಸವನ್ನು ಸೃಷ್ಟಿಸುತ್ತಾ ಇತ್ತು. ಆದ್ದರಿಂದ ಅದರ ಸಂಪ್ರದಾಯಗಳನ್ನು ದಾಖಲಿಸಿ ಸಂರಕ್ಷಿಸಬೇಕಾಗಿತ್ತು. ಜೆರುಸಲೆಂನಲ್ಲಿ ಚರ್ಚ್‌ನಲ್ಲಿ ತೆಗೆದುಕೊಂಡ ಹಲವು ತೀರ್ಮಾನಗಳಿದ್ದವು ಅವುಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕಾಗಿತ್ತು. ಆದ್ದರಿಂದ ಅವುಗಳನ್ನು ಬರೆದಿಡ ಬೇಕಾಗಿತ್ತು. ಅದೇ ರೀತಿ ಅನೇಕರು ಕ್ರೈಸ್ತ ಧರ್ಮದ ಪ್ರಚಾರಕ್ಕೊಸ್ಕರ ಹುತಾತ್ಮರಾಗಿದ್ದರು. ಅಂತಹವರನ್ನು ಸ್ಮರಿಸಿಕೊಂಡು ಅವರ ಹೋರಾಟದ ಬಗ್ಗೆ ದಾಖಲಿಸ ಬೇಕಾಗಿತ್ತು. ಕ್ರೈಸ್ತ ಮತಪ್ರಚಾರಕರು ರೋಮನ್ ಸಾಮ್ರಾಜ್ಯದಲ್ಲಿ ಕಾರ್ಯನಿರ್ವಹಿಸಿದುದನ್ನು ದಾಖಲಿಸಬೇಕಾಗಿತ್ತು. ಈ ಎಲ್ಲಾ ಅಂಶಗಳು ಅವರಲ್ಲಿ ಐತಿಹಾಸಿಕ ಪ್ರಜ್ಞೆಬೆಳೆಯಲು ಕಾರಣವಾಯಿತು. ಕ್ರಿ.ಶ. ಮೂರನೆ ಶತಮಾನದ ಅಂತ್ಯದ ವೇಳೆಗೆ ಅಂದರೆ ಕ್ರೈಸ್ತಧರ್ಮ ಉದಯಿಸಿದ ಮುನ್ನೂರು ವರ್ಷಗಳ ನಂತರ ಐತಿಹಾಸಿಕ ಘಟನಾವಳಿಗಳ ಕ್ರೈಸ್ತಧರ್ಮದ ವಿವರಣೆನಿಧಾನವಾಗಿ ಬೆಳೆಯಲು ಪ್ರಾರಂಭಿಸಿತು.

## 14.3 ಯುಸೆಬಿಯಸ್ ( ಕ್ರಿ.ಶ. 260-340)

ಪ್ರಾರಂಭಿಕ ಚರ್ಚ್ ಇತಿಹಾಸಲೇಖನ ಕಲೆಗೆ ಸಂಬಂಧಿಸಿದಂತೆ ಹಲವು ಪ್ರಮುಖ ಇತಿಹಾಸಕಾರರಿದ್ದಾರೆ. ಆಫ್ರಿಕಾನಸ್, ಹಿಪ್ಪೊಲಿಟಸ್ ಮತ್ತು ಲಾಕ್‌ಟ್ಯಾಂಟಿಯಸ್ ಪ್ರಮುಖರೆಂದು ಪರಿಗಣಿಸಲ್ಪಟ್ಟಿದ್ದಾರೆ.ಆಫ್ರಿಕಾನಸ್ *ಕ್ರೊನೊಗ್ರಾಫಿಯ* ಎಂಬ ಗ್ರಂಥವನ್ನು ರಚಿಸಿದನು. ಈ ಗ್ರಂಥವು ಯುಸೆಬಿಯಸ್‌ಗೆ ಆಕರ ಗ್ರಂಥವಾಗಿ ಅವನ ಬರವಣಿಗೆಗಳಿಗೆ ಅನುಕೂಲವಾಯಿತು. ಹಿಪ್ಪೊಲಿಟಸ್ ಒಬ್ಬ ರೋಮನ್ ಇತಿಹಾಸಕಾರ ಅವನು ಕ್ರೈಸ್ತಧರ್ಮಕ್ಕೆ ಮತಾಂತರಗೊಂಡವನು. ಅವನು ತನ್ನ ಗ್ರಂಥ *ಡಿ ಮಾರ್ಟಿಬಸ್ ಪರ್ಸಿಕುಟೊರಮ್* ನಲ್ಲಿ ಕ್ರೈಸ್ತರು ಹೇಗೆ ಕಿರುಕುಳಕ್ಕೊಳಗಾಗಿದ್ದರು ಎಂಬುದನ್ನು ವಿವರಿಸಿರುವನು. ಅವನು ಸಮಕಾಲೀನ ಎಲ್ಲಾ ಧರ್ಮಗಳಿಗೆ ಸಂಬಂಧಿಸಿದಂತೆ ಅಧ್ಯಯನ ಮಾಡಿ ಆ ಎಲ್ಲಾ ಧರ್ಮಗಳಲ್ಲಿ ಕ್ರೈಸ್ತಧರ್ಮವೇ ಮೇಲು ಎಂದು ಪ್ರಶಂಸಿದನು. ಈ ಎಲ್ಲಾ ಇತಿಹಾಸಕಾರರಿಗಿಂತ ಪ್ರಾರಂಭಿಕ ಇತಿಹಾಸ ಕಾರರಲ್ಲಿ ಪ್ರಮುಖ ನೆನಿಸಿಕೊಂಡಿರುವವನು ಯೂಸೆಬಿಯಸ್. ಯುಸೆಬಿಯಸ್‌ನನ್ನು ಕ್ರೈಸ್ತಧರ್ಮದ ಇತಿಹಾಸಲೇಖನ ಕಲೆಯ ಪಿತಾಮಹನೆಂದು ಕರೆಯಲಾಗಿದೆ. ಸುಮಾರು ಕ್ರಿ.ಶ.260ರಲ್ಲಿ ಜನಿಸಿದನು. ಕಾನ್‌ಸ್ಟೆಂಟೈನ್ ಅಧೀನದಲ್ಲಿ ಹಲವು ವರ್ಷಗಳ ಕಾಲ ಕಾರ್ಯನಿರ್ವಹಿಸಿದನು. ಅವನು ಚಿಕ್ಕವನಾಗಿದ್ದಾಗ ಎಷ್ಟರ ಮಟ್ಟಿಗೆ ಕ್ರೈಸ್ತ ಧರ್ಮದ ಅನುಯಾಯಿಗಳು ಹಿಂಸಿಸಲ್ಪಟ್ಟರು ಎಂಬುದನ್ನು ಕಣ್ಣಾರೆ ವೀಕ್ಷಿಸಿದ್ದನು. ಯುಸೆಬಿಯಸ್ ಪ್ಯಾಲಿಸ್ಟೀನ್‌ನ ಸೆಸಾರಿಯಾದಲ್ಲಿ ನೆಲಸಿ ತನ್ನ ಕಾರ್ಯನಿರ್ವಹಿಸಿದನು. ಅಲ್ಲಿ ರೋಮನ್ ಸಾಮ್ರಾಜ್ಯದಲ್ಲೇ ಅತ್ಯಂತ ಪ್ರಸಿದ್ಧವೆನಿಸಿಕೊಂಡಿದ್ದ ಒಂದು ಗ್ರಂಥಾಲಯವಿತ್ತು.

ಈ ಗ್ರಂಥಾಲಯವು ಡಿಯೊಕ್ಲೆಟಿಯನ್ ಆಳ್ವಿಕೆಯ ಕಾಲದಲ್ಲಿ ಕ್ರೈಸ್ತ ಧರ್ಮದ ವಿರುದ್ಧ ನಡೆದ ದಮನ ಕಾರ್ಯದಲ್ಲಿ ಹೇಗೊ ಅವನ ದಮನಕಾರ್ಯದಿಂದ ತಪ್ಪಿಸಿಕೊಂಡಿತ್ತು. ಯುಸೆಬಿಯಸ್ ಅನೇಕ ಸ್ಥಳಗಳಿಗೆ ಭೇಟಿ ಕೊಟ್ಟು ತನಗೆ ಬೇಕಾದ ಅನೇಕ ಘಟನಾವಳಿಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಸಂಗ್ರಹಿಸಿದನು. ಈ ರೀತಿ ಪ್ರವಾಸ ಕೈಗೊಂಡಾಗ ಗಳಿಸಿದ ಭೌಗೋಳಿಕ ಜ್ಞಾನದಿಂದ ತನ್ನ ಗ್ರಂಥದಲ್ಲಿ ಅವನು ಕೂಡ ಅಳವಡಿಸಿಕೊಂಡನು. ಅವನು ಮಹಾ ಮೇಧಾವಿ ಎಂದು ಖ್ಯಾತಿಗಳಿಸಿದ್ದನು. ಅವನು ಗ್ರೀಕ್ ಭಾಷೆಯಲ್ಲಿ ಅನೇಕ ಗ್ರಂಥಗಳನ್ನು ರಚಿಸಿ ಕ್ರಿ.ಶ. 340ರಲ್ಲಿ ಮರಣ ಹೊಂದಿದನು.

ಯುಸೇಬಿಯಸ್ ಅನೇಕ ಗ್ರಂಥಗಳನ್ನು ರಚಿಸಿದನು ಅವುಗಳಲ್ಲಿ ಅತ್ಯಂತ ಪ್ರಮುಖವಾದವುಗಳೆಂದರೆ Chronographia, Ecclesiastical History, Lives of martyres of Jerusalem and the Life of Constantine. ಚರ್ಚ್‌ಗೆ ಸಂಬಂದಿಸಿದ ಎಲ್ಲ ವೃತ್ತಾಂತಗಳಲ್ಲಿ ಕ್ರೊನೊಗ್ರಾಫಿಯ ಯುಸೆಬಿಯಸ್‌ನಿಗೆ ಗೊತ್ತಿದ್ದ ಎಲ್ಲ ಜನಾಂಗಗಳ ಕಾಲಗಣನೆಯ ತುಲನಾತ್ಮಕ ಅಧ್ಯಯನ. ಅವನು ಪ್ರಾಚೀನ ಕಾಲದ ಎಲ್ಲ ಜನತೆಯ ಬಿಬ್ಲಿಕಲ್, ಈಜಿಪ್ಷಿಯನ್, ಅಸ್ಸಿರಿಯನ್, ಗ್ರೀಕ್ ಮತ್ತು ರೋಮನ್‌ರ ಕಾಲಗಣನೆಯ ಹೊಂದಾಣಿಕೆ ಮಾಡಿದನು. ಜೆರೊಮನು ಯುಸೆಬಿಯಸ್‌ನ ಕ್ರೊನೊಗ್ರಾಫಿಯವನ್ನು ಲ್ಯಾಟಿನ್ ಭಾಷೆಗೆ ತರ್ಜುಮೆ ಮಾಡಿದನು. ಇದು ಪಾಶ್ಚಿಮಾತ್ಯದ ಐತಿಹಾಸಿಕ ಬರವಣಿಗೆಯ ಮೇಲೆ ಹೆಚ್ಚು ಪ್ರಭಾವ ಬೀರಿತು. ಯುಸೆಬಿಯಸ್‌ನ Historia ecclesiastica ( ecclesiastical History) ಮತ್ತೊಂದು ಪ್ರಮುಖ ಗ್ರಂಥ. ಈ ಗ್ರಂಥವು ಪ್ರಾರಂಭದಿಂದ ಕ್ರಿ.ಶ. 309ರ ವರೆಗೆ ಚರ್ಚ್‌ನ ಇತಿಹಾಸವನ್ನು ವಿವರಿಸುತ್ತದೆ. ಈ ಗ್ರಂಥವು ಐತಿಹಾಸಿಕ ಗ್ರಂಥ ಎನ್ನುವುದಕ್ಕಿಂತ ಎಲ್ಲ ದಾಖಲೆಗಳ ಸಂಗ್ರಹಣೆ ಎಂದು ಪರಿಗಣಿಸಬಹುದು. ಈ ಗ್ರಂತದಲ್ಲಿ ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದ ಮೂಲ ದಾಖಲೆಗಳನ್ನು ಸೇರಿಸಿ ಈ ರೀತಿಯಾಗಿ ಅವನು ಈ ದಾಖಲೆಗಳನ್ನು ಸಂರಕ್ಷಿಸಿದಂತಾಯಿತು. ಇಂತಹ ಗ್ರಂಥವನ್ನು ರಚಿಸುವುದರಲ್ಲೂ ತಾನೇ ಮೊದಲಿಗ ಎಂದು ಹೇಳಿಕೊಂಡಿದ್ದಾನೆ. ಇದೊಂದು ಅಮೂಲ್ಯ ಕೃತಿ. J. W. ಥಾಮ್ಸ್‌ಸನ್‌ರವರು ಈ ಗ್ರಂಥವು ಚರ್ಚ್‌ಗೆ ಸಂಬಂಧಿಸಿದಂತೆ ಹೊಂದಾಣಿಕೆಯಿಂದ ಕೂಡಿದ ಹಾಗೂ ಮೌಲ್ಯಾಧಾರಿತವಾದ ಐತಿಹಾಸಿಕ ವಿಮರ್ಶಕ ವಿವರಣೆಯಿಂದ ಕೂಡಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇದೊಂದು ವೈಜ್ಞಾನಿಕ ವಿವರಣೆಯಿಂದ ಕೂಡಿಲ್ಲದೆ ಇದ್ದರೂ ಕೂಡ ಒಂದು ಪ್ರಮುಖ ಗ್ರಂಥವಾಗಿದ್ದ ಯುಸೆಬಿಯಸ್‌ಗೆ ಚರ್ಚ್ ಇತಿಹಾಸದ ಪಿತಾಮಹ ಎಂಬ ಹೆಸರನ್ನು ಗಳಿಸಿಕೊಟ್ಟಿದೆ.

## 14.4 ಸಂತ ಆಗಸ್ಟಿನ್ (ಕ್ರಿ.ಶ.354-430)

ಚರ್ಚ್‌ಇತಿಹಾಸ ಲೇಖನ ಕಲೆಯಲ್ಲಿ ಸಂತ ಅಗಸ್ಟಿನ್‌ನ ಹೆಸರು ಅತ್ಯಂತ ಪ್ರಮುಖ. ಅವನೊಬ್ಬ ಧರ್ಮಶಾಸ್ತ್ರಜ್ಞ, ದಾರ್ಶನಿಕ, ದಾರ್ಮಿಕಗುರು, ಕವಿ ಹಾಗೂ ಪ್ರಬುದ್ಧ ರಾಜಕೀಯ ಚಿಂತಕ. ಈತನು ಆಧುನಿಕ ಅಲ್ಜೀರಿಯದ ಹತ್ತಿರವಿರುವ ಮಿಡಿಯದಲ್ಲಿ ಜನಿಸಿದನು. ಕಾರ್ಥೇಜ್ ವಿಶ್ವವಿದ್ಯಾನಿಯದಲ್ಲಿ ವ್ಯಾಸಂಗ ಮಾಡಿದನು. ಅವನು ಪ್ರಮುಖವಾಗಿ ಕ್ರೈಸ್ತಧರ್ಮದ ಬಗ್ಗೆ ಹೆಚ್ಚುಅರಿತುಕೊಳ್ಳುವ ಪ್ರಯತ್ನನಡೆಸಿದನು. ಹಲವು ವರ್ಷಗಳ ಕಾಲ ವ್ಯಾಕರಣ, ವಾಗ್ಮಿಕಲೆ (ಅಲಂಕಾರಶಾಸ್ತ್ರ)ಮೊದಲಾದ ವಿಷಯಗಳನ್ನು ಬೋಧಿಸಿದನು. ಅನಂತರ ಮಿಲಾನ್ ವಿಶ್ವವಿದ್ಯಾನಿಲಯದಲ್ಲಿ ಅಲಂಕಾರಶಾಸ್ತ್ರ ಬೋಧಿಸಲು (rhetoric) ಪ್ರಾಧ್ಯಾಪಕನನ್ನಾಗಿ ನೇಮಿಸಲಾಯಿತು. ಇಲ್ಲಿ ಸೇವೆ ಸಲ್ಲಿಸಿದ ನಂತರ ಹಿಪ್ಪೊದಲ್ಲಿ ಬಿಷಪ್‌ನಾಗಿ ನೇಮಕಗೊಂಡನು.

ಸಂತ ಅಗಸ್ಟಿನ್ ಹಲವು ವರ್ಷಗಳ ನಿರಂತರ ಅಧ್ಯಯನದ ನಂತರ ಅನೇಕ ಗ್ರಂಥಗಳನ್ನು ರಚಿಸಿದನು. ಈತನು ಕ್ರೈಸ್ತಧರ್ಮ ಸಂಕಷ್ಟಗಳನ್ನು ಎದುರಿಸುತ್ತಿದ್ದ ವೇಳೆಯಲ್ಲಿ ಕ್ರೈಸ್ತ ಧರ್ಮದ ಬಗ್ಗೆ ಬರೆದನು. ಅಲಾರಿಕ್‌ನು ತನ್ನ ಗೋಥರೊಡನೆ ರೋಮ್‌ನ ಮೇಲೆ ದಾಳಿಮಾಡಿದನು. ರೋಮ್‌ನಗರವನ್ನು ಸಂಪೂರ್ಣವಗಿ ಕೊಳ್ಳೆಹೊಡೆಯಲಾಯಿತು. ರೋಮನ್ ಸಾಮ್ರಾಜ್ಯ ಪತನವಾಯಿತು. ಇಡೀ ರೋಮನ್ ಸಾಮ್ರಾಜ್ಯದಲ್ಲೆಲ್ಲಾ ಅರಾಜಕತೆ ತಲೆದೋರಿತು. ರೋಮ್ ಸಾಮ್ರಾಜ್ಯದ ಇಂತಹ ಗತಿಗೆ ಪುರಾತನ ದೇವತೆಗಳಿಗೆ ನಿರ್ಲಕ್ಷ್ಯತೋರಿದುದೇ ಕಾರಣವೆಂದು ದೂಷಿಸಲು ಪ್ರಾರಂಭಿಸಿದರು. ಈ ಪುರಾತನ ದೇವತೆಗಳನ್ನು ಕ್ರೈಸ್ತಧರ್ಮವನ್ನು ಸ್ವೀಕರಿಸಲು ಕೈಬಿಡಲಾಗಿತ್ತು. ಸಂತ ಅಗಸ್ಟಿನ್‌ನು ಜನರು ಇಂತಹ ನಂಬಿಕೆಯಿಂದ ಹೊರ ಬರಲು ಹೋರಾಟ ನಡೆಸಿದನು. ಅವನು ಕ್ರೈಸ್ತ

ಧರ್ಮದ ಶಾಶ್ವತ ವೈಭವದ ಬಗ್ಗೆ ವರ್ಣಿಸಿದನು. ಅವನು ಜನರಿಗೆ ಅಶಾಶ್ವತ ( ಶಾಶ್ವತವಲ್ಲ) ರೋಮ್ ಸಾಮ್ರಾಜ್ಯ ಹಾಗೂ ದೇವನಗರದ (The city of god) ಭವ್ಯತೆಯ ಬಗ್ಗೆ ಇರತಕ್ಕ ವ್ಯತ್ಯಾಸವನ್ನು ತಿಳಿಸಿಕೊಟ್ಟನು.

ಸಂತ ಅಗಸ್ಟಿನ್ ಬರೆದಿರತಕ್ಕ ಅನೇಕ ಗ್ರಂಥಗಳಲ್ಲಿ The city of god ಮತ್ತು Confessions ಪ್ರಮುಖವಾದವು. The city of god(ದೇವನಗರ) ಅತ್ಯಂತ ಪ್ರಮುಖ ಕೃತಿ ಎಂದು ಪರಿಗಣಿಸಲಉಟ್ಟಿದೆ. ಈ ಕೃತಿಯಲ್ಲಿ ರಾಜ್ಯಮಾನವ ನಿರ್ಮಿತ. ಆದ್ದರಿಂದ ಅದು ಕೆಡಕನಿಂದ ಕೂಡಿದೆ. ಕೈನ್ ತನ್ನ ಸಹೋದರ ಅಬೆಲ್ ನನ್ನು ಕೊಂದು ಮೊದಲನೆ ನಗರವನ್ನು ಸ್ಥಾಪಿಸಿದನು. ಈ ರೀತಿಯಾಗಿ ಪಾಪದ ವ್ಯಕ್ತಿ ರಾಜ್ಯವನ್ನು ನಿರ್ಮಿಸಿದ, ಆದರೆ city of god, (celestial) ದೇವರ ಶಾಶ್ವತ ಸ್ವರ್ಗ ರಾಜ್ಯ. ದೇವರು ಕಾರ್ಯಗತ ಮಾಡಿರುವುದೆಲ್ಲ ಪರಿಪೂರ್ಣ ಮತ್ತು ಸುಂದರವಾಗಿದೆ. ಆದರೆ ಮಾನವನ ಕೆಲಸ ಕಾರ್ಯಗಳೆಲ್ಲ ಅನುಕರಣೀಯ ಮತ್ತು ಪರಿಪೂರ್ಣವಲ್ಲ. ಆದರೆ ಚರ್ಚ್‌ಸ್ವರ್ಗರಾಜ್ಯದ ಒಂದು ಪ್ರತಿಬಿಂಬ. ದೇವನಗರದ ಅಡಿಪಾಯ ದೈವತ್ವದ ತಳಹದಿ ಮದ್ಯಕಾಲೀನ ಯುಗದಲ್ಲಿ ಭೂನಗರ ( ಮರ್ತ್ಯನಗರ) ಮತ್ತು ಸ್ವರ್ಗೀಯಎಂಬ ಎರಡು ನಗರಗಳು ಅಸ್ತಿತ್ವದಲ್ಲಿವೆ. ಈ ಎರಡುನಗರಗಳಲ್ಲಿ ಎರಡು ರೀತಿಯ ನಾಗರೀಕರಿದ್ದಾರೆ. ಈ ಎರಡೂ ನಗರಗಳು ಇತಿಹಾಸದ ದರ್ಶನವೆಂದರೆ ಮರ್ತ್ಯನಗರವನ್ನು ಸ್ವರ್ಗೀಯನಗರವನ್ನಾಗಿ ಮಾರ್ಪಡಿಸುವುದು. ಭೂಮಿಯ ಮೇಲಿದ್ದ ರೋಮನ್ ಸಾಮ್ರಾಜ್ಯದ ಎಲ್ಲಾ ಸಾಧನೆಗಳು ದೇವನಗರದ ಮುಂದೆ ಅಳಿಸಿಹೋಗುತ್ತವೆ.

ರೋಮ್ ಸಾಮ್ರಾಜ್ಯದ ವೈಭವ ಸಾವಿರಾರು ಮಂದಿಗಳ ಬೆವರು, ರಕ್ತ ಮತ್ತು ಕಣ್ಣೀರಿನಿಂದ ನಿರ್ಮಿತವಾದುದು. ಆದರೆ ದೇವನಗರ, ಕರುಣೆಯಿಂದ ಕೂಡಿದ ಮನೆ, ಯಾವುದೇ ರೀತಿಯ ಬೇಡಿಕೆಯನ್ನಿಡುವುದಿಲ್ಲ. ಆದರೆ ಭೂಮಿಯ ಮೇಲಣನಗರ ಮಾನವನ ದೈಹಿಕ ಶಕ್ತಿಯಿಂದ ನಿರ್ಮಾಣವಾದುದು. ದೈಹಿಕ ಶಕ್ತಿ ಇಲ್ಲದೆ ಇದ್ದರೆ ಭೂನಗರದಲ್ಲಿ ಕಾನೂನು ಹಾಗೂ ಸುವ್ಯವಸ್ಥೆ ಇರುವುದಿಲ್ಲ. ಅಲ್ಲದೆ ದೈಹಿಕ ಶಕ್ತಿಯ ಪ್ರಯೋಗಮಾಡದೆ ಇದ್ದರೆ ಮಾನವನಿಗೆ ಯಾವುದೇ ರೀತಿಯ ರಕ್ಷಣೆ ಮತ್ತು ಸುಭದ್ರತೆ ಇರುವುದಿಲ್ಲ. ಆದರೆ ದೇವನಗರ ದೇವರ ಪ್ರೀತಿಯಿಂದ ನಿರ್ಮಾಣವಾದುದು. ಭೂನಗರದ ವ್ಯಕ್ತಿಯ ಪ್ರಾಮುಖ್ಯತೆ ಸಂಬಂಧಸೂಚಕ ವ್ಯಾಪ್ತಿಯಲ್ಲಿ ಮಿತಿ ಇರುವುದು ಕಾಯಂಅಲ್ಲದ್ದು. ಆದರೆ ದೇವನಗರದಲ್ಲಿ ಮಾನವನು ಶ್ರೇಷ್ಠ. ಈ ಅಧಿಕಾರಕ್ಕೆ ಕೊನೆಯೇ ಇಲ್ಲ. ಶಾಶ್ವತವಾದಂತದ್ದು ಮಾನವನು ಪರಿಪೂರ್ಣತೆಯನ್ನು ಗಳಿಸಲು ಸಹಾಯವಾಗುತ್ತದೆ. ಅಂತಿಮ ಗುರಿ ಎಂದರೆ ಮಾನವನು ತನ್ನ ಅಹಿತ ಜೀವನವನ್ನು ತೊರೆದು ಭಗವಂತನ ಸಾನಿಧ್ಯದಲ್ಲಿ ಒಟ್ಟಿಗೆ ಇರುವುದು. ಈ ಗ್ರಂಥವು ಪ್ರಕಟಣೆಯಾದಮೇಲೆ ಪಗಾನಿಸಂನ (ಅಸಂಸ್ಕೃತಿಕ) ತತ್ವಕೊನೆಗೊಂಡು ಕ್ರೈಸ್ತಧರ್ಮದ ತತ್ವ (ದರ್ಶನ) ಪ್ರಾರಂಭವಾಯಿತು ಎಂಬುದಾಗಿ ವಿಲ್ ಡುರಾಂಟ್‌ರವರು ಅಭಿಪ್ರಾಯಪಟ್ಟಿದ್ದಾರೆ. ಈ ಗ್ರಂಥವು ಕ್ಯಾಥೊಲಿಕ್ ಧರ್ಮ ಶಾಸ್ತ್ರದ ಅಡಿಪಾಯವಾಗಿದ್ದು ಮದ್ಯಯುಗದ ರಾಜಕೀಯ ಸಿದ್ಧಾಂತದ ರಚನೆಗೆ ಕಾರಣವಾಯಿತು. ಇದು ರಾಜ್ಯ ಮತ್ತು ಚರ್ಚ್‌ನ ನಡುವಣ ಸಂಬಂಧಗಳ ವ್ಯಾಖ್ಯಾನವನ್ನು ನೀಡಿದ ಮೊಟ್ಟಮೊದಲನೆ ಗ್ರಂಥವಾಗಿದೆ. ಅಗಸ್ಟಿನ್‌ನ ಸಿದ್ಧಾಂತ ಧಾರ್ಮಿಕ ರಾಜ್ಯದ ವಾದವನ್ನು ( ದೇವ ಪ್ರಭುತ್ವ) ಪ್ರತಿಪಾದಿಸಿತು. ಲೌಕಿಕ ಅಧಿಕಾರ ಧಾರ್ಮಿಕ ಅಧಿಕಾರದ ಹಿಡಿತದಲ್ಲಿರಬೇಕು. ಧಾರ್ಮಿಕ ರಾಜ್ಯದಲ್ಲಿ ಕಾನೂನು ಜಾರಿಗೊಳ್ಳುವುದು ದೇವರ ಕಾನೂನು. ಈ ದೇವರ ಕಾನೂನನ್ನೂ ಜಾರಿಗೊಳಿಸುವ ಅಧಿಕಾರವಿರುವುದು ಧಾರ್ಮಿಕ ನಿಯೋಗಕ್ಕೆ ಮಾತ್ರ. ಇದರ ಮುಖ್ಯ ಉದ್ದೇಶ ದೇವರ ರಾಜ್ಯವನ್ನು ಭೂಮಿಯ ಮೇಲೆ ಸ್ಥಾಪಿಸುವುದು.

ಅಗಸ್ಟಿನ್‌ನ 'The city of god' ಕ್ಯಾಥೊಲಕ್ ಇತಿಹಾಸ ಲೇಖನ ಕಲೆಯ ಮೇಲೆ ಪ್ರಕಟವಾದ ದಿನದಿಂದಲೂ ತನ್ನ ಪ್ರಭಾವ ಬೀರಿತು. ಅದು ಮದ್ಯಮಯುಗದ ಇತಿಹಾಸ ದರ್ಶನದ ಒಂದು ನಿಕರ ಹೇಳಿಕೆಯಾಗಿದೆ. ಈ ಸಿದ್ಧಾಂತ ದೇವರನ್ನು ಇತಿಹಾಸದಲ್ಲಿ ಸೇರಿಸಿಕೊಂಡಿತು. ದೇವರೇ ಮಾನವನ ಎಲ್ಲ ಚಟುವಟಿಕೆಗಳ ಒಡೆಯ ಎಂದು ಸಾರಿತು. ಅಗಸ್ಟಿನ್‌ನ ತತ್ವ ಐತಿಹಾಸಿಕ ಕ್ರಿಯೆಯ ನ್ನು ಒಳ್ಳೆಯ ಹಾಗೂ ಕೆಟ್ಟ, ಸದ್ಗುಣ ಹಾಗೂ ದುರ್ಗುಣ, ದೈವ ಹಾಗೂ ಅಸುರ(ಭೂತ) ಅಲೌಕಿಕ ಮತ್ತು ಲೌಕಿಕಗಳ ನಡುವಣ ಹೋರಾಟವನ್ನು ಪ್ರತಿನಿಧಿಸುತ್ತದೆ. ಮಾನವನ ಅದೃಷ್ಟಹಾಗೂ ದುರಾದೃಷ್ಟಗಳು ತಮಾಷೆಯ ವಿಷಯಗಳಾಗಿಲ್ಲ. ಇದು

ದೈವೇಚ್ಛೆಯಿಂದ ನಡೆಯತಕ್ಕ ಕ್ರಿಯೆಗಳು. ಇತಿಹಾಸವು ಪ್ರಾಪಂಚಿಕ ಮತ್ತು ಶಾಶ್ವತವಾಗಿ ಆಸಕ್ತಿಯುಳ್ಳ ಘಟನೆಗಳ ಬಗ್ಗೆ ವಿವರಣೆ ನೀಡುತ್ತದೆ. ಇದು ರಾಜ್ಯ ಮತ್ತು ಚರ್ಚ್‌ನ ನಡುವಣ ನಿಕಟಸಂಬಂಧವನ್ನು ವಿವರಿಸುವಂತಹ ಗ್ರಂಥವಾಗಿದೆ. ಏಕೆಂದರೆ ಕ್ರಿ.ಶ. 392ರಲ್ಲಿ ಒಂದನೆಯ ಥಿಯೋಡೊಸಿಯಸ್ ಕ್ರೈಸ್ತಧರ್ಮ ಸಾಮ್ರಾಜ್ಯದ ಧರ್ಮಎಂದು ಆಜ್ಞೆ ಹೊರಡಿಸಿದನು. ಅತ್ಯಂತ ಪ್ರಭಾವಿ ಪೋಪರುಗಳಾದ ಏಳನೆಯಗ್ರಿಗೋರಿ, ಮೂರನೆಯ ಅಲೆಕ್ಸಾಂಡರ್ ಮತ್ತು ಮೂರನೆಯ ಇನ್ನೊಸೆಂಟ್ ಅವರು ಅಗಸ್ಟಿನ್ ಸಿದ್ಧಾಂತದ ಮೇಲೆ ಸಾಮ್ರಾಜ್ಯಕ್ಕಿಂತ ಚರ್ಚ್‌ಗೆ ಪರಮಾಧಿಕಾರ ಇದೆ ಎಂದು ತಮ್ಮ ಹಕ್ಕನ್ನು ಚಲಾಯಿಸಿದರು. ಭೂನಗರದಲ್ಲಿ ರಾಜರುಗಳು ಅಧಿಕಾರದ ಲಾಲಾಸೆಯಿಂದ ರಕ್ತಪಾತವನ್ನು ಹರಿಸುವುದರ ಮೂಲಕ ಆಡಳಿತ ನಡೆಸುತ್ತಾರೆ. ಆದರೆ ಸ್ವರ್ಗನಗರ ದೇವರ ಇಚ್ಛೆಯಂತೆ ಬದುಕುವ ವ್ಯಕ್ತಿಗಳಿಂದ ತುಂಬಿದೆ. ಸಂತ ಅಗಸ್ಟಿನ್ ರೋಮ್ ಸಾಮ್ರಾಜ್ಯದ ಉತ್ತರಾದಿಕಾರಿಯಾಗಿ ಚರ್ಚ್‌ನ ಸಾಮ್ರಾಜ್ಯ ಸ್ಥಾಪನೆಯಾಯಿತೆಂಬುದಾಗಿ ತಿಳಿಸಿಕೊಟ್ಟನು.

ಮಾನವನ ಕೆಲಸ ಕುರುಡು, ಈ ಕುರುಡುತನಕ್ಕೆ ಕಾರಣ ಮಾನವನು ಮೂಲತಃಮಾಡಿದ ಪಾಪ. ಮಾನವನ ಸಾಧನೆಗಳು ಮಾನವನ ಇಷ್ಟ ಮತ್ತು ಬುದ್ಧಿವಂತಿಕೆಯಿಂದ ನಡೆದ ಘಟನೆಗಳಲ್ಲ. ಅವುಗಳು ದೇವರ ದಯೆಯಿಂದ ನಡೆದ ಮಾನವನ ಸಾಧನೆಗಳು ದೇವರು ಮಾನವನ ಕೆಲಸ ಕಾರ್ಯಗಳನ್ನು ರೂಪಿಸುತ್ತಾನೆ ಮತ್ತು ಅವುಗಳು ನಡೆಯುವಂತೆ ಮಾಡುವವನೆ ದೇವರು ಮಾನವನ ಚಟುವಟಿಕೆಗಳ ಕೇಂದ್ರಕಾರ್ಯಸ್ಥಾನದೇವರು ಎಂಬ ಇತಿಹಾಸದ ಅಭಿಪ್ರಾಯವನ್ನು ಪವಿತ್ರ ಇತಿಹಾಸ ಅಥವಾ ಮೋಕ್ಷ ಇತಿಹಾಸ ಎಂಬ ವಿವಿಧ ಹೆಸರುಗಳಿಂದ ಕರೆಯಲಾಗಿದೆ. ಇಂತಹ ಅಭಿಪ್ರಾಯ ಅಥವಾ ನಿಲುವನ್ನು ಹೊಂದಿದ್ದ ಇತಿಹಾಸ ಮಧ್ಯಯುಗದಲ್ಲಿ ಯೂರೋಪಿನಾದ್ಯಂತ ಪ್ರಚಾರದಲ್ಲಿತ್ತು.

ಸಂತ ಅಗಸ್ಟಿನ್‌ನ ಮತ್ತೊಂದು ಗ್ರಂಥ ಕನ್‌ಫೆಸನ್ಸ್. ಈ ಗ್ರಂಥದಲ್ಲಿ ಕ್ರೈಸ್ತಧರ್ಮಕ್ಕೆ ಮತಾಂತರ ಹೊಂದುವುದಕ್ಕೆ ಮುಂಚೆ ಹೇಗೆ ದುಷ್ಟಶಕ್ತಿಗಳು ತೊಂದರೆ ಕೊಟ್ಟವು ಎಂಬುದನ್ನು ವಿವರಿಸಿರುವನು. ದೇವರು ದೈವ್ವದ ಮೂಲಕ ಆಸೆಗಳನ್ನು ಸೃಷ್ಟಿಸುತ್ತಾನೆ ಅಂತಿಮವಾಗಿ ಇಂತಹ ಸಂಕಷ್ಟಗಳ ವಿರುದ್ಧ ಹೋರಾಡುವ ಶಕ್ತಿಯನ್ನು ದೇವರೆ ನೀಡುತ್ತಾನೆ. ಈತನು ಬೈಬಲ್‌ನ ಸಿದ್ಧಾಂತದ ಆಧಾರದ ಮೇಲೆ ಇತಿಹಾಸದಲ್ಲಿ ಏಳು ವಿಭಾಗಗಳನ್ನಾಗಿ ವಿಂಗಡಿಸಿರುವನು.

1. ಆಡಮ್‌ನಿಂದ ಹಿಡಿದು ಡೆಲೂಜ್‌ವರೆಗೆ (ಪ್ರಳಯದ ವರೆಗೆ)

2. ಡೆಲೂಜ್‌ನಿಂದ ಅಬ್ರಹಾಂ ಕಾಲದವರೆಗೆ

3. ಅಬ್ರಾಹಾಂನ ಕಾಲದಿಂದ ಡೇವಿಡ್‌ವರೆಗೆ

4. ಡೇವಿಡ್‌ನ ಕಾಲದಲ್ಲಿ ಬ್ಯಾಬಿಲೋನಿಯನ್ ನನ್ನು ಯೆಹೂದಿಗಳು ವಶಪಡಿಸಿಕೊಳ್ಳುವವರೆಗೆ

5. ಈ ವಶಪಡಿಸಿಕೊಳ್ಳುವಿಕೆಯಿಂದ ಕ್ರಿಸ್ತನ ಜನನದವರೆಗೆ

6. ವರ್ತಮಾನಕಾಲ

7. ದೇವರು ನಮಗೆ ವಿಶ್ರಾಂತಿಯನ್ನು ನೀಡುವ ಕಾಲ

ಸಂತ ಅಗಸ್ಟಿನ್ ರೋಮನ್ ಸಾಮ್ರಾಜ್ಯ ಅವನತಿ ಹೊಂದುತ್ತಿದ್ದಂತಹ ಕಾಲದಲ್ಲಿ ಜೀವಿಸಿದ್ದನು. ಈ ವೇಳೆಯಲ್ಲಿ ಕ್ರೈಸ್ತಧರ್ಮವು ಒಂದು ಪ್ರಬಲ ಧರ್ಮವಾಗಿ ಹೊರಹೊಮ್ಮಿತು. ಅವನ ಸಿದ್ಧಾಂತವು ಧರ್ಮಶಾಸ್ತ್ರ, ತತ್ವಜ್ಞಾನ, ರಾಜಕೀಯ ತತ್ವಗಳು ಮತ್ತು ಆರ್ಥಿಕ ಪರಿಕಲ್ಪನೆಗಳ ಮೇಲೆ ಹೆಚ್ಚು ಪ್ರಭಾವ ಬೀರಿತು. ಇತರ ಚರ್ಚ್ ಇತಿಹಾಸಕಾರರು ಪಗಾನ್ ಇತಿಹಾಸ

ಲೆಖನವು 5ನೇ ಶತಮಾನದಲ್ಲಿ ಕಣ್ಮರೆಯಾಯಿತು. ಅನಂತರ ಸುಮಾರು ಎಂಟುನೂರು ವರ್ಷಗಳ ಕಾಲ ಚರ್ಚ್ ಇತಿಹಾಸಕಾರರು ಇತಿಹಾಸ ಬರವಣಿಗೆಯ ಕೆಲಸವನ್ನು ಮಾಡಿದರು.

### *14.5.1 ಗ್ರಿಗೋರಿ (ಕ್ರಿ.ಶ.539-594)*

ಗ್ರಿಗೋರಿಯವರ Historia Regum Frankorum ( ಫ್ರಾಂಕರ ದೊರೆಗಳ ಇತಿಹಾಸ) ಫ್ರಾಂಕರ ಪ್ರಾರಂಭಿಕ ಇತಿಹಾಸಕ್ಕೆ ಸಂಬಂಧಿಸಿದಂತೆ ಇರುವುದು ಒಂದೇ ಗ್ರಂಥ. ಈ ಗ್ರಂಥವು ಚರ್ಚಿಗೆ ಸಂಬಂಧಿಸಿದಂತೆ ಬೇಕಾದಷ್ಟು ಮಾಹಿತಿಯನ್ನು ಹೊಂದಿದೆ. ಅಂದಿನ ಆಡಳಿತದವಿಷಯ, ಸಂಸ್ಥೆಗಳು, ಸಾಮಾಜಿಕ ವರ್ಗಗಗಳು, ಆರ್ಥಿಕ ಪರಿಸ್ಥಿತಿ, ವಿದ್ಯಾಭ್ಯಾಸ ಮತ್ತು ಇನ್ನೂ ಅನೇಕ ವಿಷಯಗಳಿಂದ ಕೂಡಿದೆ.

### *14.5.2 ಬೆಡೆ (ಕ್ರಿ.ಶ.673-735)*

ಬೆಡೆಯು ಇಂಗ್ಲೆಂಡಿನ ಪ್ರಸಿದ್ದ ವಿದ್ವಾಂಸ. ವ್ಯಾಕರಣ, ಗಣಿತ ಮತ್ತು ವಿಜ್ಞಾನಕ್ಕೆ ಸಂಬಂಧಿಸಿದ ಹಾಗೆ ಅನೇಕ ಗ್ರಂಥಗಳನ್ನು ರಚಿಸಿದನು. ಆದರೆ ಅವನ ಬಹು ಅಮೂಲ್ಯ ಕೃತಿ ಎಂದರೆ the Historia ecclesiastica ( Eccelesiastical History of the english nation). ಇದು ಲ್ಯಾಟಿನ್ ಭಾಷೆಯಲ್ಲಿದೆ. ಈ ಕೃತಿಯು ನಂತರದ ಇತಿಹಾಸ ಕಾರರಿಗೆ ಸ್ಫೂರ್ತಿಯನ್ನು ನೀಡಿತು. J.W. ಥಾಂಪ್ಸನ್ ಅವರು ಪ್ರಾರಂಭಿಕ ಮದ್ಯಕಾಲೀನ ಸಾಹಿತ್ಯದಲ್ಲಿ ಈ ಗ್ರಂಥಕ್ಕೆ ವಿಷಯದ ಗಾಢತೆ, ವಿಸ್ತಾರ ಮತ್ತು ಸಾಹಿತ್ಯದ ಶೈಲಿಯ ದೃಷ್ಟಿಯಿಂದ ಅದಕ್ಕೆ ಸರಿಸಮಾನಾದ ಯಾವ ಕೃತಿಯೂ ಇಲ್ಲ ಎಂದು ವಿವರಿಸಿದ್ದಾರೆ. ಕ್ರಿ.ಶ. 597ರಿಂದ ಕ್ರಿ.ಶ,731ರವರೆಗಿನ ಘಟನಾವಳಿಗಳನ್ನು ಅರಿತು ಕೊಳ್ಳಲು ಇದೊಂದೆ ಇರತಕ್ಕ ಅಮೂಲ್ಯ ಆಕರ. ಈ ಗ್ರಂಥವನ್ನೇ ಉಪಯೋಗಿಸಿಕೊಂಡು ನಂತರದ ಇತಿಹಾಸಕಾರರು ತಮ್ಮ ಗ್ರಂಥಗಳನ್ನು ರಚಿಸಿದ್ದಾರೆ. ಈತನನ್ನು ಇಂಗ್ಲಿಷ್ಇತಿಹಾಸದ ಪಿತಾಮಹನೆಂದು ಕರೆಯಲಾಗಿದೆ. ಈತನ ಬರವಣಿಗೆಯು ಯೂರೋಪಿನ ಬರಹಗಾರರ ಮೇಲೆ ಮದ್ಯ ಯುಗದಲ್ಲಿ ಸಾಕಷ್ಟು ಪ್ರಭಾವವನ್ನು ಬೀರಿತು.

## 14.6 ಚರಿತ್ರೆಗಳು ಮತ್ತು ವೃತ್ತಾಂತಗಳು

ಚರಿತ್ರೆ ಮತ್ತು ವೃತ್ತಾಂತಗಳು ಕೇವಲ ಘಟನಾವಳಿಗಳ ಪಟ್ಟಿಗಳಿಂದ ಕೂಡಿವೆ. ಇವುಗಳು ಸಮಕಾಲೀನ ಘಟನಾವಳಿಗಳ ಬಗ್ಗೆ ಸರಿಯಾದ ಮಾಹಿತಿಯನ್ನು ನೀಡುತ್ತವೆ. ಆದರೆ ಇತಿಹಾಸ ತಿಳಿಸುವಂತೆ ಗತಕಾಲದ ಘಟನಾವಳಿಗಳ ಬಗ್ಗೆ ಏನನ್ನೂ ವಿವರಿಸುವುದಿಲ್ಲ. ಚರಿತ್ರೆಗಳು ಮತ್ತು ವೃತ್ತಾಂತಗಳು ಘಟನಾವಳಿಗಳ ದಾಖಲೆಗಳು. ಈ ಘಟನಾವಳಿಗಳಿಗೆ ಸಂಬಂಧಿಸಿದಂತೆ ಕಾರಣಗಳನ್ನಾಗಲಿ ಅಥವಾ ಪರಿಣಾಮಗಳನ್ನಾಗಲಿ ಅಥವಾ ವಿವರಣೆಗಳನ್ನಾಗಲಿ ನೀಡುವುದಿಲ್ಲ ಕ್ರೈಸ್ತಮಠಗಳು ವಾರ್ಷಿಕ ಘಟನಾವಳಿಗಳನ್ನು ದಾಖಲಿಸಿಡುವ ಪದ್ದತಿಯನ್ನು ಬೆಳೆಸಿಕೊಂಡರು. ಚಾರ್ಲ್‌ಮೆಂಜ್ ಇದರ ಉಪಯುಕ್ತತೆಯನ್ನು ಅರಿತು ಪ್ರತಿಯೊಂದು ಕ್ರೈಸ್ತಮಠವು ಕೂಡ ಅಲ್ಲಿ ನಡೆಯತಕ್ಕ ಕಾರ್ಯಚಟುವಟಿಕೆಗಳನ್ನು ಕುರಿತು ದಾಖಲಿಸುವಂತೆ ಆಜ್ಞಾಪಿಸಿದನು. ಮಠಗಳಿಗೆ ಸಂಬಂಧಿಸಿದಂತೆ ಅತ್ಯಂತ ಹಳೆಯ ಲಿಂಡಿಸ್‌ಪಯಿನ್ ಚರಿತ್ರೆಗಳು. ರಿಚಾರ್ಡ್‌ಹೊವೆಡನ್‌ರಚಿಸಿದ The Annals of english History, ಚರಿತ್ರೆಗೆ ಸಂಬಂಧಿಸಿದಂತೆ ಉತ್ತಮ ಉದಾಹರಣೆಯಾಗಿದೆ. ಮೊಟ್ಟಮೊದಲನೆಯ ವೃತ್ತಾಂತNorthu mrbian chronicle ಆದರೆ ಇದು ಕಳೆದು ಹೋಗಿದೆ. ಅನಂತರ ಬರುವುದು ಆಂಗ್ಲೊ- ಸಾಕ್ಸನ್ ವೃತ್ತಾಂತ. The chrnicle of Saint Albons1250 ಮತ್ತು 1422ರ ನಡುವಣ ಘಟನಾವಳಿಗಳ ಬಗ್ಗೆ ವಿವರಿಸುತ್ತದೆ.

## 14.7 ಚರ್ಚ್‌ಇತಿಹಾಸಲೇಖನ ಕಲೆಯ ಲಕ್ಷಣಗಳು

1. ಚರ್ಚ್ ಇತಿಹಾಸ ಲೇಖನ ಕಲೆಯ ಲಕ್ಷಣಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದು. ಚರ್ಚ್ ಇತಿಹಾಸಲೇಖನ ಕಲೆಯು ಪವಿತ್ರ ಬರವಣಿಗೆಗಳಿಗೆ ಸಂಬಂಧಿಸಿದಂತೆ ಒಂದು ಹೊಸ ವಿಧಾನವನ್ನು ಅನುಸರಿಸಿತು. ಅದು ಮುಖ್ಯವಾಗಿ ಮಾನವನಿಗೆ ಸಂಬಂದಿಸಿದಂತೆ ದೇವರ ಪಾತ್ರವನ್ನು ವಿವರಿಸುವ ಉದ್ದೇಶವನ್ನು ಹೊಂದಿತ್ತು.

2. ಚರ್ಚ್‌ಇತಿಹಾಸಲೇಖನ ಕಲೆಯ ಮಾರ್ಗವಿಷಯಾಧಾರಿತ (subjective) ಅದು ಮುಖ್ಯವಾಗಿ ಧರ್ಮದ ನಂಬಿಕೆಯ ಆಧಾರವಾಗಿತ್ತೆವಿನಃ ತರ್ಕ ಅಥವಾ ಕಾರಣದ ಆಧಾರದ ಮೇಲಲ್ಲ. ದೇವರ ಕಾನೂನು ಪ್ರತಿಯೊಂದನ್ನು ನಿರ್ಧರಿಸಿತು. ಕ್ರೈಸ್ತಧರ್ಮದ ಕಥೆಗಳನ್ನು ಪರಿಶೀಲಿಸುವಂತಿರಲಿಲ್ಲ. ಅದರ ಬದಲು ಅವುಗಳಲ್ಲಿ ನಂಬಿಕೆ ಇಡಬೇಕು. ಆದ್ದರಿಂದ ಚರ್ಚ್ ಇತಿಹಾಸಕಾರರು ತಮ್ಮದೇ ಆದ ಮಾರ್ಗವನ್ನು ಅನುಸರಿಸಿ ಧಾರ್ಮಿಕ ಸಾಹಿತ್ಯಕ್ಕೆ ಅನುಕೂಲವಾಗುವಂತೆ ಪರಿಸ್ಥಿತಿಗಳ ವಿವರಣೆ ನೀಡಿದರು. ಅವರು ರೂಪಕ ಕಥೆಗಳನ್ನು ಬರೆದರು. ಇವುಗಳು ಯಾವುದೇ ವಿಮರ್ಶೆಗೆ ಒಳಪಡುವಂತಿರಲಿಲ್ಲ. ಎಷ್ಟರಮಟ್ಟಿಗೆ City of God ಎಂಬ ಪದವೇ ಒಂದು ರೂಪಕ ಕಥೆಯಾಗಿದೆ ಎಂದರೆ ದೇವರ ಇಚ್ಛೆಯನ್ನು ಮಾನವತೆ ಒಪ್ಪಿಕೊಳ್ಳುವುದೇ ಶಾಂತಿ, ಏಳಿಗೆ, ಸಂತೋಷ ಮತ್ತು ಸಂಪತ್ತಿಗೆ ಮೂಲ ಕಾರಣ

3. ಚರ್ಚ್‌ನ ಕಾಲಗಣನೆ ಹೆಚ್ಚಿನ ದೋಷದಿಂದ ಕೂಡಿರುವುದೇ ಚರ್ಚ್‌ನ ಇತಿಹಾಸಲೇಖನ ಕಲೆಯ ಮತ್ತೊಂದು ದೋಷ. ಚರ್ಚ್ ಐತಿಹಾಸಿಕ ಕಾಲವನ್ನು ಐದು ವಿಭಾಗಗಳನ್ನಾಗಿ ಮಾಡಿದೆ.

4. ಕ್ರೈಸ್ತಪಾದ್ರಿಗಳು ಕ್ರೈಸ್ತಧರ್ಮವೇ ರೋಮನ್ ಸಾಮ್ರಾಜ್ಯದ ಪತನಕ್ಕೆ ಕಾರಣವೆಂದು ಇತಿಹಾಸ ರಚಿಸಿದ್ದಾರೆ. (Paganism) ಅ ಸಂಸ್ಕೃತ (ಕ್ಷುದ್ರಧರ್ಮ) ರಾಗಬಹುದು. ಯಹೂದಿಗಳಾಗಬಹುದು ಅಥವಾ ಕ್ರೈಸ್ತರಾಗಬಹುದು ಎಲ್ಲರ ಹಣೆಬರಹ ದೇವರನ್ನು ಅವಲಂಬಿಸಿದೆ.

5. ಚರ್ಚ್ ಇತಿಹಾಸಲೇಖನಕಲೆ ಧಾರ್ಮಿಕ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚು ಮಹತ್ವನೀಡಿತು. ಇತಿಹಾಸವು ಪವಾಡಗಳು ಮತ್ತು ಸಂತರ ಬಗ್ಗೆ ವಿವರಿಸುತ್ತದೆ. ಲೌಕಿಕ ಇತಿಹಾಸದ ಬಗ್ಗೆ ಪ್ರಮುಖವಾಗಿ ರೋಮನ್ ಸಾಮ್ರಾಜ್ಯದ ಬಗ್ಗೆ ವಿವರಿಸುತ್ತದೆ. ಆದರೆ ಧಾರ್ಮಿಕ ಮತ್ತು ಲೌಕಿಕ ಇತಿಹಾಸ ಕ್ರೈಸ್ತ ಸನ್ಯಾಸಿಗಳ ಏಕಸ್ವಾಮ್ಯರಚನೆಯು ಅಧಿಕಾರವಾಗಿತ್ತು.

6. ಚರ್ಚ್ ಇತಿಹಾಸಲೇಖನ ಕಲೆಯ ಮತ್ತೊಂದು ಪ್ರಮುಖ ಅಂಶವೆಂದರೆ ಚರಿತ್ರೆ ಮತ್ತು ವೃತ್ತಾತಗಳಿಗೆ ಪ್ರಾಮುಖ್ಯತೆ ನೀಡಿದುದು.

ಕ್ರೈಸ್ತಧರ್ಮವು ಇತಿಹಾಸಲೇಖನ ಕಲೆಯ ಬೆಳವಣಿಗೆಗೆ ಸಂಬಂಧಿಸಿದಂತೆ ಒಂದು ಹೊಸ ಮನೋಭಾವನೆಯನ್ನು ಉಂಟುಮಾಡಿತು. ಕ್ರೈಸ್ತಧರ್ಮದ ಪ್ರಭಾವದಿಂದಾಗಿ ಮದ್ಯಕಾಲೀನ ಇತಿಹಾಸಲೇಖನ ಕಲೆ ದೈವಪ್ರಭುತ್ವ ಸಿದ್ಧಾಂತಕ್ಕೊಳಪಟ್ಟಿತು. ಅದು ಮಾನವನ ಚಟುವಟಿಕೆಗಳಲ್ಲಿ ದೇವರ ಮಹಿಮೆ ಕೆಲಸ ನಿರ್ವಹಿಸುವುದನ್ನು ಸಾರಿತು. ಇತಿಹಾಸಲೇಖನ ಕಲೆಯ ಕೇಂದ್ರ ಬಿಂದು ದೈವಿಕ ಭಾವನೆಯಾಯಿತು. ಅದು ಭವಿಷ್ಯದಲ್ಲಿ ನಡೆಯಬಹುದಾದ ಚರಿತ್ರೆಯ ಗತಿಯನ್ನು ಸೂಚಿಸಲು ಪ್ರಯತ್ನಿಸಿತು. ಇತಿಹಾಸ ದೇವರಮಯ ಎಂಬ ಯೋಜನೆ ಸೃಷ್ಟಿಯಾಯಿತು. ಈ ರೀತಿಯಾಗಿ ಇತಿಹಾಸವು ದೇವ ಪ್ರಭುತ್ವ ಸಿದ್ಧಾಂತದ ಪ್ರಭಾವದಿಂದಾಗಿ ವಿಮರ್ಶೆಯನ್ನು ಸಂಪೂರ್ಣವಾಗಿ ಕಡೆಗಣಿಸಿತು.

## 14.8 ಸಂಕ್ಷಿಪ್ತ ಅವಲೋಕನ

ಮಧ್ಯಯುಗದಲ್ಲಿ ಕ್ರೈಸ್ತ ಸನ್ಯಾಸಿಗಳು ಕ್ರೈಸ್ತಧರ್ಮದ ಇತಿಹಾಸವನ್ನು ರಚಿಸಿದರು. ಆದರೆ ಅವರ ವಿವರಣೆಯು ದೈವ ಪ್ರಭುತ್ವದಿಂದ ಕೂಡಿದೆ. ದೂರದೃಷ್ಟವಶಾತ್ ಕ್ರೈಸ್ತಧರ್ಮದ ಉದಯವನ್ನು ಪ್ರಾರಂಭದಲ್ಲಿ ರೋಮನ್ ಸಾಮ್ರಾಜ್ಯ ಕಡೆಗಣಿಸಿತು. ಆದರೆ ಯಾವಾಗ ಅದುಇಡೀ ರೋಮನ್ ಸಾಮ್ರಾಜ್ಯದಲ್ಲಿ ಹರಡಲು ಪ್ರಾರಂಭಿಸಿತೊ ಆಗ ಚಕ್ರವತಿಗಳು ಅದರ ಹರಡುವಿಕೆಯನ್ನು ತಡೆಗಟ್ಟಲು ಸಾಧ್ಯವಿಲ್ಲ ಎಂದು ಅರಿತರು. ಆದ್ದರಿಂದ ಕ್ರಿ.ಶ. 313ರ್ಲಲಿ ಕಾನಂಸ್ಟೆಂಟೈನ್ ಹೊಸ ಕ್ರೈಸ್ತಧರ್ಮಕ್ಕೆ ಮಾನ್ಯತೆ ನೀಡಿದನು. ಚರ್ಚ್ಇತಿಹಾಸ ಲೇಖನ ಕಲೆಯು ಕ್ರೈಸ್ತಧರ್ಮದ ಉದಯದಿಂದ ಪ್ರಾರಂಭವಾಗಲಿಲ್ಲ. ಅದು ಪ್ರಚಾರಗೊಂಡ ಮುನ್ನೂರು ವರ್ಷಗಳ ನಂತರ ಕ್ರೈಸ್ತಧರ್ಮದ ಇತಿಹಾಸ ರಚನೆ ಪ್ರಾರಂಭವಾಯಿತು. ಅನೇಕ ಕ್ರೈಸ್ತವಿದ್ವಾಂಸರು ಚರ್ಚ್‌ನ ಇತಿಹಾಸ ಬರೆಯಲು ತೀರ್ಮಾನಿಸಿದರು. ಈ ದಿಸೆಯಲ್ಲಿ ಅತ್ಯಂತ ಪ್ರಮುಖ ವಿದ್ವಾಂಸನೆಂದರೆ ಯುಸೆಬಿಯಸ್. ಈತನು ಅನೇಕ ಗ್ರಂಥಗಳನ್ನು ರಚಿಸಿದನು. ಇವುಗಳಲ್ಲಿ ಪ್ರಮುಖವಾದುದು Historia eccelesiastia. ಆದರೆ ಚರ್ಚ್ ಇತಿಹಾಸ ಲೇಖನಕಲೆಯಲ್ಲಿ ಅತ್ಯಂತ ಪ್ರಖ್ಯಾತ ವಿದ್ವಾಂಸನೆಂದರೆ ಸಂತ ಅಗಸ್ಟಿನ್. confessions ಮತ್ತು City of God ಎಂಬ ಎರಡು ಪ್ರಮುಖ ಗ್ರಂಥಗಳು ಅವನಿಂದ ರಚಿಸಲ್ಪಟ್ಟಿವೆ.ಪ್ರಪಂಚದಲ್ಲೇ The city of God ಅತ್ಯಂತ ಪ್ರಮುಖ ಗ್ರಂಥಗಳಲ್ಲೊಂದಾಗಿದೆ. ಅವನು ಈ ಗ್ರಂಥದಲ್ಲಿ ದೇವನಗರ ಹಾಗೂ ಭೂನಗರ ಎಂಬ ಎರಡು ನಗರಗಳ ಹೋಲಿಕೆ ಮಾಡಿದ್ದಾನೆ. ಕ್ರೈಸ್ತ ಇತಿಹಾಸಲೇಖನೆಯ ಕಲೆಯ ಮೇಲೆ ಸಂಪೂರ್ಣವಾಗಿ The City of God ತನ್ನ ಪ್ರಭಾವ ಬೀರಿತು. ಇನ್ನುಳಿದ ಚರ್ಚ್ ಇತಿಹಾಸ ಕಾರರೆಂದರೆ ಗ್ರಿಗೋರಿ ಮತ್ತು ಬೆಡೆ. ಚರಿತ್ರೆಗಳು ಮತ್ತು ವೃತ್ತಾಂತಗಳು ಕೂಡ ಈ ಕಾಲದಲ್ಲಿ ರಚಿಸಲ್ಪಟ್ಟವು . ಅಂತಿಮವಾಗಿ ವಿವರಿಸುವುದೇನೆಂದರೆ ಚರ್ಚ್ ಇತಿಹಾಸಲೇಖನ ಕಲೆಯು ಹಲವು ಪ್ರಮುಖ ಲಕ್ಷಣಗಳಿಂದ ಕೂಡಿದೆ. ಪವಿತ್ರ ಬರವಣಿಗೆಗೋಸ್ಕರ ಚರ್ಚ್ ತನ್ನದೇ ಆದ ವಿಧಾನವನ್ನು ರೂಪಿಸಿಕೊಂಡಿತು. ಲೌಕಿಕ ವಿಷಯಗಳಿಗೆ ಸಂಬಂಧಿಸಿದಂತೆ ಚರ್ಚ್ ಇತಿಹಾಸಕಾರರು ಹೆಚ್ಚಿನ ಮಹತ್ವ ನೀಡಲಿಲ್ಲ. ಮತ್ತೊಂದು ಅಂಶವೇನೆಂದರೆ ಅದು ವಿಷಯಾಧಾರಿತ (Subjective) ಅದು ಧರ್ಮದ ನಂಬಿಕೆಯ ಆಧಾರದ ಮೇಲೆ ನಿಂತಿದೆ. ಅದು ಯಾವುದೇ ಕಾರಣ ಅಥವಾ ತರ್ಕಕ್ಕೆ ಸಂಬಂದಿಸಿದುದಲ್ಲ. ಇತಿಹಾಸವು ದೇವ ಪ್ರಭುತ್ವದ ಪ್ರಭಾವಕ್ಕೊಳಗಾಯಿತು.

## 14.9 ಸ್ವಯಂ ಪರೀಕ್ಷೆಯ ಪ್ರಶ್ನೆಗಳು

1. ಇತಿಹಾಸ ಲೇಖನ ಕಲೆಗೆ ಚರ್ಚ್ ಇತಿಹಾಸಕಾರರ ಕೊಡುಗೆ[illegible] ವಿವರಿಸಿ.
2. ಇತಿಹಾಸ ಲೇಖನ ಕಲೆಯ ಬೆಳವಣಿಗೆಗೆ ಸಂತ ಅಗಸ್ಟಿನ್ [illegible]ಸಿ.

## 14.10 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

K. Rajayyan : History in Thiory and Method

B. Sheik Ali: History : Its Theory and Method

E. Sreedharan : A Text Book of Historiography

ಪ್ರೊ. ಶಿವಣ್ಣ

# ಘಟಕ-15

## ಅರಬ್ ಇತಿಹಾಸಲೇಖನ ಕಲೆ- ಇಬ್ನೆಖಾಲ್ದೂನ್

ರಚನೆ

15.0 ಉದ್ದೇಶಗಳು

15.1 ಪರಿಚಯ

15.2 ಅರಬ್ ಇತಿಹಾಸ ಲೇಖನ ಕಲೆಯ ಪ್ರಾರಂಭ

15.3 ಇಬ್ನೆಖಾಲ್ದೂನ್ ಕ್ರಿ.ಶ. 1336 - 1406

15.3.1 ಪ್ರಾರಂಭಿಕ ಜೀವನ

15.3.2 ಇಬ್ನೆಖಾಲ್ದೂನನ ತತ್ವಗಳ ಆಧಾರಗಳು

15.3.3 ಇತಿಹಾಸದ ಬಗ್ಗೆ ಇಬ್ನೆ ಖಾಲ್ದೂನನ ಮನೋಭಾವ

15.4 ಐತಿಹಾಸಿಕ ಬರವಣಿಗೆಯಲ್ಲಿ ಕಂಡು ಬರುವ ತಪ್ಪುಗಳ ಮೂಲಗಳು.(ಆಕರಗಳು)

15.5 ವಿಮರ್ಶೆ

15.6 ಶ್ರೇಷ್ಠ ಇತಿಹಾಸಕಾರನಾಗಿ ಇಬ್ನೆಖಾಲ್ದೂನ

15.7 ಸಂಕ್ಷಿಪ್ತ ಅವಲೋಕನ

15.8 ಸ್ವಂತ ಅದ್ಯಯನಕ್ಕೆ ಪ್ರಶ್ನೆಗಳು

15.9 ಹೆಚ್ಚಿನ ಅದ್ಯಯನಕ್ಕೆ ಗ್ರಂಥಗಳು

## 15.0 ಉದ್ದೇಶಗಳು

ಈ ಘಟಕವನ್ನು ಅಧ್ಯಯನ ಮಾಡಿದ ನಂತರ ಈ ಕೆಳಕಂಡ ಅಂಶಗಳನ್ನು ತಿಳಿದುಕೊಳ್ಳುವಿರಿ.

* ಅರಬ್ ಇತಿಹಾಸ ಲೇಖನ ಕಲೆಯ ಪ್ರಮುಖ ಲಕ್ಷಣಗಳು
* ಅರಬ್ ಇತಿಹಾಸ ಲೇಖನ ಕಲೆಯ ಪ್ರಾರಂಭ ಮತ್ತು ಇಬ್ನೆಖಾಲ್ದೂನ್‌ನ ಗಿಂತ ಮೊದಲು ಇದ್ದ ಇತಿಹಾಸಕಾರರು
* ಇಬ್ನೆಖಾಲ್ದೂನನು ತನ್ನ ಹಿಂದಿನ ಇತಿಹಾಸಕಾರರಿಂದ ಪ್ರಭಾವಿತನಾಗಿದ್ದಾನೆಯೇ ?
* ಸಾರ್ವತ್ರಿಕ ಇತಿಹಾಸವನ್ನು ರಚಿಸಲು ಇಬ್ನೆಕಾಲ್ದೂನನ ಪ್ರಾರಂಭದ ಪ್ರಯತ್ನ
* ಅವನ ಗ್ರಂಥದ ಬಹು ಮುಖ್ಯ ಭಾಗವಾದ 'ಪ್ರೊಲೆಗೊಮೆನ'
* ಇತಿಹಾಸವು ಸಂಸ್ಕೃತಿ ಮತ್ತು ನಾಗರೀಕತೆಗಳ ವಿಜ್ಞಾನ ಎಂಬ ಇಬ್ನೆಖಾಲ್ದೂನನ ವಿಶ್ಲೇಷಣೆ
* ಇತಿಹಾಸದ ಬಗ್ಗೆ ಆತನ ಸಾಮಾಜಿಕ ದೃಷ್ಟಿ
* ರಾಜ್ಯ ರಾಜಕೀಯ ಅಧಿಕಾರದ ಮೂಲ ಎಂಬ ಸಿದ್ಧಾಂತ.
* ಅರ್ಥಶಾಸ್ತ್ರಜ್ಞನಾಗಿ ಇಬ್ನೆಖಾಲ್ದೂನ್
* ಐತಿಹಾಸಿಕ ಬರವಣಿಗೆಯಲ್ಲಿ ಕಂಡುಬರುವತಪ್ಪುಗಳ ಮೂಲಗಳು
* ಸಂಸ್ಕೃತಿಯ ಶ್ರೇಷ್ಠ ಇತಿಹಾಸಕಾರ

## 15.1 ಪರಿಚಯ

ಚರ್ಚ್ ಇತಿಹಾಸ ಲೇಖನ ಕಲೆಯಂತೆಯೇ ಅರಬ್ ಇತಿಹಾಸಲೇಖನ ಕಲೆಯೂ ಮದ್ಯಕಾಲೀನ ಇತಿಹಾಸ ಲೇಖನ ಕಲೆಯ ಅಧ್ಯಯನದಲ್ಲಿ ಪ್ರಮುಖ ಅಧ್ಯಾಯವಾಗಿದೆ. ಅರಬ್ಬರು ಗ್ರೀಕೋ- ರೋಮನ್ ಕಾಲದ ಇತಿಹಾಸ ಲೇಖನಕಲೆಗೂ ಮತ್ತು ಆಧುನಿಕ ಪ್ರಪಂಚದ ಇತಿಹಾಸ ಲೇಖನ ಕಲೆಗೂ ನಡುವಣ ಸರಪಳಿಯಾಗಿದ್ದಾರೆ. ಅರಬ್ ಇತಿಹಾಸ ಲೇಖನಕಾರರು ಗ್ರೀಕರ ಸಂಪ್ರದಾಯಗಳಿಂದ ಅನೇಕ ವಿಷಯಗಳನ್ನು ಕಲಿತರು. ಅರಬ್ ಇತಿಹಾಸ ಲೇಖನದಲ್ಲಿ ಇಬ್ನೆಖಾಲ್ದೂನನನ್ನು ಪ್ರಮುಖ ಇತಿಹಾಸಲೇಖನಕಾರನೆಂದು ಪರಿಗಣಿಸಲಾಗಿದೆ.

## 15.2 ಅರಬ್ ಇತಿಹಾಸ ಲೇಖನ ಕಲೆಯ ಪ್ರಾರಂಭ

ಅರಬರು ಇತಿಹಾಸ ಲೇಖನ ಕಲೆಗೆ ಗಣನೀಯ ಕೊಡುಗೆಯನ್ನು ನೀಡಿದ್ದಾರೆ. ರೋಮನ್ನರಂತೆ ಅರಬರು ಕೂಡ ದೊಡ್ಡದಾದ ಸಾಮ್ರಾಜ್ಯವನ್ನು ಕಟ್ಟಿದ್ದರು. ಅರಬ್ಬರು ಮುಖ್ಯವಾಗಿ ಇತಿಹಾಸಕ್ಕೆ 3 ಕೊಡುಗೆಗಳನ್ನು ನೀಡಿದ್ದಾರೆ.

ಮೊದಲನೆಯದಾಗಿ, ತಾವು ಬಳಸಿಕೊಂಡಿರುವ ಆಧಾರಗಳನ್ನು ಬಹಳ ಎಚ್ಚರಿಕೆಯಿಂದ ಹಾಗೂ ಪರಿಶ್ರಮದಿಂದ ಪರಿಶೀಲಿಸಿದ್ದಾರೆ. ಇದನ್ನು ಇಸ್ನಾದ್ ತಂತ್ರಾಂಶವೆಂದು ಕರೆಯಲಾಗಿದೆ.

ಎರಡನೆಯದಾಗಿ ಅವರ ಪ್ರವಾಸ ವರದಿಗಳು ಆನಂದದಾಯಕವಾಗಿದ್ದವು ಹಾಗೂ ಮಾಹಿತಿ ಪೂರ್ಣವಾಗಿದ್ದವು. ಅವರು ಪ್ರಯಾಣ ಮಾಡುವುದರಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದರು.

ಮೂರನೆಯದಾಗಿ ಇಬ್ನೆರುಷದ್ ಮತ್ತು ಇಬ್ನೆಖಾಲ್ದೂನ್‌ರಂತಹ ಶ್ರೇಷ್ಠ ತತ್ವಜ್ಞಾನಿಗಳನ್ನು ಸೃಷ್ಟಿಸಿದರು.

ಇಸ್ಲಾಂ ಪೂರ್ವದ ಇತಿಹಾಸವು ಕೇವಲ ಲಾವಣಿಗಳಿಂದ ಕೂಡಿತ್ತು. ಈ ಲಾವಣಿಗಳು ಅರ್ಧ ಐತಿಹ್ಯಗಳಿಂದಲೂ ಉಳಿದರ್ಧ ಇತಿಹಾಸದಿಂದಲೂ ಕೂಡಿತ್ತು. ಗ್ರೀಕರಂತೆಯೇ ಅರಬರ ಇತಿಹಾಸವು ಲಾವಣಿ, ಕಲ್ಪನೆ ಮತ್ತು ಐತಿಹ್ಯಗಳಿಂದ ಹೊರಹೊಮ್ಮಿತು. ಪ್ರಾರಂಭದ ಹಂತದಲ್ಲಿ ಇತಿಹಾಸಕಾರರು ಒಂಟೆಗಳ ಯುದ್ಧ ಸಿಪಿನ್ ಯುದ್ಧ ಮತ್ತು ಪ್ರವಾದಿಯ ಇತರ ದಂಡಯಾತ್ರೆಗಳನ್ನು ಕುರಿತದ್ದಾಗಿರುತ್ತಿತ್ತು. ಮಹಮದ್ ಐಸಾಕ್ ಅರಬ್ಬರ ಪ್ರಾರಂಭದ ಇತಿಹಾಸಕಾರನಾಗಿದ್ದನು. ಅರಬ್ಬರು ತಮ್ಮ ಲೇಖನ ಕಲೆಯಲ್ಲಿ ಇಸ್ನಾದ್ ಎಂಬ ತಾಂತ್ರಿಕತೆಯನ್ನು ತಪ್ಪದೇ ಪಾಲಿಸುತ್ತಿದ್ದರು. ಇಸ್ನಾದ್ ಎಂದರೆ ಅಧಿಕಾರ ಪತ್ರಗಳ ಸರಪಳಿಯಾಗಿದ್ದು ಅವುಗಳ ವಿವರಣೆಯನ್ನು ಮತ್ತೆ ಮತ್ತೆ ಪರಿಶೀಲಿಸುವುದಾಗಿತ್ತು. ಮೂಲ ಘಟನೆಗಳನ್ನು ವೀಕ್ಷಿಸಿದವರನ್ನು ಮತ್ತು ಘಟನೆಗಳಲ್ಲಿ ಭಾಗವಹಿಸಿದವರನ್ನು ಮತ್ತೆ ಮತ್ತೆ ಪರಿಶೀಲಿಸುವುದಾಗಿತ್ತು. ಅವರು ಕಾಲಗಣನೆಯಲ್ಲಿ ಹೆಚ್ಚಿನ ಆಸಕ್ತಿ ವಹಿಸಿದರು. ಮುಸ್ಲೀಂರ ಕಾಲಗಣನೆ ಕ್ರಿ.ಶ. 622ರಲ್ಲಿ ಪ್ರವಾದಿ ಮಹಮದನು ಮೆಕ್ಕದಿಂದ ವಲಸೆ ಹೋದಂದಿನಿಂದ ಪ್ರಾರಂಭವಾಗುತ್ತದೆ. ಇದನ್ನು ಹಿಜಿರಾ ಎಂದು ಕರೆಯುತ್ತಾರೆ ಇದರಿಂದ ಕಾಲಗಣನೆಯಲ್ಲಿ ಏಕತೆ ಮತ್ತು ಸರಳತೆಯನ್ನು ನೀಡಿದಂತಾಯಿತು.

ಅರಬರು ಘಟನೆಗಳನ್ನು ಕುರಿತು ದಾಖಲಿಸುವುದರಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸಿದರು. ಇಬ್ನೆಹಿಷಾಮ್ ಮಹಮದನನ್ನು ಕುರಿತು ಕ್ರಿ.ಶ. 828ರಲ್ಲಿ ಮೊದಲ ಆತ್ಮಕಥನವನ್ನು ಬರೆದನು. ಮುಸ್ಲಿಂ ಇತಿಹಾಸದ ಮೊದಲ ಕಾಲದಲ್ಲಿ ಮದೀನ ಕೇಂದ್ರವಾಗಿತ್ತು ಎರಡನೇ ಕಾಲದಲ್ಲಿ ಡಮಾಸ್ಕಸ್ ಮತ್ತು ಮೂರನೇ ಕಾಲದಲ್ಲಿ ಬಾಗ್ದಾದ್ ಮುಸ್ಲಿಂ ಇತಿಹಾಸದ ಕೇಂದ್ರಗಳಾಗಿದ್ದವು. ಕ್ರಿ.ಶ. 1258ರಲ್ಲಿ ಮಂಗೋಲರ ದಾಳಿಯಿಂದ ಖಿಲಾಫತ್ ನಾಶವಾಯಿತು. ಉಮ್ಮಯಡ್ಸ್‌ರ ಪತನ ಶುದ್ಧ ಅರೇಬಿಯನ್ ಕಾಲದ ಅಂತ್ಯವಾಗಿತ್ತು. ಅಬ್ಬಸಿಡರು ತಮ್ಮ ಅಧಿಕಾರವನ್ನು ಸ್ಥಾಪಿಸಿದ ನಂತರ ಮುಸ್ಲಿಮರ ಇತಿಹಾಸ ಲೇಖನ ಕಲೆಯು ಹೊಸ ರೂಪವನ್ನು ಪಡೆದುಕೊಂಡಿತ್ತು. ಈ ಕಾಲದಲ್ಲಿ ಅರಬ್‌ಇತಿಹಾಸ ಲೇಖನ ಕಲೆಯು ಪರ್ಷಿಯನ್ ಸಾಹಿತ್ಯದ ಶೈಲಿಯನ್ನು ಸಮ್ಮಿಳಿಸಿಕೊಂಡು ದೊಡ್ಡದಾಗಿ ಬೆಳೆಯಿತು. ಸನ್ಸೆಡ್ ದೊರೆಗಳ ಗ್ರಂಥಗಳನ್ನು ಅರೇಬಿಕ್ ಭಾಷೆಗೆ ತರ್ಜುಮೆ ಮಾಡಿದ್ದರಿಂದ ಅರಬರ ಐತಿಹಾಸಿಕ ಬರವಣಿಗೆಯಲ್ಲಿ ಹೊಸ ದೊಂದು ಚೈತನ್ಯ ಉಂಟಾಯಿತು. ಇಬ್ನೆಯಾಹ್ಯ ಇರಾಕ್‌ನ ಆಕ್ರಮಣದ ಇತಿಹಾಸ ಎಂಬ ಮುಖ್ಯ ಕೃತಿಯನ್ನು ಬರೆದನು.

ಎಂಟನೆಯ ಶತಮಾನದ ಅಂತ್ಯದ ದಶಕಗಳು ಮತ್ತು ಒಂಭತ್ತನೇ ಶತಮಾನದ ಪ್ರಾರಂಭದ ದಶಕಗಳು ಅಬ್ಬಾಸಿಡ್ ಇತಿಹಾಸ ಲೇಖನ ಕಲೆಯ ಬೆಳವಣಿಗೆಯಲ್ಲಿ ಪ್ರಮುಖ ಹಂತವಾಗಿತ್ತು. ವಾಖಿದಿ (ಕ್ರಿ.ಶ. 760 ರಿಂದ 837) ಎಂಬುವನು ಕಿತಾಬ್- ಉಲ್-ಮಗಜಿ ಎಂಬ ಕೃತಿಯನ್ನು ರಚಿಸಿದನು. ಇದರ ವಸ್ತು ಸೈನಿಕ ಇತಿಹಾಸ ಮತ್ತು ಇಸ್ಲಾಂಧರ್ಮದ ಹರಡುವಿಕೆಯನ್ನು ಕುರಿತದ್ದಾಗಿತ್ತು. ಅಲ್- ಮದಾಯಿನಿ ಎಂಬ ಮತ್ತೊಬ್ಬ ದೊಡ್ಡ ಇತಿಹಾಸಕಾರನು ಸಿರಿಯಾ ಮೆಸಪಟೋಮಿಯ, ಆರ್ಮೇನಿಯ, ಈಜಿಪ್ಟ್, ಸೈಪ್ರೆಸ್, ಆಫ್ರಿಕ, ಸ್ಪೈನ್ ಮತ್ತು ನುಬಿಯಾಗಳ ಮೇಲಿನ ಆಕ್ರಮಣಗಳನ್ನು ಕುರಿತು ಬರೆದನು. ಇದೇ ಕಾಲದಲ್ಲಿ ಅಲ್-ಫಕ್‌ರಿ ಎಂಬ ಮತ್ತೊಬ್ಬ ಇತಿಹಾಸ ಕಾರನಿದ್ದನು ಈ ಹೊಸ ಐತಿಹಾಸಿಕ ಪ್ರವೃತ್ತಿ ಬೆಳೆಯಲು ಅಬ್ಬಾಸಿದ್ದರ ಉದಯ ಮತ್ತು ಪರ್ಷಿಯನ್‌ರ ಪ್ರಭುತ್ವಗಳು ಕಾರಣವಾದವು

## 15.3 ಇಬ್ನೆಖಾಲ್ದೂನ್ ಕ್ರಿ.ಶ. 1332 ರಿಂದ 1406

ಮಧ್ಯಕಾಲೀನ ಯುಗದ ಅತ್ಯಂತ ಪ್ರಸಿದ್ಧ ಇತಿಹಾಸಕಾರ ಇಬ್ನೆಕಾಲ್ದೂನ್: ಈತನು ಇತಿಹಾಸ ವಿಜ್ಞಾನದ ಸ್ಥಾಪಕ. ಇಬ್ನೆಖಾಲ್ದೂನನು ನ್ಯಾಯಾದೀಶನೂ, ಇತಿಹಾಸಕಾರನೂ ಮತ್ತು ಪಂಡಿತನೂ ಆಗಿದ್ದನು. ಈತನು 1332ರ ಮೇ27ರಂದು ಟ್ಯುನಿಸ್‌ನಲ್ಲಿ ಜನ್ಮತಾಳಿದನು. ಗ್ರೀಸ್‌ಗೆ ಥೂಸಿಡೈಡೀಸ್ ಇದ್ದಂತೆ ರೋಂನಲ್ಲಿ ಟಾಸಿಟಸ್ ಇದ್ದಂತೆ, ಅರಬ್ಬರ ಪ್ರಪಂಚಕ್ಕೆ ಇಬ್ನೆಖಾಲ್ದೂನ್ ಶ್ರೇಷ್ಠ ಇತಿಹಾಸಕಾರನಾಗಿದ್ದಾನೆ.

### *15.3.1 ಪ್ರಾರಂಭಿಕ ಜೀವನ*

ಇಬ್ನೆಖಾಲ್ದೂನನ ಪೂರ್ವಜರು ಟ್ಯುನಿಸ್‌ನ ಹಫಸಿದ್ ದೊರೆಗಳ ಆಸ್ಥಾನದಲ್ಲಿ ಆಸ್ಥಾನಿಕರಾಗಿಯು, ವಿದ್ವಾಂಸರಾಗಿಯೂ ಇದ್ದರು. ಆತನ ತಂದೆ ಮತ್ತು ತಾತಂದಿರಿಗಿದ್ದ ಭೌದ್ದಿಕ ಮತ್ತು ಕಲಿಯುವ ಆಸಕ್ತಿ ಇಬ್ನೆಖಾಲ್ದೂನನ ಮೇಲೆ ಮಹತ್ತರವಾದ ಪ್ರಭಾವವನ್ನು ಬೀರಿದವು.

ಖಾಲ್ದೂನನ ವಿದ್ಯಾಭ್ಯಾಸವು ಸಂಪ್ರದಾಯ ರೀತಿಯಲ್ಲಿಯೇ ಪ್ರಾರಂಭವಾಯಿತು. ಅವನ ತಂದೆಯೇ ಅವನಿಗೆ ಮೊದಲ ಗುರುವಾಗಿದ್ದರು. ತನ್ನ ತಂದೆ ಹಾಗೂ ಗುರುಗಳ ಸಹಾಯದಿಂದ ಕುರಾನನ್ನು ಸಂಪೂರ್ಣವಾಗಿ ಮನನ ಮಾಡಿಕೊಂಡಿದ್ದನು. ಸಂಪ್ರದಾಯ ( ಹದೀಸ್) ಗಳನ್ನು ನ್ಯಾಯಶಾಸ್ತ್ರ, ತಾರ್ಕಿಕ, ಧರ್ಮಶಾಸ್ತ್ರ, ಅರಾಬಿಕ್, ವ್ಯಾಕರಣ ಮತ್ತು ಪದ್ಯ ಇವೆಲ್ಲವುಗಳ ಬಗ್ಗೆ ವಿಶೇಷ ಜ್ಞಾನವನ್ನು ಪಡೆದನು. ನಂತರ ಅರಬರ ಆಧ್ಯಾತ್ಮಿಕ ಶಾಸ್ತ್ರವನ್ನು ಮುರಿಷ್ ಅರಿಸ್ಟಾಟಲ್ ತತ್ವಶಾಸ್ತ್ರದ ಅಧ್ಯಯನದಲ್ಲಿ ಅತೀವವಾದ ಆಸಕ್ತಿಯನ್ನು ಹೊಂದಿದ್ದನು. ಕ್ರಿ.ಶ. 1352ರಲ್ಲಿ ತನ್ನ 20ನೇ ವಯಸ್ಸಿನಲ್ಲಿ ಟುನಿಸ್ ಸರ್ಕಾರದ ಸೇವೆಯಲ್ಲಿ ಸೇರಿದನು. ಆದರೆ ಅವನಿಗೆ ಟ್ಯೂನಿಸ್‌ನಲ್ಲಿ ವಾಸವಾಗಿರಲು ಆಸಕ್ತಿಯಿರಲಿಲ್ಲ. ಈ ಕಾರಣದಿಂದ ತನ್ನ ಮನೆಯನ್ನು ಬಿಟ್ಟು ಅಬ್‌ಇನಾನ್- ಅಟ್- ಫೆಸ್‌ನಲ್ಲಿದ್ದ ಮರಿನಿಡ್ ಸುಲ್ತಾನನ ಸೇವೆಗೆ ಸೇರಿದನು. ಇಲ್ಲಿಗೆ ಅವನ ವಿದ್ಯಾಬ್ಯಾಸವು ಪೂರ್ಣವಾಯಿತು.

ಇಬ್ನೆಖಾಲ್ದೂನನ ಜೀವನ ಹಲವಾರು ಏರುಪೇರುಗಳಿಂದ ಕೂಡಿತ್ತು. ಕ್ರಿ.ಶ. 1375ರಲ್ಲಿ ಅವನು ತನ್ನ ಕುಟುಂಬದೊಂದಿಗೆ ಔಲಾದ್-ಅರಿಫ್ ಎಂಬ ಶಕ್ತಿಯುತವಾದ ಗುಡ್ಡಗಾಡಿನ ಜನರಲ್ಲಿ ಆಶ್ರಯ ಪಡೆದನು. ಗುಡ್ಡಗಾಡಿನ ಪ್ರಮುಖನು ಇವನನ್ನು ಕಲಾತ್ -ಇಬನ್- ಸಲ್‌ಮ್ಮನಲ್ಲಿ ರಕ್ಷಣೆಯಲ್ಲಿ ಇಟ್ಟನು. ಇದು ಓರನ್ ಪ್ರಾಂತ್ಯದಲ್ಲಿ ಒಂದು ಕೋಟೆಯಿಂದ ಸುತ್ತುವರಿದ ಹಳ್ಳಿಯಾಗಿತ್ತು. ಅಲ್ಲಿ ಇಬ್ನೆಖಾಲ್ದೂನ ಮೂರು ವರ್ಷಗಳನ್ನು ಕಳೆದನು. ಅಲ್ಲಿ ಕಿತಾಬ್ -ಅಲ್-ಇಬಾರ್ ಎಂಬ ಪ್ರಪಂಚದ ಇತಿಹಾಸವನ್ನು ಬರೆದನು. ಕ್ರಿ.ಶ. 1377ರಲ್ಲಿ ಈ ಗ್ರಂಥಕ್ಕೆ ಪೀಠಿಕೆಯನ್ನು ಮಾತ್ರ ಬರೆದಿದ್ದೇನೆ ಎಂದು ಹೇಳಿರುವನು. ಈತನು ಸಾರ್ವತ್ರಿಕ ಇತಿಹಾಸವನ್ನು ಬರೆಯಲು ನಾಲ್ಕು ವರ್ಷಗಳನ್ನು ತೆಗೆದುಕೊಂಡನು.

ಕಲಾತ್ - ಇಬ್ನೆ-ಸಲ್‌ಮ್ಮನಲ್ಲಿ ಹತ್ತು ವರ್ಷಗಳನ್ನು ಕಳೆದು ಇಬ್ನೆ ಖಾಲ್ದೂನನು ಟ್ಯೂನಿಸ್‌ಗೆ ಹೋದನು. ಟ್ಯೂನಿಸ್‌ನ ಸುಲ್ತಾನನಲ್ಲಿ ಸೇವೆಗೆ ಸೇರಿದನು. ಕೆಲವು ವರ್ಷಗಳ ನಂತರ ಮೆಕ್ಕಾಗೆ ಹೋಗಲು ಸುಲ್ತಾನನ ಅನುಮತಿ ಪಡೆದನು. ಅವನು ಕೈರೊದಲ್ಲಿ ಪ್ರವಾಸ ಮಾಡಿ ಅಲ್ಲಿಯ ರಾಜನಾದ ಮಾಲಿಕ್-ಅಲ್- ಜಾಹಿರನನ್ನು ಭೇಟಿಮಾಡಿದನು. ಕೈರೊ ನಗರದ ಒಂದು ಕಾಲೇಜಿನಲ್ಲಿ ನ್ಯಾಯಶಾಸ್ತ್ರದ ಪ್ರಾಧ್ಯಾಪಕನಾಗಿ ನೇಮಕವಾದನು. ನಂತರ ಅದೇ ನಗರದ ಮುಖ್ಯ ಖಾಜಿಯಾನು. ಹೀಗೆ ಈಜಿಪ್ಟ್‌ನ ಅನೇಕ ಸ್ಥಳಗಳಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದನು. 1387ರಲ್ಲಿ ಈತನು ಮೆಕ್ಕಾಗೆ ತೆರಳಿ 8 ತಿಂಗಳ ನಂತರ ಕೈರೊ ನಗರಕ್ಕೆ ಹಿಂದಿರುಗಿದನು. ನಂತರ ಡೆಮಾಸ್ಕಸ್ ಜೆರೂಸಲೆಮ್, ಬೆತ್ಲೆಹ್ಯಾಮ್ ಮುಂತಾದ ನಗರಗಳಿಗೆ ಭೇಟಿ ನೀಡಿದನು ಮತ್ತು ಅನೇಕ ಶೈಕ್ಷಣಿಕ ಹುದ್ದೆಗಳನ್ನು ಅಲಂಕರಿಸಿದನು. ಇಬ್ನೆಖಾಲ್ದೂನನು ಕ್ರಿ. ಶ. 1406 ಮಾರ್ಚ್ 17ರಂದು ಕೈರೊನಗರದಲ್ಲಿ ಮೃತಪಟ್ಟನು.

## 15.3.2 ಇಬ್ನೆಖಾಲ್ದೂನನ ತತ್ವಗಳ ಆಕರಗಳು

ಇಬ್ನೆಖಾಲ್ದೂನನು ವಿವಿಧ ವಿದ್ವಾಂಸರ ತತ್ವಗಳಿಂದ ಪ್ರಭಾವಿತಗೊಂಡಿದ್ದಾನೆ. ಅವರಲ್ಲಿ ಅಲ್-ತಬರ, ಅಲ್-ಮಸೂದಿ, ಮತ್ತು ಅಲ್-ವಕೀ, ಎಂಬ ಮೂವರು ಮುಸ್ಲಿಂಇತಿಹಾಸಕಾರರು ಪ್ರಮುಖರು. ಇವರಲ್ಲದೆ ಇನ್ನೂ ಕೆಲವು ವಿದ್ವಾಂಸರ ತತ್ವಗಳಿಂದ ಇಬ್ನೆಖಾಲ್ದೂನನು ಪ್ರಭಾವಿತನಾಗಿರುವುದು ಕಂಡು ಬರುತ್ತದೆ. ರಾಜಕೀಯ ಚಿಂತಕರಾದ ಅಲ್- ತುರ್ತೂಷಿ, ಇಬನ್‌ಅಲ್ -ಮುಕಾಫ, ಮತ್ತು ಅಲ್-ಮಾವರ್ದಿಅವರ ತತ್ವಗಳಿಂದ ಪ್ರಭಾವಿತನಾಗಿ ಅವರ ತತ್ವಗಳನ್ನು ಇಬ್ನೆಖಾಲ್ದೂನನು ಉಲ್ಲೇಖಿಸಿದ್ದಾರೆ. ಇಬ್ನೆಖಾಲ್ದೂನನು ಸ್ಪಾನಿಷ್ ಕೃತಿಯಿಂದ ಪ್ರಭಾವಿತನಾಗಿದ್ದನೆಂದು ಅದನ್ನು ನಂತರ ಹಾಳುಮಾಡಲಾಯಿತೆಂದು ಹೇಳಲಾಗಿದೆ. ಆದರೆ ಈತನು ಯಾವುದೇ ಪ್ರಭಾವಕ್ಕೆ ಒಳಗಾದನೆಂಬುದಕ್ಕೆ ಸರಿಯಾದ ಮಾಹಿತಿ ದೊರಕುವುದಿಲ್ಲ. ಇಸ್ಲಾಂ ರಾಜ್ಯದಲ್ಲಿ ಈತನಿಗೆ ಯಾವ ಪೂರ್ವಜರೂ ಇರಲಿಲ್ಲ, ಉತ್ತರಾಧಿಕಾರಿಯೂ ಇರಲಿಲ್ಲ. ಅವನ ಯಾವುದೇ ತೀರ್ಪು ಅವನ ಸ್ವಂತ ಅಧ್ಯಯನದಿಂದ ಹೊರ ಹೊಮ್ಮಿರುವುದಾಗಿದೆ.

## 15.3.3 ಇತಿಹಾಸದ ಬಗ್ಗೆ ಇಬ್ನೆಖಾಲ್ದೂನನ ಚಿಂತನೆ

ಈಗ ಕರೆಯಲಾಗುತ್ತಿರುವ ' ಮುಖದ್ದಿಮ' ಇಬ್ನೆಖಾಲ್ದೂನನ ಸಾರ್ವತ್ರಿಕ ಇತಿಹಾಸದ ಒಂದನೇ ಭಾಗದ ಮೂಲ ಮುನ್ನುಡಿಯಾಗಿದೆ. ಇದು ಮಾನವನ ರಾಜಕೀಯ ಮತ್ತು ಸಾಮಾಜಿಕ ಸಂಘಟನೆಗಳಲ್ಲಿ ಬದಲಾದ ನಮೂನೆಯನ್ನು ಹುಡುಕಲು ನಡೆಸುವ ಇತಿಹಾಸಕಾರನ ಮೊದಲ ಪ್ರಯತ್ನವಾಗಿದೆ.

ಇಬ್ನೆಖಲ್ದೂನನ ಈ ಕೃತಿಯು ಸಂಪ್ರದಾಯಬದ್ಧ ಇತಿಹಾಸ ಲೇಖನ ಕಲೆಗಿಂತ ಸಂಪೂರ್ಣವಾಗಿ ವಿಭಿನ್ನವಾಗಿದೆ. ಅದು ಕೇವಲ ಘಟನೆಗಳ ನಿರೂಪಣೆ ಮಾತ್ರವಲ್ಲದೆ ತರ್ಕಸಮ್ಮತವಾಗಿಯೂ ಇದೆ. ಐತಿಹಾಸಿಕ ದತ್ತಾಂಶಗಳನ್ನು ವಿಮರ್ಶೆಮಾಡದೆ ಒಪ್ಪಿಕೊಳ್ಳಬೇಕೆಂಬುದನ್ನು ಈ ಕೃತಿ ನಿರಾಕರಿಸಿದೆ. ಇಬ್ನೆಖಾಲ್ದೂನನು ತನ್ನ ಇತಿಹಾಸದ ಬರವಣಿಗೆಯಲ್ಲಿ ಅಳವಡಿಸಿಕೊಂಡಂತಹ ವೈಜ್ಞಾನಿಕ ಮಾರ್ಗ ಆ ಕಾಲದಲ್ಲಿ ಯಾರೂ ಯೋಚನೆ ಮಾಡಿದ್ದಿರಲಾರರು. ಆತನು ವಿಷಯಗಳಿಗೆ ಹೊಸ ವಿವರಣೆಯನ್ನೇ ಕೊಟ್ಟಿದ್ದಾನೆ.

ಈತನ ಕೃತಿಯಲ್ಲಿ ಬಹುಮುಖ್ಯವಾದ ಅದ್ಯಾಯವಾದ ' ಮುಖದ್ದಿಮಾ' ದಲ್ಲಿ ಐತಿಹಾಸಿಕ ವಿಷಯಗಳ ಸ್ವರೂಪವನ್ನು ವಿವರಿಸಿದ್ದಾನೆ. ಅಲ್ಲದೆ ಐತಿಹಾಸಿಕ ವಿಷಯಗಳ ಸಂಬಂಧಗಳು, ವಿವಿಧತೆಗಳು, ಸಮಸ್ಯೆಗಳು, ನಿಖರತೆಗಳು, ಈ ಎಲ್ಲ ವಿಷಯಗಳ ಬಗ್ಗೆ ಕೂಲಂಕುಷವಾಗಿ ತಿಳಿಸಿದ್ದಾನೆ. ಆತನು ಮಾನವನ ಜೀವನ, ಸಮಾಜಗಳ ಉದಯ ಅವುಗಳ ಬೆಳವಣಿಗೆ ಮತ್ತು ಅವನತಿಯನ್ನು ಕುರಿತು ತಿಳಿಸಿದ್ದಾನೆ. ಮುಂದುವರಿದು ಭೌಗೋಳಿಕ ಅಂಶಗಳು, ಸಾಮಾಜಿಕ ಬದಲಾವಣೆಯ ಸೂತ್ರಗಳು ಮತ್ತು ರಾಜಕೀಯ ಭದ್ರತೆಯ ಬಗ್ಗೆ ವಿಮರ್ಶಾತ್ಮಕವಾಗಿ ವಿಶ್ಲೇಷಿಸಿದ್ದಾನೆ.

ಇಬ್ನೆಖಾಲ್ದೂನನ ಬಹುಮುಖ್ಯವಾದ ಕೊಡುಗೆಯೆಂದರೆ ಇತಿಹಾಸವನ್ನು ವಿಜ್ಞಾನವೆಂದು ವಿಶ್ಲೇಷಣೆ ಮಾಡಿದ್ದು. ಈತನು ಇತಿಹಾಸವು ಕೇವಲ ಘಟನೆಗಳ ಅಧ್ಯಯನವಲ್ಲ ಎಂಬ ತೀರ್ಮಾನಕ್ಕೆ ಬಂದನು. ಇತಿಹಾಸವು ಮಾನವ ಮತ್ತು ಸಮಾಜದ ಮದ್ಯೆ ನಡೆದ ಘಟನೆಗಳು, ಅವುಗಳ ಅರ್ಥಗಳು ಮತ್ತು ಅವುಗಳ ಅಮೂಲ್ಯತೆಯ ಅಧ್ಯಯನವಾಗಿದೆ ಎಂದು ಹೇಳಿದ್ದಾನೆ. ಈ ಕಾರಣಗಳಿಂದ ಇತಿಹಾಸಕಾರನಿಗೆ ಕೆಲವು ಉಪಕರಣಗಳು ಬೇಕಾಗುತ್ತವೆ. ಈ ಉಪಕರಣಗಳಲ್ಲಿ ಪ್ರಕೃತಿಯ ಜ್ಞಾನ ಮತ್ತು ಘಟನೆಗಳ ಯತಾರ್ಥತೆಗೆ ಸಂಬಂಧಿಸಿದ ಕಾರಣಗಳು ಬಹಳ ಮುಖ್ಯವಾದವು.

ಈತನು ಪ್ರತಿಪಾದಿಸಿದ ಹೊಸ ವಿಜ್ಞಾನ ಕೆಲವು ಸಮಸ್ಯೆಗಳನ್ನು ಕುರಿತಂತೆ ಪ್ರಾಮುಖ್ಯತೆಯನ್ನು ಪಡೆಯಿತು. ಮೊದಲನೆಯದಾಗಿ ಪರಿಸರದ ಅಂಶ, ಜನಜೀವನ, ವಾಯುಗುಣ, ಸಸ್ಯವರ್ಗ, ಭೂಮಿಯ ಫಲವತ್ತತೆ ಇವುಗಳ ಆಧಾರದ ಮೇಲೆ ಮನುಷ್ಯನು ತನ್ನ ಜೀವನವನ್ನು ರೂಪಿಸಿಕೊಳ್ಳುತ್ತಾನೆ. ಇದು ಖಂಡಿತವಾಗಿಯೂ ಐತಿಹಾಸಿಕ ಘಟನೆಗಳ ಮೇಲೆ ಪ್ರಭಾವ ಬೀರುತ್ತವೆ. ಎರಡನೆಯದಾಗಿ ಯುಗಯುಗಾಂತರಗಳಿಂದ ನಡೆದು ಬಂದ ಸಮಾಜದ ಮೂಲ ಮತ್ತು ಬೆಳವಣಿಗೆಯನ್ನು ಮತ್ತು ಇಂದಿನ ಸಮಾಜದ ಮೇಲೆ ಅದರ ಪ್ರಭಾವವನ್ನು ಚರ್ಚಿಸಿದ್ದಾನೆ. ಮೂರನೆಯದಾಗಿ ಮನೋವೈಜ್ಞಾನಿಕ ವಿಷಯಗಳು ಸಾಮಾಜಿಕ ಅಭ್ಯಾಸಗಳನ್ನು ನಿರ್ಧರಿಸುತ್ತವೆ ಎಂದು ಹೇಳಿದ್ದಾನೆ.

ಇಬ್ನೆಖಾಲ್ದೂನನ ಪ್ರಕಾರ ಸಾಂಸ್ಕೃತಿಕ ವಿಜ್ಞಾನ ಜ್ಞಾನದ ಮೂರು ಶಾಖೆಗಳ ಮಿಶ್ರಣ. ಪ್ರಕೃತಿಯಲ್ಲಿ ವಸ್ತುಗಳಿಗೆ ಸ್ವತಃ ಚಲನೆ ಇರುವುದಿಲ್ಲ. ಯಾವುದಾದರೂ ಹೊರಗಿನ ಶಕ್ತಿಗಳು ಚಲನೆಯುಂಟುಮಾಡಿದರೆ ಮಾತ್ರ ಅವು ಚಲಿಸಬಲ್ಲವು, ಆದರೆ ಸಂಸ್ಕೃತಿ ಚಲನಾತ್ಮಕವಾದದ್ದು. ಸಂಸ್ಕೃತಿಗೆ ಹುಟ್ಟು ಬೆಳವಣಿಗೆ ಮತ್ತು ಅವನತಿಗಳಿರುತ್ತವೆ. ಆದ್ದರಿಂದ ಸಂಸ್ಕೃತಿಯನ್ನು ಮಾನವ ಶರೀರಕ್ಕೆ ಹೋಲಿಸಬಹುದು.

ಇಬ್ನೆಖಾಲ್ದೂನನು ಸಂಸ್ಕೃತಿಯ ಹುಟ್ಟಿಗೆ ಸಂಬಂಧಿಸಿದಂತೆ ಕೆಲವು ಕಾರಣಗಳನ್ನು ಕೊಟ್ಟಿದ್ದಾನೆ. ಉಪದಾನ, ಸಂಕಲ್ಪ, ಕಾರ್ಯಸಾಧಕ ಹಾಗೂ ಪ್ರಯೋಜನ ಕಾರಣಗಳೆಂಬ ನಾಲ್ಕು ಕಾರಣಗಳನ್ನು ಹೇಳಿದ್ದಾನೆ. ಖಾಲ್ದೂನನು ಆಹಾರ, ವಸತಿ, ಮಣ್ಣು ಸಸ್ಯವರ್ಗ, ವಾಯುಗುಣ ಮುಂತಾದ ಎಲ್ಲ ಪ್ರಾಕೃತಿಕ ಲಕ್ಷಣಗಳು ಹಾಗೂ ಬೌತಿಕ ಅವಶ್ಯಕತೆಗಳನ್ನು ಉಪದಾನ ಕಾರಣಗಳೆಂದು ಹೇಳಿದ್ದಾನೆ. ಸಂಸ್ಕೃತಿಯ ಹುಟ್ಟಿಗೆ, ರಾಜ್ಯದ ಪಾತ್ರವೂ ಬಹಳ ಮುಖ್ಯವಾದುದೆಂದು ಹೇಳಿದ್ದಾನೆ. ನಗರ ಸಂಸ್ಥೆಗಳು ಸಂಸ್ಕೃತಿಯ ತಳಹದಿ ಎಂಬುದಾಗಿ ಅವನು ತಿಳಿಸುತ್ತಾನೆ. ಸಂಸ್ಕೃತಿಯು ರೂಪುಗೊಳ್ಳುವುದಕ್ಕೆ ರಾಜಕೀಯ ಮತ್ತು ಆರ್ಥಿಕ ಅಂಶಗಳ ಅನ್ಯೋನ್ಯ ಕ್ರಿಯೆಯೂ ಕಾರಣವಾಗುತ್ತದೆ. ಸಂಸ್ಕೃತಿಯು ಸಮಷ್ಟಿ ರಾಜ್ಯ ಅದರ ಭಾಗ. ರಾಜ್ಯವಿಲ್ಲದಿದ್ದರೆ ಸಂಸ್ಕೃತಿಯ ಕಲ್ಪನೆಯೂ ಸಾಧ್ಯವಿಲ್ಲ. ಇಬ್ನೆಖಾಲ್ದೂನನು ರಾಜ್ಯವನ್ನು ಮೂರು ಬಾಗಗಳಾಗಿ ವಿಂಗಡಿಸಿದ್ದಾನೆ. ಇಹಪರಗಳಲ್ಲಿ ಜನರ ಕಲ್ಯಾಣವನ್ನು ಸಾಧಿಸುವ ರಾಜ್ಯ, ದೊರೆಗಳ ಹಿತಾರ್ಥ ಸಾಧನೆಯಲ್ಲಿ ಮಾತ್ರ ಆಸಕ್ತಿಯನ್ನು ವಹಿಸುವ ರಾಜ್ಯ, ಜನರ ಒಳಿತಿಗಾಗಿ ಮಾತ್ರ ಇರುವ ರಾಜ್ಯ ಎಂಬುದಾಗಿ ಹೇಳುತ್ತಾನೆ. ಅವನು ಆಧುನಿಕ ಅರ್ಥದಲ್ಲಿ ಪ್ರಬಾಪ್ರಭುತ್ವವನ್ನು ವಿಶ್ಲೇಷಿಸಿಲ್ಲ ತಾನು ರೂಢಿಸಿರುವ ವ್ಯವಸ್ಥೆಯಲ್ಲಿ ಕಾನೂನಿನ

ಪ್ರಭುತ್ವವನ್ನು  ಸ್ಥಾಪಿಸುವ ಪ್ರಭುವಿಗೆ ನಾಲ್ಕು ಅರ್ಹತೆಗಳಿರಬೇಕು. ಪ್ರಭುವಿಗೆ ಕಾನೂನಿನ ಬಗ್ಗೆ ಸಂಪೂರ್ಣ ಅರಿವಿರಬೇಕು. ಕಾನೂನನ್ನು ಜಾರಿಗೆ ತರುವ ಸಾಮರ್ಥ್ಯವಿರಬೇಕು. ಅದನ್ನು ವಿವರಿಸುವ ಯೋಗ್ಯತೆ ಇರಬೇಕು ಮತ್ತು ಶಾರೀರಿಕ ಹಾಗೂ ಮಾನಸಿಕ ನ್ಯೂನತೆಗಳಿಂದ ಮುಕ್ತವಾಗಿರುವ ಆರೋಗ್ಯಕರ ಶರೀರ ಹಾಗೂ ಮನಸ್ಸು ಇರಬೇಕು ಎಂದು ಅಭಿಪ್ರಾಯ ಪಡುತ್ತಾನೆ. ಪ್ರಭುತ್ವದಲ್ಲಿಯೂ ಜನರ ಅವಶ್ಯಕತೆಗಳ ಪೂರೈಕೆ ಹಾಗೂ ಒಳಿತಿಗಾಗಿ ಇರುವ ಜನ ಹಿತವನ್ನೇ ಪ್ರಧಾನ ಗುರಿಯನ್ನಾಗಿಟ್ಟುಕೊಂಡ ನಿರಂಕುಶಾಧಿಪತ್ಯ ಮತ್ತು ಕೇವಲ ಆಳುವ ಪ್ರಭುವಿನ ಹಿತಾರ್ಥವನ್ನು ಏಕಮಾತ್ರ ಗುರಿಯಾಗುಳ್ಳ ಸ್ವೇಚ್ಛಾಚಾರಿ ನಿರಂಕುಶ ಪ್ರಭುತ್ವ ಎಂಬ ಎರಡು ಬಗೆಯನ್ನು ಗುರುತಿಸಿದ್ದಾನೆ. ಮೊದಲನೆಯದು ಜನಪ್ರಿಯ ಸರ್ಕಾರವೆಂದೂ ಎರಡನೆಯದು ಪ್ರಜಾಪೀಡಕ ಸರ್ಕಾರವೆಂದೂ ಅದು ಅತ್ಯಂತ ಕೀಳುಮಟ್ಟದೆಂದು ಅದರಿಂದ ಸಂಸ್ಕೃತಿಯು ವಿಕಾಸವಾಗುವುದಿಲ್ಲವೆಂದು ಹೇಳುತ್ತಾನೆ. ಕಾರ್ಯಸಾಧಕ ಕಾರಣವು ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳ ಬೆಳವಣಿಗೆಗೆ ಕಾರಣವಾಗುತ್ತವೆ ಎಂದು ಹೇಳಿದ್ದಾನೆ. ಈಜಿಪ್ಟ್ ಮತ್ತು ರೋಮ್‌ನ ಸಂಸ್ಕೃತಿಗಳು ಜನ್ಮತಾಳಿ ವಿಕಾಸಹೊಂದಿ ಕಣ್ಮರೆಯಾದವು ಭಾರತ , ಚೀನ ಅರೇಬಿಯಾದ ಸಂಸ್ಕೃತಿಗಳು ಬಹು ಪುರಾತನವಾದವುಗಳು ಹಾಗೂ ದೃಡವಾಗಿ ಮುಂದುವರಿಯುತ್ತಿವೆ. ಸಂಸ್ಕೃತಿಯ ಗುಣಮಟ್ಟ, ಪ್ರಮಾಣ ಹಾಗೂ  ಗತಿ  ಎಂಬ ಮೂರು ಹಂತಗಳನ್ನು ಹೊಂದಿದ್ದು, ಈ ಮೂರು ಪರಿಮಾಣದಲ್ಲೂ ಪರಿವರ್ತನೆ ಉಂಟಾಗುತ್ತದೆ. ಈ ಬದಲಾವಣೆಗಳು ಅವಶ್ಯಕತೆಯ ಪರಿಣಾಮವಾಗಿ ಉಂಟಾಗುತ್ತವೆ. ಇಬ್ನೆಖಾಲ್ದೂನನು ಮೂರು ವಿಧದ ಅವಶ್ಯಕತೆಗಳನ್ನು ಗುರುತಿಸಿದ್ದಾನೆ. ಸ್ವಾಭಾವಿಕ ಅವಶ್ಯಕತೆ, ನಿರುಪಾಧಿಕ ಅವಶ್ಯಕತೆ ಮತ್ತು ನಿರ್ಬಂಧದ ಕಾರಣ ಉಂಟಾಗುವ ಅವಶ್ಯಕತೆಗಳೆಂದು ಗುರುತಿಸಿದ್ದಾನೆ. ಸ್ವಾಭಾವಿಕ ಅವಶ್ಯಕತೆಯೆಂದರೆ ಸಂಸ್ಕೃತಿಯು ಜನ್ಮ ತಾಳಿ ವಿಕಾಸ ಹೊಂದುವುದು. ಐಕ್ಯತೆ ಸಾಮರಸ್ಯ, ಇವುಗಳಿಂದ ಸಂಸ್ಕೃತಿಯ ಬೆಳವಣಿಗೆ ಸಾಧ್ಯವಾಗುತ್ತದೆ. ರಾಜನ ಅಥವಾ ದೊರೆಯ ಅಸಹನೀಯ ದಬ್ಬಾಳಿಕೆಯು, ಜನರಲ್ಲಿ ಅಸಮಧಾನ ಉಂಟುಮಾಡಿ ದಂಗೆ ಏಳಲು ಪ್ರೇರಣೆ ಉಂಟು ಮಾಡುತ್ತದೆ. ಇದರಿಂದ ಸಂಸ್ಕೃತಿಯ ಅವನತಿ ಉಂಟಾಗುತ್ತದೆ. ಆದರೆ ಇಬ್ನೆಖಾಲ್ದೂನನು ಮಾರ್ಕ್ಸ್‌ನಂತೆ ಕೇವಲ ಅವಶ್ಯಕತೆಯೇ ಎಲ್ಲ ಮಾನವ ಚಟುವಟಿಕೆಗಳಿಗೆ ಮುಖ್ಯ ಪ್ರೇರಣೆ ಎಂಬುದನ್ನು ಒಪ್ಪಲಿಲ್ಲ. ಅಥವಾ ಯಾವುದೋ ಅನಿರೀಕ್ಷಿತ ಘಟನೆ ಅಥವಾ ಅಂಶ ಅವನತಿಗೆ ಕಾರಣ ಎನ್ನುವುದನ್ನು ಒಪ್ಪಲಿಲ್ಲ. ಖಾಲ್ದೂನನು ಮಧ್ಯಮ ವರ್ಗವನ್ನು ಅನುಸರಿಸಿ ಈ ಎರಡೂ ಅಂಶಗಳನ್ನು ಕುರಿತು ಸಮರ್ಪಕವಾದ ರೀತಿಯಲ್ಲಿ ವಿಚಾರ ಮಾಡಿದ್ದಾನೆ.

ಒಂದು ನಿರ್ಧಿಷ್ಟ ಸಂಸ್ಕೃತಿಯನ್ನು ಸೃಷ್ಟಿಸಿ ಬೆಳೆಸುವುದು ಸಮೈಕ್ಯತಾಭಾವ. ಈ ನಮ್ಮ ಸಮೈಕ್ಯತೆ ಎಲ್ಲಿಯವರೆಗೆ ಇರುವುದೊ ಅಲ್ಲಿಯವರೆಗೆ ಸಂಸ್ಕೃತಿಯು ಸುಭದ್ರವಾಗಿರುತ್ತದೆ. ಈ ಸಮೈಕ್ಯತೆಯು ವ್ಯಕ್ತಿಯನ್ನು ಮತ್ತು ರಾಜ್ಯವನ್ನು ಒಟ್ಟುಗೂಡಿಸುವ ಬಂಧನವಾಗುತ್ತದೆ. ಸಮೈಕ್ಯತೆಯ ಆಧಾರದ ಮೇಲೆ ಬೆಳವಣಿಗೆಯಾದ ರಾಜ್ಯವು ಸಂಸ್ಕೃತಿಯಲ್ಲಿ  ಪರಿಣಾಮಕಾರಿಯಾದ ಬದಲಾವಣೆಯನ್ನು ಉಂಟುಮಾಡುತ್ತದೆ. ಯಾವುದೇ ಘರ್ಷಣೆಯ ಸಂದರ್ಭದಲ್ಲಿ ವಿವಾದಗಳನ್ನು ಬಗೆಹರಿಸುವುದು ಈ ಸಮೈಕ್ಯತೆ. ಖಲ್ದೂನನು ಇಂತಹ ಮೂರು ಬಗೆಯ ಸಮೈಕ್ಯತೆಯನ್ನು ಗುರುತಿಸಿದ್ದಾನೆ. ಅವುಗಳು ಸ್ವಾಭಾವಿಕ ಸಮೈಕ್ಯತೆ, ತಾರ್ಕಿಕ ಸಮೈಕ್ಯತೆಗಳು ಮತ್ತು ಧಾರ್ಮಿಕ ಸಮೈಕ್ಯತೆ. ಸ್ವಾಭಾವಿಕ ಸಮೈಕ್ಯತೆಯು ಸಹಜ ಪ್ರವೃತ್ತಿಯಿಂದ ಅಥವಾ ನಿರ್ಬಂಧದಿಂದ ಉಂಟಾಗುತ್ತದೆ. ತಾರ್ಕಿಕ ಸಮೈಕ್ಯತೆಯು ಅವಶ್ಯಕತೆಯ ಆಧಾರದ ಮೇಲೆ ಪ್ರಜ್ಞಾಪೂರ್ವಕವಾದ ಪ್ರಯತ್ನದಿಂದ ಉಂಟಾಗುವಂತಹುದು. ಧಾರ್ಮಿಕ ಸಮೈಕ್ಯತೆ ತಾತ್ಕಾಲಿಕವಾದುದು. ಏಕೆಂದರೆ ಪ್ರಾರಂಭದಲ್ಲಿದ್ದ ಉತ್ಸಾಹ ಕ್ರಮೇಣ ಕಡಿಮೆಯಾಗುತ್ತಾ ಹೋಗುತ್ತದೆ.

ಸಂಸ್ಕೃತಿಯ ವಿಕಾಸಕ್ಕೆ ಇಬ್ನೆಖಾಲ್ದೂನನು ತನ್ನದೇ ಆದ ವಿಷಯವನ್ನು ವ್ಯಕ್ತಪಡಿಸಿದ್ದಾನೆ. ಸರ್ವರ ಸುಖ ಮತ್ತು ಹಿತರಕ್ಷಣೆಗಾಗಿ, ಮತ್ತು ಅವರ ಕಲ್ಯಾಣಕ್ಕಾಗಿ ನೈತಿಕ ತತ್ವಗಳು ಅವಶ್ಯಕವಾಗಿ ಬೇಕಾಗುತ್ತವೆ. ಈ ದೃಷ್ಟಿಯಿಂದ ಖಾಲ್ದೂನನು ಸಂಸ್ಕೃತಿಯ ಮೂರು ಅವಸ್ಥೆಗಳನ್ನು ಗುರುತಿಸಿದ್ದಾನೆ. ಕೇವಲ ಬದುಕುವುದು ಅಥವಾ ಅಳಿಯದೇ ಬದುಕುಳಿಯುವುದನ್ನೇ ಗುರಿಯನ್ನಾಗಿ ಉಳ್ಳದ್ದು ಆದಿವಾಸಿ ಸಂಸ್ಕೃತಿ. ತನ್ನನ್ನು ಮಾತ್ರವಲ್ಲದೇ ಜಗತ್ತಿನ ಎಲ್ಲರ ಸುಖವನ್ನು ಒಳಿತನ್ನು ಸಾಧಿಸುವುದೇ ಮುಖ್ಯಗುರಿಯೆಂದು ತಿಳಿಯುವುದು ವೈಚಾರಿಕ ಹಾಗೂ ನಾಗರೀಕ ಸಂಸ್ಕೃತಿ. ಎಲ್ಲಿ ನೆಮ್ಮದಿಗಾಗಿ ಸುಖಸಂತೋಷಗಳಿಗಾಗಿ, ದುಡಿಮೆಯ ಫಲವನ್ನು ಹಂಚಿಕೊಂಡಾಗ ಸರ್ವತೋಮುಖ ಅಭಿವೃದ್ಧಿಯ ಮೂಲಕ ಸರ್ವರ ಅಭಿವೃದ್ಧಿಯೂ ಆಗುತ್ತದೆ. ಆದರೆ ಅದು ಕೆಲವರಿಗೆ ಮಾತ್ರ ಸೀಮಿತವಾದರೆ ಸಂಸ್ಕೃತಿಯ ಅವನತಿ ಉಂಟಾಗುತ್ತದೆ. ಇಹಪರದಲ್ಲಿ ಮೇಲ್ಮೆಯನ್ನು ಗಳಿಸುವ ಧ್ಯೇಯವನ್ನು ಹೊಂದಿರುವುದು ಸುಸಂಸ್ಕೃತ ವ್ಯವಸ್ಥೆ. ಈ ವ್ಯವಸ್ಥೆಯು ದರ್ಶನವನ್ನೇ ಮಾರ್ಗದರ್ಶನವಾಗಿಟ್ಟುಕೊಂಡು ಜೀವನ ಸಂರಕ್ಷಣೆ, ಸಾಮಾಜಿಕ ಜೀವನದ

ಫಲಭೋಗ, ಅವುಗಳಿಂದ ವ್ಯಕ್ತಿ ಅತ್ಯುನ್ನತ ಮಟ್ಟವನ್ನು ತಲುಪುವುದು. ಇದು ತರ್ಕ ಅಥವಾ ವೈಚಾರಿಕತೆಗೆ ಪ್ರಧಾನವಾಗಿರುವುದರಿಂದ ಪರಿಪೂರ್ಣವಾದ ಸಾಮಾಜಿಕ ರಚನೆ ಉಂಟಾಗುತ್ತದೆ.

ಆದಿವಾಸಿ ಸಂಸ್ಕೃತಿಯಲ್ಲೂ ಸರ್ವರ ಹಿತದ ಉದ್ದೇಶ ಇದ್ದೇ ಇರುತ್ತದೆ. ನಾಗರೀಕ - ಸಂಸ್ಕೃತಿಯಲ್ಲಿ ತಾವು ಮಾಡಿದ ಕೆಲಸದಿಂದ ಫಲವನ್ನು ಅನುಭವಿಸುವ ಗುರಿ ಇರುತ್ತದೆ. ತಮ್ಮ ಸಂತೋಷವನ್ನು ಎಲ್ಲರಿಗೂ ಹಂಚಬೇಕೆಂಬ ತವಕವಿರುತ್ತದೆ. ಇದು ಕೇವಲ ಕೆಲವರಿಗೆ ಮಾತ್ರ ಇರುವುದಿಲ್ಲ. ಆದ್ದರಿಂದ ಸಂಸ್ಕೃತಿಯ ಬೆಳವಣಿಗೆಗೆ ಕಾರಣವಾಗುತ್ತದೆ. ಕಟ್ಟಳೆಯ ಸುಸಂಸ್ಕೃತ ವ್ಯವಸ್ಥೆಯಲ್ಲಿ ಸಜ್ಜನಿಕೆಯೆ ಅವರ ಮುಖ್ಯ ಗುರಿಯಾಗಿರುತ್ತದೆ. ಅಲ್ಲಿ ಸಾಕ್ಷಿಕಗುಣಗಳನ್ನು ಸ್ಥಾಪಿಸುವುದಲ್ಲದೆ ತತ್ವ ಶಾಸ್ತ್ರವು ಆಳ್ವಿಕೆಯ ಆದರ್ಶವಾಗುತ್ತದೆ. ಇದರ ಉದ್ದೇಶ ಜೀವನವನ್ನು ಸುರಕ್ಷಿತವಾಗಿಡುವುದು, ಸಾಮಾಜಿಕ ಜೀವನದ ಲಾಭವನ್ನು ಅನುಭವಿಸುವುದು ಮತ್ತು ವ್ಯಕ್ತಿಯು ಅತ್ಯುನ್ನತ ಮಟ್ಟವನ್ನು ತಲುಪುವುದಕ್ಕೆ ಸಹಾಯ ಮಾಡುವುದು.

ಹೀಗೆ ಇಬ್ನೆಖಾಲ್ದೂನ್ ವೈಜ್ಞಾನಿಕ ಇತಿಹಾಸವನ್ನು ಸಾಂಪ್ರದಾಯಿಕ ರಾಜಕೀಯ ದರ್ಶನಗಳಿಂದ ಒಗ್ಗೂಡಿಸಿ ಮಾನವೀಯತೆಯನ್ನು ಎತ್ತಿ ಹಿಡಿದಿದ್ದಾನೆ. ಖಾಲ್ದೂನನ ವೈಜ್ಞಾನಿಕ ಇತಿಹಾಸ ಆಧುನಿಕ ವಿಶ್ಲೇಷಣೆಯ ಗುರುತಾಗಿತ್ತು. ಇತಿಹಾಸದ ಎಲ್ಲ ಗುಣಗಳು ಮಾನವೀಯತೆಯ ಮೌಲ್ಯವನ್ನು ಯತಾವತ್ ಆಗಿ ಎತ್ತಿಹಿಡಿಯುವುದಾಗಿದೆ. ಆತನು ಬಹಳಷ್ಟು ಆಧುನಿಕ ಚಿಂತನಾಕಾರರ ಭಾವನೆಗಳನ್ನು ಮೊದಲೇ ತಿಳಿದಿದ್ದನು. ಅವರಿಗಿಂತ ಬಿನ್ನವಾಗಿದ್ದನು. ಇಬ್ನೆಖಾಲ್ದೂನನ ಪ್ರಕಾರ ಭೌತಿಕ ಭೌಗೋಳಿಕ, ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಸಂಗತಿಗಳು ಸಂಸ್ಕೃತಿಯ ಗುಣ ಮತ್ತು ಬೆಳವಣಿಗೆಯನ್ನು ನಿರ್ಧರಿಸುತ್ತವೆ. ಇಬ್ನೆಖಾಲ್ದೂನನು ಇತಿಹಾಸವು ಅನೇಕ ದೇಶಗಳ ಮತ್ತು ಬುಡಕಟ್ಟುಗಳಲ್ಲಿ ಬೆಳೆದಿರುವ ಒಂದು ಶಾಸ್ತ್ರೀಯ ವಿಷಯವಾಗಿದೆ ಎಂದಿದ್ದಾನೆ. ಇದು, ಜನಸಾಮಾನ್ಯರು, ಪ್ರತಿಷ್ಠಿತ ವ್ಯಕ್ತಿಗಳು, ಪಂಡಿತರು ಮತ್ತು ಪಾಮರರು ಅರ್ಥಮಾಡಿಕೊಳ್ಳುವಂತಹ ವಿಷಯವಾಗಿದೆ. ಮೇಲ್ನೋಟಕ್ಕೆ ರಾಜಕೀಯ ಘಟನೆಗಳು ಸಾಮ್ರಾಜ್ಯಗಳು ಗತಕಾಲದಲ್ಲಿ ಎಂದೋ ನಡೆದುಹೋದ ಘಟನೆಗಳನ್ನೂ ರಸವತ್ತಾಗಿ ಗಾದೆಗಳ ಸಹಿತ ಹಾಜರುಪಡಿಸುವುವು ಇತಿಹಾಸದ ಒಳಾರ್ಥವು ಅಸ್ಥಿತ್ವದಲ್ಲಿರುವ ಮೂಲಗಳು ಮತ್ತು ಘಟನೆಗಳು ಹೇಗೆ ಮತ್ತು ಏಕೆ ನಡೆದವು ಎಂಬುದರ ಬಗ್ಗೆ ಆಳವಾದ ಜ್ಞಾನವನ್ನು ಹೊಂದಿರುವುದಾಗಿದೆ. ಅದ್ದರಿಂದ ಇತಿಹಾಸವು ದರ್ಶನವಾಗಿದ್ದು ಅದರ ಒಂದು ಶಾಖೆಯಾಗುವುದಕ್ಕೆ ಅರ್ಹವಾಗಿದೆ.

## 15.4 ಐತಿಹಾಸಿಕ ಬರವಣಿಗೆಯಲ್ಲಿ ಕಂಡುಬರುವ ತಪ್ಪುಗಳ ಮೂಲಗಳು (Sources of error in historical writing)

ಐತಿಹಾಸಿಕ ಬರವಣಿಗೆಯಲ್ಲಿ ಕಂಡು ಬರುವ ತಪ್ಪುಗಳ ಆಕರಗಳನ್ನು ಕುರಿತು ಇಬ್ನೆಖಾಲ್ದೂನನು ವಿವರಣೆ ನೀಡಿರುವನು. ಎಲ್ಲಾ ದಾಖಲೆಗಳು ತಪ್ಪುಗಳಿಗೆ ಎಡೆಮಾಡಿಕೊಡುವ ಸಂಭವವುಂಟು

1) ಯಾವುದೋ ಒಂದು ಧರ್ಮ ಅಥವಾ ಅಭಿಪ್ರಾಯದ ಪಕ್ಷಪಾತ

2) ಒಬ್ಬನಿಗೆ ದೊರೆತ ಆಕರಗಳಲ್ಲಿ ಅಪಾರ ನಂಬಿಕೆ

3) ಬೇಕಾದ ಅಂಶವನ್ನು ಅರ್ಥಮಾಡಿಕೊಳ್ಳದೆ ವಿಫಲವಾಗುವುದು

4) ನಿಜಾಂಶದ ಬಗ್ಗೆ ತಪ್ಪು ನಂಬಿಕೆ

5) ಪರಿಸ್ಥಿತಿಯ ಅಸ್ಪಷ್ಟತೆ ಮತ್ತು ಸಂಕೀರ್ಣತೆಯಿಂದಾಗಿ ಘಟನೆಯನ್ನು ನಿಜವಾದ ಸನ್ನಿವೇಶದಲ್ಲಿ ವಿವರಿಸಲು ಅಸಮರ್ಥರಾಗುವುದು

6) ಮೆಚ್ಚುಗೆಯನ್ನು ಗಿಟ್ಟಿಸುವ ಪ್ರಯತ್ನ

## 15.5 ವಿಮರ್ಶೆ

ಇಬ್ನೆಖಾಲ್ಡೂನನ ವಾದ ಆ ಕಾಲದ ಉತ್ತರ ಆಫ್ರಿಕಾ ಪರಿಸರಕ್ಕೆ ಸರಿಹೊಂದುತ್ತಿದ್ದೇ ಹೊರತು ಸಾಮಾನ್ಯವಾಗಿ ಎಲ್ಲ ಪ್ರದೇಶಗಳಿಗೂ ಸರಿಹೊಂದುತ್ತಿರಲಿಲ್ಲ ಈತನು ತನ್ನ ಹೊಸ ವೈಜ್ಞಾನಿಕ ಇತಿಹಾಸವನ್ನು ಜನತೆಯ ಮುಂದಿಟ್ಟನೇ ಹೊರತು ತನ್ನ ಕೃತಿಗಳಲ್ಲಿ ಅದನ್ನು ಅನುಸರಿಸಲಿಲ್ಲ. ತನ್ನ ಕೃತಿಯಾದ ಕಿತಾಬ್- ಅಲ್-ಇಬಾರ್ ನಲ್ಲಿ ತನ್ನ ವೈಚಾರಿಕತೆಯನ್ನು ಅಳವಡಿಸಿಕೊಳ್ಳಲಿಲ್ಲ. ಈತನ ಉತ್ತರಾಧಿಕಾರಿಗಳ ಮೇಲೆ ಈತನ ವೈಚಾರಿಕತೆ ಅಷ್ಟೇನು ಪ್ರಭಾವ ಬೀರಲಿಲ್ಲ. ಈತನ ಶಿಷ್ಯನಾದ ಮಾಖ್‌ರಿಜಿ ತನ್ನ ಗುರುವಿನ ಆಸಕ್ತಿಯನ್ನು ಆರ್ಥಿಕ ಮತ್ತು ಜನಸಂಖ್ಯೆ ವಿಷಯಗಳಲ್ಲಿ ಮುಂದುವರಿಸಿದನು. ಖಾಲ್ಡೂನನು ವಿಮರ್ಶೆ, ವಿಶ್ಲೇಷಣೆ ಹಾಗೂ ತಾರ್ಕಿಕ ವಿಧಾನಗಳನ್ನು ಅನುಸರಿಸಿ ಐತಿಹಾಸಿಕ ವಾಸ್ತವಾಂಶಗಳನ್ನು ಕುರಿತು ಚರ್ಚಿಸಿದ್ದಾನೆ.

## 15.6 ಶ್ರೇಷ್ಠ ಇತಿಹಾಸಕಾರನಾಗಿ ಇಬ್ನೆಖಾಲ್ಡೂನ್

ಇಬ್ನೆಖಾಲ್ಡೂನನ ಕೃತಿಗಳಲ್ಲಿ ಆತನ ವಿಶ್ಲೇಷಣೆ ಹಾಗೂ ನಿರ್ಣಯಗಳಲ್ಲಿ ಆಧುನಿಕತೆಯ ಎಲ್ಲಾ ಅಂಶಗಳನ್ನು ಕಾಣಬಹುದು. ಆತನು ವೈಜ್ಞಾನಿಕವಾದ ರೀತಿಯಲ್ಲಿ ಘಟನೆಗಳನ್ನು ವಿವರಿಸಿದ್ದಾನೆ. ಅವುಗಳ ಪ್ರವೃತ್ತಿಯನ್ನು ಪರಿಶೀಲಿಸಿ ವ್ಯತ್ಯಾಸಗಳನ್ನು ವಿಶದಪಡಿಸಿದ್ದಾನೆ. ಅವುಗಳ ಕಾರಣಗಳನ್ನು ವೀಕ್ಷಿಸಿ ಅವುಗಳ ಕಾರ್ಯಾಚರಣೆಯನ್ನು ನಿರೂಪಿಸಿದ್ದಾನೆ. ಅವುಗಳ ನಿಯತತೆಯನ್ನು ಪುನರಾವಲೋಕನ ಮಾಡಿದ್ದಾನೆ. ಅಲ್ಲದೆ ಅವುಗಳ ಮೌಲ್ಯವನ್ನು ನಿರ್ಧರಿಸಲು ಯತ್ನಿಸಿದ್ದಾನೆ. ಒಟ್ಟಿನಲ್ಲಿ ಖಾಲ್ಡೂನನು ವಾಸ್ತವವಾದಿಯೂ, ವಿಚಾರವಾದಿಯೂ ವಿಜ್ಞಾನಿಯೂ ದಾರ್ಶನಿಕನೂ ಮಾನವತಾವಾದಿಯೂ ಆಗಿದ್ದಾನೆ. ಅಷ್ಟೇಅಲ್ಲದೆ ಈತನು ಇತಿಹಾಸಕಾರ, ರಾಜ್ಯಶಾಸ್ತ್ರಜ್ಞ, ಅರ್ಥಶಾಸ್ತ್ರಜ್ಞ, ಸಮಾಜಶಾಸ್ತ್ರಜ್ಞ, ಮತ್ತು ತತ್ವಜ್ಞಾನಿಯೂ ಆಗಿದ್ದನು. ಆತನೊಬ್ಬ 'ಪ್ರತಿಭಾನ್ವಿತ' ಎಂಬ ಒಂದೇ ಪದ ಆತನನ್ನು ವರ್ಣಿಸುತ್ತದೆ. ಸಾಮಾನ್ಯ ಇತಿಹಾಸವನ್ನು ರಚಿಸುವ ಉದ್ದೇಶವನ್ನು ಜಾರಿಗೆ ತಂದವನು ಅವನೇ. 19 ನೆಯ ಶತಮಾನದಲ್ಲಿ ದೊರೆತ ಈತನ ಕೃತಿಯಾದ 'ಮುಖದ್ದಿಮಾ' ಅತ್ಯಂತ ಪ್ರಶಂಸೆಗೊಳಪಟ್ಟಿತು. ಮದ್ಯಕಾಲೀನ ಯುಗದ ಒಬ್ಬ ಮುಸ್ಲಿಮ್ ವಿದ್ವಾಂಸ ಧಾರ್ಮಿಕ ಮತ್ತು ಅತೀಂದ್ರೀಯ ಶಕ್ತಿಗಳಲ್ಲಿ ನಂಬಿಕೆಯಿದ್ದ ವಾತಾವರಣದಲ್ಲಿ ವೈಜ್ಞಾನಿಕ, ಜಾತ್ಯಾತೀತ, ವಿವೇಚನಾ ಪೂರಕವಾದ ಯುಕ್ತಯುಕ್ತ ಜ್ಞಾನವುಳ್ಳ ಮೂಲ ದೃಷ್ಟಿಕೋನಗಳನ್ನು ಬೆಳಸಿಕೊಂಡಿದ್ದನು. ಇವನ ಎಲ್ಲಾ ಗುಣಗಳನ್ನು ಇವನ ನಂತರ ಮೆಕವಲಿ, ವಿಕೊ, ಮಾಂಟೆಸ್ಕೊ, ಆಡಮ್‌ಸ್ಮಿತ್ ಮತ್ತು ಅಗಸ್ಟಕಾಮ್ಟ ತಮ್ಮ ವೈಚಾರಿಕತೆಗೆ ಉಪಯೋಗಿಸಿದರು. 'ಮುಖದ್ದಿಮಾ'ದಲ್ಲಿ ಕಂಡುಬರುವ ಜ್ಞಾನ ಸಂಪತ್ತು ಮಾನವನ ಚಿಂತನೆಯ ಅಮೂಲ್ಯವಾದ ಕ್ಷಣಗಳನ್ನು ತಿಳಿಸುತ್ತದೆ. "ಥುಸಿಡೈಡಿಸ್‌ನನ್ನು ಇತಿಹಾಸದ ಶೋಧಕ ಎನ್ನುವುದಾದರೆ" ವೈ ಲಕೋಸ್ಟೆಯು "ಇಬ್ನೆಖಾಲ್ಡೂನನು ಇತಿಹಾಸವನ್ನು ವಿಜ್ಞಾನವೆಂದು ಪ್ರತಿವಾದಿಸಿದನು" ಎಂದಿದ್ದಾನೆ. ಆರ್ನಾಲ್ಡ್ ಟಾಯ್ನಾಬೀ 'ಮುಖದ್ದಿಮಾ' ನಿಸ್ಸಂದೇಹವಾಗಿ ಬಹು ಶ್ರೇಷ್ಠ ಕೃತಿಯೆಂದೂ ಅಂತಹ ಕೃತಿಯು ಯಾವ ಕಾಲದಲ್ಲೂ ಯಾವ ಸ್ಥಳದಲ್ಲೂ ಯಾರಿಂದಲೂ ಮತ್ತೆ ಸೃಷ್ಟಿಸಲಾಗುವುದಿಲ್ಲ ಎಂದು ಅಭಿಪ್ರಾಯ ಪಟ್ಟಿದ್ದಾನೆ. 'ಮುಖದ್ದಿಮಾ' ದೀರ್ಘವಾಗಿಯೂ ಗಾತ್ರದಲ್ಲಿಯೂ ಬಹಳ ದೊಡ್ಡದಾಗಿದೆ. ಇಬ್ನೆಖಾಲ್ಡೂನನು ಸಂಸ್ಕೃತಿಯ ಬಹುಶ್ರೇಷ್ಠ ಇತಿಹಾಸಕಾರನೆಂದು ಕರೆಯಲು ಅರ್ಹನೆಂದು ವಾನ್ ಕ್ರೆಮರ್ ಹೇಳುತ್ತಾನೆ. ಇಂದಿಗೂ ಖಾಲ್ಡೂನನ ಕೃತಿಯ ವೈಚಾರಿಕತೆ ಐತಿಹಾಸಿಕ ಬರವಣಿಗೆಗಳಲ್ಲಿ ತನ್ನ ಪ್ರಭಾವವನ್ನು ಬೀರುವುದನ್ನು ಕಾಣಬಹುದು. ಈತನು ಪ್ರಬಲವಾದ ಭೌತಿಕ, ಭೌಗೋಳಿಕ, ರಾಜಕೀಯ, ಸಾಮಾಜಿಕ, ನೈತಿಕ ಹಾಗೂ ತಾತ್ವಿಕ ಅಂಶಗಳು ಸರಿಯಾದ ಪ್ರಮಾಣದಲ್ಲಿ ಒಟ್ಟಾಗಿ ಸೇರಿ ಸಂಸ್ಕೃತಿ ಎಂಬ ಅಸಮಾನ್ಯ ವ್ಯವಸ್ಥೆಯನ್ನು ಸೃಷ್ಟಿಮಾಡುತ್ತದೆ ಎಂದು ಹೇಳುತ್ತಾನೆ. ಇತಿಹಾಸವು ಕೇವಲ ಕಥನವಲ್ಲ ಅದು ಅಧ್ಯಯನ ಯೋಗ್ಯವಾದ ಶಾಸ್ತ್ರ ಎಂಬುದಾಗಿ ತಿಳಿದ ಖಾಲ್ಡೂನನು ತರ್ಕವಿಭಾಗದಂತೆ ಆತನ ಅಧ್ಯಯನ ಹಾಗೂ ಚಿಂತನೆಗಳು ಅವನಿಗೆ ಒಂದು ಬಗೆಯ ಸಾಮಾಜಿಕ ದರ್ಶನವನ್ನು ಬೆಳೆಸಲು ಸಹಾಯಕವಾದವು ಅವನ 'ಮುಖದ್ದಿಮಾ' ಒಂದು ಸ್ವತಂತ್ರ ಕೃತಿಯಾಗಿದ್ದು, ಇತಿಹಾಸವನ್ನು ಹೇಗೆ ಅಧ್ಯಯನ ಮಾಡಬೇಕು, ಹೇಗೆ ಬರೆಯಬೇಕು. ಯಾವ ಯಾವ ಅಂಶಗಳು ಇತಿಹಾಸದ ಸೃಷ್ಟಿಗೆ ಕಾರಣವೆಂಬುದೆಲ್ಲವನ್ನು ವಿವರವಾಗಿ ತಿಳಿಸಿದ್ದಾನೆ. ಇತಿಹಾಸವು ಮಾನವ ಜೀವನದ ಎಲ್ಲಾ ಸಾಮಾಜಿಕ ವಿಷಯಗಳನ್ನು ತನ್ನ ಅಧ್ಯಯನವಸ್ತುವನ್ನಾಗಿ ಹೊಂದಿರುವ ಒಂದು ವಿಶೇಷ ವಿಜ್ಞಾನ. ಅದರ ವ್ಯಾಪ್ತಿ ಬಹಳ ವಿಶಾಲವಾದುದೆಂದೂ ಅದು ಒಂದು ಶಾಸ್ತ್ರವೆಂದೂ ಹೇಳಿದ ಪ್ರಥಮ ಇತಿಹಾಸಕಾರ ಇಬ್ನೆಖಾಲ್ಡೂನ್

## 15.7 ಸಂಕ್ಷಿಪ್ತ ಅವಲೋಕನ

ಅರಬ್ ಇತಿಹಾಸ ಲೇಖನ ಕಲೆ ಮದ್ಯಕಾಲೀನ ಇತಿಹಾಸಲೇಖನ ಕಲೆಯಲ್ಲಿ ಪ್ರಮುಖವಾದದ್ದು. ಪ್ರಾಚೀನ ಗ್ರೀಕ್ ಮತ್ತು ರೋಮನ್ನರಂತೆ ಅರಬ್ಬರುಇತಿಹಾಸಲೇಖನ ಕಲೆಗೆ ಮಹತ್ತರವಾದ ಕೊಡುಗೆಯನ್ನು ನೀಡಿದ್ದಾರೆ. ಗ್ರೀಕನಂತೆಯೇ ಅರೆಬಿಯಾದಲ್ಲೂ ಇತಿಹಾಸವು ಲಾವಣಿಗಳಿಂದ, ಐತಿಹ್ಯಗಳಿಂದ ಮತ್ತು ಕಲ್ಪನೆಗಳಿಂದಲೇ ಉದಯವಾಯಿತು. ಮಹಮದ್ ಐಸಾಕ್‌ನು ಅರಬ ಇತಿಹಾಸಕಾರರಲ್ಲಿ ಮೊದಲಿಗ. ಕ್ರಿ.ಶ. 828ರಲ್ಲಿ ಮಹಮ್ಮದನ ಆತ್ಮ ಚರಿತ್ರೆಯನ್ನು ರಚಿಸಿದ ಇಬನ್- ಇ-ಹಿಷಾಮ್ ಎರಡನೆಯವನು. ಉಮ್ಮಯಾಡರ ಪತನದ ನಂತರ ಅಬ್ಬಾಸಿದರು ತಮ್ಮ ಅಧಿಕಾರವನ್ನು ಸ್ಥಾಪಿಸಿದರು. ಪರ್ಷಿಯ ಶೈಲಿಯನ್ನು ಬಹಳವಾಗಿ ಅನುಸರಿಸಿ ಅರಾಬಿಕ್ ಇತಿಹಾಸ ಲೇಖನ ಕಲೆ ಪ್ರಾರಂಭವಾಯಿತು. ಮದ್ಯಕಾಲೀನ ಯುಗದ ಅತಿಶ್ರೇಷ್ಠ ಇತಿಹಾಸಕಾರ ಇಬ್ನೆಖಾಲ್ಡೂನ್ ಈತನು ವೈಜ್ಞಾನಿಕ ಇತಿಹಾಸದ ಸ್ಥಾಪಕನಾಗಿದ್ದಾನೆ. ತನ್ನ ಕಾಲದಲ್ಲಿ ಪರಿಚಯವೇ ಇಲ್ಲದಿದ್ದ ವೈಜ್ಞಾನಿಕ ವಿಶ್ಲೇಷಣೆಯನ್ನು ವಿಶ್ಲೇಷಿಸಿದ್ದಾನೆ. ಇತಿಹಾಸವು ರಾಜ್ಯ ಮತ್ತು ಬುಡಕಟ್ಟುಗಳ ಮದ್ಯೆ ಬೆಳೆದಿರುವ ಶಾಸ್ತ್ರ ಎಂದಿದ್ದಾನೆ. ಖಲ್ಡೂನನ ವೈಚಾರಿಕತೆ ವೈಜ್ಞಾನಿಕ ಮನೋಭಾವ ಮುಂತಾದ ಒಗ್ಗಟ್ಟಿನ ದೃಷ್ಟಿಯು ಉಳಿದ ಎಲ್ಲಾ ವಿದ್ವಾಂಸರನ್ನು ಆಕರ್ಷಿಸಿತು. ಇಂದಿಗೂ ಈತನ ಬರಹಗಳು ಇತಿಹಾಸ ಲೇಖನ ಕಲೆಯ ಮೇಲೆ ಅದ್ಭುತವಾದ ಪರಿಣಾಮವನ್ನು ಬೀರಿವೆ. ಒಟ್ಟಿನಲ್ಲಿ ಖಾಲ್ಡೂನನಿಗಿದ್ದ ಅತ್ಯದ್ಭುತ ನಂಬಿಕೆ ಸಾಮಾಜಿಕ ವಿಷಯಗಳ ಬಗ್ಗೆ ಅವನಿಗಿದ್ದ ಸೂಕ್ಷ್ಮ ಪರಿಜ್ಞಾನ ಆಳವಾದ ಮತ್ತು ವ್ಯಾಪಕವಾದ ಪಾಂಡಿತ್ಯ ಐತಿಹಾಸಿಕ ಹಾಗೂ ಸಾಮಾಜಿಕ ಪರಿವರ್ತನೆಯಪ್ರತಿಕ್ರಿಯೆಯಾಗಿರುವ ಮತ್ತು ಮೇಲ್ನೋಟಕ್ಕೆ ಪರಸ್ಪರ ಸಂಬಂಧವಿಲ್ಲದಂತಿರುವ ಅಸಂಖ್ಯಾತವಾದ ಘಟನೆಗಳನ್ನು ಒಂದು ಗೂಡಿಸುವ ಕೊಂಡಿಗಳನ್ನು ಸೇರಿಸಿ ಇತಿಹಾಸವನ್ನು ಲೇಖಿಸಿದ್ದಾನೆ. ಈತನು ಐತಿಹಾಸಿಕ ಬರವಣಿಗೆಯಲ್ಲಿ ಕಂಡುಬರುವ ತಪ್ಪುಗಳನ್ನು ಉಲ್ಲೇಖಿಸಿದ್ದಾನೆ. ಖಾಲ್ಡೂನನ ವೈಜ್ಞಾನಿಕ, ತಾರ್ಕಿಕ ಮತ್ತು ಲೌಕಿಕ ದೃಷ್ಟಿಕೋನವನ್ನು ವಿದ್ವಾಂಸರು ಪ್ರಶಂಸಿದ್ದಾರೆ. ಒಟ್ಟಿನಲ್ಲಿ ಇಬ್ನೆಖಾಲ್ಡೂನನ ಭಾವನೆಗಳು ಐತಿಹಾಸಿಕ ಬರವಣಿಗೆಯಲ್ಲಿ ಮಹತ್ತರವಾದ ಪ್ರಭಾವವನ್ನು ಬೀರಿವೆ.

## 15.8 ಸ್ವಂತ ಅಭ್ಯಾಸಕ್ಕೆ ಪ್ರಶ್ನೆಗಳು

1. ಇತಿಹಾಸ ಲೇಖನ ಕಲೆಯ ಬೆಳವಣಿಗೆಯಲ್ಲಿ ಅರಬ್ಬರ ಕೊಡುಗೆಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ

2. ಇತಿಹಾಸ ಲೇಖನ ಕಲೆಯ ಬೆಳವಣಿಗೆಗೆ ಇಬ್ನೆಖಾಲ್ಡೂನನ ಕೊಡುಗೆಗಳನ್ನು ನಿರ್ಧರಿಸಿ.

## 15.9 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. K. Rajayyan : History in theory and method

2. Ernest Breisach: Historiography Ancient, Medienal and Moderu

3. B. Sheik Ali: History Its theory and method

4. Mohammed yasin: Reading in Indian History
Madhavi Yariu(Ed)


ಪ್ರೊ. ಶಿವಣ್ಣ

# ಘಟಕ - 16 ವಾಲ್ಟೈರ್ - ರೂಸೋ

*ವಿಷಯಸೂಚಿ*

16.0 ಉದ್ದೇಶಗಳು

16.1 ಪೀಠಿಕೆ

16.2 ವಾಲ್ಟೈರ್

16.2.1 ವಾಲ್ಟೈರ್‌ನ ಚಿಂತನೆಗಳು

16.3 ರೂಸೋ

16.4 ಘಟಕದ ಸಾರಾಂಶ

16.5 ಸ್ವಯಂ ಪರಿಶೀಲನಾ ಪ್ರಶ್ನೆಗಳು

16.6 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 16.0 ಉದ್ದೇಶಗಳು

ಈ ಘಟಕ 16 ರಲ್ಲಿ ನವೋದಯ ಇತಿಹಾಸ ಬರವಣಿಗೆಯನ್ನು ಮತ್ತು ಈ ಚಿಂತನೆಯ ಶಾಲೆಯ ಪ್ರತಿಪಾದಕರನ್ನು ಅಧ್ಯಯನ ಮಾಡುತ್ತೇವೆ. ಪ್ರಸಿದ್ಧ ಚಿಂತಕರಾದ ಮತ್ತು ಇತಿಹಾಸ ತತ್ವಜ್ಞಾನಿಗಳಾದ ರೂಸೋ ಮತ್ತು ವಾಲ್ಟೈರ್‌ರವರ ಬಗ್ಗೆ ಇಲ್ಲಿ ಅಧ್ಯಯನ ನಡೆಸುತ್ತೇವೆ. ಇವರ ಇತಿಹಾಸದ ಅರ್ಥವೇನು? ಇತಿಹಾಸವನ್ನು ಹೇಗೆ ತಿಳಿಸಿದರು ಮತ್ತು ಮುಂದೆ ಇತಿಹಾಸ ಯಾವ ರೀತಿಯ ಚಿಂತನೆಯನ್ನು ಮಾಡಬೇಕೆಂಬುದನ್ನೂ ಮತ್ತು ಈ ಚಿಂತನೆಗಳಿಂದ ಸಾಮಾನ್ಯ ಜನರಿಗೆ ಯಾವ ರೀತಿಯ ಲಾಭಗಳಾಗುತ್ತವೆ ಎಂಬ ಎಲ್ಲಾ ವಿಷಯಗಳನ್ನು ಇಲ್ಲಿ ಅಧ್ಯಯನ ನಡೆಸುತ್ತೇವೆ. ವಾಲ್ಟೈರ್ ಮತ್ತು ರೂಸೋರ ಗ್ರಂಥಗಳು ಮತ್ತು ಪ್ರಪಂಚದಲ್ಲಿ ಇವುಗಳು ಯಾವ ರೀತಿಯ ಪ್ರಭಾವವನ್ನು ಬೀರಿದವು ಎಂಬುದನ್ನೂ ಸಹ ಅರಿತುಕೊಳ್ಳುವ ಪ್ರಯತ್ನವಿದೆ ಇಲ್ಲಿ.

## 16.1 ಪೀಠಿಕೆ

ಯೂರೋಪಿನ ಪ್ರದೇಶಗಳಲ್ಲಿ 16 ನೇ ಶತಮಾನದಲ್ಲಿ ಜ್ಞಾನ ಪುನರುಜ್ಜೀವನ ಕಾಲ ಮತ್ತು ಮತೀಯ ಸುಧಾರಣೆಗಳುಂಟಾದವು (ರನೈಸಾನ್ಸ್, ರೆಫರ್‌ಮೇಷನ್) ಇದರ ವಿಚಾರತೆಗೆ ವ್ಯಕ್ತಿಗಳಿಗೆ ಹೆಚ್ಚಿನ ಉತ್ತೇಜನ ದೊರಕಿ ಹಿಂದಿನದಲ್ಲ ಬಂಗಾರ, ಅದೆಲ್ಲ ನಿಜ, ಮತ ಗ್ರಂಥಗಳಲ್ಲಿ ಹೇಳಿರುವುದೆಲ್ಲ ನಿಜವಾದ್ದರಿಂದ ಅದನ್ನು ಪ್ರಶ್ನೆ ಮಾಡದೇ ಒಪ್ಪಲೇಬೇಕೆಂಬ ಕಠಿಣ ನಿಯಮಗಳು ಸಡಿಲಗೊಳ್ಳಲೇಬೇಕಾಯಿತು. ರಾಜಕೀಯ ಅಧಿಕಾರ, ಮತೀಯ ಒತ್ತಾಯಗಳಿಗೆ ಮಣಿಯಲೇಬೇಕೆಂಬ ಹಠಮಾರಿತನವನ್ನು ಬುದ್ಧಿವಂತರೂ ಆಲೋಚನಪರರಾದ ವ್ಯಕ್ತಿಗಳು ಪ್ರತಿಭಟಿಸಿದರು. ತಮ್ಮ ಬುದ್ಧಿವಂತಿಕೆ, ಆಲೋಚನೆಗಳಲ್ಲೇ ಬೆಳಕನ್ನು ಕಾಣಬೇಕೆಂಬ ಹಂಬಲದಿಂದ ಕತ್ತಲಿನ ಯುಗವನ್ನು ಓಡಿಸಿ ಬೆಳಕನ್ನು ಪಡೆಯಬೇಕೆಂಬ (ಎನ್‌ಲೈಟನ್‌ಮೆಂಟ್) ದಾರಿ ಹಿಡಿದರು. ಮಧ್ಯಯುಗದ ಕತ್ತಲು (ಡಾರ್ಕ್ ಮಿಡಲ್‌ಏಜಸ್) ಕಳೆದ ಜಗತ್ತು ಆಧುನಿಕ ವಿಚಾರಪರತೆಯ ಕಾಲಕ್ಕೆ ಧುಮುಕಿತು. ಮಾನವನ 'ಅಭಿವೃದ್ಧಿ' 'ಪ್ರಗತಿ'ಗಳೇ ಇತಿಹಾಸವನ್ನು ರಚಿಸುವ ಸಾಧನಗಳಾದವು. ಜ್ಞಾನೋದಯ ಕಾಲದ ಅತಿ ಮುಖ್ಯ ಪ್ರತಿನಿಧಿಗಳೆಂದರೆ ವಾಲ್ಟೇರ್, ರೂಸೋ ಮತ್ತು ಕಾಂಡರ್‌ಸೆಟ್‌ರು. ಇವರಿಗೆ ಹಿಂದಿನ ಕಾಲದ ಬಗ್ಗೆ ನಿಕೃಷ್ಟ ಭಾವನೆಯೂ ಮುಂದಿನ ಕಾಲದಲ್ಲಿ ಆಶಾಭಾವನೆಯೂ ಇದ್ದಿತು.

## 16.2 ವಾಲ್ಟೈರ್ (ಕ್ರಿ.ಶ. 1697-1778)

ಇವನು ವಿವೇಚನಾ ಪಂಗಡದ (ರ್‍ಯಾಷನಲಿಸ್ಟ್) ಜನಕ. ಇವರಿಗೆ ವಿಜ್ಞಾನದಲ್ಲೂ ವಿವೇಚನೆಯಲ್ಲೂ ಭಾರಿ ನಂಬಿಕೆ. ಮಧ್ಯ ಕಾಲದಲ್ಲಿ ಯಾವ ಕೊಡುಗೆಯೂ ಗಣನೀಯವಾಗಿಲ್ಲವಾದ್ದರಿಂದ ಆ ಕಾಲವನ್ನು ತುಚ್ಛೀಕರಿಸಿದರು. ಇವನ ಬರವಣಿಗೆಯ ಶೈಲಿಯಲ್ಲಿ ವಿಡಂಬನೆಯೂ ಹಾಸ್ಯವೂ ಇದ್ದು ಮಧ್ಯಯುಗದ ಎಲ್ಲ ವಿಷಯಗಳನ್ನೂ ಚರ್ಚಿನ ಪದ್ಧತಿಗಳನ್ನೂ ಅತ್ಯುಗ್ರವಾಗಿ ಖಂಡಿಸಿದನು. ಅದು ಸುಧಾರಣೆಗೆ ಒಳಗಾಗದಷ್ಟು ಹೀನವಾಗಿದೆ ಎಂದು ಬಗೆದನು. ಇವನು ಜರ್ಮನಿಯಲ್ಲಿನ ಪ್ರಷ್ಯಾದ ದೊರೆ ಫ್ರೆಡರಿಕ್ ಮಹಾಶಯನ ಆಸ್ಥಾನದಲ್ಲಿ ಸ್ವಲ್ಪ ಕಾಲವಿದ್ದನು. ಅವನ ಬಗ್ಗೆಯೂ "ಸ್ವೀಡನ್ನಿನ ದೊರೆ ಹನ್ನೆರಡನೆಯ ಚಾರ್ಲ್ಸ್ ಚರಿತ್ರೆ", ಫ್ರಾನ್ಸಿನ ದೊರೆಯ ಬಗ್ಗೆ 'ಹದಿನಾಲ್ಕನೆಯ ಲೂಯಿಯ ಕಾಲ' ಎಂಬ ಗ್ರಂಥಗಳನ್ನು ಸೊಗಸಾಗಿ ಬರೆದನು. ಈ ಮಹಾ ವೈಭವ ರಾಜರ ದರ್ಪಿಷ್ಟ ಪ್ರಭುಗಳ ಬಗ್ಗೆ ನಿಷ್ಪಕ್ಷಪಾತವಾಗಿ ಸದ್ಗುಣಗಳನ್ನು ಅತಿಯಾಗಿ ಹೊಗಳದೆ, ಅಪ್ರಿಯ ಗುಣಗಳನ್ನು ಹಳಿಯದೆ ಅತ್ಯಂತ ಸ್ವಾರಸ್ಯವಾಗಿ, ಗಂಭೀರ ಶೈಲಿಯಲ್ಲಿ ಉತ್ತಮ ಸಾಹಿತ್ಯ ಗುಣಗಳನ್ನುಳ್ಳ ಐತಿಹಾಸಿಕ ಬರವಣಿಗೆಯನ್ನು ಪ್ರಕಟಿಸಿದನು. ಇವೆಲ್ಲವೂ ಅಲ್ಪ ಕಾಲದಲ್ಲಿ ಜನಾದರಣೀಯವಾದವು. ಇವನ ಮತ್ತೊಂದು ಗ್ರಂಥವಾದ "ಎಸ್ಸೆ ಆನ್ ಮ್ಯಾನರ್ಸ್ ಮತ್ತು ಸ್ಪಿರಿಟ್ ಆಫ್ ನೇಷನ್ಸ್" ಗ್ರಂಥದಲ್ಲಿ ಪ್ರಪ್ರಥಮವಾಗಿ ಜಗತ್ತಿನ ಸಾಂಸ್ಕೃತಿಕ ಚರಿತ್ರೆಯನ್ನು ಶಾಸ್ತ್ರೀಯವಾಗಿ ಬರೆದನು. ಇವನೇ "ಫಿಲಾಸಫಿ ಆಫ್ ಹಿಸ್ಟ್ರಿ" (ಚರಿತ್ರೆಯ ದರ್ಶನಗಳು) ಎಂಬ ಪದ ಸಮೂಹವನ್ನು ಹುಟ್ಟು ಹಾಕಿದನು. ತನ್ನ ಬರವಣಿಗೆಗಳ ಮೂಲಕ ಭಾವನೆಗಳ ಭಯಂಕರ ವ್ಯಾಘ್ರವನ್ನು ಸಂಕೋಲೆಗಳಿಂದ ಬಿಡುಗಡೆ ಮಾಡಿದನು. ಇದರಿಂದ ಮತ್ತು ಮತ್ತೊಬ್ಬ ರೂಸೋವಿನ ಬರಹಗಳಿಂದ ಫ್ರಾನ್ಸಿನ ಮಹಾಕ್ರಾಂತಿಯು ಕ್ಷಿಪ್ರವಾಗಿ ಪ್ರಾರಂಭವಾಯಿತು. ವಾಲ್ಟೇರನಿಂದ ಪ್ರಾರಂಭವಾದ ಜ್ಞಾನೋದಯದಿಂದ ಅನೇಕರು ಪ್ರಭಾವಿತರಾಗಿ ಪ್ರಸಿದ್ಧಿಗೆ ಬಂದರು. ಅವರಲ್ಲಿ ಡೇವಿಡ್ ಹ್ಯೂಂ, ವಿಲಿಯಂ ರಾಬರ್ಟ್ಸನ್ ಮತ್ತು ಎಡ್ವರ್ಡ್ ಗಿಬ್ಬನ್ ಬಹಳಷ್ಟು

ಪ್ರಮುಖರಾಗಿದ್ದಾರೆ. ಇವನು ಗಿಬ್ಬನ್ನನನ್ನು ನವೋದಯ ಯುಗಕ್ಕೆ ಕಾಲಿಡುವಂತೆ ಮಾಡುವುದಲ್ಲಿ ಪ್ರಭಾವಯುತವಾಗಿ ಕಾರ್ಯ ನಿರ್ವಹಿಸಿದನು. ಇವನು ಕೇವಲ ಇತಿಹಾಸಕಾರನಾಗಿರದೇ, ಒಬ್ಬ ಲೇಖಕ, ಕಾದಂಬರಿಕಾರ, ವಿಮರ್ಶಕ, ತತ್ವಶಾಸ್ತ್ರಜ್ಞ ಮತ್ತು ರಾಜಕೀಯ ಚಿಂತಕನಾಗಿದ್ದನು. ಇವನೇ ಇತಿಹಾಸದ ತತ್ವಜ್ಞಾನವನ್ನು ಹುಟ್ಟು ಹಾಕಿದವನು. ಇವನ ಬರವಣಿಗೆಯಲ್ಲಿ ಚಿಂತನೆಯಿದೆ. ಒಳ್ಳೆಯ ಬರವಣಿಗೆಯ ಶೈಲಿ ಮತ್ತು ವಿಷಯವನ್ನು ಚೆನ್ನಾಗಿ ಅರ್ಥಬದ್ಧವಾಗಿ ಹೇಳುವ ಕಲೆಯೂ ಇದೆಯೆನ್ನಬಹುದು.

ಇವನು ಇತಿಹಾಸವು ಒಂದು ಮಾನವನ ಚಟುವಟಿಕೆಯಾಗಿದ್ದು ಅದು ಅವನ ಕಲೆ ಶಿಕ್ಷಣ, ವಿಜ್ಞಾನ, ಸಂಪ್ರದಾಯ ಆಚರಣೆಗಳು, ಆಹಾರ, ಆನಂದವಿಹಾರಗಳು ಮುಂತಾದುವನ್ನು ಸಹ ಬಿಂಬಿಸುತ್ತವೆ. ಇವನು 'ದೇವರ ಇರುವಿಕೆ'ಯನ್ನು ವಿರೋಧಿಸುತ್ತಾನೆ.

### *16.2.1 ವಾಲ್ಟೈರ್‌ನ ಚಿಂತನೆಗಳು*

ಇತಿಹಾಸದಲ್ಲಿ ತತ್ವಶಾಸ್ತ್ರವನ್ನು ತಂದವನು ವಾಲ್ಟೈರ್. ಇದರಿಂದ ಇತಿಹಾಸ ಬರವಣಿಗೆ ಮತ್ತು ಇತಿಹಾಸ ಸಂಶೋಧನಾ ವಿಧಾನದಲ್ಲಿ ಒಂದು ರೀತಿಯ ಆಯಕಟ್ಟನ್ನು ತರಲು ಇವನು ಕಾರಣವಾದನು. ಇತಿಹಾಸಕ್ಕೆ ಇವನ ಕಾಣಿಕೆ ಅಪಾರ ಮತ್ತು ಅಪೂರ್ವವಾದದ್ದು. ಇತಿಹಾಸವು ಕೇವಲ ರಾಜರು, ರಾಣಿಯರು ಇತಿಹಾಸವನ್ನು ಮಾತ್ರ ತಿಳಿಸದೇ ಪ್ರಪಂಚದ ನಾಗರೀಕತೆಗಳ ಇತಿಹಾಸವನ್ನು ತಿಳಿಸುವುದಾಗಿದೆ. ಇವನ ಪ್ರಕಾರ ಇತಿಹಾಸ ಬರವಣಿಗೆಯಲ್ಲಿ ಪ್ರಮುಖ ಅಂಶಗಳನ್ನು ಪಡೆದುಕೊಳ್ಳುವುದು. ಅವುಗಳ ಆಯ್ಕೆಯಲ್ಲಿ ಬುದ್ಧಿವಂತಿಕೆ ತೋರುವುದು ಮತ್ತು ಅವುಗಳನ್ನು ಹೆಸರಿಸುವಲ್ಲಿ ಬಹಳ ಜಾಗರೂಕತೆಯನ್ನು ವಹಿಸುವುದು ಬಹಳ ಪ್ರಮುಖವಾಗಿದೆಯೆಂದು ತಿಳಿಸುತ್ತೇನೆ. ಇತಿಹಾಸವನ್ನು ಜಾತ್ಯಾತೀತಗೊಳಿಸಲು ಕರೆ ನೀಡುತ್ತಾನೆ. ಪ್ರಪಂಚದಲ್ಲಿ ಎಲ್ಲವೂ ದೊರೆಯುವುದು ಪ್ರಕೃತಿಯಿಂದ ಮತ್ತು ಭೌತಿಕ ಕಾರಣದಿಂದಲೇ ಇತಿಹಾಸದ ಘಟನೆಗಳು ನಡೆಯುತ್ತವೆ ಎಂದಿದ್ದಾನೆ.

ಇವನ ಕಾಲಕ್ಕೆ ಇವನ ಹೇಳಿಕೆಗಳು ಪ್ರಮುಖವಾದುವು ಮತ್ತು ಹೊಸದಾಗಿ ಕಂಡರೂ ಸಹ ಇದು ಕೇವಲ ತಾಂತ್ರಿಕವಾದದ್ದು ಮತ್ತು ನೈತಿಕತೆಗೆ ಸಂಬಂಧಿಸಿದ್ದಾಗಿದೆ. ಆದರೂ ತುಂಬಾ ತಾಂತ್ರಿಕ ಮತ್ತು ನೈತಿಕತೆಯನ್ನು ಅವನು ಪ್ರತಿಪಾದಿಸದೇ ಇತಿಹಾಸ ಸಂಶೋಧನಾ ವಿಧಾನದಲ್ಲಿ ಘಟನೆಗಳು, ಅವುಗಳ ಕಾರಣಗಳು ಇವುಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡು ಪ್ರಸ್ತುತ ಪಡಿಸುವುದು ಸೂಕ್ತ ಎಂದಿದ್ದಾನೆ. ಇವನು ತನ್ನ ವಾಗ್ಝಾಳಿಯಿಂದ ಅಂದಿನ ಕಾಲದ ಜನರನ್ನು ಎಚ್ಚರಿಸಿದರೂ ಇವನ ಚಿಂತನೆಯು ಆಳವಾಗಿರಲಿಲ್ಲವಾದುದು ಗೋಚರಿಸುತ್ತದೆ. ಇವನ ವಿವರಣೆಗಳು ಅಷ್ಟೊಂದು ವಾಸ್ತವವಾಗಿಲ್ಲ ಮತ್ತು ಏಕರೀತಿಯದಾಗಿ ಕಾಣುತ್ತವೆ. ಇವುಗಳು ತಾತ್ವಿಕ ಮತ್ತು ಸಾಮಾಜಿಕ ಅಂಶಗಳನ್ನು ಒಳಗೊಂಡಿಲ್ಲ. ಇವನು ತನ್ನ ತೀರ್ಮಾನದಲ್ಲಿ ಪಕ್ಷಪಾತಿಯಂತಿದ್ದಾನೆ. ಆದರೂ ಅವನು ಇತಿಹಾಸದ ಬಗ್ಗೆ ಜನರಲ್ಲಿ ಒಳ್ಳೆಯ ಭಾವನೆಗಳು ಮತ್ತು ರಚನಾತ್ಮಕ ಕ್ರಿಯೆಯಲ್ಲಿ ತೊಡಗುವಂತೆ ಮಾಡಿದನು.

## 16.3 ರೋಸೋ

ಈತನು ಜ್ಞಾನೋದಯ ಕಾಲದ ಮತ್ತೊಬ್ಬ ಪ್ರಜ್ವಲಿಸುವ ನಕ್ಷತ್ರ. ಇವನು 'ವಿವೇಚನೆಯ ಕುದುರೆ' ಯನ್ನು ನಾಗಾಲೋಟದಲ್ಲಿ ಓಡಿಸಿದನು. ಇವನು ಬರೆದ 'ಸೋಷಿಯಲ್ ಕಾಂಟ್ರಾಕ್ಟ್' (ಸಾಮಾಜಿಕ ಒಪ್ಪಂದ) ಎಂಬ ಪುಸ್ತಕದ ಪ್ರಥಮ ವಾಕ್ಯ. 'ಮ್ಯಾನ್ ಈಸ್ ಬಾರನ್ ಫ್ರೀ ಬಟ್ ಎವ್ವೆರಿವೇರ್ ಹೀ ಈಸ್ ಇನ್ ಚೈನ್ಸ್' (ಮನುಷ್ಯನು ಸ್ವತಂತ್ರವಾಗಿ ಹುಟ್ಟುತ್ತಾನೆ, ಆದರೆ ಎಲ್ಲೆಡೆ ಸಂಕೋಲೆಗಳಿಂದ ಬಂಧಿಸಲ್ಪಟ್ಟಿದ್ದಾನೆ)' ಎಂಬ ಮಹಾ ವಾಕ್ಯವು ಆ ಪುಸ್ತಕವನ್ನು ಅದರ ಗ್ರಂಥಕರ್ತನನ್ನೂ ತಕ್ಷಣ ಪ್ರಖ್ಯಾತಿಗೇರಿಸಿತು. ಇದು ಕ್ರಾಂತಿಕಾರರ ಬೀಜಾಕ್ಷರ ಮಂತ್ರವಾಯಿತು. ಇವನ ಗ್ರಂಥಗಳಲ್ಲಿ ಇತಿಹಾಸದಲ್ಲಿ ಕಂಡು ಬರುತ್ತಿದ್ದ ಪರಮಾರ್ಥ ವಿದ್ಯೆಯನ್ನೂ, ಉನ್ನತ ಮಟ್ಟದ ಜನರು ತಮ್ಮ ಹಿತರಕ್ಷಣೆಗೆ ಮಾಡಿಕೊಳ್ಳುತ್ತಿದ್ದ ರಕ್ಷಣೆಗಳನ್ನು ಹೀಯಾಳಿಸಿ ಖಂಡಿಸಿದನು. ಎಲ್ಲೆಡೆಯಲ್ಲೂ ಸ್ವಾತಂತ್ರ್ಯ, ಸಮಾನತೆ, ಸಹೋದರತೆ (ಲಿಬರ್ಟಿ, ಈಕ್ವಾಲಿಟಿ, ಫ್ರೆಡರ್ನಿಟಿ) ಹಬ್ಬಬೇಕೆಂದು ಘೋಷಿಸಿದನು. ಈ ಮೂರು ಪದಗಳು ಫ್ರಾನ್ಸಿನ ಮಹಾ ಕ್ರಾಂತಿಯ ದಿನ ಬಳಕೆಯ, ಜನ ಜಂಗುಳಿಯ ಘೋಷಣೆ (ಸ್ಲೋಗನ್) ಗಳಾದವು. ಆದರೆ ಮಾನವನು ನೈಸರ್ಗಿಕ ಸ್ಥಿತಿಯಲ್ಲೇ ಮೋಕ್ಷ ಪಡೆಯುತ್ತಾನೆಂಬ ಇವನ ನಂಬುಗೆಯನ್ನು ಇತರರು ಅಷ್ಟಾಗಿ ಒಪ್ಪಲಿಲ್ಲ. ಇವನ ಬರವಣಿಗೆಗಳು ಕಡಿಮೆಯಾದರೂ ಅವುಗಳ ಪ್ರಭಾವ ಅತ್ಯುಗ್ರವಾಗಿ ಬಹಳ ಪರಿಣಾಮಕಾರಿಯಾಗಿದ್ದವು. ಇವನ ಈ ಸಾಮಾಜಿಕ ಒಪ್ಪಂದವು ಒಂದು ಮಹಾಕಾವ್ಯದಂತಿದ್ದು

ಜಗತ್ತಿನಲ್ಲಿ ಒಂದು ಮಹಾಕ್ರಾಂತಿಯನ್ನೇ ಸೃಷ್ಟಿಸಿತು. ಇವನು ಇತಿಹಾಸದಲ್ಲಿ ಧಾರ್ಮಿಕ ಚಿಂತನೆಗಳನ್ನು ಖಂಡಿಸಿದನು ಮತ್ತು ಸಮಾಜದಲ್ಲಿಯ ಹೆಚ್ಚು ವಿಶೇಷ ಹಕ್ಕು ಮತ್ತು ಗೌರವವನ್ನು ಪಡೆದಿರುವ ವ್ಯಕ್ತಿಗಳನ್ನು ದೂಷಿಸಿದನು. ಇವನ ಬರವಣಿಗೆಗಳು ಹೆಚ್ಚಾಗಿ ಇತಿಹಾಸಕ್ಕೆ ಸಂಬಂಧಪಡದಿದ್ದರೂ ಸಹ ಇತಿಹಾಸದ ಚಿಂತನೆಗೆ ಬಹಳಷ್ಟು ರೀತಿಯಲ್ಲಿ ಪ್ರಭಾವವನ್ನು ತೋರಿಸಿತು ಎಂಬುದು ತಿಳಿಯುತ್ತದೆ.

ರೋಸೋ ಅವನ ಕಾಲದ ರಾಜಕೀಯ ಪರಿಸ್ಥಿತಿಗಳನ್ನು ಕಂಡು ಅತೃಪ್ತಿ ಹೊಂದಿದ್ದಲ್ಲದೇ ಕುಪಿತನಾಗಿದ್ದನು. ಇದಕ್ಕೆ ಜನರೇ ಕಾರಣರು ಎಂದಿದ್ದಾನೆ. ಜನರು ಸರಿಯಾದ ರೀತಿಯಲ್ಲಿ ಚಿಂತನೆ ನಡೆಸಿ, ಎಲ್ಲರಿಗೂ ಅವಶ್ಯಕವಾದ ಸ್ವಾತಂತ್ರ್ಯ ಸಮಾನತೆ ಮತ್ತು ಭ್ರಾತೃತ್ವವನ್ನು ಅರ್ಥಮಾಡಿಕೊಂಡರೆ ಈಗಿರುವ ಸರ್ಕಾರಗಳು ಲೋಪದೋಷಗಳನ್ನು ಹೋಗಲಾಡಿಸಿ ಸ್ಥಿರ ಸರ್ಕಾರವನ್ನು ತರಬಹುದೆಂದು ಹೇಳಿದನು. ಇದು ಇತಿಹಾಸದಲ್ಲಿ ಹಿಂದೆ ಆಗಿವೆ ಮತ್ತು ಮುಂದೆಯೂ ಆಗಬೇಕಾದುದು ಅಗತ್ಯ ಎಂದು ತಿಳಿಸಿದ್ದಾನೆ.

## 16.4 ಘಟಕದ ಸಾರಾಂಶ

ಈ ಘಟಕದ ಅಧ್ಯಯನದಲ್ಲಿ ನಾವುಗಳು

* ನವೋದಯ ಕಾಲದ ಜ್ಞಾನ ಮತ್ತು ಸುಧಾರಣೆಗಳ ಬಗ್ಗೆ ತಿಳಿದೆವಲ್ಲದೇ ಈ ಕಾಲದಲ್ಲಾದ ಇತಿಹಾಸ ಅಧ್ಯಯನ ಮತ್ತು ಬರವಣಿಗೆಗಳ ಶೈಲಿಯ ಬಗ್ಗೆ ಅರಿತುಕೊಂಡೆವು.
* ಈ ನವೋದಯ ಕಾಲದ ಇತಿಹಾಸದ ಪ್ರವರ್ತಕನಾದ ವಾಲ್ಟೈರ್ ಮತ್ತು ಅವನ ವಿವೇಚನಾಯುಕ್ತ ಚಿಂತನೆಗಳ ಬಗ್ಗೆ ತಿಳಿದುಕೊಂಡೆವು.
* ಈ ಕಾಲದ ಮತ್ತೊಬ್ಬ ಪ್ರತಿಪಾದಕನಾದ ರೋಸೋ ಅವನ ಸಾಮಾಜಿಕ ಒಪ್ಪಂದ ಮತ್ತು ಚರಿತ್ರೆಯ ಮೇಲೆ ಅವನ ಪ್ರಭಾವ ಇವುಗಳನ್ನು ತಿಳಿದುಕೊಂಡೆವು.
* ಇದಲ್ಲದೇ ಈ ನವೋದಯ ಕಾಲದ ವಿದ್ವಾಂಸರು ಅಂದಿನ ಸಮಾಜಧರ್ಮ, ರಾಜಕೀಯ ಮತ್ತು ಇತರೇ ವಿಷಯಗಳಲ್ಲಿದ್ದ ಲೋಪದೋಷಗಳನ್ನು ಹೊರಹಾಕಿದ್ದುದಲ್ಲದೇ, ಇತಿಹಾಸ ಬರವಣಿಗೆ ಹೇಗಿರಬೇಕು ಮತ್ತು ಇತಿಹಾಸದ ರೂಪು ರೇಖೆಗಳೇನು ಎಂಬುದನ್ನು ತಿಳಿಸುವುದನ್ನು ಈ ಘಟಕದಲ್ಲಿ ಅಧ್ಯಯನ ಮಾಡಿದೆವು.

## 16.5 ಸ್ವಯಂ ಪರಿಶೀಲನಾ ಪ್ರಶ್ನೆಗಳು

1. ನವೋದಯ ಕಾಲದ ಇತಿಹಾಸದ ಬೆಳವಣಿಗೆಯಲ್ಲಿ ವಾಲ್ಟೈರ್ ಮತ್ತು ರೂಸೋರವರ ಪಾತ್ರವನ್ನು ವಿವರಿಸಿ.
2. ನವೋದಯ ಕಾಲದ ಇತಿಹಾಸದ ಪ್ರಮುಖ ಲಕ್ಷಣಗಳನ್ನು ವಿವರಿಸಿ.

## 16.6 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. ವೆಂಕಟರತ್ನಂ .ವಿ. ಮತ್ತು ಪದ್ಮ : ಇತಿಹಾಸ ಸಂಶೋಧನಾ ಮಾರ್ಗ
2. Sheik Ali .B. : Its Theory and Method
3. Barnes .H.E. : A History of historical writing


ಡಾ. ಎ. ಸೋಮಶೇಖರ್

# ಘಟಕ - 17 ಕ್ಯಾಂಟ್ - ಟರ್ಗಾಟ್ - ಕಾಂಡೋರ್ಸೆಟ್ ಮತ್ತು ಇತರರು

*ವಿಷಯಸೂಚಿ*


17.0 ಉದ್ದೇಶಗಳು

17.1 ಪೀಠಿಕೆ

17.2 ಇಮ್ಮ್ಯಾನ್ಯುಯಲ್ ಕ್ಯಾಂಟ್ (1724-1804)

17.2.1 ಇಮ್ಮ್ಯಾನ್ಯುಯಲ್ ಕ್ಯಾಂಟ್‌ನ ಚಿಂತನೆಗಳು

17.3 ಜೋಹಾನ್ ಹರ್ಡರ್ (1744-1781)

17.4 ಟರ್ಗಾಟ್ (1727-1781)

17.5 ನಿಕೊಲಸ್ ಕಾಂಡೋರ್ಸೆಟ್ (1743-1794)

17.6 ಘಟಕದ ಸಾರಾಂಶ

17.7 ಸ್ವಯಂ ಪರಿಶೀಲನಾ ಪ್ರಶ್ನೆಗಳು

17.8 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 17.0 ಉದ್ದೇಶಗಳು

ಈ ಘಟಕ 17 ರ ಅಧ್ಯಯನದ ಉದ್ದೇಶವು ನವೋದಯ ಇತಿಹಾಸ ಚಿಂತನೆಯ ಪ್ರತಿಪಾದಕರ ಬಗ್ಗೆ ತಿಳಿಯುವುದಾಗಿದ್ದು ಅವರು ಈ ಚಿಂತನೆಯಿಂದ ಇತಿಹಾಸದ ಬರವಣಿಗೆಯಲ್ಲಿ ಯಾವ ರೀತಿಯ ಮಿಂಚಿನ ಬೆಳಕನ್ನು ಹೊರತಂದರು ಎಂಬುದನ್ನು ಅರಿಯುತ್ತೇವೆ. ಈ ಕಾಲದಲ್ಲಿ ಸಾಕಷ್ಟು ರೀತಿಯಲ್ಲಿ ಕೆಲಸ ಮಾಡಿ ತಮ್ಮದೇ ಆದ ಚಿಂತನೆಗಳನ್ನು ರೂಪಿಸಿ ಇತಿಹಾಸ ಲೇಖನ ಕಲೆಗೆ, ತಮ್ಮ ಕೊಡುಗೆಯನ್ನು ಸಲ್ಲಿಸಿದ ಇಮ್ಯಾನ್ಯೂಯಲ್ ಕ್ಯಾಂಟ್ ಜೋಹಾನ್ ಹರ್ಡರ್, ಟರ್ಗಾಟ್ ಮತ್ತು ನಿಕೋಲಸ್ ಕಾಂಡೋರ್ಸೆಟ್ ಮುಂತಾದವರ ಬಗ್ಗೆ ಈ ಘಟಕದಲ್ಲಿ ಪರಿಚಯ ಮಾಡಿಕೊಳ್ಳಲಿದ್ದೇವೆ. ಇದಲ್ಲದೇ ಇವರೆಲ್ಲರ ಕಾರಣದಿಂದಾಗಿ ನವೋದಯ ಕಾಲದ ಇತಿಹಾಸವು ಹೇಗೆ ಜನಪ್ರಿಯವಾಯಿತು ಎಂಬುದನ್ನು ಇಲ್ಲಿ ಅಧ್ಯಯನ ಮಾಡಲಿದ್ದೇವೆ.

## 17.2 ಇಮ್ಯಾನುಯಲ್ ಕಾಂಟ್ (1724-1804)

ಈ ಕಾಲದ ಶುದ್ಧ ಜ್ಞಾನದ ಮತ್ತೊಬ್ಬ ಪ್ರತಿಭಾವಂತ ಇಮ್ಯಾನ್ಯೂಯೆಲ್ ಕ್ಯಾಂಟ್ ಜರ್ಮನಿಯಲ್ಲಿದ್ದ. ಇವನು ದೈವಶಾಸ್ತ್ರ (ಥಿಯಾಲಜಿ) ಗಣಿತ, ಭೌತಶಾಸ್ತ್ರ, ಭೌತಾತೀತ ವಿದ್ಯೆ (ಮೆಟಫಿಸಿಕ್ಸ್) ಗಳಲ್ಲಿ ಪಾರಂಗತನಾಗಿದ್ದನು. 1784 ರಲ್ಲಿ ಇವನು ಜಗತ್ತಿನ ಇತಿಹಾಸ (ಯೂನಿವರ್ಸಲ್ ಹಿಸ್ಟ್ರಿ) ಎಂಬ ಸಣ್ಣ ಗ್ರಂಥದಲ್ಲಿ ಮೂಲ ಸಂಕಲ್ಪನುಸಾರ ಜಗದ್ವಿಖ್ಯಾತ (ಟೆಲಿಯೋಲಾಜಿಕಲ್ ಪ್ರಿನ್ಸಿಪಾಲ್)ಎಂಬುದನ್ನು ವಿವರಿಸಿದನು. ಇದು ಜಗತ್ತಿನ ವಿಕಾಸವನ್ನು ವಿಷದಪಡಿಸುವುದಾಗಿದೆ. ಮನುಷ್ಯನಲ್ಲಿ ಸಹ ಸಮಾಜ ಸಂಸ್ಥೆ ಜೀವಗಳನ್ನು ಹುಟ್ಟು ಹಾಕುವುದು ಮತ್ತು ಅದಕ್ಕೆ ವಿಧೇಯನಾಗಿರುವುದು ಸ್ವಾಭಾವಿಕ ಗುಣಗಳೆಂದು ಹೇಳಿದನು.

### *17.2.1 ಇಮ್ಯಾನ್ಯುಯಲ್ ಕ್ಯಾಂಟ್‌ನ ಚಿಂತನೆಗಳು*

ವಾಲ್ಟೈರ್ ಮತ್ತು ಹೆಗೆಲ್ ನಡುವೆ ಬಹುದೊಡ್ಡ ತಾತ್ವಿಕ ಕಂದರವಿರುವುದು. ಅವುಗಳನ್ನು ಒಂದುಗೂಡಿಸಲು ಮತ್ತು ಹೆಗೆಲ್‌ನ ಇತಿಹಾಸದ ಚಿಂತನೆಗಳನ್ನು ಅರ್ಥ ಮಾಡಿಕೊಳ್ಳಲು ಕ್ಯಾಂಟ್ ಮತ್ತು ಹರ್ಡರ್‌ರ ಬಗ್ಗೆ ಅಧ್ಯಯನ ನಡೆಸಬೇಕಾಗುತ್ತದೆ. ಕ್ಯಾಂಟ್‌ನ ಪ್ರಕಾರ ಇತಿಹಾಸವು ಪ್ರಕೃತಿ ಸೃಷ್ಟಿ ಮಾಡಿದ್ದು ಮತ್ತು ಪ್ರಕೃತಿಯು ತನ್ನ ಬಚ್ಚಿಟ್ಟ ಯೋಜನೆಯ ಪ್ರಕಾರವೇ ನಡೆಯುತ್ತದೆ. ಪ್ರಕೃತಿಯು ಮಾನವನನ್ನು ಕ್ರಿಯೆಯಲ್ಲಿ ತೊಡಗಿಸುತ್ತದೆ ಮತ್ತು ಮನುಷ್ಯನಿಗೆ ಯಾವುದು ಒಳ್ಳೆಯದು, ಕೆಟ್ಟದ್ದು ಎಂಬುದನ್ನು ಇದೇ ಕಲಿಸಿಕೊಡುತ್ತದೆ. ಇದರಿಂದಾಗಿಯೇ ಮಾನವನಲ್ಲಿ ಆಕ್ಷೇಪಣೆ, ಘರ್ಷಣೆ ಮತ್ತು ಯುದ್ಧಗಳು ನಡೆಯುವಂತೆ ಪ್ರಕೃತಿಯ ಪ್ರೇರೇಪಣೆಯಾಗುತ್ತದೆ. ಈರ್ಶ್ಯೆಯು ಮಾನವನಲ್ಲಿ ರಾಕ್ಷಸೀ ಪ್ರವೃತ್ತಿಯನ್ನು ಬೆಳೆಸಿ ಮತ್ತು ಅದರ ನೋವುಂಡ ನಂತರ ಮಾನವರಲ್ಲಿ ಒಂದಾಗಿ ಬಾಳುವ ಮನಸ್ಸನ್ನು ಸೃಷ್ಟಿಸುತ್ತದೆ ಎಂದು ಕ್ಯಾಂಟ್ ತಿಳಿಸುತ್ತಾನೆ. ಇದಲ್ಲದೇ ಇತಿಹಾಸದಲ್ಲಿ ನಡೆಯುವ ಘಟನೆಗಳು ದಡ್ಡತನವೂ, ತಪ್ಪು ಅಭಿಪ್ರಾಯ ತರಿಸುವಂತಹವೂ, ಬಾಲಿಶವೂ ಮತ್ತು ಕ್ರೂರವೂ ಹಾಗೂ ವಿನಾಶದಲ್ಲಿ ಪ್ರೀತಿಯನ್ನು ತೋರಿಸುವ ಘಟನೆಗಳೂ ಆಗಿರುತ್ತವೆ. ಆದರೆ ಇವುಗಳೆಲ್ಲವನ್ನು ಒಂದುಗೂಡಿಸಿ ಪ್ರಕೃತಿಯು ನೈತಿಕತೆಯ ಪ್ರಾಮುಖ್ಯತೆಯನ್ನು ನಿರೂಪಿಸುತ್ತಿಗೆ. ಅಂದರೆ ಇತಿಹಾಸ ಈ ಎಲ್ಲಾ ರೀತಿಯ ಎಲ್ಲಾ ಕ್ರಾಂತಿಗಳು, ಚಳುವಳಿಗಳು, ಇತರೇ ಘಟನೆಗಳು ನಡೆದು ಮಾನವಕುಲಕ್ಕೆ ಒಂದು ಆಶಾಭಾವನೆಯನ್ನು ರೂಪಿಸುತ್ತವೆ ಮತ್ತು ಇವುಗಳೆಲ್ಲವನ್ನು ನಿಯಂತ್ರಣ ಮಾಡುವುದು ಪ್ರಕೃತಿಯೇ ಸರಿ ಎಂದಿದ್ದಾರೆ. ಇದರೊಂದಿಗೆ ಇವನು ಹೆಗೆಲ್ ಮತ್ತು ಮಾರ್ಕ್ಸರು ಮುಂದೆ ಮಾಡುವ ಕಾರ್ಯಗಳಿಗೆ ಉತ್ತೇಜನವನ್ನು ನೀಡುವಂತಹ ಕೆಲಸವನ್ನು ಮಾಡಿದ್ದಾನೆಂದು ಹೇಳಬಹುದು. ಅಂದರೆ ಇತಿಹಾಸ ಬರವಣಿಗೆಯೂ ವಾಸ್ತವಿಕ ಅಂಶಗಳನ್ನು ಒಳಗೊಂಡಿರಬೇಕು ಎಂಬುದಾಗಿ ಕ್ಯಾಂಟ್ ತಿಳಿಸುತ್ತಾನೆ. ಇದಲ್ಲದೇ ಮನುಷ್ಯನು ಸ್ವಯಂ ನಿಯಂತ್ರಣವನ್ನು ಸಾಧಿಸಲು ಪ್ರಕೃತಿ ನಿರ್ಮಿತ ನಿಯಮಗಳಿಗೆ ತಲೆಭಾಗಬೇಕು. ಯಾಕೆಂದರೆ ಮಾನವನ ಪ್ರಗತಿಯಲ್ಲಿ ಪ್ರಕೃತಿಯ ಯೋಜನೆಯು ಪ್ರಮುಖ ಮತ್ತು ಅಂತಿಮ ಪಾತ್ರವನ್ನು ವಹಿಸುತ್ತದೆಯೆಂದು ಕ್ಯಾಂಟ್ ತಿಳಿಸುತ್ತಾನೆ.

## 17.3 ಜೋಹಾನ್ ಹರ್ಡರ್ (1744-1803)

ಮತ್ತೊಬ್ಬ ಇತಿಹಾಸ ದಾರ್ಶನಿಕ (ಫಿಲಾಸಫರ್ ಆಫ್ ಹಿಸ್ಟರಿ) ಜೋಹಾನ್ ಹರ್ಡರ್. ಇವನ ಪ್ರಖ್ಯಾತ ಗ್ರಂಥ - "ಐಡಿಯಾಸ್ ಫಾರ್ ದಿ ಫಿಲಾಸಫಿ ಆಫ್ ದಿ ಹಿಸ್ಟರಿ ಆಫ್ ದಿ"ಹ್ಯೂಮ್ಯಾನಿಟಿ" ಈ ಗ್ರಂಥದಲ್ಲಿ ಪ್ರತಿರಾಷ್ಟ್ರವು ತನ್ನದೇ ಆದ ವ್ಯಕ್ತಿತ್ವ ಪಡೆದಿರುತ್ತದೆ. ಜನಗಳು ಬೇರೆ ಬೇರೆಯಾಗಿರಲು ವಾಯುಗುಣ, ಪರಿಸ್ಥಿತಿ. ಪರಿಸರ ಮತ್ತು ರಕ್ತದ ಬೆರಕೆಗಳೇ ಕಾರಣವೆಂದು ಸಾಧಿಸಿದನು. ಈ ತತ್ವಗಳಲ್ಲಿ ರೂಸೋವಿನ ಜನರಲ್ ವಿಲ್ (ಸಾರ್ವತ್ರಿಕ ಸಂಕಲ್ಪ) ಮಾಂಟೆಸ್ಕ್ಯೋವಿನ ರಾಷ್ಟ್ರೀಯ ಸ್ವಭಾವ ಮತ್ತು ಹೊಂದಾಣಿಕೆಯ ಸಂಪರ್ಕ ಮತ್ತು ಹೆಗಲನ ಸ್ವಾತಂತ್ರ್ಯದ ಕಡೆಗೆ ವಿಕಾಸವಾದದ ಪ್ರಗತಿಯ ಚಲನೆ ಮುಂತಾದ ಚಿಂತೆಗಳ ಮಿಶ್ರಣವಾಗಿತ್ತು. ಇದಲ್ಲದೆ ಅವನು ಇತಿಹಾಸ, ಭೂಗೋಳಶಾಸ್ತ್ರ, ರಾಜಕೀಯ ಶಾಸ್ತ್ರದ ಸಮ್ಮಿಲನವಾದ ಭೂರಾಜ್ಯಶಾಸ್ತ್ರದ (ಜಿಯೋಪಾಲಿಟಿಕ್ಸ್) ಜನಕ, "ನಾಗರಿಕತೆಯು ತನಗೆ ತಾನೆ ಹೂವಿನಂತೆ ಅರಳುತ್ತದೆ". ಇದರಂತೆ ಮಾನವನೂ ತನ್ನ ಸ್ವಸಾಮರ್ಥ್ಯದಿಂದ ತನಗೆ ಎಷ್ಟು ಯೋಗ್ಯತೆ ಇದೆಯೋ ಅಷ್ಟನ್ನು ಪಡೆಯುತ್ತಾನೆ. ಆದರೆ ನೈಸರ್ಗಿಕ ಪದ್ಧತಿಯನ್ನೂ ಮನುಷ್ಯನ ಪ್ರಯತ್ನ ಪೂರ್ವಕ ಸಾಧನೆಯನ್ನೂ ಹೊಂದಾಣಿಕೆ ಮಾಡುವುದೇ ಸಮಸ್ಯೆಯಾಗಿದೆ ಎಂದು ತಿಳಿಸಿದ್ದಾನೆ.

### *17.3.1 ಹರ್ಡರ್ ಮತ್ತು ಅವನ ಇತಿಹಾಸ ದರ್ಶನ*

ಹರ್ಡರ್ ಕ್ಯಾಂಟ್‌ನ ಒಬ್ಬ ಶಿಷ್ಯನಾಗಿದ್ದರೂ ಸಹ ಅವನ ಇತಿಹಾಸ ದರ್ಶನವನ್ನು ಇವನು ಒಪ್ಪಲಿಲ್ಲ. ಕ್ಯಾಂಟ್ ಒಬ್ಬ ತಣ್ಣಗೆ, ಮೆತ್ತಗೆ, ಲೆಖ್ಖಾಚಾರ, ಎಚ್ಚರಿಕೆ ಮತ್ತು ವಿಮರ್ಶೆಗೆ ಪ್ರಸಿದ್ಧಿಯಾಗಿದ್ದರೆ, ಹರ್ಡರ್‌ನು ಭಾವಾವೇಶ ಮತ್ತು ಕಲ್ಪನೆಗೆ ಹೆಸರುವಾಸಿಯಾಗಿದ್ದನು. ಇವನೊಬ್ಬ ವೈಚಾರಿಕ ತರ್ಕಗಳಿಗೆ ಬೆಲೆಕೊಡುತ್ತಿದ್ದನು. ಇವನು ಹೆಚ್ಚಿನ ಜ್ಞಾನಾಸಕ್ತನೂ ಮತ್ತು ಕಷ್ಟ ಜೀವಿಯೂ ಆಗಿದ್ದು, ತನ್ನ ಶೈಕ್ಷಣಿಕ ಜೀವನದಲ್ಲಿ ದರ್ಶನಶಾಸ್ತ್ರ, ಸಾಹಿತ್ಯ, ಮಾನವಶಾಸ್ತ್ರ ಮತ್ತು ಜಾನಪದ ವಿಷಯಗಳನ್ನು ಚೆನ್ನಾಗಿ ಅಧ್ಯಯನ ನಡೆಸಿದನು. ಇದಲ್ಲದೇ ಈ ಕಾಲದ ಒಬ್ಬ ಪ್ರವಾದಿಯಂತೆ ಅವನು ಕಾವ್ಯಗಳ ಮೂಲಕ ಜನರಿಗೆ ತಿಳಿಯ ಹೇಳುತ್ತಿದ್ದನು. ಇವನು ಫ್ರಾನ್ಸ್ ಮತ್ತು ಜರ್ಮನಿಯ ಅನೇಕ ವೈಚಾರಿಕ ನಿಯಮಗಳನ್ನು ರೂಢಿಸಿಕೊಂಡಿದ್ದನು.

ಇವು ಇತಿಹಾಸವು ಒಂದು ಪ್ರಕೃತಿಯ ವಿಕಾಸವಾದವೆಂದು ತನ್ನ ಪ್ರಮುಖ ಗ್ರಂಥದಲ್ಲಿ ತಿಳಿಸಿದ್ದಾನೆ. ಇವನ ಚಿಂತನೆಗಳು ಕೆಲವೊಮ್ಮೆ ಡಾರ್ವಿನ್ನನ ಚಿಂತನೆಗಳನ್ನು ಸರಿದೂಗುತ್ತವೆ. ಅಭಿವೃದ್ಧಿಯ ಗತಿಯು ಸೌರವ್ಯೂಹ, ಭೂಮಿ, ಸಸ್ಯವರ್ಗ ಜೀವಿಗಳು, ಪ್ರಾಣಿ ಜೀವನ ಮತ್ತು ಮಾನವ ಜೀವನದವರೆಗೂ ಮುಂದುವರಿಯಿತೆಂದು ತಿಳಿಸುತ್ತಾರೆ. ಎಲ್ಲಾ ಜೀವಿಗಳೂ ತಮ್ಮ ಅಂತಿಮ ಪ್ರಮುಖ ಕಾರ್ಯವನ್ನು ಮಾಡುತ್ತವೆಂದು ತಿಳಿಸಿದನು. ಮಾವ ಜನ್ಮವು ಜನಾಂಗದ ಒಂದು ಅನುಭವವೆಂದನು. ಇವನು ಇತಿಹಾಸವನ್ನು ಮೂರು ಯುಗಗಳಾಗಿ ವಿಂಗಡಿಸಿದ್ದಾನೆ. ಅವುಗಳು ಕಾವ್ಯಗಳ ಯುಗ, ಗದ್ಯಗಳಯುಗ ಮತ್ತು ದರ್ಶನಯುಗ ಎಂಬುದಾಗಿ, ತಿಳಿಸಿ ಅವುಗಳು ಒಂದೊಂದು ಸ್ವತಂತ್ರವಾಗಿ ರೂಪಿತವಾದದ್ದು ಎಂದು ತಿಳಿಸಿದ್ದಾನೆ. ಇತಿಹಾಸವು ಎರಡು ಬಲಗಳಿಂದ ರೂಪಿತವಾಗಿದೆ. ಆ ಬಲಗಳು ಬಾಹ್ಯ ಬಲದಲ್ಲಿ ಮಾನವ ಪರಿಸರ ಮತ್ತು ಆಂತರಿಕ ಬಲದಲ್ಲಿ ಮಾನವ ಚೈತನ್ಯಗಳು ಕಾರಣವೆನ್ನುತ್ತಾರೆ. ಹರ್ಡರ್ ಇತಿಹಾಸವನ್ನು ಅಧ್ಯಯನ ಮಾಡುವವರು ದೇಶದ ಚೈತನ್ಯವನ್ನು ನೋಡಿ ಅಧ್ಯಯನ ನಡೆಸಬೇಕೆನ್ನುತ್ತಾರೆ. ಇದೇ ಮುಂದೆ ಜರ್ಮನ್ ಇತಿಹಾಸಜ್ಞರಲ್ಲಿ ಧೈರ್ಯ ಮತ್ತು ಸವಾಲಿನ ಇತಿಹಾಸವನ್ನು ಹುಟ್ಟುಹಾಕಲು ಕಾರಣವಾಯಿತು ಎನ್ನಬಹುದು. ಆದರೂ ಹರ್ಡರ್ ಇತಿಹಾಸದಲ್ಲಿ ಮಾನವನ ಶಕ್ತಿಯುತ ಕಾರ್ಯವನ್ನು ಅಲ್ಲಗೆಳೆಯಲಿಲ್ಲ.

ಇವನು ತನ್ನ ವಿಶ್ಲೇಷಣೆಯಲ್ಲಿ ಜನಾನುರಾಗಿ ಸಂಸ್ಕೃತಿ, ಕಲೆ, ಧರ್ಮ, ನಂಬಿಕೆ, ಮೂಢನಂಬಿಕೆ, ರಾಷ್ಟ್ರೀಯ ಸಂಸ್ಕೃತಿಯ ಇತಿಹಾಸದ ಬರವಣಿಗೆಗಳಿಗೆ ಅಡಿಪಾಯ ಹಾಕಿದೆ ಎನ್ನಬಹುದು. ಇದು ಮುಂದೆ ಏಷ್ಯಾ ಮತ್ತು ಆಫ್ರಿಕಾ ದೇಶಗಳಲ್ಲಿ ಮುಂದೆ ರಾಷ್ಟ್ರೀಯತೆಯ ಮನೋಭಾವದ ಬೆಳವಣಿಗೆಗೆ ಕಾರಣವಾಯಿತು.

ಹೀಗೆ ಕ್ಯಾಂಟ್ ಮತ್ತು ಹರ್ಡರ್ ತಮ್ಮದೇ ವೈಚಾರಿಕತೆಯಿಂದ ಇತಿಹಾಸದ ಬರವಣಿಗೆಗೆ ಇಂಬು ಕೊಟ್ಟರಲ್ಲದೇ, ಪ್ರಕೃತಿಯು ಇತಿಹಾಸದ ನಿರೂಪಣೆಗೆ ಬಹಳಷ್ಟು ಪ್ರಭಾವ ಬೀರುತ್ತದೆ ಎಂದು ತಿಳಿಸಿದರು.

## 17.4 ಟರ್ಗಾಟ್ (1727-1781)

ಇವನು ಫ್ರಾನ್ಸಿನ ವಿವೇಚನಾವಾದಿ (ರ್‍ಯಾಷನಲಿಸ್ಟ್) ಇವನ ಗ್ರಂಥ "ದಿ ಡಿಸ್ಕೋರ್ಸರ್ಸ್ ಆನ್ ದಿ ಹಿಸ್ಟಾರಿಕಲ್ ಪ್ರೋಗ್ರೆಸ್ ಆಫ್ ಹ್ಯೂಮನ್ ಮೈಂಡ್". ಇದರಲ್ಲಿ ಮನುಷ್ಯನು ಹೇಗೆ ಅಂಧಶ್ರದ್ಧೆ ಮತ್ತು ಮತೀಯ ಹಿಡಿತಗಳಿಂದ ಚಾರಿತ್ರಿಕ ವಿಧಾನಗಳಿಂದ ವಿವೇಚನೆ ಮತ್ತು ವೈಜ್ಞಾನಿಕ ಹಂತವನ್ನೂ ಹೊಂದುತ್ತಾನೆಂದೂ ವಿವರಿಸಿದ್ದಾನೆ. ಗೂಚ್ ಇವನನ್ನು ಇತಿಹಾಸ ದರ್ಶನದ ಜನಕ ಎಂದು ಕರೆದನು. ಟರ್ಗಾಟ್ ಅಭಿವೃದ್ಧಿಯು ಜ್ಞಾನದಿಂದ ಮಾತ್ರ ಸಾಧ್ಯ ಇದು ಧಾರ್ಮಿಕ ತಳಹದಿಯಲ್ಲೇ ಆಗುತ್ತದೆ ಎಂದನು. ವ್ಯಕ್ತಿಯ ಬೆಳವಣಿಗೆಯು ಸಮಾಜದ ಬೆಳವಣಿಗೆಗೆ ಪ್ರೇರಕ ಎಂದನು.

## 17.5 ನಿಕೊಲಸ್ ಕಾಂಡರ್‌ಸೆಟ್ (1743-1794)

ಇವನು ವಿಜ್ಞಾನವನ್ನೂ ಗಣಿತಶಾಸ್ತ್ರವನ್ನೂ ಅಭ್ಯಾಸ ಮಾಡಿದ್ದನು. ಫ್ರಾನ್ಸಿನ ಮಹಾಕ್ರಾಂತಿಯಲ್ಲಿ ಭಾಗವಹಿಸಿದ್ದನು. ಇವನ ಗ್ರಂಥ 'ಹಿಸ್ಟಾರಿಕಲ್ ಪಿಕ್ಚರ್ ಆಫ್ ದಿ ಪ್ರೋಗ್ರೆಸ್ ಆಫ್ ದಿ ಹ್ಯೂಮನ್ ಮೈಂಡ್', ಇದರ ಪರಿಣಾಮವಾಗಿ 1797 ರಲ್ಲಿ ಇವನು ಸೆರೆಮನೆ ವಾಸ ಕಾಣಬೇಕಾಯಿತು. ಇವನ ಗ್ರಂಥದಲ್ಲಿ ಸಾರ್ವತ್ರಿಕ ಮತದಾನ, ವಾಕ್ ಸ್ವಾತಂತ್ರ್ಯ, ನ್ಯಾಯದ ಸರ್ವಸಮಾನತೆಗಳನ್ನೂ ಮತ್ತು ಆರ್ಥಿಕ ಸಂಪತ್ತಿನ ಸಮಾನ ಹಂಚಿಕೆಯನ್ನು ರಾಷ್ಟ್ರದ ಗುರಿಯನ್ನಾಗಿ ಬೋಧಿಸಿದನು. ಮನುಷ್ಯನ ಆಗು ಹೋಗುಗಳು ಜಗತ್ತಿನ ನ್ಯಾಯದಿಂದ ನಿಯಂತ್ರಣಗೊಳಿಸಲ್ಪಡುತ್ತವೆ. ಅವುಗಳನ್ನು ತಿಳಿದು ಮುಂದಾಗುವುದನ್ನು ತಿಳಿಯಬಹುದು ಎಂದು ತಿಳಿಸಿದನು. ಇತಿಹಾಸದಲ್ಲಿ ಎಲ್ಲವನ್ನು ದೊಡ್ಡವರ ಚಟುವಟಿಕೆಯಾಗಿ ಭಾವಿಸದೆ ಸಾಮಾನ್ಯರ ಭಾವನೆಗಳನ್ನು ಪ್ರತಿಭಟಿಸಬೇಕೆಂದು ಹೇಳಿದನು. ಇವನು ಮಾನವನ ಕಾರ್ಯಗಳನ್ನು ಜಾಗತಿಕ ನಿಯಮಗಳು ನಿಯಂತ್ರಿಸುತ್ತವೆ. ಇವುಗಳನ್ನು ಹುಡುಕಿ ಅವುಗಳ ಜ್ಞಾನದಿಂದ ಭವಿಷ್ಯದ ಜೀವನ ರೂಪಿಸಲು ಪ್ರಯತ್ನಿಸಬೇಕು ಎಂದಿದ್ದಾನೆ. ಮಾನವನು ತನ್ನ ಮಟ್ಟವನ್ನು ಸುಧಾರಿಸಿಕೊಳ್ಳಲು ಪ್ರಗತಿಯಲ್ಲಿ ಬರುವ ಎಡರು ತೊಡರುಗಳನ್ನು ಎದುರಿಸುತ್ತಾನೆ ಮತ್ತು ತತ್ವಗಳನ್ನು ಎಸಗುತ್ತಾನೆ. ಜನಸಾಮಾನ್ಯರ ಭಾವನೆಗಳಿಗೆ ಬೆಲೆ ಕೊಡಬೇಕೆಂದು ತಿಳಿಸುತ್ತಾನೆ ಮತ್ತು ಕಾರ್ಲ್ ಮಾರ್ಕ್ಸ್ ವಾದಕ್ಕೆ ಹತ್ತಿರ ಬರುತ್ತಾನೆ. ಆದರೆ ಸಮಾಜವಾದವನ್ನು ಇದು ಹೋಲುವುದಿಲ್ಲ.

## 17.6 ಘಟಕದ ಸಾರಾಂಶ

ಈ ಘಟಕದ ಅಧ್ಯಯನದಿಂದ ಕೆಳಗಿನ ವಿಷಯಗಳನ್ನು ತಿಳಿದುಕೊಂಡೆವು.

* ನವೋದಯ ಕಾಲದ ಇತಿಹಾಸ ಲೇಖನ ಕಲೆಯನ್ನು ಅರಿತುಕೊಂಡೆವು.
* ಇಮ್ಮ್ಯಾನ್ಯುಯೆಲ್ ಕ್ಯಾಂಟ್‌ನ ಜೀವನ ಮತ್ತು ಕಾರ್ಯಗಳ ಬಗ್ಗೆ ತಿಳಿದುಕೊಂಡೆವಲ್ಲದೇ ನವೋದಯ ಇತಿಹಾಸ ಲೇಖನ ಕಲೆಗೆ ಇವನು ನೀಡಿದ ಉತ್ತೇಜನವನ್ನು ತಿಳಿದೆವು.
* ವಿದ್ವಾಂಸ ಟರ್ಗಾಟ್‌ನ ದರ್ಶನ ಮತ್ತು ಕಾರ್ಯವನ್ನು ತಿಳಿದುಕೊಂಡೆವು.
* ಪ್ರಜ್ಞಾವಂತ ವಿದ್ವಾಂಸ ಮತ್ತು ಇತಿಹಾಸಕಾರ ಕಾಂಡೋರ್ಸೆಟ್ ಮತ್ತು ನವೋದಯ ಲೇಖನ ಕಲೆಗೆ ಅವನ ಕೊಡುಗೆಯನ್ನು ಕಂಡುಕೊಂಡೆವು.

## 17.7 ಸ್ವಯಂ ಪರಿಶೀಲನಾ ಪ್ರಶ್ನೆಗಳು

1. ನವೋದಯ ಇತಿಹಾಸ ಲೇಖನ ಕಲೆಯ ಮೂಲ ಲಕ್ಷಣಗಳನ್ನು ವಿವರಿಸಿ.
2. ಟಿಪ್ಪಣಿ ಬರೆಯಿರಿ;

   ಕ್ಯಾಂಟ್, ಟರ್ಗಾಟ್, ಕಾಂಡೋರ್ಸೆಟ್

## 17.8 ಹೆಚ್ಚಿನ ಅಧ್ಯಯನದ ಗ್ರಂಥಗಳು


1. Sheik Ali .B. : History; Its Theory and Method
2. Satish .K. Bajaj : Research Methodology in History


ಡಾ. ಎ. ಸೋಮಶೇಖರ್

# ಘಟಕ - 18 ಥಾಮಸ್ ಕಾರ್ಲೈಲ್-ಹೆಗೆಲ್

*ವಿಷಯಾಸೂಚಿ*


18.0 ಉದ್ದೇಶಗಳು

18.1 ಪೀಠಿಕೆ

18.2 ರಮ್ಯತೆಯ ಇತಿಹಾಸ ಬರವಣಿಗೆ

18.3 ಥಾಮಸ್ ಕಾರ್ಲೈಲ್ (1795-1881)

18.3.1 ಕಾರ್ಲೈಲ್‌ನ ರಮ್ಯತೆಯ ಲೇಖನ ಕಲೆಗಳ ಚಿಂತನೆಗಳು

18.4 ಜಾರ್ಜ್ ವಿಲ್‌ಹೆಲ್ಮ್ ಫ್ರೆಡರಿಕ್ ಹೆಗೆಲ್ (1770-1830)

18.5 ಇತಿಹಾಸದಲ್ಲಿ ಇವುಗಳ ಪ್ರಭಾವ

18.6 ಘಟಕದ ಸಾರಾಂಶ

18.7 ಸ್ವಯಂ ಪರಿಶೀಲನಾ ಪ್ರಶ್ನೆಗಳು

18.8 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 18.0 ಉದ್ದೇಶಗಳು

ಘಟಕ 18 ರ ಅಧ್ಯಯನದಿಂದ ನಾವು ಈ ಪ್ರಮುಖ ಅಂಶಗಳನ್ನು ತಿಳಿಯಲು ಪ್ರಯತ್ನಿಸುತ್ತೇವೆ.

* ಥಾಮಸ್ ಕಾರ್ಲೈಲ್ ರಮ್ಯತೆಯ ಇತಿಹಾಸ ಲೇಖನ ಕಲೆಗೆ ಸಲ್ಲಿಸಿದ ಕೊಡುಗೆಯನ್ನು ತಿಳಿಯಲಾಗುವುದು.
* ಇತಿಹಾಸ ದರ್ಶನ ಶಾಸ್ತ್ರಜ್ಞನಾದ ಹೆಗೆಲ್ ಮತ್ತು ಅವನ ಇತಿಹಾಸ ಬರವಣಿಗೆಯನ್ನು ತಿಳಿಯುತ್ತೇವೆ.
* ರಮ್ಯತೆಯ ಇತಿಹಾಸ ಲೇಖನ ಕಲೆಯ ಪ್ರಮುಖ ಅಂಶಗಳು ಮತ್ತು ದರ್ಶನವನ್ನು ತಿಳಿಯುತ್ತೇವೆ.

## 18.1 ಪೀಠಿಕೆ

ಈ ಘಟಕದಲ್ಲಿ ರಮ್ಯತೆಯ ಇತಿಹಾಸ ಲೇಖನ ಕಲೆಯ ಬಗ್ಗೆ ತಿಳಿಯಲಾಗುವುದು. ಈ ಚಿಂತನಾ ಶೈಲಿಗೆ ಅನೇಕ ಇತಿಹಾಸಜ್ಞರು ಕೊಡುಗೆ ನೀಡಿದ್ದಾರೆ. ಈ ಲೇಖನ ಕಲೆಯು ಜನರನ್ನು ಬಹಳಷ್ಟು ಆಕರ್ಷಿಸಿರುವುದನ್ನು ಕಾಣುತ್ತೇವೆ. ಈ ಇತಿಹಾಸಕಾರರಲ್ಲಿ ಥಾಮಸ್ ಕಾರ್ಲೈ ಮತ್ತು ಹೆಗೆಲ್‌ರನ್ನು ಪ್ರಮುಖ ಇತಿಹಾಸಕಾರರೆಂದು ಅಧ್ಯಯನ ಮಾಡುತ್ತೇವೆ. ಇವರು ರಮ್ಯತೆಯ ಇತಿಹಾಸ ಲೇಖನ ಕಲೆಗೆ ಮತ್ತು ಇದರ ಅಭಿವೃದ್ಧಿಗೆ ಕಾರಣರಲ್ಲದೇ, ಸಮಕಾಲೀನ ಕಾಲದಲ್ಲಿ ಈ ಚಿಂತನೆಯು ಆಕರ್ಷಿತವಾಯಿತಲ್ಲದೇ ಇದು ಜನಾನುರಾಗಿಯೂ ಆಯಿತು. ಥಾಮಸ್ ಕಾರ್ಲೈಲ್ ಮತ್ತು ಹೆಗೆಲರ ವ್ಯಕ್ತಿತ್ವವನ್ನು ತಿಳಿದುಕೊಳ್ಳಲು ಪ್ರಯತ್ನ ಪಡೋಣ.

## 18.2 ರಮ್ಯತೆಯ ಇತಿಹಾಸ ಬರವಣಿಗೆ

19 ನೇ ಶತಮಾನದಲ್ಲಿ ಯೂರೋಪಿನ ಬರವಣಿಗೆಗಾರರಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗಿ ನಾನಾ ಪಂಥಗಳು ಹುಟ್ಟಿಕೊಂಡವು. ಜ್ಞಾನೋದಯ ಕಾಲದ ರಾಷ್ಟ್ರೀಯತೆ ಮತ್ತು ಅಲೌಕಿಕ ವಿಚಾರಧಾರೆಗಳಿಗೆ ಕ್ರಮೇಣ ಬೆಂಬಲ ಕಡಿಮೆಯಾಯಿತು. ಫ್ರೆಂಚ್ ಕ್ರಾಂತಿಯ ನಂತರ (1787) ಎರಡು ವಿಭಿನ್ನ ಮಾರ್ಗಗಳು ಉಂಟಾದವು. ಅವುಗಳನ್ನು ಭಾವನಾ ಸ್ವಾತಂತ್ರ್ಯ ಅಥವಾ ರಮ್ಯತವಾದಿಗಳೆಂದು ನಿರ್ದೇಶಿಸಲಾಯಿತು. ಅವುಗಳಾವುವೆಂದರೆ ಹಿಂದಿನ ವೈಭವವನ್ನು ನೆನಪಿಗೆ ತರುವ ಹಂಬಲ (ವಾಸ್ಟಾಲಿಯ) ಮತ್ತು ಪೂರ್ವ ಸ್ಥಿತಿಗೆ ಮತ್ತೆ ತರುವ (ರೆಸ್ಟೋರ್‌ಡ್) ಇತಿಹಾಸ ಬರವಣಿಗೆಗಳು. ಇವೆರಡಕ್ಕೂ ಮಧ್ಯ ಕಾಲದ (ಯುಗದ) ನೆನಪುಗಳೇ ಆಧಾರವಾಯಿತು. ಜ್ಞಾನೋದಯ ಕಾಲದ ವಿವೇಚನಾ ಪದ್ಧತಿಯನ್ನು ಬಿಟ್ಟು ಪುನಃ ಹಳೆಯ ಧರ್ಮಗಳು, ಸಂಪ್ರದಾಯಗಳು, ಹಳೆಯ ರಾಷ್ಟ್ರೀಯ ಪದ್ಧತಿಗಳು, ಮತೀಯ ಯುದ್ಧಗಳನ್ನು ಮತಧರ್ಮಗಳು, ಪ್ರಾದೇಶಿಕ ಭಾವನೆಗಳು ಸ್ಫೂರ್ತಿ ನೀಡಿದವು. ಇವುಗಳು ಸಾಹಿತ್ಯದ ಪ್ರಕಾರಗಳಾದ ಐತಿಹಾಸಿಕ ಕಾದಂಬರಿ, ಲಾವಣಿಗಳ ಸ್ವರೂಪವನ್ನು ತನ್ನದನ್ನಾಗಿ ಮಾಡಿಕೊಳ್ಳಲು ಯತ್ನಿಸಿದವು. ರಮ್ಯತೆ ಕವಿಗಳ ಭಾವನೆಗಳು, ಬುದ್ಧಿ, ವಿವೇಚನೆಗಳನ್ನು ತೊರೆದು, ಹೆಚ್ಚು ಗಮನ ಸೆಳೆದವು. ಇಂಥ ಇತಿಹಾಸಕಾರರಲ್ಲಿ ಥಾಮಸ್ ಕಾರ್ಲೈಲ್ ಪ್ರಸಿದ್ಧನು.

## 18.3 ಕಾರ್ಲೈಲ್ (1795-1881)

ಇವನ ಭಾವನೆಗಳು ಬರವಣಿಗೆಯಲ್ಲಿ ಒಂದು 19 ನೇ ಶತಮಾನದ ಅನೇಕ ಚಿಂತಕರಲ್ಲಿ ಅಲ್ಲೋಲ ಕಲ್ಲೋಲವನ್ನುಂಟು ಮಾಡಿತು. ಇವನು ತನ್ನ ಅಭಿಪ್ರಾಯಗಳನ್ನು ಏನೇ ಕಾರಣಗಳಿಂದ ಬದಲಾಯಿಸದೆ ದೃಢವಾದ ಸಿದ್ಧಾಂತಗಳನ್ನು ಪ್ರಚುರಪಡಿಸಿದನು. ಇವನ ಬರವಣಿಗೆಯ ಶೈಲಿ ಮನೋಹರವಾಗಿತ್ತು ಮತ್ತು ಮನಸ್ಸನ್ನು ಸಂತೋಷಪಡಿಸಿ ಗೆಲ್ಲುವ ಮನೋವೃತ್ತಿಯದಾಗಿತ್ತು, ಇವನ ಮುಖ್ಯಸಿದ್ಧಾಂತವೆಂದರೆ "ಇತಿಹಾಸವು ಮಹನೀಯರ ಜೀವನ ಚರಿತ್ರೆಯಲ್ಲದೆ ಬೇರಲ್ಲ" ಅವನಿಗೆ ಅಲೆಕ್ಸಾಂಡರ್, ಜೂಲಿಯಸ್ ಸೀಸರ್, ಜೀಸಸ್ ಫ್ರೆಡರಿಕ್, ನೆಪೋಲಿಯನ್ನರ ಜೀವನ ಅದ್ಭುತವಾಗಿ ತಮ್ಮ ಕಾಲದ ಇತಿಹಾಸದ ಮೇಲಲ್ಲದೆ ಮುಂದಿನ ಕಾಲಗಳ ಮೇಲೂ ಪ್ರಬಲವಾದ ಪರಿಣಾಮ ಹೊಂದಿರುತ್ತವೆ ಎಂಬ ನಂಬುಗೆ ಇತ್ತು. ತನ್ನ ಉತ್ತಮ ಕೃತಿಗಳಾದ 1. "ಹಿಸ್ಟರಿ ಆಫ್ ಫ್ರೆಡರಿಕ್ ದಿ ಗ್ರೇಟ್" 2. 'ಅರ್ಲಿ ಕಿಂಗ್ಸ್ ಆಫ್ ನಾರ್ವೆ', 3. 'ಆಲಿವರ್ ಕ್ರಾಮ್‌ವೆಲ್ಸ್ ಲೆಟರ್ಸ್', 4. 'ಸ್ಪೀಚಸ್ ಅಂಡ್ ಲೈಫ್ ಆಫ್ ಜಾನ್

ಸ್ಟರ್ಲಿಂಗ್', 5. 'ಎ ಹಿಸ್ಟ್ರಿ ಆಫ್ ಫ್ರೆಂಚ್ ರೆವಲ್ಯೂಷನ್', 6. 'ಹಿರೋಸ್ ಅಂಡ್ ಹಿರೋ ವರ್ಶಿಪ್'ಗಳಲ್ಲಿ ತನ್ನ ಅಭಿಪ್ರಾಯಗಳನ್ನು ಸೊಗಸಾಗಿ ತುಂಬಿದ್ದಾನೆ. ಇವುಗಳಲ್ಲಿ ಅವನು ನಿಷ್ಪಕ್ಷಪಾತನಾಗಿದ್ದನೆಂದು ಹೇಳಲು ಸಾಧ್ಯವಿಲ್ಲ. ತನಗೆ ಬೇಕಾದ ವಿಷಯಗಳನ್ನು ರಮ್ಯವಾಗಿ ಚಿತ್ರಿಸಿ, ಬೇಡವಾದ ಸಂಗತಿಗಳನ್ನು ದೂರವಿಟ್ಟಿದ್ದಾನೆ. ಈ ಕಾರಣಗಳಿಂದ ಇವನನ್ನು ಸತ್ಯವಂತ ಇತಿಹಾಸಕಾರನೆಂದು ಹೇಳಲು ಸಾಧ್ಯವಿಲ್ಲ. ಆದರೆ ಅವನು ಬರೆದ ಜೀವನ ಚರಿತ್ರೆಗಳೆಲ್ಲ ಸೊಗಸಾಗಿ ನಿರೂಪಿಸಲ್ಪಟ್ಟು ಅವನನ್ನು 'ಇಂಗ್ಲೀಷ್ ಭಾಷೆಯ ಅತ್ಯಂತ ಶ್ರೇಷ್ಠ ಜೀವನ ಚಿತ್ರಕಾರ'ನೆಂಬ ಖ್ಯಾತಿಗೆ ಕಾರಣವಾಗಿದೆ. ಇವುಗಳ ಜನಪ್ರಿಯತೆಯನ್ನು ನೋಡಿ ಇಂಗ್ಲೆಂಡ್, ಫ್ರಾನ್ಸ್, ಜರ್ಮನಿಯ ಅನೇಕ ಬರಹಗಾರರು ನಾನಾ ಬಗೆಯ ಜೀವನ ಚರಿತ್ರೆಗಳನ್ನು ಬರೆದರು. ಅನೇಕರು ಮಧ್ಯಯುಗ ಕಾಲದ ಚರ್ಚಿನ ಜೀವನ, ಜನಜೀವನ, ಕ್ರೈಸ್ತ ಮಹಮದೀಯ ಯುದ್ಧಗಳು (ಕ್ರೂಸೇಡ್ಸ್), ಕೋಟೆ ಕೊತ್ತಲಗಳು, ಮಠಗಳು ಮುಂತಾದವುಗಳನ್ನು ಹಿನ್ನೆಲೆ ಮಾಡಿಕೊಂಡು ಫ್ರಾನ್ಸಿನ ಐತಿಹಾಸಿಕ ಕಾದಂಬರಿಗಳನ್ನು ಬರೆದು ಜನಪ್ರಿಯತೆ ಗಳಿಸಿದರು. ಇವರಲ್ಲಿ ಇಂಗ್ಲೆಂಡಿನ ಸರ್ ವಾಲ್ಟರ್ ಸ್ಕಾಟ್, ಚಾಟಿಯ ಬಾನ್‌ರು, ಅಮೇರಿಕಾದ ಜೆ.ಎಲ್. ಮೋಟ್ಲೆಯವರು ಪ್ರಖ್ಯಾತರು. ಇವರ ಚಿತ್ರಣಗಳಿಂದ ಮಧ್ಯಯುಗದ ಬಗ್ಗೆ ಜನಸಾಮಾನ್ಯರಲ್ಲಿ ಇದ್ದ ಅನೇಕ ಪೂರ್ವಾಗ್ರಹ ಭಾವನೆಗಳು, ದುರಭಿಪ್ರಾಯಗಳನ್ನು ತೊಡೆದುಹಾಕಿದವು. ಇದಲ್ಲದೆ ಈ ಗ್ರಂಥಗಳು ಇತರ ಇತಿಹಾಸ ಗ್ರಂಥಗಳ, ಜನರಲ್ಲಿ ಸ್ವದೇಶ ಪ್ರೇಮವನ್ನು ಬೆಳೆಸಿದವು. ಇಂಗ್ಲೆಂಡಿನ ಮೆಕಾಲೆ, ಫ್ರೌಡ್, ಫ್ರಾನ್ಸಿನ ಮಿಷಲೆ, ಜರ್ಮನಿಯ ಷೆಲಿಗಲ್, ಲೆಸ್ಸಿಂಗ್ ಮುಂತಾದವರು ರಾಷ್ಟ್ರೀಯ ಭಾವನೆ ಬೆಳೆಸಿದರು. ಇದು 18-19 ನೇ ಶತಮಾನಗಳಲ್ಲಿ ಯೂರೋಪಿನ ಆಧುನಿಕತೆ ಮತ್ತು ಪ್ರಗತಿಗೆ ಕಾರಣಗಳಾದವು.

### *18.3.1 ಕಾರ್ಲೈಲ್‌ನ ರಮ್ಯತೆಯ ಲೇಖನ ಕಲೆಗಳ ಚಿಂತನೆಗಳು*

ಇದಲ್ಲದೆ ಮತ್ತೊಂದು ವಿಶೇಷ ಸಂಗತಿ ಎಂದರೆ ಈಗಿನ ಯುಗದ ಅನೇಕರು ಬಹಳ ಆಸಕ್ತಿ, ಉತ್ಸಾಹದಿಂದ ವ್ಯಕ್ತಿ ಸಾಹಸ ವ್ಯಕ್ತಿಗಳ ಬಗ್ಗೆ ಕೋಟೆ, ಚರ್ಚು, ಊರು, ಕೆಥೆಡ್ರಿಲ್ ಮುಂತಾದವುಗಳ ಬಗ್ಗೆ ಅತಿಶಯವಾದ ವಾಸ್ತವ ಅಂಶಗಳನ್ನು ಪತ್ತೆ ಹಚ್ಚಿ ಆ ಬಗ್ಗೆ ಸಣ್ಣ ಹೊತ್ತಿಗೆಗಳನ್ನು ಸಿದ್ಧಪಡಿಸಿದರು. ಇವು ಕಾದಂಬರಿಕಾರರಿಗೂ ಇತಿಹಾಸ ರಚನಕಾರರಿಗೂ ಇದುವರೆಗೂ ತಿಳಿಯದಿದ್ದ ಅನೇಕ ಚರಿತ್ರಾಂಶಗಳು ಬಹಿರಂಗಗೊಳಿಸಲ್ಪಟ್ಟವು.

ಪ್ರತಿ ರಾಷ್ಟ್ರವು ತನ್ನ ಹಿಂದಿನ ಅನುಭವಗಳಿಂದ ಒಂದು ವ್ಯಕ್ತಿತ್ವವನ್ನೇ ಬೆಳೆಸಿಕೊಂಡು ಬರುವುದರಿಂದ ಅದು ರಾಷ್ಟ್ರದ ಭವಿಷ್ಯವನ್ನೇ ನಿರ್ಧರಿಸುತ್ತದೆ ಎಂದು ರಮ್ಯತಾವಾದಿಗಳು ತಿಳಿದಿದ್ದರು. ಇದರಿಂದ ರಾಷ್ಟ್ರಗಳಲ್ಲಿ ತಾನು ಶ್ರೇಷ್ಠ, ಇತರರು ಕೀಳು, ಒಬ್ಬರು ಆಳಲು ಯೋಗ್ಯತೆ ಪಡೆದವರು, ಇನ್ನೊಬ್ಬರು ಆಡಳಿತಕ್ಕೆ ಒಳಪಡುವವರು ಎಂಬ ತಾರತಮ್ಯ ಭಾವನೆ ಬೆಳೆಯಲು ಅವಕಾಶವಾಯಿತು. ರಡ್‌ಯಾರ್ಡ್ ಕಿಪ್ಲಿಂಗ್ ಮುಂತಾದವರು ಬ್ರಿಟಿಷರ ಉತ್ತಮ ಗುಣ ಸಂಸ್ಕೃತಿಗಳ ಮೂಲಕ ಇತರ ವರ್ಣಗಳ ಜನರ ಮೇಲೆ ಆಡಳಿತ ನಡೆಸುವ ಹಕ್ಕು ಪಡೆದಿದ್ದಾರೆ ಎಂದು ಹೆಮ್ಮೆ ಪಡಲು ಅವಕಾಶವಾಯಿತು. ಅಂಥ ಅವೈಜ್ಞಾನಿಕ, ಅಶಾಸ್ತ್ರೀಯ ಐತಿಹಾಸಿಕವಲ್ಲದ ಪ್ರಚಾರಗಳು ನಾನಾ ಪಠ್ಯಪುಸ್ತಕಗಳಲ್ಲೂ ಕಂಡು ಬಂದವು. ಇಂಥ ಇತಿಹಾಸ ರಚನೆಗಳಲ್ಲಿ ವಿಮರ್ಶಾತ್ಮಕ ಬುದ್ಧಿಯು ಅತ್ಯಂತ ಕೀಳು ಮಟ್ಟದಲ್ಲಿರುತ್ತದೆ. ಕಾರ್ಲ್ ಮಾರ್ಕ್ಸ್‌ನೂ ಸಹ ರಮ್ಯತಾವಾದಿಗಳ ಪ್ರಭಾವಕ್ಕೆ ಒಳಗಾಗಿ ತನ್ನ ಅಭಿಪ್ರಾಯಗಳನ್ನು ಐತಿಹಾಸಿಕವಾಗಿಯೂ ವೈಜ್ಞಾನಿಕವಾಗಿಯೂ ಆಗಿರುವಂತೆ ಸಿದ್ಧಪಡಿಸಿದನು. ಅವನು ಚರಿತ್ರೆಯ ಎಲ್ಲ ವಿಷಯಗಳನ್ನು ಆರ್ಥಿಕ ನಿರ್ಧಾರಗಳ ಮೇಲೆ ಅವಲಂಬಿಸಿರುವಂತೆ ವಿವರಿಸಲು ಪ್ರಯತ್ನ ಪಟ್ಟನು. ವಸ್ತುವಾದ ನಿರೂಪಣೆ ಮಾಡಿ ಎಲ್ಲ ಮೌಲ್ಯಗಳು ಎಲ್ಲ ಕೆಲಸಗಾರರಲ್ಲಿ ಕೇಂದ್ರಿಕೃತಗಳನ್ನನುಸರಿಸಿಯೇ ಹೊಸ ಯುಗ ಪ್ರಾರಂಭಿಸುವುದೆಂದು ತಿಳಿಸಿದನು.

ಜರ್ಮನಿಯ ತತ್ವಜ್ಞಾನಿ ಹೆಗಲನ ಪ್ರಕಾರ ಪ್ರಪಂಚದ ಅಥವಾ ಸಮಗ್ರ ಮಾನವ ಕುಲದ ಇತಿಹಾಸವೇ ಇತಿಹಾಸದರ್ಶನ, ಆದರ್ಶಗಳೂ ಭಾವನೆಗಳೂ ಇತಿಹಾಸದ ಘಟನೆಗಳಿಗೆ ಕಾರಣವೆಂಬ ಹೆಗಲನ ವಾದವು ಸಹಜತೆಗೆ ದೂರವಾದದ್ದು. ಆದರೆ ಆದರ್ಶಗಳು, ಭಾವನೆಗಳು ಇತಿಹಾಸದ ಘಟನೆಗಳಿಗೆ ಕಾರಣವೆಂಬ ಹೆಗಲನ ವಾದವು ಸಹಜತೆಗೆ ದೂರವಾದದ್ದು. ಏಕೆಂದರೆ ಆದರ್ಶಗಳು ಸಾಧಿಸಬೇಕಾದ ಗುರಿಯನ್ನು ಮಾತ್ರ ಸೂಚಿಸುತ್ತವೆ. ಮಾನವ ಆ ಬಗ್ಗೆ ಅಷ್ಟಾಗಿ ಚಿಂತಿಸಿ, ವಿವೇಚಿಸಿ ಮುಂದುವರಿದಿದ್ದಾನೆ ಎಂದು ಹೇಳಲಾಗದು. ಮತೀಯ ಭಾವನೆಗಳು, ಮಾನವನ ಉನ್ನತಿಯನ್ನು ಸೂಚಿಸುವ ಹೆಗ್ಗುರುತುಗಳಾಗಿವೆ ಮತ್ತು ಮತದ ಆದರ್ಶಗಳೇ

ಆಯಾ ಗುಂಪಿನ ಇತಿಹಾಸವನ್ನು ವಿವರಿಸುವುದರಲ್ಲಿ ಸಹಾಯಕವಾಗುತ್ತದೆ ಎಂದು ಹೆಗಲನು ವಾದಿಸಿದ. ಎಲ್ಲಿಯವರೆಗೆ ಈ ಮತೀಯ ಆದರ್ಶಗಳು ಸದ್ಭಾವನೆಗಳನ್ನು ಬೆಳೆಸುವುದಕ್ಕೂ ಮಾನವನ ಪ್ರಗತಿಯನ್ನು ಬೆಳೆಸುವುದಕ್ಕೂ ಸಹಕಾರಿಯಾಗಿದ್ದವೋ ಅಲ್ಲಿಯವರೆಗೆ ಅವುಗಳ ಪಾತ್ರ ಹಿರಿಯದ್ದದೇನೋ ಸತ್ಯ. ಆದರೆ ಅಂಥ ಆದರ್ಶಗಳಿಂದ ಮಾನವನು ದೂರವಾದನೋ ಅಂದಿನಿಂದ ಅವುಗಳ ಪ್ರಭಾವ ಇತಿಹಾಸದ ಘಟನೆಗಳ ಮೇಲೆ ಅಷ್ಟಾಗಿ ಆಗಲಿಲ್ಲವೆನ್ನಬಹುದು. ಹೆಗಲನ ಅನುಯಾಯಿಯಾದ ರಾಂಕನು ಪರಮಾತ್ಮನ ಇತಿಹಾಸದ ಘಟನೆಗಳಿಗೆ ಸೂತ್ರಧಾರನೆಂದು ನಂಬಿದ್ದ. ಇತಿಹಾಸದ ಘಟನೆಗಳಿಗೆ ಕಾರಣವಾದ ಭಾವನೆಗಳು ಆ ಪರಮಾತ್ಮನಿಂದ ನಿರ್ದೇಶಿಸಲ್ಪಟ್ಟವೆಂದು ರಾಂಕನ ಮತವಾಗಿತ್ತು. ಹೀಗೆ ಹೆಗಲ್ ಮತ್ತು ರಾಂಕ ಆಧ್ಯಾತ್ಮಿಕ ಭಾವನೆಗಳಿಗೆ ಪ್ರಾಮುಖ್ಯತೆ ಕೊಟ್ಟರು.

ಒಟ್ಟಿನಲ್ಲಿ ರಮ್ಯತಾವಾದಿ ಅಥವಾ ಭಾವನಾ ಸ್ವಾತಂತ್ರ್ಯ ಯುಗದಲ್ಲಿ ರಾಷ್ಟ್ರೀಯತೆ, ಸಮಾಜಗಳ ಅಖಂಡತೆ, ಸಂಸ್ಕೃತಿಗಳ ಹೆಚ್ಚಳ, ಯುರೋಪಿನ ಜನಾಂಗಗಳ ಹೆಮ್ಮೆಗಳು ಬೆಳೆದುವು. ಇದರ ಪರಿಣಾಮವಾಗಿ ಅನೇಕ ಚರಿತ್ರಾಂಶಗಳು ಚರಿತ್ರೆಗೆ ಬೇಕಾದ ಅನೇಕ ಆಧಾರಗಳು ಹೆಚ್ಚಾಗಿ ಗಮನಕ್ಕೆ ಬಂದುವು. ಹೀಗೆ ಈ ಶತಮಾನವು ಇತಿಹಾಸಗಳ ಶತಮಾನವೆಂದೇ ಹೆಸರುಗಳಿಸಿತು. ಮಧ್ಯಕಾಲದ ಪುರಾತನ ಕಾಲದ ಇತಿಹಾಸ ಅಂಶಗಳು ಹೊಸ ದೃಷ್ಟಿಯಿಂದ ಕಾಣಲ್ಪಟ್ಟು ಇತಿಹಾಸ ಅವುಗಳಿಗೆ ಗೌರವ ಹೆಚ್ಚಿಸಿದವು. ಈ ಯುಗದ ಚಿಂತನ ಮಂಥನದ ಕಾರಣವಾಗಿ ಕಾರ್ಲೈಲ್, ಹೆಗಲ್, ಕಾರ್ಲ್ ಮಾರ್ಕ್ಸ್ ರಂಥ ತತ್ವಜ್ಞಾನಿಗಳು ತಮ್ಮ ತತ್ವಗಳನ್ನು ಸಾಧಾರಣರು ಒಪ್ಪುವಂತೆ ಬಲವಾಗಿ ಪ್ರತಿಪಾದಿಸಿದರು. ಈ ರೀತಿಯ ಇತಿಹಾಸ ಬರವಣಿಗೆಯು ಮುಂದಿನ ಶತಮಾನದ ವಿವಿಧ ರೀತಿಯ ಬರವಣಿಗೆಗೆ ಇಂಬು ಕೊಟ್ಟಿತು.

## 18.4 ಜಾರ್ಜ್ ವಿಲ್‌ಹೆಲ್ಮ ಫ್ರೆಡರಿಕ್ ಹೆಗಲ್ (1770-1830)

ಇವನೂ ಸಹ ಜ್ಞಾನೋದಯ ಕಾಲದ ಶ್ರೇಷ್ಠ ಚಿಂತಕ. ಇವನ ಇತಿಹಾಸ ಮಾರ್ಗವನ್ನು ಆದರ್ಶವಾದುದೆಂದು ಕರೆಯುತ್ತಾರೆ. ಇದರಂತೆ ಚರಿತ್ರೆಯ ಮಹಾ ಘಟನೆಗಳು ಸಮಾಜವು ಇಟ್ಟುಕೊಂಡಿರುವ ಗುರಿಯಿಂದ ನಿರ್ಧರಿಸಲ್ಪಡುತ್ತವೆ. ತತ್ವಶಾಸ್ತ್ರದಲ್ಲಿ ಡೈಅಲೆಕ್ಟಿಕ್ ಪದ್ಧತಿಯನ್ನು (ತಾತ್ವಿಕ, ಆಧ್ಯಾತ್ಮಿಕ ವಿಚಾರದಲ್ಲಿ ಪರಸ್ಪರ ವಿರೋಧಾಭಾಸಗಳನ್ನೂ, ಅವುಗಳ ಪರಿಹಾರವನ್ನು ಕುರಿತ ವಿಮರ್ಶೆ ಅಥವಾ ತತ್ವಮೀಮಾಂಸೆ) ಆಚರಣೆಗೆ ತಂದನು. ಇದನ್ನೇ ಪ್ರಮೇಯ (ಥೀಸಿಸ್) ಎನ್ನುತ್ತಾರೆ. ಇದರಿಂದ ವಿರುದ್ಧ ಪ್ರಮೇಯ ಉಂಟಾಗಿ ಕೊನೆಯಲ್ಲಿ ಸಂಯೋಜನೆ ಆಗುತ್ತದೆ. ಮಾನವನ ಚರಿತ್ರೆಯ ನಡವಳಿಕೆ ಎಂದರೆ ಸ್ವಾತಂತ್ರ್ಯದ ವಿಷಯವನ್ನು ವ್ಯಕ್ತಪಡಿಸುವುದೇ ಆಗಿದೆ ಎಂದು ಹೇಳಿದನು. ಅವನ ಐತಿಹಾಸಿಕ ಪ್ರಮಾಣದಲ್ಲಿ ರಾಷ್ಟ್ರವೇ ಒಂದು ಮಟ್ಟ. ಪ್ರತಿ ರಾಷ್ಟ್ರಕ್ಕೂ ಒಂದು ಆದರ್ಶವಿರುತ್ತದೆ. ಇದೇ ರಾಷ್ಟ್ರದ ಚಲನೆಯ ಶಕ್ತಿ. ವ್ಯಕ್ತಿಗಳೆಲ್ಲರೂ ಇಂಥ ರಾಷ್ಟ್ರ ಶಕ್ತಿಯ ಒಂದು ಭಾಗ. ಅದರ ಮೂಲಕವೇ ಶಕ್ತಿಯ ಚಾಲನೆಯೂ ನಿರೂಪಣೆಯೂ ಉಂಟಾಗುತ್ತದೆ ಎಂದನು. ರಾಷ್ಟ್ರದ ಬಗ್ಗೆ ಪ್ರಾಧಾನ್ಯ ಕೊಟ್ಟಿದುದು ಮುಂದೆ ಕಾರ್ಲ್‌ಮಾರ್ಕ್ಸ್ ಮತ್ತು ಇತರ ಚಿಂತಕರಿಗೆ ಈ ತತ್ವಗಳು ಪ್ರಬಲ ಪ್ರಭಾವ ಬೀರಿದವು.

## 18.5 ಇತಿಹಾಸದಲ್ಲಿ ಇವುಗಳ ಪ್ರಭಾವ

ಹೀಗೆ ಜ್ಞಾನೋದಯ ಕಾಲದ ಹೊಸ ತತ್ವಗಳು ಮತ್ತು ಮುಖ್ಯವಾಗಿ ಹಿಂದಿನ ಮತಧರ್ಮದ ಬಗ್ಗೆ ಟೀಕೆಗಳು ಮತ್ತು ಅತಿ ಪುರಾತನ ಕಾಲದ ಜೀವನವನ್ನು ಆದರ್ಶವೆಂದು ತಿಳಿಯುವ ಸಿದ್ಧಾಂತಗಳು ಪ್ರಚಾರಕ್ಕೆ ಬಂದುವು. ಈ ಕಾಲದಲ್ಲಿ ಚರಿತ್ರಾಂಶಗಳನ್ನು ವ್ಯಾವಹಾರಿಕ ಪ್ರಯೋಜನ ದೃಷ್ಟಿಯಿಂದ ನೋಡುವ ಸಿದ್ಧಾಂತಗಳು ವಿವರಿಸಲ್ಪಟ್ಟವು (ಪ್ರಾಗ್ ಮ್ಯಾಟಿಸಂ). ಇದೇ ಮುಂದಿನ ಚಿಂತನಕಾರರಾದ ಬೋಲಿಂಗ್, ಬ್ರೂಕ್, ಬೆಂಥಾಮ್, ಮಿಲ್, ಮೆಕಾಲೆ ಮುಂತಾದವರ ಯುಟಿಲಿಟೇರಿಯಾನಿಸಂ - ಅಧಿಕ ಸಂಖ್ಯೆಯ ಜನರ ಅಧಿಕ ಹಿತ ಸಾಧನೆಯೇ ಧರ್ಮ ಎಂಬ ವಾದಕ್ಕೆ ಪುಷ್ಟಿ ಕೊಟ್ಟಿತು. ಇವರು ಒಪ್ಪಿದ ಈ ವಾದದಂತೆ ರಾಷ್ಟ್ರವು ಜನರ ಸ್ಥಿತಿಯನ್ನು ಉತ್ತಮಪಡಿಸುವ ಉದ್ದೇಶದಿಂದ ಯಾವುದೋ ನೀತಿಯನ್ನು ಅನುಸರಿಸಬಹುದೆಂದು ಹೇಳಿದರು. ಇವುಗಳಿಂದ ಮತಕ್ರಾಂತಿ (ರೆಫರ್‌ಮೇಷನ್) ಯು ಬುದ್ಧಿಯ ಬೆಳವಣಿಗೆಗೆ ಕಾರಣವೆಂದು ತಿಳಿಯಲಾಯಿತು. ನಾವು 18 ನೇ ಶತಮಾನದ ಇತಿಹಾಸದ ಕೃತಿಗಳನ್ನು ಅಭ್ಯಾಸ ಮಾಡಿದಾಗ ಅಲ್ಲಿ ಪುರೋಹಿತ ವರ್ಗದವರು ಮಾಡಿದ ಮೋಸ, ರಾಜನ ಆಸ್ಥಾನದವರ ಪಿತೂರಿ ಒಳ್ಳೆಯ ರಾಜರು ಯೋಚನೆ

ಮಾಡಿ ಆಚರಣೆಗೆ ತಂದ ಸಂಸ್ಥೆಗಳು (ಅವುಗಳನ್ನು ಮಟ್ಟ ಹಾಕಲು ಇತರರು ಮಾಡಿದ ಪ್ರಯತ್ನಗಳು ಸಫಲವಾಗದೆ) ಜನ ಸಾಮಾನ್ಯರ ಅಜ್ಞಾನ, ಇವುಗಳಿಂದ ಭರ್ತಿಯಾಗಿ ಆ ಕಾಲದ ಬುದ್ಧಿವಂತರ ಮೆಚ್ಚುಗೆಗೆ ಪಾತ್ರವಾದದ್ದು ಕಂಡು ಬರುತ್ತದೆ.

ಎರಡನೆಯದಾಗಿ ವಾಲ್ಟೇರನು ಇತಿಹಾಸದಲ್ಲಿ ಬಾಹ್ಯ ವಿಷಯಗಳಿಂದ ಆಂತರಿಕ ವಿಷಯಗಳ ಕಡೆ ಗಮನ ಇಡುವಂತೆ ಮಾಡಿದನು. ಚರಿತ್ರೆಯಲ್ಲಿ ಬಾಹ್ಯವಾಗಿ ಪ್ರದರ್ಶಿತವಾಗುವ ಯುದ್ಧಗಳು, ಕರಾರುಗಳು, ವ್ರತಾಚರಣೆಗಳು ಮತ್ತು ವೈಭವ, ಕ್ರಮಾಚರಣೆಗಳು, ಏನೂ ಉಪಯೋಗವಿಲ್ಲದ ಪತ್ರಾಗಾರ (ಆರ್‌ಕೈವ್) ಅಥವಾ ಐತಿಹಾಸಿಕ ನಿಘಂಟುಗಳಂತೆ ಎಂದು ವಾಲ್ಟೇರನು ಅಭಿಪ್ರಾಯಪಟ್ಟನು. ಆದರೆ ಇತಿಹಾಸವು ಇವುಗಳಲ್ಲಿ ಅದೇ ಬೇರೆ ವಿಷಯಗಳನ್ನು ಹೇಳಬೇಕೆಂದು ಅಭಿಪ್ರಾಯಪಟ್ಟನು. ನಿಜವಾದ ಇತಿಹಾಸವೆಂದರೆ ಸಮಾಜವು ಹಿಂದಿನ ಕಾಲದಲ್ಲಿ ಹೇಗಿದ್ದಿತು ಮತ್ತು ಜನರ ಜೀವನವನ್ನು ಚಿತ್ರಿಸುವುದಾಗಿರಬೇಕು. ಅನವಶ್ಯಕ, ಅಪ್ರಯೋಜಕ ವಿಷಯಗಳನ್ನು ಬಿಟ್ಟು, ಉಪಯುಕ್ತವೂ, ಮುಖ್ಯವೂ ಆದ ವಿಷಯಗಳನ್ನು ಬಿಟ್ಟು, ಉಪಯುಕ್ತವೂ, ಮುಖ್ಯವೂ ಆದ ವಿಷಯಗಳನ್ನು ಹೇಳಿ ಅದಕ್ಕೆ ಕಾರಣಗಳನ್ನು ತಿಳಿಯಬೇಕೆಂದನು. ಆದರೆ ಜನಗಳು ನಡವಳಿಕೆ ಮತ್ತು ಆ ಕಾಲದ ಕಲಾಭಿವೃದ್ಧಿಯನ್ನು ತಿಳಿಸಬೇಕೆಂದು ಹೇಳಿದನು. ಇವನು ತಾನು ಬರೆದ ಇತಿಹಾಸಗಳಲ್ಲೂ ಜನರಿಗೆ ಯಾವುವು ಒಳ್ಳೆಯದನ್ನುಂಟು ಮಾಡಿತೋ ಅವುಗಳನ್ನೇ ಬರೆದಿದ್ದಾನೆ. ಇವನ ಮೇಲ್ಪಂಕ್ತಿಯನ್ನನುಸರಿಸಿ ಡಬೋ ಮತ್ತು ಮಾಂಟೆಸ್ಕೋಗಳೂ ಸಹ ಜನರ ಹಕ್ಕುಗಳು ಮತ್ತು ಸಂಘಗಳ ಬಗ್ಗೆ ತಾವು ಬರೆದ ಇತಿಹಾಸಗಳಲ್ಲಿ ದಾಖಲಿಸಿದ್ದಾರೆ.

ಮೂರನೆಯದಾಗಿ ಈ ಯುಗದ ಇತಿಹಾಸದಲ್ಲಿ ಅಂತಃಸತ್ವಗಳನ್ನೂ ಹೇಳಿದ್ದಲ್ಲದೆ ಅದು ಪ್ರದೇಶ ಮತ್ತು ಕಾಲದ ದೃಷ್ಟಿಯಿಂದ ವಿಶಾಲವಾಯಿತು. ವಾಲ್ಟೇರನು ಹಿಂದಿನ ಕಾಲದ ಇತಿಹಾಸವು ಸಂಕುಚಿತ ಮತ್ತು ಕೀಳುತನವನ್ನು ತಿಳಿಸುತ್ತದೆ ಎಂದು ಹೇಳಿದಾಗ, ಇತರ ಇತಿಹಾಸಕಾರರ ದೃಷ್ಟಿ ಅತಿ ಪುರಾತನ ನಾಗರೀಕತೆಯನ್ನೊಳಗೊಂಡ ಚೀನಾ, ಭಾರತ ಮತ್ತು ಇಸ್ಲಾಂ ರಾಷ್ಟ್ರಗಳ ಇತಿಹಾಸದ ಕಡೆ ಗಮನವಿಟ್ಟರು. ಪೌರ್ವಾತ್ಯ ರಾಷ್ಟ್ರಗಳ ಸಾಹಿತ್ಯಗಳು ಯೂರೋಪಿನ ಭಾಷೆಗಳಿಗೆ ಭಾಷಾಂತರವಾಗಿ ಇತಿಹಾಸದ ವ್ಯಾಪ್ತಿಯನ್ನು ವಿಸ್ತರಿಸಿದವು. ಇವುಗಳಲ್ಲದೆ ಆ ಕಾಲದಲ್ಲಿ ವೈವಿಧ್ಯಮಯ ದಾಖಲೆಗಳು ಹೆಚ್ಚಾಗಿ ದೊರಕಿದ್ದರಿಂದ (ಅಚ್ಚುಕೊಟ್ಟ - ಹೆಚ್ಚು ಪುಸ್ತಕ ಪ್ರಸಾರ-ಪುಸ್ತಕ ಭಂಡಾರಗಳಿಂದ) ಒಳ್ಳೆಯ ವಿಮರ್ಶಾತ್ಮಕ ಗ್ರಂಥಗಳು ಬರೆಯಲ್ಪಟ್ಟವು. ಹೀಗೆ ಇತಿಹಾಸ ರಚನಾ ಕಲೆಯಲ್ಲಿ ಅನೇಕ ವಿಷಯಗಳು ಸೇರಿಸಲ್ಪಟ್ಟವು. ಹೊಸದೃಷ್ಟಿ ಬೆಳೆಯಿತು.

ಇದರಿಂದ ಇತಿಹಾಸ ಚಿಂತನೆಯಲ್ಲಿ ಬರವಣಿಗೆಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳಾದವು. ಇದರಿಂದ ಮುಂದಿನ 19 ನೇ ಶತಮಾನದಲ್ಲಿ ಮಹತ್ತರ ವಿಷಯಗಳಿಗೆ ಅವಕಾಶವಾಯಿತು.

## 18.6 ಘಟಕದ ಸಾರಾಂಶ

ಈ ಘಟಕದ ಅಧ್ಯಯನದಿಂದ ನಾವು

* ರಮ್ಯತೆಯ ಇತಿಹಾಸ ಬರವಣಿಗೆಯ ಬಗ್ಗೆ ಅಧ್ಯಯನ ನಡೆಸಿದವು. ಈ ಬರವಣಿಗೆಯಲ್ಲಿ ಕಾಣುವ ಲೇಖನಗಳಲ್ಲಿ ಹೆಚ್ಚೆಚ್ಚು ಜನರ ಆಕರ್ಷಿತರಾಗಿರುವುದನ್ನು ತಿಳಿದೆವು.

* ಈ ರಮ್ಯತೆಯ ಇತಿಹಾಸದ ಪ್ರತಿಪಾದಕರಾದ ಥಾಮಸ್ ಕಾರ್ಲೈಲ್‌ನ ಶಾಲೆಯ ಬಗ್ಗೆ ಮತ್ತು ಅವನ ಕೊಡುಗೆಯ ಬಗ್ಗೆ ಅಧ್ಯಯನ ನಡೆಸಿದವು.

* ಈ ಅಧ್ಯಯನದಲ್ಲಿ ಇತಿಹಾಸ ತತ್ವಜ್ಞಾನಿಯಾದ ಹೆಗೆಲ್‌ನ ಬಗ್ಗೆ ತಿಳಿದೆವಲ್ಲದೇ ಅವನು ರಮ್ಯತೆಯ ಇತಿಹಾಸ ಬರವಣಿಗೆಗೆ ಮಾಡಿದ ಸೇವೆಯನ್ನು ತಿಳಿದುಕೊಂಡೆವು.

* ಇದಲ್ಲದೇ ರಮ್ಯತೆಯ ಇತಿಹಾಸದ ತತ್ವಜ್ಞಾನ ಮತ್ತು ಪ್ರಮುಖ ಲಕ್ಷಣಗಳನ್ನು ತಿಳಿದುಕೊಂಡೆವು.

## 18.7 ಸ್ವಯಂ ಪರಿಶೀಲನಾ ಪ್ರಶ್ನೆಗಳು

1. ರಮ್ಯತೆಯ ಇತಿಹಾಸ ಬರವಣಿಗೆಯ ತತ್ವಗಳನ್ನು ತಿಳಿಸಿ ಮತ್ತು ಇದರ ಪ್ರತಿಪಾದಕರ ಬಗ್ಗೆ ವಿವರಿಸಿ.
2. ರಮ್ಯತೆಯ ಇತಿಹಾಸ ಬರವಣಿಗೆಗೆ ಕಾರ್ಲೈಲ್ ಮತ್ತು ಹೆಗೆಲ್ ಇವರ ಕೊಡುಗೆಯನ್ನು ಪರಿಶೀಲಿಸಿ.

## 18.8 ಹೆಚ್ಚಿನ ಅಧ್ಯಯನದ ಗ್ರಂಥಗಳು


1. Satish .K. Bajaj : Research Methodology in History
2. Colling Wood .R.G. : Idea of History
3. Sheik Ali .B. : History; Its Theory and Method


*ಡಾ. ಎ. ಸೋಮಶೇಖರ್*

# ಘಟಕ - 19 ಆಗಸ್ಟ್ ಕಾಮ್ಟೆ (1798-1857)

*ವಿಷಯಸೂಚಿ*

19.0 ಉದ್ದೇಶಗಳು

19.1 ಪೀಠಿಕೆ

19.2 ಖಂಡಿತವಾದಿಗಳ ಕಾಲದ ಇತಿಹಾಸ ಬರವಣಿಗೆ

19.3 ಆಗಸ್ಟ್ ಕಾಮ್ಟೆ (1798-1857)

19.4 ಘಟಕದ ಸಾರಾಂಶ

19.5 ಸ್ವಯಂ ಪರಿಶೀಲನಾ ಪ್ರಶ್ನೆಗಳು

19.6 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು

## 19.0 ಉದ್ದೇಶಗಳು

ಈ ಘಟಕ 19 ರಲ್ಲಿ ನಾವು ಖಂಡಿತವಾದಿ ಇತಿಹಾಸಕಾರರ ಇತಿಹಾಸದರ್ಶನ ಮತ್ತು ಚಿಂತನೆಗಳನ್ನು ಅಧ್ಯಯನ ಮಾಡುತ್ತೇವೆ. ಈ ವಿಚಾರವಾದದ ಪ್ರತಿಪಾದಕರಲ್ಲಿ ಪ್ರಮುಖರಾದ ಆಗಸ್ಟ್ ಕಾಮ್ಟೆಯ ಬಗ್ಗೆ ತಿಳಿಯುತ್ತೇವೆ. ಇತಿಹಾಸ ಬರವಣಿಗೆಯಲ್ಲಿ ಇವನ ಕೊಡುಗ್ಗೆಯೇನು ಎಂಬುದನ್ನು ವಿಸ್ತಾರವಾಗಿ ತಿಳಿಯಲಾಗುತ್ತದೆ.

## 19.1 ಪೀಠಿಕೆ

ಇತಿಹಾಸ ಬರವಣಿಗೆಯು ನವೋದಯ ಮತ್ತು ರಮ್ಯತೆಯ ಇತಿಹಾಸಕಾರರಂತೆಯೇ ಖಂಡಿತವಾದಿಗಳ ಪ್ರೋತ್ಸಾಹದಿಂದಲೂ ಬೆಳೆದಿರುವುದು ಗೊತ್ತಾಗುತ್ತದೆ. ಈ ಚಿಂತನಾ ಶಾಲೆಯಲ್ಲಿ ಬಹುದೊಡ್ಡ ವಿದ್ವಾಂಸರೂ ಮತ್ತು ಸಾಕಷ್ಟು ಕೊಡುಗೆಯನ್ನು ವೈಚಾರಿಕತೆಯ ಮೂಲಕ ನೀಡಿರುವ ಆಗಸ್ಟ್ ಕಾಮ್ಟೆ, ಎಡ್ವರ್ಡ್ ಗಿಬ್ಬನ್ ಮತ್ತು ಲಿಯೋ ಪಾಲ್ಡ್ ವಾನ್ ರ್‍ಯಾಂಕೆಯವರು ನೀಡಿರುವ ಚಿಂತನೆಗಳನ್ನು ಇಲ್ಲಿ ಅಧ್ಯಯನ ಮಾಡುತ್ತೇವೆ. ಈ ಘಟಕದಲ್ಲಿ ಫ್ರಾನ್ಸಿನ ಇತಿಹಾಸಕಾರನಾದ ಕಾಮ್ಟೆಯ ಬಗ್ಗೆ ಮತ್ತು ಇತಿಹಾಸ ಬರವಣಿಗೆಯಲ್ಲಿ ಒಂದು ರೀತಿಯ ವ್ಯವಸ್ಥಿತ ಖಂಡಿತವಾದಿ ಚಿಂತನೆಯನ್ನು ನೀಡಿರುವ ಇವನ ವ್ಯಕ್ತಿತ್ವ ಮತ್ತು ಕೊಡುಗೆಯನ್ನು ಅಧ್ಯಯನ ಮಾಡಲಾಗುತ್ತದೆ.

## 19.2 ಖಂಡಿತವಾದಿಗಳ ಕಾಲದ ಇತಿಹಾಸ ಬರವಣಿಗೆ

ಇತಿಹಾಸ ದರ್ಶನವನ್ನು ವಿವರಿಸುವಾಗ 19 ನೆಯ ಶತಮಾನದ ಖಂಡಿತವಾದಿಗಳ (ಪಾಸಿಟಿವಿಸ್ಟ್) ಅರ್ಥ ವಿವರಣೆ ಬೇರೆಯವರಿಂದ ವ್ಯತ್ಯಾಸವಾಗಿ ಕಾಣಿಸಲ್ಪಟ್ಟಿತು. ಅವರ ಪ್ರಕಾರ ಘಟನೆಗಳ ಹಿಂದೆ ತೋರುವ ನಿಯಮಗಳನ್ನು ಕಂಡುಹಿಡಿಯುವುದೇ ಇತಿಹಾಸ ದರ್ಶನ. ಈ ಖಂಡಿತವಾದಿಗಳಿಗೆ ಇತಿಹಾಸ ಎಂಬುದು ಸ್ವಯಂ ದರ್ಶನಶಾಸ್ತ್ರವಾಗಿ ಅವರು ಸಮಗ್ರ ಇತಿಹಾಸದಲ್ಲಿ ಸಾಮಾನ್ಯವಾದ ನಿಯಮಗಳನ್ನು ಗುರುತಿಸುವುದರಲ್ಲಿ ನಿರತರಾದರು. ಇಂಥ ಇತಿಹಾಸದ ಅಭ್ಯಾಸವನ್ನು "ಸಾಮಾಜಿಕ ಭೌತಶಾಸ್ತ್ರ" ವೆಂದು ಕರೆದರು. ಇದರ ಪುರೋಹಿತನೇ ಆಗಸ್ಟ್ ಕಾಮ್ಟೆ. ಖಂಡಿತವಾದಿ ತತ್ವದಲ್ಲಿ ಪ್ರಥಮ ಹೆಜ್ಜೆ ಎಂದರೆ ಮಾನವನ ಬುದ್ಧಿಯು ಮನುಷ್ಯನ ಅನುಭವಗಳ ಮಿತಿಯಲ್ಲಿರುತ್ತವೆಯೇ ಹೊರತು ಅದರ ಹೊರಗಿಲ್ಲ. ಐತಿಹಾಸಿಕ ತೋರಿಕೆಗಳ (ಫಿನಾಮಿನಾನ್) ಪರಿಶೋಧನೆಗಳೆಲ್ಲವೂ ವೈಜ್ಞಾನಿಕ ಮಿತಿಯಲ್ಲೇ ಇರುತ್ತವೆ ಎಂಬ ಮೂಲ ಸೂತ್ರವನ್ನೊಳಗೊಂಡಿದೆ. ಈ ವಿಚಾರಣೆಯಲ್ಲಿ ಅನೇಕ ದತ್ತಾಂಶಗಳ ಪರಸ್ಪರ ಸಂಬಂಧವು ತಿಳಿದು ಬರುತ್ತದೆ. ಇದನ್ನು ತಿಳಿಯುವುದೇ ಸಾಮಾಜಿಕ ಭೌತಶಾಸ್ತ್ರದ ಗುರಿ. ಇದರಿಂದ ಐತಿಹಾಸಿಕ ಘಟನೆಗಳು ವೈಜ್ಞಾನಿಕ ಸ್ವರೂಪಗೊಳ್ಳುವುದರಿಂದ ಅವುಗಳನ್ನು ಒಂದು ಸಾಮಾನ್ಯ ನಿಯಮಗಳಾಗಿ ನಿರ್ಧರಿಸಬಹುದು. ಐತಿಹಾಸಿಕ ಗತಿ (ಮಾರ್ಗ)ವು ಒಂದು ನಿಶ್ಚಿತ ದಿಕ್ಕಿನಲ್ಲೇ ಮುಂದುವರಿಯುವುದರಿಂದ ಈ ಮಾರ್ಗವನ್ನು ಬುದ್ಧಿವಂತಿಕೆಯಿಂದ ಅನುಸರಿಸಿದಾಗ ಭವಿಷ್ಯವನ್ನು ತಿಳಿಯಲು ಸಾಧ್ಯವೆಂದರು. ಇದಲ್ಲದೆ ಕಾರ್ಯ ಕಾರಣ ಸಂಬಂಧದಿಂದ ಗತಕಾಲದ ಘಟನೆಗಳನ್ನು ವಿವರಿಸಲೂ ಸಾಧ್ಯ ಮತ್ತು ಮುಂದಾಗುವುದನ್ನೂ ಊಹಿಸಲು ಈ ನಿಯಮಗಳ ಮೂಲಕ ಸಾಧ್ಯ ಎಂದು ತಿಳಿದಿದ್ದರು. ಆದರೆ ಇವುಗಳನ್ನು ಅಪರೂಪದ ಅಸಂಘಟಿತ ಘಟನೆಗಳಿಗಾಗಲೀ, ಅಪರೂಪದ ವ್ಯಕ್ತಿಗಳಿಗಾಗಲೀ ಹೊಂದಿಸಲು ಸಾಧ್ಯವಿಲ್ಲ. ಅವುಗಳ ವೈಚಿತ್ರ್ಯಗಳೇ ಅವುಗಳ ಸ್ವಭಾವ ಅಂಥವುಗಳಿಗೆ ಇತರ ಸಾಧಾರಣ ಮಾರ್ಗ. ಜನರ ಸ್ವಭಾವ ಮುಂತಾದ ಒಟ್ಟುಗುಣಗಳೊಡನೆ ಸೇರಿಸಿ ನಿಯಮ ಕಲ್ಪಿಸಬಹುದು. ದೃಷ್ಟಪ್ರಮಾಣವಾದದಲ್ಲಿ ಮೂರು ಮುಖ್ಯ ಗುಣಗಳಾದ ಐತಿಹಾಸಿಕ ಘಟನೆಗಳ ಜೋಡಣೆ (ಇಂಡಿಗ್ರಿಟಿ) ದಾಖಲೆಯ ವಿವರಣೆಯಲ್ಲಿ ಒಮ್ಮತ ಮತ್ತು ಬೆಳವಣಿಗೆಯನ್ನನುಸರಿಸಿ ಮೂರು ವಿಧವಾದ ಚಿಂತಕರು ಎಂದರೆ ಅನುಕ್ರಮವಾಗಿ ಇತಿಹಾಸಕಾರರು, ಭಾಷಾ ಪಾಂಡಿತ್ಯ ಉಳ್ಳವರು ಮತ್ತು ತತ್ವಶಾಸ್ತ್ರಜ್ಞರು ಎಂಬ ಮೂರು ರೀತಿಯ ಚಿಂತಕರು ಇರುತ್ತಾರೆ.

ಇತಿಹಾಸಕಾರರು ಯಾವುದಾದರೊಂದು ವಿಷಯದ ಬಗ್ಗೆ ವಿಶೇಷ ತಜ್ಞರಾಗಿ ಅದರಲ್ಲಿ ಆಸಕ್ತಿ ವಹಿಸಿ ಸಾಹಿತ್ಯಕ್ಕಿಂತ ಶುದ್ಧ ಇತಿಹಾಸದ ಬೆಳವಣಿಗೆ ಬಗ್ಗೆ ಆಸಕ್ತಿ ವಹಿಸುವವರಾಗಿರುತ್ತಾರೆ. ಅಂಥವರು ಹೆಚ್ಚಾಗಿ ಚಿಂತಿಸಿ ಚರಿತ್ರೆಯನ್ನು ನಿರ್ಮಾಣಮಾಡುವ ಒಂದು ಕಲೆಯೆಂದು ಭಾವಿಸಿ ಹಿಂದಿನ ಘಟನೆಗಳನ್ನು ಚೆನ್ನಾಗಿ ಮಥಿಸಿ ಹೊಸ ಸೃಷ್ಟಿಯನ್ನು ಮಾಡಿ ಅದನ್ನು ಪಠಿಸುವವರಿಗೆ

ಉಪಯುಕ್ತವಾದ, ಆಕರ್ಷಕವಾದ ಸಾಹಿತ್ಯ ಶೈಲಿಯಲ್ಲಿ ನಿರೂಪಿಸುತ್ತಾರೆ ಇದೆಲ್ಲದರ ಉದ್ದೇಶ ಇತಿಹಾಸವು ಇತಿಹಾಸವಾಗಿಯೇ ಉಳಿಯಬೇಕು. ಅದು ತತ್ವವಾಗಬಾರದು, ಇಂಥವರು ಚರಿತ್ರೆ ಎಂದರೆ ಉದಾಹರಣೆಗಳ ಮೂಲಕ ಬೋಧಿಸುವ ತತ್ವಶಾಸ್ತ್ರ ಎಂಬ ಗಾದೆ ಮಾತನ್ನು ಒಪ್ಪಲಿಲ್ಲ. ಚರಿತ್ರೆಯು ನಿಷ್ಪಕ್ಷಪಾತವಾಗಿ ಸತ್ಯವನ್ನು ಹೇಳುವ ಬರವಣಿಗೆಯಾಗಿರಬೇಕೆಂಬ ಭಾವನೆ ಹೊಂದಿದ್ದರು. ಹೀಗೆ ಇತಿಹಾಸಕಾರನು ವಿಶಿಷ್ಟ ವಿಷಯಗಳನ್ನು ಪರಿಶೀಲಿಸಿದರೇ ವಿನಾ ತತ್ವ ವಿಚಾರದಲ್ಲಿ ತೊಡಗಲಿಲ್ಲ. ಅವರಿಗೆ ಪ್ರಾಪಂಚಿಕ ವಿಷಯದ ಮೌಲ್ಯಕ್ಕಿಂತ ಯಥಾರ್ಥತೆಯೇ ಮುಖ್ಯವೆನಿಸಿತು. ಇತಿಹಾಸಕ್ಕೆ ಭಾಷೆಯ (ಫ್ರೆಂಚ್, ಜರ್ಮನ್, ಇತ್ಯಾದಿ) ಅಥವಾ ಮತ ಪ್ರಧಾನವಾದ (ಕ್ಯಾಥೋಲಿಕ್, ಪ್ರಾಟೆಸ್ಟಂಟ್, ಇತ್ಯಾದಿ) ವರ್ಗ ಮಾಡುವುದು ಸರಿಯಲ್ಲ. ಯಾವ ಭಾವನೆಗಳಿಗೂ ನೋವು ಉಂಟು ಮಾಡದೇ ಸತ್ಯವಾಗಿ ವಸ್ತು ನಿಷ್ಠವಾಗಿರಬೇಕು ಎಂದು ವಿಷದಪಡಿಸಿದರು. ಈ ಪಂಥದ ಶ್ರೇಷ್ಠ ಪ್ರತಿಪಾದಕನೆಂದರೆ ಜರ್ಮನಿಯ ಲಿಯೋಪಾಲ್ಡ್ ವಾನ್‌ರ್‍ಯಾಂಕೆ, ಅವನು ತತ್ವಶಾಸ್ತ್ರವನ್ನು ಅದರಲ್ಲೂ ಹೆಗಲನ ಸಿದ್ಧಾಂತಗಳನ್ನು ಎದುರಿಸಿದ ಘಟನೆಗಳ ಕಾರ್ಯಕಾರಣ ಸಂಬಂಧಗಳನ್ನು ಯಾವುದೇ ಒಂದೆ ಕಾರಣದಿಂದ ಊಹೆಗಳನ್ನು ಅವಲಂಬಿಸಬಾರದೆಂದು ಖಚಿತವಾಗಿ ಹೇಳಿದನು. ಇತಿಹಾಸಕಾರರ ಕೆಲಸವೆಂದರೆ ಘಟನೆಗಳು ಹೇಗೆ ಸಂಭವಿಸಿದುವುವೆಂಬುದನ್ನು ಸಾಕಾರವಾಗಿ ತೋರುವುದೇ ಆಗಿದೆ. ಹೀಗೆ ಸಂಭವಿಸಬಹುದಾಗಿತ್ತು ಎಂಬುದನ್ನಲ್ಲ. ಇವನು ತನ್ನ ಸಿದ್ಧಾಂತ ವಿಷದ ಪಡಿಸಲು ಅನೇಕ ಕೈಪಿಡಿಗಳನ್ನು ಬರೆದನು. ಇವನು ಜರ್ಮನನಾದರೂ ಫ್ರಾನ್ಸಿನ ಚರಿತ್ರೆಯನ್ನು ಆ ದೇಶದ ಜನಗಳಿಗೆ ಅಸಂತೋಷವಾಗದಂತೆ ರಚಿಸಿದುದು ಅವನ ಅತ್ಯಂತ ಶ್ರೇಷ್ಠ ಕಾರ್ಯಗಳಲ್ಲೊಂದಾಗಿದೆ. ಇವನು ಇತರ ಬರವಣಿಗೆಯಲ್ಲೂ ಈ ನಿಷ್ಪಕ್ಷಪಾತ ಉದಾರ ಧೋರಣೆಗಳಿರುವುದರಿಂದ ಇತಿಹಾಸವು ವಿಜ್ಞಾನದಂತೆ, ಸ್ಪಷ್ಟವಾದ 'ಹೆಚ್ಚು' ಕಡಿಮೆಗಳಿಲ್ಲದ ಭದ್ರವಾದ ಸ್ಥಾನ ಪಡೆಯಿತು. ಇವನನ್ನು ಎಲ್ಲ ದೇಶಗಳ ಪಂಡಿತರು "ಆದರ್ಶ ಇತಿಹಾಸಕಾರ" ನೆಂದು ಗೌರವಿಸುತ್ತಾರೆ.

ಎರಡನೆಯ ವಿಚಾರ ಪಂಥ ಭಾಷಾಶಾಸ್ತ್ರಜ್ಞರು (ಫೈಲಾಲಜಿಸ್ಟ್) ದಾಖಲೆಗಳಲ್ಲಿಯ ಚರಿತ್ರಾಂಶಗಳನ್ನು ಸ್ಪಷ್ಟವಾಗಿ ತಿಳಿಸಲಾಗಿದೆಯೇ ಎಂಬುದನ್ನು ತಿಳಿಯುವುದು ಈ ಪಂಥದ ಗುರಿ. ಅನೇಕ ಪಂಡಿತರು ಇಂಥ ಆಕರಗಳನ್ನು ಒದಗಿಸುವ ಉದ್ದೇಶದಿಂದಲೇ ರಚನೆಗಳನ್ನು ಮಾಡಿದರು. ಇತಿಹಾಸಕಾರನು ಆ ಆಕರಗಳನ್ನು ಆಧರಿಸಿ ತಮ್ಮ ಗ್ರಂಥಗಳನ್ನು ಸೃಷ್ಟಿಸಿದರು. ಹೀಗೆ ಒಂದು ಸಂದರ್ಭ, ಒಂದು ಕಾಲ, ಒಂದು ಪ್ರದೇಶ, ಒಂದು ಘಟನೆ ಇಂಥವುಗಳ ಅನೇಕ ಸಂಗ್ರಹಗಳು ಸೇರಿ ಗ್ರಂಥಗಳೂ, ದೊಡ್ಡ ವಿಶ್ವಕೋಶಗಳೂ ತಯಾರಾಗುವಷ್ಟು ವಿಷಯಗಳು ಸಿದ್ಧವಾದುವು. ಹೀಗೆ ಅನೇಕ ವಿಷಯಗಳು ಅನೇಕ ತಜ್ಞರ ಬರವಣಿಗೆಗಳು ಹೇರಳವಾಗಿ ದೊರಕುವಂತಾಯಿತು. ಕೆಲವರು ತತ್ಕಾಲದ, ಕೆಲವರು ಆಧುನಿಕ ಕಾಲದ, ಕೆಲವರು ಪ್ರಾಚೀನ ವಿಷಯಗಳಲ್ಲಿ, ಕೆಲವರು ಆರ್ಥಿಕ, ಕೆಲವರು ಸೈನಿಕ ಸಂಬಂಧವಾಗಿಯೂ, ಭಾಷೆ, ಸಾಹಿತ್ಯ, ತತ್ವ ರಾಜಕೀಯ, ಸಾಮಾಜಿಕ ಇತ್ಯಾದಿ ವಿಷಯಗಳಲ್ಲಿ ಆಸಕ್ತಿ ತೋರಿಸಿ ವಿಷಯ ಸಂಗ್ರಹಿಸಿ ಎಲ್ಲರಿಗೂ ದೊರಕುವಂತೆ ಮಾಡಿ ಕೃತಾರ್ಥರಾದರು. ಕೆಲವರು ಯೂರೋಪಿನ ನಾನಾ ಭಾಷೆಗಳಲ್ಲಿಯೂ ಮತ್ತೆ ಹಲವರು ಇಂಡಿಯಾದ ಭಾಷೆಗಳಲ್ಲೂ, ಅನೇಕರು ಪಶ್ಚಿಮ ಏಷ್ಯಾ, ಮಧ್ಯ ಏಷ್ಯಾದ ಭಾಷೆಗಳಲ್ಲಿ ಆಸಕ್ತಿ ವಹಿಸಿ, ಆ ಭಾಷೆಗಳನ್ನು ಕಲಿತು, ಅಲ್ಲಿಯ ಸಾಹಿತ್ಯಗಳನ್ನು ಭಾಷಾಂತರಿಸಿದರು. ಇದರಿಂದ ಇತಿಹಾಸವು ನೂರ್ಮಡಿಯಾಗಿ ವಿಷಯಗಳನ್ನು ಭಾಷಾ ತಜ್ಞರ ಮೂಲಕ ಸಂಗ್ರಹಿಸಿ ಇತಿಹಾಸದ ಸತ್ಯಾನ್ವೇಷಣೆಗೆ ನೆರವಾದರು. ಹೀಗೆ ಭಾಷಾ ಪಂಡಿತರು ಗ್ರಂಥಗಳ ವಿವೇಚನೆ, ವಿಮರ್ಶೆ, ಪರಿಷ್ಕರಣೆ, ಸಂಗ್ರಹಗಳಲ್ಲಿ ತೊಡಗಿದರು. ಅವರಿಗೆ ಗ್ರಂಥದ ಭಾಷೆಯನ್ನು ತಿಳಿಸುವುದೇ ಮುಖ್ಯವಾಗಿತ್ತೇ ಹೊರತು ಇತರ ವಿಷಯಗಳಲ್ಲಿ ಅಷ್ಟಾಗಿ ಗಮನವಿರಲಿಲ್ಲ. ಭಾಷಾ ತಜ್ಞರು ಒದಗಿಸಿದ ವಸ್ತುಗಳಿಂದ ಇತಿಹಾಸದ ಭವ್ಯ ಮಂದಿರಗಳು ನಿರ್ಮಾಣ ಮಾಡಲ್ಪಟ್ಟವು.

ಖಂಡಿತವಾದಿಗಳು ಮೂರನೆಯ ಪಂಥದವರು ತತ್ವಶಾಸ್ತ್ರಜ್ಞರ ಕರ್ತವ್ಯ ನಿರ್ವಹಿಸಿದರು. ಅವರಿಗೆ ರೂಢಿ ಪದವಾದ ತತ್ವಶಾಸ್ತ್ರಗಳೆಂದು ಕರೆಯಲ್ಪಡಲು ಇಷ್ಟವಿಲ್ಲವಾದ್ದರಿಂದ ತಮ್ಮನ್ನು (ಪಾಸಿಟಿವಿಸ್ಟ್), ನೈಜ ಸಿದ್ಧಾಂತಿ (ನ್ಯಾಚುರಲಿಸ್ಟ್), ಸಮಾಜಶಾಸ್ತ್ರಜ್ಞ (ಸೋಷಿಯಾಲಿಜಿಸ್ಟ್) ಪ್ರಯೋಗಶೀಲ (ಎಂಪರಿಸಿಸ್ಟ್), ಶೋಧಕ (ಕ್ರಿಟಿಸಿಸ್ಟ್) ಗಳೆಂದೂ ಕರೆದುಕೊಂಡರು. ಈ ಪಂಥದವರಿಗೆ ಕಾರಣದ ಕಲ್ಪನೆಯೇ ಆಧಾರ. ಪ್ರತಿಯೊಂದು ಘಟನೆಯ ಕಾರಣವನ್ನೂ ಹುಡುಕುವುದು, ಆ ಕಾರಣ ಸೂತ್ರವನ್ನು ಇತಿಹಾಸದ ಗತಿಯ ಮೇಲೆ ಪ್ರಯೋಗಿಸುವುದು ಇದರ ಕೆಲಸವಾಯಿತು. ಇತರರು ಇತಿಹಾಸ ಚೇತನದ ಮೂಲನ್ವೇಷಣೆ ಮಾಡಿದರು. ಅಂದರೆ ಅವರು ಇತಿಹಾಸದ ಚಲನ ಸೂತ್ರವನ್ನು ಸಾಮಾಜಿಕ ಭೌತಶಾಸ್ತ್ರವನ್ನು ಸೃಷ್ಟಿಸಲು ಯತ್ನಿಸಿದರು. ಇಡೀ ವಿಜ್ಞಾನವೇ ಸಂಗ್ರಹ ಕಾರ್ಯಾಗಾರದ ತತ್ವದ ಮೇಲೆ ರೂಪಿತವಾದದ್ದರಿಂದ ಇತಿಹಾಸದ ಸಮರಸ ಚೌಕಟ್ಟಿನಲ್ಲಿ ಸಂಗ್ರಹ ಕಾರ್ಯಾಗಾರದ ತತ್ವದ ಮೇಲೆ ರೂಪಿತವಾದದ್ದರಿಂದ

ಇತಿಹಾಸದ ಸಮರಸ ಚೌಕಟ್ಟಿನಲ್ಲಿ ಕಾರಣಗಳನ್ನು ಅವುಗಳಿಂದ ಉದ್ಭವಿಸಿದ ವಿಷಯ ಪ್ರವಾಹವನ್ನೂ ತೋರಿಸುವ ಯತ್ನ ನಡೆಯಿತು. ಹೀಗೆ ದೃಷ್ಟ ಪ್ರಮಾಣವಾದಿಗಳು - ಇತ್ಯಾತ್ಮಕ ವಾದಿಗಳು - ಭಿನ್ನತೆಯೂ ಐತಿಹಾಸಿಕ ವೈವಿಧ್ಯತೆಗಳು ಹೇಗೆ ಅಸ್ತಿತ್ವಕ್ಕೆ ಬಂದವು ಎಂಬುದನ್ನು ಪತ್ತೆ ಹಚ್ಚಲು ಪ್ರಯತ್ನ ಪಟ್ಟರು.

ಹೀಗೆ ಇತಿಹಾಸವು ಸಮಾಜಶಾಸ್ತ್ರ (ಸೋಷಿಯಾಲಜಿ) ನಂತರ ಗಣಿತದ ಲೆಕ್ಕಾಚಾರ, ಅನಂತರ ಸಂಖ್ಯಾಶಾಸ್ತ್ರಗಳ (ಸ್ಟಾಟಿಸ್ಟಿಕ್ಸ್) ತತ್ವಗಳನ್ನು ಪರಿಶೋಧನಾ ವಿಧಾನಗಳನ್ನೂ ತನ್ನ ಕಾರ್ಯದಲ್ಲಿ ತೊಡಗಿಸಿ ಹೆಚ್ಚಿನ ಪರಿಣಾಮಕಾರಿಯಾಗಿ ಪ್ರಯೋಜನಕಾರಿಯಾಗಿ ಪರಿಣಮಿಸಿತು. ಚರಿತ್ರೆಯಲ್ಲಿ ನೈಸರ್ಗಿಕ ಸಿದ್ಧಾಂತವನ್ನು ಒಪ್ಪಿದಾಗ ಕಾರ್ಯಕಾರಣ ಸಂಬಂಧಕ್ಕೆ ಪ್ರಾಮುಖ್ಯತೆ ಬಂದು ಇತಿಹಾಸದ ಕಾರ್ಯ ಕಾರಣ (ಕಾಸಲ್) ಪರಂಪರೆಯನ್ನು ನಿರ್ಧರಿಸುವಲ್ಲಿ ಜನಾಂಗ, ವಂಶ, ಅವನತಿ, ಅನುಕರಣೆ, ವಾತಾವರಣ ಪರಿಸರ ಮುಂತಾದ ಪ್ರಾಕೃತಿಕ ವಿಚಾರಗಳನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಅಭಿಪ್ರಾಯಪಟ್ಟರು.

ಈ ತತ್ವ ಪರಂಪರೆಯ ನೇತಾರನಾದ ಕಾಮ್ಟೆಯ ಅಂತಿಮ ಉದ್ದೇಶವೇನಾಗಿತ್ತೆಂದರೆ ಮಾನವ ಸಮಾಜದ ರಾಜಕೀಯ ಸಂಬಂಧ ಪುನರ್ ಸಂಘಟನೆ ಅಂಥಹದಾಗುವ ಮೊದಲು ಸಮಾಜದಲ್ಲಿ ಆಧ್ಯಾತ್ಮಿಕ ಮತ್ತು ನೈತಿಕ ಒಗ್ಗಟ್ಟು ಆಗಬೇಕು. ಮಾನವನ ಮನಸ್ಸಿನ ವಿಕಾಸನ ಕೆಲವು ನಿರ್ದಿಷ್ಟ ನಿಯಮಗಳನ್ನನುಸರಿಸುವುದರಿಂದ ಅದನ್ನು ಪ್ರಥಮ ಬೇರ್ಪಡಿಸಿ ವೈಜ್ಞಾನಿಕ ವಿಧಾನ ಮತ್ತು ಐತಿಹಾಸಿಕ ತಾರ್ಕಣೆ ಮಾಡಬೇಕಾಗಿದೆ ಎಂದು ಹೇಳಿದನು. ಇದು ಪರಮಾರ್ಥ ವಿದ್ಯೆ (ಥಿಯಾಲಜಿಕಲ್), ಭೌತಾತೀತವಿದ್ಯೆ (ಮೆಟಫಿಸಿಕ್ಸ್), ನಿಶ್ಚಿತ ಹಂತ ಮುಂತಾದ ಮೂರು ಹಂತಗಳಲ್ಲಿ ನಿಯಮಿತಗೊಳ್ಳುತ್ತದೆ. ನಿಶ್ಚಯವಾದ ವಿಜ್ಞಾನಗಳಲ್ಲಿ ಕ್ರಮೇಣ ಕಡಿಮೆ ಆಗುವ ಸಾಮಾನ್ಯೀಕರಣ ಮತ್ತು ಹೆಚ್ಚಾಗುವ ಸಂಕೀರ್ಣತೆಗಳು ಇರುವುದೆಂದು ತನ್ನ ಎರಡನೇ ಮುಖ್ಯ ನಿಯಮವನ್ನು ರೂಪಿಸಿದನು. ಆಧ್ಯಾತ್ಮಿಕ ಮತ್ತು ಬುದ್ಧಿಯ ಹೊಂದಾಣಿಕೆಯಾದಾಗ ಸಮಾಜಶಾಸ್ತ್ರವು ಉದ್ಭವವಾಗುತ್ತದೆ ಎಂದನು.

ಸಮಾಜದ ಪುನರ್ ಸಂಘಟನೆಗೆ ಕೋಟನು ಯಾವ ಒಂದು ನಿರ್ದಿಷ್ಟ ಸೂಚ್ಯವನ್ನು ಕೊಡದಿದ್ದರೂ ಸಾಮಾಜಿಕ ಯೋಜನೆಗಳು ಪರಸ್ಪರ ಸಂಬಂಧಪಟ್ಟವಾಗಿ ಸಾಮಾಜಿಕ ವೈಜ್ಞಾನಿಕ ಬೆಳವಣಿಗೆಯ ಮೇಲೆ ಹೆಚ್ಚು ಪ್ರಭಾವ ಬೀರುತ್ತವೆಂದು ಹೇಳಿದನು. ಸಾಮಾಜಿಕ ನಿಯಮಗಳಾಗುವಾಗ ಇತಿಹಾಸದ ಕ್ರಮಗಳು ಮತ್ತು ಯಾವ ವಿಷಯದಲ್ಲಿ ಸಾಧನೆಯಾಗಬೇಕು ಎಂದು ಅವನು ತಿಳಿಸಿರುವುದರಿಂದ ಇತಿಹಾಸ ರಚನಾಕಾರರಿಗೆ ಸಹಾಯವಾಯಿತು. ಅಲ್ಲದೆ ಸಾಮಾಜಿಕ ಐಕ್ಯತೆ ಉಂಟಾಗಬೇಕಾದರೆ ಸಾರ್ವತ್ರಿಕ ವಿದ್ಯಾಭ್ಯಾಸ (ಯೂನಿವರ್ಸಲ್) ಅವಶ್ಯಕವೆಂದು ಹೇಳಿದ್ದರಿಂದ ವಿದ್ಯಾಭ್ಯಾಸ ತಜ್ಞರು ಅದನ್ನು ಸಾಧಿಸುವ ಬಗೆಗೆ ಹೊಸ ವಿಧಾನಗಳನ್ನು ಕಂಡುಹಿಡಿಯಲು ಉದ್ಯುಕ್ತರಾದರು.

ರಾಜಕೀಯ ಶಾಸ್ತ್ರ ಮತ್ತು ಇತರ ಸಮಾಜಶಾಸ್ತ್ರಗಳು ವಿಧಿಕ್ರಮಗಳನ್ನನುಸರಿಸುವುದರಿಂದ ಇಲ್ಲಿಯೂ ಸಾಮಾಜಿಕ ನಿಯಮಗಳನ್ನು (ಇತರ ವೈಜ್ಞಾನಿಕ - ಭೌತಶಾಸ್ತ್ರ ರಸಾಯನಶಾಸ್ತ್ರ ದೈಹಿಕಗಳಂತೆ) ಮಾಡಲು ಸಾಧ್ಯ. ಇದಕ್ಕಾಗಿ ಹಿಂದಿನಿಂದ ಬಂದಿರುವ ದೈವತತ್ವ, ಭೌತತೀತ ವಿದ್ಯೆಗಳು ವಿಧಿಸಿರುವ ನಾನಾ ನಿಷೇಧ ತತ್ವಗಳನ್ನು (ಇನ್‌ಹಿಬಿಷನ್) ತ್ಯಜಿಸಿ ವೈಜ್ಞಾನಿಕ ನಿಯಾಮಾವಳಿಗಳನ್ನು ಅನುಸರಿಸುವಂತೆ ಮಾಡಬೇಕು ಎಂದನು. 1822 ರಲ್ಲಿ ಕೋಟೆಯು ಸಮಾಜದ ಪುನರ್ರಚನೆಗೆ ತನ್ನ ಯೋಜನೆಗಳನ್ನು ಪ್ರಕಟಿಸಿದನು. ಇದು ದೃಷ್ಟವಾದ ತತ್ವಗಳಿಗೆ ಒಂದು ಸನ್ನದು (ಚಾರ್ಟರ್) ಆಯಿತು. ನಾನಾ ಕಾಲಗಳ ನಾಗರಿಕತೆಗಳ ಐತಿಹಾಸಿಕ ಹೋಲಿಕೆಗಳನ್ನು ಮಾಡಬೇಕಾದರೆ, ಅವು ವೈಜ್ಞಾನಿಕವಾಗಬೇಕಾದರೆ, ಅವುಗಳನ್ನು ಸಮಾಜ ವಿಕಾಸವಾದದ ನಿಯಮಗೊಳಿಸಪಡಿಸಬೇಕು.

ಹೀಗೆ ಚರಿತ್ರೆಯ ಸಮಾಜದ ಬಗ್ಗೆ ತಿಳಿಯಲು ಮೂಲವಸ್ತುಗಳನ್ನು ಒದಗಿಸುವುದರಿಂದ ಕಾಲೇಜಿನಲ್ಲಿ ಅದಕ್ಕಾಗಿ ಅಧ್ಯಯನ ಪೀಠವನ್ನು ಫ್ರಾನ್ಸಿನ ಕಾಲೇಜಿನಲ್ಲಿ ಸ್ಥಾಪಿಸಬೇಕೆಂದು ಫ್ರಾನ್ಸಿನ ಮಹಾಪ್ರಧಾನಿಯನ್ನು ಒತ್ತಾಯಿಸಿದನು. ಸಮಾಜದ ನಿಯಮಗಳನ್ನು ತಿಳಿಯುವುದರಿಂದ ಸರ್ಕಾರವು ಚರಿತ್ರೆಯ ಗತಿಯನ್ನು ನಿಯತಗೊಳಿಸಲು ಮತ್ತು ಚರಿತ್ರೆಯ ಭವಿಷ್ಯ ಮಾರ್ಗವನ್ನು ತಿಳಿಸಲು ಸಾಧ್ಯವಾಗುತ್ತದೆಂದು ನಂಬಿದ್ದನು. ಹೀಗೆ ಖಂಡಿತವಾದಿಗಲ ಮುಖ್ಯ ಉದ್ದೇಶವೇನಾಗಿತ್ತೆಂದರೆ ಇತಿಹಾಸದ ನಿರೂಪಣೆಗೆ ಸಾಧ್ಯವಾದ ನಿಯಮಗಳನ್ನು ಕಂಡು ಹಿಡಿಯುವುದೇ ಆಗಿತ್ತು. ಇದು ವಿಜ್ಞಾನದಲ್ಲಿ ನ್ಯೂಟನ್ನನ ನಿಯಮಗಳಂತೆ ಸರ್ವಕಾಲಿಕ ಸರ್ವಜನ

ಒಪ್ಪಿಗೆಯಾಗುವಂತೆ ಆಗಬೇಕೆಂದು ಬಯಸಿದರು. ಕೋಟೆಯು ಉಪಯೋಗಿಸಿದ ಪರಿಸರ ಪ್ರಭಾವ ಸಾಮಾಜಿಕ ಸನ್ನಿವೇಶ (ಮಿಲ್ಯೊ) ಎಂಬ ಪದವು ಶುದ್ಧ ವಿಜ್ಞಾನ, ಸಮಾಜಶಾಸ್ತ್ರ, ಇತಿಹಾಸಗಳಲ್ಲಿ ಬಹಳವಾಗಿ ಬಳಕೆಯಾಗಿ ಜನಪ್ರಿಯವಾಯಿತು. ಸಮಾಜದ 'ಮಿಲಿಯು' ಎಂಬುದು ಅದ್ಭುತ ವಿಷಯಗಳನ್ನೊಳಗೊಂಡು ಬಹಳ ಪ್ರಭಾವಯುತವಾಗಿದೆ. ದೃಷ್ಟ ಪ್ರಮಾಣವಾದದ ಬೆಂಬಲಿಗರಿಂದ ಭಾಷಾ ವಿಜ್ಞಾನದ ಕೇವಲ ಪಾಂಡಿತ್ಯ ನಿರೂಪಣೆಗಳು ಖಂಡಿಸಲ್ಪಟ್ಟವು. ಇತಿಹಾಸದಲ್ಲಿ ನಾಸ್ತಿಕ ಅಥವಾ ಸಂಶಯಾತ್ಮಕ ಪದ್ಧತಿ (ಅಗ್ನಾನಿಸ್ಟಿಕ್) ಯೇ ಇಲ್ಲವೆಂದು ಹೇಳಲಾಯಿತು.

ರಮ್ಯತಾವಾದಿಗಳಿಗೂ ಖಂಡಿತವಾದಿಗಳಿಗೂ ಎಲ್ಲ ರೀತಿಯಲ್ಲೂ ವ್ಯತ್ಯಾಸಗಳಿರುವುದನ್ನು ಈ ಹಿಂದೆಯೇ ಗಮನಿಸಲಾಗಿದೆ. ಹೀಗೆ ದೃಷ್ಟಪ್ರಮಾಣವಾದಿಗಳಿಂದ ಇತಿಹಾಸದ ಆಜ್ಞೆಯತೆಯು ಕಡಿಮೆಯಾಯಿತಲ್ಲದೆ, ರಮ್ಯತಾವಾದಿಗಳು ಉದಾಸೀನ ಮಾಡಲ್ಪಟ್ಟಿದ್ದ ಅನೇಕ ಸಂಗತಿಗಳು ಗಮನಕ್ಕೆ ತರಲ್ಪಟ್ಟವು. ಮುಖ್ಯವಾಗಿ ಮನೋಶಾಸ್ತ್ರ ರೋಗ ನಿಧಾನ ಶಾಸ್ತ್ರ, ಆರ್ಥಿಕ ವಿಜ್ಞಾನಗಳ ಅನೇಕ ವಿಷಯಗಳು ಹೆಚ್ಚು ಗಮನ ಸೆಳೆದವು. ಇದಲ್ಲದೆ ಒತ್ತಾಯ, ಹಂಸೆ ಮುಂತಾದ ಕ್ರಾಂತಿಕಾರರ ವಿಷಯಗಳ ಬಗ್ಗೆ ಹೊಸ ಸಿದ್ಧಾಂತಗಳಾದವು. ವಾಸ್ತವಾದಗಳ (ಮೆಟರಿಯರಿಸಂ) ಬಗ್ಗೆ ಗಮನ ತಿರುಗಿದಾಗ ಮುಂದೆ ಹೊಸ ಸಮಸ್ಯೆಗಳು ಬಂದವು. ನೈಸರ್ಗಿಕಕ್ಕೂ ಮಾನವನ ಚಟುವಟಿಕೆಗಳಿಗೂ ಸಂಬಂಧ ಸಮಸ್ಯೆಗಳ ಅಧ್ಯಯನ ಪ್ರಾರಂಭವಾಯಿತು. ಮುಂದೆ ಕ್ರೋಸೆಯು ಈ ಸಮಸ್ಯೆಗಳಿಗೆ ಸಮಾಧಾನಕರವಾದ ಉತ್ತರಗಳನ್ನು ಹುಡುಕಬೇಕಾಯಿತು.

ಖಂಡಿತವಾದಿಗಳು ಇತಿಹಾಸವನ್ನು ವಿಜ್ಞಾನದ ಮಟ್ಟಕ್ಕೆ ತೆಗೆದುಕೊಂಡು ಹೋಗುವ ಪ್ರಯತ್ನ ಯಶಸ್ವಿಯಾಗಲಿಲ್ಲ. ಏಕೆಂದರೆ ವಿಜ್ಞಾನದ ಮುಖ್ಯ ವೈಶಿಷ್ಟ್ಯವಾದ ಭವಿಷ್ಯವನ್ನು ನುಡಿಯುವ ಅಥವಾ ತೋರಿಸುವ ಗುಣ ಇತಿಹಾಸಕ್ಕೆ ಇಲ್ಲದಿದ್ದುದೇ ಅಂಥ ಪ್ರಯತ್ನ ವಿಫಲವಾಗಲು ಕಾರಣವಾಯಿತು. ನಾಳೆ ಸಂಭವಿಸುವ ಘಟನೆಗಳನ್ನು ನಮ್ಮ ಈ ದಿನದ ಜ್ಞಾನ ತಳಹದಿಯ ಮೇಲೆ ಖಚಿತವಾಗಿ ಹೇಳಲು ಇತಿಹಾಸಕ್ಕೆ ಸಾಧ್ಯವಿಲ್ಲ.

## 19.3 ಆಗಸ್ಟ್ ಕಾಮ್ಟೆ (1798-1857)

ಆಗಸ್ಟ್‌ಕಾಮ್ಟೆ (ಕಾಂಟೆ) ಯು ದೃಷ್ಟಪ್ರಮಾಣದ ದಾರ್ಶನಿಕ. ಇವನು ಸಮಾಜ ವಿಜ್ಞಾನ ಸಮಾಜಶಾಸ್ತ್ರದ (ಸೋಷಿಯಾಲಜಿ) ಯ ಜನಕನೆಂದು ಪ್ರಖ್ಯಾತನಾಗಿದ್ದಾನೆ. ಫ್ರಾನ್ಸಿನಲ್ಲಿ ಕ್ರಿ.ಶ. 1798 ರಲ್ಲಿ ಜನಿಸಿದನು. ತನ್ನ ಹದಿಮೂರನೇ ವಯಸ್ಸಿನಲ್ಲಿ ಕ್ಯಾಥೋಲಿಕ್ ಪಂಗಡವನ್ನು ತ್ಯಜಿಸಿದನು. ವಿದ್ಯಾಭ್ಯಾಸಕ್ಕಾಗಿ ಪ್ಯಾರಿಸ್ಸಿನ ಎಕೋಲ್ ಪಾಲಿಟೆಕ್ನಿಕ್ ಅನ್ನು ಸೇರಿದನು. ಇದು ಆ ಕಾಲದ ರಾಜಕೀಯ ಉದಾರವಾದಿ ಮತ್ತು ಪ್ರಗತಿಯನ್ನು ಉದ್ದೇಶವಾಗಿಟ್ಟುಕೊಂಡ ಪ್ರಧಾನ ಸಂಸ್ಥೆಯಾಗಿತ್ತು. ಈ ಸಂಸ್ಥೆಯಲ್ಲಿ ಇವನು ಗಣಿತಶಾಸ್ತ್ರದ ಪ್ರಾಧ್ಯಾಪಕನಾದನು. ಪ್ಯಾರಿಸ್ಸಿನಲ್ಲಿದ್ದಾಗ ಅಲ್ಲಿಯ ಪ್ರಮುಖ ತತ್ವ ಶಾಸ್ತ್ರಜ್ಞ ಸೇಂಟ್ ಸೈಮನ್ನನ ಪರಿಚಯದಿಂದ ಪ್ರಭಾವಿತನಾಗಿ ತತ್ವಶಾಸ್ತ್ರವನ್ನು ಅಭ್ಯಾಸ ಮಾಡಿದನು. 1832 ರಿಂದ 1842 ರವರೆಗೆ ಎಕೋಲ್ ಪಾಲಿಟೆಕ್ನಿಕ್‌ನಲ್ಲಿ ಅಧ್ಯಾಪಕನಾಗಿದ್ದನು. ಸೈಮನ್ನನ ವಿಚಾರಧಾರೆಯಂತೆ ಇವನೂ ಸಹ ರಾಜಕೀಯ ವಿಷಯಗಳು ನ್ಯಾಯದ ಕಟ್ಟುಪಾಡಿಗೆ ಒಳಪಡುತ್ತವೆ. ತತ್ವಶಾಸ್ತ್ರ ಮತ್ತು ತತ್ವಶಾಸ್ತ್ರದ ನಿಜವಾದ ಗುರಿ ಎಂದರೆ ಸಮಾಜದ ಬಗ್ಗೆ ನಿರೂಪಣೆಗಳನ್ನು ಮಾಡುವುದು ಮತ್ತು ಸಮಾಜವನ್ನು ಪುನರ್ರಚಿಸುವುದು. ಇದು ವಸ್ತು ವಿಜ್ಞಾನಗಳ ನಿಯಮಗಳನನ್ನುಸರಿಸಿ ಸಮಾಜಶಾಸ್ತ್ರಗಳಿಗೂ ಅನ್ವಯಿಸಬಹುದು ಎಂದು ತಿಳಿದಿದ್ದನು. ಫ್ರಾನ್ಸಿನಲ್ಲಿ ಹದಿನೆಂಟನೆಯ ಶತಮಾನದ ಕೊನೆಯಲ್ಲಿ ಉಂಟಾದ ಕ್ಷಿಪ್ರಕ್ರಾಂತಿಯ ಕಾರಣ ಸಮಾಜದಲ್ಲಿ ಉಂಟಾಗಿದ್ದ ಅವ್ಯವಸ್ಥೆ ಹಾಗೂ ಅವನತಿಯ ಸ್ವರೂಪ ಮತ್ತು ಅವುಗಳಿಗೆ ಕಾರಣಗಳನ್ನು ತಿಳಿದು ಸಮಾಜದ ಪುನರ್ರಚನೆಗೆ ತಕ್ಕ ಕ್ರಮಗಳನ್ನು ಯೋಜಿಸಿ ಅದಕ್ಕೆ ಮೂರು ಬೇಕಾಗಿದ್ದ ಜ್ಞಾನ ವ್ಯವಸ್ಥೆ ಮತ್ತು ನೈತಿಕ ಮಾರ್ಗದರ್ಶನವನ್ನು ಒದಗಿಸಿಕೊಡುವುದೇ ಅವನ ಗುರಿಯಾಗಿದ್ದಿತು. ಅವನ ದೃಷ್ಟ ಪ್ರಮಾಣ ವಾದದಲ್ಲಿ ಪರಸ್ಪರ ಸಂಬಂಧಿತ ವಿಚಾರಗಳು ಪ್ರಧಾನವಾಗಿವೆ. 1. ದೃಷ್ಟಪ್ರಮಾಣ ದರ್ಶನ ಹಾಗೂ ವಿಜ್ಞಾನದ ಕಲ್ಪನೆ. 2. ಮೂರು ಹಂತಗಳ ನಿಯಮ 3. ವಿಜ್ಞಾನಗಳ ಶ್ರೇಣಿ ವ್ಯವಸ್ಥೆ.

ತನ್ನ ವಿಚಾರ ಧಾರೆಗಳನ್ನು ವಿವರಿಸಲು ಅವನು 1822 ರಲ್ಲಿ 'ಎ ಪ್ಲಾನ್ ಫಾರ್ ಸೈಂಟಿಫಿಕ್ಸ್ ವರ್ಕ್ಸ್ ನೆಸಸರಿ ಟು ಆರ್ಗನೈಸ್ ಸೊಸೈಟಿ' ಯನ್ನು 'ಎ ಕೋರ್ಸ್ ಆಫ್ ಪಾಸಿಟಿವ್ ಫಿಲಾಸಫಿ' ಎಂಬ ಆರು ಸಂಪುಟಗಳ ಗ್ರಂಥವನ್ನು 1830-1842 ರ ಅವಧಿಯಲ್ಲಿ ಪ್ರಕಟಿಸಿದನು. ತನ್ನ ಅತಿ ಮುಖ್ಯ ಗ್ರಂಥವಾದ 'ಸಿಸ್ಟಂ ಆಫ್ ಪಾಸಿಟಿವ್ ಪಾಲಿಟಿ'ಯ ನಾಲ್ಕು ಸಂಪುಟಗಳನ್ನು 1851 ರಿಂದ 1854 ರಲ್ಲಿ ಪ್ರಸಿದ್ಧಪಡಿಸಿದನು. ಇವುಗಳು ಅವನ ಸಮಾಜಶಾಸ್ತ್ರ ವಿಚಾರಗಳನ್ನು ಅವನ ಆದರ್ಶ ಸಮಾಜದ ಬಗ್ಗೆ ಯೋಜನೆಗಳನ್ನೂ ಒಳಗೊಂಡಿವೆ. ಅವನ ನೂತನ ಸಮಾಜ ವಿಚಾರಧಾರೆಯಲ್ಲಿ ಪ್ರೀತಿ, ವ್ಯವಸ್ಥೆ, ಪ್ರಗತಿಗಳು ಮುಖ್ಯ ಸ್ಥಾನಗಳಿಸಿದ್ದವು.

ಅವನ ವಿಚಾರಗಳು ತತ್ವಶಾಸ್ತ್ರಜ್ಞರಾದ, ಐತಿಹಾಸಿಕ ನಿರ್ಧಾರಿತ ತತ್ವಗಳನ್ನು ನಂಬಿದ್ದ ಹ್ಯೂಮ್, ಕ್ಯಾಂಟ್, ಟರ್ಗಾಟ್, ಮತ್ತು ಮನುಷ್ಯನ ಪ್ರಗತಿಯಲ್ಲಿ ದೈವತ್ವದ ಏರ್ಪಾಡುಗಳನ್ನು ನಂಬಿದ್ದ ವಿಕೊ, ಬೋನಾಲ್ಡ್ ಮತ್ತು ಬೋಸಾನೆ ಇವರ ತತ್ವಗಳನ್ನು ಆಧರಿಸಿದ್ದವು. ಇವುಗಳ ಆಧಾರದ ಮೇಲೆ ಇವನ ಪ್ರಗತಿ ವಿಚಾರ ಮತ್ತು ಮೂರು ಹಂತಗಳ ನ್ಯಾಯವೂ ನಿರ್ಧಾರಿತವಾದವು. ಮನುಷ್ಯನ ಬುದ್ಧಿ ವಿಕಾಸದಲ್ಲಿ ಆ ಮೂರು ಹಂತಗಳೆಂದರೆ ನಿರ್ಧಾರಿತವಾದವು. ಮನುಷ್ಯನ ಬುದ್ಧಿ ವಿಕಾಸದಲ್ಲಿ ಆ ಮೂರು ಹಂತಗಳೆಂದರೆ ಪರಮಾರ್ಥ ವಿದ್ಯೆ (ಥಿಯೋಲಾಜಿಕಲ್) ಭೌತಾತೀತ ವಿದ್ಯೆ (ಮೆಟಫಿಸಿಕಲ್) ಮತ್ತು ವೈಜ್ಞಾನಿಕ. ಮೂಲ ಸಮಾಜ ವಿಜ್ಞಾನಜ ಅವಶ್ಯಕತೆಯನ್ನು ಅರಿಯುವುದರಿಂದ ನವೀನ ಮತ್ತು ಉತ್ತಮ ಸಮಾಜ ರಚಿಸಲು ಸಾಧ್ಯವೆಂದು ತಿಳಿದಿದ್ದನು. ಇಂಥ ಅಧ್ಯಯನಕ್ಕೆ ಸಮಾಜಶಾಸ್ತ್ರ (ಸೋಷಿಯಾಲಜಿ) ಎಂಬ ಹೆಸರನ್ನು ಪ್ರಥಮವಾಗಿ ಉಪಯೋಗಿಸಿದನು. ಇಂಥ ವಿಜ್ಞಾನದ ಪರಿಚಯದಿಂದಲೇ ಸಮಾಜವನ್ನು ರಕ್ಷಿಸುವುದು ಈ ಶತಮಾನದಲ್ಲಿ (ಹತ್ತೊಂಬತ್ತನೆಯ) ಸಾಧ್ಯ ಎಂದು ತಿಳಿದಿದ್ದನು. ದೃಷ್ಟ ಪ್ರಮಾಣ ಸಿದ್ಧಾಂತಕ್ಕೆ ಕೋಟೆಯ ಕೊಡುಗೆಯನ್ನು ಐದು ಭಾಗಗಳಾಗಿ ವಿಂಗಡಿಸಬಹುದು.

1. ವಸ್ತುವಾದ ಅಥವಾ ವೈಜ್ಞಾನಿಕ ಪದ್ಧತಿಯನ್ನು ಕಟ್ಟು ನಿಟ್ಟಾಗಿ ಅನುಸರಿಸಿದುದು. 2. ಬುದ್ಧಿಯ ಬೆಳವಣಿಗೆಯಲ್ಲಿ ಮೂರು ಹಂತಗಳ ಸಿದ್ಧಾಂತ (ನಿಯಮ). 3. ವಿಜ್ಞಾನ ಶಾಸ್ತ್ರದ ವಿಂಗಡಣೆ (ಕ್ಲಾಸಿಫಿಕೇಶನ್) 4. ಸಮಾಜಶಾಸ್ತ್ರದ ಪ್ರಾರಂಭಕ್ಕೆ ಪ್ರತಿಯೊಂದು ವಿಜ್ಞಾನ ಶಾಸ್ತ್ರದಲ್ಲೂ ಇದ್ದ ಅಪೂರ್ಣತೆಯ ಕಲ್ಪನೆ (ಭಾವನೆ) 5. ಇತರ ತತ್ವಶಾಸ್ತ್ರಗಳನ್ನು ಒಗ್ಗೂಡಿಸುವ ದೃಷ್ಟಪ್ರಮಾಣದ ತತ್ವಗಳು.

ದೃಷ್ಟಪ್ರಮಾಣವಾದ ಕಾರ್ಯಾಚರಣೆಯಲ್ಲಿ ಒಂದು ಮುಖ್ಯವಾದ ಅಂಶವೆಂದರೆ ಮೂರನೆ ಹಂತದ ಅಥವಾ ವಿಜ್ಞಾನ ಹಂತದಲ್ಲಿ ಸಮಾಜಶಾಸ್ತ್ರದ ಅಧ್ಯಯನ ಸ್ಥಾನ. ಇದಕ್ಕೆ ಅನೇಕ ಅಡ್ಡಿ ತಡೆಗಳು -ಮುಖ್ಯವಾಗಿ ಪರಮಾರ್ಥ ವಿದ್ಯೆ ಮತ್ತು ಭೌತಾತೀತ ವಿದ್ಯೆಯ ಅವಶೇಷಗಳ ಪರಿಣಾಮ-ಬುದ್ಧಿಯ ಬೆಳವಣಿಗೆಯಂತೆ ಕಾಂಟೆಯು ಕಾಂಟೆಯು ವಿಜ್ಞಾನ ಶಾಸ್ತ್ರಗಳನ್ನು ಈ ಕ್ರಮವಾಗಿ ವಿಂಗಡಿಸಿದನು. 1. ಗಣಿತ 2. ಖಗೋಳ ಶಾಸ್ತ್ರ 3. ಭೌತಶಾಸ್ತ್ರ 4. ರಸಾಯನ ಶಾಸ್ತ್ರ 5. ಜೀವಶಾಸ್ತ್ರ ಮತ್ತು 6. ಸಮಾಜಶಾಸ್ತ್ರ ಇವುಗಳಲ್ಲದೆ ತತ್ವಶಾಸ್ತ್ರ ರಚನೆಯಲ್ಲಿ ಕಾಂಟೆಯ ಕಾಣಿಕೆ ಬಹಳ ಶ್ರೇಷ್ಠವಾದದ್ದಾಗಿ 20 ನೇ ಶತಮಾನದ ತತ್ವಶಾಸ್ತ್ರದ ಮೇಲೆ ಗಾಢ ಪ್ರಭಾವವನ್ನುಂಟು ಮಾಡಿತು. ಇದನ್ನು 'ತರ್ಕ ವಿಧಾನದ ತತ್ವಶಾಸ್ತ್ರ'ವೆಂದು ಹೆಸರಿಸಲಾಗಿದೆ.

ಕಾಮ್ಟೆಯು 'ಸಮಾಜಶಾಸ್ತ್ರ' ಎಂಬ ಹೆಸರನ್ನು ಪ್ರಥಮವಾಗಿ ಉಪಯೋಗಿಸಿದನು. ಅದಕ್ಕೆ ಸಕಾರಣವಾಗಿ ವಿಜ್ಞಾನ ಶಾಸನಗಳಲ್ಲಿ ಸ್ಥಾನ ಒದಗಿಸಿದನು. ಸಮಾಜಶಾಸ್ತ್ರದ ಒಕ್ಕಣೆ, ಅದರಲ್ಲಿ ಸೇರಬೇಕಾದ ವಿಷಯಗಳ ಬಗ್ಗೆ ಹೇಳಿ ಅದನ್ನು ಅಚ್ಚುಕಟ್ಟಾಗಿ ವ್ಯವಸ್ಥೆಗೊಳಿಸಿದನು. ಸಮಾಜ ಶಾಸ್ತ್ರದಲ್ಲಿ ಕಾರ್ಯ ಕಾರಣ ಸಂಬಂಧದಲ್ಲಿ ಹೇಗೆ ವ್ಯಕ್ತಿಯು ವರ್ತಿಸುತ್ತಾನೆ ಮತ್ತು ಸಮಾಜದ ವ್ಯವಸ್ಥೆಯಲ್ಲಿ ಅವನ ಉದ್ದೇಶಗಳು ತೀರ್ಮಾನಿಸಲ್ಪಡುತ್ತವೆ ಅಥವಾ ಸಾಮಾಜಿಕ ದರ್ಜೆಯ ಅವಸ್ಥೆಗೊಳಪಡುತ್ತವೆ (ಡಿಟರ್‌ಮಿನ್ಡ್ - ಕಂಡೀಷನ್ಸ್) ಎಂಬವುಗಳ ಬಗ್ಗೆ ಸಿದ್ಧಾಂತಗಳನ್ನು ರೂಪಿಸಿದನು.

ಕಾಮ್ಟೆಯು ಸಮಾಜಶಾಸ್ತ್ರವನ್ನು ಎರಡು ಮುಖ್ಯ ಕ್ಷೇತ್ರ ಅಥವಾ ವಿಭಾಗಗಳಾಗಿ ವಿಂಗಡಿಸಿದನು. 1. ರಾಜ್ಯ ಸರ್ಕಾರದ ಕಾರ್ಯಾಂಗ ಅಥವಾ ಆಡಳಿತದ ವ್ಯವಸ್ಥೆಯಲ್ಲಿ ಸಮಾಜ ಸಂಸ್ಥೆಯ ವ್ಯವಧಾನ ಅಥವಾ ಸೋಷಿಯಲ್ ಸ್ಟಾಟಿಕ್ಸ್ (ಸಮಾಜಸ್ಥಿತಿ ವಿಜ್ಞಾನ, ಸಮಸ್ಥಿತಿ ಶಾಸ್ತ್ರ), 2. ಸಮಾಜ ಪ್ರೇರಕ ಅಥವಾ ವಿಚಾರಿಕ ಶಕ್ತಿ (ಸೋಷಿಯಲ್ ಡೈನಮಿಸಂ) ಎಂಬ ಪ್ರಗತಿಯ ಪರಿಪೂರ್ಣ ಭಾವ (ಐಡಿಯ) ಈ ಚಿಂತನೆಯಲ್ಲಿ ಸಮಾಜದ, ಬುದ್ಧಿಯ, ವಸ್ತುವಿನ ಸಂಬಂಧದ ಮೂರು ಕಾರ್ಯಗಳು ಕಂಡು ಬರುತ್ತವೆ. (1) ಸಮಾಜಿಕದಲ್ಲಿ

ಸೈನ್ಯ ಸಂಬಂಧ ವಿಚಾರ ವಿಶ್ಲೇಷಣೆ, ಕೈಗಾರಿಕಾ ಸಂಬಂಧ (2) ಬುದ್ಧಿಯ ತರ್ಕ, ಭೌತಾತೀತ, ವೈಜ್ಞಾನಿಕ ಮತ್ತು (3) ವಸ್ತು ಸಂಬಂಧ ರಾಜ್ಯ ವಿಸ್ತಾರ (ಕಾನ್‌ಕ್ವೆಸ್ಟ್) ಯುದ್ಧ ರಕ್ಷಣೆ, ಕೈಗಾರಿಕಾ ಸಂಬಂಧ ವಿಭಾಗಗಳು ಇವೆ. ಕಾಂಟೆಯಂತೆ ಇದು ಸ್ವಾಭಾವಿಕವಾದ ಮತ್ತು ಅವಶ್ಯಕವಾದ ವಿಭಾಗಗಳಾಗಿ ವಿಷಯು ವೈಜ್ಞಾನಿಕ ಅಧ್ಯಯನಕ್ಕೆ ತೊಡುಗೆ ಕೊಡುತ್ತವೆ.

ಕಾಮ್ಟೆಯ ಈ ವಿಧಾನಗಳನ್ನು ತತ್ವಶಾಸ್ತ್ರಜ್ಞ ವಿಕೋ ಮೊದಲೇ ತನ್ನ 'ನವೀನ ವಿಜ್ಞಾನ'ದಲ್ಲಿ ಈ ವಿಕಾಸವಾದ ವಿಷಯಗಳ ಸಂಬಂಧ ಬರೆದಿದ್ದನು. ಕಾಂಟೆಯು ಈ ವೈಜ್ಞಾನಿಕ ವಿಷಯಗಳು ಇತಿಹಾಸದ ವ್ಯವಸ್ಥೆಯಲ್ಲೂ ಕಂಡು ಬರುತ್ತವೆಂದು ತಿಳಿಸಿದನು. ಹೀಗೆ ಕಾಂಟೆಯ ತತ್ವಗಳು ಮುಂದೆ ವಿಜ್ಞಾನಿ ಡಾರ್ವಿನ್, ಸಮಾಜವಾದಿ ಮಾರ್ಕ್ಸ್ ಮತ್ತು ಮಾರ್ಪಟಿನ (ತರುವಾಯದ) ಇತಿಹಾಸಕಾರ (ಮೆಟ ಹಿಸ್ಟೋರಿಯನ್) ಟಾಯ್ನಬಿಯವರಂತೆ ಅಭಿಪ್ರಾಯಗಳನ್ನೇ ಹೊಂದಿದ್ದನು. ಅವರಂತೆಯೇ ಕಾಂಟೆಯು ತನ್ನ ಅಭಿಪ್ರಾಯಗಳನ್ನು ವಿಷಯಗಳಂತೆ ಅಚ್ಚುಕಟ್ಟಾಗಿ ಜೋಡಿಸಿ, ವಿಂಗಡಿಸಿ ಸಣ್ಣ ವಿಭಾಗಗಳನ್ನಾಗಿ ಮಾಡಿ ಇತಿಹಾಸವನ್ನು ಸರಿಯಾದ ವಿಭಾಗಗಳನ್ನಾಗಿ ಮಾಡಿದನು. ಪಾಪ್ಪರ್ ಮುಂತಾದವರು ವಿಜ್ಞಾನದಂತೆ, ಹೀಗೆ ಅನುಕರಣೆ ಮಾಡುವುದು ಇತಿಹಾಸದಲ್ಲಿ ಸಾಧ್ಯವಿಲ್ಲ ಎಂದರು. ಆದರೂ ಇತಿಹಾಸವನ್ನು ವಿಜ್ಞಾನದ ನಡವಳಿಕೆಗಳಿಗೆ ಹೋಲಿಸುವುದನ್ನು ಪ್ರಾರಂಭಿಸಿದ ದೃಷ್ಟಪ್ರಮಾಣವಾದಿ ಕಾಮ್ಟೆಯ ಪ್ರಯತ್ನಗಳು ಶ್ಲಾಘನೀಯವಾದವು. ಕಾಂಟೆಯ ಅಭಿಪ್ರಾಯದಲ್ಲಿ ಮಾನವನ ಪ್ರಗತಿಯು, ಆಯಾ ಯುಗದ ಕ್ರಮದಂತೆ, ಅಲ್ಪವಾಗಿಯೋ, ಪೂರ್ಣವಾಗಿಯೋ ನಡೆದೇ ತೀರುತ್ತದೆ. ಇಂಗ್ಲೆಂಡಿನ 19 ನೇ ಶತಮಾನದ ತತ್ವಜ್ಞ ಬಕಲ್‌ನು ಕಾಂಟೆಯು ಹೇಳಿದಂತೆ ಮಾನವ ಸಮಾಜದಲ್ಲಿ ಸ್ವಾಭಾವಿಕ ನ್ಯಾಯಗಳಿರುವುದೆಂಬುದನ್ನು ಒಪ್ಪಿದನು. ಆದರೆ ಕಾಂಟೆಯ ಅಭಿಪ್ರಾಯಗಳನ್ನು ಒಪ್ಪದಿದ್ದರೆ ತತ್ವಜ್ಞರಲ್ಲಿ ಇಟಲಿಯ ಕ್ರೋಸೇ ಮತ್ತು ಇಂಗ್ಲೆಂಡಿನ ಕಾಲಿಂಗ್ ವುಡ್ ಪ್ರಮುಖರು. ಕಾಲಿಂಗ್‌ವುಡ್‌ನು ದೃಷ್ಟಪ್ರಮಾಣವಾದಿಗಳ ಮತ್ತು ಐತಿಹಾಸಿಕ ಗತಿಗಳನ್ನು ನಿಯಮಗಳೆಂದು ಒಪ್ಪಿದ ಸ್ಪೆಂಗ್ಲರ್ ಮತ್ತು ಟಾಯ್ನಬಿ ಅವರ ಅಭಿಪ್ರಾಯಗಳನ್ನು ಒಪ್ಪಲಿಲ್ಲ. ಕಾಲಿಂಗ್‌ವುಡ್‌ನು ಇತಿಹಾಸವು ಸ್ವಯಂ ಚಾಲನೆಯುಳ್ಳ ಒಂದು ವಿಷಯವಾಗಿ ತನ್ನದೇ ಆದ ರೀತಿ ನೀತಿಗಳನ್ನು ಒಳ ಗುಂಪುಗಳನ್ನು ಹೊಂದಿರುತ್ತದೆ ಎಂದು ಭಾವಿಸಿದ್ದನು. ಕಾಂಟೆಯು ಒಂದು ಸಾಧಾರಣ ವೈಜ್ಞಾನಿಕ ಚೌಕಟ್ಟನ್ನೂ ಇತಿಹಾಸಕ್ಕೂ ಸೃಷ್ಟಿಸಿದ್ದನ್ನು ಅವರು ಒಪ್ಪಲಿಲ್ಲ.

ಆದರೂ ಕಾಮ್ಟೆಗಿಂತ ಹಿಂದಿನ ಚಿಂತಕನಾದ ಫ್ರೆಂಚ್ ವಿವೇಚನಾವಾದಿ ಟರ್ಗಾಟ್‌ನೂ, ಸೆಯಿಂಟ್ ಸೈಮನ್ನರು ಅವನಂತೆಯೇ ಯೋಚನೆ ಮಾಡಿದ್ದರು ಎಂಬುದು ಗಮನಿಸಬೇಕಾದ ವಿಷಯವಾಗಿದೆ. ಹಿಂದೆಯೂ ಫ್ರಾನ್ಸಿಸ್ ಬೇಕನ್ ಡಿ ಕಾರ್ಟೆ ಸಹ ಹೀಗೆಯೇ ಯೋಚಿಸಿದ್ದರು.

ಇಂಗ್ಲೆಂಡಿನಲ್ಲಿ ಕಾಮ್ಟೆಯ ಅಭಿಪ್ರಾಯಗಳು ಜೆ.ಎಸ್. ಮಿಲ್‌ನಿಂದ ಪುರಸ್ಕರಿಸಲ್ಪಟ್ಟು ಪ್ರಚಾರ ಮಾಡಲ್ಪಟ್ಟಿತು. ಕಾಂಟೆಯ ದೃಷ್ಟವಾದ ಪ್ರಮಾಣದಂತೆ ಮನುಷ್ಯನ ಜ್ಞಾನವು ಮನುಷ್ಯನ ಅನುಭವಗಳ ಮಿತಿಯಲ್ಲಿರುತ್ತದೆ. ಆದ್ದರಿಂದ ಎಲ್ಲ ವಿಚಾರ ಕುತೂಹಲತೆ, ಸಂಶೋಧನೆಗಳು ಅನುಭವ ಸಿದ್ಧ ವೈಜ್ಞಾನಿಕ ವಿಷಯವಾಗಿರಬೇಕು ಮತ್ತು ವಿಚಾರಣೆ ಸಂಶೋಧನೆಗಳ ಉದ್ದೇಶವೂ ಆ ವಿಷಯಗಳ ಪರಸ್ಪರ ಸಂಬಂಧವನ್ನು ತಿಳಿಸುವ ನಿಯಮಗಳನ್ನು ಕಂಡು ಹಿಡಿಯುವುದೇ ಆಗಿರಬೇಕು. ಇದೇ ಮುಂದೆ ಸಮಾಜ ಭೌತಶಾಸ್ತ್ರ (ಸೋಷಿಯಲ್ ಫಿಸಿಕ್ಸ್) ಎಂದು ಕರೆಯಲ್ಪಟ್ಟಿತು. ಇದೇ ಕಾಂಟೆಯ ಮುಖ್ಯ ಮೂರು ಹಂತಗಳ ಪರಿಮಿತಿ ಹೀಗೆ ವಸ್ತುಗಳ ಪರೀಕ್ಷಣದಲ್ಲಿ ಕಾಂಟೆಯ ಅಭಿಪ್ರಾಯಗಳು, ಹೆಗಲನ ರಾಷ್ಟ್ರ ಮಾರ್ಕ್ಸ್‌ನ ಪ್ರೋಲೀಟರಿಯಟ್‌ಗಳಿಗೆ ಸಮಾನವಾಗಿದೆ.

ಕಾಮ್ಟೆಯ ದೃಷ್ಟಪ್ರಮಾಣವಾದದಲ್ಲಿ ಒಂದು ಆಶ್ಚರ್ಯಕರವಾದ ಸಿದ್ಧಾಂತವೆಂದರೆ ಮಹಿಳೆಯರಿಗೆ ವಿದ್ಯಾಭ್ಯಾಸದಲ್ಲಿ ಸಕಲ ಸೌಲಭ್ಯಗಳೂ, ಅವಕಾಶಗಳೂ ಇರಬೇಕು. ಆದರೆ ಸಾರ್ವಜನಿಕ ಜೀವನದಲ್ಲಿ ಯಾವ ಅಧಿಕಾರವೂ ಇರಬಾರದೆಂದು ತಿಳಿಸಿದ್ದಾನೆ. ಇದು ಆದರ್ಶ ರಾಜ್ಯದ ಭಾವನೆಗಳಿಗೆ ವಿರುದ್ಧವಾಗಿದೆ. ಆಧುನಿಕ ಅಮೇರಿಕಾದಲ್ಲಿ ಸಮಾಜಶಾಸ್ತ್ರವು ಒಂದು ವೈಜ್ಞಾನಿಕ ಶಾಸ್ತ್ರವಾಗಿ ಬೆಳೆದು ಬಂದಿರುವುದಕ್ಕೂ ಕಾಂಟೆಯ ಅಮೂಲ್ಯ ಕೊಡುಗೆಯಾಗಿದೆ.

## 19.4 ಘಟಕದ ಸಾರಾಂಶ

ಈ ಘಟಕದ ಅಧ್ಯಯನದಿಂದ ನಾವು ಖಂಡಿತವಾದಿಗಳ ಕಾಲದ ಇತಿಹಾಸ ಬರವಣಿಗೆಯನ್ನು ಮತ್ತು ಅರ್ಥವನ್ನು ತಿಳಿದುಕೊಂಡೆವು. ಖಂಡಿತವಾದದ ವಿಷಯ ವಿಸ್ತೃತವನ್ನು ಮತ್ತು ಖಂಡಿತವಾದದ ಪ್ರತಿಪಾದಕರ ಬಗ್ಗೆಯೂ ಸಹ ಅರಿತುಕೊಂಡೆವು. ಆಗಸ್ಟ್ ಕಾಮ್ಟೆಯ ಖಂಡಿತವಾದದ ದರ್ಶನ ಮತ್ತು ಅದರ ಬಗ್ಗೆ ಬಂದಿರುವ ಟೀಕೆಗಳು ಹಾಗೂ ಈ ಖಂಡಿತವಾದಿವನ್ನು ವೈಜ್ಞಾನಿಕ ಇತಿಹಾಸದಲ್ಲಿ ಅಳವಡಿಸಿಕೊಳ್ಳುವುದು ಮುಂತಾದ ವಿಷಯಗಳ ಬಗ್ಗೆ ಈ ಘಟಕದಲ್ಲಿ ಸವಿಸ್ತಾರವಾಗಿ ತಿಳಿದುಕೊಂಡೆವು.

## 19.5 ಸ್ವಯಂ ಪರಿಶೀಲನಾ ಪ್ರಶ್ನೆಗಳು

1. ಸಮಾಜ ವಿಜ್ಞಾನಗಳ ಸಂಶೋಧನೆಯಲ್ಲಿ ಖಂಡಿತವಾದದ ಪ್ರಾಮುಖ್ಯತೆಯನ್ನು ಚರ್ಚಿಸಿ.
2. ಪ್ರಾಥಮಿಕ ದಾರ್ಶನಿಕರು ಖಂಡಿತವಾದದ ಬಗ್ಗೆ ನೀಡಿರುವ ವಿವರಣೆಗಳನ್ನು ವಿವರಿಸಿ.
3. ಆಗಸ್ಟ್ ಕಾಮ್ಟೆಯ ಖಂಡಿತವಾದಿ ದರ್ಶನವನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ.

## 19.6 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. Patric Gardiner : Theories of Histories
2. Shotwell : Faith of Our Historians
3. Barnes : History of Historical Writing


*ಡಾ. ಎ. ಸೋಮಶೇಖರ್*

# ಘಟಕ - 20 ಎಡ್ವರ್ಡ್ ಗಿಬ್ಬನ್ (1727-1794)

*ವಿಷಯಸೂಚಿ*


20.0 ಉದ್ದೇಶಗಳು

20.1 ಪೀಠಿಕೆ

20.2 ಎಡ್ವರ್ಡ್ ಗಿಬ್ಬನ್(1737-1794)- ಇತಿಹಾಸದ ಚಿಂತನೆಗಳು

20.3 ಘಟಕದ ಸಾರಾಂಶ

20.4 ಸ್ವಯಂ ಪರಿಶೀಲನಾ ಪ್ರಶ್ನೆಗಳು

20.5 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 20.0 ಉದ್ದೇಶಗಳು

ಈ ಘಟಕ 20 ರಲ್ಲಿ ನಾವು ಖಂಡಿತವಾದಿ ಇತಿಹಾಸಕಾರರ ಸಾಲಿನಲ್ಲಿ ಪ್ರಖ್ಯಾತನಾದ ಇಂಗ್ಲೆಂಡಿನ ಎಡ್ವರ್ಡ್ ಗಿಬ್ಬನ್ ಬಗ್ಗೆ ತಿಳಿಯಲು ಪ್ರಯತ್ನಿಸುತ್ತೇವೆ. ಖಂಡಿತವಾದಿ ಇತಿಹಾಸಕಾರರ ಪ್ರತಿಪಾದಕನಾದ ಗಿಬ್ಬನ್ ಹೇಗೆ ಈ ಚಿಂತನೆಯನ್ನು ಇತಿಹಾಸದಲ್ಲಿ ಅಳವಡಿಸಿಕೊಂಡು ಇದರ ಬೆಳವಣಿಗೆಗೆ ಶ್ರಮಪಟ್ಟ ಹಾಗೂ ಇವನು ಇತಿಹಾಸಕ್ಕೆ ನೀಡಿದ ಕೊಡುಗೆಯನ್ನು ಇಲ್ಲಿ ಅಧ್ಯಯನ ಮಾಡಲಾಗುವುದು.

## 20.1 ಪೀಠಿಕೆ

ಪ್ರಸ್ತುತ ಘಟಕದಲ್ಲಿ 18 ಮತ್ತು 19 ನೇ ಶತಮಾನದಲ್ಲಿ ತನ್ನ ಜನನ ತಾಳಿ ಅಭಿವೃದ್ಧಿ ಹೊಂದಿದ ಖಂಡಿತವಾದ ಇತಿಹಾಸ ಲೇಖನ ಕಲೆಯನ್ನು ಅಧ್ಯಯನ ಮಾಡುತ್ತೇವೆ. ಈ ಚಿಂತನೆಯ ಇತಿಹಾಸಕಾರರಲ್ಲಿ ಪ್ರಥಮರು ಎಂದರೆ ಆಗಸ್ಟ್ ಕಾಮ್ಟೆ ಮತ್ತು ಎಡ್ವರ್ಡ್ ಗಿಬ್ಬನ್. ಕಾಮ್ಟೆ ಹೇಗೆ ತನ್ನ ಕೊಡುಗೆಯನ್ನು ಸಲ್ಲಿಸಿದನು ಎಂಬುದನ್ನು ಈಗಾಗಲೇ ತಿಳಿಸಿದ್ದೇವೆ. ಈಗ ಗಿಬ್ಬನ್ ಈ ಲೇಖನ ಕಲೆಯಲ್ಲಿ ಯಾವ ರೀತಿ ಕಾರ್ಯನಿರ್ವಹಿಸಿದ ಹಾಗೂ ಇವನ ವ್ಯಕ್ತಿತ್ವವೇನು ಎಂಬುದರ ಬಗ್ಗೆ ಈ ಘಟಕದಲ್ಲಿ ಅಧ್ಯಯನ ನಡೆಸಲಾಗುವುದು.

## 20.2 ಎಡ್ವರ್ಡ್ ಗಿಬ್ಬನ್ (1737-1794)- ಇತಿಹಾಸದ ಚಿಂತನೆಗಳು

ಇಂಗ್ಲೆಂಡಿನ ಗಿಬ್ಬನ್ನನು ಜ್ಞಾನೋದಯ ಕಾಲದ ಇತಿಹಾಸಕಾರ ಹದಿನೆಂಟನೆಯ ಶತಮಾನದ ಶ್ರೇಷ್ಠ ಇತಿಹಾಸ ಬರಹಗಾರ 1737 ರಲ್ಲಿ ಜನಿಸಿದನು. ಶಾಲೆಯಲ್ಲಿ ಲ್ಯಾಟಿನ್ ಕಲಿತನು, ಪುಸ್ತಕ ಪ್ರೇಮಿಯಾಗಿ ಅನೇಕ ಉಪಯುಕ್ತಗಳ ವ್ಯಾಸಂಗ ಮಾಡಿ ತನ್ನ ಹದಿನಾಲ್ಕನೆಯ ವಯಸ್ಸಿನಲ್ಲೇ ತಾನು ಬರೆಯಬೇಕೆಂದಿದ್ದ ಗ್ರಂಥಗಳ ಬಗ್ಗೆ ತಕ್ಕ ರೂಪುರೇಷೆಗಳನ್ನು ಮಾಡಿಕೊಂಡನು. ಅವನು 'ಮೆಮೊಯರ್ಸ್' ಎಂಬ ಆತ್ಮ ಚರಿತ್ರೆಯಲ್ಲಿ ತನ್ನ ಜೀವನವನ್ನೆಲ್ಲಾ ತಿಳಿಸಿ ತಾನು ಗ್ರಂಥಗಳ ರಚನೆ ಬಗ್ಗೆ ಮಾಡಿದ ಸನ್ನಾಹ, ಅವುಗಳಲ್ಲಿಯ ವಿಶೇಷ ವಿಷಯಗಳ ಬಗ್ಗೆ ವಿವರಣೆಗಳನ್ನು ನೀಡಿದ್ದಾನೆ. ಇವನು ಸ್ವ ಇಚ್ಛೆಯಿಂದ ರೋಮನ್ ಕ್ಯಾಥೋಲಿಕ್ ಚರ್ಚ್‌ಗೆ 1752 ರಲ್ಲಿ ಧರ್ಮಾಂತರಗೊಂಡನು. ಪುನಃ 1754 ರಲ್ಲಿ ಪ್ರಾಟೆಸ್ಟೆಂಟ್ ಧರ್ಮಕ್ಕೆ ಹಿಂದಿರುಗಿದನು. ದೇಶ ಸಂಚಾರ ಇವನಿಗೆ ಪ್ರಿಯವಾಗಿತ್ತು. ಇವನು ವಿದ್ಯಾಭ್ಯಾಸ ಮುಂದುವರೆಸಿ ಲ್ಯಾಟಿನ್ ಸಾಹಿತ್ಯ, ತರ್ಕಶಾಸ್ತ್ರಗಳನ್ನು ಅಭ್ಯಾಸ ಮಾಡಿ ಸಂಪೂರ್ಣ ಪಾಂಡಿತ್ಯ ಪಡೆದನು.

ಇವನ ಮೊದಲ ಪ್ರಬಂಧ 1761 ರಲ್ಲಿ ಫ್ರೆಂಚ್ ಭಾಷೆಯಲ್ಲಿ ಪ್ರಕಟವಾಯಿತು. ನಂತರ ಇದನ್ನೇ ಇಂಗ್ಲೀಷ್ ಭಾಷೆಯಲ್ಲಿ ಪ್ರಕಟಿಸಿದ. ಇದರ ವಿಷಯ "ಎನ್ ಎಸ್ಸೇ ಆನ್ ದಿ ಸ್ಟಡಿ ಆಫ್ ಲಿಟರೇಚರ್". 1763 ಪ್ಯಾರಿಸ್‌ನಲ್ಲಿ ಸ್ವಲ್ಪ ಕಾಲ ಇದ್ದು ಅಲ್ಲಿಯ ಸುಪ್ರಸಿದ್ಧ ತತ್ವ ಶಾಸ್ತ್ರಜ್ಞರಲ್ಲಿ ಕಾಲಕಳೆದನು. 1764 ರಲ್ಲಿ ಇಟಲಿಗೆ ಹೋಗಿ ಅಲ್ಲಿಯ ಐತಿಹಾಸಿಕ ಪ್ರದೇಶಗಳಲ್ಲೆಲ್ಲಾ ಓಡಾಡಿದನು. ಮುಖ್ಯವಾಗಿ ರೋಂ ನಗರದಲ್ಲಿ ಬಹಳ ಕಾಲ ಓಡಾಡಿದನು. ಆಗ ಅಲ್ಲಿಯ ಪುರಾತನ ಅವಶೇಷಗಳನ್ನು ಬಹಳ ಗಮನವಿಟ್ಟು ಪರಿಶೀಲಿಸಿ ವಿಷಯ ಸಂಗ್ರಹಿಸಿಕೊಂಡನು. ರೋಮನ್ ಸಾಮ್ರಾಜ್ಯವು ಯುರೋಪ್, ಪಶ್ಚಿಮ ಏಷ್ಯಾ, ಉತ್ತರ ಆಫ್ರಿಕಾ ಮುಂತಾದ ಮೂರು ಖಂಡಗಳಲ್ಲಿ ಹರಡಿ ಸುಮಾರು ಕ್ರಿ.ಪೂ. 200 ರಿಂದ ಕ್ರಿ.ಶ. 500 ರವರೆಗೆ ವೈಭವದಿಂದ ಮೆರೆದು ಅವನತಿಗೀಡಾದ ಇತಿಹಾಸ ವಿಷಯಗಳನ್ನು ಕೂಲಂಕುಷವಾಗಿ ಅಭ್ಯಾಸ ಮಾಡಿದನು. ರೋಂ ಚಕ್ರಾಧಿಪತ್ಯದ ಇತಿಹಾಸ ಪರಿಚಯ ಅವನಿಗೆ ಈ ಮೊದಲೇ ಲ್ಯಾಟಿನ್ ಸಾಹಿತ್ಯದ ಮೂಲಕ ಚೆನ್ನಾಗಿ ಪರಿಚಯವಾಗಿತ್ತು. ಅವನು ತನ್ನ ಆತ್ಮ ಚರಿತ್ರೆಯಲ್ಲಿ ಉಲ್ಲೇಖಿಸಿರುವಂತೆ 1964 ರ ಅಕ್ಟೋಬರ್ 15 ರಂದು ಆ ನಗರದಲ್ಲಿ ತಾನು ಒಂದೆಡೆ ಆಲೋಚನಾಪರನಾಗಿ ಕುಳಿತಿದ್ದಾಗ ರೋಮಿನ ಅವನತಿ ಮತ್ತು ಪತನದ ಇತಿಹಾಸ ಬರೆಯಲು ಸಂಕಲ್ಪಿಸಿದುದಾಗಿ ತನ್ನ ಆತ್ಮಚರಿತ್ರೆಯಲ್ಲಿ ಬರೆದಿದ್ದಾನೆ. ಇಡೀ ಚಕ್ರಾಧಿಪತ್ಯದ ಚರಿತ್ರೆ ಬರೆಯುವ ಆಲೋಚನೆ ಅನಂತರ ಬಂದಿತು. ಮರು ವರ್ಷ ನೇಪಲ್ಸ್ ನಗರ ವೀಕ್ಷಣೆ ನಂತರ ಇಂಗ್ಲೆಂಡಿಗೆ ಹಿಂದಿರುಗಿದನು. ಯುರೋಪಿನಲ್ಲಿ ಫ್ರೆಂಚ್ ಸಂಸ್ಕೃತಿಯ ಹೆಚ್ಚಳವನ್ನು ಮೆಚ್ಚಿಕೊಂಡವನಾಗಿ ಆ ಭಾಷೆಯಲ್ಲಿ ಸ್ವಿಷ್ ಜನರ ಸ್ವಾತಂತ್ರ್ಯದ ಬಗ್ಗೆ ಗ್ರಂಥ ರಚಿಸಲು ತೊಡಗಿದನು.

ಆದರೆ ಅದನ್ನು ಸಂಪೂರ್ಣ ಮಾಡಲಿಲ್ಲ. ಐದು ವರ್ಷಗಳ ಸಾಹಿತ್ಯರಚನಾ ಬಿಡುವಿನ ನಂತರ ಫ್ರಾನ್ಸಿನ ಮಿತ್ರನೊಬ್ಬನೊಡಗೂಡಿ 1768-69 ರಲ್ಲಿ ಮೆವ್ವಾರ್ಸ್ ಲಿಟರೇರಿಸ್ ದ ಲಾ ಗ್ರಾಂಡ್ ಬ್ರಿಟಾನೆ ಅನ್ನು 1770 ರಲ್ಲಿ ಕ್ರಿಟಿಕಲ್ ಅಬ್ಸರ್ವೇಷನ್ ಆನ್ ದಿ ಸಿಕ್ಸ್ ಬುಕ್ ಆಫ್ ಏನೀಡನು ಬರೆದು ಪ್ರಕಟಿಸಿದನು.

ಮುಂದೆ 1770 ರಿಂದ ಲಂಡನ್ನಿನಲ್ಲಿ ನೆಲೆಸಿ ವೈಭವೋಪೇತ ಕ್ಲಬ್ಬುಗಳಲ್ಲಿ ಸದಸ್ಯನಾದ. 1774 ರಲ್ಲಿ ಪಾರ್ಲಿಮೆಂಟಿನ ಸದಸ್ಯನಾಗಿ ಚುನಾಯಿತನಾದನು. 1779 ರಲ್ಲಿ ಸರ್ಕಾರದ ಹುದ್ದೆಗಳಲ್ಲಿ ಇದ್ದನು. ಈ ವೇಳೆಗೆ ಗಿಬ್ಬನ್ ತನ್ನ ಮೇರುಕೃತಿಯಾದ **'ಡಿಕ್ಲೈನ್ ಅಂಡ್ ಫಾಲ್ ಆಫ್ ದಿ ರೋಮನ್ ಎಂಪೈರ್'** (ರೋಂ ಚಕ್ರಾಧಿಪತ್ಯದ ಅವನತಿ ಮತ್ತು ನಾಶ) ಎಂಬ ಉದ್ಗ್ರಂಥವನ್ನು ಪ್ರಾರಂಭಿಸಿ ಮೊದಲನೆ ಸಂಪುಟದ ಸ್ವಲ್ಪ ಭಾಗವನ್ನು 1776 ರಲ್ಲಿ ಪ್ರಕಟಿಸಿದನು. ಕೂಡಲೇ ಇವನ ಹೆಸರು ಪ್ರಸಿದ್ಧಿಗೆ ಬಂದಿತು. ಈ ಗ್ರಂಥ ಅನೇಕರ ಶ್ಲಾಘನೆಗೂ ಕಟುವಾದ ಟೀಕೆಗೂ ಒಳಗಾಯಿತು. ಇದರಲ್ಲಿ 15, 16 ನೇ ಅಧ್ಯಾಯಗಳು ಕ್ರೈಸ್ತಧರ್ಮದ ಹುಟ್ಟನ್ನು ಕುರಿತದ್ದಾಗಿದೆ. ಇವನ ಗ್ರಂಥದ ಪ್ರಚಾರಕ್ಕೆ ಇದೂ ಒಂದು ಕಾರಣ. ಮುಂದಿನ ಸಂಪುಟಗಳ ರಚನೆಯಲ್ಲಿ ತೊಡಗಿದ್ದಾಗ ಟೀಕಾಕಾರರ ಕಿರುಕುಳಗಳಿಗೆ ಪ್ರತಿಯಾಗಿ 1779 ರಲ್ಲಿ ತನ್ನ ಬರವಣಿಗೆಯನ್ನೂ ವಾದವನ್ನೂ ಸಮರ್ಥಿಸಿ ಒಂದು ದೀರ್ಘ ಲೇಖನ ಬರೆದು ಪ್ರಕಟಿಸಿದನು. ಗಿಬ್ಬನ್ನಿನ ಇತಿಹಾಸದ 2 ಮತ್ತು 3 ನೇ ಸಂಪುಟಗಳು 1781 ರಲ್ಲೂ 4,5, 6ನೇ ಸಂಪುಟಗಳು 1787 ರಲ್ಲೂ ಪ್ರಕಟವಾದವು. ಕ್ರಿ.ಶ. ಎರಡನೆಯ ಶತಮಾನದಿಂದ ಆರಂಭವಾಗುವ ರೋಂ ಚಕ್ರಾಧಿಪತ್ಯದ ಇತಿಹಾಸದ ಮೊದಲ ಅರ್ಧ ಕ್ರಿ.ಶ. 1480 ರವರೆಗಿನ ಘಟನೆಗಳಿಗೆ ಮೀಸಲಾಗಿದೆ. ಎರಡನೆ ಅರ್ಧದಲ್ಲಿ ಸುಮಾರು ಎಂಟುನೂರು ವರ್ಷಗಳ ಚರಿತ್ರೆ ಅಡಕವಾಗಿದೆ. ಅಂದರೆ ಸುಮಾರು ಜ್ಞಾನೋದಯ ಕಾಲದವರ ಕಾಲದವರೆಗೆ - ಪೂರ್ವ ಯೂರೋಪಿನ (ಅಂದರೆ ಪಶ್ಚಿಮ ಏಷ್ಯಾ ಪ್ರದೇಶದಲ್ಲಿದ್ದ) ರಾಜಧಾನಿಯಾಗಿದ್ದ ಕಾನ್‌ಸ್ಟ್ಯಾಂಟಿನೋಪಲ್ ನಗರ ಪತನವಾಗುವವರೆಗೆ (1453) ಗಿಬ್ಬನ್ನಿನ ಇಡೀ ಗ್ರಂಥವು ಸ್ವಾರಸ್ಯವಾಗಿ, ಸಾಹಿತ್ಯ ಶೈಲಿಯಲ್ಲಿ ಬಹಳ ಆಕರ್ಷಕವಾಗಿ ಕಲಾತ್ಮಕವಾಗಿವೆ. ಇದರಲ್ಲಿ ಅವನ ಗ್ರಂಥದ ಎರಡನೇ ಭಾಗವು ಬಹಳ ಉತ್ತಮವಾಗಿ ಬರೆಯಲ್ಪಟ್ಟು ಅನೇಕ ಅಧ್ಯಾಯಗಳನ್ನೊಳಗೊಂಡಿದೆ. ಇವುಗಳಲ್ಲಿಯೂ ಜಸ್ಟಿನಿಯನ್, ಟ್ರಿನಿಟ್ಯಾರಿಯನ್ ವಿಭಿನ್ನತೆಗಳು, ಇಸ್ಲಾಂನ ಬೆಳವಣಿಗೆ, ರೋಂನಲ್ಲಿ ನ್ಯಾಯ ಕಾನ್‌ಸ್ಟಾಂಟಿನೋಪಲ್‌ನ ಮುತ್ತಿಗೆ ಮತ್ತು ಪತನದ ಇತಿಹಾಸದ ಮುಂತಾದವು ಬಹಳ ಉತ್ತಮವಾಗಿದೆ. ಇದರಂತೆ ಕೊನೆಯ ಅಧ್ಯಾಯಗಳಾದ ಮಧ್ಯಕಾಲದ ರೋಂ ಮತ್ತು ರೋಂನ ಪುನರುಜ್ಜೀವನ ಕಾಲದ ಅಧ್ಯಾಯಗಳೂ ಬಹಳ ಚೆನ್ನಾಗಿ ಮೂಡಿಬಂದಿವೆ. ತನ್ನ ಗ್ರಂಥವನ್ನು ಬರ್ಬತೆಯ ವಿಜಯ ಹಾಗೂ ಮತದ ವಿಜಯೋತ್ಸವ (ಐ ಹ್ಯಾವ್ ಡಿಸ್ಕೈಬ್ಡ್ ದಿ ಟ್ರಯಂಫ್ ಆಫ್ ಬರ್ಬಾರಿಸಂ ಅಂಡ್ ರಿಲಿಜನ್) ಎಂದಿದ್ದಾನೆ.

ರೋಂನ ಪೂರ್ವ ಸಾಮ್ರಾಜ್ಯ - (ಬೆಜಾಯನ್‌ಟೈನ್ - ಭಾಗ) ದಲ್ಲಿ ರಾಜ ದ್ರೋಹ, ಕ್ರೌರ್ಯ, ಮತಾಂಧತೆ, ನೈತಿಕ ಪತನಗಳು ಬಹಳ ಹಾವಳಿ ಮಾಡಿ ನಾಶದ ಕಾರಣಗಳೆಂದು ವಿಷದಪಡಿಸಿದ್ದಾನೆ. ತನ್ನ ಬರವಣಿಗೆ ಬಗ್ಗೆ ಗಿಬ್ಬನ್ ಹೀಗೆ ಹೇಳಿದ್ದಾನೆ. "ಎಲ್ಲಕ್ಕೂ ನಾನು ಮೂಲಾಧಾರಗಳನ್ನೇ ಅವಲೋಕಿಸಿದ್ದೇನೆ. ನನ್ನ ಕುತೂಹಲ ಮತ್ತು ಕರ್ತವ್ಯ ದೃಷ್ಟಿಯಿಂದ ಮೂಲಗಳನ್ನೇ ಅಧ್ಯಯನ ಮಾಡಿದ್ದೇನೆ". ಇವನು ಲ್ಯಾಟಿನ್ ಭಾಷೆಯನ್ನು ಬಲ್ಲವನಾಗಿದ್ದರೂ ಗ್ರೀಕ್ ಭಾಷೆಯನ್ನು ಕಲಿತಿರಲಿಲ್ಲ. ಇವನು ಕ್ರಿಶ್ಚಿಯನ್ನರ ಮುಖ್ಯ ಪಂಗಡಗಳಾದ ಕ್ಯಾಥೋಲಿಕ್ ಮತ್ತು ಪ್ರಾಟೆಸ್ಟೆಂಟ್ ಪದ್ಧತಿಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದವನಾಗಿದ್ದರಿಂದ ಮತದ ಬಗ್ಗೆ ಅವನ ಅಭಿಪ್ರಾಯಗಳು ಖಚಿತವಾಗಿಯೂ ಉಗ್ರವಾಗಿಯೂ ಇದ್ದವು. ಇವನು ಇತಿಹಾಸವನ್ನು ಶ್ರದ್ಧೆಯಿಂದ ಅಭ್ಯಾಸ ಮಾಡಿದ್ದನು. ಬಹಳ ಒಳ್ಳೆಯ ಜ್ಞಾಪಕ ಶಕ್ತಿಯುಳ್ಳವನಾಗಿದ್ದರಿಂದ ಅವನ ಅಧ್ಯಯನಗಳು ಅವನ ಬರವಣಿಗೆಯಲ್ಲಿ ಬಹಳ ಉಪಯುಕ್ತವಾದವು. ಇವನ ಅಭಿಪ್ರಾಯಗಳನೇಕವು ಅನೇಕರಿಗೆ - ಮುಖ್ಯವಾಗಿ ಚರ್ಚಿನವರಿಗೆ ಬಹಳಷ್ಟು ಬೇಸರ ತಂದವು. ಅವನ ತೀಕ್ಷಣ ಅಭಿಪ್ರಾಯದಲ್ಲಿ ಇತಿಹಾಸವೆಂದರೆ ಮಾನವನು ಮಾಡಿರುವ ಘೋರ ಅನ್ಯಾಯಗಳ, ದುರದೃಷ್ಟದ ವರದಿ ಎಂದಿದ್ದಾನೆ. ಅವನು ನಾಸ್ತಿಕನಲ್ಲದಿದ್ದರೂ ದೈವತ್ವದ ಪ್ರಕಟಣೆ, ಮುಂತಾದವುಗಳನ್ನು ಁಬುತ್ತಿರಲಿಲ್ಲ.

ಗಿಬ್ಬನ್ನನ ಗ್ರಂಥದಲ್ಲಿ ಅನೇಕ ದೋಷಗಳು ಇವೆ. ಇತ್ತೀಚಿನ ಸಂಶೋಧನೆಗಳಲ್ಲಿ ದೊರಕಿರುವ ನಾಣ್ಯಗಳು, ಶಾಸನಗಳು, ಪ್ರಾಕ್ತನ ವಸ್ತುಗಳ ಪರಿಚಯದಿಂದ ಅವನು ಬರೆದ ಕೆಲವು ವಿಷಯದಲ್ಲಿ ವ್ಯತ್ಯಾಸ ಕಂಡುಬಂದು ಹೆಚ್ಚಿನ ಸತ್ಯ ಬರವಣಿಗೆಗೆ ಅವಕಾಶವಿದೆ.

ಅವನಿಗೆ ಅವು ದೊರಕಿದ್ದುದೇ ಕೊರತೆಯಾಗಿದೆ. ಆದರೂ ಇವನು ಅನೇಕ ಘಟನೆಗಳನ್ನು ಕುರಿತು ಮಾಡಿರುವ ನಿರ್ಣಯಗಳು ಇತ್ತೀಚಿನ ಶೋಧನೆಗಳಿಂದ ಖಚಿತಗೊಂಡಿವೆ. ದೋಷಗಳಷ್ಟೇ ಇದ್ದರೂ ಇವನ ಗ್ರಂಥದ ಶೈಲಿ, ಆಕರ್ಷಕ ವಿಚಾರಧಾರೆ, ವಿಚಾರಗಳ ಸಂಕೀರ್ಣತೆ, ಸ್ವಾರಸ್ಯಗಳು ಇಂದಿಗೂ ಜನಮನ ಸೆಳೆಯುತ್ತವೆ. ಗಿಬ್ಬನ್ನಿನ ಗ್ರಂಥಗಳ ಕೊರತೆ ದೋಷಗಳನ್ನು ನಿವಾರಿಸಿ ಜೆ.ಬಿ. ಬ್ಯೂರಿಯು ತಕ್ಕ ಟಿಪ್ಪಣಿಗಳೊಡನೆ ಕ್ರಿ.ಶ. 1896-1900 ರ ಕಾಲದಲ್ಲಿ ಏಳು ಸಂಪುಟಗಳಲ್ಲಿ ಅದೇ ಮೇರು ಕೃತಿಯನ್ನು ಪ್ರಕಟಿಸಿದ್ದಾನೆ. ಇತಿಹಾಸವನ್ನು ಚೆನ್ನಾಗಿ ತಿಳಿಯಬೇಕಾದವರು ಗಿಬ್ಬನ್ನಿನ ಗ್ರಂಥ ಓದಲೇಬೇಕೆಂಬ ಉಕ್ತಿಯಿದೆ.

### *20.2.1 ಗಿಬ್ಬನ್ ವ್ಯಕ್ತಿತ್ವ*

ಗಿಬ್ಬನ್ ರೋಮ್ ಪತನವನ್ನು ಪ್ರಧಾನವಾಗಿ ವರ್ಣನಾತ್ಮಕವೂ ಮತ್ತು ವಿಚ್ಛಿನ್ನ ದೃಶ್ಯ ಪರಂಪರೆಯ ಚಿತ್ರಣವನ್ನು ಮಾಡಿರುವವನು. ಜೀವನದ ಪ್ರತಿಮುಖದ ವಿವರಗಳನ್ನು ನೀಡುವ ವಿಶ್ವಕೋಶವನ್ನು ತಯಾರಿಸುವುದು ಅವನ ಉದ್ದೇಶವಾಗಿರಲಿಲ್ಲ. ಆದರೂ ಅವನು ಆಯ್ಕೆ ಮಾಡಿಕೊಂಡಿದ್ದ ವಿಷಯಗಳಲ್ಲಿ ಅವನ ಮಹತ್ವ ಪ್ರತಿಬಿಂಬಿತವಾಗಿದೆ. ಆಯ್ಕೆ ಮಾಡಿಕೊಂಡಿದ್ದ ವಿಷಯಗಳಲ್ಲಿ ಅವನ ಮಹತ್ವ ಪ್ರತಿಬಿಂಬಿತವಾಗಿದೆ. ಇವನು ದಾರ್ಶನಿಕ ಇತಿಹಾಸ ಚಿಂತನೆಗೆ ಬೌದ್ಧಿಕ ಆಹಾರ ನೀಡಿ ಒಳ್ಳೆಯ ಕಾರ್ಯಾರಂಭ ಮಾಡಿದ್ದಾನೆನ್ನಬಹುದು. ಪುರಾತನ ವಿಷಯಗಳು ಮತ್ತು ವಸ್ತುಗಳ ಪರಿಶೋಧನೆಯ ಬಗ್ಗೆ ಅಪಾರ ಒಲವನ್ನು ಬೆಳೆಸಿಕೊಂಡಿದ್ದ ಗಿಬ್ಬನ್ನಿನ ಅಭಿಪ್ರಾಯಗಳು ವಿದ್ವಾಂಸರನ್ನು ತೃಪ್ತಿಪಡಿಸಿತು ಮತ್ತು ಇವನ ನಿರೂಪಣೆಯ ಶೈಲಿಯು ಸಾಮಾನ್ಯವಾಗಿ ವಿದ್ಯಾವಂತರನ್ನು ಸಂತಸಪಡಿಸಿತೆನ್ನಬಹುದು.

## 20.3 ಘಟಕದ ಸಾರಾಂಶ

ಈ ಘಟಕದ ಅಧ್ಯಯನದ ನಂತರ ನಾವು ಕೆಳಗಿನ ಪ್ರಮುಖ ಅಂಶಗಳನ್ನು ತಿಳಿದುಕೊಂಡೆವು.

* 18 ಮತ್ತು 19 ನೇ ಶತಮಾನದ ವಿಮರ್ಶಾತ್ಮಕ ಇತಿಹಾಸಕಾರ ಗಿಬ್ಬನ್ ಎಂಬುದು
* ಗಿಬ್ಬನ್ ಹೇಗೆ ಒಬ್ಬ ವೈಚಾರಿಕ ಇತಿಹಾಸಕಾರನೆಂಬುದು
* ಪ್ರಪಂಚದ ಬಹುದೊಡ್ಡ ಧರ್ಮವಾದ ಕ್ರೈಸ್ತ ಧರ್ಮದ ಬಗ್ಗೆ ಇವನ ವಿವರವೇನು, ರೋಮ್ ಸಾಮ್ರಾಜ್ಯ ಅವನತಿ ಮತ್ತು ಪತನದಲ್ಲಿ ಕಾಣುವ ಪ್ರಮುಖ ಅಂಶಗಳೇನು ಮುಂತಾದವು.

## 20.4 ಸ್ವಯಂ ಪರಿಶೀಲನಾ ಪ್ರಶ್ನೆಗಳು

1. ಇತಿಹಾಸ ಸಂಶೋಧನೆಗೆ ಗಿಬ್ಬನ್‌ನ ಕೊಡುಗೆಯನ್ನು ಚರ್ಚಿಸಿ.
2. ಗಿಬ್ಬನ್ನನ ಕೃತಿಗಳ ಮೇಲೆ ಅವನ ವ್ಯಕ್ತಿತ್ವವನ್ನು ಅಂದಾಜು ಮಾಡಿ.

## 20.5 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. Rajayyan .K. : History; Theory and Method
2. Sheik Ali .B. : History; Its Theory and Method
3. Renier .G.I. : History; Its purpose and Method


**ಡಾ. ಎ. ಸೋಮಶೇಖರ್**

# ಘಟಕ - 21 ಲಿಯೋ ಪಾಲ್ಡ್ ವಾನ್ ರ್‍ಯಾಂಕೆ (1795-1850)

*ವಿಷಯಸೂಚಿ*

21.0 ಉದ್ದೇಶಗಳು

21.1 ಪೀಠಿಕೆ

21.2 ಲಿಯೋ ಪಾಲ್ಡ್ ವಾನ್ ರ್‍ಯಾಂಕೆ (1795-1880)

21.3 ಘಟಕದ ಸಾರಾಂಶ

21.4 ಸ್ವಯಂ ಪರಿಶೀಲನಾ ಪ್ರಶ್ನೆಗಳು

21.5 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 21.0 ಉದ್ದೇಶಗಳು

ಘಟಕ 21 ರಲ್ಲಿ ನಾವುಗಳು ಒಬ್ಬ ಶ್ರೇಷ್ಠ ವಿಮರ್ಶಕ ಇತಿಹಾಸ ವಿಧಾನದ ಜನಕನಾದ ಲಿಯೋ ಪಾಲ್ಡ್ ವಾನ್ ರ‍್ಯಾಂಕೆಯ ಬಗ್ಗೆ ಅಧ್ಯಯನ ನಡೆಸುತ್ತೇವೆ. ಇತಿಹಾಸದಲ್ಲಿ ಸ್ವತಂತ್ರವಾದ ಮತ್ತು ವೈಜ್ಞಾನಿಕತೆಯನ್ನು ಅಳವಡಿಸಿದವನು ರ‍್ಯಾಂಕೆ. ಉತ್ತಮ ಸಂಶೋಧಕನಾಗಿದ್ದು, ಆತ್ಮ ಚರಿತ್ರೆಯಿಂದ ಹಿಡಿದು ಪ್ರಪಂಚದ ಇತಿಹಾಸದವರೆಗೂ ಎಲ್ಲಾ ರೀತಿಯ ಗ್ರಂಥಗಳನ್ನೂ ರಚಿಸಿದನು. ಇವನು ಲಾರ್ಡ್ ಆಕ್ಟನನ್ನು ಆಧುನಿಕ ಇತಿಹಾಸದ ಕೊಲಂಬಸ್, ಇತಿಹಾಸ ಬರವಣಿಗೆಯ ರಾಜ ಎಂದಿದ್ದಾನೆ. ಇವನನ್ನು ಹಲವರು ಟೀಕೆ ಮಾಡಿದ್ದರೂ ಸಹ ಇವನ ಇತಿಹಾಸ ಬರವಣಿಗೆಯ ಸ್ವರೂಪವೇನು ಎಂಬುದು ಕುತೂಹಲ ಅಧ್ಯಯನ ಈ ಘಟಕದ ಉದ್ದೇಶ.

## 21.1 ಪೀಠಿಕೆ

ಜರ್ಮನಿಯ ಪ್ರಖ್ಯಾತ ಇತಿಹಾಸಕಾರ ರ‍್ಯಾಂಕೆ. ಇವನನ್ನು ಆಧುನಿಕ ಇತಿಹಾಸದ ಜನಕನೆಂದೂ ಕರೆದಿದ್ದಾರೆ. ಇತಿಹಾಸದಲ್ಲಿ ವೈಜ್ಞಾನಿಕ ವಿಚಾರಧಾರೆಗೆ ಮತ್ತು ಇತಿಹಾಸ ಸಂಶೋಧನಾ ವಿಧಾನಕ್ಕೆ ಬಹಳಷ್ಟು ರೀತಿಯಲ್ಲಿ ಪ್ರೋತ್ಸಾಹ ನೀಡಿದವನು ರ‍್ಯಾಂಕೆ. ಇತಿಹಾಸದಲ್ಲಿ ಬೌದ್ಧಿಕ ವಿಚಾರಶೀಲತೆ ಮತ್ತು ಮಾನವೀಯ ಮುಖಗಳನ್ನು ತೋರಿಸಿದ್ದಾನೆ. ಪತ್ರಾಗಾರಗಳಲ್ಲಿ ಸಿಕ್ಕಿದ ಮೂಲಾಧಾರಗಳನ್ನು ಅನುಸರಿಸಿ ತನ್ನ ಗ್ರಂಥಗಳನ್ನು ಬರೆದು ಒಬ್ಬ ವಿದ್ವಾಂಸ ಸಂಶೋಧಕನೆನಿಸಿದ್ದಾನೆ. ಇತಿಹಾಸವನ್ನು ಸ್ವತಂತ್ರವಾಗಿ ಹಾಗೂ ವೈಜ್ಞಾನಿಕ ವಿಧಾನಕ್ಕೆ ಒರೆಹಚ್ಚಿ ಅಧ್ಯಯನ ಮಾಡಲು ಸ್ಫೂರ್ತಿ ನೀಡಿದ್ದಾನೆ. ಇವನು ಇತಿಹಾಸ ವಿಧಾನದ ಬೆಳವಣಿಗೆಗೆ ನೀಡಿರುವ ಕೊಡುಗೆ ಅಪಾರ. ಇತಿಹಾಸದಲ್ಲಿ ವಸ್ತುನಿಷ್ಟತೆಗೆ ಅತಿ ಹೆಚ್ಚಿನ ಪ್ರಾಮುಖ್ಯತೆ ನೀಡಿರುತ್ತಾನೆ. ಇವನ ಬಗ್ಗೆ ಅಧ್ಯಯನ ಮಾಡುವುದು ಎಲ್ಲಾ ಇತಿಹಾಸ ವಿದ್ಯಾರ್ಥಿಗಳಿಗೂ ಅತ್ಯಾವಶ್ಯಕ.

## 21.2 ಲಿಯೋಪಾಲ್ಡ್ ವಾನ್ ರ‍್ಯಾಂಕೆ (1795-1880)

ಇತಿಹಾಸದ ಆಧುನಿಕ ವಸ್ತುನಿಷ್ಟ ಪಂಥದ (ಆಬ್ಜೆಕ್ಟಿವ್) ಜನಕನೆಂದು ಜರ್ಮನಿಯ ಈ ವಿದ್ವಾಂಸನನ್ನು ಕರೆಯಲಾಗುತ್ತಿದೆ. ತನ್ನ ಬೋಧನೆ ಮತ್ತು ಬರವಣಿಗೆಗಳ ಮೂಲಕ ಅನೇಕ ಪೀಳಿಗೆಯ ಇತಿಹಾಸಕಾರರ ಮೇಲೆ ಉತ್ತಮ ಪ್ರಭಾವ ಬೀರಿದ್ದಾನೆ. ಯೂರೋಪಿನ ಎಲ್ಲ ರಾಷ್ಟ್ರಗಳಿಗೆ ಸಂಬಂಧಪಟ್ಟಂತೆ 54 ಸಂಪುಟಗಳ ಇತಿಹಾಸ ರಚಿಸಿದ್ದಾನೆ. ಇವನ ಮೇರುಕೃತಿ 'ವೆಲ್ಟ್‌ಗೆಶಿಷ್ಟೆ' ಎಂಬುದು, ಒಂಬತ್ತು ಸಂಪುಟಗಳಲ್ಲಿ 1881-88 ರ ಕಾಲದಲ್ಲಿ ಪ್ರಕಟವಾಯಿತು. ಗೆಶಿಷ್ಟೆ ಎಂದರೆ ಇತಿಹಾಸಕ್ಕೆ ಒಂದು ಪರ್ಯಾಯ ಪದವೆಂದು ತಿಳಿಯಲಾಯಿತು. ಗೆಶಿಷ್ಟೆ ಎಂದರೆ ನಡೆದ ಸಂಗತಿಯ ವಾಸ್ತವಿಕ ವಿವರಣೆ ಎಂದೂ, ಇತಿಹಾಸವೆಂದರೆ ಈ ಸಂಗತಿಗಳಿಂದ ಉಂಟಾದ ಮಾನವನ ಅಭಿಪ್ರಾಯಗಳೆಂದೂ ಭಾವನೆ ಬೆಳೆಯಿತು. ಸಂಗತಿ ಮತ್ತು ಘಟನೆಗಳ ವೈಜ್ಞಾನಿಕ ವಿವರಣೆಯನ್ನು ಗೆಶಿಷ್ಟೆ ಬಲವಾಗಿ ಪ್ರತಿಪಾದಿಸಿತು. 19 ನೇ ಶತಮಾನದಲ್ಲಿ ದ್ವಿತೀಯಾರ್ಧದಲ್ಲಿ ಇತಿಹಾಸ ವಿಷಯದಲ್ಲಿ ಒಂದು ವೈಚಾರಿಕ ಪಂಥ (ಹಿಸ್ಟಾರಿಕಲ್ ರಿಲೆಟಿವಿಸಂ) ಪ್ರಾರಂಭವಾಯಿತು. ಇತಿಹಾಸದಲ್ಲಿ ಮೂರು ಮುಖ್ಯಾಂಶಗಳಿವೆಯೆಂದು ಅದು ವಿಶ್ಲೇಷಿಸಿತು. ಇದರಲ್ಲಿ ಇತಿಹಾಸಕಾರರು, ಇತಿಹಾಸ ಭಾಷಾಶಾಸ್ತ್ರಜ್ಞರು, ಇತಿಹಾಸ ತತ್ವಶಾಸ್ತ್ರಜ್ಞರೆಂಬ ಮೂರು ಒಳಪಂಗಡಗಳಿದ್ದವು. ಇತಿಹಾಸಕಾರರೆಂದು ಕರೆದುಕೊಂಡವರು ಇತಿಹಾಸ ಘಟನೆಗಳ ಸತ್ಯತೆ, ನಿರೂಪಣೆಗೂ, ದಾಖಲೆಗೂ ಹೊಂದಾಣಿಕೆ, ಇತಿಹಾಸ ಬೆಳವಣಿಗೆಯ ವ್ಯಾಪಕತೆಗಳಿಗೆ ಪ್ರಾಮುಖ್ಯತೆ ನೀಡಿದರು. ಈ ಪಂಥದವರಲ್ಲಿ ರ‍್ಯಾಂಕೆ ಬಹಳ ಪ್ರಖ್ಯಾತನು. ಈ ಪಂಥದವರು ವಿಶಿಷ್ಟ ವಿಷಯಗಳನ್ನು ಪರಿಶೀಲಿಸಿದರೇ ವಿನಾ ತತ್ವವಿಚಾರದಲ್ಲಿ ತೊಡಗಲಿಲ್ಲ. ಯಾವ ಜನಾಂಗ, ಯಾವ ರಾಷ್ಟ್ರ, ಯಾವ ಮತ ಗುಂಪುಗಳ ಹೆಸರಿನಲ್ಲಿ ಇತಿಹಾಸ ವಿಷಯ ಹುಡುಕುವುದು ಸರಿಯಲ್ಲ. ಪ್ರಾಪಂಚಿಕ ವಿಷಯದ ಮೌಲ್ಯಕ್ಕಿಂತ ಯಥಾರ್ಥವೇ ಮುಖ್ಯ ಎಂದು ಭಾವಿಸಿದರು. ಯಾರ ಭಾವನೆಗಳನ್ನು ನೋಯಿಸದ ಮಟ್ಟಿಗೆ ಅದು ವಸ್ತುನಿಷ್ಠವಾಗಿರಬೇಕು ಎಂದರು. ಈ ಪಂಥದ ಶ್ರೇಷ್ಠ ರ‍್ಯಾಂಕನು ತತ್ವಶಾಸ್ತ್ರವನ್ನು ಅದರಲ್ಲಿಯೂ ಹೆಗಲನ ಸಿದ್ಧಾಂತವನ್ನು ಪ್ರತಿಭಟಿಸಿದನು. ಇತಿಹಾಸ ಘಟನೆಗಳು ವಾಸ್ತವವಾಗಿ ಹೇಗೆ ಸಂಭವಿಸಿದವು ಎಂಬುದನ್ನು ತೋರುವುದೇ ಇತಿಹಾಸಕಾರನ ಕೆಲಸ. ಹೇಗೆ ಸಂಭವಿಸಬಹುದಾಗಿತ್ತು ಎಂಬುದನ್ನೆಲ್ಲ ಎಂದು ನಿರ್ಧಾರವಾಗಿ ಹೇಳಿದನು. ರ‍್ಯಾಂಕೆಯ ಮತ್ತೊಂದು ಗಮನಾರ್ಹವಾದ ವಾಕ್ಯ "ಇತಿಹಾಸದ ಪ್ರತಿಯೊಂದು ಯುಗವು ದೇವರಿಗೆ ಒಳ್ಳೆಯ ಕಾಲವಾಗಿಯೇ ಕಾಣುತ್ತದೆ" (ಈಚ್ ಪೀರಿಯಡ್ ಈಸ್ ಈಕ್ವಲಿ ಗುಡ್

ಟು ಗಾಡ್) ಇದರಿಂದ ಅವನು ಇತಿಹಾಸಕ್ಕೆ ಕಟ್ಟಿದ ಮೌಲ್ಯವನ್ನು ತಿಳಿಸುತ್ತದೆ. ರ್‍ಯಾಂಕೆ ಹ್ಯೂಮ್, ಹೆಗೆಲ್, ಮಾಮ್‌ಸೆನ್ ಮುಂತಾದವರಂತೆ ಇತಿಹಾಸ ತಿಳಿಯುವುದರಲ್ಲಿ ತರ್ಕವು ಒಂದು ಅಂಶವೆಂದು ತಿಳಿದಿದ್ದನು. ಈ ತರ್ಕ ಸಿದ್ಧಾಂತದಂತೆ ತರ್ಕವು ಖಚಿತವಾದ ಯೋಚನೆಗೆ ಮತ್ತು ನಿಯಮಕ್ಕೆ ಪ್ರಾಧಾನ್ಯ ಕೊಡುತ್ತದೆ. ಸಮಾಜ ವ್ಯವಸ್ಥೆಯ ಮೂಲ ವೃತ್ತಿಗಳ ಗುಂಪಿನ ಭಾವನೆಗಳಲ್ಲಿರುತ್ತದೆ. ಈ ಭಾವನೆಗಳು ಆಯಾ ಸಮಾಜದಲ್ಲಿ ಹೊಂದಿಕೊಂಡು ನಡೆದು ಬರುತ್ತಿವೆ ಎಂದು ತಿಳಿದಿದ್ದರು. ಈ ಇತಿಹಾಸ ತರ್ಕ ವಿದ್ವಾಂಸರುಗಳ ಅಭಿಪ್ರಾಯದಂತೆ ಇತಿಹಾಸದ ಘಟನೆಗಳು ಬೌದ್ಧಿಕವಾಗಿದ್ದು ಒಂದು ಕ್ರಮಬದ್ಧವಾದ ಸಮಗ್ರವಾದ ಯೋಜನೆಗೆ ಸಂಬಂಧಿಸಿರುತ್ತವೆ ಎಂದು ನಂಬಿದ್ದರು. ಇದರಿಂದ ಮಾನವೀಯ ಗುಣಗಳಿಗೆ ಪ್ರಾಶಸ್ತ್ಯ ಬಂದಿತು. ರ್‍ಯಾಂಕನ ಬರವಣಿಗೆಗಳು ಇವನ್ನು ಪ್ರತಿಬಿಂಬಿಸುತ್ತವೆ.

ರ್‍ಯಾಂಕೆ ಪ್ರಸಿದ್ಧ ಇತಿಹಾಸಕಾರನಾಗಲು ಬಾಲ್ಯದಿಂದಲೇ ತರಬೇತಿ ಪಡೆಯುತ್ತಿದ್ದನು. ದೇವಜ್ಞಶಾಸ್ತ್ರ (ಥಿಯಾಲಜಿ) ಗ್ರೀಕ್, ಲ್ಯಾಟಿನ್, ಹಿಬ್ರೂ ಭಾಷೆಗಳಲ್ಲಿ ಪಾಂಡಿತ್ಯ ಪಡೆದನು. ಮತ ಕ್ರಾಂತಿಕಾರ ಸುಪ್ರಸಿದ್ಧ ಮಾರ್ಟಿನ್ ಲೂಥರ್‌ನ ಚರಿತ್ರೆಯನ್ನು ಚೆನ್ನಾಗಿ ತಿಳಿದನು. ತನ್ನ ಸ್ವದೇಶವಾದ ಜರ್ಮನಿಯ ಇತಿಹಾಸವನ್ನು ಅಭ್ಯಾಸ ಮಾಡಿದನು. ನಿಬೂರ್ ರಚಿಸಿದ ರೋಮ್ ಚರಿತ್ರೆ, ಸರ್ ವಾಲ್ಟರ್ ಸ್ಕಾಟ್ ಬರೆದ ಇತಿಹಾಸ ಕಾದಂಬರಿಗಳನ್ನೂ, ಜರ್ಮನಿಯ ಕವಿ, ತತ್ವಶಾಸ್ತ್ರಜ್ಞ ಹರ್ಡರನ ಗ್ರಂಥಗಳನ್ನು ಓದಿ ಸ್ಫೂರ್ತಿ ಪಡೆದನು. ಇತಿಹಾಸವನ್ನು ಮಾನವನ ಪ್ರಗತಿಯ ಶಾಸ್ತ್ರವೆಂದೂ, ದೇವರ ಇಚ್ಛೆಗಳು ಇತಿಹಾಸದಲ್ಲಿ ಕಂಡುಬರುತ್ತವೆಂದೂ ತಿಳಿದನು. ಫ್ರೆಡರಿಕ್ ಸ್ಟಲಿಂಗ್‌ನ ತತ್ವಗಳಿಗೆ ಮಾರುಹೋಗಿ ಒಳ್ಳೆಯ ಮತ ಗುರುವೂ ಒಳ್ಳೆಯ ಉಪಾಧ್ಯಾಯನೂ ಆದನು. ಬರ್ಲಿನ್ ವಿಶ್ವವಿದ್ಯಾಲಯದಲ್ಲಿ 1825 ರಿಂದ 34 ರವರೆಗೆ ಉಪಾಧ್ಯಾಯನಾಗಿಯೂ 1834 ರಿಂದ 1871 ರವರೆಗೆ ಪ್ರಾಧ್ಯಾಪಕನಾಗಿಯೂ ಆಗಿ ಅನೇಕ ಇತಿಹಾಸಕಾರರನ್ನು ತಯಾರು ಮಾಡಿದನು. ಸರ್ಕಾರದ ಮನ್ನಣೆಗೆ ಪಾತ್ರನಾಗಿ ತನ್ನ ಇತಿಹಾಸ ಸಂಶೋಧನೆಯ ನಿಮಿತ್ತ ಪರದೇಶಗಳಿಗೆ ದೀರ್ಘಕಾಲ ಹೋಗಿ ಬರಲು ಸಹಾಯ ಪಡೆದನು. ಜರ್ಮನಿ, ಫ್ರಾನ್ಸ್, ಇಂಗ್ಲೆಂಡ್, ಇಟಲಿ ದೇಶಗಳ ಸರ್ಕಾರದವರು ಅವನಿಗಾಗಿ ತಮ್ಮ ಸರ್ಕಾರದ ರಿಕಾರ್ಡುಗಳನ್ನು ಓದಲು ಅವಕಾಶ ಮಾಡಿಕೊಟ್ಟನು. ಇಷ್ಟಾದರೂ ಅವನು ನಿರ್ಭಯವಾಗಿ, ನಿರ್ದಾಕ್ಷಿಣ್ಯವಾಗಿ, ನಿಷ್ಪಕ್ಷಪಾತವಾಗಿ ತನ್ನ ಬರವಣಿಗೆಗಳನ್ನು ವಸ್ತುನಿಷ್ಠವಾಗಿ, ಸತ್ಯವಾಗಿ ಬರೆದನು.

ಇವನ ಬರಹಗಳು 1824 ರಲ್ಲಿ "1484 ರಿಂದ 1514 ರವರೆಗಿನ ಲ್ಯಾಟಿನ್ ಮತ್ತು ಟ್ಯುಟ್ಯಾನಿಕ್ ಇತಿಹಾಸ" ದಿಂದ ಪ್ರಾರಂಭವಾಯಿತು. ಇಟಲಿಯ ವೆನಿಸಿನ ರಾಜ್ಯದಲ್ಲಿ ರಾಯಭಾರಿಯಾಗಿ ಸ್ವಲ್ಪ ಕಾಲದಲ್ಲಿ ಅಲ್ಲಿನ ಸರ್ಕಾರದ ಪತ್ರಾಗಾರವನ್ನು ಉಪಯೋಗಿಸಿಕೊಳ್ಳಲು ಅಪ್ಪಣೆ ಪಡೆದು "ಪ್ರಿನ್ಸಸ್ ಅಂಡ್ ಪೀಪಲ್ಸ್ ಆಫ್ ಸದರನ್ ಯುರೋಪ್' ಎಂಬ ಮಾಲಿಕೆಯನ್ನು ಪ್ರಾರಂಭಿಸಿದನು. ನಂತರ 'ಆಟೋಮನ್ ಅಂಡ್ ಸ್ಪಾನಿಷ್ ಮಾನಾರ್ಕಿ ಇನ್ ದಿ ಸಿಕ್ಸಾಟೀನ್ಥ್ ಅಂಡ್ ಸೆವೆನ್‌ಟೀನ್ಥ್ ಸಂಚುರೀಸ್' ಗ್ರಂಥ ಬರೆದನು. 1432-36 ರ ಕಾಲದಲ್ಲಿ ಒಂದು ಕ್ಲುಪ್ತ ಕಾಲದ ಪತ್ರಿಕೆ ಹೊರಡಿಸಿ ಅದರಲ್ಲಿ ಪ್ರಷ್ಯಾ ದೇಶದ ರಾಜನೀತಿಯ ಬಗ್ಗೆ ರಾಜತ್ವವನ್ನು ಬೆಂಬಲಿಸಿ ಉದಾರವಾಗಿ ಜನಪ್ರಭುತ್ವ ಪದ್ಧತಿಯನ್ನು ವಿರೋಧಿಸಿದನು. 1834-36 ರ ಕಾಲದಲ್ಲಿ 'ಹಿಸ್ಟ್ರಿ ಆಫ್ ಪೋಪ್ಸ್' ಎಂಬ ಎಲ್ಲರ ಮೆಚ್ಚುಗೆಯ ಶ್ರೇಷ್ಠ ಗ್ರಂಥವನ್ನು ಪ್ರಸಿದ್ಧ ಪಡಿಸಿದನು. ನಂತರ '1845-47 ರ ಕಾಲದ ಜರ್ಮನಿಯ ಸುಧಾರಣೆಗಳ ಇತಿಹಾಸ' ಗ್ರಂಥವನ್ನು ಸೊಗಸಾಗಿ ಬರೆದನು. ನಂತರದ ವರ್ಷಗಳಲ್ಲಿ 'ಬ್ರಾಂಡೆನ್‌ಬರ್ಗ್ ಮನೆತನದ ನೆನಪುಗಳು' 1849 ರಿಂದ 16, 17 ನೇ ಶತಮಾನಗಳಲ್ಲಿ 'ಪ್ರಷ್ಯಾದ ಇತಿಹಾಸ' ಎಂಬ 12 ಸಂಪುಟಗಳನ್ನೂ 16,17 ನೆಯ ಶತಮಾನದಲ್ಲಿ ಅಂತಃ ಕಲಹಗಳು ಮತ್ತು 'ಫ್ರಾನ್ಸಿನ ರಾಜರು' 1852 ರಲ್ಲಿ 'ಫ್ರಾನ್ಸಿನ ಇತಿಹಾಸ' 1857 ರಲ್ಲಿ ಮುಖ್ಯವಾಗಿ ಹದಿನೇಳನೆಯ ಶತಮಾನದ 'ಇಂಗ್ಲೆಂಡಿನ ಇತಿಹಾಸ' ಎಂಬ ಗ್ರಂಥಗಳನ್ನು ಪ್ರಸಿದ್ಧ ಪಡಿಸಿದನು. ಇವುಗಳಲ್ಲಿ ಅನೇಕ ಗ್ರಂಥಗಳು ಅನೇಕ ಸಂಪುಟಗಳನ್ನೊಳಗೊಂಡಿದ್ದವು. ಎಲ್ಲವೂ ಸ್ವಾರಸ್ಯವಾಗಿ ಬರೆಯಲ್ಪಟ್ಟಿರುವುದರಿಂದ ವಿಷಯಗಳು ಹಳತಾದರೂ, ಈಗಲೂ ಓದಲು ಯೋಗ್ಯವಾಗಿವೆ.

ಇವನು ತನ್ನ 82 ನೇ ವಯಸ್ಸಿನಲ್ಲಿ 'ಜಗತ್ತಿನ ಇತಿಹಾಸ' ಎಂಬ ಇತಿಹಾಸವನ್ನು ಮೊದಲಿನಿಂದ ಪ್ರಾರಂಭಿಸಿ 15 ನೇ ಶತಮಾನದವರೆಗಿನ ಸಂಗತಿಗಳನ್ನು ಒಂಬತ್ತು ಸಂಪುಟಗಳಲ್ಲಿ 1881-88 ರ ಕಾಲದಲ್ಲಿ ಪ್ರಕಟಿಸಿದನು. ಇವುಗಳಲ್ಲಿ ಗ್ರೀಕರ ಕಾಲದಿಂದ

ಲ್ಯಾಟಿನ್ ಜರ್ಮನಿಯ ಕಾಲದವರೆಗಿನ ಸಂಸ್ಕೃತಿಯ ಹುಟ್ಟು ಬೆಳವಣಿಗೆಯನ್ನು ಸ್ವಾರಸ್ಯವಾಗಿ ನಿರೂಪಿಸಿದ್ದಾನೆ. ಇವನ ಇತಿಹಾಸ ಅಭಿಪ್ರಾಯಗಳು ಜರ್ಮನಿಯ ಎಲ್ಲ ಇತಿಹಾಸಕಾರರು ಮತ್ತು ಇತರ ದೇಶಗಳ ಇತಿಹಾಸಕಾರರ ಮೇಲೆ ಅಚ್ಚಳಿಯದ ಪ್ರಭಾವ ಬೀರಿದೆ. ಇವನ ವೈಜ್ಞಾನಿಕ ಬರವಣಿಗೆಗಳಿಂದ ಇತಿಹಾಸ ಬರವಣಿಗೆಯು ಬಹಳ ಗೌರವದ ಸ್ಥಾನ ಪಡೆಯಿತು.

ರ್‍ಯಾಂಕೆಯ ಮೂಲಾಧಾರಗಳ ಉಪಯೋಗವು ಅತ್ಯಲ್ಪವೆಂದು ಕಾಣುತ್ತದೆ. ಇವನ ಕೃತಿಗಳು ಅಂತರ-ರಾಜ್ಯ ಸಂಬಂಧಗಳಿಗೆ ಸಂಬಂಧಪಟ್ಟವು. ಇವನ ಕೃತಿಗಳಲ್ಲಿ ವಿದೇಶಾಂಗ ನೀತಿ, ರಾಯಭಾರತ್ವ ಅಂತರಾಷ್ಟ್ರೀಯ ಸಂಬಂಧಗಳು ಮತ್ತು ರಾಜಕೀಯ ಸುವ್ಯವಸ್ಥೆಯ ಬಗ್ಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿವೆ. ಇವನ ಯುದ್ಧಗಳ ವಿವರಣೆ ರಾಜಕೀಯ ಶಕ್ತಿ ಮುಂತಾದ ರಾಷ್ಟ್ರೀಯ ಇತಿಹಾಸ ಬೆಳವಣಿಗೆಗೆ ಪ್ರಾಮುಖ್ಯತೆ ನೀಡಿದ್ದರೂ ಪ್ರತಿವ್ಯಕ್ತಿ ಮತ್ತು ಸಂಸ್ಥೆಗಳನ್ನು ಇದರೊಂದಿಗೆ ಸಹಕಾರ ನೀಡಬೇಕೆಂಬುದು ಸರಿಯಾದ ಅಭಿಪ್ರಾಯದಲ್ಲಿ ರ್‍ಯಾಂಕೆಯ ಸಾಮಾಜಿಕ ಮತ್ತು ಆರ್ಥಿಕ ವಿಷಯಗಳಿಗೆ ಹೆಚ್ಚಿನ ಗಮನ ಕೊಡಲಿಲ್ಲವೆನಿಸುತ್ತದೆ. ಆದ್ದರಿಂದ ಅವನು ವಿಷಯ ನಿರೂಪಣೆಯಲ್ಲಿ ಸರಿಯಾದ ವಸ್ತುನಿಷ್ಟತೆಯ ಕಾರ್ಯ ಮಾಡಲಿಲ್ಲವೆಂದು ಆಕ್ಟನ್ ತಿಳಿಸುತ್ತಾರೆ. ಆದರೂ ವೈಜ್ಞಾನಿಕ ವಿಧಾನದ ಇತಿಹಾಸಕ್ಕೆ ಇವನ ಕೊಡುಗೆ ಅಪಾರವೆಂದು ಹೇಳಬಹುದು. ಇವನ ಬರವಣಿಗೆಯ ಶೈಲಿ, ತೀರ್ಮಾನ ಮುಂತಾದವುಗಳು ಆಕರ್ಷಣಾತ್ಮಕವಾಗಿರುವುದು ಕಂಡು ಬರುತ್ತದೆ.

## 21.3 ಘಟಕದ ಸಾರಾಂಶ

ಈ ಘಟಕವನ್ನು ಅಧ್ಯಯನ ಮಾಡಿದ ನಂತರ ನಾವು ಈ ಹಲವು ಅಂಶಗಳನ್ನು ತಿಳಿದುಕೊಂಡೆವು.

* ರ್‍ಯಾಂಕೆಯ ಜೀವನ ಮತ್ತು ಆಸಕ್ತಿಗಳು
* ರ್‍ಯಾಂಕೆಯ ವೈಚಾರಿಕ ಕೃತಿಗಳು
* ರ್‍ಯಾಂಕೆಯ ವಿಮರ್ಶಾತ್ಮಕ ವಿಶ್ಲೇಷಣೆಯ ಬರವಣಿಗೆ
* ರ್‍ಯಾಂಕೆಯು ಪ್ರತಿಪಾದಿಸಿದ ವೈಜ್ಞಾನಿಕ ಸಂಶೋಧನೆ
* ರ್‍ಯಾಂಕೆಯು ತೋರಿಸಿದ ಇತಿಹಾಸದಲ್ಲಿ ವಸ್ತುನಿಷ್ಟತೆ ಕಾಪಾಡುವುದು ಮುಂತಾದ ವಿಷಯಗಳನ್ನು ತಿಳಿದುಕೊಂಡೆವು.

## 21.4 ಸ್ವಯಂ ಪರಿಶೀಲನಾ ಪ್ರಶ್ನೆಗಳು

1. ಇತಿಹಾಸ ಬರವಣಿಗೆಯಲ್ಲಿ ರ್‍ಯಾಂಕೆಯ ಪಾತ್ರವನ್ನು ನಿರ್ಧರಿಸಿ.
2. ಇತಿಹಾಸ ಬರವಣಿಗೆಯಲ್ಲಿ ರ್‍ಯಾಂಕೆಯ ವೈಜ್ಞಾನಿಕ ದೃಷ್ಟಿ ಕೋನವನ್ನು ಚರ್ಚಿಸಿ.
3. ರ್‍ಯಾಂಕೆ ವಿಶ್ಲೇಷಿಸಿದ "ವಸ್ತುನಿಷ್ಟತೆ" "ಪ್ರಜಾಪ್ರಭುತ್ವ" ಮತ್ತು 'ವೈಜ್ಞಾನಿಕ ದೃಷ್ಟಿಕೋನ" ಇವುಗಳನ್ನು ವಿವರಿಸಿ.

## 21.5 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. Gooch .G.P. : History and Historian in the 19th century
2. Renier .G.I. : History; Its purpose and Method
3. Sheik Ali .B. : History; Its Theory and Method


*ಡಾ. ಎ. ಸೋಮಶೇಖರ್*

# ಘಟಕ - 22 ಬೆನೆಡಿಟೋ ಕ್ರೋಷೆ (1866-1952)

***ವಿಷಯಸೂಚಿ***


22.0 ಉದ್ದೇಶಗಳು

22.1 ಪೀಠಿಕೆ

22.2 ಬೆನೆಡಿಟ್ಟೋ ಕ್ರೋಷೆ (1866-1952)

22.2.1 ಕ್ರೋಷೆ ಚಿಂತನೆಗಳು

22.2.2 ಕ್ರೋಷೆಯ ಇತಿಹಾಸದ ತತ್ವಶಾಸ್ತ್ರ ಚಿಂತನೆ

22.3 ಘಟಕದ ಸಾರಾಂಶ

22.4 ಸ್ವಯಂ ಪರಿಶೀಲನಾ ಪ್ರಶ್ನೆಗಳು

22.5 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು

## 22.0 ಉದ್ದೇಶಗಳು

ಈ ಘಟಕದ ಅಧ್ಯಯನದಲ್ಲಿ ನಾವು

* ಬೆನೆಡಿಟ್ಟೋ ಕ್ರೋಚೆಯು ಇತಿಹಾಸ ಚಿಂತನೆಗೆ ಅಮೂಲ್ಯ ಕೊಡುಗೆ ನೀಡಿದ್ದನ್ನು ತಿಳಿಯುತ್ತೇವೆ.
* ಇತಿಹಾಸ ದರ್ಶನಕ್ಕೆ ಅಧೀನವಾದ ಶಾಸ್ತ್ರವಲ್ಲ, ಇತಿಹಾಸದ ಭಾವರೂಪಗಳು ವೈಜ್ಞಾನಿಕ ಕಲ್ಪನೆಗಳಿಗಿಂತ ವಿಭಿನ್ನವಾದವು, ದರ್ಶನವು ಇತಿಹಾಸಕ್ಕೆ ಆಧಾರವಾಗಿದೆ ಮತ್ತು ವೈಜ್ಞಾನಿಕ ಸಾಮಾನ್ಯೀಕರಣವನ್ನು ನಿರೂಪಿಸುವುದಕ್ಕೆ ಬೇಕಾದ ವಿವರಗಳನ್ನು ಒದಗಿಸುವುದರಿಂದ ಇತಿಹಾಸವು ವಿಜ್ಞಾನಕ್ಕೆ ಪೂರ್ವಗಾಯಿಯಾಗಿದೆ ಎಂಬುದನ್ನು ಒತ್ತಿ ಹೇಳಿದನು.
* ಎಲ್ಲಾ ಇತಿಹಾಸವು ಸಮಕಾಲೀನ ಚರಿತ್ರೆಯಾಗಿದೆ ಎಂಬ ಇವನ ಹೇಳಿಕೆಯು ಇವನ ಕೊಡುಗೆಯಾಗಿದೆ.
* ಇತಿಹಾಸ ಬರಹಗಾರರು ವಿವರಗಳನ್ನೂ ಸಂಗ್ರಹಿಸಿ, ನಂತರ ವಿಮರ್ಶಾ ಕ್ರಮವನ್ನು ಬಳಸಿ ವಿವರಿಸಬೇಕು ಮತ್ತು ಸಾಮಾನ್ಯೀಕರಣಗಳನ್ನು ನಿರೂಪಿಸಬೇಕು ಎಂಬುದನ್ನು ಸ್ಪಷ್ಟಪಡಿಸಿದನು.
* ಘಟನೆಗಳಿಗೆ ಅನೇಕ ಕಾರಣಗಳಿವೆ ಎಂಬ ತತ್ವಗಳನ್ನು ಎತ್ತಿ ಹಿಡಿದನು.
* ಇತಿಹಾಸದ ಪ್ರಾಧಾನ್ಯತೆಯನ್ನು ಅವನು ಪ್ರತಿಪಾದಿಸಿದ್ದಾನೆ.

## 22.1 ಪೀಠಿಕೆ

19 ನೇ ಶತಮಾನದ ಹಲವು ಇತಿಹಾಸಕಾರರಲ್ಲಿ ಇತಿಹಾಸವು ವಿಜ್ಞಾನ ಅಥವಾ ಕಲೆ ಎನ್ನುವ ಜಿಜ್ಞಾಸೆ ಇದ್ದಿತು. ಬೆನೆಡಿಟ್ಟೋ ಕ್ರೋಚೆಯು ಇತಿಹಾಸವು ಒಂದು ಕಲೆ ವಿಷಯವಾಗಿತ್ತು. ಏಕೆಂದರೆ ಕಲೆಯು ಸಂತೋಷವನ್ನು ಒದಗಿಸುವ ಮಾಧ್ಯಮ ಮತ್ತು ವ್ಯಕ್ತಿಯ ಅಂತರಾಳವನ್ನು ಹೊರಸೂಚಿಸುವ ಜ್ಞಾನವಾಗಿದ್ದು, ಮಾನವನ ವ್ಯಕ್ತಿತ್ವವನ್ನು ರೂಪಿಸುವ ವಿಷಯ ಇತಿಹಾಸ ಎನ್ನುತ್ತಾನೆ ಕ್ರೋಚೆ. ಇತಿಹಾಸದ ಪ್ರಮುಖ ಕರ್ತವ್ಯ ಘಟನೆಗಳನ್ನು ತಿಳಿಸುವುದಾಗಿದೆ. ವಿಜ್ಞಾನದಲ್ಲಿ ಸಾಮಾನ್ಯೀಕರಣವಿದೆ ಆದರೆ ಇತಿಹಾಸದಲ್ಲಿ ಘಟನೆಗಳನ್ನು ಒಂದುಗೂಡಿಸುವುದಾಗಿದೆ ಇತಿಹಾಸದ ಸತ್ಯವು ಕಲೆಯ ಶುದ್ಧ ಯೋಚನೆಗಳಿಂದ ವ್ಯತ್ಯಾಸ ಹೊಂದಿದೆ. ಇತಿಹಾಸವು ತತ್ವಶಾಸ್ತ್ರವನ್ನು ಜೋಡಿಸುವುದಾಗಿದೆ. ಇಂತಹ ಎಲ್ಲಾ ವಿಷಯಗಳನ್ನು ತಿಳಿಸಿದ ಕ್ರೋಚೆಯ ವಿಷಯದ ಬಗ್ಗೆ ತಿಳಿಯುವುದು ಈ ಘಟಕದ ಪ್ರಮುಖ ಕಾರ್ಯ.

## 22.2 ಬೆನಿಡಿಟ್ಟೋ ಕ್ರೋಚೆ (1866-1952)

ಕ್ರೋಚೆ 1866 ರಲ್ಲಿ ಇಟಲಿಯಲ್ಲಿ ಜನಿಸಿದನು. ಇವನು ಶಾಲಾ ಕಾಲೇಜುಗಳಲ್ಲಿ ಹೆಚ್ಚಿನ ವಿಧ್ಯಾಭ್ಯಾಸ ಮಾಡಲಿಲ್ಲ. 1886 ರಿಂದ ನೇಪಲ್ಸ್ ನಗರದಲ್ಲಿ ನೆಲಸಿ ತತ್ವಶಾಸ್ತ್ರ ಇತಿಹಾಸಗಳನ್ನು ವ್ಯಾಸಂಗ ಮಾಡಿದ್ದಲ್ಲದೆ ಸ್ಥಳೀಯ ಇತಿಹಾಸದ ಬಗ್ಗೆ ಸಂಶೋಧನೆ ಮಾಡಿದನು. 1893 ರಲ್ಲಿ 'ನೇಚರ್ ಆಫ್ ಹಿಸ್ಟ್ರಿ' ಎಂಬ ಗ್ರಂಥವನ್ನೂ 1895 ರಲ್ಲಿ 'ಮೆಥೆಡ್ ಆಫ್ ಲಿಡರೆರಿ ಕ್ರಿಟಿಸಿಸಂ' ಎಂಬ ಗ್ರಂಥಗಳನ್ನು ಬರೆದು ಪ್ರಕಟಿಸಿದನು. 1899 ರಲ್ಲಿ ಮಾರ್ಕ್ಸಿನ್ "ಎಕನಾಮಿಕ್ ಡಾಕ್ಟ್ರಿನ್" ಎಂಬ ಸಂಶೋಧನಾ ಗ್ರಂಥ ರಚಿಸಿದನು. ಇವನ ಅತ್ಯಂತ ಪ್ರಖ್ಯಾತ ಗ್ರಂಥ "ದಿ ಫಿಲಾಸಫಿ ಆಫ್ ಸಾಯ್‌ರಿಟ್". ಇದರಲ್ಲಿ ಮೊದಲ ಸಂಪುಟ 'ಎಸ್ಥೆಟಿಕ್ಸ್' (ಸೌಂದರ್ಯೋಪಾಸನೆ) ಎರಡನೆ ಸಂಪುಟ ತರ್ಕಶಾಸ್ತ್ರ (ಲಾಜಿಕ್) ಮೂರನೆಯ ಸಂಪುಟ "ಫಿಲಾಸಫಿ ಆಫ್ ಕಾಂಡಕ್ಟ್" (ನಡತೆಯ ದರ್ಶನ) ನಾಲ್ಕನೆಯ ಸಂಪುಟ 'ಹಿಸ್ಟ್ರಿ ಆಫ್ ಹಿಸ್ಟ್ರಿಯಾಗ್ರಫಿ (ಇತಿಹಾಸ ಬರವಣಿಗೆಯ ಇತಿಹಾಸ) 1903 ರಲ್ಲಿ 'ಲಾ ಕ್ರಿಟಿಕಾ' ಎಂಬ ಕಾಲ ನಿಯಮಿತ ಪತ್ರಿಕೆಯನ್ನು ಸ್ಥಾಪಿಸಿದನು. ಇದು 1944 ರವರೆಗೆ ನಡೆಯಿತು. 1945 ರಿಂದ 'ಕ್ವಾಡರ್‌ಲಿ ಡೆಲ್ಲಾ ಕ್ರಿಟಿಕಾ' ಎಂಬ ಕಾಲ ನಿಯಮಿತ ಪತ್ರಿಕೆಗೆ ತನ್ನ ಬರವಣಿಗೆಯನ್ನು ಕಳುಹಿಸುತ್ತಿದ್ದನು. 1910 ರಲ್ಲಿ ಇಟಲಿ ರಾಜ್ಯದ ಸೆನೆಟ್ ಸದಸ್ಯನಾಗಿದ್ದನು. 1920-21 ರ ಅವಧಿಯಲ್ಲಿ ಇಟಲಿಯ ವಿದ್ಯಾಮಂತ್ರಿಯಾಗಿದ್ದನು. ಇವನು ಇಟಲಿಯಲ್ಲಿ ಸ್ಥಾಪಿತವಾಗಿದ್ದ ಉಗ್ರಗಾಮಿ ಪಂಥವಾದ

ಫ್ಯಾಸಿಸ್ಟರ ಉಗ್ರ ವಿರೋಧಿಯಾಗಿದ್ದನು. ಇವನು ಎಷ್ಟು ಜನಾದರಣೀಯನಾಗಿದ್ದನೆಂದರೆ ಬಲಿಷ್ಠ ಡಿಕ್ಟೇಟರ್ ಮುಸೋಲಿನಿಯು ಇವನನ್ನು ಯಾವ ತೊಂದರೆಗೂ ಈಡುಮಾಡಲು ಸಾಧ್ಯವಾಗಲಿಲ್ಲ. ಹೀಗೆ ಕ್ರೋಷೆಯ ಅನುಭವಗಳು ತತ್ವಶಾಸ್ತ್ರ, ರಾಜಕೀಯಶಾಸ್ತ್ರ, ಆಡಳಿತ ಅನುಭವ ಗ್ರಂಥ ಪ್ರಕಟನೆ ಮುಂತಾದುವಾಗಿದ್ದವು.

### *22.2.1 ಕ್ರೋಷೆ ಚಿಂತನೆಗಳು*

ತತ್ವಶಾಸ್ತ್ರಜ್ಞನಾಧ ಕ್ರೋಷೆಯ ತತ್ವಗಳು ಹೆಗೆಲ್‌ನ ತತ್ವಗಳಿಗಿಂತ ಭಿನ್ನವಾಗಿದ್ದಿತು. ಹೆಗಲನು ಭೌತಾತೀತ (ಮೆಟಫಿಸಿಕ್ಸ್) ತತ್ವದಲ್ಲಿ ಹೆಚ್ಚು ಪರಿಶ್ರಮ ಪಡೆದಿದ್ದನು. ಕ್ರೋಷೆಗೆ ಕಲಾ (ಆರ್ಟ್) ಕ್ಷೇತ್ರದಲ್ಲಿ ಅಪರಿಮಿತ ಆಸಕ್ತಿಯಿದ್ದಿತು. ಅವನಿಗೆ ಅನುಭವಗಳಿಗಿಂತ ಹೆಚ್ಚಾದ ಯಾವ ತತ್ವವೂ ಇರಲಿಲ್ಲ. ಅವನ ಅಭಿಪ್ರಾಯದಲ್ಲಿ ಕಲೆ, ತರ್ಕ, ತತ್ವ, ಇತಿಹಾಸಗಳೆಲ್ಲವೂ ಒಂದೇ ಜ್ಞಾನದ ನಾನಾ ಮುಖಗಳಾಗಿದ್ದವು. ಅದೇ ರೀತಿ ತನ್ನ ಪ್ರಖ್ಯಾತ ಸಂಪುಟಗಳನ್ನು ಬರೆದನು. ಅವನಿಗೆ ಇತಿಹಾಸ ಶಾಸ್ತ್ರವೇ ಬಹಳ ಶ್ರೇಷ್ಠವೆಂದು ನಂಬುಗೆಯಿದ್ದಿತು. ಏಕೆಂದರೆ ಅದು ಮಾನವನ ಅನುಭವಗಳನ್ನೆಲ್ಲಾ ಒಂದುಗೂಡಿಸುವುದಾಗಿದೆ ಎಂದು ತಿಳಿದಿದ್ದನು. ಕ್ರೋಚಾನು ಪರಮ ಸತ್ಯ-ಅಂದರೆ ತಾನೇ ಸೃಷ್ಟಿಸಿದ ಮತ್ತು ತಾನೇ ವ್ಯಕ್ತವಾದ (ಸೆಲ್ಫ್ ಕ್ರಿಯೇಟೆಡ್, ಸಲ್ಫ್-ಎವಿಡೆಂಟ್)ಪರಮ ಸತ್ಯ (ಅಬ್ಸಲ್ಯೂಟ್) ಎಂದು ಒಪ್ಪಿದರು.

19 ನೇ ಶತಮಾನದಲ್ಲಿ ಎಲ್ಲ ದೇಶಗಳಲ್ಲೂ ಅತ್ಯಂತ ಪ್ರಸಿದ್ಧರಾದ ಇತಿಹಾಸಕಾರರಿದ್ದರು. ಎಲ್ಲರೂ ಇತಿಹಾಸವು ಒಂದು ಕಲೆಯೇ ಅಥವಾ ವಿಜ್ಞಾನವೇ ಎಂದು ಚರ್ಚಿಸುತ್ತಿದ್ದರು. ಕ್ರೋಷೆ ಮಾತ್ರ ಇತಿಹಾಸವು ಕಲೆಯೇ ಎಂದು ದೃಢವಾಗಿ ನಂಬಿ ತನ್ನ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ತಿಳಿಸಿದನು. ಕಲೆಯು ಸಂತೋಷವನ್ನು ಒದಗಿಸುವ ಮಾಧ್ಯಮವೂ, ಪ್ರತಿ ವ್ಯಕ್ತಿಯ ಆಂತರ್ಯವನ್ನು ಹೊರಗೆಡಹುವ ಜ್ಞಾನವೂ ಆಗಿರುವುದು. ಪ್ರತಿ ಕಲಾಕಾರನಿಗೂ ಇದು ಇದ್ದು ಅವನ ವ್ಯಕ್ತಿತ್ವವನ್ನು ತೋರಿಸುತ್ತದೆ. ಆದ್ದರಿಂದ ಕಲೆಯನ್ನು ಸಂತೋಷ ಕೊಡುವ ವಸ್ತುವಿಗಿಂತ ಹೆಚ್ಚಾಗಿ ಅದರ ಸೃಷ್ಟಿಕರ್ತನ ವ್ಯಕ್ತಿತ್ವವನ್ನು ತೋರಿಸುವ ಜ್ಞಾನ ಎಂದು ಪರಿಗಣಿಸಬೇಕೆಂದು ಹೇಳಿದನು. ಇತಿಹಾಸವು ವಿಜ್ಞಾನವಾಗಲಾರದು ಏಕೆಂದರೆ ಇದರಲ್ಲಿ ವ್ಯಕ್ತಿಗತ ವಿಷಯಗಳೇ ಇರುತ್ತವೆ. ಕ್ರೋಚೆಯ ಅಭಿಪ್ರಾಯದಂತೆ ಇತಿಹಾಸಕ್ಕಿರುವ ಏಕೈಕ ಕರ್ತವ್ಯವೆಂದರೆ ಸಂಗತಿಗಳನ್ನು ಹೇಳುವುದಷ್ಟೆ. ವಿಜ್ಞಾನವು ವಿಷಯಗಳ ಸಾಮಾನ್ಯೀಕರಣಕ್ಕೆ ಪ್ರಯತ್ನ ಪಡುತ್ತದೆ. ಇತಿಹಾಸವು ಒಂದುಗೂಡಿಸಲು ಪ್ರಯತ್ನಿಸಿದೆ. ಹೀಗೆ ಇವೆರಡುಗಳ ಸಾಮ್ಯವೇ ಇಲ್ಲವೆಂದು ಹೇಳಿದನು. ಕಾಲಿಂಗ್‌ವುಡ್ ಇದನ್ನು ಒಪ್ಪಿದರೂ ಕಲಾಕಾರನು ತಾನು ಕಂಡದ್ದಷ್ಟನ್ನು ಹೇಳುತ್ತಾನೆ. ಆದರೆ ಇತಿಹಾಸಕಾರನು ಎಲ್ಲರನ್ನು ಕಾಣುವುದಲ್ಲದೆ ಅವೆಲ್ಲವು ಸತ್ಯವಾಗಿಯೇ ಇಲ್ಲವೇ ಎಂಬುದನ್ನು ತಿಳಿಯಲು ಪ್ರಶ್ನಿಸುತ್ತಾನೆ. ಕಲೆಯು ಏನಾಗಬಹುದೆಂದು ತಿಳಿಸುವುದು. ಆದರೆ ಇತಿಹಾಸವು ಆದ ವಿಷಯಗಳನ್ನು ಮಾತ್ರ ತಿಳಿಸುತ್ತದೆ. ಹೀಗೆ ನಿಜವೂ, ಸಂಭವವೂ ಒಂದನ್ನೊಂದು ಹೊಂದಿಕೊಂಡಿದ್ದರೂ ನಿಜವು ಕಲೆಯ ಭಾಗವಾಗುತ್ತದೆ. ಇದನ್ನು ಆ ಕಾಲದವರು ಪ್ರತಿಭಟಿಸಿದರೂ ಈಗಿನ ಕಾಲದಲ್ಲಿ ಅವನ ಅಭಿಪ್ರಾಯಗಳು ಸರಿಯೆಂದು ತೋರುತ್ತವೆ. ಕ್ರೋಷೆಯ ಮತ್ತೊಂದು ಸಿದ್ಧಾಂತ ಕಲೆಯು ಅಂತಃಪ್ರೇರಣೆ (ಇನ್‌ಸ್ಟ್ಯೂಟಿವ್) ಇತಿಹಾಸವು ಯೋಚನೆಗೆ ಒಳಪಡುತ್ತದೆ ಎಂದು ಕ್ರೋಷೆಯ ಕ್ರಾಂತಿಕಾರಕ ಅಭಿಪ್ರಾಯದಲ್ಲಿ ಇತಿಹಾಸದಲ್ಲಿ 'ವಿಜ್ಞಾನದ ಯಾವ ಗುಣಾಂಶಗಳೂ ಇಲ್ಲವೆಂದು ಜರ್ಮನಿಯ ವಿದ್ವಾಂಸರೆಲ್ಲರೂ ಇತಿಹಾಸವೂ ಒಂದು ವಿಜ್ಞಾನವೆಂದೂ ಪ್ರತಿಪಾದಿಸಿ, ಒಬ್ಬ ವ್ಯಕ್ತಿಯ ವಿಜ್ಞಾನವು ನೈಸರ್ಗಿಕ ವಿಜ್ಞಾನವೆಂದು ಎರಡು ಪ್ರಭೇದಗಳಿವೆ ಎಂದು ಸಮಾಧಾನ ಹೇಳಿದರು. ಕ್ರೋಷೆಯು ಇದಕ್ಕೆ ಉತ್ತರವಾಗಿ ಚರಿತ್ರೆಯು ವ್ಯಕ್ತಿಯ ವಿಚಾರವನ್ನು ಹೇಳುವಾಗ ಅದು ಒಂದು ವ್ಯಕ್ತಿಯ ಕಲೆಯೇ ಆಗಿರುತ್ತದೆ ಎಂದನು. ಅದಲ್ಲದೆ ಇತಿಹಾಸದ ನಿಜತ್ವವು ಕಲೆಯ ಶುದ್ಧ ಯೋಚನೆಗಳಿಂದ ವ್ಯತ್ಯಾಸ ಹೊಂದಿದೆ ಎಂದು ತಿಳಿಸಿದನು.

ಕ್ರೋಷೆಯ ಮತ್ತೊಂದು ಮುಖ್ಯ ವಿಚಾರಧಾರೆ ಎಂದರೆ ಇತಿಹಾಸವನ್ನು ತತ್ವಶಾಸ್ತ್ರವನ್ನು ಜೋಡಿಸುವುದಾಗಿದೆ. ತತ್ವವು ಭಾವನೆಗಳ ಸ್ವರೂಪವನ್ನು ಮಾತ್ರ ಗಮನಿಸುತ್ತದೆ. ಹೀಗಾಗಿ ತತ್ವಶಾಸ್ತ್ರವು ಎಲ್ಲ ವಿಷಯಗಳನ್ನೊಳಗೊಂಡ ಇತಿಹಾಸದ ಒಂದು ಭಾಗವಾಗಿರುತ್ತದೆ. ಎಲ್ಲ ವಿಧವಾದ ವಿಜ್ಞಾನವೂ ಇತಿಹಾಸಕ್ಕೆ ಸಂಬಂಧ ಪಟ್ಟಿರುತ್ತದೆ. ಅದರಲ್ಲಿ ಬರುವ ಉದ್ದೇಶಿತ ಸಂಗತಿಗಳು ಭಾವನೆಗಳನ್ನೊಳಗೊಂಡಿರುತ್ತದೆ.

ಕ್ರೋಚೆಯು ಇತಿಹಾಸಕ್ಕೂ ಸ್ವಭಾವಿಕ ವಿಜ್ಞಾನಕ್ಕೂ ವ್ಯತ್ಯಾಸವನ್ನು ಕಾಣಿಸುತ್ತಾನೆ. ವಿಜ್ಞಾನದಲ್ಲಿ ಕೆಲವು ಕಣ್ಣಿಗೆ ಕಾಣುವ ವಸ್ತುಗಳು : ಉದಾ:- ಬೆಕ್ಕು, ನಾಯಿ, ಇತ್ಯಾದಿ. ಇನ್ನೂ ಕೆಲವು ಊಹೆಗಳಿಂದ ಕಲ್ಪಿತವಾದದ್ದು. ಉದಾ:- ಒಂದು ರೇಖೆಗಳಿಂದಾದ ತ್ರಿಜ್ಯ, ತ್ರಿಕೋಣ ಇತ್ಯಾದಿ. ಎರಡನೆಯದರಲ್ಲಿ ನಿಜವೂ ಅಲ್ಲ ಸುಳ್ಳೂ ಅಲ್ಲದ ವಿಷಯವಿದೆ. ಇದೇ ಭಾವನೆ ಇದನ್ನೇ ಕ್ರೋಚನು ಮಿಥ್ಯಭಾವ (ಸ್ಯೂಡೋ ಕಾನ್‌ಸೆಪ್ಟ್) ಎನ್ನುತ್ತಾನೆ. ಕಾಲಿಂಗ್‌ವುಡ್ ಇದನ್ನು ಭಾವನಾ ಕಲ್ಪನೆ (ಕನ್‌ಸಪ್ಚನಲ್ ಫಿಕ್‌ಷನ್) ಎನ್ನುತ್ತಾನೆ. ಒಂದು ಬೆಕ್ಕು, ಒಂದು ಸಂಗತಿ ಎಂಬುದು ವಿಜ್ಞಾನಕ್ಕೆ ಸಂಬಂಧಪಟ್ಟ ಜ್ಞಾನ. ಆದರೆ ಒಂದು ಬೆಕ್ಕು ಒಂದು ಪಕ್ಷಿಯನ್ನು ಕೊಂದಿತೆಂಬುದು ಇತಿಹಾಸವಾಗುತ್ತದೆ.

ಈ ಅಭಿಪ್ರಾಯಗಳನ್ನು ಅವಲೋಕಿಸಿದಾಗ ಇತಿಹಾಸಕ್ಕೆ ಸ್ವಯಂಚಾಲಕ ಶಕ್ತಿಯನ್ನು ಸ್ವಾತಂತ್ರ್ಯವನ್ನು ಒದಗಿಸಲು ಕ್ರೋಚನು ಹೇಳುತ್ತಿದ್ದಾನೆಂದು ತಿಳಿಯಬಹುದಾಗಿದೆ. ಹೀಗೆ ಇತಿಹಾಸವು ವಿಜ್ಞಾನಶಾಸ್ತ್ರದ ಸಾಮಾನ್ಯೀಕರಣಕ್ಕೆ ಮೊದಲೇ ತನ್ನ ಚಾಲನೆ ಆರಂಭಿಸಿರುತ್ತದೆ ಮತ್ತು ತತ್ವಶಾಸ್ತ್ರವು ಇತಿಹಾಸದ ಒಂದು ವಿಧಾನವಾಗಿರುತ್ತದೆ ಎಂಬ ತೀರ್ಮಾನಕ್ಕೆ ಬಂದನು.

ಕ್ರೋಚೆಯ ಮತ್ತೊಂದು ಪ್ರಮುಖ ಹೇಳಿಕೆ ಏನೆಂದರೆ "ಇತಿಹಾಸವೆಲ್ಲವೂ ಸಮಕಾಲೀನ ಚರಿತ್ರೆ ಎಂದು ಹಾಗೆಂದರೆ ಇತಿಹಾಸದ ವಿಚಾರವಾಗಿ ಇತಿಹಾಸಕಾರನು ಯಾವ ಕಾಲದ ವಿಷಯವಾಗಿ ಏನನ್ನು ಯೋಚಿಸುತ್ತಿದ್ದರೂ ಅದು ಸಮಕಾಲೀನ ಇತಿಹಾಸವಾಗುತ್ತದೆ. ಇತಿಹಾಸದಲ್ಲಿ ಯಾವುದೇ ಒಂದು ವಿಷಯ ಹೇಳಿದ್ದರೂ ಅದು ನಮಗೆ ಈವರೆಗೆ ಪತ್ತೆ ಇಲ್ಲದಿರಬಹುದು. (ಉದಾ. ಒಂದು ವರ್ಣಚಿತ್ರ ಇತ್ತೆಂದು ಹೇಳಿಕೆ) ಇದೊಂದು ಕಾಲಾನುಕ್ರಮಣಿಕೆ (ಕ್ರಾನಾಲಜಿ) ಆದರೆ ತಾಜ್‌ಮಹಲ್ ಕಟ್ಟಡ ಬಗ್ಗೆ ಹೇಳಿಕೆ, ಅದನ್ನು ಕಾಣಿಸುವುದು ಸತ್ಯವಾದ ಹೇಳಿಕೆ. ಇದು ನೋಡಬಹುದಾದ ವಸ್ತು, ಅದು ವಿಮರ್ಶೆಗೆ ಒಳಪಡುತ್ತದೆ ಅದರ ಸೌಂದರ್ಯ ಅನುಭವಿಸಬಹುದಾದದ್ದು. ಆದ್ದರಿಂದ ತಾಜ್ ಎಂಬುದು ಇತಿಹಾಸ. ಹೀಗೆ ಕಾಣಬಹುದಾದ ಮನಸ್ಸಿನಲ್ಲಿ ಅನುಭವಿಸದಾದ ವಿಷಯಗಳೇ ಇತಿಹಾಸವೆಂದು ಕ್ರೋಚೆಯು ಹೇಳುತ್ತಾನೆ. ಕಾಲಿಂಗ್‌ವುಡ್ ಹೇಳಿರುವಂತೆ ಸತ್ಯವಾದ ಇತಿಹಾಸದಲ್ಲಿ ಸಂಭವಿಸುವುದೆಂದು ನಿರೀಕ್ಷಿಸಬಹುದಾದ (ಪ್ರಾಬಬಲ್) ಆಗಬಲ್ಲ ಸಾಧ್ಯತೆ (ಪಾಸಿಬಲ್) ಗಳಿಗೆ ಅವಕಾಶವಿಲ್ಲ. ಸತ್ಯವನ್ನು ಸಾಧಿಸುವುದಕ್ಕೆ ಸಾಕ್ಷಿಗಳನ್ನೊದಗಿಸುವುದೇ ಅದಕ್ಕಿರುವ ಅವಕಾಶ.

ನಡೆಯಿತೆಂದು ಹೇಳಲಾದ ಘಟನೆಗಳ ಪ್ರಾಮಾಣ್ಯವನ್ನು (ಹಿಸ್ಟಾರಿಸಿಟಿ) ಕ್ರೋಚೆಯು ಇತಿಹಾಸದ ವಿಜ್ಞಾನವೆಂದು ಹೇಳುತ್ತಾನೆ. ಸಂಗತಿಗಳೆಲ್ಲವೂ ನಗ್ನಸತ್ಯ ಆದರೆ ಅವುಗಳನ್ನು ವಿಜ್ಞಾನದ ಬೆಳಕಿನಲ್ಲಿ ಮತ್ತು ಬುದ್ಧಿಯ ಯೋಚನೆಗಳಿಂದ ಸರಿಯಾಗಿ ಸಿದ್ಧಪಡಿಸಬೇಕು. ಕಾರಣಗಳ ಪರಿಶೋಧನೆಯಲ್ಲಿ ಬೆಳಕಿಗೆ ಬರುತ್ತವೆ. ಆದರೆ ಸಂಗತಿಗೆ ಸಂಗತಿಯನ್ನು ಶ್ರಮದಿಂದ ಸೇರಿಸುವ ಸರಪಳಿಯಲ್ಲಿ ಕಾರಣಗಳನ್ನು ಮರೆಯದಂತೆ ಜೋಡಿಸಬೇಕೆಂದು ಕ್ರೋಚನ ಅಭಿಪ್ರಾಯ. 1938 ರಲ್ಲಿ ಕ್ರೋಚೆಯು "ಸ್ವಾತಂತ್ರ್ಯದ ಕಥೆಯಾಗಿ ಇತಿಹಾಸ" ಎಂಬ ಬೃಹತ್ ತಾತ್ವಿಕ ಕೃತಿಯನ್ನು ರಚಿಸಿದನು. ಇತಿಹಾಸದ ಕೇಂದ್ರ ಬಿಂದು ನೈತಿಕ ಚೈತನ್ಯವಾದುದೆಂದು, ಅದರ ಪರಿಣಾಮವಾಗಿ ಇತಿಹಾಸ ಅಗತ್ಯಗನುಗುಣವಾದ ಸ್ವಾತಂತ್ರ್ಯದ ವಿವರಣೆಯಿರಬೇಕೆಂದು ವಾದಿಸಿದ್ದಾನೆ. ಕ್ರೋಚೆಯ ಇತಿಹಾಸದ ತತ್ವ ಚಿಂತನೆಗಳು ಇಪ್ಪತ್ತನೆಯ ಶತಮಾನದ ಅನೇಕ ಇತಿಹಾಸಕಾರರಿಗೆ ಉನ್ನತ ಆದರ್ಶಗಳಾಗಿ ಕಂಡು ಬಂದವು.

## 22.3 ಘಟಕದ ಸಾರಾಂಶ

ಈ ಘಟಕದ ಅಧ್ಯಯನದ ನಂತರ ನಾವು

* ಬೆನೆಡಿಟ್ಟೋ ಕ್ರೋಚೆಯ ಇತಿಹಾಸ ನಿರೂಪಣೆಯನ್ನು ತಿಳಿದುಕೊಂಡೆವು.
* ಇತಿಹಾಸವು ಕಲೆಯಾಗಿದ್ದು ಇದು ಎಲ್ಲರಿಗೂ ಸಂತೋಷವನ್ನು ನೀಡುವ ಕಾರ್ಯವನ್ನು ನಿರ್ವಹಿಸುತ್ತದೆ.
* ಇತಿಹಾಸವು ಸಮಕಾಲೀನ ಚರಿತ್ರೆಯಾಗಿದೆ ಎಂಬುದು ಇತಿಹಾಸದಲ್ಲಿ ಇವನಿಗೆ ಎಷ್ಟು ಆಸಕ್ತಿ ಮತ್ತು ಇತಿಹಾಸವನ್ನು ಬೆಳೆಸುವ ರೀತಿಯನ್ನು ತಿಳಿಸಿದನು.

* ಇತಿಹಾಸವು ತತ್ವಶಾಸ್ತ್ರವನ್ನು ಜೋಡಿಸುವುದಾಗಿದೆ.

* ಇತಿಹಾಸದಲ್ಲಿ ಘಟನೆಗಳ ಪ್ರಾಮಾಣೀಕರಣವನ್ನು ತಿಳಿಸುವ ಒಂದು ಪ್ರಮುಖ ವಿಷಯವಾಗಿದೆ. ಈ ಎಲ್ಲಾ ವಿಷಯಗಳನ್ನು ಈ ಘಟಕದಲ್ಲಿ ಅಧ್ಯಯನ ಮಾಡಲಾಯಿತು.

## 22.4 ಸ್ವಯಂ ಪರಿಶೀಲನಾ ಪ್ರಶ್ನೆಗಳು

1. ಬೆನೆಡಿಟ್ಟೋ ಕ್ರೋಷೆಯ ಇತಿಹಾಸ ಬರವಣಿಗೆಯ ರೂಪುರೇಖೆಯನ್ನು ವಿವರಿಸಿ.
2. ಬೆನೆಡಿಟ್ಟೋ ಕ್ರೋಷೆಯ ಇತಿಹಾಸ ತತ್ವಶಾಸ್ತ್ರವನ್ನು ವಿವರಿಸಿ.
3. ಕ್ರೋಷೆಯ "ಎಲ್ಲ ಇತಿಹಾಸವೂ ಸಮಕಾಲೀನ ಇತಿಹಾಸ" ಎನ್ನುವ ಹೇಳಿಕೆಯನ್ನು ಚರ್ಚಿಸಿ.

## 22.5 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. Sheik Ali .B. : History; Its Theory and Method
2. ವೆಂಕಟರತ್ನಂ ಮತ್ತು ಪದ್ಮ : ಇತಿಹಾಸ ಸಂಶೋಧನಾ ಮಾರ್ಗ
3. ಚೇತನಾ ಪಬ್ಲಿಕೇಷನ್ಸ್ : ಇತಿಹಾಸ ಸಂಶೋಧನಾ ಮಾರ್ಗ



*ಡಾ. ಎ. ಸೋಮಶೇಖರ್*

# ಘಟಕ - 23 ಕಾರ್ಲ್‌ಮಾರ್ಕ್ಸ್ (1818-1883)

*ವಿಷಯಸೂಚಿ*


23.0 ಉದ್ದೇಶಗಳು

23.1 ಪೀಠಿಕೆ

23.2 ಕಾರ್ಲ್ ಮಾರ್ಕ್ಸ್ (1818-1883)

23.2.1 ಮಾರ್ಕ್ಸ್ ಸಿದ್ಧಾಂತ

23.2.2 ಮಾರ್ಕ್ಸ್ ಸಿದ್ಧಾಂತದ ಪ್ರಭಾವ

23.2.3 ಮಾರ್ಕ್ಸ್ ವ್ಯಕ್ತಿತ್ವ

23.3 ಘಟಕದ ಸಾರಾಂಶ

23.4 ಸ್ವಯಂ ಪರಿಶೀಲನಾ ಪ್ರಶ್ನೆಗಳು

23.5 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು

## 23.0 ಉದ್ದೇಶಗಳು

ಈ ಘಟಕ 23 ರಲ್ಲಿ ಕಾರ್ಲ್‌ಮಾರ್ಕ್ಸ್ ಮತ್ತು ಅವರ ಇತಿಹಾಸದ ಮೇಲಿನ ಚಿಂತನೆ ಹಾಗೂ ಅವರ ಸಾರ್ವತ್ರಿಕ ಸಿದ್ಧಾಂತಗಳ ಬಗ್ಗೆ ಇಲ್ಲಿ ತಿಳಿಯಲಾಗುವುದು. ಕಾರ್ಲ್‌ಮಾರ್ಕ್ಸ್ ಒಬ್ಬ ತತ್ವಜ್ಞಾನಿಯೆಂದು ಹೇಗೆ ನಿರೂಪಿಸಿದ್ದಾರೆ ಎಂಬುದೂ ಸಹ ಇಲ್ಲಿ ಅಧ್ಯಯನ ನಡೆಯಲಿದೆ. ಇವರ ವರ್ಗರಹಿತ ಸಮಾಜ, ಭೂಮಿಯ ಭರವಸೆ ಮುಂತಾದವುಗಳನ್ನು ಕುರಿತು ಅರ್ಥಮಾಡಿಕೊಳ್ಳಲಾಗುತ್ತದೆ. ಇವರು ಕೇವಲ ನಾಮಕಾವಸ್ತೆ ತತ್ವಜ್ಞಾನಿಯಾಗದೇ ಮತ್ತು ಇವರ ತತ್ವಜ್ಞಾನ ಯಾವುದೇ ಕ್ರಾಂತಿಗೂ ಕಡಿಮೆಯಿರಲಿಲ್ಲ. ಇದನ್ನೊಂದು ಮಾರ್ಕ್ಸ್ ವಾದವೆಂದು ಕರೆಯಲಾಗಿದ್ದು, ಕ್ರಾಂತಿಕಾರಿ ಹೋರಾಟದ ನೀತಿಯಾಗಿದೆ. ಇದು ಕೇವಲ ವೈಚಾರಿಕ ವಿಶ್ಲೇಷಣೆ ಮಾತ್ರವಾಗಿರದೇ ಸಾಮಾಜಿಕ ಪ್ರಯೋಗದ ಅವಶ್ಯಕತೆಯಿದ್ದಂತಿದ್ದು ಇಂತಹ ಹೋರಾಟ ಮತ್ತು ಕಾರ್ಲ್‌ಮಾರ್ಕ್ಸ್‌ನ ಬಗ್ಗೆ ಈ ಘಟಕದಲ್ಲಿ ಅಧ್ಯಯನ ಮಾಡಲಾಗುವುದು.

## 23.1 ಪೀಠಿಕೆ

19 ಮತ್ತು 20 ನೇ ಶತಮಾನದ ಇತಿಹಾಸಕಾರರಲ್ಲಿ ಹಲವರು ತಮ್ಮದೇ ಆದ ತತ್ವಜ್ಞಾನ ಇತಿಹಾಸದ ವಿಶ್ಲೇಷಣೆ ಹಾಗೂ ಸಂಶೋಧನಾ ವಿಧಾನಗಳಿಂದ ಹೆಸರುವಾಸಿಯಾಗಿದ್ದು ಇತಿಹಾಸ ಬರವಣಿಗೆಗೆ ತಮ್ಮ ಕೊಡುಗೆಯನ್ನು ಸಲ್ಲಿಸಿದ್ದು ಅವರಲ್ಲಿ ಕಾರ್ಲ್‌ಮಾರ್ಕ್ಸ್‌ರವರು ಮಾರ್ಕ್ಸ್‌ವಾದವನ್ನು ಪ್ರತಿಪಾದಿಸಿದ್ದಾರೆ. ಇತಿಹಾಸದ ಆರ್ಥಿಕ ನಿರೂಪಣೆ, ಸಮಾಜಗಳ ಹಾದಿಯು ವಿಕಾಸವಾದದ ಹತ್ತಿರಕ್ಕೆ ಬರುವುದು. ಬಂಡವಾಳಶಾಹಿತ್ವ ತಥ್ಯ ಪರಾಮರ್ಶೆ ಮುಂತಾದ ತತ್ವಗಳನ್ನು ಪ್ರತಿಪಾದಿಸಿದ ಕಾರ್ಲ್‌ಮಾರ್ಕ್ಸ್ ಇತಿಹಾಸ ನಿರೂಪಣೆಯಲ್ಲಿ ಈ ಎಲ್ಲಾ ನಿಯಮಗಳನ್ನು ಸಹ ಅಳವಡಿಸಿಕೊಂಡು ಇತಿಹಾಸ ಬರವಣಿಗೆಯನ್ನು ವಿಸ್ತಾರಗೊಳಿಸಿದ್ದು, ಇವರ ಈ ಎಲ್ಲಾ ವಿಧವಾದ ನಿರೂಪಣೆಯನ್ನು ಈ ಘಟಕದಲ್ಲಿ ಒಡಮೂಡಿಸಲಾಗಿದೆಯೆನ್ನಬಹುದು.

## 23.2 ಕಾರ್ಲ್ ಮಾರ್ಕ್ಸ್ (1818-1883)

ಇತಿಹಾಸವನ್ನು ವಿಜ್ಞಾನಗಳ ರಾಣಿ ಎಂದು ಪರಿಗಣಿಸಲಾಗಿದೆ. ಸಂಗತಿ ಮತ್ತು ಕೇವಲ ಸಂಗ್ರಹಣೆ ಮತ್ತು ಕ್ರಮ ಸಂಧಾನದ ಒಂದು ನಮ್ರವಾದ ಸ್ಥಿತಿಯಿಂದ ನಮ್ಮ ಕಾಲದಲ್ಲಿ ಇತಿಹಾಸವು ಅತೀ ವಾದಗ್ರಸ್ಥವೂ, ಅತೀ ಮುಂಗೋಪಿಯೂ ಆದ ಅಧ್ಯಯನವಾಗಿದೆ. ಪ್ರತಿಯೊಂದು ರಾಜಕೀಯ ಪಕ್ಷ, ಪ್ರತಿಯೊಂದು ವೈಚಾರಿಕ ಚಳುವಳಿಯು ತನ್ನ ಐತಿಹಾಸಿಕ ತತ್ವವನ್ನು ಹೊಂದಿದೆ. ಅವುಗಳಲ್ಲಿ ಶಾಸ್ತ್ರಾನುಕರಣೆ ಮತ್ತು ನಾಸ್ತಿಕತೆಗಳಿವೆ. ಮಾರ್ಕ್ಸ್‌ರ ಇತಿಹಾಸ ಸಿದ್ಧಾಂತವು ಪ್ರಸಿದ್ಧ ಶಾಸ್ತ್ರನುಕರಣೆಯು ತಮ್ಮ ಪ್ರಸಿದ್ಧವಾದ ನಾಸ್ತಿಕತೆಯೂ ಆಗಿದೆ. ಕಮ್ಯುನಿಸ್ಟ್ ಯುರೋಪ್ ಮತ್ತು ಏಷ್ಯಾಗಳ ಇತಿಹಾಸ ಚಿಂತನೆಯ ಮೇಲೆ ಇದು ಪ್ರಭಾವ ಬೀರುತ್ತದೆ. ಕಮ್ಯುನಿಸ್ಟ್ ಪ್ರಭಾವಕ್ಕೆ ಹೊರತಾದ ಪಾಶ್ಚಾತ್ಯರುಗಳಲ್ಲಿಯೂ ಸಹ ಅದು ಅನೇಕ ಪ್ರಬಲವಾದ ಪ್ರತಿಪಾದಕರನ್ನು ಹೊಂದಿದೆ.

ವಕೀಲನ ಮಗನಾದ ಮಾರ್ಕ್ಸ್ 1818 ರಲ್ಲಿ ಜರ್ಮನ್‌ನ ರೈನ್‌ಲ್ಯಾಂಡಿನಲ್ಲಿ ಜನಿಸಿದರು. ಆದರೆ ಅವನ ಹೆಚ್ಚಿನ ಬರಹಗಾರ ಜೀವನವು ಇಂಗ್ಲೆಂಡಿನಲ್ಲಿ ಕಳೆಯಿತು. ಅಲ್ಲಿಯೇ ಆತ 1883 ರಲ್ಲಿ ನಿಧನ ಹೊಂದಿದನು. ಇತಿಹಾಸದ ದ್ರವ್ಯ ವಾಸ್ತವತಾವಾದದ ಪೂರ್ಣವಾದ ಮೊದಲ ಹೇಳಿಕೆಯು ಆತನ Fredric Angles ಜೊತೆಯಲ್ಲಿ 1816 ರಲ್ಲಿ ರಚಿಸಿದ German Ideology ಯಲ್ಲಿ ಕಾಣಬಹುದು. ಇದರ ಜೀವಂತ ಸಂಕ್ಷಿಪ್ತ ಮಾದರಿಯ Angles ಜೊತೆಯಲ್ಲಿ ರಚಿಸಿದ Communist Manifesto (1848) ದಲ್ಲಿ ಕಾಣಬಹುದು. ಆದರೆ ಸಂಕ್ಷಿಪ್ತ ಸಾರಾಂಶವು ಮಾರ್ಕ್ಸ್ ರಚಿಸಿದ "A Contribution to the Critic of Political Economy" ಯಲ್ಲಿ (1859) ದೊರೆಯುತ್ತದೆ. ಅವರ ಪ್ರಧಾನ ಗ್ರಂಥವಾದ 'Das Capital' (1867-94) ಬಂಡವಾಳಶಾಹಿ ಆರ್ಥಿಕ ನೀತಿಯನ್ನು ಕುರಿತದ್ದಾಗಿದೆ. ಮಾರ್ಕ್ಸ್ ಪ್ರಕಾರ ಇದು ಆಧುನಿಕ ಇತಿಹಾಸದ ನೈತಿಕ ಅಂಶವಾಗಿದೆ. ಮಾರ್ಕ್ಸ್ ಇತರ ಗ್ರಂಥಗಳು ವಿವಿಧ ಟಿಪ್ಪಣಿಗಳನ್ನು ಸೇರಿಸುತ್ತದೆ. ಇವುಗಳಿಗೆ ಮಾರ್ಕ್ಸ್‌ರನ್ನು ಮೆಚ್ಚಿದವರು ಮತ್ತು ಅವರ ಶಿಷ್ಯರು ಅನೇಕ ಪಾಂಡಿತ್ಯವಾದ ಹಾಗೂ ತಾರ್ಕಿಕ ವಿಶ್ಲೇಷಣೆಯನ್ನು ಸೇರಿಸಿದ್ದಾರೆ.

### *23.2.1 ಮಾರ್ಕ್ಸ್‌ನ ಸಿದ್ಧಾಂತ*

ಮಾರ್ಕ್ಸ್‌ರ ಇತಿಹಾಸ ಸಿದ್ಧಾಂತ ಎಂದರೇನು? ಎಂಬ ಪ್ರಶ್ನೆ ಸ್ವಾಭಾವಿಕವಾಗಿ ಏಳುತ್ತದೆ. ಈಗ ಅದು ಪ್ರಬಲವಾಗಿರುವ ಕಾರಣಗಳೇನು? ಈ ಎರಡು ಪ್ರಶ್ನೆಗೆ ಇತಿಹಾಸದ ತತ್ವಜ್ಞಾನಕ್ಕೆ ಸಾರ್ವತ್ರಿಕ ಬೇಡಿಕೆ ಇದ್ದುದು ಕಾರಣ ಎಂದು ಉತ್ತರಿಸಬಹುದು. Marxism ಎಂದು ಕರೆಯಲ್ಪಡುವ ಒಂದು ವಿಶಿಷ್ಟ ರೀತಿಯ ಇತಿಹಾಸದ ತತ್ವಜ್ಞಾನವು ಅದನ್ನು ಸಾಧಿಸಿತು. ಅದರ ಅರ್ಹತೆಗಳೇ ಇದರ ಸಾದೃಶ್ಯ ಆದರೆ ವಿರೋಧಿ ತತ್ವಜ್ಞಾನಗಳೊಡನೆ ಸ್ಪರ್ಧಿಸಲು ಸಹಾಯಕವಾಗಬಹುದು. ಆದರೆ ಅಂತಹ ತತ್ವಜ್ಞಾನಗಳಿಗೆ ಸಾರ್ವಜನಿಕರ ಸವಿಯು ಸ್ವಾಭಾವಿಕವಾಗಿ ಅದನ್ನು ತೃಪ್ತಿ ಪಡಿಸುವ ಈ ವಿಶಿಷ್ಟ ಹಾಗೂ ಸ್ಪರ್ಧಾತ್ಮಕ ಪ್ರಯತ್ನಗಳ ಮುಂದಾಗಿ ಸಂಭವಿಸುತ್ತದೆ.

ಎರಡನೇಯದಾಗಿ ಇತಿಹಾಸವು ದಿಗ್ಭ್ರಮೆಗೊಳಿಸುವ ವಿವರಣೆಗಳ ಭಾರ ಹೊತ್ತಿದ್ದುದು ಜನ ಸಾಮಾನ್ಯರನ್ನು ಉತ್ತೇಜಿಸಲಿಲ್ಲ. ಆದ್ದರಿಂದ ಅವರು ಇತಿಹಾಸದಿಂದ ಮುಖ ತಿರುಗಿಸಿ ಈ ವಿವರಣೆಗಳಿಂದ ಹೊರತಾದುದನ್ನು ಅರಸುತ್ತಿದ್ದರು. ನಮ್ಮ ದಿನಗಳಲ್ಲಿ ಈ ಪ್ರವೃತ್ತಿ ಹೆಚ್ಚಾಗುತ್ತಿದೆ. ಇತಿಹಾಸವು ಸುಧಾರಿಸುವ ಇತಿಹಾಸವೆಂದು ನಾವು ಭಾವಿಸುವುದಿಲ್ಲ. ನಮ್ಮ ನಾಗರೀಕತೆಯ ಮಹತ್ವವೆಂದು ನಾವು ತಿಳಿಯುವುದಿಲ್ಲ. ನಾವು ಬದಲಾವಣೆಗಳ ಪ್ರವಾದಿಗಳನ್ನು ಕೇಳಲು ಸಿದ್ದರಿದ್ದೇವೆ. ನಮ್ಮ ಮುಂದಿರುವ ಇತಿಹಾಸದ ಆಧುನಿಕ ಪ್ರವಾದಿಗಳಲ್ಲಿ ಸ್ಪೆಂಗ್ಲರ್ ಟಾಯ್ನಾಬಿ ಮಾರ್ಕ್ಸ್ ಇವರುಗಳನ್ನು ಗಮನಿಸಬಹುದು. ಈ ಮೂವರಲ್ಲಿ ಮಾರ್ಕ್ಸ್ ಹೆಚ್ಚು ಪರಿಣಾಮಕಾರಿಯಾಗಿದ್ದಾನೆ.

ಮಾರ್ಕ್ಸ್‌ನ ತತ್ವವಸ್ತುವು ಆರ್ಥಿಕ ನಿರೂಪಣೆಯನ್ನು ಒಳಗೊಂಡ ಇತಿಹಾಸ ತತ್ವವಾಗಿದೆ. ಈ ತತ್ವ ಸಮಾಜವಾದದ ಅನಿವಾರ್ಯತೆಯನ್ನು ತಿಳಿಸುತ್ತದೆ. ಇದು ವರ್ಗರಹಿತ ಸಾಮಾಜಿಕ ವ್ಯವಸ್ಥೆಯನ್ನು ಪ್ರತಿಪಾದಿಸುತ್ತದೆ. ಇಲ್ಲಿ ಆರ್ಥಿಕ ಉತ್ಪನ್ನಗಳು ಅವರವರ ಅಗತ್ಯಗಳಿಗೆ ತಕ್ಕಂತೆ ವಿತರಣೆಯಾಗುವ ಸೂತ್ರಗಳಿವೆ. ಆದ ಕಾರಣ ರಾಜ್ಯಕ್ಕೆ ಸೇರಿಸ ಸಮಸ್ತ ಆರ್ಥಿಕ ಸಂಪನ್ಮೂಲಗಳು ರಾಜ್ಯದ ಸ್ವಾಮ್ಯಕ್ಕೆ ಒಳಪಡಿಸಬೇಕೆಂದು ಈ ತತ್ವ ತಿಳಿಸುತ್ತದೆ. ಇಲ್ಲಿ ಕಾನೂನು, ಹಣ ಮತ್ತು ಆರ್ಥಿಕ ಮೌಲ್ಯಗಳು ತಮ್ಮ ಹಿಂದಿನ ಬೆಲೆಯನ್ನು ಕಳೆದುಕೊಂಡು ಅದು ಸಮಾತಾವಾದ ಇತಿಹಾಸ ಸಂಪತ್ತಿನ ಕಲ್ಪನೆಯ ಪೂರ್ಣ ಇತಿಹಾಸದಲ್ಲಿ ಆರ್ಥಿಕ ಅಂಶವೆಂದರೆ ನಿಜ ಜೀವನದ ಉತ್ಪಾದನೆ ಮತ್ತು ಪುನರುತ್ಪಾದನೆ ಮಾನವ ತಾನೇ ತನ್ನ ಇತಿಹಾಸವನ್ನು ನಿರ್ಮಿಸಿಕೊಳ್ಳುತ್ತಾನೆ. ಇದರಲ್ಲಿ ಆರ್ಥಿಕ ಅಂಶ ಬಹಳ ಪ್ರಬಲವಾದ ಸಾಮಾಜಿಕ ರಚನೆಗೆ ಪೂರಕವಾಗಿರುತ್ತದೆ. ಅಂತಿಮವಾಗಿ ರಾಜ್ಯವು ನಶಿಸಿ ಹೋಗುತ್ತದೆ.

ಮಾರ್ಕ್ಸ್ ಒಂದು ದೃಷ್ಟಿಯಲ್ಲಿ ಇತಿಹಾಸವನ್ನು ತನ್ನ ಸಾತ್ವಿಕ ಪ್ರತಿಪಾದನೆಗೆ ಪೂರಕವಾಗುವಂತೆ ಬೆಳೆಸಿಕೊಂಡಿದ್ದಾನೆ. ಅವನ ಪ್ರಕಾರ ಇತಿಹಾಸದುದ್ದಕ್ಕೂ ಕಾರ್ಮಿಕರು ಮತ್ತು ಬಂಡವಾಳ ಶಾಹಿಗಳ ನಡುವೆ ಹೋರಾಟ ನಡೆದಿದೆ. ಇದರಲ್ಲಿ ಅಂತಿಮ ಜಯ ಕಾರ್ಮಿಕರದ್ದು. ಇತಿಹಾಸದ ಗತಿಯನ್ನು ಮೂಲಭೂತವಾಗಿ ನಿಯಂತ್ರಿಸುವುದೇ ಆರ್ಥಿಕ ಅಂಶ ಎಂಬುದು ಮಾರ್ಕ್ಸ್‌ನ ವಾದ. ಆರ್ಥಿಕ ಬೆಳವಣಿಗೆಗಳ ಸಾಮಾಜಿಕ ವಿಕಾಸಕ್ಕೆ ಕಾರಣವಾಗುತ್ತದೆ.

### *23.2.2 ಮಾರ್ಕ್ಸ್‌ನ ಸಿದ್ಧಾಂತದ ಪ್ರಭಾವ*

ಚಿಂತನೆಗಳೂ, ಸಂಸ್ಥೆಗಳು, ಕಾನೂನು, ರಾಜಕೀಯ ಮತ್ತು ಧಾರ್ಮಿಕ ಕಲ್ಪನೆಗಳು ಹಾಗೂ ಕಲಾತ್ಮಕ ಮುದ್ರೆಗಳು ಕೂಡ ಸಾಮಾಜಿಕ ಶ್ರೇಷ್ಠ ರಚನೆಯ ಭಾಗಗಳಾಗಿದೆ. ಅವು ಅನಿವಾರ್ಯವಾಗಿ ಆರ್ಥಿಕ ವ್ಯವಸ್ಥೆಯ ಬದಲಾವಣೆಯೊಂದಿಗೆ ಬದಲಾಗುತ್ತಿರುತ್ತದೆ. ಇತಿಹಾಸದ ಬಗ್ಗೆ ನೀಡುವ ಆರ್ಥಿಕ ಮಟ್ಟದಲ್ಲಿ ಇರುವ ಬಹುಮತ ಪೂರ್ಣ ಅಂಶವೆಂದರೆ ಆರ್ಥಿಕ ಬದಲಾವಣೆಯ ಕಲ್ಪನೆ, ವಿವರಣೆ, ಮತ್ತು ಅನುಭೋಗ, ಇವುಗಳಲ್ಲಿ ಆಗುವ ಬದಲಾವಣೆಗಳೆಷ್ಟು ಶ್ರೇಷ್ಠ ರಚನೆಯ ನಿರ್ಮಾಣ ಕಾರಣಗಳು ಇರುತ್ತದೆ. ಉದಾ. ಕಲಾತ್ಮಕ ದೃಷ್ಠಿಯಲ್ಲಿ ಆಗುವ ಬದಲಾವಣೆಗಳು ಮುಖ್ಯವಾದುದು. ರಾಜಕೀಯ ಸಂಸ್ಥೆಗಳು, ಧಾರ್ಮಿಕ ತತ್ವಗಳು ಸಹ ಉತ್ಪಾದಿತ ವಸ್ತುಗಳನ್ನು ಕೊಳ್ಳುವಲ್ಲಿ ಪ್ರಭಾವ ಬೀರುತ್ತವೆ. ಕಾನೂನು ಸಹ ಆರ್ಥಿಕ ಜೀವನದಲ್ಲಿ ನಿರ್ಣಾಯಕ ಅಂಶವಾಗಿರುತ್ತದೆ. ಈ ಆಧಾರದ ಮೇಲೆ ಯಾವ ಸಾಮಾಜಿಕ ಸೂತ್ರವನ್ನು ರೂಪಿಸಲಾಗುವುದಿಲ್ಲ.

ಆರ್ಥಿಕ ರೂಪದ ಇತಿಹಾಸದ ಮಟ್ಟವನ್ನು ಐತಿಹಾಸಿಕ ಮಟ್ಟದ್ದು ಎಂದು ಕರೆಯಲಾಗಿದೆ. ಆದರೂ ಇದು ಸಂಪೂರ್ಣವಾಗಿ ತಾತ್ವಿಕ ಸಂಪತ್ತಿನ ವಾದದ ಮೇಲೆ ಆಧಾರಿತವಾಗಿಲ್ಲ. ಇಲ್ಲಿ ಈ ಕಲ್ಪನೆ ಒಂದು ಅಸ್ಪಷ್ಟ ಸಾದೃಶ್ಯಗಳನ್ನು ಕಾಣಬಹುದು. ಪರಸ್ಪರ ವಿರುದ್ಧವಾದ ಸಾಮಾಜಿಕ ಸಮೂಹಗಳು ತಮ್ಮ ಶಕ್ತಿಗಳ ರಕ್ಷಣೆಗಾಗಿ ಮಾಡುತ್ತವೆಂದು ಸ್ಪಷ್ಟವಾಗಿ ತಿಳಿಸಿದ್ದಾನೆ. ಈ ಹೋರಾಟ ರಾಜಕೀಯ ಬಣಗಳ ರೂಪದಲ್ಲಿ ವ್ಯಕ್ತವಾಗುತ್ತದೆ. ಮಾರ್ಕ್ಸ್‌ನ ಪ್ರಕಾರ ಇತಿಹಾಸದ ಗತಿಯಲ್ಲಿ ಈ ವರ್ಗ ಕಲಹ ನಡೆಯುತ್ತಲೇ ಇರುತ್ತದೆ. ಅವುಗಳಲ್ಲಿ ಒಂದೊಂದು ತತ್ವಗಳನ್ನು ಮುಂದಿಟ್ಟುಕೊಂಡು ಹೋರಾಟ ನಡೆಸುತ್ತಿರುತ್ತದೆ. ಅವರ ಪ್ರಕಾರ ಶ್ರೀಮಂತರು, ಊಳಿಗಮಾನ್ಯವನ್ನು, ಉದ್ಯಮಶೀಲರು ಬಂಡವಾಳ ಶಾಹಿಯನ್ನು, ಕಾರ್ಮಿಕರು ಸಮಾಜ ವಾದವನ್ನು ತಮ್ಮ ತತ್ವವನ್ನಾಗಿ ಹೊಂದಿರುತ್ತದೆ. ಇನ್ನು ಮುಂದುವರೆದು ಮಾರ್ಕ್ಸ್ ಹೇಳುತ್ತಾನೆ. ಈ ಹೋರಾಟದಲ್ಲಿ ಅಂತಿಮವಾಗಿ ಜಯಗಳಿಸುವವರು ಕಾರ್ಮಿಕರೆಂದೂ "ಊಳಿಗಮಾನ್ಯ" ಕಾಲದಲ್ಲಿ ಶೋಷಿತ ವರ್ಗದ ಅಜ್ಞಾನವಾದ ಶೋಷಣೆ ನಡೆದರೇ ಉದ್ಯಮ ಯುಗದಲ್ಲಿ ಬಂಡವಾಳ ಹೂಡಿಕೆ ಹೆಚ್ಚಿದಂತೆ ಕಾರ್ಮಿಕ ವರ್ಗದ ಸಂಘಟನೆಯು ಹೆಚ್ಚುತ್ತದೆ. ಇದರಿಂದಾಗಿ ಕಾರ್ಮಿಕ ವರ್ಗ ಜಯಗಳಿಸಿ ಸಮಾಜವಾದಿ ರಾಜ್ಯದ ಸ್ಥಾಪನೆಯಾಗುತ್ತದೆ. ಇದರಿಂದ ಎಲ್ಲರೂ ತಮಗೆ ನ್ಯಾಯವಾಗಿ ದೊರೆಯಬೇಕಾದ ಪಾಲನ್ನು ಪಡೆಯಬಹುದೆಂದು ಇವನ ವಾದ.

ಮಾರ್ಕ್ಸ್ ತನ್ನ ಕಾಲದ ಅರ್ಥಶಾಸ್ತ್ರಜ್ಞ ಡೇವಿಡ್ ರೆಕಾರ್ಡೋವಿನ ಆರ್ಥಿಕ ಸಿದ್ಧಾಂತವನ್ನು ತನ್ನ ತತ್ವದಲ್ಲಿ ಬಳಸಿಕೊಂಡಿದ್ದಾನೆ. ಪ್ರಗತಿ ಪರ ಆರ್ಥಿಕ ಸಿದ್ಧಾಂತದ ಪ್ರಕಾರ ವಸ್ತುವಿನ ಬೆಲೆ ಅದರ ಉತ್ಪಾದನೆಗೆ ಬೇಕಾದುದರಿಂದ ದುಡಿಮೆಯ ಮೇಲೆ ಅವಲಂಬಿಸಿರುತ್ತಾನೆ. ಮಾರ್ಕ್ಸ್‌ನು ಈ ತತ್ವವನ್ನು ಕೆಲವೊಂದು ಮಾರ್ಪಾಡಿನಿಂದ ತನ್ನ ಮಾನವ ದುಡಿಮೆಯ ಶಕ್ತಿಗೆ ಅನ್ವಯಿಸಿಕೊಂಡಿದ್ದಾನೆ. ಮಾರ್ಕ್ಸ್‌ನ ಈ ಸಿದ್ಧಾಂತ ಬಹು ಪರಿಣಾಮಕಾರಿಯಾದುದು. ಇದು ಬಹುಬೇಗ ಆಕರ್ಷಿಸಬಲ್ಲದು. ಆದರೆ ಇದರಲ್ಲಿ ನ್ಯೂನತೆಗಳೇ ಇಲ್ಲವೆಂದಲ್ಲ. ಉತ್ಪಾದನೆಗೆ ಕೇವಲ ದುಡಿಮೆಯೊಂದೇ ಪ್ರಮುಖ ಅಂಶವಲ್ಲ. ಅಲ್ಲಿ ಜಮೀನು, ಬಂಡವಾಳ, ವ್ಯವಸ್ಥಾಪನೆ ಮೊದಲಾದ ಅಂಶಗಳು ಇದೆ. ಆದರೂ ಮಾರ್ಕ್ಸ್ ಈ ತತ್ವವನ್ನು ನಿರೂಪಿಸುವುದರಲ್ಲಿ ಸಾಕಷ್ಟು ಯಶಸ್ವಿಯಾಗಿದ್ದಾನೆ.

ಈ ವಾದದ ಸಾಧ್ಯತೆಗಳು ಏನೇ ಇದ್ದರೂ ಸಹ ಇತ್ತೀಚಿನ ಹಲವಾರು ಸಾಮಾಜಿಕ ತತ್ವಗಳಿಂದ ಹೆಚ್ಚು ಪರಿಣಾಮಕಾರಿಯಾಯಿತು. ಮಾರ್ಕ್ಸ್‌ನ ಸಿದ್ಧಾಂತ ಒಂದು ದೃಷ್ಟಿಯಿಂದ ಯುಗದ ಅವಶ್ಯಕತೆಯಿಂದ ಮಾಡಿದುದೆಂದು ಹೇಳುವುದು. ವ್ಯವಸಾಯವೇ ಪ್ರಧಾನವಾಗಿದ್ದ ಕಾಲದಲ್ಲಿ ಕಾರ್ಮಿಕ ಸಂಘಟನೆಗಾಗಲಿ ಬಂಡವಾಳಗಾರರ ಭೋಗ ಜೀವನಕ್ಕಾಗಲಿ ಅಷ್ಟು ಅವಕಾಶವಿರಲಿಲ್ಲ. ಆದರೆ ಕೈಗಾರಿಕಾ ಕ್ರಾಂತಿಯಿಂದ ಜೀವನ ಸೌಕರ್ಯದ ವಸ್ತುಗಳ ಉತ್ಪಾದನೆ ಹೆಚ್ಚತೊಡಗಿದವು. ಇದರ ಉತ್ಪಾದಕರು ತಮ್ಮ ಭೋಗಜೀವನಕ್ಕಾಗಿ ಶ್ರಮ ಜೀವಿಗಳನ್ನು ಬಳಸಿಕೊಳ್ಳತೊಡಗಿದರು. ಕಾರ್ಲ್ ಮಾರ್ಕ್ಸ್ ತನ್ನ ಸಿದ್ಧಾಂತದಲ್ಲಿ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿದನು. ಅವರಿಗೆ ಶಿಕ್ಷಣ ಆರ್ಥಿಕ ಜೀವನದಲ್ಲಿ ಗಣನೀಯ ಪಾತ್ರ. ಅವರ ಜೀವನ ಮಟ್ಟದ ಉತ್ತಮತೆ ಹಾಗೂ ಸಾಮಾಜಿಕ ಸ್ವಾತಂತ್ರ್ಯ ಇವುಗಳನ್ನು ಪ್ರತಿಪಾದಿಸಿದ್ದರು. ಇಂಥಹ ಪ್ರಯೋಗ ಸಾಧ್ಯವಾದ ವಾಸ್ತವಿಕ ಸಿದ್ಧಾಂತ, ಯುರೋಪಿನ ಸಮಾಜವಾದಿಗಳನ್ನು, ಬುದ್ಧಿಜೀವಿಗಳನ್ನು ಕಾರ್ಮಿಕರನ್ನು ಆಕರ್ಷಿಸಿತು. 1917 ರಲ್ಲಿ ರಷ್ಯಾದಲ್ಲಿ ನಡೆದ ಕ್ರಾಂತಿಗೆ ಇವನ ಸಿದ್ಧಾಂತವೇ ವೇದ ವಾಕ್ಯವಾಯಿತು.

### *23.2.3 ಮಾರ್ಕ್ಸ್ ವ್ಯಕ್ತಿತ್ವ*

ಕಾರ್ಲ್ ಮಾರ್ಕ್ಸ್ ಒಬ್ಬ ಮಹಾದಾರ್ಶನಿಕವಾಗಿ ಇತಿಹಾಸದಲ್ಲಿ ಅದ್ವಿತೀಯ ಸ್ಥಾನವನ್ನು ಗಳಿಸಿಕೊಂಡಿದ್ದಾನೆ. ಅವನ ಸಿದ್ಧಾಂತದ ಆಧಾರದ ಮೇಲೆ ಇಂದು ಪ್ರಪಂಚದ ಅರ್ದಭಾಗವೇ ಸಮತಾವಾದವನ್ನು ಒಪ್ಪಿಕೊಂಡು ನಡೆಯುತ್ತಿದೆ. ಈ ಮೂಲಕ ಆಧುನಿಕ ನಾಗರೀಕತೆ ಮತ್ತು ಸಂವಾದ ರೀತಿಯಲ್ಲಿ ಸಾಕಷ್ಟು ಮಾರ್ಪಾಡುಗಳಾದವು. ಇದು ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಕಾರ್ಮಿಕ ಸಂಘಟನೆ ಹಬ್ಬಿದೆ. ಅಲ್ಲಿ ಅವರ ಸ್ಥಿತಿಗಳು ಸುಧಾರಿಸುತ್ತದೆ. ಹೀಗೆ ಆಧುನಿಕ ಇತಿಹಾಸದಲ್ಲಿ ಮಹಾ ಬದಲಾವಣೆಯನ್ನು ಮಾಡಲು ಕಾರ್ಲ್ ಮಾರ್ಕ್ಸ್ ಕಾರಣನಾಗಿದ್ದಾನೆ. ಮಿಗಿಲಾಗಿ ಮಾರ್ಕ್ಸ್ ಸಿದ್ಧಾಂತವು ಅದರ ತಾರ್ಕಿಕ ಆದಿ ಭೌತಿಕವಾದವನ್ನು ಆಧ್ಯಾತ್ಮಿಕವಾಗಿ

ಅರಿತರೂ, ದೇವರನ್ನು ಸೃಷ್ಟಿಕರ್ತನೆಂದಾಗಲೀ ಅಥವಾ ಇತಿಹಾಸದಲ್ಲಿ ದೇವರ ದಯೇ ಎಂದಾಗಲಿ ಮಾನ್ಯ ಮಾಡಲಿಲ್ಲ. ಇವುಗಳಲ್ಲಿ ನಂಬಿಕೆಯಿಂದ ಧರ್ಮವು ಮೂಢನಂಬಿಕೆಯಾಗಿತ್ತು. ಇತಿಹಾಸದಲ್ಲಿ ಇದನ್ನು ಅಲ್ಪಸಂಖ್ಯಾತರು ಬಹು ಸಂಖ್ಯಾತರು ಶೋಷಣೆ ಮಾಡುವ ಒಂದು ಸಾಧನವಾಗಿ ಸ್ವೀಕರಿಸಲಾಗಿದೆ.

ಇತಿಹಾಸದ ಸಮಸ್ತ ತತ್ವಜ್ಞಾನಗಳಲ್ಲಿ ಮಾರ್ಕ್ಸ್‌ನ ವಾದವು ಹೆಚ್ಚು ಉಪಯುಕ್ತವಾಗಿರಬಹುದು. ಮಾನವರ ಚಲನೆಗೆ ಕಾರಣವಾದ ಪ್ರತಿಯೊಂದು ಅವರ ಮನಸ್ಸುಗಳ ಮೂಲಕ ಹಾಯ್ದು ಹೋಗಬೇಕು. ಆದರೆ ಮನಸ್ಸಿನಲ್ಲಿ ಇದು ಯಾವ ರೂಪವನ್ನು ಧರಿಸುತ್ತದೆಂಬುದು ಪರಿಸ್ಥಿತಿಗಳನ್ನು ಹೆಚ್ಚಾಗಿ ಅವಲಂಬಿಸಿರುತ್ತದೆ ಎಂದು Engels ರವರೇ ಬರೆದಿದ್ದಾರೆ. ಕಥೆಯನ್ನು ಹೇಳುವಾಗ ಇತಿಹಾಸಕಾರನು ತನ್ನ ಘಟನೆಗಳನ್ನು ಕ್ರಮವಾಗಿ ಪ್ರಕಟಿಸುವಾಗ ಪರಿಸ್ಥಿತಿಗಳಿಂದ ಉದ್ಭವಿಸಿದ ಭಾವನೆಗಳಿಗೆ ಸಂಬಂಧಿಸುತ್ತಾನೋ ಅಥವಾ ಭಾವನೆಗಳ ಉದ್ಭವಕ್ಕೆ ಕಾರಣವಾದ ಹಾಗೂ ಅವುಗಳ ಮೂಲಕ ಕಾರ್ಯ ಮಾಡುವ ಪರಿಸ್ಥಿತಿಗಳಿಗೆ ಸಂಬಂಧಿಸುತ್ತಾನೋ ಅದು ಅಷ್ಟು ಮುಖ್ಯವಲ್ಲ. ವಾಸ್ತವವಾಗಿ ಹೇಳುವುದಾದರೆ ಜೀವ ಒಂದೇ ಆದರೆ ಅದು ಹಲವಾರು ಮುಖಗಳನ್ನು ಹೊಂದಿದೆ.

## 23.3 ಘಟಕದ ಸಾರಾಂಶ

ಈ ಘಟಕದ ಅಧ್ಯಯನದ ನಂತರ ನಾವುಗಳು ಈ ಕೆಳಗಿನ ಅಂಶಗಳನ್ನು ತಿಳಿದುಕೊಂಡೆವು.

* ಕಾರ್ಲ್‌ಮಾರ್ಕ್ಸ್ ಒಬ್ಬ ತತ್ವಜ್ಞಾನಿ ಇತಿಹಾಸಕಾರವೆಂಬುದು
* ಕಾರ್ಲ್‌ಮಾರ್ಕ್ಸ್‌ನ ವರ್ಗ ಸಂಘರ್ಷ ನಿರೂಪಣೆ ಮತ್ತು ವರ್ಗರಹಿತ ಸಮಾಜದ ಪ್ರತಿಪಾದನೆ ಬಂಡವಾಳ ಶಾಹಿತ್ವದ ಅಂತ್ಯ
* ಕಾರ್ಲ್‌ಮಾರ್ಕ್ಸ್‌ನ ಆರ್ಥಿಕ ತಥ್ಯ ಪರಾಮರ್ಶೆ
* ಕಾರ್ಲ್‌ಮಾರ್ಕ್ಸ್‌ನ ಇತಿಹಾಸದ ಅರ್ಥ ವಿವರಣಾ ನೀತಿ ಮುಂತಾದ ವಿಷಯಗಳ ಬೌದ್ಧಿಕ ಅಧ್ಯಯನವನ್ನು ಈ ಘಟಕದಲ್ಲಿ ಅಧ್ಯಯನ ನಡೆಸಲಾಯಿತು. ಮಾರ್ಕ್ಸ್‌ವಾದವು ಇಡೀ ಯೂರೋಪ್‌ನಲ್ಲೇ ತನ್ನದೇ ಆದ ಒಂದು ವೈಯುಕ್ತಿಕ ಛಾಪನ್ನು ಮೂಡಿಸಿತೆಂದು ಹೇಳಬಹುದು.

## 23.4 ಸ್ವಯಂ ಪರಿಶೀಲನಾ ಪ್ರಶ್ನೆಗಳು

1. ಕಾರ್ಲ್‌ಮಾರ್ಕ್ಸ್‌ನ ಇತಿಹಾಸದ ನಿರೂಪಣೆಯನ್ನು ವಿವರಿಸಿ.
2. ಮಾರ್ಕ್ಸ್‌ವಾದ ಮತ್ತು ಆರ್ಥಿಕ ತಥ್ಯ ಪರಾಮರ್ಶೆಯನ್ನು ಚರ್ಚಿಸಿ.

## 23.5 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. Rajayyan .K. : History; Its Theory and Methods
2. Sheik Ali .B. : History; Its Theory and Practice


*ಡಾ. ಎ. ಸೋಮಶೇಖರ್*

# ಘಟಕ - 24 ಆಸ್ವಾಲ್ಡ್ ಸ್ಪೆಂಗ್ಲರ್ (1880-1936)

*ವಿಷಯಸೂಚಿ*


24.0 ಉದ್ದೇಶಗಳು

24.1 ಪೀಠಿಕೆ

24.2 ಆಸ್ವಾಲ್ಡ್ ಸ್ಪೆಂಗ್ಲರ್ (1880-1936)

24.2.1 ಸ್ಪೆಂಗ್ಲರನ ಇತಿಹಾಸ ನಿರೂಪಣಾ ತತ್ವ

24.2.2 ಸ್ಪೆಂಗ್ಲರ್ ಮತ್ತು ಸಂಸ್ಕೃತಿ

24.2.3 ಸ್ಪೆಂಗ್ಲರ್ ಮತ್ತು ಪ್ರಜಾಪ್ರಭುತ್ವ

24.3 ಘಟಕದ ಸಾರಾಂಶ

24.4 ಸ್ವಯಂ ಪರಿಶೀಲನಾ ಪ್ರಶ್ನೆಗಳು

24.5 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು

## 24.0 ಉದ್ದೇಶಗಳು

ಜರ್ಮನಿಯ ದಾರ್ಶನಿಕ ಇತಿಹಾಸಕಾರನಾದ ಆಸ್ವಾಲ್ಡ್ ಸ್ಪೆಂಗ್ಲರನ ಬಗ್ಗೆ ಅಧ್ಯಯನ ಮಾಡುವ ಉದ್ದೇಶ ಇಲ್ಲಿದೆ. ಇವನಲ್ಲಿ ವೈಜ್ಞಾನಿಕ ಆಸಕ್ತಿಗಳು ಮತ್ತು ಸಿದ್ಧಾಂತ ಸೂತ್ರಗಳು ಮನೆಮಾಡಿಕೊಂಡಿದ್ದು ಒಳ್ಳೆಯ ವಿಶ್ವವಿದ್ಯಾಲಯದ ಶಿಕ್ಷಣದಿಂದ ಪ್ರೇರೇಪಿತನಾಗಿ "ದಿ ಡಿಕ್ಲೈನ್ ಆಫ್ ದಿ ವೆಸ್ಟ್" ಎಂಬ ಗ್ರಂಥವನ್ನು ಬರೆದು ಪ್ರಕಟಿಸಿದನು. ಇವನು ಇತಿಹಾಸದಲ್ಲಿ ಘಟನೆಗಳನ್ನು ವಿಂಗಡಿಸಿ ಅಧ್ಯಯನವನ್ನು ಮಾಡುವುದನ್ನು ಇವನು ವಿರೋಧಿಸಿದನು. ಜಗತ್ತಿನ ಸಂಸ್ಕೃತಿಗಳ ಬಗ್ಗೆ ಅಧ್ಯಯನ ನಡೆಯಬೇಕು, ಪ್ರಕೃತಿಯ ಸ್ವರೂಪ, ಲಕ್ಷಣ ಹಾಗೂ ಉಪಯೋಗಗಳನ್ನು ಕಾಲ ಮತ್ತು ಸ್ಥಳಗಳ ಅಧ್ಯಯನದಿಂದ ತಿಳಿಯಬಹುದು. ಇತಿಹಾಸವು ವರ್ತಮಾನದ ಮೂಲಕ ಭವಿಷ್ಯದತ್ತಸಾಗುವ ಜೀವನದಿಯಂತೆ. ಪ್ರಕೃತಿಯು ಭಗವಂತನ ಸೃಷ್ಟಿ ಇತಿಹಾಸವು ಮಾನವ ನಿರ್ಮಿತವಾದದ್ದು. ಇತಿಹಾಸವು ಸಂಸ್ಕೃತಿಗಳ ತುಲನಾತ್ಮಕ ಅಧ್ಯಯನವಾಗಿದೆ. ಪ್ರತಿ ಸಂಸ್ಕೃತಿಯಲ್ಲಿ ಒಂದು ಪ್ರಧಾನ ಸಂಕೇತವಿರುವುದನ್ನು ಪ್ರತಿಪಾದಿಸಿದ. ಈ ಸಂಸ್ಕೃತಿಗಳಿಗೆ ಹುಟ್ಟು, ಬೆಳವಣಿಗೆ, ಪಕ್ವತೆ ಮತ್ತು ಅವನತಿ ಉಂಟಾಗುತ್ತದೆ. ನಾಗರೀಕತೆಯು ಜೀವನ ಅಂತಿಮ ಮತ್ತು ಪ್ರಮುಖ ಪಕ್ವತೆಯ ಕಾಲವಾಗಿದೆಯೆಂದು ತಿಳಿಸುತ್ತಾನೆ. ಜಾಗತಿಕ ಸಮಾಜದ ಕಲ್ಪನೆಯನ್ನು ಇತಿಹಾಸದಲ್ಲಿ ಅಳವಡಿಸಿಕೊಳ್ಳಬೇಕೆಂದು ತಿಳಿಸಿದ್ದಾನೆ. ಇವೆಲ್ಲವುಗಳನ್ನು ತಿಳಿಯುವುದು ಈ ಘಟಕದ ಉದ್ದೇಶವಾಗಿದೆ.

## 24.1 ಪೀಠಿಕೆ

ಆಸ್ವಾಲ್ಡ್ ಸ್ಪೆಂಗ್ಲರ್ ನಾಗರೀಕತೆಗಳ ಅಮೂಲಾಗ್ರ ಅಧ್ಯಯನಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಿದನು. ಸಂಸ್ಕೃತಿಗಳ ಬಗ್ಗೆ ಅಧ್ಯಯನ ಮಾಡಲು ಹಲವು ವಿದ್ವಾಂಸರಿಗೆ ಉತ್ತೇಜಿಸಿದನು. ಇತಿಹಾಸದಲ್ಲಿ ಇತಿಹಾಸ ಬರಹಗಾರರು ಕಾಲಕ್ಕೆ ತಕ್ಕಂತೆ ಹಲವು ಬದಲಾವಣೆಗಳನ್ನು ಅಳವಡಿಸಿಕೊಂಡು ನಡೆಯಬೇಕೆಂದು ತಿಳಿಸಿದುದು ಇವನ ಈ ಎಲ್ಲಾ ನಿಯಮಗಳನ್ನು ಆರ್ನಾಲ್ಡ್ ಟಾಯನ್ಬಿ ಪಾಲಿಸಿದನು. ಇವು ಇವನ ಜ್ಞಾನ, ಇವನ ಕೃಷಿ ಮತ್ತು ಅಧ್ಯಯನದ ಕೊಡುಗೆಯೆಂದು ಹೇಳಬಹುದು. ಇವನ ಡಿಕ್ಲೈನ್ ಆಫ್ ದಿ ವೆಸ್ಟ್ ಆ ಕಾಲದ ಪ್ರಖ್ಯಾತ ಗ್ರಂಥವಾಯಿತಲ್ಲದೇ, ಇತರೇ ಇತಿಹಾಸಕಾರರಿಗೆ ಮಾದರಿಯಾಯಿತು. ಈ ಎಲ್ಲ ವಿಷಯಗಳನ್ನು ಸಹ ಇಲ್ಲಿ ಅಧ್ಯಯನ ನಡೆಸಲಾಗುತ್ತದೆ.

## 24.2 ಆಸ್ವಾಲ್ಡ್ ಸ್ಪೆಂಗ್ಲರ್ (1880-1936)

ಆಸ್ವಾಲ್ಡ್ ಸ್ಪೆಂಗ್ಲರ್ ಜರ್ಮನಿಯ ಪ್ರಖ್ಯಾತ ದಾರ್ಶನಿಕ. ಇವನ ಅತ್ಯಂತ ಪ್ರಸಿದ್ಧ ಪುಸ್ತಕ 'ದಿ ಡಿಕ್ಲೈನ್ ವೆಸ್ಟ್' ಇದರಲ್ಲಿ ಇವನ ವಿಶ್ವ ವಿಖ್ಯಾತ ಸಿದ್ಧಾಂತ ಪ್ರತಿಯೊಂದು ಸಂಸ್ಕೃತಿಯು ಮನುಷ್ಯನ ಜೀವನ ಚಕ್ರದಂತೆ ಆವರ್ತದಂತೆ ಇರುತ್ತದೆ ಎಂಬುದು ಸ್ಪೆಂಗ್ಲರನ ಸಂಸ್ಕೃತಿಯ ಬಗ್ಗೆ ಸಾರಾಂಶ ಹೀಗಿದೆ. ಸಂಸ್ಕೃತಿಗಳು ಜೀವಂತ ವಸ್ತುಗಳು. ಜಗತ್ತಿನ ಇತಿಹಾಸವೆಂದರೆ ಅವುಗಳ ಸಮಗ್ರ ಜೀವನದ ಚರಿತ್ರೆ. ಸಂಸ್ಕೃತಿಗಳಿಗೂ ಹುಟ್ಟು, ಬೆಳವಣಿಗೆ, ಸಾವುಗಳು ಇವೆ. ಬಾಲ್ಯ, ಯೌವನ, ಮುಪ್ಪು, ಸಾವು, ಎಂಬ ಚಕ್ರದಲ್ಲಿ ಅವು ಸುತ್ತುತ್ತ ಇರುತ್ತವೆ. ಒಂದು ಸಂಸ್ಕೃತಿಯು ಬಾಲ್ಯದಲ್ಲಿ ಬೆಳೆಯುತ್ತಿರುವ ಆತ್ಮವನ್ನೂ, ತೇಜಸ್ಸನ್ನೂ ಹೊಂದಿರುತ್ತದೆ. ಆದರೆ ಯೌವನದಲ್ಲಿ ಅದು ಮಾಗಿದ, ಪಕ್ವವಾದ, ಸುಂದರವಾದ, ಅಚ್ಚುಕಟ್ಟಾದ ಶಕ್ತಿ ಸಂಗ್ರಹ ಮಾಡುತ್ತದೆ. ಸಂಸ್ಕೃತಿಯ ಮುಪ್ಪು ಎಂದರೆ ಅದರ ನಾಗರೀಕತೆಯೇ ಎಂದು ಹೇಳಬಹುದು. ವೈವಿಧ್ಯ, ವೈಜ್ಞಾನಿಕ ರೀತಿಯ ಮತೀಯ ನಡವಳಿಕೆ ಮತ್ತು ನಂಬಿಕೆಗಳು, ಅಂಕಿ ಅಂಶಗಳ ಪ್ರಾಧಾನ್ಯ, ಸ್ಥಾನ ಮಾನಗಳಿಗೋಸ್ಕರ ದಾಹ ಬಹುಶ್ರುತ ಮೌಲ್ಯಗಳು ಮತ್ತು ವಸಾಹತು ನೀತಿ ಧೋರಣೆ ಇವೆಲ್ಲ ಅಳಿದು ಹೋಗುತ್ತಿರುವ, ನಾಗರೀಕತೆಯ ಘಟ್ಟದ ಸಂಸ್ಕೃತಿಯ (ಸಿವಿಲಿಜೇಸನ್ ಫೇಸ್ ಆಫ್ ಕಲ್ಚರ್) ಗುರುತುಗಳಾಗಿವೆ. ಸಂಸ್ಕೃತಿಯ ಘಟ್ಟದಲ್ಲಿ ಎಲ್ಲ ರೀತಿಯ ಹೋರಾಟಗಳೂ (ರಕ್ತಪಾತಗಳೂ ಸೇರಿದಂತೆ) ಒಂದು ಭಾವನೆಗೆ, ಆದರ್ಶಕ್ಕೆ ಮಾತ್ರ ನಡೆಸುವ ಹೋರಾಟಗಳಾಗುತ್ತವೆ. ಆದರೆ ನಾಗರೀಕತೆಯ ಘಟ್ಟದಲ್ಲಿ ಅಂಥ ಹೋರಾಟಗಳು ಸ್ವಾರ್ಥ ಸಾಧನೆಗಳಿಗಾಗಿ ಹೋರಾಟಗಳಾಗುತ್ತವೆ. ಹೀಗೆ ಇತಿಹಾಸ ಅಧ್ಯಯನ ಕೇಂದ್ರ ಬಿಂದು ಸಂಸ್ಕೃತಿಯೇ ಎಂದು ಸ್ಪೆಂಗ್ಲರ್ ಅಭಿಪ್ರಾಯ ಪಡುತ್ತಾನೆ.

ಸ್ಪೆಂಗ್ಲರನ ಸಿದ್ಧಾಂತಗಳು ಬಹಳ ಪ್ರಭಾವಯುತವಾದವೂ, ವಿವಾದಗಳಿಗೆ ಎಡೆಮಾಡಿ ಕೊಡುವುದಾಗಿಯೂ, ಬಹಳಕಾಲ ಇರುವ ಶ್ರೇಷ್ಠ ಗ್ರಂಥವಾಗಿದೆ. ಇವನ ಅಭಿಪ್ರಾಯಗಳು ಜರ್ಮನಿಯ ಸುಪ್ರಸಿದ್ಧ ಚಿಂತಕರಾದ ಗಯಟೆ ಮತ್ತು ನೀಟ್ಸೆ ಇವರ ಸಿದ್ಧಾಂತಗಳಿಂದ ರೂಪುಗೊಳ್ಳಲ್ಪಟ್ಟಿತು. ಇವನ ಗ್ರಂಥವು ಕೂಡಲೆ ಜನಾದರಣೀಯವಾಗಿ ಯೂರೋಪಿನ ಎಲ್ಲ ಭಾಷೆಗಳಿಗೂ ಭಾಷಾಂತರವಾಗಿ ಎಲ್ಲ ವಿದ್ವಾಂಸರ ಗಮನ ಸೆಳೆಯಿತು. ಅಸ್ವಾಲ್ಡ್ ಸ್ಪೆಂಗ್ಲೆರನ್ನು 20 ನೇ ಶತಮಾನದ ಅತ್ಯಂತ ಶ್ರೇಷ್ಠ ಚಿಂತಕನೆಂದು ಪ್ರಖ್ಯಾತನಾಗಿದ್ದಾನೆ.

1880 ರಲ್ಲಿ ಜರ್ಮನಿಯಲ್ಲಿ ಜನಿಸಿದ ಸ್ಪೆಂಗ್ಲರನು ತನ್ನ ವಿದ್ಯಾಭ್ಯಾಸ ಕಾಲದಲ್ಲಿ ಗಣಿತ ಇತಿಹಾಸ, ನೈಸರ್ಗಿಕ ಇತಿಹಾಸ, ಕಲೆ ಮುಂತಾದ ಶಾಸ್ತ್ರಗಳನ್ನು ಹಲ್ಲೇ, ಮ್ಯೂನಿಕ್ ಮತ್ತು ಬರ್ಲಿನ್ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡಿದನು. ಡಸಲ್ ಡಾರ್ಫ್, ಹ್ಯಾಂಬರ್ಗ್, ಮ್ಯೂನಿಚ್‌ಗಳಲ್ಲಿ ಹೈಸ್ಕೂಲ್‌ಗಳಲ್ಲಿ ಉಪಾಧ್ಯಾಯನಾಗಿ ಕೆಲಸ ಮಾಡಿದನು.

ಇವನು ತನ್ನ ಗ್ರಂಥ 'ಡಿಕ್ಲೈನ್ ಆಫ್ ದಿ ವೆಸ್ಟ್' (ಪಾಶ್ಚಿಮಾತ್ಯ ಅವನತಿ) ನಲ್ಲಿ ಯುರೋಪಿನ ಸಂಸ್ಕೃತಿಯು ತನ್ನ ಅತ್ಯಂತ ಉನ್ನತ ಶಿಖರವನ್ನು ಮುಟ್ಟಿದೆ. ಅದರ ನಾಶ ಮತ್ತು ಮರೆಯಾಗುವುದು ಖಂಡಿತ ಮತ್ತು ಅದರ ಅವನತಿಯ ಹಂತ ಈಗಾಗಲೇ ಶುರುವಾಗಿದೆ. ಇದು ಬಹಳ ಖೇದ ಎಂದು ತಿಳಿಸಿದನು. ಇದಕ್ಕೆ ಕಾರಣಗಳನ್ನೂ ವಿಮರ್ಶಿಸಿದನು. ಈ ಹಠಾತ್ತನೆ ಎಚ್ಚರಿಕೆ ಗಂಟೆ ಯುರೋಪಿನ ಜನರನ್ನು ಚಕಿತರನ್ನಾಗಿ ಮಾಡಿತು.

### *24.2.1 ಸ್ಪೆಂಗ್ಲರನ ಇತಿಹಾಸ ನಿರೂಪಣಾ ತತ್ವ*

ಪ್ರಥಮದಲ್ಲೇ ಇತಿಹಾಸ ನಿರೂಪಣೆಯಲ್ಲಿ ಮಾಡಿದ ಮೊದಲ ಅಪರಾಧವೆಂದರೆ ಇತಿಹಾಸವನ್ನು ಪ್ರಾಚೀನ ಮಧ್ಯಕಾಲ ಮತ್ತು ಆಧುನಿಕ ಕಾಲ ಎಂದು ವಿಭಾಗಿಸಿರುವುದು ತಪ್ಪು ಮತ್ತು ಅರ್ಥ ಹೀನವೂ ಬಾಲಿಶವೂ ಆಗಿದೆ ಎಂದು ಪ್ರತಿಭಟಿಸಿದನು. ಅದನ್ನು ಸರಿಪಡಿಸಲು ವಿಜ್ಞಾನಿ ಕೋಪರ್ನಿಕಸನ ಅಭಿಪ್ರಾಯಗಳನ್ನನುಸರಿಸಿ ಪಾಶ್ಚಿಮಾತ್ಯ ಅಥವಾ ಗ್ರೀಕ್-ರೋಮನ್ ಸಂಸ್ಕೃತಿಗಳು ಇತರ ಉತ್ತಮ ಸಂಸ್ಕೃತಿಗಳಾದ ಭಾರತ, ಬ್ಯಾಬಿಲೋನಿಯಾ, ಮೆಕ್ಸಿಕೋ, ಚೀನಾ, ಈಜಿಪ್ಟ್ ಅರಬ್‌ಗಳಿಗಿಂತ ಹೆಚ್ಚು ಎಂಬ ಭಾವನೆ ತಪ್ಪು ಎಂದು ತಿಳಿಸಿದನು. ಪ್ರತಿಯೊಂದು ಸಂಸ್ಕೃತಿಯೂ ಚರಿತ್ರೆಯ ದೃಷ್ಟಿಯಿಂದ, ಪ್ರಾಮುಖ್ಯವೆಂದೇ ಹೇಳಿದನು. ಕೋಪರ್‌ನಿಕನ ಸಿದ್ಧಾಂತದಲ್ಲಿ ವಿಶ್ವಶಕ್ತಿ ಅಥವಾ ಚೈತನ್ಯವು ಎರಡು ವಿಧ. ಒಂದು ಇತಿಹಾಸವಾಗಿರುವ ಜಗತ್ತು ಮತ್ತು ಭೌತ (ಪ್ರಕೃತಿ) ಪ್ರಪಂಚ. ಭೌತ ಜಗತ್ತನ್ನು ವಿಶೇಷ ತಜ್ಞರೇ ಚೆನ್ನಾಗಿ ತಿಳಿಯಲು, ವಿಶ್ಲೇಷಿಸಲು ಸಂಯೋಜಿಸಲು ಸಾಧ್ಯ. ಇತಿಹಾಸದಲ್ಲಾದರೋ ಮೇಲ್ಮಟ್ಟದ ಸಂಸ್ಕೃತಿಯನ್ನುಳ್ಳ ಮನುಷ್ಯನು ತನ್ನ ಅಂತಃಸತ್ವದಿಂದ ಅಂತಃಶಕ್ತಿಯಿಂದ ಬಾಹ್ಯ ರೂಪವನ್ನು ಇತಿಹಾಸ ಸೃಷ್ಟಿಸುತ್ತದೆ. ಇದರಿಂದ ತನ್ನ ಜೀವನಕ್ಕೂ ಜಗತ್ತಿನ ವಿಷಯಗಳಿಗೂ ಸಂಬಂಧ ಕಲ್ಪಿಸಿಕೊಳ್ಳುತ್ತಾನೆ. ಮನುಷ್ಯನು ತನ್ನ ಚಟುವಟಿಕೆಗಳಿಂದ ಹೊಸದನ್ನು ಸೃಷ್ಟಿಸಿ ಅದು ಬಹುಕಾಲವಿದ್ದು ಮುಂದಿನ ಜನಾಂಗಕ್ಕೂ ನೆನಪು ಕೊಡುವಂತೆ ಮಾಡುತ್ತಾನೆ. ಮಾನವನು ಭೌತಿಕ ಪ್ರಪಂಚದ ಸಂಪರ್ಕ ಹೊಂದಿರುವುದರಿಂದ, ತನ್ನ ಬುದ್ಧಿಯನ್ನು ಉಪಯೋಗಿಸಿ ಅದನ್ನು ತನಗೆ ಬೇಕಾದ ರೂಪಕ್ಕೆ ಬದಲಾಯಿಸಿ ಉಪಯೋಗ ಪಡೆದುಕೊಳ್ಳುತ್ತಾನೆ. ಹೀಗೆ ಪ್ರಕೃತಿ ಪ್ರಪಂಚವು ದೇವರ ಸೃಷ್ಟಿ ಮತ್ತು ಅದರಲ್ಲಿ ನಡೆಯುವ ಕ್ರಿಯೆ ಇತಿಹಾಸವಾಗಿ ಮನುಷ್ಯ ಪ್ರಯತ್ನಗಳ ಫಲವಾಗಿದೆ. ಹೀಗೆ ಇತಿಹಾಸದಲ್ಲಿ ಮಾನವನೂ ಸೃಷ್ಟಿಸದಿದ್ದು ಈ ಜಗತ್ತಿನ ವಿಷಯಾತೀತ (ಫಂಕ್ಷನ್ ಆಫ್ ದಿ ಟ್ರಾನ್ಸಿಡೆಂಟಲ್) ಕೆಲಸದಂತಿರುತ್ತದೆ. ಇದರಿಂದ ಜಗತ್ತಿನಲ್ಲಿ ನಮಗೆ ದೇವರ ಸೃಷ್ಟಿಯೂ ಮಾನವನ ನಿರ್ಮಾಣಗಳು, ಈ ಎರಡೂ ಕಂಡು ಬರುತ್ತವೆ. ಈ ಎರಡೂ ಸತ್ಯವೇ, ಸ್ಪೆಂಗ್ಲರನ ಈ ಕಾರ್ಯವಿಭಜನೆಯಲ್ಲಿ ಪ್ರಕೃತಿ ಪ್ರಪಂಚವು ವಿಜ್ಞಾನವೆಂದೂ, ಮನುಷ್ಯನ ಸೃಷ್ಠಿಯಾದ ಕಲೆಯು ಇತಿಹಾಸವೂ ಆಗುತ್ತದೆ. ಇದರಿಂದ ಎರಡು ವಿಧವಾದ ಗೋಚರ ಜ್ಞಾನಗಳು ಇತಿಹಾಸವಾದ ಜಗತ್ತು ಮತ್ತು ಪ್ರಕೃತಿ ಜಗತ್ತು ಉಂಟಾಗುತ್ತವೆ.

ಇತಿಹಾಸ ಪ್ರಪಂಚವು ಒಂದೇ ಸಮನಾಗಿ ಪ್ರವಾಹದಂತೆ, ಹಿಂದಕ್ಕೆ ಎಂದೂ ಬರದೆ, ಮುಂದಕ್ಕೆ ಸಾಗುತ್ತಲೇ, ಇಂದಿನಿಂತ ಭವಿಷ್ಯ ಕಾಲದವರೆಗೂ ಹೋಗುತ್ತಿರುತ್ತದೆ. ಭೌತ ಪ್ರಪಂಚವು ಒಂದು ಸ್ಥಿತಿಯಲ್ಲಿದ್ದು (ಸ್ಟಾಟಿಕ್) ತಿಳಿದುಕೊಂಡ ಸತ್ಯವಾಗಿದೆ. ಆದರೆ ಇತಿಹಾಸವು ಚಲನೆಯ ಸ್ವಭಾವವುಳ್ಳದ್ದಾಗಿ, ಪ್ರತಿಹಂತದಲ್ಲೂ ಬದಲಾಗುವ ಗುಣಗಳನ್ನುಳ್ಳದ್ದಾಗಿ, ಅನಂತರದವರೆಗೂ ಮುಂದುವರೆಯುತ್ತಲೇ ಇರುತ್ತದೆ. ಉದಾಹರಣೆಗೆ ಒಂದು ಬೆಟ್ಟ ಪ್ರಕೃತಿಯ ಸ್ಥಿತಿಯಲ್ಲಿದೆ ಅದಕ್ಕೇ ಜಾಗ (ಸ್ಪೇಸ್) ವೇ ಮುಖ್ಯ. ನಿನ್ನೆ, ಇವತ್ತು, ನಾಳೆ ಎಲ್ಲ ಕಾಲಕ್ಕೂ ಅದು ಅದೇ. ಆದರೆ ಇತಿಹಾಸದ ಅಲೆಗ್ಸಾಂಡರ್, ನೆಪೋಲಿಯನ್, ಬಿಸ್ಮಾರ್ಕ್, ಲೆನಿನ್ನರು ಹಿಂದೆ ತಮ್ಮ ಪಾತ್ರ ವಹಿಸಲಾರರು. ಆದರೆ ಅವರ ಕಾರ್ಯಗಳು ಅನೇಕ ಬದಲಾವಣೆಗಳನ್ನೂ ಮಾಡಿದವು ಮತ್ತು ಅವರ ಕಾರ್ಯದ ಪೂರ್ಣ ಪರಿಣಾಮವನ್ನು ನಾವು ಸಂಪೂರ್ಣವಾಗಿ ತಿಳಿಯಲಾಗಿಲ್ಲ. ಹೀಗೆ ಇತಿಹಾಸದ ಒಂದು ಚಟುವಟಿಕೆಯ ಹೊಡೆತ (ಇಂಪ್ಯಾಕ್ಟ್) ಹಿಂದಿನಿಂದ ಇಂದಿಗೂ ಮುಂದಕ್ಕೂ ಪ್ರವಹಿಸುತ್ತದೆ. ಪ್ರಕೃತಿ ಪ್ರಪಂಚದ ಬದಲಾವಣೆ ಚಾಲನೆಗೆ ಒಂದು ಹೊರಗಿನ ಶಕ್ತಿ ಬೇಕೇ ಬೇಕು. ಅದರ ಪರಿಣಾಮಗಳನ್ನು ನಿರ್ಧರಿಸಲು ಸಾಧ್ಯ ಆದರೆ ಇತಿಹಾಸ ಲೋಕದಲ್ಲಿ ಕಂಡರಿಯದವುಗಳೂ, ಕ್ಷಿಪ್ರ ಬದಲಾವಣೆಗಳೂ, ಅನಿರೀಕ್ಷಿತ ಘಟನೆಗಳೂ ಉಂಟಾಗುತ್ತವೆ.

ಚರಿತ್ರೆಯಲ್ಲಿ ಜಾಗೃತಿ ಅಥವಾ ಮನೋಭಾವವು ಅಧೀನ ಸೇವಕನಂತೆ ಕೆಲಸ ಮಾಡುತ್ತದೆ, ಆದರೆ ಭೌತ ಪ್ರಪಂಚದಲ್ಲಿ ಮನೋಭಾವ (ಅರಿವು) ಧಣಿ ಇದ್ದಂತೆ ತನ್ನ ಕಾರ್ಯದಲ್ಲಿಯೇ ತೊಡಗಿಸಿಕೊಳ್ಳುತ್ತದೆಯಲ್ಲದೆ ತನಗೇ ಬೇಕಾದ್ದನ್ನು ಪಡೆಯುತ್ತದೆ. ಇತಿಹಾಸದಲ್ಲಿ ಒಂದು ಸಾಮರಸ್ಯ 'ರಿಧಂ' ತಿಳಿಯಬಲ್ಲ ವ್ಯಕ್ತಿತ್ವಗಳಿರುತ್ತವೆ. ನಿಸರ್ಗ ಪ್ರಪಂಚದಲ್ಲಿ ಭವಿಷ್ಯ ತಿಳಿಯಬಹುದಾದ ಸಂಭವಗಳಿರುತ್ತವೆ. ಆದರೆ ಇತಿಹಾಸದಲ್ಲಿ ಈ ಸಾಮಾನ್ಯ ಲಕ್ಷಣ ಸಾಧ್ಯವಿಲ್ಲ. ಉದಾಹರಣೆಗೆ ಒಂದು ದೇಶದಲ್ಲಿ ಒಂದು ಕ್ರಾಂತಿಯನ್ನುಂಟುಮಾಡಿದ ಸನ್ನಿವೇಶಗಳು ಬೇರೆ ದೇಶದಲ್ಲಿ ಅದೇ ಪರಿಣಾಮಗಳನ್ನುಂಟು ಮಾಡಲಾರವು.

ಇತಿಹಾಸದಲ್ಲಿ ನಿರ್ದೇಶಿತ ಮಾನವ (ಡೆಸ್ಟವಿಮೆನ್) ರಿರುತ್ತಾರೆ. ಭೌತ ಪ್ರಪಂಚದಲ್ಲಿ ಕಾರ್ಯ ಕಾರಣ ಸಂಬಂಧ ಪುರುಷರಿರುತ್ತಾರೆ. ದಿನ ನಿತ್ಯದ ಕಾರಣಗಳಲ್ಲಿ ನಿರತರಾಗಿರುವ ಸಾಧಾರಣ ಮನುಷ್ಯರೆಲ್ಲ ಈ ಗುಂಪಿನವರೇ. ಆದರೆ ಇತಿಹಾಸದಲ್ಲಿ ಅಪರೂಪಗುಣಗಳುಳ್ಳ ಅಥವಾ ಅಸಾಧಾರಣ ಪುರುಷರು. ಬುದ್ಧ, ಜೀಸಸ್, ಅಶೋಕ, ಅಕ್ಬರ್ ಮುಂತಾದವರು ಜಗತ್ತಿನ ಚರಿತ್ರೆಯನ್ನು ರೂಪಿಸಬಲ್ಲ ನಿರ್ದೇಶಿಸಬಲ್ಲ ಶ್ರೇಷ್ಠ ಮಾನವರಾಗಿದ್ದರು. ಹೀಗೆ ಸ್ಪೆಂಗ್ಲರನು ಇತಿಹಾಸದ ತತ್ವಗಳನ್ನು ರೂಢಿಸಿ ತನ್ನ ನಿರೂಪಣೆಗಳನ್ನು ಮಾಡಿದ್ದಾನೆ.

### *24.2.2 ಸ್ಪೆಂಗ್ಲರ್ ಮತ್ತು ಸಂಸ್ಕೃತಿ*

ಸ್ಪೆಂಗ್ಲರನ ಮತ್ತೊಂದು ವಿಚಾರಧಾರೆಯೆಂದರೆ ಇತಿಹಾಸದ ಅತ್ಯಾವಶ್ಯಕ ಅಭ್ಯಾಸವೆಂದರೆ ಉನ್ನತ ಅಥವಾ ಶ್ರೇಷ್ಠ ಸಂಸ್ಕೃತಿಯ ಪರೀಕ್ಷೆ. ಇತಿಹಾಸದಲ್ಲಿ, ಅತಿ ಮುಖ್ಯ ಮುಖ್ಯವಾದುದೆಂದರೆ, ಒಂದು ಸಮಾಜವು ನಿರ್ಮಿಸುವ ಸಂಸ್ಕೃತಿ (ನಾಗರಿಕತೆ, ಸಭ್ಯತೆ) ಇದೊಂದೇ ತೀವ್ರ ಅಭ್ಯಾಸಕ್ಕೆ ಯೋಗ್ಯವಾದದ್ದು ಎಂದಿದ್ದಾನೆ. ಅವನ ಅಭಿಪ್ರಾಯದಲ್ಲಿ ಸಂಸ್ಕೃತಿಯ ಜೀವಂತ ವ್ಯಕ್ತಿಗೆ ಹೋಲಿಸಬಹುದಾದ ಪರಸ್ಪರಾವಲಂಬಿ ಭಾಗಗಳುಳ್ಳ ಒಂದು ಸಮಷ್ಟಿ (ಜೀವಿ) (ಆರ್ಗನಿಸಮ್)............ಇದರ ವಿಸ್ತಾರ ವಿವರಣೆಯನ್ನು ಈ ಅಧ್ಯಾಯದ ಪ್ರಾರಂಭದಲ್ಲಿ ಕೊಡಲಾಗಿದೆ. ನಾಗರಿಕತೆಯ ಹಂತದಲ್ಲಿ ಉದಾರ ಭಾವನೆಯು (ಕಾಸ್ಮಾಪಾಲಿಟನಿಸಂ) ಅಹಂಭಾವ (ಸ್ವಪ್ರತಿಷ್ಠೆಯ ಮೇಗಲಾ ಪೋಲಿಸ್) ಗಳೂ ಇವೆ. ಹೃದಯಕ್ಕೆ ಹತ್ತಿರವಾದ ಧರ್ಮವೂ ಭೌತಾತೀತ ವಿದೇಶಗಳೂ, ಧೈರ್ಯದ ವಿರುದ್ಧವಾದ ಸಂಪ್ರದಾಯ, ಮೂಢಭಕ್ತಿಗಳು ತನ್ನ ದೇಶ ತನ್ನ ರಾಷ್ಟ್ರದ ವಿರುದ್ಧ ಅಂತರಾಷ್ಟ್ರೀಯ ಸಮುದಾಯ ಭಾವನೆಯೂ, ಕಷ್ಟಪಟ್ಟು ಗಳಿಸಿದ ಹಕ್ಕುಗಳ ವಿರುದ್ಧ ಸ್ವಾಭಾವಿಕ ಹಕ್ಕುಗಳೂ, ಜನ ಸಾಮಾನ್ಯರ ವಿರುದ್ಧ ಅವ್ಯವಸ್ಥಿತ ಗುಂಪೂ, ಮಾತೃತ್ವದ ಬದಲಾಗಿ ಲೈಂಗಿಕ ಭಾವನೆಗಳೂ, ನಗರೀಕರಣ, ಸ್ವಸಾಮ್ರಾಜ್ಯ ಬೆಳೆಸುವ ದಾಹ ಅಂತರರಾಷ್ಟ್ರೀಕರಣ, ಮಾನವನ ಸಂಸ್ಕೃತಿಯ ಬಾಹ್ಯ ರೂಪವಾಗಿ ಬೆಳೆಯುವುದು, ಸಮತೆ, ಏಕತ್ವದ ವಿರೋಧವಾಗಿ ಬೃಹತ್ತಾಗಿ ಬೆಳೆಯುವ ಆಸೆ, ಅಧಿಕಾರ ಮೋಹ, ವರ್ಗ ಕಲಹ - ಹೀಗೆ ಸ್ವಭಾವಗಳೂ ಅದರ ವಿರುದ್ಧ ಭಾವನೆಗಳು ಕಂಡು ಬರುತ್ತವೆ. ಸಂಸ್ಕೃತಿ ರಾಜ್ಯದಲ್ಲಿ ರಕ್ತಪಾತವಾಗುವಂಥ ಮತ್ತು ಇತರ ಎಲ್ಲ ಹೋರಾಟವು ಯಾವುದೇ ಒಂದು ವಿಚಾರಕ್ಕಾಗಿ ಆಗಿರಲಿ ಅದು ಇತಿಹಾಸದ ದಾಖಲೆಯಾಗುತ್ತದೆ. ನಾಗರಿಕತೆಯ ಹೋರಾಟದಲ್ಲಿ

ಉಳಿಯುವುದೆಂದರೆ ಹೆಚ್ಚಿನ ಅಧಿಕಾರಕ್ಕಾಗಿ ಹೋರಾಟ ಮತ್ತು ಅವುಗಳ ಮೃಗ ಪ್ರಭುತ್ವಕ್ಕಾಗಿ ಸಂಸ್ಕೃತಿಯ - ನಾಗರಿಕತೆಯು ಕೊನೆಗಾಣುವುದಕ್ಕೆ ಮುಂಚೆ ಎರಡನೆಯ ಭಾರಿ ಮಿತಿ ಮೀರಿದ ಧರ್ಮ ಶ್ರದ್ಧೆಯೂ, ಮತ ಶ್ರದ್ಧಾ ವಿಕಾರಗಳೂ, ಹೊಸ ಮತ ಆಚರಣೆಯ ಮನಃಕ್ಷೋಭೆಯು (ಫೀವರ್) ಕಂಡು ಬರುತ್ತವೆ. ಈ ಎರಡನೆಯ ಮತ ಶ್ರದ್ಧಾ ವಿಕಾರವು ಸಂಸ್ಕೃತಿಯ ಜೀವನವನ್ನು ಕೊನೆಗಾಣಿಸುತ್ತದೆ ಮತ್ತು ಹೊಸ ಸಂಸ್ಕೃತಿಯು ಹೊರ ಹೊಮ್ಮುವ ಸಾಧ್ಯತೆಗಳುಂಟಾಗುತ್ತದೆ.

ಸ್ಪೆಂಗ್ಲರನು ಇತಿಹಾಸವನ್ನು ಸೂಕ್ಷ್ಮ ದೃಷ್ಟಿಯಿಂದ ಪರೀಕ್ಷಿಸಿ ಅದರಲ್ಲಿ ಎಂಟು ಸಂಸ್ಕೃತಿಯನ್ನು ಗುರುತಿಸಿ ಅವುಗಳನ್ನು 'ಮಹಾ ಸಂಸ್ಕೃತಿ' ಗಳೆಂದು ಹೆಸರಿಸಿದ್ದಾನೆ. ಅವುಗಳು ಈಜಿಪ್ಟಿನ, ಬ್ಯಾಬಿಲೋನಿಯಾದ, ಭಾರತದ, ಚೈನಾದ, ಗ್ರೀಕ್-ರೋಮನರ, ಅರೇಬಿಯಾದ (ಮಾಗಿಯನ್) ಮೆಕ್ಸಿಕೋದ, ಪಾಶ್ಚಿಮಾತ್ಯದ ಸಂಸ್ಕೃತಿಗಳೆಂದು ಗುರುತಿಸಿದ್ದಾನೆ. ಮುಂದೆ ರಷ್ಯಾದ ಸಂಸ್ಕೃತಿಯು ಸೇರಬಹುದೆಂದು ಹೇಳಿದ್ದಾನೆ. ಪ್ರತಿಯೊಂದು ತನ್ನದೇ ಆದ ಒಂದು ಚಿಹ್ನೆ ಮನೋಲಾಂಛನವನ್ನಾಗಿ ಹೊಂದಿರುತ್ತದೆ. ಪ್ರತಿ ಸಂಸ್ಕೃತಿಯು ಆ ಕಾಲದ ಜನರ ಜ್ಞಾನ, ಅನುಭವಗಳ ಬಗ್ಗೆ ತನ್ನದೇ ಆದ ತಿಳುವಳಿಕೆ ಪಡೆದಿರುತ್ತವೆ. ಬೇರೆ ಬೇರೆ ಸಂಸ್ಕೃತಿಗಳ ಲಲಿತ ಕಲೆ, ವಾಸ್ತುಶಿಲ್ಪ, ವರ್ಣ ಚಿತ್ರ, ಸಂಗೀತ ಮುಂತಾದವೂ ವರ್ಣಗಳೂ (ಕಲರ್ಸ್) ಬೇರೆ ಬೇರೆಯಾಗಿಯೇ ಇರುತ್ತವೆ.

ಸ್ಪೆಂಗ್ಲರನು ಮುಂದೆ ನಾನಾ ನಾಗರಿಕತೆಗಳ ಜೀವನ ಚಕ್ರವನ್ನು ಗಮನಿಸುತ್ತಾರೆ. ಅಲೆದಾಟದ ಕಾಲ, ವ್ಯವಸಾಯ ಆರಂಭಿಸಿದ ಕಾಲ, (ಈ ಕಾಲಗಳಲ್ಲಿ ಬರೆದ ಇತಿಹಾಸವಿಲ್ಲ) ಪುರಾತನ ಈಜಿಪ್ಟ್, ಚೀನಾ, ಗ್ರೀಕ್ ಮತ್ತು ಪಾಶ್ಚಾತ್ಯ ಸಂಸ್ಕೃತಿ ಕಾಲ (ಕ್ರಿ.ಶ. 500-900) ಊಳಿಗಮಾನ್ಯ ಪದ್ಧತಿ ಕಾಲ (ಫ್ಯೂಡಲಿಸಂ) ಮತಧರ್ಮ ಉತ್ಸಾಹ ಕಾಲಗಳು ಕ್ರಮವಾಗಿ ಬಂದುವು. ನಂತರ ಶ್ರೀಮಂತ ಧೀಮಂತ ಕಾಲ; ಅನಂತರ ರಾಷ್ಟ್ರ ರಾಷ್ಟ್ರೀಯತೆಯ ಸರ್ಕಾರ, ಬಲಿಷ್ಠರ (ಬೂರ್ಜೂನ) ಕಾಲ, ಹಳ್ಳಿಗಳನ್ನು ಹಿಂದೂಡಿ ಪ್ರಬಲವಾಗುವ ನಗರ ಪ್ರಾಬಲ್ಯ ಕಾಲಗಳು ಬಂದವು. ಇವೂ ನಂತರ ನಾಶದ ಹಾದಿ ಹಿಡಿಯುತ್ತವೆ.

ಆಖೈರು ನಾಗರಿಕತೆಯಲ್ಲಿ ಕೊನೆಯ ಹಂತವೂ ಸೇರಿದ್ದು ನಗರೀಕರಣವನ್ನು ಜನ ಬಯಸುತ್ತಾರೆ. ರಾಜ್ಯ, ರಾಷ್ಟ್ರ ಮತ್ತು ಸಾಮಾಜಿಕ ಅಂತಸ್ತುಗಳು ಒಡೆದುಹೋಗುವ ಸೂಚನೆಗಳು ಕಂಡುಬರುತ್ತವೆ. ನಗರಗಳು ಅವಾಸ್ತವಿಕವಾಗಿಯೂ, ನಾನಾ ಸಮುದಾಯಗಳನ್ನುಳ್ಳದ್ದಾಗಿಯೂ ಬೆಳೆಯುತ್ತದೆ. ರಾಜ್ಯಾಧಿಕಾರಿಗಳಲ್ಲಿ ಭಾಗವಹಿಸುವ ಮೂರು ಜನತೆ ವರ್ಗ (ತರಗತಿ) ಗಳಾದ ಧಾರ್ಮಿಕ ಪ್ರಭುಗಳು, ಲೌಕಿಕರು, ಸಾಮಾನ್ಯರುಗಳ ಜೊತೆಯಲ್ಲೇ ತೀರ ಸಾಮಾನ್ಯರು (ಮಾಸಸ್) ಗಳು ಅದರ ಜೊತೆಗೂಡಿಯೇ ನಿರಂಕುಶ ಪ್ರಭುತ್ವಗಳು (ಸೀಸರಿಸಂ) (ಹಿಂಸಾತ್ಮಕ ಏಕ ಪ್ರಭುಗಳು) ಬಂದೇ ಬರುತ್ತಾರೆ. ದೀನಾವಸ್ಥೆಯಿಂದ ಪದವಿಗೆ ಬಂದವರು (ಆಪ್‌ಸ್ಟಾರ್ಟ್ಸ್) ಪರಮೋಚ್ಛ ಅಧಿಕಾರ ಹಿಡಿಯಲು ಪ್ರಯತ್ನಿಸುತ್ತಾರೆ. ಕುವಾದ (ಕುತರ್ಕ) ಗಳಿಂದ ಸತ್ಯಾಭ್ಯಾಸ ಮಾಡುವ ಬುದ್ಧಿವಂತರ (ಸೊಫಿಸ್ಟಿಕೇಟೆಡ್-ಇಂಟಲೆಕ್ಸ್) ಎಲ್ಲೆಲ್ಲೂ ಮುಖ್ಯರಾಗುತ್ತಾರೆ. ನಗರಗಳ ಬೆಳವಣಿಗೆಯಿಂದ ಸ್ಥಿತವಂತ, ಬಡತನದ ವ್ಯತ್ಯಾಸ ಬೆಳೆದು ಸಂಸ್ಕೃತಿಯ ಸಾವಿಗೆ ಕಾರಣವಾಗುತ್ತದೆ. ಆಧುನಿಕ ಪಾಶ್ಚಿಮಾತ್ಯ ನಗರಗಳಲ್ಲಿ ಯಾಂತ್ರಿಕ ತಾಂತ್ರಿಕ ವ್ಯವಸ್ಥೆಗಳಿಂದ ಮಹಾ ಸಂಸ್ಕೃತಿಯ ದುರಂತದ ಕೊನೆಯ ಅಂಕದ ನಟನೆ ನಡೆಯುತ್ತಿದೆ. ಪಾಶ್ಚಿಮಾತ್ಯ ದೈತ್ಯನು ಯಂತ್ರಗಳ ಗುಲಾಮನಾಗುತ್ತಿದ್ದಾನೆ. ನಾಗರಿಕರು ಗ್ರಾಮಾಂತರವಾಗಲು ಬಯಸುತ್ತಿದ್ದಾರೆ. ಸಾಮ್ರಾಜ್ಯ ವಿಸ್ತರಣೆಯ ಕಾಲದಲ್ಲಿ ಶೋಷಿಸಲ್ಪಟ್ಟ ವಸಾಹತುಗಳ (ಕಾಲೋನಿ) ಜನ ಅಹಂಕಾರದ ಶ್ವೇತವರ್ಣ ಮಾನವನ (ಮೆಗಲೋಪಾಲಿಟಿನ್ ವೈಟ್ ಮ್ಯಾನ್) ವಿರುದ್ಧ ಎಲ್ಲೆಲ್ಲೂ ದಂಗೆ ಎದ್ದಿದ್ದಾರೆ. ಇದೇ ರೀತಿ ಹಣ ಮತ್ತು ಪ್ರಜಾಪ್ರಭುತ್ವ ಒಂದನ್ನೊಂದು ಗೆದ್ದಲಿನಂತೆ ಒಳಗಿಂದೊಳಗೇ ತಿಂದು ಹಾಕಿ, ಸೀಸರಿಸಂಗೆ (ಏಕಪ್ರಭುತ್ವ) ವಿಜಯಾವಕಾಶ ಮಾಡಿಕೊಡುತ್ತಿವೆ. ನಗರದ ಉತ್ಕರ್ಷದಿಂದ ಬುದ್ಧಿವಂತರು, ಹಣವಂತರು, ಅಧಿಕಾರಸ್ಥರು ಪ್ರಮುಖರಾಗುತ್ತಾರೆ. ಸಮಾಜದ ಅಂತಸ್ತುಗಳು ಬದಲಾಗಿ ರಾಜಕೀಯ ಪಂಗಡಗಳು (ಪಾರ್ಟಿಗಳು) ಕಂಡುಬರುತ್ತವೆ. ಎಲ್ಲಕ್ಕೂ ದೊಡ್ಡವು 'ಹಣ' ಮತ್ತು 'ಬುದ್ಧಿ' 'ಉದಾರವಾದಿ" ಮತ್ತು 'ಅಹಂಕಾರ' (ದರ್ಪ, ಪ್ರತಿಷ್ಠೆ).

### *24.2.3 ಸ್ಪೆಂಗ್ಲರ್ ಮತ್ತು ಪ್ರಜಾಪ್ರಭುತ್ವ*

ಪ್ರಜಾಪ್ರಭುತ್ವ ರೀತಿಯಲ್ಲೂ ಭಾರಿ ಬದಲಾವಣೆಗಳು ಕಂಡು ಬರುತ್ತವೆ. ಪ್ರಜಾ ಪ್ರಭುತ್ವವು ಹಂತ ಹಂತವಾಗಿ ಕೆಳಗಿಳಿದು ಏಕ ಪ್ರಭುತ್ವವಾಗುತ್ತದೆ. ಪ್ರಾರಂಭದಲ್ಲಿ ಪ್ರಜಾ ಪ್ರಭುತ್ವವು ಜವಾಬ್ದಾರಿಯುತರು, ಘನವಂತರು, ಶುದ್ಧ ಜ್ಞಾನಿಗಳಿಗೆ ಸೇರಿರುತ್ತದೆ. (ಒಳಪಡುತ್ತದೆ) ಆದರೆ ಆ ಆದರ್ಶವು ಕ್ಷಿಪ್ರವಾಗಿ ಹಣ ಮಾಡಬಲ್ಲ ಕಿಲಾಡಿಗಳ, ಅಧಿಕಾರದಲ್ಲಿರುವವರ ವಶವಾಗುತ್ತದೆ, ಅವರೇ ಓಟನ್ನು, ತಮ್ಮ ರಾಜಕೀಯ ಯಂತ್ರ, ತಂತ್ರಗಳ ಮೂಲಕ ಸ್ವಾಧೀನಕ್ಕೆ ಪಡೆಯುತ್ತಾರೆ. ಇದಲ್ಲದೆ ವೃತ್ತ ಪತ್ರಿಕೆಗಳು ಬಹಳ ಪ್ರಚಾರದ ಮುಖ್ಯ ಸಲಕರಣೆಗಳಾಗಿ ಅತ್ಯಂತ ಪ್ರಭಾವಯುತವಾಗಿ ಬೆಳೆಯುತ್ತವೆ. ಸಾರ್ವತ್ರಿಕ ಪ್ರಚಾರದಿಂದ ಜನರು ಅದನ್ನೇ ನಂಬಿ ಕ್ರಮೇಣ ಸ್ವಂತ ಬುದ್ಧಿ ಉಪಯೋಗಿಸಲಾರದ ಸ್ಥಿತಿಗೆ ಬಂದು, ಪತ್ರಿಕೆಯಲ್ಲಿ ಹೇಳಿದ್ದನ್ನೇ ನಂಬಿ ತೆಪ್ಪಗಾಗುತ್ತಾರೆ. ಪ್ರಜಾ ಪ್ರಭುತ್ವದಲ್ಲಿ ಪತ್ರಿಕೆಗಳು ಪ್ರಕಟಿಸಿದ್ದೇ ಸತ್ಯವೆಂದಾಗುತ್ತದೆ. ಇಂಥ ವೃತ್ತ ಪತ್ರಿಕೆಗಳು, ಇಂಥ ಸಾಮಾನ್ಯ ವಿದ್ಯಾಭ್ಯಾಸ ಕ್ರಮಗಳಿಂದ ಏಕಪ್ರಭುತ್ವ ಒಪ್ಪಿರುವ ಪಾರ್ಲಿಮೆಂಟ್‌ಗಳೂ, ಕಾಂಗ್ರೆಸ್‌ಗಳೂ (ಆಡಳಿತಾಂಗ ಸಭೆಗಳು) ಮತ ದಾನಗಳು (ಎಲಕ್ಷನ್‌ಗಳು) ಯೋಜಿತವಾದ ನಾಟಕದಂತೆ ನಡೆದು ಜನಾದರಣೀಯ ಸ್ವಯಂಮಾಡಳಿತಗಳೆನಿಸಿಕೊಳ್ಳುತ್ತವೆ. ಹೀಗೆ ಹಣದ ಪ್ರಜಾ ಪ್ರಭುತ್ವ ಬೆಳೆದು ಸ್ವವಿನಾಶಕಾರಿಯಾಗಿತ್ತದೆ. ಹಣದ ಏಕಪ್ರಭುತ್ವ ಈ ಮೊದಲೇ ಬುದ್ಧಿಯನ್ನು ನಾಶ ಮಾಡಿರುತ್ತದೆ ಹೀಗೆ ನಾಗರಿಕತೆಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳ ಕೊನೆಯ ಅಂಕ ಮುಗಿಯುತ್ತದೆ.

ಇವುಗಳೇ ಸ್ಪೆಂಗ್ಲರನ ಇತಿಹಾಸ ತತ್ವದ ತಿರುಳು. ಅವನು ಕಾರ್ಯ ಕಾರಣ ಸಂಬಂಧಗಳ ತತ್ವವನ್ನು ಒಪ್ಪುವುದಿಲ್ಲ. ಆ ವಿಚಾರವಾಗಿ ಅವನು ಆ ಸಮಸ್ತ ವಿಷಯಗಳೂ ಒಂದು ಅಜ್ಞಾತವೆಂದು ನಿಗೂಢವೆಂದೂ, ವಿಧಿ ಎಂದೂ ಆ ಸಮಸ್ಯೆಯನ್ನು ಸರಳವಾಗಿ ಮುಗಿಸುತ್ತಾನೆ. ಸಂಸ್ಕೃತಿಯ ಹುಟ್ಟು, ಬೆಳವಣಿಗೆಗಳು, ಯಾವುದು ಉತ್ತಮ ಸಂಸ್ಕೃತಿ ಎಂಬುದನ್ನು ಸುವ್ಯವಸ್ಥೆಯ ಶಕ್ತಿಗಳು (ಕಾಸ್ಮಿಕ್ ಫೋರ್ಸಸ್) ನಿರ್ಧರಿಸುತ್ತವೆ. 1923 ರ ಮುಂಚೆಯೇ ಸ್ಪೆಂಗ್ಲರನು ತನ್ನ ಪ್ರಖ್ಯಾತ ಪುಸ್ತಕ 'ದಿ ಡಿಕ್ಲೈನ್ ಆಫ್ ದಿ ವೆಸ್ಟ್' ನಲ್ಲಿ ಹೇಳಿದ ಅನೇಕ ಸಿದ್ಧಾಂತಗಳು ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ನಿಜವೆನ್ನಿಸಿವೆ. ಅವನ ಯೋಚನೆ, ವಿವರಣೆ, ನಿರ್ಧಾರಗಳು ಇತಿಹಾಸ ತತ್ವದಲ್ಲಿ ಬಹಳ ಪ್ರಭಾವ ಬೀರಿವೆ. ಸ್ಪೆಂಗ್ಲರ್ ಇತಿಹಾಸದ ಘಟನೆಗಳಲ್ಲಿ ಸಮಕಾಲೀನತೆಯನ್ನು ಕಂಡಿದ್ದಾನೆ. ನೂತನ ಸಾಮಾಜಿಕ ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳಲು ತಿಳಿಸಿದನು. ಸಂಸ್ಕೃತಿಯಲ್ಲಿ ಹುಟ್ಟು, ಬೆಳವಣಿಗೆ ಮತ್ತು ಅವನತಿಗಳು ಅತ್ಯವಶ್ಯಕವಾಗಿ ಎಲ್ಲೆಡೆಯಲ್ಲೂ ಕಂಡುಬರುತ್ತವೆ. ಇವನ ನಾಗರೀಕತೆ ಸಂಸ್ಕೃತಿ ಪ್ರಜಾಪ್ರಭುತ್ವ ವಿವರಣೆಗಳು ಪ್ರಮುಖವಾದ ಕೊಡುಗೆಗಳಾಗಿವೆಯೆಂದು ತಿಳಿದು ಬರುತ್ತದೆ.

## 24.3 ಘಟಕದ ಸಾರಾಂಶ

ಈ ಘಟಕದ ಅಧ್ಯಯನದ ನಂತರ ನಾವು

* ಸ್ಪೆಂಗ್ಲರ್‌ನ ಜೀವನ ಮತ್ತು ವಿಚಾರ ವೈಚಾರಿಕತೆಯನ್ನು ತಿಳಿದುಕೊಂಡೆವು.
* ಇತಿಹಾಸದಲ್ಲಿ ಸಮಕಾಲೀನತೆಯನ್ನು ಇವನು ತಿಳಿಸಿದ್ದು
* ಇವನ ಸಂಸ್ಕೃತಿ ಮತ್ತು ನಾಗರೀಕತೆಯ ಬಗೆಗಿನ ವಿವರಣೆಗಳು, ಇವನ ಇತಿಹಾಸದ ನಿರೂಪಣಾ ಶೈಲಿ
* ಇವನ ಪ್ರಜಾಪ್ರಭುತ್ವದ ಪ್ರಮುಖ ಲಕ್ಷಣಗಳು ಮತ್ತು ಅಳವಡಿಕೆ
* ಇವನ ಇತಿಹಾಸ ನಿರೂಪಣೆಯಿಂದ ಆರ್ನಾಲ್ಡ್ ಟಾಯನ್ಬಿಯವರಂತಹ ಮಹಾನ್ ದಾರ್ಶನಿಕರು ಮತ್ತು ಇತರರ ಬಗ್ಗೆ ಇಲ್ಲಿ ಅಧ್ಯಯನ ನಡೆಸಲಾಯಿತು.

## 24.4 ಸ್ವಯಂ ಪರಿಶೀಲನಾ ಪ್ರಶ್ನೆಗಳು

1. ಸ್ಪೆಂಗ್ಲರನ ಇತಿಹಾಸ ನಿರೂಪಣೆಯ ಶೈಲಿಯನ್ನು ವಿವರಿಸಿ.
2. ಸ್ಪೆಂಗ್ಲರನ ಸಂಸ್ಕೃತಿ ನಾಗರೀಕತೆಯನ್ನು ಕುರಿತು ಬರೆಯಿರಿ.
3. "ಇತಿಹಾಸವು ಎಲ್ಲಾ ಸಮಕಾಲೀನ" ಎಂಬ ಇವನ ಹೇಳಿಕೆಯನ್ನು ಚರ್ಚಿಸಿ.

## 24.5 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. Sheik Ali .B. : History; Its Theory and Method
2. Satish .K. Bajaj : Research Methodology in History.


*ಡಾ. ಎ. ಸೋಮಶೇಖರ್*

# ಘಟಕ - 25 ಆರ್ನಾಲ್ಡ್ ಜೆ. ಟಾಯನ್ಬಿ (1889-1975)

*ವಿಷಯಸೂಚಿ*


25.0 ಉದ್ದೇಶಗಳು

25.1 ಪೀಠಿಕೆ

25.2 ಆರ್ನಾಲ್ಡ್ ಜೆ. ಟಾಯನ್ಬಿ (1889-1975)

25.2.1 ಟಾಯನ್ಬಿಯವರ ಸಿದ್ಧಾಂತ ಮತ್ತು ನಾಗರೀಕತೆಯ ಅವಲೋಕನ

25.2.1 ಟಾಯನ್ಬಿಯವರ ಅಲ್ಪಸಂಖ್ಯಾತರ ಕ್ರಿಯೆಗಳು

25.3 ಘಟಕದ ಸಾರಾಂಶ

25.4 ಸ್ವಯಂ ಪರಿಶೀಲನಾ ಪ್ರಶ್ನೆಗಳು

25.5 ಹೆಚ್ಚಿನ ಅಧ್ಯಯನದ ಗ್ರಂಥಗಳು

## 25.0 ಉದ್ದೇಶಗಳು

ಈ ಘಟಕ 25 ರಲ್ಲಿ ನಾವು ಪ್ರಖ್ಯಾತ ಇತಿಹಾಸ ಬರಹಗಾರರಾದ ಇಂಗ್ಲೆಂಡಿನ ಆರ್ನಾಲ್ಡ್ ಟಾಯನ್ಬಿಯವರ ಬಗ್ಗೆ ತಿಳಿಯುತ್ತೇವೆ.

* ಟಾಯನ್ಬಿಯವರ ಇತಿಹಾಸ ನಿರೂಪಣೆಯನ್ನು ಅಧ್ಯಯನ ಮಾಡುತ್ತೇವೆ.
* ಟಾಯನ್ಬಿಯವರ ನಾಗರೀಕತೆಗಳು, ಹುಟ್ಟು, ಬೆಳವಣಿಗೆ ಮತ್ತು ಪತನಗಳ ಬಗ್ಗೆ ಅವರ ವಿಶ್ಲೇಷಣೆಯನ್ನು ತಿಳಿಯುವೆವು.
* ಇವರ ಸವಾಲು ಮತ್ತು ಜವಾಬು ನೀತಿಯನ್ನು ಇತಿಹಾಸದಲ್ಲಿ ಅಳವಡಿಸುವ ರೀತಿಯನ್ನು ನಾವು ಅಧ್ಯಯನ ಮಾಡುತ್ತೇವೆ.
* ಇತಿಹಾಸವನ್ನು ದರ್ಶನಶಾಸ್ತ್ರವನ್ನಾಗಿ ಮಾಡಿರುವುದನ್ನು ಇವರ ಬರಹಗಳಲ್ಲಿ ಕಾಣುತ್ತೇವೆ.
* ಸ್ಪೆಂಗ್ಲರನ ಪ್ರಭಾವವು ಇವರ ಮೇಲೆ ಹೇಗಾಯಿತು ಮತ್ತು ಇತಿಹಾಸದ ಸಂಶೋಧನೆಯಲ್ಲಿ ಅಳವಡಿಸಿಕೊಳ್ಳಬೇಕಾದ ವಿವಿಧ ವಿಧಾನಗಳನ್ನು ಕುರಿತು ಅಧ್ಯಯನ ಮಾಡಲಿದ್ದೇವೆ.

## 25.1 ಪೀಠಿಕೆ

ಆರ್ನಾಲ್ಡ್ ಜೆ. ಟಾಯನ್ಬಿಯವರು ಒಬ್ಬ ಮಹಾನ್ ದಾರ್ಶನಿಕ ಇತಿಹಾಸಕಾರರು. ಇವರು ಇತಿಹಾಸದಲ್ಲಿ ಕಂಡು ಬರುವ ಮೂಲ ದಾಖಲೆಗಳನ್ನು ಅವಲೋಕಿಸಿ ವಿಶ್ಲೇಷಿಸಿ 'ಸ್ಟಡಿ ಆಫ್ ಹಿಸ್ಟರಿ'ಎಂಬ ಮಹಾನ್ ಕೃತಿಯನ್ನು ಬರೆದು ಅಲ್ಲಿ ಜಗತ್ತಿನ ಸುಮಾರು 26 ಸಂಸ್ಕೃತಿಗಳನ್ನು ಗುರುತಿಸಿ ಅವುಗಳ ಬೆಳವಣಿಗೆಗೆ ಮತ್ತು ಪತನಗಳ ಬಗ್ಗೆ ಬರೆದಿರುವರು. ಇವರ ದಾರ್ಶನಿಕ ಇತಿಹಾಸ ( Philosophy of History) ದ ನಿರೂಪಣೆ ಜಾಗತಿಕವಾದದ್ದು, ಇವರ ಸಂಸ್ಕೃತಿ ಮತ್ತು ನಾಗರೀಕತೆಯ ಬಗ್ಗೆ ನೀಡಿರುವ ಹೇಳಿಕೆಗಳು ಬಹಳಷ್ಟು ಉತ್ತಮವಾಗಿವೆ. ಇವರ ಸವಾಲು ಮತ್ತು ಜವಾಬು ನೀತಿಯು ಇತಿಹಾಸದಲ್ಲಿ ಅಳವಡಿಸಿಕೊಳ್ಳಲು ತುಂಬಾ ಸೂಕ್ತವಾಗಿದೆಯೆಂದು ಹಲವು ಇತಿಹಾಸಕಾರರು ತಿಳಿಸಿದ್ದಾರೆ. ಈ ಘಟಕದಲ್ಲಿ ಇತಿಹಾಸಕ್ಕೆ ಇವರು ನೀಡಿರುವ ಕೊಡುಗೆಯನ್ನು ತಿಳಿಯಲಾಗುತ್ತದೆ.

## 25.2 ಟಾಯ್ನಬಿ ಆರ್ನಾಲ್ಡ್ (1889-1975)

ಟಾಯ್ನಬಿಇಂಗ್ಲೆಂಡಿನಲ್ಲಿ 1889 ರಲ್ಲಿ ಜನಿಸಿದ. ವಿದ್ಯಾಭ್ಯಾಸ ಕಾಲದಲ್ಲಿ ಗ್ರೀಕ್ ಮತ್ತು ಲ್ಯಾಟಿನ್ ಸಾಹಿತ್ಯಭ್ಯಾಸ ಮಾಡಿದ. ಒಂದು ವರ್ಷ ಕಾಲ ಗ್ರೀಸಿನ ಅಥೆನ್ಸಿನ ಬ್ರಿಟಿಷ್ ಆರ್ಕಿಯಾಲಾಜಿಕಲ್ (ಪ್ರಾಕ್ತನ ಸಂಶೋಧನಾ) ಶಾಲೆಯಲ್ಲಿ ಕಲಿತನು. 1912 ರಲ್ಲಿ ಹಿಂದಿರುಗಿ 1915 ರವರೆಗೆ ಫೆಲೋ ಮತ್ತು ಟ್ಯೂಟರ್ ಆಗಿ ಕೆಲಸ ಮಾಡಿದನು. ಒಂದನೆ ಮಹಾಯುದ್ಧ (1914-18) ರ ಎರಡನೇ ಮಹಾಯುದ್ಧ (1939-45) ರ ಕಾಲದಲ್ಲಿ ಬ್ರಿಟಿಷ್ ಸರಕಾರದ ಪರವಾಗಿ ಕಾರ್ಯಗಳನ್ನು ವಹಿಸಿದ್ದನು. 1919-24 ರವರೆಗೆ ಆಧುನಿಕ ಗ್ರೀಕ್ ಮತ್ತು ಬೈಜಾಂಟೈನ್ ಸ್ಟಡೀಸ್‌ನ ಪ್ರೊಫೆಸರಾಗಿ ಲಂಡನ್ ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡಿದನು. 1925-55 ರವರೆಗೆ ಲಂಡನ್ನಿನ ರಾಯಲ್ ಇನ್‌ಸ್ಟಿಟ್ಯೂಟ್‌ನ ನಿರ್ದೇಶಕನಾಗಿ, ಇತಿಹಾಸದ ಸಂಶೋಧನಾ ಪ್ರಾಧ್ಯಾಪಕನಾಗಿ ಕೆಲಸ ಮಾಡಿದನು. 1947 ರಿಂದ ಅಮೇರಿಕಾದಲ್ಲಿ ಇತಿಹಾಸ ಸಂಬಂಧ ಉಪನ್ಯಾಸಗಳನ್ನು ಮಾಡಿದನು. ಹೀಗೆ ಇತಿಹಾಸದ ನಾನಾ ಕಾರ್ಯಗಳಲ್ಲಿ ಇವನ ಅನುಭವ ಅಪಾರವೂ ವೈವಿಧ್ಯವೂ ಆಗಿದೆ.

ಇವನ ಗ್ರಂಥಗಳು ಗ್ರೀಕ್ ಹಿಸ್ಟಾರಿಕಲ್ ಥಾಟ್ ಅಂಡ್ ಗ್ರೀಕ್ ಸಿವಿಲಿಜೇಷನ್ ಅಂಡ್ ಕ್ಯಾರಿಕ್ಟರ್ (1924) ಸಿವಿಲಿಜೇಷನ್ ಆನ್ ಟ್ರಯಲ್ (1948) ಆನ್ ಹಿಸ್ಟೋರಿಯನ್ಸ್ ಅಪ್ರೋಚ್ ಟು ರಿಲಿಜನ್ (1956) ಈಸ್ಟ್ ಟು ವೆಸ್ಟ್; ಎ ಜರ್ನಿ ರೌಂಡ್ ದಿ ವರ್ಲ್ಡ್ (1958) ಮತ್ತು ಹೆಲನಿಸಂ: ದಿ ಹಿಸ್ಟೋರಿ ಆಫ್ ಎ ಶಿವಿಲಿಜೇಷನ್ (1959).

ಇವನ ಮೇರುಕೃತಿ 'ಎ ಸ್ಟಡಿ ಆಫ್ ಹಿಸ್ಟೋರಿ' ಬರೆಯಲು 1922 ರಿಂದಲೇ ಸಾಮಗ್ರಿಗಳನ್ನು ಸಂಗ್ರಹಿಸಿದನು. ಈ ದೊಡ್ಡ ಗ್ರಂಥದ ಹತ್ತು ಸಂಪುಟಗಳು 1934-54 ರಲ್ಲಿ ಪ್ರಕಟವಾದವು. ಈ ಮಧ್ಯೆ ಇದರ ಮೊದಲ ಆರು ಸಂಪುಟಗಳ ಸಂಗ್ರಹ ಆವೃತ್ತಿ 1946 ರಲ್ಲೂ, ಕೊನೆಯ ನಾಲ್ಕು ಸಂಪುಟಗಳು 1957 ರಲ್ಲೂ ಪ್ರಕಟವಾದವು. 1946 ರಲ್ಲಿ ಪ್ರಕಟವಾದ ಸಂಗ್ರಹ ಆವೃತ್ತಿಗಳಿಂದ ಇವನ ಹೆಸರು ಜನದ್ವಿಖ್ಯಾತವಾಯಿತು. ಅದರ ಅಭಿಪ್ರಾಯಗಳು ಇತಿಹಾಸಕಾರರನ್ನೂ, ಸಾಆನ್ಯ ಓದುಗಾರರನ್ನೂ, ಹೊಸ ವಿಷಯ, ಹೊಸ ವಿಧಾನಗಳಿಂದ ಚಕಿತಗೊಳಿಸಿದುವು. ಪ್ರಪಂಚದ ನಾಗರಿಕತೆಯ ಇತಿಹಾಸಕ್ಕೆ ಇವನ ಸಿದ್ಧಾಂತಗಳು, ತೀರ್ಮಾನಗಳು ಅಮೂಲ್ಯ ಕೊಡುಗೆ ಎಂದು ಎಲ್ಲರೂ ಒಪ್ಪುತ್ತಾರೆ. ಟಾಯ್ನಬಿಯು ಕೆಲವು ಅಭಿಪ್ರಾಯಗಳನ್ನು ಒಪ್ಪದ, ಟೀಕಿಸುವವರೂ ಇದ್ದಾರೆ. ಟಾಯ್ನಬಿ ಅವರೂ ಕೆಲವು ಇತರ ಇತಿಹಾಸಕಾರರ ಸಿದ್ಧಾಂತಗಳನ್ನು ಒಪ್ಪದೆ, ಅದಕ್ಕೆ ತಮ್ಮ ಕಾರಣಗಳನ್ನು ಕೊಟ್ಟಿದ್ದಾರೆ. ಇತಿಹಾಸಕಾರ ಸ್ಪೆಂಗ್ಲರ್ ತನ್ನ 'ದಿ ಡಿಕ್ಲೈನ್ ಆಫ್ ದಿ ವೆಸ್ಟ್' ಗ್ರಂಥದಲ್ಲಿ ನಾಗರಿಕತೆಯ ಸಾವು ಅನಿವಾರ್ಯವೆಂದು ಹೇಳಿರುವ ಮಾತನ್ನು ಯಾಟ್ನಬಿ ಒಪ್ಪುವುದಿಲ್ಲ. ಏಕೆಂದರೆ ಎಡೆಬಿಡದೆ ಬರುತ್ತಿರುವ ಸವಾಲುಗಳಿಗೆ ನಾಗರಿಕತೆ ಅನುಕ್ರಿಯೆ ತೋರಿಸಬಹುದು ಅಥವಾ ತೋರಿಸದಿರಬಹುದು. ಮತ್ತೊಬ್ಬನಾದ ಕಾರ್ಲ್ ಮಾತನ್ನು ಟಾಯ್ನಬಿ ಒಪ್ಪುವುದಿಲ್ಲ. ಆಧ್ಯಾತ್ಮಿಕ ಬಲಗಳು ಇತಿಹಾಸವನ್ನು ರೂಪಿಸುತ್ತವೆ ಎಂಬುದು ಇವನ ಅಭಿಪ್ರಾಯ.

### *25.2.1 ಟಾಯ್ನ್ಬಿಯವರ ಸಿದ್ಧಾಂತ ಮತ್ತು ನಾಗರೀಕತೆಯ ಅವಲೋಕನ*

ಈಗ ಟಾಯ್ನಬಿಯವರ ಸಿದ್ಧಾಂತಗಳನ್ನು ಅವಲೋಕಿಸಬೇಕಾಗಿದೆ. ನಾಗರಿಕತೆಗಳ ಹುಟ್ಟು ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಆಳವಾಗಿ ವ್ಯಾಸಂಗ ಮಾಡಿರುವ ಟಾಯ್ನಬಿ ಅವುಗಳ ಬಗ್ಗೆ ಕೆಲವು ಸಿದ್ಧಾಂತಗಳನ್ನು ರೂಪಿಸಿದ್ದಾರೆ. ನಾಗರಿಕತೆಯು ಇತಿಹಾಸ ಅಧ್ಯಯನದ ಘಟಕ. ಜನಸಮುದಾಯವೇ ಇತಿಹಾಸ ಅಧ್ಯಯನದ ಕ್ಷೇತ್ರ. ಅವನು 26 ಸಮುದಾಯಗಳ ನಾಗರಿಕತೆಯನ್ನು ಗಣನೆಗೆ ತಂದುಕೊಂಡಿದ್ದಾನೆ. ಇವುಗಳಲ್ಲಿ ಎರಡು ಕ್ರಿಶ್ಚಿಯನ್ ಸಮುದಾಯ (ರಷ್ಯಾ ಮತ್ತು ಪಶ್ಚಿಮ ಏಷ್ಯಾ) ಇರಾನಿನ, ಅರೇಬಿಯಾದ, ಹಿಂದುಗಳ, ಎರಡು ಪೂರ್ವ ಏಷ್ಯಾದ ಗ್ರೀಕರ (ಹೆಲನಿಕ್) ಸಿರಿಯಾ, ಇಂಡಿಕ್, ಸಿನಿಕ್, ಮಿನೋಅನ್, ಸುಮೆರಿಕ್, ಹಿಟೈಟರ, ಬ್ಯಾಬಿಲೋನಿಯಾದ, ಆಂಡೀಸ್, ಮೆಕ್ಸಿಕೋ, ಯೂಕಾಟೆಕ್, ಮಾಯನ್ನರ, ಈಜಿಪ್ಶಿನವರ ಹಾಗೂ ಬೆಳೆಯಲಾರದೆ ನಿಂತ ಐದು ನಾಗರಿಕತೆಗಳಾದ ಪಾಲಿನೀಷಿಯನ್ನರ, ಎಸ್ಕಿಮೋಗಳ ಅಲೆಮಾರಿಗಳ (ನೊಮ್ಯಾಡಿಕ್) ಒಟ್ಟೆ ಮಾನವರ ಮತ್ತು ಸ್ಪಾರ್ಟನರ ಸಂಸ್ಕೃತಿಗಳನ್ನು ಗುರುತಿಸಿದ್ದಾನೆ.

ಪ್ರಥಮವಾಗಿ ನಾಗರಿಕತೆಗಳ ಪ್ರಾರಂಭ (ಹುಟ್ಟನ್ನು) ದ ಸಮಸ್ಯೆಯನ್ನು ಚರ್ಚಿಸಿದ್ದಾನೆ. ಕೆಲವು ಆದಿ ಸಮಾಜಗಳು ಹುಟ್ಟಿ ಮುಂದೆ ಬೆಳೆಯಲಾರದೆ ನಿಲ್ಲುತ್ತವೆ. ಕೆಲವು ಬೆಳೆದು ಒಂದು ಹಂತವನ್ನು ದಾಟುತ್ತವೆ. ಒಂದು ನಾಗರಿಕತೆ ಹುಟ್ಟಬೇಕಾದರೆ ಒಂದು ವರ್ಣವೇ ಆಗಲಿ ಒಂದು ವಾತಾವರಣವಾಗಲೀ ಕಾರಣವಲ್ಲ. ಅದರ ಬೆಳವಣಿಗೆಗೆ ಪ್ರಮುಖ ಅಂಶಗಳೆಂದರೆ ತೀರ ಅನುಕೂಲವಾದ ಅಥವಾ ಹೆಚ್ಚಿನ ಅನಾನುಕೂಲವಲ್ಲದ ವಾತಾವರಣ ಮತ್ತು ಚಟುವಟಿಕೆ ಸ್ವಭಾವ ಉಳ್ಳ ಅಲ್ಪ ಸಂಖ್ಯಾತ ಜನ, ಅಂತೆಯೇ ಭೌಗೋಳಿಕ ಸನ್ನಿವೇಶ, ವಾತಾವರಣ, ಜನಾಂಗಗಳ ವರ್ಣ, ಖನಿಜ ಸಂಪತ್ತು ಮುಂತಾದ ಕಾರಣಗಳೂ ಅಲ್ಲ. ಮುಖ್ಯ ಕಾರಣವೆಂದರೆ ತಮ್ಮ ಮಿದುಳನ್ನು ಸರಿಯಾಗಿ ಉಪಯೋಗಿಸಿ ಸೃಜನಾತ್ಮಕ ಕಾರ್ಯಗಳನ್ನು ಮಾಡಬಲ್ಲ ಅಲ್ಪ ಸಂಖ್ಯೆಯ ಜನ ಅವರೇ ಆ ಸಮಾಜದ ಕಾರ್ಯಕ್ರಮಗಳಿಗೆ, ಪೂರ್ಣ ವಿಧಿ (ಹಣೆಯ ಬರಹ) ಗಳಿಗೆ ಕಾರಣರಾಗುತ್ತಾರೆ. ಎರಡನೆಯದಾಗಿ ಕೆಲವು ಆದರ್ಶವೂ ಅನುಕೂಲವೂ ಆದ ಸನ್ನಿವೇಶಗಳೂ ನಾಗರಿಕತೆಯ ಹುಟ್ಟಿಗೆ ಕಾರಣವಾಗುತ್ತವೆ. ತೀರ ಹಿತಕರ ಸನ್ನಿವೇಶದಿಂದ ಅದರ ಬುದ್ಧಿಯ ಚುರುಕಾಗಿರಲಾರದು. ಅಂಥವರ ಆಸೆಗಳೇ ಮೊಟಕಾಗುತ್ತವೆ. ತೀರ ಅನಾನುಕೂಲವಾದಗಲೂ ಅಭಿವೃದ್ಧಿಯ ಕಡೆ ಗಮನವೀಯಲಾರರು. ಹೀಗೆ ಸಂಸ್ಕೃತಿಯ ಬೆಳವಣಿಗೆ ತಕ್ಕ ನೈಸರ್ಗಿಕ ಸಹಕಾರವೂ ಮನುಷ್ಯನ ಬುದ್ಧಿಶಕ್ತಿಯ ಚಾಲನೆಯೂ ಸೇರಬೇಕು. ಇಂಥ ಅನುಕೂಲ ಸನ್ನಿವೇಶದಲ್ಲಿ ಸವಾಲು, ಜವಾಬುಗಳ ಕ್ರಿಯೆ ಉಂಟಾಗುತ್ತದೆ. ಸಮಾಜ ಕ್ರಿಯಾತ್ಮಕ ಪಂಗಡ ಸವಾಲನ್ನು ಎದುರಿಸಿ ಜವಾಬನ್ನು ಕೊಡುತ್ತದೆ ಹೀಗೆ ಒಂದು ಸಮಸ್ಯೆ ಪೂರೈಕೆಯಾದಾಗ ಹೊಸ ಸವಾಲುಗಳು ಬರುತ್ತವೆ. ಪುನಃ ಕ್ರಿಯೆ ಕಾರ್ಯಾಚರಣೆ ನಡೆಸುತ್ತದೆ. ಹೀಗೆ ಸವಾಲು ಜವಾಬುಗಳ ಕೊನೆ ಮೊದಲಿಲ್ಲದ ಕ್ರಿಯೆಯಿಂದ ನಾಗರಿಕತೆ ಬೆಳೆಯುತ್ತಲೇ ಇರುತ್ತದೆ. ಇದಕ್ಕೆ ಮನುಷ್ಯನ ಆಂತರಿಕ ಶಕ್ತಿ ನಿರ್ದೇಶನ ನೀಡಬೇಕು,

ನೀಡುತ್ತದೆ. ಹೀಗೆ ನಾಗರಿಕತೆ ಅಭಿವೃದ್ಧಿಯಾಗುತ್ತದೆ. ಇದು ಸಮಾಜದ ಪ್ರತಿ ವ್ಯಕ್ತಿಯಲ್ಲೂ ಚೈತನ್ಯಗೊಳಿಸುವ ಅಥವಾ ಅಲ್ಪ ಸಂಖ್ಯೆಯ ಜನರಲ್ಲಾದರೂ ಇರಬೇಕು. ಮನೆಯ ಮಗು, ಶಾಲಾ ಕಾಲೇಜು ವಿದ್ಯಾರ್ಥಿ, ಉದ್ಯೋಗ ಹುಡುಕುವ ತರುಣ, ನಂತರ ಸಂಸಾರದ, ಸಮಾಜದ, ರಾಜಕೀಯದ ಮತ್ತು ಇತರ ಜವಾಬ್ದಾರಿಗಳು ಆಯಾ ವ್ಯಕ್ತಿ ಗುಂಪು ಸವಾಲೆನ್ನೆದುರಿಸಬೇಕಾಗುತ್ತದೆ. ಅದಕ್ಕೆ ಅವನು ಜವಾಬನ್ನು ಹುಡುಕುವ ಕಾರ್ಯತತ್ಪರನಾಗುತ್ತಾನೆ. ಹೀಗೆ ಕ್ರಿಯೆ ಬೆಳೆದಂತೆ ನಾಗರಿಕತೆ ಬೆಳೆಯುತ್ತದೆ. ಅಲ್ಪ ಸಂಖ್ಯೆಯ ಬುದ್ಧಿವಂತ ಜನರು ಯಾವಾಗಲೂ ಎಲ್ಲದಕ್ಕೂ ತಯಾರಾಗಿರುತ್ತಾರೆ. ಆ ಗುಂಪಿನ ನಿರಂತರ ಕ್ರಿಯಾತ್ಮಕ ಚಟುವಟಿಕೆಯೇ ನಾಗರಿಕತೆ ಬೆಳೆಯುವ ಶಕ್ತಿ. ಆ ಗುಂಪು ಯೋಚಿಸಲಾರದಾದಾಗ, ಹೊಸ ಸಮಸ್ಯೆಗಳಿಗೆ ಹೊಸ ಪರಿಹಾರ ಕಂಡು ಹಿಡಿಯಲು ಅಶಕ್ತವಾದರೆ ನಾಗರಿಕತೆ ಸೊರಗುತ್ತದೆ, ನಿಲ್ಲುತ್ತದೆ, ವಿನಾಶದ ಅಂಚನ್ನು ಕಾಣುತ್ತದೆ. ಟಾಯ್ನಬಿಯ ಸಿದ್ಧಾಂತಕ್ಕೆ ಒಂದು ಆಧುನಿಕ ಉದಾಹರಣೆ ನಾವು ಕೊಡಬಹುದಾದರೆ 1947 ರ ಹಿಂದೆ ಭಾರತ ಸ್ವಾತಂತ್ರ್ಯಗಳಿಸುವ ಸಮಸ್ಯೆ ಎದುರಿಸಿ ಸ್ವೀಕರಿಸಿ ಏನೆಲ್ಲ ಪ್ರಯತ್ನಗಳಿಂದ ಸಾಧಿಸಿತು! ನಂತರ ಹೊಸ ಸಮಸ್ಯೆಗಳಾದ ಮತೀಯ ಭಾವನೆ, ಪ್ರಾಂತೀಯ ಭಾವನೆ, ಭಾಷಾತಿರೇಕ, ಬೆಳೆಯುತ್ತಿರುವ ಅನಕ್ಷರತೆ, ಹಿಡಿತದಲ್ಲಿಡಲಾಗದ ಜನಸಂಖ್ಯಾ ಹೆಚ್ಚಳ ಬಡತನ ಆಹಾರ, ಕೈಗಾರಿಕೆಗಳಲ್ಲಿ ಸ್ವಾವಲಂಬನೆಯ ಯತ್ನ, ಪರದೇಶಗಳ ಧಾಳಿ ಹೀಗೆ ಹಲವು ಹತ್ತು ಸಮಸ್ಯೆಗಳನ್ನೆದುರಿಸಬೇಕಾಯಿತು. ರಾಷ್ಟ್ರದ ಅಳಿವು-ಉಳಿವು, ಅಭಿವೃದ್ಧಿಗಾಗಿ ಅಲ್ಪ ಸಂಖ್ಯೆಯ ಬುದ್ಧಿವಂತ ಜನರು ಜೀವನ ಮರಣ ಹೋರಾಟದಲ್ಲಿ ದಿನಂಪ್ರತಿ ಹೋರಾಟ ನಡೆಸಬೇಕಾಯಿತು; ಅವರ ನಾಯಕತ್ವದಲ್ಲಿ ಸಮಸ್ಯೆಗಳೆದುರಾಗಿ ತಕ್ಕ ಕ್ರಿಯಾತ್ಮಕ ಪ್ರಯತ್ನಗಳಿಂದ ಉತ್ತರ ಹುಡುಕಲಾಯಿತು. ಹೀಗೆ ಇದೊಂದು ನಾಗರಿಕತೆಯ ನಿರಂತರ ಕಾರ್ಯತತ್ಪರತೆ.

ಟಾಯ್ನಬಿಯು ತನ್ನ 'ಇತಿಹಾಸದ ಒಂದು ಅಧ್ಯಯನ 26 ಸಂಗತಿಗಳನ್ನು ಅವಲೋಕಿಸಿದಾಗ ಕೆಲವು ಸಂಸ್ಕೃತಿಗಳು ಹೆಚ್ಚಾಗಿ ಬೆಳೆಯಲೇ ಇಲ್ಲ ಮತ್ತೆ ಕೆಲವು ಹುಟ್ಟಿದ ಸ್ವಲ್ಪ ಕಾಲದಲ್ಲೇ ಬೆಳೆಯಲಾಗದ ಹಂತಕ್ಕೆ ಬಂದು ನಿಂತವು. ಇಂಥವು ಇತಿಹಾಸಕಾರನ ಕಾರ್ಯಕ್ಕೆ ಸವಾಲೊಡ್ಡಿದವು. ಕೆಲವು ದೊಡ್ಡ ಸಾಮ್ರಾಜ್ಯಗಳು ಮೌರ್ಯ, ರೋಮ್, ಪರ್ಶಿಯಾ, ಅರಬ್, ಬ್ರಿಟಿಷರ- ಅತಿಯಾಗಿ ಭೌಗೋಳಿಕವಾಗಿ ಬೆಳೆದು ಒಗ್ಗಟ್ಟು, ಹಿತರಕ್ಷಣೆಗಳ ವಿರುದ್ಧ ಬೆಳೆದು ತಮ್ಮ ಅತಿ ಭಾರದ ಬೆಳವಣಿಗೆಯಿಂದ ತಾನೇ ಕುಸಿದವು. ಅತಿ ಹೆಚ್ಚಿನ ವಿಜ್ಞಾನದ ಬೆಳವಣಿಗೆ, ತಾಂತ್ರಿಕ ಜ್ಞಾನ ಮುಂತಾದವೇ ನಾಗರಿಕತೆಯ ಹೆಚ್ಚಳವಲ್ಲ. ಆ ಕಾರಣದಿಂದಲೇ ಜರ್ಮನಿಯ ಸಾಮ್ರಾಜ್ಯವೂ ಇತರ ಸಾಮ್ರಾಜ್ಯಗಳು ನಾಶವಾಗಿ ನುಚ್ಚು ನೂರಾದವು. ಈಗಲೂ ಎಷ್ಟೋ ರಾಷ್ಟ್ರಗಳು ಸ್ವ ಪ್ರತಿಷ್ಠೆಗಾಗಿ ತಮ್ಮ ಆದಾಯದ ಹೆಚ್ಚು ಪಾಲನ್ನು ವಿನಾಶಕ ಆಯುಧಗಳಿಗಾಗಿ ವೆಚ್ಚ ಮಾಡುತ್ತಾ ಬಡತನ ನಿವಾರಣೆ, ಹಸಿವಿನ ನಿವಾರಣೆ, ಅಜ್ಞಾನ ನಿವಾರಣಾ ಕಾರ್ಯಗಳಲ್ಲಿ ಹಿಂದೆ ಬಿದ್ದಿವೆ. ನಾಗರೀಕತೆಯು ಏನು ಸಮಸ್ಯೆಗಳನ್ನೊಡ್ಡಿದೆ ಎಂದು ರಾಷ್ಟ್ರಗಳು ತಿಳಿದುಕೊಳ್ಳಬೇಕಾಗಿದೆ. ಅನಾಗರಿಕತೆಗಳು ನಾಶವಾಗುವುದಿಲ್ಲ: ಯಾರೂ ನಾಶಮಾಡಲಾರರು. ಆದರೆ ನಾಗರಿತೆಗಳು ಆತ್ಮಹತ್ಯೆ ಮಾಡಿಕೊಳ್ಳುತ್ತವೆಂದು ಟಾಯ್ನಬಿ ಅಭಿಪ್ರಾಯ ಪಟ್ಟಿದ್ದಾನೆ. ಇಂಥ ಮೇಲೆ ಹೇಳಿದ ಸಂದರ್ಭಗಳಲ್ಲಿ ನಾಗರಿಕತೆಯ ಬೆಳವಣಿಗೆಯೆಂದರೆ ಪ್ರಭುದ್ಧವಾಗಿ, ಒಟ್ಟಾಗಿ ಆಂತರಿಕವಾಗಿ ಸ್ವಯಂ ಶಕ್ತಿ, (ಆತ್ಮಶಕ್ತಿ- ತನ್ನಶಕ್ತಿ) ಯನ್ನು ಬೆಳೆಸಿಕೊಂಡು ಆತ್ಮ ನಿರ್ಧಾರಗಳನ್ನು ಮಾಡುವ ಸಾಮರ್ಥ್ಯ ಪಡೆದುಕೊಳ್ಳಬೇಕು. ತನ್ನ ಕರ್ತವ್ಯವನ್ನು ಮನಸಾರೆ ಮಾಡುವುದೇ ಉತ್ತಮ ಸಂಸ್ಕೃತಿ. ಹೀಗೆಂದರೆ ಸಮುದಾಯವು ತನ್ನ ಕೆಲಸ ಮಾಡಿಕೊಳ್ಳಲು ಶಕ್ತಿಪಡೆದುಕೊಳ್ಳಬೇಕು. ಇತರರನ್ನು ನಂಬಿ, ಅವರ ಸಹಾಯದಿಂದ ಕಾರ್ಯ ಮಾಡುತ್ತವೆಂದರೆ ಅದು ಕೀಳು ನಾಗರಿಕತೆಯ ಮಟ್ಟವೆಂದು ಟಾಯ್ನಬಿ ಹೇಳುತ್ತಾನೆ. ಅಂಥವು ಪ್ರಗತಿ ಸಾಧಿಸಲಾರವು.

ಟಾಯ್ನಬಿಯ ಸಮಾಜದ ಅಭಿವೃದ್ಧಿ ಮತ್ತು ಒಟ್ಟಾಗಿ ಪ್ರಯತ್ನಿಸುವ 'ಸ್ವರ್ಗೀಯ' ಮೌಲ್ಯದ (ಇಥಿರಿಯಲೈಷನ್) ಪ್ರಯತ್ನವು ಸರಳವಾಗಿರಬೇಕು. ಇದೇ ಸಮಾಜ ಪ್ರಗತಿಯ ರಹಸ್ಯ ಎಂದಿದ್ದಾನೆ. ಅವನ ಅಭಿಪ್ರಾಯದಲ್ಲಿ 'ಸ್ವರ್ಗೀಯ'ವೆಂದರೆ ಉತ್ತಮವಾದ, ಚೊಕ್ಕಟವಾದ ಮತ್ತು ದೈವೀಭೂತ ಯತ್ನ. ಇದರಿಂದ ಸಮಾಜವು ಉತ್ತಮ ನೈತಿಕ ಮಟ್ಟದಲ್ಲಿರುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾನೆ. ಈ ಭಾವನೆ 'ಪೌರ್ವಾತ್ಯ' ತತ್ವಗಳಿಗೆ ಬಹಳ ಹತ್ತಿರವಾಗಿದೆ. ಕ್ರಿಶ್ಚಿಯನ್ನರು, ಬೌದ್ಧಮತೀಯರು ಇದೇ ಅಭಿಪ್ರಾಯ ಹೊಂದಿದವರಾಗಿದ್ದಾರೆ. ಗಾಂಧೀಜಿಯವರು ಹೇಳಿರುವಂತೆ ಸಮಾಜದ ಬದುಕು ಸರಳವಾಗಿರಬೇಕು. ಅತಿ ಯಾಂತ್ರೀಕರಣದಿಂದ ದೇಹಕ್ಕೂ, ಬುದ್ಧಿಗೂ ತೊಂದರೆ ಎಂಬ ಅಭಿಪ್ರಾಯವನ್ನು ಟಾಯ್ನಬಿ ಪುಷ್ಟೀಕರಿಸುವಂತಿದೆ.

### 25.2.1 *ಟಾಯನ್ಬಿಯವರ ಅಲ್ಪಸಂಖ್ಯಾತರ ಕ್ರಿಯೆಗಳು*

ಟಾಯ್ನಬಿಯ ಮತ್ತೊಂದು ಸಿದ್ಧಾಂತವೆಂದರೆ ಅಂತರ ಸಾಮಾಜಿಕ ಮತ್ತು ವ್ಯಕ್ತಿಗಳಲ್ಲಿಯ ಆಂತರಿಕ ಸಂಬಂಧಗಳಲ್ಲಿ ನಡೆಯುತ್ತಿರುವ ನಿರಂತರ ಸೃಜನಾತ್ಮಕವಾದ 'ಹಿಂತೆಗೆದುಕೊಳ್ಳುವುದು ಮತ್ತು ಪುನರಾಗಮನ' (ವಿತ್‌ಡ್ರಾಲ್ ಮತ್ತು ರಿಟರ್ನ್) ಅಂದರೆ ಸಮಾಜದ ಅಲ್ಪಸಂಖ್ಯಾತರೂ ಒಳ್ಳೆಯ ಮೋಹಕ ವ್ಯತ್ತಿ ಉಳ್ಳವರೂ ಆದವರು ಪ್ರಗತಿಯಪಥದಲ್ಲಿ ಪರಿಸರದಲ್ಲಿ ಹೊಸ ಸವಾಲು-ಜವಾಬುಗಳ ಹೊಸ ಆಕ್ಷೇಪಗಳನ್ನು ಪ್ರತಿಭಟಿಸುವ ಯೋಗ್ಯತೆಯನ್ನು ಪಡೆಯುವುದೇ ಆಗಿದೆ. ಈ ಅಭಿಪ್ರಾಯವನ್ನು ವಿಸ್ತರಿಸಿ ಹೇಳುವುದಾದರೆ ಒಂದು ನಾಗರಿಕತೆಯ ಹುಟ್ಟಿಗೆ ಒಂದು ಪರಿಸರಬೇಕು: ಅದು ಬೆಳೆಯಲು ಮತ್ತೊಂದು ರೀತಿಯ ಪರಿಸರ ಬೇಕು. ಇದರಿಂದ ಸಮಾಜವೂ ವ್ಯಕ್ತಿಗಳೂ, 'ಹಿಂತೆಗೆಯುವುದು' ಮತ್ತು 'ಪುನರಾಗಮನ' ಆಡುವುದು ಅವಶ್ಯಕವೆನಿಸುತ್ತದೆ. ಇಂಥದು ಸಂಸಾರದಲ್ಲೂ, ಸಮಾಜದಲ್ಲೂ, ಸರ್ಕಾರದ ಆಡಳಿತದಲ್ಲೂ ನಡೆಯುತ್ತಿರುವ ನಿರಂತರ ಕಾರ್ಯ. ಇದಕ್ಕೆ ಒಂದು ಉದಾಹರಣೆಯೆಂದರೆ ಬ್ರಿಟಿಷರು ಭಾರತವನ್ನು ಆಳಲು ಕಳುಹಿಸಿದ ಕೆಲವು ಗವರ್ನರ್ ಜನರಲ್ಲುಗಳು, ವೈಸಾರಾಯ್‌ಗಳು ಜನಗಳ ಅಭಿಪ್ರಾಯವನ್ನು ಧಿಕ್ಕರಿಸುವವರೂ, ಕೆಲವರು ಸಮಾಧಾನಗೊಳಿಸುವವರೂ ಆಗಿದ್ದರು. ಇದು ಆಡಳಿತದ ಉದ್ದೇಶ ಕಾರ್ಯ ನಿರ್ವಹಣೆಗೆ ಅವಶ್ಯಕವಾಗಿದ್ದಿತು. ಯಾವುದೇ ಕೆಲಸವನ್ನು ಅತಿ ನಿಷ್ಠುರವಾಗಿ ಆಗಲಿ, ಅತಿ ಮೆದುವಾಗಿ ಆಗಲೀ ಅತಿ ಮಹತ್ವಾಕಾಂಕ್ಷೆಯಿಂದಾಗಲೀ ಮಾಡಿದಾಗ ಅನಾವಶ್ಯಕ ಪರಿಣಾಮಗಳಾಗುತ್ತವೆ. ಅದಕ್ಕೆ ಮದ್ದು ಟಾಯ್ನಬಿ ಹೇಳಿರುವ 'ಹಿಂತೆಗೆದುಕೋ, ಪುನರಾಗಮನ' ಮಾಡು ಸಿದ್ಧಾಂತ.

ಅವನ ಮತ್ತೊಂದು ಸಿದ್ಧಾಂತವೆಂದರೆ ಒಂದು ಬೆಳೆಯುತ್ತಿರುವ ನಾಗರಿಕತೆಯು ಒಗ್ಗಟ್ಟಿಗೆ ಅವಕಾಶ ಮಾಡಿಕೊಡುತ್ತದೆ. ಸಮಾಜದ ಕೆಲವರು ತಮ್ಮ ಆಕರ್ಷಕ ವ್ಯಕ್ತಿತ್ವದಿಂದ ದೇಶದ ಒಳಗಿರುವ ಸಮಾಜದ ಅತ್ಯಂತ ಕೀಳುದರ್ಜೆಯ ಪಂಗಡಗಳ ಜನರನ್ನು ತಮ್ಮೆಡೆಗೆ ಸೆಳೆದು ತಮ್ಮ ಹಿಡಿತದಲ್ಲಿಟ್ಟುಕೊಳ್ಳುತ್ತಾರೆ. ಹಾಗೆಯೇ ಹೊರಗಿನ ದುಷ್ಟರನ್ನೂ ದೂರವಿಡುತ್ತಾರೆ. ಇದರಿಂದ ಆಂತರಿಕವಾಗಿ ಯಾವ ಹೋರಾಟವಾಗಲೀ ಹೊರಗಿನವರ ಹೆದರಿಕೆಯಾಗಲೀ ಇರುವುದಿಲ್ಲ ಇಂಥವು ಬೇರೆ ಬೇರೆ ನಾಗರಿಕತೆಗಳಲ್ಲಿ ಬೇರೆ ಬೇರೆಯಾಗಿದ್ದು ತಮ್ಮ ಪ್ರಭಾವ ಬೀರುತ್ತವೆ.

ಟಾಯ್ನಬಿಯು ಮೂರನೇ ಸಮಸ್ಯೆ ನಾಗರಿಕತೆಗಳ ವಿಫಲತೆ, ಕರಗಿಹೋಗುವುದು (ಕಣ್ಮರೆಯಾಗುವುದು) ಏಕೆ ಮತ್ತು ಹೇಗೆ ಎಂಬುದು. ಅವನ ಅಧ್ಯಯನದಲ್ಲಿ ಮೂವತ್ತು ನಾಗರಿಕತೆಗಳಲ್ಲಿ ನಾಲ್ಕು ಸರಿಯಾಗಿ ಬೆಳೆಯಲಿಲ್ಲ 26 ಹುಟ್ಟಿದವು. ಅದರಲ್ಲಿ ಹದಿನಾರು ಈಗ ಸತ್ತು ಹೂಳಲ್ಪಟ್ಟಿವೆ. ಕಾರಣಗಳೇನು ಎಂಬುದೇ ಸಮಸ್ಯೆ, ಉಳಿದವಲ್ಲಿ ಪಾಲಿನೇಷಿಯನ್ ಮತ್ತು ನೊಮಾಡಿಕ್ ನಾಗರಿಕತೆಗಳು ಸಾವಿನ ಅಂಚಿನಲ್ಲಿವೆ, ಉಳಿದವೂ ನಾಶವಾಗುತ್ತಿವೆ. ಇದಕ್ಕೆ ಕಾರಣವೆಂದರೆ ನಾಶವಾಗುತ್ತಿರುವ ಕೆಲವು, ತಮ್ಮ ನಾಗರಿಕತೆಯ 'ಸವಾಲು ಜವಾಬು'ಗಳನ್ನು ಎದುರಿಸಲು ತಕ್ಕ ಶಕ್ತಿಯನ್ನು ಕಳೆದುಕೊಂಡಿವೆ ಇದನ್ನೇ ನಾಗರಿಕತೆಗಳು "ಕೊಲ್ಲಲ್ಪಡಲಿಲ್ಲ. ಆತ್ಮಹತ್ಯೆ" ಮಾಡಿಕೊಂಡವು ಎಂದು ಹೇಳುವುದು. ಇದಕ್ಕೆ ಕಾರಣಗಳೆಂದರೆ ಅಲ್ಪಸಂಖ್ಯಾತರ ಸೃಷ್ಟಿ ಶಕ್ತಿಯ ವಿಫಲತೆ, ಹೆಚ್ಚಿನ ಸಂಖ್ಯೆಯ ಜನಗಳ ವಿಧಿಯನ್ನೇ ನಂಬಿ ಕಾರ್ಯತತ್ಪರರಾಗದ ಉದಾಸೀನತೆ ಮತ್ತು ಮೇಲಿನ ಕಾರಣಗಳಿಂದ ಸಮಾಜದಲ್ಲುಂಟಾದ ಒಡಕು.

ಅವನತಿಯು ಸಹ ಮೂರು ಕೆಳಸ್ತರಗಳಲ್ಲುಂಟಾಗುತ್ತದೆ. ನಾಗರಿಕತೆಯು ಚಾಲನೆ ಕಳೆದುಕೊಳ್ಳುವುದು, ಒಳಗೊಳಗೆ ಭಿನ್ನತೆಗಳುಂಟಾಗುವುದು ಮತ್ತು ಅದು ಕಣ್ಮರೆಯಾಗುವುದೇ ಆ ಹಂತಗಳು. ಇವು ನಿಧಾನವಾಗಿ, ಶತಮಾನಗಳ ಅವಧಿಯಲ್ಲಾಗುವ ಕೊರತೆಗಳು ಅವುಗಳು ಅಂತರದಲ್ಲಿ ನಾಗರಿಕತೆ ಸ್ತಂಭೀಭೂತ (ನಿಶ್ಚೇಷ್ಟ) ವಾಗಿರುತ್ತದೆ. (ಫರ್ಟಿಫೈಡ್ ಲೈಫ್ ಇನ್ ಡೆತ್) ಸೃಷ್ಟಿಸುವ ಗುಣ ರಚನಾತ್ಮಕ ಬುದ್ಧಿ ಇರುವ ಕಡಿಮೆ ಸಂಖ್ಯೆಯಲ್ಲಿರುವ ಪ್ರಜೆಗಳು ಶಿಥಿಲವಾಗುತ್ತಿರುವ.(ಡಿಸ್‌ಇಂಟಿಗ್ರೇಷನ್ ಕಾಲದಲ್ಲಿ ಅಧಿಕಾರ ವಿಜಯದಿಂದ ಮದನ್ಮತ್ತರಾಗಿ, ಅತಿ ಅವಶ್ಯಕ ಕಾರ್ಯಗಳಿಂದ ವಿಮುಖರಾಗಿ (ರೆಸ್ಟ್ ಆನ್ ಓರ್ಸ್) ದೋಣಿ ನಡೆಸಲು ಹುಟ್ಟು ಹಾಕದೆ ಯಾವನೊಬ್ಬ ವ್ಯಕ್ತಿಯನ್ನು ದೈವಮೂರ್ತಿಯನ್ನಾಗಿ ಪರಿಗಣಿಸಿ (ಐಡಿಯೋಲೈಸ್) ಕೆಲವು ವಿಷಯಗಳಿಗೇ ಬೆಲೆಕಟ್ಟಿ ಅವನ್ನೇ ಪರಮ ಶ್ರೇಷ್ಠ (ಅಬ್ಸಲ್ಯೇಟ್) ವೆಂದು ತಿಳಿಯುತ್ತಾರೆ. ಇದಲ್ಲದೆ ಕೆಳಮಟ್ಟದಲ್ಲಿರುವ ದೇಶದ ಒಳಗಿನ ಮತ್ತು ಹೊರಗಿನ

ಜನಗಳನ್ನು ನಿಯಂತ್ರಿಸಲು ಹೆಚ್ಚು ಹೆಚ್ಚಾಗಿ ಬಲ ಪ್ರಯೋಗ ಮಾಡುತ್ತಾರೆ ಇದಕ್ಕೆ ಉದಾಹರಣೆಯೆಂದರೆ ಅಲ್ಪ ಸಂಖ್ಯೆಯ ಗ್ರೀಕರು (ಹೆಲೆನ್ಸ್) ವಿಸ್ತಾರವಾದ ರೋಮನ್ ಸಾಮ್ರಾಜ್ಯವನ್ನು ಸೃಷ್ಟಿಸಿ ಅದರ ಮೇಲೆ ತನ್ನತನವನ್ನು ಹೇರಿದಂತೆ ಇವರೂ ಹೊಸ ಸೃಷ್ಟಿಯನ್ನು ಮಾಡುತ್ತಾರೆ. ಅವರು ಯುದ್ಧಗಳಲ್ಲಿ ತೊಡಗುತ್ತಾರೆ ಮತ್ತು ತಾವೇ ಸೃಷ್ಟಿಸಿದ ಹಠಮಾರಿ ಸಂಸ್ಥೆಗಳಿಗೆ ದಾಸರಾಗಿ ತನ್ನ ನಾಗರೀಕತೆಯ ನಾಶಕ್ಕೆ ಕೆಲಸ ಮಾಡುತ್ತಾರೆ.

ಹೀಗೆ ಟಾಯ್ನಬಿಯ ಇತಿಹಾಸ ತರ್ಕದ ಚೌಕಟ್ಟು ತಯಾರಾಗಿದೆ. ಅವನು ಅದರಲ್ಲಿ ಬಹಳ ಉತ್ಕೃಷ್ಟವಾದ ವಿಷಯ ಸಂಪತ್ತನ್ನು ಶೇಖರಿಸಿದ್ದಾನೆ. ಅನುಭವಿಸಿದ್ದ ಮಾತುಗಳಿಂದ ವಿವರಿಸಿದ್ದಾನೆ. ಅನೇಕ ಉಪಸಿದ್ಧಾಂತಗಳನ್ನು, ತೀರ್ಮಾನಗಳನ್ನು ಸೇರಿಸಿದ್ದಾನೆ. ಅಗಾಧ ಶ್ರಮದಿಂದ ಪ್ರಪಂಚದಲ್ಲಿ ನಡೆದು ಬಂದ ಇಪ್ಪತ್ತೊಂದು ನಾಗರಿಕತೆಗಳನ್ನು ಪತ್ತೆ ಹಚ್ಚಿ, ಕೂಲಂಕುಷವಾಗಿ ವಿವರಿಸಿದ್ದಾನೆ. ಅವನ ಬರವಣಿಗೆ ಸರಳವಾಗಿ ವಿಷಯಗಳು ಸುಲಭವಾದ ರೀತಿಯಲ್ಲಿ ಹೇಳಲ್ಪಟ್ಟು, ಆಕರ್ಷಕ ಶೈಲಿಯಲ್ಲಿದೆ. ಅವನ ನಿರೂಪಣೆಯ, ಹೊಸ ಮಾದರಿಯಾಗಿದೆ. ಈ ಕಾರಣಗಳಿಂದ ಅವನ ಬರವಣಿಗೆಯ ಪ್ರಭಾವ ಇತಿಹಾಸದಲ್ಲಿ ಅಚ್ಚಳಿಯದೆ ನಿಂತಿದೆ. ಅವನನ್ನು ಇಪ್ಪತ್ತನೆಯ ಶತಮಾನದ ಅತ್ಯಂತ ಶ್ರೇಷ್ಠ ಚಿಂತಕನೆಂದೂ, ಶ್ರೇಷ್ಠ ಬರಹಗಾರರಲ್ಲಿ ಒಬ್ಬನೂ ಎಂದು ಕರೆಯಲಾಗಿದೆ.

ಇಷ್ಟಾದರೂ ಅವನ ಸಿದ್ಧಾಂತಗಳ ಮೇಲೆ ಟೀಕೆಗಳೂ ಇವೆ. 'ಅಂತಃಶಕ್ತಿ', 'ಆಂತರಿಕ ಸ್ವಯಂ ನಿರ್ಧಾರ' ಸ್ವಯಂ ಸ್ಪಷ್ಟೋಚಾರ' ಸ್ವರ್ಗೀಯ ಭಾವನೆ' ಮುಂತಾದವು ಯಾವುದೋ ಗುಪ್ತಾರ್ಥಕ (ಮಿಸ್ಟಿಕ್) ಗಳಂತೆ ಕಾಣುತ್ತವೆ. ಅವನಿಗೆ ಚರತ್ರೆಯಲ್ಲಿಯ ವಿಧಾನಗಳಲ್ಲಿಯ ಬಗ್ಗೆ ಪೂರ್ವಾಗ್ರಹಗಳಿದ್ದು ಅದಕ್ಕನುಸಾರವಾಗಿ ತನ್ನ ತೀರ್ಮಾನಗಳನ್ನು ಮಾಡಿದ್ದಾನೆ. ಅವನ ಸಿದ್ಧಾಂತಗಳು ಕೇವಲ ಕೆಲವು ನಾಗರಿಕತೆಗಳ ಕೂಲಂಕಷ ಅಧ್ಯಯನದಿಂದ ತೀರ್ಮಾನವಾಗಿವೆ. ಅವನ ಬರಹ ನಿಜವಾದ ಇತಿಹಾಸವಲ್ಲ. ಅದು ಪಾರಮಾರ್ಥ ವಿದ್ಯೆ; ಭೌತಾತೀತ ವಿದ್ಯೆಯ ಒಂದು ನಿಬಂಧವಾಗಿದೆ. ಅದು ಮತ ಧರ್ಮವನ್ನು ಹೊಗಳುವ ಮತ್ತು ದೇವರನ್ನು ಸ್ತುತಿಸುವ ಕಾವ್ಯದಂತಿದೆ. ಅದೊಂದು ರೂಪಾಂತರ ಇತಿಹಾಸ ಎಂದಿದ್ದಾರೆ. ಆದರೆ ಅವನ ಪ್ರಕೃತಿಯ ಶ್ರೇಷ್ಠತೆ ಬಗ್ಗೆ ಭಿನ್ನಾಭಿಪ್ರಾಯಗಳಿಲ್ಲ.

## 25.3 ಘಟಕದ ಸಾರಾಂಶ

ಈ ಘಟಕದ ಅಧ್ಯಯನದಿಂದ ನಾವು ಕೆಳಕಂಡ ವಿಷಯಗಳನ್ನು ತಿಳಿದುಕೊಂಡೆವು.

* ವೈಜ್ಞಾನಿಕ ಇತಿಹಾಸ ಸಂಶೋಧನೆಯ ನಿರೂಪಕರಾದ ಆರ್ನಾಲ್ಡ್ ಟಾಯ್ನಬಿಯವರ ಬಗ್ಗೆ ತಿಳಿದುಕೊಂಡೆವು.
* ಟಾಯನ್ಬಿಯವರ ಇತಿಹಾಸ ಸಿದ್ಧಾಂತ ನಿರೂಪಣೆಯನ್ನು ಅರ್ಥ ಮಾಡಿಕೊಂಡೆವು.
* ಇತಹಾಸದಲ್ಲಿ ಸಂಸ್ಕೃತಿಯ ಹುಟ್ಟು, ಬೆಳವಣಿಗೆ ಮತ್ತು ಪತನದ ಬಗ್ಗೆ ತಿಳಿದುಕೊಂಡೆವು.
* ಇತಿಹಾಸದ ಸವಾಲು ಮತ್ತು ಜವಾಬು ತತ್ವದ ಅಳವಡಿಕೆಯ ಬಗ್ಗೆ ಅರಿತುಕೊಂಡೆವು.
* ಅಲ್ಪಸಂಖ್ಯಾತರ ಕ್ರಿಯಾತ್ಮಕ ಚಟುವಟಿಕೆಗಳ ಬಗ್ಗೆ ಅರ್ಥ ಮಾಡಿಕೊಂಡೆವು.

## 25.4 ಸ್ವಯಂ ಪರಿಶೀಲನಾ ಪ್ರಶ್ನೆಗಳು

1. ಆರ್ನಾಲ್ಡ್ ಟಾಯನ್ಬಿಯವರ ಇತಿಹಾಸ ಸಿದ್ಧಾಂತವನ್ನು ಬರೆಯಿರಿ.
2. ಟಾಯನ್ಬಿಯವರ "ಸವಾಲು ಜವಾಬು ಮತ್ತು ಸಂಸ್ಕೃತಿ" ಕುರಿತು ಚರ್ಚಿಸಿ.

## 25.5 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. Sheik Ali .B. : History; Its Theory and Method

2. ವೆಂಕಟರತ್ನಂ ಮತ್ತು ಪದ್ಮ : ಇತಿಹಾಸ ಸಂಶೋಧನಾ ಮಾರ್ಗ.

# ಘಟಕ - 26 ಪ್ರಾಚೀನ ಹಾಗೂ ಮಧ್ಯಕಾಲೀನ ಭಾರತದ ಇತಿಹಾಸ ಬರವಣಿಗೆ

*ರಚನೆ*

26.0 ಉದ್ದೇಶಗಳು

26.1 ಪ್ರಸ್ತಾವನೆ

26.2 ಪ್ರಾಚೀನ ಉತ್ತರ ಭಾರತದ ಇತಿಹಾಸ ಬರವಣಿಗೆ

26.3 ಪ್ರಾಚೀನ ದಕ್ಷಿಣ ಭಾರತದ ಇತಿಹಾಸ ಬರವಣಿಗೆ

26.4 ದೆಹಲಿ ಸುಲ್ತಾನರ ಕಾಲದ ಇತಿಹಾಸ ಬರವಣಿಗೆ

26.5 ಮೊಘಲರ ಕಾಲದ ಇತಿಹಾಸ ಬರವಣಿಗೆ

26.6 ಉಪಸಂಹಾರ

26.7 ಸ್ವಯಂ ಮೌಲ್ಯಮಾಪನ ಪ್ರಶ್ನೆಗಳು

26.8 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 26.0 ಉದ್ದೇಶಗಳು

ಘಟಕ 26ನ್ನು ಅಧ್ಯಯನ ನಡೆಸಿದ ನಂತರ ನಾವು ಭಾರತ ಇತಿಹಾಸ ಬರವಣಿಗೆಯಲ್ಲಿ ಕಂಡುಬರುವ ಪ್ರಾಚೀನ ಹಾಗೂ ಮಧ್ಯಕಾಲೀನ ಭಾರತದ ಇತಿಹಾಸ ಬರವಣಿಗೆಯ ಬಗ್ಗೆ ತಿಳಿದುಕೊಳ್ಳುತ್ತೇವೆ. ಇದಲ್ಲದೆ ಪ್ರಾಚೀನ ಉತ್ತರ ಭಾರತದ ಇತಿಹಾಸ ಬರವಣಿಗೆಯಲ್ಲಿ ಕಂಡು ಬರುವ ಇತಿಹಾಸಕಾರರು ಹಾಗೂ ಅವರ ಗ್ರಂಥಗಳನ್ನು ಅಧ್ಯಯನ ನಡೆಸುತ್ತೇವೆ. ಇದರ ಜೊತೆಗೆ ಪ್ರಾಚೀನ ದಕ್ಷಿಣ ಭಾರತದ ಇತಿಹಾಸ ಬರವಣಿಗೆಯಲ್ಲಿ ಕಂಡು ಬರುವ ಇತಿಹಾಸಕಾರರು ಹಾಗೂ ಅವರ ಉದ್ ಗ್ರಂಥಗಳನ್ನು ತಿಳಿಯುತ್ತೇವೆ. ಜೊತೆಗೆ ದೆಹಲಿ ಸುಲ್ತಾನರ ಕಾಲದ ಮುಸ್ಲಿಂ ಇತಿಹಾಸಕಾರರು ಹಾಗು ಹಿಂದೂ ಇತಿಹಾಸಕಾರರು ಹಾಗು ಅವರ ಗ್ರಂಥಗಳನ್ನು ಸಹ ಅಭ್ಯಸಿಸುತ್ತೇವೆ. ಕೊನೆಯಲ್ಲಿ ಮೊಗಲರ ಕಾಲದ ಇತಿಹಾಸ ಬರವಣಿಗೆಯಲ್ಲಿ ಕಂಡುಬರುವ ಇತಿಹಾಸಕಾರರು ಮತ್ತು ಅವರು ರಚಿಸಿರುವ ಗ್ರಂಥಗಳ ಬಗ್ಗೆಯೂ ಸಹ ಸವಿಸ್ತಾರವಾದ ಅಧ್ಯಯನವನ್ನು ನಡೆಸಲಾಗುವುದು.

## 26.1 ಪ್ರಸ್ತಾವನೆ

ಪ್ರಾಚೀನ ಯುಗದ ಭಾರತೀಯರಲ್ಲಿ ಐತಿಹಾಸಿಕ ಪ್ರಜ್ಞೆ ಇದ್ದೀತೆ ಅಥವಾ ಇಲ್ಲವೇ ಎಂಬುದರ ಬಗ್ಗೆ ಚರ್ಚೆ ನಡೆಯುತ್ತಲೇ ಇದೆ. ಒಂದು ಪಂಥದವರ ಪ್ರಕಾರ ಅವರಲ್ಲಿ ಐತಿಹಾಸದ ದೃಷ್ಟಿಯ ಅಭಾವವಿದ್ದಿತು. ಅದಕ್ಕೆ ವಿರುದ್ಧವಾಗಿ ಇನ್ನೊಂದು ಪಂಥದವರು ಅವರಲ್ಲಿ ಐತಿಹಾಸಿಕ ದೃಷ್ಟಿ ಇದ್ದೇ ಇದ್ದಿತು, ಅದು ಜೀವನದ ಅತ್ಯುತ್ತಮ ಧ್ಯೇಯಕ್ಕೆ ಅಭಿಮುಖವಾಗಿದ್ದಿತು. ಅಂದರೆ ಅದು ಬುದ್ಧನ ಉದಾತ್ತ ಉದ್ದೇಶಕ್ಕಾಗಿ ಮೀಸಲಾಗಿದ್ದಿತು. ವಿಶ್ವ ಪ್ರಜ್ಞೆಯನ್ನು ಬೆಳೆಸಿಕೊಂಡು ಬ್ರಹ್ಮಾಂಡವನ್ನೇ ಗ್ರಹಿಸಿಕೊಂಡಿದ್ದ ಪ್ರಾಚೀನ ಭಾರತೀಯ ತಮ್ಮ ಸುತ್ತಮುತ್ತ ಸಂಭವಿಸಿದ ಘಟನೆಗಳನ್ನು ವಿವರಿಸುವಂತಹ ಸರಳ ಕಾರ್ಯಕ್ಕೆ ಅಷ್ಟಾಗಿ ಗಮನವನ್ನು ಕೊಡಲಿಲ್ಲ ಎಂಬುದಾಗಿ ವಾದಿಸುತ್ತಾರೆ. ಇನ್ನೂ ಕೆಲವರು ಪ್ರಾಚೀನ ಭಾರತೀಯರು ನಿರ್ದಿಷ್ಟ ಇತಿಹಾಸವನ್ನು ರಚಿಸಲಿಲ್ಲವಾದರೂ, ಚರಿತ್ರೆಗೆ ಸಂಬಂಧಿಸಿದ್ದ ಅಪೂರ್ವ ಹಾಗೂ ಅಪಾರ ಭಾವನೆಗಳ ಪೂರ್ಣ ಪರಿಚಯ ಅವರಿಗಿದ್ದಿತು ಎಂಬುದಾಗಿ ಅಭಿಪ್ರಾಯ ಪಡುತ್ತಾರೆ. ಪ್ರಾಚೀನ ಭಾರತದಲ್ಲೂ ಅಪಾರ ಐತಿಹಾಸಿಕ ಸಾಹಿತ್ಯ ಸಂಪತ್ತು ಇದ್ದಿತು. ಆದರೆ ಅದು ಕಾಲದ ಹೊಡೆತ ಹಾಗೂ ದಾಳಿಗಳ ಹಾವಳಿಯ ಕಾರಣ ಹಾಳಾಗಿ ಹೋಗಿದೆ ಎಂಬುದಾಗಿ ಸುರೇಂದ್ರನಾಥ ಬ್ಯಾನರ್ಜಿಯು ಮುಂದಿಟ್ಟಿರುವ ವಾದ ಸರಿಯಾದುದಲ್ಲ. ಕಾರಣ ದರ್ಶನ, ವ್ಯಾಕರಣ, ಪದ್ಯ, ಕಲೆ, ವೈದ್ಯ ಹಾಗೂ ಖಗೋಳಶಾಸ್ತ್ರ ಮುಂತಾದ ಸಾಹಿತ್ಯದ ಎಲ್ಲಾ ಬಗೆಗಳ ಬಗ್ಗೆ ಪ್ರಾಚೀನ ಭಾರತೀಯರು ರಚಿಸಿರುವ ಕೃತಿಗಳು ಈಗಲೂ ಲಭ್ಯವಿರುವಾಗ, ಕಾಲ ಅಥವಾ ವಿಧಿ ಅಥವಾ ದಾಳಿಕಾರರು ಕೇವಲ ಇತಿಹಾಸದ ಸಾಹಿತ್ಯವೊಂದನ್ನು ಮಾತ್ರ ಆರಿಸಿಕೊಂಡು ಸಂಪೂರ್ಣವಾಗಿ ನಾಶಪಡಿಸಿದರೆಂಬುದಾಗಿ ಸಮರ್ಥಿಸುವುದು ಸಾಧ್ಯವೇ ಇಲ್ಲ. ಒಂದು ವೇಳೆ ಇತಿಹಾಸ ಸಾಹಿತ್ಯವು ದುರದೃಷ್ಟವಶಾತ್ ಹಾಳಾಗಿ ಹೋಯಿತೆಂಬುದಾಗಿ ಒಪ್ಪಿಕೊಂಡರೂ, ಆನಂತರ ತಲೆದೋರಿದ ಅಸಂಖ್ಯಾತ ದಾಖಲೆಗಳಲ್ಲಿ ಅದರ ಬಗ್ಗೆ ಖಂಡಿತವಾಗಿ ಉಲ್ಲೇಖಗಳು ಇದ್ದೇ ಇರುತ್ತಿದ್ದವು. ಆದರೆ ಆ ತರಹದ ಉಲ್ಲೇಖಗಳಾವುವು ಇಲ್ಲ.

ಆರ್.ಸಿ. ಮಜುಂದಾರ್ ಅವರಂತಹ ಪಂಡಿತರ ಅಭಿಪ್ರಾಯದಲ್ಲಿ ಪ್ರಾಚೀನ ಭಾರತದ ಇತಿಹಾಸ ಸಾಹಿತ್ಯ ಅಭಾವದಿಂದ ಯಾರೂ ನಿರಾಶರಾಗಬೇಕಾಗಿಲ್ಲ. ಕಾರಣ ಅಪಾರವಾದ ಐತಿಹಾಸಿಕ ವಿಷಯ ಸಾಮಗ್ರಿಗಳಿವೆ. ಅವುಗಳು ಹೆರೋಡೋಟಸ್ ಅಥವಾ ಥೂಸಿಡಿಡಿಸ್ ಅಥವಾ ಲಿವಿ ಅಥವಾ ಇಬ್ನೆ - ಖಲ್ದೂನ್ ನಿರೂಪಿಸಿರುವ ರೀತಿಯಲ್ಲಿ ಇಲ್ಲದಿರಬಹುದಾದರೂ ಅವುಗಳು ಹೆಚ್ಚು ಶುದ್ಧವಾಗಿವೆ, ವ್ಯಾಪಕವಾಗಿವೆ, ಅರ್ಥಗರ್ಭಿತವಾಗಿವೆ ಮತ್ತು ಬೆಲೆಬಾಳುವಂತಹುಗಳಾಗಿವೆ. ಅವುಗಳ ಶೈಲಿ ಅತ್ಯಂತ ಮನೋರಂಜಕವಾಗಿದೆ. ಜಗತ್ತಿನ ಎಲ್ಲಾ ಸಮಾಜಗಳು ಒಂದು ನಿರ್ದಿಷ್ಟ ಇತಿಹಾಸದ ಮಾದರಿಯನ್ನೇ ಅನುಸರಿಸಬೇಕಾಗಿಲ್ಲ. ಸೃಜನಶೀಲ ಚರಿತ್ರೆಯು ಆಯಾಯ ಜನರ ಸಹಜ ಗುಣ ಹಾಗೂ ಮನೋಧರ್ಮಗಳಿಗೆ ಅನುಗುಣವಾಗಿರಬೇಕು. ಇತರರು ದೊರೆಗಳ ವಂಶಾವಳಿಗಳನ್ನು ಕಾಲಾನುಕ್ರಮದಲ್ಲಿ ನಿರೂಪಿಸಿದರೆ, ಪ್ರಾಚೀನ ಭಾರತೀಯರು ಅವುಗಳನ್ನು ವಿಶ್ವದ ಹಿನ್ನೆಲೆಯಲ್ಲಿ ವಿವರಿಸಿದರು. ಅವರ ಕಲ್ಪನೆಯು ಗತಕಾಲಕ್ಕೆ ಮಾತ್ರ ಸೀಮಿತವಾಗಿರಲಿಲ್ಲ.

ಆದರೂ ಪ್ರಾಚೀನ ಭಾರತದ ರಾಜಕೀಯ ಇತಿಹಾಸ ಸಮರ್ಪಕವಾಗಿಲ್ಲ. ವಾಲ್ಮೀಕಿ, ಪಾಣಿನಿ, ವ್ಯಾಸ, ಕಾಳಿದಾಸ ಮುಂತಾದವರ ಕಾಲವನ್ನು ಸರಿಯಾಗಿ ನಿರ್ಧರಿಸುವುದಕ್ಕೆ ಸಾಧ್ಯವಾಗಿಲ್ಲ. ಲಭ್ಯವಿರುವ ಸಾಹಿತ್ಯ ವಿಧಿಗಳಿಂದ ಸಾಂಸ್ಕೃತಿಕ ಅಥವಾ ಸಾಮಾಜಿಕ ಚರಿತ್ರೆಯನ್ನು ರಚಿಸಬಹುದು ಎಂಬುದು ನಿಜ. ಆದರೆ ಒಂದು ನಿರ್ದಿಷ್ಟ ರಾಜಕೀಯ ಇತಿಹಾಸವಿಲ್ಲದಿದ್ದಾಗ, ಆ ಬಗೆಯ ಚರಿತ್ರೆಯ ಮೂಳೆಯ ಆಧಾರವಿಲ್ಲದಿದ್ದಾಗ ತನ್ನ ನಿಯತ ಸ್ಥಾನವನ್ನು ಒಟ್ಟು ಬಿದ್ದು ಹೋಗುವ ಮಾಂಸದಂತೆ ಅನುಪಯುಕ್ತವಾಗುತ್ತದೆ. ಆದರೂ ಅವರ ಐತಿಹಾಸಿಕ ಪ್ರಜ್ಞೆಯನ್ನು ಸಂಪೂರ್ಣವಾಗಿ ಖಂಡಿಸಿ, ಅವರಲ್ಲಿ ಇತಿಹಾಸವೇ ಇರಲಿಲ್ಲ ಎಂಬುದಾಗಿ ಹೇಳಲು ಸಾಧ್ಯವಾಗುವುದಿಲ್ಲ.

ಆದ್ದರಿಂದ ಪ್ರಾಚೀನ ಭಾರತದಲ್ಲಿ ಸಂಪೂರ್ಣವಾಗಿ ಐತಿಹಾಸಿಕ ಸಾಹಿತ್ಯ ಇರಲೇ ಇಲ್ಲ ಎಂದರೆ ಸರಿಯಾಗುವುದಿಲ್ಲ. ಪರಂಪರೆಯಾಗಿ ಬಂದಿರುವ ಎತಿಹ್ಯ, ಕಾಲ್ಪನಿಕ ಕಥನ, ದಂತಕಥೆ, ವೇದಸಾಹಿತ್ಯ, ಮಹಾಕಾವ್ಯ, ಪುರಾಣ ಮುಂತಾದ ಅನೇಕ ರೀತಿಯ ಸಾಹಿತ್ಯ ದಾಖಲೆಗಳಲ್ಲಿ ಅಪಾರವಾಗಿರುವ ಐತಿಹಾಸಿಕ ವಿಷಯ ಸಾಮಗ್ರಿಗಳಿವೆ. ಇವುಗಳಲ್ಲದೆ ಶಿಲಾಶಾಸನಗಳು ಹಾಗೂ ತಾಮ್ರ ಪಟಗಳು ಅಸಂಖ್ಯಾತವಾಗಿವೆ. ಅವುಗಳನ್ನೆಲ್ಲಾ ಪ್ರಕಟಿಸುವುದಕ್ಕೆ ಅನೇಕ ವರ್ಷಗಳೇ ಬೇಕಾಗುತ್ತವೆ. ಈಗ ಪ್ರಕಟವಾಗಿರುವ ದಾಖಲೆಗಳು ಎಷ್ಟು ಬೃಹತ್ತಾಗಿದೆ ಹಾಗೂ ಪರಿಣಾಮಕಾರಕವಾಗಿವೆಯೆಂದರೆ ಮತ್ತಾವ ದೇಶದ ದಾಖಲೆಗಳು ಅವುಗಳಿಗೆ ಸರಿದೂಗಲಾರವು. ಇರುವ ಅನೇಕ ಸಮಕಾಲೀನ ದಾಖಲೆಗಳು ಆಯಾಯ ಕಾಲಗಳ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಆರ್ಥಿಕ ಪರಿಸ್ಥಿತಿಗಳು, ಯುದ್ಧ, ಸಣ್ಣ-ಪುಟ್ಟ ಕಾಳಗ, ರಾಜ ರಾಣಿಯರು, ರಾಜಕೀಯ ಸಂಸ್ಥೆ ಮತ್ತು ಆಡಳಿತದ ವಿವರಗಳ ಮೇಲೆ ಗಮನಾರ್ಹವಾದ ರೀತಿಯಲ್ಲಿ ಬೆಳಕನ್ನು ಬೀರುತ್ತವೆ. ಅವುಗಳು ವಂಶಾವಳಿ, ಕಾಲಾನುಕ್ರಮ, ಆಳಿದ ಸಂತತಿಗಳ ಮೂಲ, ಅಂತರ ರಾಜ್ಯ ಸಂಬಂಧಗಳು, ಭಾವನೆಗಳ ಬೆಳವಣಿಗೆಗೆ ಇತ್ಯಾದಿ ವಿಷಯಗಳನ್ನು ಅರಿತುಕೊಳ್ಳುವುದಕ್ಕೆ ಬಹು ಸಹಾಯಕವಾಗಿವೆ.

## 26.2 ಪ್ರಾಚೀನ ಉತ್ತರ ಭಾರತದ ಇತಿಹಾಸ ಬರವಣಿಗೆ

ವೇದ, ಸಂಹಿತೆ, ಬ್ರಾಹ್ಮಣ, ಉಪನಿಷತ್ತುಗಳಲ್ಲಿ ಹೆಚ್ಚು ಕಡಿಮೆ ಯತಾರ್ಥವಾಗಿರುವ ಐತಿಹಾಸಿಕ ಸಂಪ್ರದಾಯಗಳು ಕಂಡುಬರುತ್ತವೆ. ಋಗ್ವೇದ ಸಂಹಿತೆಯಲ್ಲಿ ಋಷಿಗಳು ಯುದ್ಧದ ದೃಶ್ಯಗಳನ್ನು ವಿವರಿಸುವಾಗ ಭೌಗೋಳಿಕ ಸನ್ನಿವೇಶ, ಯುದ್ಧದ ವಿವಿಧ ಹಂತಗಳು, ಸೈನ್ಯ ಹಾಗೂ ಅದರ ತಂತ್ರ ಇತ್ಯಾದಿಗಳ ವರ್ಣನೆಯನ್ನು ನೀಡಿದ್ದಾರೆ. ಅಥರ್ವಣವೇದ ಸಂಹಿತೆಯಲ್ಲಿ ಐತಿಹಾಸಿಕ ಸಂಪ್ರದಾಯಗಳನ್ನು ಹೆಚ್ಚಾಗಿ ಉಲ್ಲೇಖಿಸಿಲ್ಲ ಎಂದು ಹೇಳಬಹುದು. ಆದರೆ ಯಜುರ್ವೇದ ಸಂಹಿತೆ ಹಾಗೂ ಬ್ರಾಹ್ಮಣಗಳಲ್ಲಿ ವಿಶಿಷ್ಟ ಬಗೆಯ ಇತಿಹಾಸ ಸಂಪ್ರದಾಯಗಳು ಇರುವುದನ್ನು ಗಮನಿಸಬಹುದು. ಉದಾಹರಣೆಗೆ, ಅನಂತರ ತಲೆದೋರಿದ ಸಂಹಿತೆ ಹಾಗೂ ಬ್ರಾಹ್ಮಣಗಳು ಯಜ್ಞ ಹಾಗೂ ಸಂಸ್ಕಾರಗಳನ್ನು ಸಮರ್ಥಿಸುವ ಐತಿಹಾಸಿಕ ನಿದರ್ಶನಗಳನ್ನು ಒಳಗೊಂಡಿವೆ. ಇನ್ನೊಂದು ಬಗೆಯ ಸಂಪ್ರದಾಯ ಈ ಸಂಸ್ಕಾರಗಳ ಪ್ರತಿಪಾದನೆಗೆ ಐತಿಹಾಸಿಕ ಪೀಠಿಕೆಯ ರೂಪದಲ್ಲಿದ್ದುವು. ಹೆಚ್ಚಾಗಿ ವಿವಿಧ ಪುರೋಹಿತರ ನಡುವೆ ನಡೆಯುತ್ತಿದ್ದ ಕಲ್ಪನಾತ್ಮಕ ಸಂವಾದಗಳ ಶ್ರೇಣಿಯ ರೂಪದಲ್ಲಿ ವ್ಯಕ್ತವಾಗುತ್ತಿದ್ದಿತು. ಆ ಸಂವಾದಗಳಲ್ಲಿ ಸಮಕಾಲೀನ ರೀತಿ-ನೀತಿಗಳ ಅಸ್ಪಷ್ಟ ಚಿತ್ರಣಗಳು ಕಂಡುಬರುತ್ತವೆ. ಬ್ರಾಹ್ಮಣಗಳಲ್ಲಿ ಇರುವ ಇನ್ನೊಂದು ಬಗೆಯ ಸಾಂಪ್ರದಾಯಿಕ ಚರಿತ್ರೆಯು, ಆ ಕಾಲದಲ್ಲಿದ್ದ ಸಂಸ್ಥೆಗಳ ಐತಿಹಾಸಿಕ ಮೂಲ ಮತ್ತು ವೇದ ಕಾಲದ ಆರ್ಯರ ಒಂದು ತಂಡವು ಸರಸ್ವತಿ ನದಿ ದಡದಿಂದ ಕೋಸಲ ಹಾಗೂ ವಿದೇಹ ಮುಂತಾದ ಪೂರ್ವ ರಾಜ್ಯಗಳಿಗೆ ವಲಸೆ ಹೋದ ವಿಷಯಗಳನ್ನು ಕುರಿತು ವಿಚಾರ ಮಾಡುತ್ತದೆ. ಉಪನಿಷತ್ತುಗಳಲ್ಲಿ ಇದೇ ಸಾಂಪ್ರದಾಯಗಳನ್ನು ಮುಂದುವರಿಸಲಾಯಿತು. ಆ ಕಾಲದ ಸಂವಾದಗಳು, ಭಾರತೀಯ ಇತಿಹಾಸ ಲೇಖಲ ಕಲೆಯಲ್ಲಿ ಒಂದು ನಿರ್ದಿಷ್ಟ ಬೆಳವಣಿಗೆಯಾಯಿತು ಎಂಬುದಕ್ಕೆ ಕುರುಹು ಆಗಿದ್ದುವು. ಅವುಗಳಲ್ಲಿ ರಾಜಸ್ಥಾನ ಹಾಗೂ ಬ್ರಾಹ್ಮಣ ವಸತಿಗಳ ಸಮಕಾಲೀನ ಜೀವನದ ಮನೋರಂಜಕ ಚಿತ್ರಗಳಿವೆ. ಹೀಗೆ ಭಾರತದ ಇತಿಹಾಸ ಲೇಖನಕಲೆಯ ವಿಕಾಸದಲ್ಲಿ ವೇದ ಸಾಹಿತ್ಯದಲ್ಲಿ ನೋಡಬಹುದಾದ ಇತಿಹಾಸ ಸಂಪ್ರದಾಯಗಳು ಪ್ರಮುಖ ಪಾತ್ರವನ್ನು ವಹಿಸಿವೆ ಎಂದು ಹೇಳಬಹುದು.

ಇಷ್ಟು ಮಾತ್ರವಲ್ಲದೆ, ಪ್ರಾಚೀನ ಭಾರತೀಯ ದೊರೆಗಳಿಗೆ ಇತಿಹಾಸದಲ್ಲಿ ಆಸಕ್ತಿ ಇರಲಿಲ್ಲ. ಅವರ ಆಸ್ಥಾನಗಳಲ್ಲಿ ಚರಿತ್ರೆ ಲೇಖಕರೂ ಹಾಗೂ ಸಂರಕ್ಷರೂ ಇರಲಿಲ್ಲ ಎಂಬುದು ಸರಿಯಲ್ಲ. ಕಾರಣ ಐತಿಹಾಸಿಕ ಸಂಪ್ರದಾಯದ ವಿಕಾಸದಲ್ಲಿ ಉತ್ತರ ವೇದಕಾಲದಲ್ಲಿ ಒಂದಾಗಿ ಭೃಗ್ವಾಂಗೀರಸರೆಂಬುದಾಗಿ ಕರೆಯಲಾದ ಭೃಗು, ಅಥರ್ವಣ ಹಾಗೂ ಅಂಗೀರಸ ಎಂಬ ಕುಟುಂಬದವರು ಮತ್ತು ಸೂತರು,

ಅತಿ ಮಹತ್ವಪೂರಿತವಾಗಿದ್ದ ಪಾತ್ರವನ್ನು ವಹಿಸಿದ್ದರು. ಎಲ್ಲಾ ಬಗೆಯ ಐತಿಹಾಸಿಕ ರಚನೆಗಳಲ್ಲಿ ಭೃಗ್ವಾಂಗೀರಸ ಪ್ರಭಾವ ಎದ್ದು ಕಾಣುತ್ತಿದ್ದಿತು. ಸೂತ ಎಂಬ ಭಾವ ರೂಪವನ್ನು ಯಜುರ್ವೇದ, ಅಥರ್ವವೇದ ಸಂಹಿತೆಗಳು ಹಾಗೂ ಬ್ರಾಹ್ಮಣಗಳಲ್ಲಿ ಬಳಸಲಾಗಿದೆ. ಸೂತ ಎಂಬ ಪದಕ್ಕೆ ಕವಿತ್ವ ಮಾಡಿ ಹಾಡುತ್ತಿದ್ದ ಚಾರಣ್ಮ ಅಥವಾ ಹಾಡುಕವಿ ಅಥವಾ ಸ್ವಂತ ರಚನೆಯ ಕವಿತೆಗಳನ್ನು ಹಾಡುತ್ತಿದ್ದ ಗಾಯಕ ಎಂಬ ಅರ್ಥವನ್ನು ಕೊಡಲಾಗಿದೆ. ದೇವತೆಗಳ, ಋಷಿಗಳ ಹಾಗೂ ದೊರೆಗಳ ವಂಶಾವಳಿಗಳನ್ನು ಮತ್ತು ಪ್ರಸಿದ್ಧ ಪುರುಷರನ್ನು ಕುರಿತ ಲಾವಣಿಗಳನ್ನು ರಚಿಸಿ ಸಂರಕ್ಷಿಸುವುದು ಸೂತನ ಕರ್ತವ್ಯವಾಗಿದ್ದಿತು. ಹೀಗೆ ವಂಶ ಎಂಬುದು ಒಂದು ರೀತಿಯ ಐತಿಹಾಸಿಕ ರಚನೆ ಆಯಿತು.

ಹೀಗೆ ವಂಶಾನು ಚರಿತ್ರೆಗಳು ಬೆಳೆದು ಬಂದುವು. 'ರಘುವಂಶ' ಮತ್ತು 'ಹರಿವಂಶ' ಎಂಬುವು ಪ್ರೌಢ ಪ್ರಾಚೀನ ಸಂಸ್ಕೃತ ಸಾಹಿತ್ಯದಲ್ಲಿ ಸಿಗುವ ಮೊದಲ ಮಾದರಿಗಳಾಗಿವೆ. ಈ ವಂಶ ಸಾಹಿತ್ಯವು ಮುಂದುವರಿದುಕೊಂಡು ಬಂದಿತು. ಬೌದ್ಧ ಹಾಗೂ ಜೈನಧರ್ಮಗಳೂ ಸಹ ಆ ಮಾದರಿಯನ್ನು ಬಳಸಿಕೊಂಡವು ಮೌರ್ಯರ ಕಾಲದಿಂದ ರಾಜ ಪತ್ರಗಾರಗಳನ್ನು ಚೆನ್ನಾಗಿ ವ್ಯವಸ್ಥಿತಗೊಳಿಸಲಾಯಿತು. ಧರ್ಮಶಾಸ್ತ್ರಗಳಲ್ಲೂ ಸಹ ವಂಶದ ಬಗ್ಗೆ ಪ್ರಾಸಂಗಿಕ ಉಲ್ಲೇಖಗಳಿವೆ. ಮಧ್ಯಯುಗದ ಆರಂಭದಲ್ಲಿ ಸಾಮಾನ್ಯವಾಗಿ ಚರಿತ್ರೆಗಳು ಅಥವಾ ಜೀವನ ಚರಿತ್ರೆಗಳೆಂಬುದಾಗಿ ಕರೆಯಲಾದ ಐತಿಹಾಸಿಕ ಮಹಾಕಾವ್ಯಗಳನ್ನು ರಚಿಸಲಾಯಿತು. ಆ ಸಮಯದಲ್ಲಿ ಸಮಕಾಲೀನ ಪ್ರಭುಗಳ ಜೀವನದ ಚರಿತ್ರೆಗಳು ತಲೆದೋರಿದುವು. ಬಹುಶಃ ಭಾಣಭಟ್ಟನು 'ಹರ್ಷಚರಿತ್ರೆಯನ್ನು' ಬರೆಯುವುದರ ಮೂಲಕ ಈ ತೆರನಾದ ಜೀವನ ಚರಿತ್ರೆಗಳ ಸರಣಿಯನ್ನು ಆರಂಭಿಸಿದನೆಂಬುದಾಗಿ ಹೇಳಬಹುದು. 'ವಿಕ್ರಮಾಂಕದೇವಚರಿತ' ಕುಮಾರ ಪಾಲಚರಿತ' ಇತ್ಯಾದಿಗಳು ಇತರ ಸುಪ್ರಸಿದ್ಧ ಐತಿಹಾಸಿಕ ಜೀವನ ಚರಿತ್ರೆಗಳು, ಪ್ರಬಂಧಗಳು ಅಥವಾ ಐತಿಹಾಸಿಕ ವೃತ್ತಾಂತಗಳ ಸಂಗ್ರಹಗಳೂ ಸಹ ಇತಿಹಾಸಕ್ಕೆ ಸಮೀಪವಾಗಿದ್ದ ಇನ್ನೊಂದು ಬಗೆಯ ರಚನೆಗಳಾಗಿದ್ದುವು. ಈ ಸಮಯದಲ್ಲಿ ವೇತನ ಪಡೆಯುತ್ತಿದ್ದ ರಾಜಾಸ್ಥಾನದ ಕವಿಗಳು ಹಾಗೂ ವೃತ್ತಾಂತ ಲೇಖಕರು ಮುಖ್ಯರಾಗಿದ್ದರು. ಇತಿಹಾಸ ಲೇಖನ ಕಲೆಯು ದೊರೆ, ಕವಿ ಆಸ್ಥಾನಿಕ ಹಾಗೂ ವೃತ್ತಾಂತ ಲೇಖಕರು ಒಟ್ಟಿಗೆ ಸೇರಿದ್ದ ರಾಜ ದರ್ಬಾರಿನ ವ್ಯವಸ್ಥೆಯನ್ನು ಅವಲಂಬಿಸಿದ್ದಿತು. ಇದರಿಂದ ಇತಿಹಾಸ ಸಂಪ್ರದಾಯಕ್ಕೆ ನೂತನ ರಂಗು ಉಂಟಾಯಿತು. ಅದು ರಾಜಸ್ಥಾನದ ಸಂಸ್ಕೃತಿಯನ್ನು ವ್ಯಕ್ತಪಡಿಸಲು ಸಹಾಯಕವಾಗಿದ್ದ ಪರಿಣಾಮಕಾರಿ ಮಾಧ್ಯಮವಾಯಿತು. ವೀರ ಕೌಶಲ, ಕಲಿತನ ಹಾಗೂ ರಾಜನಿಷ್ಠೆ ಮುಂತಾದ ನೂತನ ಸಾಮಾಜಿಕ ಮೌಲ್ಯಗಳನ್ನು ಪ್ರಚಾರ ಮಾಡಲು ತಕ್ಕ ಸಾಧನವಾಯಿತು. ಆನಂತರ ಬಂದ ದೊರೆಗಳು ಪುರಾತನ ರಾಜವಂಶಗಳು ತಮ್ಮ ಕುಲಕ್ಕೆ ಮೂಲ ಎಂಬುದಾಗಿ ಹೇಳಿಕೊಳ್ಳುತ್ತಿದ್ದರಿಂದ ಹಾಗೂ ಅವರುಗಳನ್ನು ರಾಮ, ಕೃಷ್ಣ ಮುಂತಾದ ಪ್ರಾಚೀನ ನಾಯಕರುಗಳಿಗೆ ಹೋಲಿಸುತ್ತಿದ್ದರಿಂದ ಪುರಾತನ ಐತಿಹಾಸಿಕ ಸಂಪ್ರದಾಯಗಳು ಮುಂದುವರಿದುಕೊಂಡು ಬಂದವು.

ಪ್ರಾಚೀನ ಭಾರತದ ಅತ್ಯಂತ ಮುಖ್ಯವಾಗಿದ್ದ ಇತಿಹಾಸ ಕೃತಿ ಎಂದರೆ 'ಕಲ್ಹಣನ ರಾಜ ತರಂಗಿಣಿ'. ಅದು ಕಾಶ್ಮೀರದ ರಾಜರುಗಳ ವೃತ್ತಾಂತವಾಗಿದ್ದಿತು. ಅವನು ವಿಮರ್ಶಾತ್ಮಕ ಹಾಗೂ ವಸ್ತುನಿಷ್ಠ ದೃಷ್ಟಿಯನ್ನು ಬೆಳೆಸಿಕೊಂಡಿದ್ದನು. ಇತಿಹಾಸ ರಚನೆಗೆ ತಕ್ಕ ಮೂಲಧಾರಗಳಾವುವು ಎಂಬುದು ಅವನಿಗೆ ಚೆನ್ನಾಗಿ ತಿಳಿದಿತ್ತು. ಅವನ್ನು ಮುಂಚಿನ ದೊರೆಗಳ ಶಾಸನ ಪ್ರಶಸ್ತಿ ಹಾಗೂ ಸಿಕ್ಕಿದ ಎಲ್ಲಾ ವೃತ್ತಾಂತಗಳು, ನಾಣ್ಯಗಳು ಒದಗಿಸಿದ ವಾಸ್ತವಾಂಶ ಹಾಗೂ ಹಿಂದಿನ ಕಾಲದ ಸಂಪ್ರದಾಯ ಹಾಗೂ ಇತರ ಆಧಾರಗಳನ್ನು ಪೂರ್ತಿಯಾಗಿ ಬಳಸಿಕೊಂಡನು. ಅವನು ಔದಾರ್ಯಪೂರ್ಣ ನಿರಂಕುಶಾಧಿಪತ್ಯದ ಗುಣಗಳ ಬಗ್ಗೆ ನೀಡಿರುವ ವಿವರಣೆಯು ಪ್ಲೇಟೋವಿನ ಕಲ್ಪನೆಗೆ ಬಹು ಹತ್ತಿರವಾಗಿದೆ. ಅವನು ರಾಜಕೀಯ ಸಂಸ್ಥೆಗಳನ್ನು ಹೇಗೆ ವ್ಯವಸ್ಥೆಗೊಳಿಸಬೇಕು ಎಂಬುದರ ಬಗ್ಗೆ ಚರ್ಚಿಸಿದ್ದಾನೆ. ಅವನು ಪ್ರಬಲ ಸರ್ಕಾರದ ಪರವಾಗಿ ವಾದಿಸಿದನು. ಜನರು ಒಬ್ಬ ಪ್ರಭುವನ್ನು ದಯಾವಂತ ಎಂಬುದಾಗಿ ಎಣಿಸಿ ಕರೆದರೆ ಅವನ ಆಳ್ವಿಕೆ ಸೋಲನ್ನು ಅನುಭವಿಸಬೇಕಾಗುತ್ತದೆ ಎಂಬುದಾಗಿ ಮುಂದೆ ಫ್ರಾನ್ಸ್ ದೇಶದ ಚಕ್ರವರ್ತಿ ನೆಪೋಲಿಯನ್ ನೀಡಿದ ಹೇಳಿಕೆಯನ್ನು ಮುಂಭಾವಿಸಿದನು. ಪ್ರಬಲ ಕೇಂದ್ರೀಕೃತ ರಾಜಪ್ರಭುತ್ವವು ರಾಜಕೀಯ ಸುಭದ್ರತೆಗೆ ಮಾತ್ರವಲ್ಲದೆ, ಸಂಸ್ಕೃತಿಯ ಅಭಿವೃದ್ಧಿಗೂ ದಾರಿಯನ್ನು ಸುಗಮಪಡಿಸುತ್ತದೆ ಎಂಬುದು ಅವನ ಮತವಾಗಿದ್ದಿತು. ಅವನಿಗೆ ಅಧಿಕಾರಶಾಹಿ ವ್ಯವಸ್ಥೆಯನ್ನು ಕಂಡರೆ ಆಗುತ್ತಿರಲಿಲ್ಲ. ಕಾರಣ ಅವನ ದೃಷ್ಟಿಯಲ್ಲಿ ಅದು ಪ್ರಗತಿ ಪಥದಲ್ಲಿ ಒಂದು ದೊಡ್ಡ ಅಡಚಣೆಯಾಗಿದ್ದಿತು. ಅವನು ಊಳಿಗಮಾನ್ಯ ಪದ್ಧತಿಯ

ದೋಷಗಳನ್ನೂ ಸಹ ಸ್ಥೂಲವಾಗಿ ಪ್ರಸ್ತಾಪಿಸಿದ್ದಾನೆ. ಅವನಲ್ಲಿ ಸಾಂಪ್ರದಾಯಿಕ ಮನೋಭಾವ ಬಲವಾಗಿದ್ದಿತು. ಆದ್ದರಿಂದ ಇತಿಹಾಸದ ಬಗ್ಗೆ ಅವನು ಬೆಳೆಸಿಕೊಂಡಿದ್ದ ದೃಷ್ಟಿಯು ಆ ಕಾಲದ ಸಾಮಾನ್ಯ ಪ್ರವೃತ್ತಿಗೆ ಅನುಗುಣವಾಗಿದ್ದಿತು. ಆದರೂ ಅವನು ಭಾರತದ ಪ್ರಾಚೀನ ಇತಿಹಾಸ ಲೇಖಕರಲ್ಲಿ ಪ್ರಧಾನವಾಗಿದ್ದನು. ನಿಜವಾದ ಅರ್ಥದಲ್ಲಿ ಚರಿತ್ರಲೇಖಕ ಎಂಬುದಾಗಿ ಕರೆಯಬಹುದಾದ ಏಕಮಾತ್ರ ಲೇಖಕ ಕಲ್ಹಣನೇ ಎಂಬುದಾಗಿ ದಾರಾಳವಾಗಿ ಹೇಳಬಹುದು.

## 26.3 ಪ್ರಾಚೀನ ದಕ್ಷಿಣ ಭಾರತದ ಇತಿಹಾಸ ಬರವಣಿಗೆ

ದಕ್ಷಿಣ ಭಾರತದ ಸಾಹಿತ್ಯದಲ್ಲೂ ಸಹ ಚರಿತ್ರೆಯನ್ನು ನೋಡಿದ ದೃಷ್ಟಿ ರೂಪಿಸಿದ ಬಗ್ಗೆ ಹಾಗೂ ಅದರ ಬಗ್ಗೆ ಇದ್ದ ಮನೋಭಾವದ ವಿಚಾರದಲ್ಲಿ ವ್ಯತ್ಯಾಸವೇನೂ ಕಂಡು ಬರಲಿಲ್ಲ. ದಕ್ಷಿಣ ಭಾರತವು ಕಲೆ, ಸಾಹಿತ್ಯ, ಸಂಗೀತ, ಮತಧರ್ಮ, ದರ್ಶನ ಮುಂತಾಗಿ ಭಾರತ ಸಂಸ್ಕೃತಿಯ ಎಲ್ಲಾ ಕ್ಷೇತ್ರಗಳಿಗೆ ಅತ್ಯಂತ ಗಮನಾರ್ಹವಾಗಿದ್ದ ಕೊಡುಗೆಗಳನ್ನು ಕೊಟ್ಟಿತು. ಆದರೆ ಇಲ್ಲೂ ನಿರ್ದಿಷ್ಟ ಇತಿಹಾಸಕಾರರ ಅಭಾವವಿದೆ. ಹೀಗೆಂದ ಮಾತ್ರಕ್ಕೆ ಐತಿಹಾಸಿಕ ಭಾವನೆಗಳಿಲ್ಲ ಎಂದರ್ಥವಲ್ಲ. ದಕ್ಷಿಣ ಭಾರತದ ತಮಿಳುನಾಡಿನ 'ಸಂಗಂ' ಸಾಹಿತ್ಯದಲ್ಲಿ ಅಸಾಧಾರಣವಾದ ಹಾಗೂ ಬೆಲೆಬಾಳುವ ಐತಿಹಾಸಿಕ ವಿಷಯ ಸಾಮಗ್ರಿಗಳಿವೆ. ಆ ಸಾಹಿತ್ಯವು ಜನರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ರಾಜಕೀಯ ಪರಿಸ್ಥಿತಿಗಳ ಮೇಲೆ ಬೆಳಕನ್ನು ಬೀರುತ್ತವೆ. ಒಂದು ಸುಪ್ರಸಿದ್ಧ ಸಾಹಿತ್ಯ ಸಂಸ್ಥೆಯು ಈ ಸಾಹಿತ್ಯ ನಿಧಿಯನ್ನು ಸೃಷ್ಟಿಸಿ, ಬೆಳೆಸಿ ಪೋಷಿಸಿತು. ಆದರೆ ಆ ಸಂಸ್ಥೆಯು ಸ್ಥಾಪಿತವಾಗಿದ್ದ ತೇದಿ, ಅದರ ರಚನೆ, ಕಾರ್ಯಾಚರಣೆ ಮತ್ತು ಇತರ ಸುಸಂಬದ್ಧ ವಿವರಗಳ ಬಗ್ಗೆ ಏನೇನೂ ತಿಳಿದು ಬಂದಿಲ್ಲ. ಅದು ಪಾಂಡ್ಯ ದೊರೆಗಳ ಆಶ್ರಯದಲ್ಲಿ ಗಮನಾರ್ಹವಾಗಿದ್ದ ಬಗೆಯಲ್ಲಿ ಬೆಳೆದು ಬಂದಿತು. ಪಲ್ಲವ ಪ್ರಭು 1 ನೆಯ ನರಸಿಂಹವರ್ಮನ ಕಾಲದಲ್ಲಿ ಸಂಗಂ ಸಾಹಿತ್ಯವು ಪೂರ್ಣವಾಗಿ ವಿಕಾಸಗೊಂಡಿತು ಎಂಬುದಾಗಿ ಹೇಳಬಹುದು. ಅದು ತಮಿಳುನಾಡಿನ ಆ ಕಾಲದ ಸಾಮಾಜಿಕ ಇತಿಹಾಸವನ್ನು ರಚಿಸುವುದಕ್ಕೆ ಬಹು ಉಪಯುಕ್ತವಾಗಿದೆ. ಚಿಕ್ಕ ಭಾವಗೀತೆಗಳ ಎಂಟು ಕಾವ್ಯಮಂಜರಿಗಳನ್ನು ಒಳಗೊಂಡಿರುವ ಅದನ್ನು ಯುದ್ಧ, ರಾಜಾಶ್ರಯ ಮುಂತಾದ ಬಾಹ್ಯ ವಿಷಯಗಳನ್ನು ಕುರಿತ 'ಪೂರಂಕೃತಿ' ಮತ್ತು ಪ್ರೇಮದ ವಿಚಾರಕ್ಕೆ ಸಂಬಂಧಿಸಿದ 'ಅಹಂ ಕೃತಿಗಳೆಂಬುದಾಗಿ' ಎರಡು ಭಾಗಗಳಾಗಿ ವಿಭಾಗಿಸಬಹುದು. ಮುಖ್ಯವಾಗಿ ಪೂರಂ ಪದ್ಯಗಳು ಸನ್ನಿವೇಶಗಳನ್ನು ವಸ್ತುನಿಷ್ಠವಾದ ಹಾಗೂ ಯತಾರ್ಥವಾದ ರೀತಿಯಲ್ಲಿ ವಿವರಿಸಲು ಯತ್ನಿಸಿವೆ. 'ಮಣಿಮೇಖಲೈ' ಮತ್ತು 'ಶಿಲಪದಿಕಾರಂ' ಎಂಬ ಎರಡು ಮಹಾಕಾವ್ಯಗಳಲ್ಲಿ ಐತಿಹಾಸಿಕ ಭಾವನೆಗಳು ಅಪಾರವಾಗಿವೆ. ಇಷ್ಟಾದರೂ ಸಂಗಂ ಸಾಹಿತ್ಯವು ಆ ಕಾಲದ ರಾಜಕೀಯ ಇತಿಹಾಸವನ್ನು ಪುನಃ ರಚಿಸುವುದಕ್ಕೆ ಸಹಾಯಕವಾಗಿಲ್ಲ. ಕಾರಣ ವಂಶಾವಳಿ ಹಾಗೂ ಕಾಲಾನುಕ್ರಮದ ವಿಚಾರಕ್ಕೆ ಅದು ಗಮನವನ್ನು ಕೊಟ್ಟಿಲ್ಲ. ನಿಷ್ಪಕ್ಷವಾದ ರೀತಿಯಲ್ಲಿ ಚರಿತ್ರ ಲೇಖಕನು ಉತ್ತರ ಭಾರತದ ವಿಶಾಲವಾದ ಹಾಗೂ ಧೂಳಿನಿಂದ ಕೂಡಿದ ಮೈದಾನಗಳಲ್ಲಿ ಸತ್ಯಸಂಗತಿಗಳ ಕಣಗಳನ್ನು ಕಂಡುಹಿಡಿಯುವ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ತಮಿಳುನಾಡಿನ ಮರಳಿನಿಂದಾವೃತ ಕಡಲಿನ ಕಡೆಗಳಲ್ಲೂ ಅದೇ ಸಮಸ್ಯೆ ಅವನಿಗೆ ಸವಾಲಾಗಿ ನಿಲ್ಲುತ್ತದೆ.

ಹೀಗೆ ಪ್ರಾಚೀನ ಭಾರತದ ಇತಿಹಾಸ ಲೇಖನ ಕಲೆಯು ಅನೇಕ ಸಂಕೀರ್ಣ ಸಮಸ್ಯೆಗಳನ್ನು ಮುಂದಿಡುತ್ತದೆ. ಬೃಹತ್ತಾಗಿರುವ ಐತಿಹಾಸಿಕ ಸಾಹಿತ್ಯವಿದೆ. ಆದರೆ ನಿರ್ದಿಷ್ಟವಾದ ಚರಿತ್ರೆ ಎಂಬುದಿಲ್ಲ. ಪ್ರಾಚೀನ ಭಾರತೀಯರಲ್ಲೂ ಇತಿಹಾಸ ಪ್ರಜ್ಞೆ ಇದ್ದಿತು, ಆದರೆ ಅದು ಅಮೂರ್ತರೂಪದಲ್ಲಿದ್ದಿತು. ಅವರು ಘಟನೆಗಳ ಕಾರಣ, ಪರಿಣಾಮ, ಪರಿಸ್ಥಿತಿ ಹಾಗೂ ಪ್ರಕ್ರಿಯೆಗಳನ್ನು ಕುರಿತು ಚರ್ಚೆ ಮಾಡಿದರಾದರೂ ಅವುಗಳನ್ನು ಯಾವ ನಿರ್ದಿಷ್ಟ, ಪ್ರದೇಶ, ಕಾಲ, ಆಳುವ ಸಂತತಿ ಅಥವಾ ವ್ಯಕ್ತಿಗೆ ಅನ್ವಯಿಸಲಿಲ್ಲ. ಡಿಯೋನಿಸಿಯಸನು ಇತಿಹಾಸವು ದರ್ಶನವಾಗಿದೆ. ಅದನ್ನು ಉದಾಹರಣೆಗಳ ಮೂಲಕ ಬೋಧಿಸಬೇಕು ಎಂಬುದಾಗಿ ನಿರೂಪಿಸಿದನು. ಪ್ರಾಚೀನ ಭಾರತೀಯರು ಈ ವ್ಯಾಖ್ಯೆಯ ಇತಿಹಾಸವು ದರ್ಶನ ಎಂಬ ಮೊದಲನೆಯ ಭಾಗವನ್ನು ಬಹು ಚೆನ್ನಾಗಿ, ಸಂಪೂರ್ಣವಾಗಿ ಸಮರ್ಥಿಸಿ ತೋರಿಸಿದರು. ಆದರೆ ಅದನ್ನು ವಾಸ್ತವಿಕ ಉದಾಹರಣೆಗಳ ಮೂಲಕ ವಿವರಿಸಬೇಕೆಂಬ ವಿಷಯಕ್ಕೆ ಅಷ್ಟಾಗಿ ಗಮನವನ್ನು ಕೊಡಲಿಲ್ಲ. ಅವರು ಬೆಳೆಸಿದ ಪುರಾಣ ಐತಿಹ್ಯ, ಕಾಲ್ಪನಿಕ ಕಥೆ, ಸಂಪ್ರದಾಯ, ಮಹಾಕಾವ್ಯ ಹಾಗೂ ಇತರ ಸಾಹಿತ್ಯ ಪ್ರಕಾರಗಳಲ್ಲಿ ಮಾನವ, ಅವನ ಸೃಜನಶೀಲ ಸಾಮರ್ಥ್ಯ, ಅವನ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಸಂಸ್ಥೆಗಳು ಇತ್ಯಾದಿಗಳು ಪ್ರಧಾನ

ವಿಷಯಗಳಾಗಿದ್ದುವು. ಆದರೆ ಸಮಗ್ರ ಸಾಹಿತ್ಯದ ವಿಚಾರಗಳು ನಿಯೋಜಿತವಾಗಿವೆ, ಅಸಂಬದ್ಧವಾಗಿವೆ ಹಾಗೂ ಪ್ರತ್ಯೇಕವಾಗಿವೆ ಎಂಬುದಾಗಿ ಟೀಕಿಸಲಾಗಿದೆ. ಆಳವಾಗಿ ನಡೆಸಲಾದ ಸಂಶೋಧನೆಗಳಿಂದ ಆ ಸಾಹಿತ್ಯ ನಿಧಿಯಲ್ಲಿ ಮೇಲೆ -ಮೇಲೆ ಕಣ್ಣಿಗೆ ಕಾಣುವುದಕ್ಕಿಂತ ಇನ್ನು ಹೆಚ್ಚು ಸಮರ್ಪಕವಾಗಿರುವ, ಸಂಬಂಧವಾಗಿರುವ ವಿಷಯಗಳು ಅಡಕವಾಗಿವೆ ಎಂಬ ಸತ್ಯ ಬೆಳಕಿಗೆ ಬಂದಿದೆ.

## 26.4 ದೆಹಲಿ ಸುಲ್ತಾನರ ಕಾಲದ ಇತಿಹಾಸ ಬರವಣಿಗೆ

ಭಾರತ ಮಣ್ಣಿನ ಮೇಲೆ ಮುಸ್ಲಿಮರ ಪಾದರ್ಪಣೆ ಮತ್ತು ಅವರ ಆಳ್ವಿಕೆಯ ಆರಂಭ ಕಾಲವು ಭಾರತದ ಇತಿಹಾಸ ಲೇಖನ ಕಲೆಯಲ್ಲಿ ಜೀವಾಂಕುರದ ಸಮಯವಾಯಿತು. ಅದು ಭಾರತದ ಸಂಸ್ಕೃತಿಗೆ ನಿಷ್ಪುಷ್ಟ ಇತಿಹಾಸದ ಸಾಹಿತ್ಯ ಎಂಬ ನೂತನ ಅಂಶವನ್ನು ಸೇರಿಸಿತು ಎಂಬುದಾಗಿ ಹೇಳಬಹುದು. ವಾಸ್ತವದಲ್ಲಿ ಮುಸ್ಲಿಂ ಇತಿಹಾಸ ಲೇಖನ ಕಲೆಯು ಸಮಕಾಲೀನ ಭಾರತೀಯ ಸಂಸ್ಕೃತಿಗೆ ಪರ್ಷಿಯನ್ನರಾಗಿದ್ದ ತುರ್ಕರು ನೀಡಿದ ಹೊಸ ಕಾಣಿಕೆಯೇ ಆಯಿತು; ಇತರರಿಗೆ ಅದೊಂದು ಮಾದರಿಯಾಯಿತು. ಇದರಿಂದ ಇತಿಹಾಸ ಲೇಖನ ಕಲೆಯಲ್ಲಿ ತೀವ್ರವಾಗಿದ್ದ ಬದಲಾವಣೆ ಉಂಟಾಯಿತು. ನಿಜವಾಗಿದ್ದ ಐತಿಹಾಸಿಕ ಪ್ರಜ್ಞೆ ಉದಯವಾಯಿತು. ಮುಸ್ಲಿಮರು ಭಾರತಕ್ಕೆ ಬರುವ ಮೊದಲೇ ಇತಿಹಾಸದ ಬಗ್ಗೆ ನಿರ್ಧಿಷ್ಟವಾಗಿದ್ದ ಅಭಿಪ್ರಾಯಗಳನ್ನು ಬೆಳೆಸಿಕೊಂಡಿದ್ದರು. ಭಾರತಕ್ಕೆ ಇಸ್ಲಾಮಿನ ಆಗಮನ ಕಾಲವು ಭಾರತದ ವೃತ್ತಾಂತಗಳ ನೂತನ ಸರಮಾಲೆಯ ಉದಯವನ್ನು ಘೋಷಿಸಿತು. ಕ್ರೈಸ್ತ ಪಾದ್ರಿಗಳು ರಚಿಸಿದ ಕ್ರಿಶ್ಚಿಯನ್ ವೃತ್ತಾಂತಗಳಿಗೆ ತದ್ವಿರುದ್ಧವಾಗಿ ನಡೆದ ಸಮಕಾಲೀನ ಘಟನಾ ನಾಟಕಗಳಲ್ಲಿ ಭಾಗವಹಿಸಿದ ವ್ಯಕ್ತಿಗಳೇ ಬರೆದಿದ್ದ ಮುಸ್ಲಿಂ - ವೃತ್ತಾಂತಗಳು ನಿಜಕ್ಕೂ ಶ್ರೇಷ್ಟವಾಗಿದ್ದುವು. ಮದ್ಯ ಯುಗದ ಇಂಡೋ ಮುಸ್ಲಿಂ ಇತಿಹಾಸ ಲೇಖನ ಕಲೆಯಲ್ಲಿ ಅರಬ್ಬಿ ಮತ್ತು ಪರ್ಷಿಯನ್ ಎಂಬ ಎರಡು ನಿರ್ಧಿಷ್ಟ ಇತಿಹಾಸ ರಚನಾ ಸಂಪ್ರದಾಯ ಪ್ರತಿಬಿಂಬಿತವಾಗಿದ್ದಿತು. ಅರಬ್ಬೀ ಚರಿತ್ರಲೇಖಕನ ಐತಿಹಾಸಿಕ ದೃಷ್ಟಿಕೋನವು ಅತ್ಯಂತ ವ್ಯಾಪಕವಾಗಿದ್ದಿತು. ಸಮಾಜ, ರಾಜಕೀಯ, ಸಂಸ್ಥೆ, ಸಂಸ್ಕೃತಿ ಮುಂತಾಗಿ ಎಲ್ಲಾ ಕ್ಷೇತ್ರಗಳನ್ನು ಒಳಗೊಂಡಿತು. ಅವನು ಸರ್ಕಾರಿ ಚರಿತ್ರಲೇಖಕನಾಗಿರಲಿಲ್ಲ. ಆದರೆ ಪರ್ಷಿಯನ್ ಇತಿಹಾಸಕಾರನ ದೃಷ್ಟಿಕೋನವು ಕೇವಲ ರಾಜಾಸ್ಥಾನಕ್ಕೆ ಮಾತ್ರ ಸೀಮಿತವಾಗಿದ್ದರಿಂದ ಸಂಕುಚಿತವಾಗಿದ್ದಿತು. ರಾಜರುಗಳ ಚರಿತ್ರೆಯನ್ನು ಬರೆದು, ಅದನ್ನು ಆ ಯುಗದ ಇತಿಹಾಸಕ್ಕೆ ಸಮಾನ ಎಂಬುದಾಗಿ ಎತ್ತಿ ತೋರುವುದೇ ಅವನ ಉದ್ದೇಶವಾಗಿದ್ದಿತು. ಅವನು ತನ್ನ ಆಶ್ರಯದಾತ ಪ್ರಭುವಿನ ಹೊಗಳುಭಟ್ಟನಾಗಿದ್ದನು. 13 ನೆಯ ಶತಮಾನದಿಂದ ಭಾರತದಲ್ಲಿ ಮುಸ್ಲಿಂ ಚರಿತ್ರ ಲೇಖಕರು ಪರ್ಷಿಯನ್ ಇತಿಹಾಸಲೇಖನ ಕಲೆಯನ್ನೇ ಸರಿಯಾಗಿದ್ದ ಮಾದರಿಯಾಗಿ ಎಣಿಸಿ ಅನುಸರಿಸಲಾರಂಭಿಸಿದರು.

ರಾಜಕೀಯ ಬೆಳವಣಿಗೆಯ ಹಂತಗಳಿಗೆ ಅನುಗುಣವಾದಂತಹ ಕೆಲವು ನಿರ್ಧಿಷ್ಟ ಕಾಲ ಘಟ್ಟಗಳನ್ನು ಮುಸ್ಲಿಂ ಇತಿಹಾಸ ಲೇಖನ ಕಲೆಯಲ್ಲೂ ಗುರುತಿಸಬಹುದು.

(1) ಅರಬ್ಬೀ ಸಂಪರ್ಕ ಹಾಗೂ ಆಕ್ರಮಣ ಕ್ರಿ.ಶ. 7 ರಿಂದ 10 ನೆಯ ಶತಮಾನಗಳು;

(2) ತುರ್ಕರ ಆಗಮನ ಹಾಗೂ ದೆಹಲಿ ಸುಲ್ತಾನಾಧಿಪತ್ಯದ ಕಾಲ ಕ್ರಿ.ಶ. 11 ರಿಂದ 16 ನೆಯ ಶತಮಾನಗಳು ಮತ್ತು

(3) ಮೊಘಲ್ ಕಾಲ ಕ್ರಿ.ಶ. 16 ರಿಂದ 18 ನೆಯ ಶತಮಾನಗಳು

ಕ್ರಿ.ಶ. 7 ರಿಂದ 10 ನೆಯ ಶತಮಾನಗಳಲ್ಲಿ ಅರಬ್ಬೀ ಭೂಗೋಳಶಾಸ್ತ್ರಜ್ಞರು ಮತ್ತು ಅರಬ್ಬೀ ಇತಿಹಾಸ ಲೇಖನ ಕಲೆ ಹಾಗೂ ಸ್ಥಳೀಯ ಸಂಪ್ರದಾಯಗಳಿಂದ ಪ್ರಭಾವಿತರಾಗಿದ್ದ ಸಿಂಧ್ ಪ್ರದೇಶದ ಇತಿಹಾಸಕಾರರು ಮುಖ್ಯರಾಗಿದ್ದರು. ಪ್ರವಾಸ ಸಾಹಿತ್ಯವು ಅರಬ್ಬೀ ಜನರ ಅತ್ಯಂತ ಗಮನಾರ್ಹವಾಗಿದ್ದ ರಚನೆಯಾಗಿದ್ದಿತು. ಭಾರತ ಹಾಗೂ ಚೀನಾಕ್ಕೆ ಬಂದಿದ್ದ ಅರಬ್ಬೀ ಭೂಗೋಳ ವಿಜ್ಞಾನಿ ಹಾಗೂ ವ್ಯಾಪಾರಿ ಸುಲೈಮಾನ್ ಬರೆದ ಕೃತಿಯು ಬಹು ಮುಂಚಿನ ಸಂಪುಟವಾಗಿದೆ. ನಂತರ ಅಬು ಜಿಮಲ್ ಹಸನನು ಇತರ ಪ್ರಯಾಣಿಕರನ್ನು ವಿಚಾರಿಸಿ ಹೊಸ ಅಧ್ಯಯನಗಳನ್ನು ನಡೆಸಿ ಅವನ ಕೃತಿಯನ್ನು ಬದಲಾಯಿಸಿ ಇನ್ನೂ ಹೆಚ್ಚು ವಿವರಗಳನ್ನು ಸೇರಿಸಿದನು. ಸಿಂಧ್‌ನಲ್ಲಿ ಅರಬ್ಬೀಯವರ ಆಳ್ವಿಕೆಗೆ ಸಂಬಂಧಿಸಿದ 'ಮುಜ್‌ಮುಲೂತ್ ತವಾರೀಖ್ ಚಾಚ್-ನಾಮ' ಮುಂತಾದ ಉಪಯುಕ್ತ

ಕೃತಿಗಳಿವೆ. 'ಚಾಚ್-ನಾಮ' ಎಂಬ ರಚನೆಯು ಖಾಸಿಂನ ಆಕ್ರಮಣದ ಸಮಯದ ಕೆಲವು ವ್ಯವಹಾರಗಳ ಮತ್ತು ಹಿಂದಿದ್ದ ಕೆಲವು ಹಿಂದೂ ದೊರೆಗಳ ಆಳ್ವಿಕೆಯನ್ನು ಕುರಿತ ಸುಸಂಬದ್ಧ ಕಥನವಾಗಿದ್ದಿತು.

ಕ್ರಿ.ಶ. 13 ರಿಂದ 16 ನೆಯ ಶತಮಾನಗಳವರೆಗೆ ಸುಲ್ತಾನಾಧಿಪತ್ಯ ಅಥವಾ ತುರ್ಕೋ ಆಫ್‌ಘನ್ ಕಾಲದಲ್ಲಿ ಬೆಳೆದು ಬಂದ ಇತಿಹಾಸ ಲೇಖನ ಕಲೆಯನ್ನು ಈ ಕೆಳಕಂಡಂತೆ ಎಂಟು ವರ್ಗಗಳಾಗಿ ವಿಭಾಗಿಸಬಹುದು:-

(1) ಸಾಮಾನ್ಯ ಇತಿಹಾಸ ಅಥವಾ ಆಳುವ ಸಂತತಿಯನ್ನು ಕುರಿತ ಚರಿತ್ರೆಗಳು: ಸಿರಾಜನು ಬರೆದ 'ತಬಾಖಾತಿ ನಾಸೀರಿ' ಮತ್ತು ಮಹಮ್ಮದ್ ಖಾನಿ ರಚಿಸಿದ 'ತಾರೀಖೆ ಮೊಹಮ್ಮದಿ' ಮುಖ್ಯ ಉದಾಹರಣೆಗಳು:

(2) ಉತ್ತರ ಭಾರತದಲ್ಲಿ ಇಸ್ಲಾಂಗೆ ಸಂಬಂಧಿಸಿದ ಪ್ರಾದೇಶಿಕ ಚರಿತ್ರೆಗಳು: ಉದಾಹರಣೆಗೆ, ಘುರ್‌ನ ಮಹಮ್ಮದ್‌ನ ಆಳ್ವಿಕೆಯ ಕಾಲದಿಂದ ಆರಂಭವಾಗುವ ಮತ್ತು ಸರ್‌ಹಿಂದಿ ಬರೆದಿರುವ 'ತಾರೀಖೆ ಮುಬಾರಕ್ ಷಾಹಿ' ಎಂಬ ಕೃತಿ. ಅದು ಸಯ್ಯದ್ ಸಂತತಿಗೆ ಅತಿ ಮುಖ್ಯವಾದ ಆಧಾರವಾಗಿದೆ.

(3) ಪ್ರಭುಗಳ ಅಥವಾ ಇತರ ವ್ಯಕ್ತಿಗಳನ್ನು ಹೊಗಳುವ ಇತಿಹಾಸ: ಉದಾಹರಣೆಗೆ, ಘಜ್ನಿ ಮಹಮ್ಮದ್‌ನ ಗೌರವಾರ್ಥ ಆಲ್ ಉತ್ಬಿ ರಚಿಸಿದ ತಾರೀಖೆ-ಯಾಮಿನಿ, ಖ್ವಾಜಾ ಅಬುಲ್ ಫಸಲ್ ಬಿನ್ ಆಲ್ ಹಸನ್ ಆಲ್ ಬೈಹಕಿ ಮೂವತ್ತು ಸಂಪುಟಗಳಲ್ಲಿ ಬರೆದ ಘಜ್ನಿ ಮನೆತನದ ವ್ಯಾಪಕ ಚರಿತ್ರೆಯಾದ 'ತಾರೀಖೆ ಬೈಹಬಿ' ಅಯಿರ್ ಖುಸ್ರೋವಿನ 'ತಾರೀಖೆ-ಅಲಾಯ್' ಶಮ್ಸುದ್ದೀನ್ ಸಿರಾಜ್ ಅಫೀಫನ 'ತಾರೀಖೆ-ಫಿರೋಜ್ ಷಾಹಿ' ಇತ್ಯಾದಿಗಳು ಪ್ರಮುಖ ಉದಾಹರಣೆಗಳು.

(4) ಇತಿಹಾಸವನ್ನು ನೀತಿ ವಿಜ್ಞಾನದ ಒಂದು ಶಾಖೆಯಾಗಿ ಎಣಿಸುವ ನೀತಿಪರ ಚರಿತ್ರೆ: ಬರನಿಯ 'ತಾರೀಖೆ-ಫಿರೋಜ್ ಷಾಹಿ' ಇದಕ್ಕೆ ಅತ್ಯುತ್ತಮ ಉದಾಹರಣೆ.

(5) 'ಕಲಾತ್ಮಕ ಬಗೆಗಳು' ಪದ್ಯ ಪ್ರಾಸಬದ್ಧ ಗದ್ಯ, ಐತಿಹಾಸಿಕ ಪದ್ಯ ಹಾಗೂ ಅಧಿಕಾರಿಗಳು ತಮ್ಮ ಧರಣಿಗಳ ಬಗ್ಗೆ ಬರೆದ ಪ್ರಶಂಸಾತ್ಮಕ ಲೇಖನಗಳು: ಆ ಬಗೆಗಳನ್ನು ಹಸನ್ ನಿಜಾಮಿ, ಅಮೀರ್ ಖುಸ್ರೋ ಅಥವಾ ಮಿರ್ ಖುಸ್ರೋ ಮತ್ತು ಇಸಾಮಿ ಮುಂತಾದವರ ಕೃತಿಗಳಲ್ಲಿ ಕಾಣಬಹುದು.

(6) ಆತ್ಮ ಚರಿತ್ರೆಗಳು: ಬಹುಶಃ ಈ ಕಾಲದಲ್ಲಿ ಸುಲ್ತಾನ್ ಫಿರೋಜ್ ಷಾ ಬರೆದ ಫುತೂಹಾತ್ ಫಿರೋಜ್ ಷಾಹಿ ರಾಜಯೋಗ್ಯ ಆತ್ಮಚರಿತ್ರೆಯ ಬಗೆಗೆ ಬಹು ಹತ್ತಿರವಾಗಿರುವ ರಚನೆಯಾಗಿದೆ.

(7) ವಸೀಯಾತ್ - ನಾಮಗಳು: ಅಂದರೆ, ತಮ್ಮ ಉತ್ತರಾಧಿಕಾರಿಗಳಿಗೆ ಸುಪ್ರಸಿದ್ಧ ಪ್ರಭುಗಳು ಹಾಗೂ ರಾಜನೀತಿಜ್ಞರು ನೀಡಿದ ನೀತಿಬೋಧಗಳು; ಅವುಗಳು ಮಧ್ಯಯುಗದಲ್ಲಿ ಬಹು ಜನಪ್ರಿಯವಾಗಿದ್ದವು. ಅವುಗಳನ್ನು ಮಧ್ಯಕಾಲದ ರಾಜಕೀಯ ನಿಪುಣರು ಹಾಗೂ ರಾಜಕೀಯ ಚಿಂತಕರು ಬಹು ಆಸಕ್ತಿಯಿಂದ ಓದುತ್ತಿದ್ದರು.

(8) ಸಂತರ ಹಾಗೂ ಇತರರ ಜೀವನ ಚರಿತ್ರೆಗಳು ಮತ್ತು ಸೂಫಿ ಸಾಹಿತ್ಯ; ಸಂತರು, ಕವಿಗಳು ಮುಂತಾದವರ ಜೀವನ ಚರಿತ್ರೆಗಳು ಇವೆ. ಅನೇಕ ಶ್ರೇಷ್ಠ ಸೂಫಿ ಸಂತರು ಪರ್ಷಿಯನ್ ಭಾಷೆಯನ್ನು ಮಾಧ್ಯಮವಾಗಿ ಬಳಸಿ ಅದು ಶ್ರೀಮಂತವಾಗುವುದಕ್ಕೆ ಹಾಗೂ ಶೀಘ್ರವಾಗಿ ವಿಕಾಸವಾಗುವುದಕ್ಕೆ ಕಾರಣರಾದರು.

ಸೂಫಿ ಸಾಹಿತ್ಯವು ಸಾಮಾಜಿಕ-ಧಾರ್ಮಿಕ ಚಳುವಳಿಗೆ ಮತ್ತು ಬೌದ್ಧಿಕ ಭಾವನೆಗಳ ಬೆಳವಣಿಗೆಗೆ ಬಹು ಸಹಾಯಕವಾಗಿದ್ದವು. ಸೂಫಿ ಸಂತರ ಪತ್ರಗಳು, ಗೋಷ್ಠಿ ಸಲ್ಲಾಪಗಳು ಮತ್ತು ಆಧ್ಯಾತ್ಮಿಕ ಹಾಗೂ ನೈತಿಕ ಬರಹಗಳು ಬೌದ್ಧಿಕ ಚರಿತ್ರೆಯ ಮೇಲೆ ಅಪಾರ ಬೆಳಕನ್ನು ಬೀರಿದುವು ಮತ್ತು ಆ ಭಾವನೆಗಳು ಜನ ಸಾಮಾನ್ಯರಲ್ಲಿ ಹೇಗೆ ಹರಡಿದುವು ಎಂಬುದನ್ನು ವಿಷದಿಪಡಿಸಿದುವು. ಅವುಗಳಿಂದ ಆ ಕಾಲದ ಪಂಡಿತರು ಹಾಗೂ ಭೋದಕರು, ಶಿಕ್ಷಣ ವ್ಯವಸ್ಥೆ, ಆ ಸಮಯದಲ್ಲಿ ಹೆಚ್ಚಾಗಿ ಅಧ್ಯಯನ ಮಾಡಲಾಗುತ್ತಿದ್ದ ಗ್ರಂಥಗಳು,

ಸರ್ಕಾರದ ವ್ಯವಸ್ಥೆ, ವಿಭಿನ್ನ ಇಲಾಖೆಗಳ ಕಾರ್ಯಾಚರಣೆ, ಆರ್ಥಿಕ ಪರಿಸ್ಥಿತಿ ಮತ್ತು ತೂಕ ಹಾಗೂ ಅಳತೆ ಮುಂತಾದ ವಿಷಯಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬಹುದು.

ಆದರೆ ಆ ಸಾಹಿತ್ಯವು ನೀತಿ ಪ್ರಧಾನವಾಗಿದ್ದಿತು. ಜನ ಜೀವನದಲ್ಲಿ ಜಾತಿ, ಪಂಥ ಹಾಗೂ ವರ್ಗ ಮುಂತಾದ ಅಡಚಣೆಗಳನ್ನು ಕಿತ್ತೊಗೆದು ನೆಲಸಮ ಮಾಡಲು ಶಕ್ತವಾದಂತಹ ಜಾಗ್ರತಿಯನ್ನು ಪ್ರಚೋದಿಸಿದಂತಹ ಆಶ್ಚರ್ಯಕರವಾಗಿದ್ದ ಭಕ್ತಿ ಚಳುವಳಿಯಲ್ಲಿ ಸೂಫಿ ಸಂತರು ವಹಿಸಿದ ಪಾತ್ರ ಅಷ್ಟೇ ಮಹತ್ವ ಪೂರಿತವಾಗಿದ್ದಿತು. ಅವರು ಎತ್ತಿ ಹಿಡಿದು ಬೋಧಿಸಿದ ಸಮಾನತೆ, ಸೌಭ್ರಾತೃತ್ವ, ಪ್ರೀತಿ ಹಾಗೂ ನಿಸ್ವಾರ್ಥ ಸೇವೆ ಮುಂತಾದ ಮೌಲ್ಯಗಳು ತುಕ್ಕು ಹಿಡಿದ ಕಬ್ಬಿಣದಂತಿದ್ದ ಜಾತಿಪದ್ದತಿಯ ಹಿಡಿತದಲ್ಲಿ ಸಿಕ್ಕಿಹಾಕಿಕೊಂಡು ತೊಳಲಾಡುತ್ತಿದ್ದ ಭಾರತ ಸಮಾಜದ ಕೆಳವರ್ಗಗಳ ಜನರನ್ನು ಬಹುಮಟ್ಟಿಗೆ ಆಕರ್ಷಿಸಿದುವು. ಅವರ ಸಾಹಿತ್ಯ ಎರಡು ಬಗೆಯಾಗಿದ್ದಿತು. ಶುದ್ಧವಾದ ರಹಸ್ಯ ವಾದವನ್ನು ಮತ್ತು ಸಂತರ ಜೀವನವನ್ನು ಕುರಿತ ಗ್ರಂಥಗಳನ್ನು ಅವರು ರಚಿಸಿದರು. ಉದಾರ ಭಾವನೆ, ಹೃದಯ ವೈಶಾಲ್ಯ, ಶ್ರದ್ಧೆ ಭಕ್ತಿ ಮುಂತಾದ ತತ್ವಗಳನ್ನು ಎತ್ತಿ ತೋರಿದ ಜೀವನ ಕ್ರಮವನ್ನು ನಿರೂಪಿಸುವುದರಲ್ಲಿ ಈ ಗ್ರಂಥಗಳ ಐತಿಹಾಸಿಕ ಪ್ರಾಮುಖ್ಯವನ್ನು ನೋಡಬಹುದು.

ಹೀಗೆ ಸೂಫಿ ಸಾಹಿತ್ಯವು ಪ್ರಧಾನವಾಗಿ ಬೋಧಪರವಾಗಿದ್ದಿತು. ಭಗವಂತನ ಮಹಿಮೆಯನ್ನು ಎತ್ತಿ ತೋರುವುದಕ್ಕಾಗಿ ರಚಿಸಲಾಗಿದ್ದ ಅದರಲ್ಲಿ ಪ್ರಾಸಂಗಿಕವಾಗಿ ಜನರ ಸ್ಥಿತಿಗತಿಗಳನ್ನು ಸೂಚಿಸಲಾಗಿದೆ. ಆದರೂ ಸೂಫಿ ಸಂತರ ಜೀವನ ಮತ್ತು ಶುದ್ಧ ಚರಿತ್ರೆ, ಶುದ್ಧ ಕಲ್ಪನಾ ಕತೆ ಹಾಗೂ ಶುದ್ಧನೀತಿ ಎಂಬ ಮೂರು ಪ್ರಧಾನ ಅಂಶಗಳಿಂದ ಕೂಡಿರುವ ಅವರ ಬರಹಗಳು ನಿರ್ಧಿಷ್ಟವಾಗಿ ಮುಸ್ಲಿಂ ಸಮಾಜದ ಆಧ್ಯಾತ್ಮಿಕ ಬೆಳವಣಿಗೆ ಮತ್ತು ಸಾಮಾನ್ಯವಾಗಿ ಭಾರತ ಸಮಾಜದ ಧಾರ್ಮಿಕ ಉತ್ಪನ್ನದ ಸ್ಪಷ್ಟ ಪ್ರತಿಬಿಂಬವನ್ನು ಎತ್ತಿ ತೋರುವ ದರ್ಪಣಗಳಾಗಿವೆ. ಒಟ್ಟಿನಲ್ಲಿ ಸೂಫಿ ಸಾಹಿತ್ಯವು ಆ ಸಮಯದ ಜನರ ಆಧ್ಯಾತ್ಮಿಕ ಹಾಗೂ ನೈತಿಕ ಮಟ್ಟದ ಜೊತೆ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿ ಆ ಕಾಲದ ಮನೋಧರ್ಮ ಹಿಂದೂ ಇಸ್ಲಾಂ ಧರ್ಮಗಳ ಪರಸ್ಪರ ಪ್ರಭಾವ ಮುಂತಾದವುಗಳನ್ನು ತಿಳಿದುಕೊಳ್ಳುವುದಕ್ಕೆ ಅತ್ಯಂತ ಮುಖ್ಯವಾದ ಮೂಲಾಧಾರವಾಗಿದೆ. ಸೂಫಿ ಸಂತರ ಬರಹಗಳು ಭಾರತದಲ್ಲಿದ್ದ ಮುಸ್ಲಿಮರ ಸಾಮಾಜಿಕ ಹಾಗೂ ಆರ್ಥಿಕ ಜೀವನ ಮತ್ತು ಅವರು ಭಾರತ ಸಂಸ್ಕೃತಿಗೆ ನೀಡಿದ ಕೊಡುಗೆಯ ಚರಿತ್ರೆಯನ್ನು ಪುನರ್ರಚಿಸುವುದಕ್ಕೆ ಅತ್ಯಂತ ಸಹಾಯಕವಾಗಿದೆ.

## 26.5 ಮೊಘಲರ ಕಾಲದ ಇತಿಹಾಸ ಬರವಣಿಗೆ

ಮೊಘಲರ ಕಾಲಕ್ಕೆ ಬಂದಂತೆ, ಮುಸ್ಲಿಂ ಇತಿಹಾಸ ಲೇಖನ ಕಲೆಯಲ್ಲಿ ಗಮನಾರ್ಹವಾಗಿದ್ದ ಬದಲಾವಣೆ ಉಂಟಾಯಿತು. ಮನೋಭಾವ, ನಿರೂಪಣೆ, ತಂತ್ರ ಹಾಗೂ ವಿಷಯಗಳಲ್ಲಿ ಪರಿಪೂರ್ಣ ಪರಿವರ್ತನೆ ತಲೆದೋರಿತು. ಬಹುಮಟ್ಟಿಗೆ ವಸ್ತುನಿಷ್ಟ ದೃಷ್ಟಿಕೋನವನ್ನು ಅಳವಡಿಸಿಕೊಂಡಿದ್ದ ಮೊಘಲ್ ಚರಿತ್ರಲೇಖಕರ ಕೈಯಲ್ಲಿ ಪಕ್ವಗೊಂಡ ಇತಿಹಾಸ ಲೇಖನ ಕಲೆಗೆ ಸುಲ್ತಾನಾಧಿಪತ್ಯದ ಕಾಲವು ಪೂರ್ವಸಿದ್ದತೆಯಾಯಿತು.

ಮೊಘಲ್ ಕಾಲದ ಇತಿಹಾಸಗಳನ್ನು ಹಾಗೂ ಭಾಗಶಃ ಐತಿಹಾಸಿಕವಾಗಿರುವ ಸಾಹಿತ್ಯವನ್ನು ಈ ಕೆಳಕಂಡಂತೆ ವರ್ಗೀಕರಿಸಬಹುದು.

*(1) ಸರ್ಕಾರಿ ದಾಖಲೆಗಳು ಅಥವಾ ಆಸ್ಥಾನದ ಲಘು ಪ್ರಕಟಣೆಗಳು*

ಅಕ್ಬರನ ಕಾಲದಿಂದ ಬೆಳೆದು ಬಂದ ರಾಜ ಫರ್ಮಾನುಗಳು ಹಾಗೂ ಇತರ ಅನೇಕ ಬಗೆಯ ಸರ್ಕಾರಿ ದಾಖಲೆಗಳು ಮೊಘಲರ ಕಾಲದ ಅಧ್ಯಯನಕ್ಕೆ ಪ್ರಾಥಮಿಕ ಆಧಾರಗಳಾಗಿವೆ. ಮೀರಾಸೆ ಅಹ್ಮದಿಯಲ್ಲಿ ಈ ಕೆಲವು ಫರ್ಮಾನು ಹಾಗೂ ಕಟ್ಟಳೆಗಳನ್ನು ಕಾಣಬಹುದು. ಅಖ್ಬಾರದರ್ಬಾರೆ ಮೊ ಅಲ್ಲ (ರಾಜಸ್ಥಾನದ ವಾರ್ತಾ ಪ್ರಕಟಣೆಗಳು ಅಥವಾ ದಿನವೂ ಗುಮಾಸ್ತರು ಬರೆಯುತ್ತಿದ್ದ ಆಸ್ಥಾನದ ಕಾರ್ಯ ಕಲಾಪಗಳ ಸಂಕ್ಷಿಪ್ತ ವರದಿಗಳು ) ಆ ಕಾಲದ ಒಂದು ಅದ್ವಿತೀಯ ಬಗೆಯ ಐತಿಹಾಸಿಕ ಸಾಹಿತ್ಯವಾದುವು.

**(2) ಅಧಿಕೃತ ಇತಿಹಾಸಗಳು (ನಾಮ) ಅಥವಾ ವೃತ್ತಾಂತಗಳು**

ಅಕ್ಬರ್, ಷಹಜಹಾನ್, ಸ್ವಲ್ಪ ಮಟ್ಟಿಗೆ ಔರಂಗಜೇಬ ಮತ್ತು ಬಹುದ್ದೂರ್ ಷಾನ ಆಳ್ವಿಕೆಯಲ್ಲಿ ರಚಿಸಲಾದ ಈ ಅಧಿಕೃತ ಐತಿಹಾಸಿಕ ಜೀವನ ಚರಿತ್ರೆಗಳು ಸಂಬಂಧಪಟ್ಟ ಸಾಮ್ರಾಟರ ಸಾಧನೆಗಳನ್ನು ವಿವರಿಸುತ್ತದೆ. ಅವುಗಳಲ್ಲಿ ಸಾಕಷ್ಟು ನಂಬಲರ್ಹವಾಗಿರುವ ವಿವರಗಳಿವೆ. ಪ್ರಾಂತ್ಯಗಳ ಸರ್ಕಾರಿ ದಾಖಲೆ, ರಾಜಸ್ಥಾನಗಳ ಲಘು ಪ್ರಕಟಣೆಗಳು ಹಾಗೂ ಸುದ್ದಿ ಪತ್ರಗಳು ಮುಂತಾದ ಸಂಗ್ರಹಿತ ಸಮಕಾಲೀನ ದಾಖಲೆಗಳ ಮೇಲೆ ಆಧಾರಿತವಾಗಿದೆ ಹಾಗೂ ಅನುಭವಸ್ಥ ಅಧಿಕಾರಿ ಆಸ್ಥಾನಿಕ, ಗುಮಾಸ್ತ ಹಾಗೂ ಕಾರ್ಯದರ್ಶಿಗಳಿಂದ ಬರೆಯಲಾಗಿದ್ದ ಈ ನಾಮಗಳ ಕಾರಣ ವಿಷಯ ಹಾಗೂ ಬಗೆಯ ವಿಚಾರದಲ್ಲಿ ಇತಿಹಾಸದಲ್ಲಿ ಒಂದು ಗಮನಾರ್ಹವಾಗಿದ್ದ ಬದಲಾವಣೆ ಉಂಟಾಯಿತು. ಅವನ ಕಾಲದಲ್ಲಿ ಅಬುಲ್ ಫಜಲನು ರಚಿಸಿದ ಅಕ್ಬರ್-ನಾಮಾ ಹಾಗೂ ಐನಿ-ಅಕ್ಬರಿ ಮತ್ತು ಇನಾಯಿತುಲ್ಲಾ ಬರೆದ ತಕ್ಮೀಲಿ ಅಕ್ಬರ್-ನಾಮಾ ಮುಖ್ಯವಾಗಿದ್ದವು. ಷಹಜಹಾನನ ಕಾಲದಲ್ಲಿ ಇತಿಹಾಸ ರಚನೆಯಲ್ಲಿ ಅನೇಕ ಪ್ರಯೋಗಗಳನ್ನು ನಡೆಸಿದ್ದರಿಂದ ಬೆಲೆಬಾಳುವ ಸಮಕಾಲೀನ ಐತಿಹಾಸಿಕ ಅಥವಾ ಜೀವನ ಚರಿತ್ರೆಯ ವಿಷಯಗಳು ಬೆಳಕಿಗೆ ಬಂದುವು.

ಔರಂಗಜೇಬನು ಮೊದಮೊದಲು ಅಕ್ಬರ್ ಹಾಗೂ ಷಹಜಹಾನನು ಹಾಕಿಕೊಟ್ಟ ದಾರಿಯಲ್ಲೇ ನಡೆದು, ಆಸ್ಥಾನ ಇತಿಹಾಸಕಾರರಿಗೆ ಪ್ರೋತ್ಸಾಹ ಕೊಟ್ಟನು. ಮಿರ್ಜಾ ಮಹಮ್ಮದ್ ಕಾಸಿಂ ತನಗೆ ಸಂಬಂಧಿಸಿದ ಎಲ್ಲಾ ಅಸಾಧಾರಣ ಘಟನೆಗಳ ಬಗ್ಗೆ ವಿಷಯಗಳನ್ನು ಸಂಗ್ರಹಿಸಿ ಇತಿಹಾಸವನ್ನು ಬರೆಯುವಂತೆ ಅಪ್ಪಣೆ ಮಾಡಿದನು. 'ಅಲಂಗಿರ್ ನಾಮ' ಎಂಬ ಗ್ರಂಥವು ಒಂದು ಪ್ರಶಂಸಾ ಕೃತಿಯಾಗಿದೆ. ನಲವತ್ತು ವರ್ಷಗಳ ಕಾಲ ಸಾಮ್ರಾಟನ ಸೇವೆಯಲ್ಲಿದ್ದ ಹಾಗೂ ಅನೇಕ ಘಟನೆಗಳ ಪ್ರತ್ಯಕ್ಷದರ್ಶಿಯಾಗಿದ್ದ ಮಹಮ್ಮದ್ ಸಾಖಿ ಮುಸ್ತಯೀದಾ ಖಾನನು ಸರ್ಕಾರ ಪತ್ರ, ದಸ್ತೈವಜು ಹಾಗೂ ವೈಯಕ್ತಿಕವಾಗಿ ಸಂಗ್ರಹಿಸಿದ ವಿವರಗಳ ಆಧಾರದ ಮೇಲೆ ಸುಲ್ತಾನನು ಮರಣ ಹೊಂದಿದ ಮೂರು ವರ್ಷಗಳ ನಂತರ ಅವನ ಆಳ್ವಿಕೆಯ ಬಗ್ಗೆ ಅಧಿಕೃತ ಚರಿತ್ರೆಯನ್ನು ಸಿದ್ಧಪಡಿಸಿದನು. ದನಿಷ್‌ಮಂದ್ ಖಾನನು ಬಹುದ್ದೂರ್‌ಷಾನ ಆಳ್ವಿಕೆಯ ಮೊದಲ ವರ್ಷಗಳನ್ನು ಕುರಿತು 'ಬಹುದ್ದೂರ್ ಷಾ ನಾಮಾ' ಎಂಬ ಅಧಿಕೃತ ಚರಿತ್ರೆಯನ್ನು ಬರೆದನು.

**(3) ಮೊಘಲ್ ಸಾಮ್ರಾಟರು ಬರೆದ ಸ್ವಂತ ಜೀವನ ಚರಿತ್ರೆಗಳು:**

ತೈಮೂರನ 'ಮಲ್ ಫೂಜಾತ್ ತೈಮೂರಿ ಅಥವಾ ತುಜೂಕ್ ತೈಮೂರಿ 'ಸ್ವಂತ ಜೀವನ ಚರಿತ್ರೆಯಾಗಿದ್ದಿತು. ಭಾರತದಲ್ಲಿ ಮೊಘಲ್ ಸಾಮ್ರಾಜ್ಯದ ಸ್ಥಾಪಕನಾಗಿದ್ದ ಬಾಬರನು ತೈಮೂರನನ್ನು ಅನುಸರಿಸಿ 'ತುಜುಕ್ ಬಾಬರಿ' ಎಂಬ ತನ್ನ ಆತ್ಮಕತೆಯನ್ನು ಬರೆದನು. ಗದ್ಯ ಹಾಗೂ ಪದ್ಯ ರಚನೆಯಲ್ಲಿ ಮತ್ತು ತುರ್ಕಿ, ಅರಬ್ಬೀ ಪರ್ಷಿಯನ್ ಹಾಗೂ ಹಿಂದಿ ಭಾಷೆಗಳಲ್ಲಿ ಪ್ರವೀಣನೂ, ದಕ್ಷ ಸೇನಾಧಿಕಾರಿಯೂ ಹಾಗೂ ಚಾಣಾಕ್ಷ ರಾಜಕೀಯ ಪಟುವೂ ಆಗಿದ್ದ. ಜಹಾಂಗೀರನೂ ಸಹ ಬರೆದಿರುವ 'ತುಜುಕ್ ಜಹಾಂಗೀರಿ' ಎಂಬ ಆತ್ಮಕಥೆಯು ಅವನ ಆಳ್ವಿಕೆ ಹಾಗೂ ವ್ಯಕ್ತಿತ್ವದ ಅಧ್ಯಯನಕ್ಕೆ ಮುಖ್ಯ ಆಧಾರವಾಗಿದೆ. ಅದರಲ್ಲಿ ಅವನ ವ್ಯಕ್ತಿತ್ವ, ಪಾಂಡಿತ್ಯ ಹಾಗೂ ಏರಿಳಿತಗಳ, ಸ್ಪಷ್ಟ ಚಿತ್ರಣವನ್ನು ಕಾಣಬಹುದು.

**(4) ಬಖೈರುಗಳ ಬರಹಗಾರರು:**

ಬಾಬರನ ಸುಶಿಕ್ಷಿತ ಪುತ್ರಿಯಾಗಿದ್ದ ಗುಲ್‌ಬದಲ್‌ಬೇಗಂ ತನ್ನ 'ಹುಮಾಯುನ್ ನಾಮಾದಲ್ಲಿ' ಹುಮಾಯೂನನ ಜೀವನವನ್ನು ಕುರಿತು ಪ್ರತ್ಯಕ್ಷದರ್ಶಿಯಂತೆ ಚಿತ್ರಿಸಿದ್ದಾಳೆ. ಕೆಲವು ಕಡೆ ಅವಳು ಹೆಚ್ಚಾಗಿ ಅಂತಃಪುರದ ಹಿರಿಯ ಮಹಿಳೆಯರು ನೀಡಿದ ವರದಿಗಳನ್ನು ಆಧಾರಗವಾಗಿಟ್ಟುಕೊಂಡು ಬರೆದಿದ್ದಾಳೆ.

ಬಾಬರನ ತಾಯಿಯ ಸಹೋದರಿಯ ಮಗನಾಗಿದ್ದ ಪಂಡಿತ ಮಿರ್ಜಾ ಹೈದರ್ ತೊಘಲಕ್ ರಚಿಸಿರುವ 'ತಾರೀಖಿ-ರಷೀದಿ ಯಲ್ಲಿ ಆ ಕಾಲದ ಯುದ್ಧಗಳ, ಹುಮಾಯೂನನಿಗೂ ಹಾಗೂ ಷೇರ್‌ಷಾನಿಗೂ ನಡೆದ ಕದನ ಮುಂತಾದ ಘಟನೆಗಳನ್ನು ಹತ್ತಿರದಿಂದ ನೋಡಿದ ಸಮಕಾಲೀನನು ನೀಡಿರುವ ಕಥನವನ್ನು ಕಾಣಬಹುದು. ಅವನೇ ಸೇನಾಧಿಕಾರಿಯಾಗಿ ಭಾಗವಹಿಸಿ ನಡೆಸಿದ ಕನೂಜ್ ಕಾಳಗವನ್ನು ಪ್ರತ್ಯಕ್ಷದರ್ಶಿಯಾಗಿ ವರ್ಣಿಸಿದ್ದಾನೆ.

ಹುಮಾಯೂನನಿಗೆ ಹೂಜಿಮಾಹಕ ಸೇವಕನಾಗಿ ಸೇವೆ ಸಲ್ಲಿಸಿದ ಜೌಹರ್ ಸರಳ ಶೈಲಿಯಲ್ಲಿ ಬರೆದಿರುವ ತಜ್‌ಕಿರಾತುಲ್ ವಾಖಿಯತ್' ಎಂಬ ಗ್ರಂಥದಲ್ಲಿ ಹುಮಾಯುನನ ಹಾಗೂ ಅವನ ಸಾರ್ವಜನಿಕ ಕಾರ್‍ಯ ಕಲಾಪಗಳ ಸ್ಪಷ್ಟ ಚಿತ್ರಣವನ್ನು ನೀಡಲು ಪ್ರಾಯೋಗಿಕವಾಗಿ ಪ್ರಯತ್ನಿಸಿರುವುದನ್ನು ನೋಡಬಹುದು.

### *(5) ಖಾಸಗಿ ಇತಿಹಾಸಗಳು*

ಇವುಗಳ ಕರ್ತೃಗಳು ಯಾವ ಸಾಮ್ರಾಟನ ಕಟ್ಟಳೆಗೂ ತಲೆಬಾಗಿ ಬರೆದವರಲ್ಲ. ಬಾಬರನ ಕಾಲದಲ್ಲಿ ವೈಯಕ್ತಿಕ ತಿಳುವಳಿಕೆಯ ಆಧಾರದ ಮೇಲೆ ಜೆನುದ್ದೀನ್ ಬಾಬರನ ಬಗ್ಗೆ ಸಮಕಾಲೀನ ಕಥನವಾಗಿ ಬರೆದ 'ವಾಖಿಹಲೆ' ಬಾಬುರಿ ಮತ್ತು ಹುಸ್ಲೀಂ ಚರಿತ್ರ ಲೇಖಕರು ರಚಿಸಿದ ಅತ್ಯುತ್ತಮ ವಿಶ್ವ ಇತಿಹಾಸಗಳಲ್ಲಿ ಒಂದಾಗಿದೆ ಎಂಬುದಾಗಿ ಪ್ರಶಂಸಿಸಲಾಗಿದ್ದ ಮತ್ತು ಖಾವಂದ್ ಅಮೀರ್ ಬರೆದ ಹಬೀಬುಸ್ ಸಿಯಾರ್ ಮುಖ್ಯವಾಗಿ ಹೆಸರಿಸಬಹುದಾದ ಕೃತಿಗಳು ಖಾವಂದ್ ಮೀರ್‌ನ ಹುಮಾಯೂನ್ ನಾಮವು ಆ ಸುಲ್ತಾನನ ರಾಜಕೀಯ ಸಂಸ್ಥೆಗಳ ಅಧ್ಯಯನಕ್ಕೆ ಉಪಯುಕ್ತವಾಗಿದೆ.

ಅಕ್ಬರನು ನೀಡಿದ ಪ್ರೋತ್ಸಾಹದ ಕಾರಣ ಸಾಹಿತ್ಯ ಚಟುವಟಿಕೆಗಳು ಹೆಚ್ಚಾದವು. ಆ ಕಾಲದಲ್ಲಿ, ತಲೆದೋರಿದ ಕೃತಿಗಳಲ್ಲಿ ಬಡಾನಿಯ 'ಮುಂತಾಖಬತ್ ತವಾರೀಖ್' ಮತ್ತು ನಿಜಾಮುದ್ದೀನ್ ಅಹ್ಮದ್ ಭಾಷೆಯ 'ತಬಾಖತ್ ಅಕ್ಬರಿ' ಪ್ರಮುಖವಾದುವು. ನಿಜಾಮುದ್ದೀನ್ ಅಕ್ಬರನ ಕಾಲದಲ್ಲಿದ್ದ ಮೊಘಲ್ ಭಾರತದ ಇತಿಹಾಸವನ್ನು ಬರೆದು ಅದರಲ್ಲಿ ವಿವಿಧ ಪ್ರಾಂತ್ಯಗಳನ್ನು ವಿವರಿಸಿದ್ದಾನೆ.

ಜಹಾಂಗೀರನ ಕಾಲದಲ್ಲಿ ಮುಹಮ್ಮದ್ ಷರೀಫ್ ಮುತಮದ್‌ಖಾನ್ ಭಕ್ಷಿ ಬರೆದ ಹಾಗೂ ಮೂರು ಭಾಗಗಳನ್ನು ಹೊಂದಿದ್ದ ಇಕ್ಬಾಲ್ ನಾಮ ಜಹಾಂಗೀರಿ ಸಮಕಾಲೀನ ಆಧಾರಗಳ ಮೇಲೆ ಹೆಚ್ಚಿನ ವಿವರಗಳನ್ನು ಒದಗಿಸಿಕೊಟ್ಟಿದೆ. ಖ್ವಾಜ ಕಾಂಗಾರ್ ಘೈರತ್ ಖಾನನ ಮಾಸಿರೆ ಜಹಾಂಗೀರಿಯಲ್ಲಿ ಸಾಮ್ರಾಟನು ಯುವರಾಜನಾಗಿದ್ದ ಕಾಲದ ವಿಚಾರಗಳನ್ನು ಕಾಣಬಹುದು ಮತ್ತು ಸಮಕಾಲೀನ ಕವಿಯೊಬ್ಬ ರಚಿಸಿದ ಜಹಾಂಗೀರ್ ನಾಮವು ಇನ್ನೂ ಹೆಚ್ಚಿನ ವಿಷಯಗಳನ್ನು ಒಳಗೊಂಡಿದೆ.

ಷಹಜಹಾನನೂ ಆಳುತ್ತಿದ್ದ ಸಮಯದಲ್ಲಿ ಹಲವಾರು ಚರಿತ್ರಲೇಖಕರು ಆ ಸಾಮ್ರಾಟನ ಹಾಗೂ ಅವನ ಪೂರ್ವಿಕರ ಆಳ್ವಿಕೆಯ ಬಗ್ಗೆ ವೃತ್ತಾಂತಗಳನ್ನು ರಚಿಸಿದರು. ಷಹಜಹಾನ್ ನಾಮ ಸಾಮ್ರಾಟನ ಗ್ರಂಥಾಲಯದ ಅಧಿಕಾರಿಯಾಗಿದ್ದ ಮುಹಮ್ಮದ್ ತಾಹಿರನು ರಚಿಸಿದ ಮತ್ತು ಆ ಕಾಲದ ಕಂದಾಯ ಹಾಗೂ ಮನ್‌ಸಬ್‌ದಾರರು ಹಿಂದಿ ಹಾಗೂ ಇತರ ಭಾಷೆಗಳಲ್ಲಿ ಚಕ್ರವರ್ತಿಯಾಗಿದ್ದ ಪ್ರೌಢಿಮೆಯನ್ನು ಕುರಿತು ಬರೆದ 'ಬಾದ್‌ಷಹ್‌ನಾಮ' ಹಾಗೂ ಆ ಸಮಯದಲ್ಲಿ ಭಗವಾನ್ ದಾಸ್ ಬರೆದ 'ಷಹಜಹಾನ್ ನಾಮ' ಎಂಬ ಸಂಕ್ಷಿಪ್ತ ಭಾರತ ಇತಿಹಾಸ ಇತಿಹಾಸಗಳು ಮುಖ್ಯವಾದುವು.

ಔರಂಗಜೇಬನು ಇತಿಹಾಸ ರಚನೆಯನ್ನು ನಿಷೇಧಿಸಿದ್ದರೂ, ಅವನ ಕಾಲದಲ್ಲಿ ಅನೇಕ ಖಾಸಗಿ ಚರಿತ್ರೆಗಳು ತಲೆದೋರಿದವು. ಉದಾಹರಣೆಗೆ, ಖಾಸಗಿ ಸಂಶೋಧನೆ ಹಾಗೂ ಇತರ ನಂಬಲರ್ಹವಾಗಿದ್ದ ಆಧಾರಗಳ ಸಹಾಯದಿಂದ ಸಯ್ಯದ್ ಮುಹಮ್ಮದ್ ಬಿಲ್ ಗ್ರಾಮಿಯು ರಚಿಸಿದ ಆಲಂಗೀರನ ಸಾವಿನವರೆಗಿನ ಘಟನೆಗಳ ವಿವರಣೆಯಿಂದ ಕೂಡಿದ್ದ ಮೊಘಲ್ ಚರಿತ್ರೆಯಾಗಿದ್ದ 'ತಬಿಸಾರುಲ್ ನಜರೀನ್' ಅಬುಲ್ ಫಜಲ್ ಮಾಮುರಿಯು ಬರೆದ ಔರಂಗಜೇಬನ ಆಳ್ವಿಕೆಯ ಇತಿಹಾಸ, ಅವನು ಆಳುತ್ತಿದ್ದ ಸಮಯದಲ್ಲಿ ತಲೆದೋರಿದ ಸಂಭವಗಳನ್ನು ಉಲ್ಲೇಖಿಸಿರುವ ಷಕೂರನ ಮುಘೀದುಲ್ ಮವಾರಿಖಿ ಇತ್ಯಾದಿಗಳು ಮುಖ್ಯವಾಗಿದ್ದ ಸಮಕಾಲೀನ ಚರಿತ್ರೆಗಳು.

### *(6) ಪ್ರಾದೇಶಿಕ ಇತಿಹಾಸಗಳು*

ಇಷ್ಟು ಮಾತ್ರವಲ್ಲದೆ, ವಿವಿಧ ಪ್ರಾಂತ್ಯಗಳ ಬಗ್ಗೆ ಹಲವಾರು ಚರಿತ್ರೆಗಳನ್ನು, ಆ ಕಾಲದಲ್ಲಿ ರಚಿಸಲಾಯಿತು. ಉದಾಹರಣೆಗೆ, ಕಾಶ್ಮೀರದ ಬಗ್ಗೆ ಸಂಕ್ಷಿಪ್ತ ವಿವರಣೆಯನ್ನು ನೀಡಿರುವ ಮೊಘಲರ ಆಕ್ರಮಣದ ಬಗ್ಗೆ, ಸಂತರ, ಪಂಡಿತರ ಹಾಗೂ ದೇವಶಾಸ್ತ್ರಜ್ಞರ ಬಗ್ಗೆ ಸವಿಸ್ತರ ವರ್ಣನೆಯನ್ನು ಒಳಗೊಂಡಿರುವ ಮುಲ್ಲಾ ಮುಹಮ್ಮದ್ ಅಜಮಿಯ ತಾರೀಖಿ ಅಜಮಿ ಗ್ರಂಥ ಪ್ರಮುಖವಾದದ್ದು.

ಐತಿಹಾಸಿಕ ದಾಖಲೆಗಳನ್ನು ಹೊಂದಿದ್ದ ಗುಜರಾತಿಗೆ ಸಂಬಂಧಿಸಿದ ; 'ತಾರೀಖೆ ಗುಜರಾತ್' ಎಂಬ ಅಕ್ಬರನ ಕಾಲಕ್ಕೆ ಸೇರಿದ್ದ ಮೀರ್ ಅಬು ತುರಬ್ ಅಲಿಯ ಕೃತಿ; ಗುಜರಾತಿನೊಂದಿಗೆ ಮೊಘಲರಿಗಿದ್ದ ಸಂಬಂಧಗಳನ್ನು ಕುರಿತ ನಿಕಂದರ್ ಬಿನ್ ಮಹಮ್ಮದ್‌ನ 'ಮೀರತ್ ಸಿಕಂದರಿ' ಸಿಂದ್ ಪ್ರಾಂತ್ಯದ ಸವಿಸ್ತರ ಚರಿತ್ರೆಯಾಗಿದ್ದ ಮೀರ್ ಮಹಮ್ಮದ್ ಮಾಸುಮ್‌ನ 'ತಾರೀಖಿಸ್ ಸಿಂಧ್' ಮೂರನೆಯ ಸಂಪುಟದಲ್ಲಿ ಸಿಂಧ್ ವಿಶೇಷ ಇತಿಹಾಸವನ್ನು ಒಳಗೊಂಡಿರುವ ಅಲಿ ಷೇರ್ ಖಾನಿಯ 'ತುಫಾತುಲ್ ಕಿರಾಂ', ಸಿಂದ್‌ನ ಬಗ್ಗೆ ಒಂದು ಪ್ರತ್ಯೇಕ ಅಧ್ಯಯನದಿಂದ ಕೂಡಿರುವ ಅಬ್ದುಸ್ ಷಕೂರನ 'ಇಂತೆ ಖಾಬೆ ಮುಂತೆ ಖಿಬ್ ಕಲಾಂ' ಇತ್ಯಾದಿ.

### (7) ಮುಸ್ಲಿಂ ಸಂತರ ಜೀವನ ಚರಿತ್ರೆ ಅಥವಾ ಇತಿಹಾಸಗಳು

ಮೊಘಲ್ ಸಾಮ್ರಾಟರ ಕಾಲದಲ್ಲಿ ಪರ್ಷಿಯನ್ ಅಥವಾ ಅರಬ್ಬೀ ಭಾಷೆಯಲ್ಲಿ ಅನೇಕ ಮುಸ್ಲಿಂ ಸಂತರ ಜೀವನ ಚರಿತ್ರೆಗಳನ್ನು ರಚಿಸಲಾಗಿದ್ದಿತು. ಉದಾಹರಣೆಗೆ, ಹುಮಾಯೂನನ ಕಾಲದಲ್ಲಿ ಷೇಕ್ ಜಮಾಲನು ರಚಿಸಿದ 'ಸಿಯರಲ್ ಅರಿಫೀನ್' ಸಂತರ ಹಾಗೂ ಪಂಡಿತರ ಜೀವನ ಚರಿತ್ರೆಗಳ ಸಂಗ್ರಹವಾಗಿದೆ. ಅದೇ ರೀತಿ ಷೇಕ್ ಅಬ್ದುಲ್ ಹಖ್ ದೆಹಲ್‌ವಿಯು ತನ್ನ ಅಖ್ಬಾರುಲ್ ಆಖಿಯಾರ್‌ನಲ್ಲಿ ಭಾರತದ ಸಂತರ ವಿದ್ವಾಂಸರ ಹಾಗೂ ಪುಣ್ಯ ಪುರುಷರ ಜೀವನ ಚರಿತ್ರೆಗಳನ್ನು ಸಂಗ್ರಹಿಸಿದ್ದಾನೆ. ಅಲ್ಲಾಜಿಯಾ ತನ್ನ 'ಸಿಯರುಲ್ ಇಸ್ರಾಬ್‌ನಲ್ಲಿ' ವಿವಿಧ ಸಂತರ ಜೀವನ ಚಿತ್ರಣಗಳನ್ನು ನೀಡಿದ್ದಾನೆ.

### (8) ದೇಶ ವಿಚಾರ ಕೋಶಗಳು, ಪತ್ರಗಳು ಮತ್ತು ಆಡಳಿತ ಕೈಪಿಡಿಗಳು

ಅಬುಲ್ ಫಜಲನ ಐನಿ -ಅಕ್ಬರಿ ಮತ್ತು ಅಮಿನ್ ಅಹ್ಮದ್ ರಾಜಿಯ 'ಹಫ್ತ್ ಇಖ್ಲೀಮ್' ಅಂಕಿ ಅಂಶಗಳ ಸಮೀಕ್ಷೆ, ಭೌಗೋಳಿಕಾಂಶ ಹಾಗೂ ಜೀವನ ಚರಿತ್ರೆಗಳ ವಿವರಗಳನ್ನು ಒದಗಿಸಿಕೊಡುತ್ತವೆ. ಸರ್ಕಾರಿ ಹಾಗೂ ಖಾಸಗೀ ಪತ್ರಗುಚ್ಛಗಳೂ ಮುಖ್ಯವಾಗಿದ್ದವು. ಉದಾಹರಣೆಗೆ, ಅಬ್ದುಲ್ ಸಮದನು ಅಬುಲ್ ಫಜಲನ ಮರಣಾ ನಂತರ ಸಂಗ್ರಹಿಸಿದ ಅವನ 'ಇನ್ಷಾ' (ಪತ್ರಗಳು) ಅದಬೆ ಅಲಂಗೀರಿ, ಕಲಿಯಾತ್ ಔರಂಗಜೇಬ್ ಮುಂತಾದ ಔರಂಗಜೇಬನ ಪತ್ರಗಳ ಮಾಲೆಗಳು ಇತ್ಯಾದಿಗಳು.

### (9) ಹಿಂದೂ ಇತಿಹಾಸಕಾರರ ಪರ್ಷಿಯನ್ ರಚನೆಗಳು

ಹಿಂದೂ ಲೇಖಕರೂ ಸಹ ಪರ್ಷಿಯನ್ ಭಾಷೆಯಲ್ಲಿ ಪರಿಣತರಾಗಿ ಇಂಡೋ ಪರ್ಷಿಯನ್ ಇತಿಹಾಸ ಲೇಖನ ಕಲೆಗೆ ಸಾಕಷ್ಟು ಕೊಡುಗೆಗಳನ್ನು ಕೊಟ್ಟರು. ಷಹಜಹಾನನ ಮೃತ್ಯುವಿನ ಕಾಲದವರೆಗಿನ ಭಾರತದ ಸಾಮಾನ್ಯ ಇತಿಹಾಸವಾಗಿದ್ದ ಮತ್ತು ಔರಂಗಜೇಬನ ಕಾಲದ ಆರ್ಥಿಕ ಸ್ಥಿತಿಯ ವಿವರಣೆ, ಸಂತರ, ಪಂಡಿತರ, ಬೋಧಕರು ಮತ್ತು ಸಿಖ್ ಜನರ ಬಗ್ಗೆ ಉಲ್ಲೇಖ ಮತ್ತು ಪಂಜಾಬಿನ ವರ್ಣನೆಯಿಂದ ಕೂಡಿದ್ದ ಸುಜನ್‌ರೈಯ 'ಖುಲಾಸಾತುಕ್ ತವಾರೀಖ್', ಬ್ರಿಂದಾಬಿನ್ ರೆ ತೈಮೂರಿನಿಂದ ಹಿಡಿದು ಔರಂಗಜೇಬ್‌ನನ್ನು ಸೇರಿದಂತೆ ತೋರಿದ ಸಾಮ್ರಾಟರು ಆಕ್ರಮಣಗಳನ್ನು ಹೇಗೆ ಹಾಗೂ ಎಷ್ಟು ಕಾಲಾವಧಿಯೊಳಗೆ ನಡೆಸಿದರೆಂಬುದನ್ನು ಮತ್ತು ಹಿಂದಿನ ಪ್ರಭುಗಳ ಏಳಿಗೆ ಹಾಗೂ ಅವನತಿಗೆ ಕಾರಣಗಳಾಗಿದ್ದ ಅಂಶಗಳನ್ನು ವಿವರಿಸುವುದಕ್ಕಾಗಿ 'ಲೂಬ್ಬೂತ್ ತವಾರಿಖೆ ಹಿಂದ್' ಎಂಬ ಕೃತಿಯನ್ನು ಬರೆದನು. ಭೀಮ್‌ಸೇನ್ ಬರಾಹಾನ್ ಪುರಿಯ 'ನುಸ್ಕಯೆ ದಿಲ್ಕುಷ್'ದಖನ್ನಿನಲ್ಲಿ ಮೊಘಲರು ನಡೆಸಿದ ಚಟುವಟಿಕೆಗಳನ್ನು ತಿಳಿದುಕೊಳ್ಳುವುದಕ್ಕೆ ಬಹು ಉಪಯುಕ್ತವಾಗಿದೆ. ಸಮಕಾಲೀನ ಹಿಂದೂವಾಗಿ ಔರಂಗಜೇಬನ ಆಳ್ವಿಕೆಯನ್ನು ವೀಕ್ಷಿಸಿದ ಅವನು ಘಟನೆಗಳ ಕಾರಣ ಹಾಗೂ ಪರಿಣಾಮಗಳು, ದೇಶದ ಹಾಗೂ ಜನರ ಪರಿಸ್ಥಿತಿ ಮತ್ತು ಅವರ ವಿನೋದ ಕ್ರೀಡೆಗಳು, ಆಹಾರ ಪದಾರ್ಥಗಳ ಬೆಲೆ, ದಾರಿಗಳ ಸ್ಥಿತಿ, ಅಧಿಕಾರಿ ವರ್ಗದ ಸಾಮಾಜಿಕ ಜೀವನ, ಮೊಘಲ್ ಯುದ್ಧಗಳಲ್ಲಿನ ಸಂಭವಗಳು ಮುಂತಾಗಿ ಸರ್ಕಾರಿ ಇತಿಹಾಸಗಳಲ್ಲಿ ಇಲ್ಲದಿದ್ದ ಅನೇಕ ಅಮೂಲ್ಯ ವಿವರಗಳನ್ನು ನೀಡಿದ್ದಾನೆ.

## 26.6 ಉಪಸಂಹಾರ

ಪ್ರಾಚೀನ ಭಾರತದ ಮತ್ತು ಮಧ್ಯಯುಗ ಇತಿಹಾಸ ಲೇಖನ ಇತಿಹಾಸವನ್ನು ಪುನರ್ ರಚಿಸುವಲ್ಲಿ ಭಾರತದ ಮಟ್ಟಿಗೆ ವಿಫಲತೆ ಕಂಡಿತು ಎಂದರೆ ತಪ್ಪಾಗಲಾಗದು. ಪ್ರಾಚೀನ ಭಾರತದಲ್ಲಿ ಇತಿಹಾಸ ದಾಖಲೆಗೆ ಆ ಅಭಿವೃದ್ಧಿಗೆ ಹೆಚ್ಚು ಗಮನ ನೀಡಲಿಲ್ಲ. ಅದಕ್ಕಾಗಿ ಅಲ್ಬರೂನಿ ಪ್ರಾಚೀನ ಭಾರತದ ಇತಿಹಾಸವನ್ನು ಟೀಕಿಸಿದ್ದಾನೆ. ಪ್ರಾಚೀನ ಭಾರತೀಯರಿಗೆ ಐತಿಹಾಸಿಕ ಪ್ರಜ್ಞೆವಿರಲಿಲ್ಲವೆಂದು ಆಪಾದಿಸಿದ್ದಾನೆ. ಅವರ ಚರಿತ್ರೆ ಕೇಳಿದರೆ ಅವರು ಕತೆ ಹೇಳಲು ಆರಂಭಿಸುತ್ತಾರೆ ಎಂದಿದ್ದಾನೆ.

ಭಾರತದಲ್ಲಿ ವಸ್ತುನಿಷ್ಠವಾದ ಇತಿಹಾಸ ಲೇಖನ ಕಲೆ ಬೆಳವಣಿಗೆ ಹೊಂದಿದ್ದು ಮಧ್ಯಯುಗದಲ್ಲಿ. ಇಸ್ಲಾಂ ಆಗಮನದೊಂದಿಗೆ ಅನೇಕ ದಿನ ಚರಿತ್ರೆಕಾರರು ಭಾರತಕ್ಕೆ ಆಗಮಿಸಲು ಆರಂಭಿಸಿದ್ದಾರೆ. ಇಸ್ಲಾಂ ರಾಜ್ಯದ ರೂಪುಗೊಳ್ಳುವಿಕೆಯು ಹಲವಾರು ದಿನಚರಿತ್ರೆಕಾರರ ಆಶ್ರಯ ಸ್ಥಳವು ಕೂಡ ಆಯಿತು. ಅದರ ಪರಿಣಾಮ ಪ್ರಸಿದ್ಧ ಚರಿತ್ರೆಕಾರರೆನಿಸಿಕೊಂಡ ಅಮೀರ್ ಖುಸ್ರು, ಜಿಯಾವುದ್ದೀನ್ ಬರಾನಿ, ಅಬ್ದುಲ್ ಫಸಲ್, ಕಾಫಿಖಾನ್ ಮುಂತಾದವರು ಬೆಳೆಯಲು ಕಾರಣವಾಯಿತು. ಹೀಗಾಗಿ ಮಧ್ಯಯುಗದಲ್ಲಿ ಇತಿಹಾಸ ಲೇಖನ ಕಲೆಯು ಬೆಳವಣಿಗೆಯಾಗಲು ಕಾರಣವಾಯಿತು.

## 26.7 ಸ್ವಯಂ ಮೌಲ್ಯಮಾಪನ ಪ್ರಶ್ನೆಗಳು

1. ಪ್ರಾಚೀನ ಇತಿಹಾಸ ಲೇಖನದಲ್ಲಿ ರಾಷ್ಟ್ರೀಯವಾದಿ ಇತಿಹಾಸಕಾರರ ಪಾತ್ರವನ್ನು ಚರ್ಚಿಸಿ.
2. ಓರಿಯಂಟಲಿಸ್ಟರು ಯಾರು? ಅವರ ಇತಿಹಾಸ ಲೇಖನದ ಲಕ್ಷಣಗಳನ್ನು ತಿಳಿಸಿ.
3. ಪ್ರಾಚೀನ ಭಾರತದಲ್ಲಿ ಐತಿಹಾಸಿಕ ಪ್ರಜ್ಞೆ ಇರಲಿಲ್ಲ ಎಂಬ ಮಾತನ್ನು ನೀವು ಒಪ್ಪುತ್ತೀರಾ?

## 26.8 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

1. Sheik Ali .B. : "History: Its theory and method", Bangalore, 1999.
2. Fred .N. Kerlinget : "Foundation of Behavioural Research", Delhi - 1983.
3. R.K. Majumdar and A.N. Srivastva: "Historiography", Delhi - 1975.

ಡಾ. ವೈ.ಹೆಚ್. ನಾಯಕವಾಡಿ

# ಘಟಕ - 27 ಆಧುನಿಕ ಭಾರತದ ಇತಿಹಾಸ ಬರವಣಿಗೆ

ರಚನೆ

27.0 ಉದ್ದೇಶಗಳು

27.1 ಪ್ರಸ್ತಾವನೆ

27.2 ಪ್ರಾಚ್ಯ ವಿದ್ಯಾವಿದರ ಕಾಲದ ಇತಿಹಾಸ ಬರವಣಿಗೆ

27.3 ಪ್ರಯೋಜನವಾದ ಕಾಲದ ಇತಿಹಾಸ ಬರವಣಿಗೆ

27.4 ರಾಷ್ಟ್ರೀಯವಾದ ಕಾಲದ ಇತಿಹಾಸ ಬರವಣಿಗೆ

27.5 ಉಪಸಂಹಾರ

27.6 ಸ್ವಯಂ ಮೌಲ್ಯಮಾಪನ ಪ್ರಶ್ನೆಗಳು

27.7 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 27.0 ಉದ್ದೇಶಗಳು

ಈ ಘಟಕದಲ್ಲಿ ಪ್ರಮುಖವಾಗಿ ಪಾಶ್ಚಿಮಾತ್ಯ ಇತಿಹಾಸಕಾರರ ಬರವಣಿಗೆಗಳನ್ನು ಅಧ್ಯಯನ ಮಾಡಲಾಗುವುದು. 15ನೇ ಶತಮಾನದಲ್ಲಿ ಯೂರೋಪ್ ಮತ್ತು ಏಷ್ಯಾ ರಾಷ್ಟ್ರಗಳ ಮಧ್ಯೆ ವ್ಯಾಪಾರ ಮತ್ತು ಧಾರ್ಮಿಕ ಸಂಬಂಧಗಳಿಂದಾಗಿ ಸಂಪರ್ಕವೇರ್ಪಟ್ಟಿತು. ಅದರಿಂದಾಗಿ ಪ್ರಾಚ್ಯ ವಿದ್ಯಾವಿದರರ ಆಗಮನವಾಯಿತು. ಭಾರತದಲ್ಲಿ ಅವರು ಕಂಡಂತಹ ಭಾಷೆ, ಧರ್ಮಗಳ ಬಗ್ಗೆ ಬರವಣಿಗೆ ಆರಂಭಿಸಿದರು. ಹಾಗೆಯೇ ಈ ಘಟಕದಲ್ಲಿ ಜೇಮ್ಸ್ ಮಿಲ್ಲರ್‌ರಂತಹ ಪ್ರಯೋಜನವಾದಿ ಇತಿಹಾಸಕಾರರ ಬಗ್ಗೆ ಹಾಗೂ ಅವರ ಬರವಣಿಗೆಗಳ ಬಗ್ಗೆ ಅಧ್ಯಯನ ಮಾಡಲಾಗುವುದು. ನೇಯ ಶತಮಾನದಲ್ಲಿ ಇತಿಹಾಸಕಾರರು ತಮ್ಮ ಬರವಣಿಗೆಗಳನ್ನು ಈ ಹಿನ್ನೆಲೆಯಲ್ಲಿ ಆರಂಭಿಸಿದರು. ಈ ಘಟಕದಲ್ಲಿ ರಾಷ್ಟ್ರೀಯವಾದಿ ಇತಿಹಾಸಕಾರರ ಬರವಣಿಗೆಯನ್ನು ಅಧ್ಯಯನ ಮಾಡಲಾಗುವುದು. ನೆಯ ಶತಮಾನದ ಭಾರತ ಇತಿಹಾಸ ಲೇಖನ ಕಲೆಯ ವಿಶಿಷ್ಟತೆಯೆಂದರೆ ರಾಷ್ಟ್ರೀಯವಾದಿಗಳು.

## 27.1 ಪ್ರಸ್ತಾವನೆ

ಯೂರೋಪಿಯನ್ನರು ಭಾರತದ ಮಣ್ಣಿನ ಮೇಲೆ ಪಾದಾರ್ಪಣೆಯನ್ನು ಮಾಡಿದ ನಂತರ ಭಾರತೀಯ ಇತಿಹಾಸ ಲೇಖನ ಕಲೆಯಲ್ಲಿ ದೃಷ್ಟಿಕೋನ ನಿರೂಪಣೆ ಬಳಸಿದ ತಂತ್ರಗಳ ವಿಚಾರದಲ್ಲಿ ಮಾತ್ರವಲ್ಲದೆ, ಐತಿಹಾಸಿಕ ಸಾಹಿತ್ಯದ ಗಾತ್ರದಲ್ಲಿ ತೀವ್ರ ಬದಲಾವಣೆ ಉಂಟಾಯಿತು. ಮೊದಲು ಪೋರ್ಚುಗೀಸರು, ಅವರನ್ನು ಅನುಸರಿಸಿ ಡಚ್ಚರು ಹಾಗೂ ಫ್ರೆಂಚರು ಭಾರತಕ್ಕೆ ಬಂದರು. ಅವರು ಬೆಳೆಸಿದ ಇತಿಹಾಸ ರಚನಾ ಸಂಪ್ರದಾಯವು ಭಾರತದ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿತು. ಆದರೂ ವ್ಯಾಪಾರದ ಆಕರ್ಷಣೆಯಿಂದಾಗಿ ಭಾರತಕ್ಕೆ ಕೊನೆಯಲ್ಲಿ ಬಂದ ಬ್ರಿಟಿಷರು ಇಲ್ಲಿ ಆಳಲು ನಿಂತರು. ಆ ಸಮಯದಿಂದ, ಮುಖ್ಯವಾಗಿ 1757 ರಿಂದ 1949 ರವರೆಗೆ ಭಾರತದಲ್ಲಿ ಕಂಡುಬಂದ ಐತಿಹಾಸಿಕ ಸಾಹಿತ್ಯದ ಸುಗ್ಗಿ ಬೆಳೆಯು ಇನ್ಯಾವ ಕಾಲದಲ್ಲೂ ಕಾಣಬರಲಿಲ್ಲ. ಲಂಡನ್ನಿನ ವ್ಯಾಪಾರಿ ಸಂಸ್ಥೆಯೊಂದು ಸ್ವದೇಶದಿಂದ ಸಾವಿರಾರು ಮೈಲುಗಳ ದೂರದಲ್ಲಿದ್ದ ಬೃಹತ್ ದೇಶವಾಗಿದ್ದ ಭಾರತ ನಾಡಿನಲ್ಲಿ ರಾಜಕೀಯ ಅಧಿಕಾರವನ್ನು ಸ್ಥಾಪಿಸಿದ್ದರಿಂದ, ಪ್ರತಿ ಆಡಳಿತ ನೀತಿಯನ್ನು ಬರವಣಿಗೆಯಲ್ಲಿ ನಮೂದಿಸಬೇಕಾಯಿತು, ಪ್ರತಿ ಅಧಿಕೃತ ಅಭಿಪ್ರಾಯವನ್ನು ದಾಖಲು ಮಾಡಿ, ರಾಜ್ಯದ ಪ್ರತಿ ವ್ಯವಹಾರವನ್ನು ಸರ್ಕಾರಿ ಪತ್ರ, ಪರ್ಯಾಲೋಚನೆ ಹಾಗೂ ಅಧಿಕೃತ ನಿಯಮಾವಳಿ, ಗುಪ್ತ ಪತ್ರ ಇತ್ಯಾದಿಗಳ ಮೂಲಕ ನಡೆಸಬೇಕಾಯಿತು. ಈಸ್ಟ್ ಇಂಡಿಯಾ ಕಂಪೆನಿಯ ಅಧಿಕಾರಿ ಹಾಗೂ ಇತರ ಕಾರ್ಯನಿರ್ವಾಹಕರ ಮೇಲೆ ಹತೋಟಿಯನ್ನು ಇಟ್ಟುಕೊಳ್ಳುವುದಕ್ಕಾಗಿ, ಸ್ವದೇಶಿ ಸರ್ಕಾರವು ಕಠಿಣ ನಿಯಮಗಳನ್ನು ನಿಗಧಿಪಡಿಸಿತು. ಅವುಗಳ ಪ್ರಕಾರ, ಗ್ರಾಮದ ಹಂತದಿಂದ ಹಿಡಿದು ಕೇಂದ್ರ ಸರ್ಕಾರದವರೆಗೆ ಸಂಬಂಧಪಟ್ಟ ವಿಷಯಗಳನ್ನೆಲ್ಲಾ ನಿರ್ದೇಶಕರ ಮಂಡಳಿಗೆ ಲಿಖಿತದ ಮೂಲಕ ತಿಳಿಸಬೇಕಾಗಿದ್ದಿತು. ಈ ಕಾರಣದಿಂದ ಕ್ರಮಬದ್ಧ ಕಾಗದ ಪತ್ರಗಳ ಅನೇಕ ಕಟ್ಟುಗಳ ಸೃಷ್ಟಿಯಾಯಿತು. ಅವುಗಳು ಬ್ರಿಟಿಷ್ ಆಡಳಿತ ನೀತಿಯ ನಿರ್ಮಾಪಕರ ಮನೋವೃತ್ತಿಯ ಮೇಲೆ ಸಾಕಷ್ಟು ಬೆಳಕನ್ನು ಚೆಲ್ಲುತ್ತವೆ.

ಇಷ್ಟು ಮಾತ್ರವಲ್ಲದೆ, ಬ್ರಿಟಿಷ್ ಆಡಳಿತ ಹಾಗೂ ಸಂಪರ್ಕದ ಕಾರಣ ಭಾರತ ಜನ ಜೀವನದ ಪ್ರತಿ ಕ್ಷೇತ್ರವೂ ಪರಿವರ್ತನೆಗೆ ಒಳಗಾಯಿತು. ಉಂಟಾದ ಸಾಮಾಜಿಕ ಧಾರ್ಮಿಕ ಬದಲಾವಣೆಗಳು, ಬೆಳೆಸಲಾದ ಬೃಹತ್ ಪ್ರಮಾಣದ ವ್ಯಾಪಾರೋದ್ಯಮಗಳು, ವಿಜ್ಞಾನ, ಕಲೆ ಹಾಗೂ ಔದ್ಯೋಗಿಕ ತಂತ್ರಗಳಿಗೆ ನೀಡಲಾದ ಪ್ರೋತ್ಸಾಹ. ಶೈಕ್ಷಣಿಕ ಆಡಳಿತ ಸಾಮಾಜಿಕ ಮುಂತಾದ ಸಂಸ್ಥೆಗಳ ಪುನರ್‌ರಚನೆ ಇತ್ಯಾದಿಗಳ ಕಾರಣ ಭಾರತ ಸಮಾಜದಲ್ಲಿ ನೂತನ ವಿಚಾರಗಳ ಹೊನಲು ಹರಿಯಿತು. ಆದರೆ ಈ ಪರಿವರ್ತನಾ ಪ್ರತಿಕ್ರಿಯೆಗಳ ಇನ್ನೊಂದು ಮುಖದಲ್ಲಿ ಹೇಗೆ ಬ್ರಿಟಿಷರು ಭಾರತದಲ್ಲಿ ತಮ್ಮ ಅಧಿಕಾರ ಭದ್ರವಾಗಿ ನೆಲೆಯೂರುವಂತೆ ಮಾಡಲು ಹಾಗೂ ಅದನ್ನು ವಿಸ್ತರಿಸಲು ಹಲವಾರು ನಿಂದಾರ್ಹ ಕ್ರಮಗಳನ್ನು ಕೈಗೊಂಡರು. ತಮ್ಮ ಅಧಿಕಾರವನ್ನು ವಿರೋದಿಸಿದ ಸ್ಥಳೀಯ ಪ್ರಭುಗಳನ್ನು ಸದೆಬಡಿಯಲು ಅನ್ಯಾಯಕರ ನೀತಿ ಹಾಗೂ ವಿಧಾನಗಳನ್ನು ಬಳಸಿದರು. ಭಾರತದ ಹಿಂದಿನ ಅರ್ಥ ವ್ಯವಸ್ಥೆಯನ್ನು ಹಾಳುಮಾಡಿ ಅದರ ಗ್ರಾಮ ಕೈಗಾರಿಕೆ, ಕಲೆ ಹಾಗೂ ಕೈ ಕಸುಬುಗಳನ್ನು ಅಳಿಸಿ ಹಾಕಿದರು. ಸಮಾಜದ ಸಮತೂಕವನ್ನು ಅಲ್ಲಾಡಿಸಿದರು. ಭಾರತದ ಸಂಪನ್ಮೂಲಗಳನ್ನು ತಮ್ಮ ಸ್ವಾರ್ಥಸಾಧನೆಗಾಗಿ ಬಳಸಿಕೊಂಡು, ಭಾರತದ ಬಹು ಜನರನ್ನು ನಿರ್ಗತಿಕರನ್ನಾಗಿಸಿದರು ಎಂಬ ಕರಾಳ

ಚಿತ್ರವನ್ನು ನೋಡಬಹುದು. ಭಾರತದ ಜನಜೀವನ ವಾಹಿನಿಯಲ್ಲಿ ವಿಲೀನವಾಗದೆ ಪ್ರತ್ಯೇಕವಾಗಿಯೇ ಇದ್ದುಕೊಂಡಿದ್ದ ಬ್ರಿಟಿಷರು ಅನೇಕ ವೇಳೆ ತಮ್ಮ ಹಿತವನ್ನೇ ಗಮನದಲ್ಲಿಟ್ಟುಕೊಂಡು ನೂತನ ರಾಜನೀತಿಗಳನ್ನು ನಿರೂಪಿಸುತ್ತಿದ್ದರು. ಅದು ಅನೇಕ ಯುದ್ಧ ಹಾಗೂ ಕ್ರಾಂತಿಗಳ ಕಾಲವಾಗಿದ್ದಿತು. ಭಾರತದ ಸ್ವಾತಂತ್ರ್ಯವನ್ನು ಸಾಧಿಸುವುದಕ್ಕಾಗಿ, ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ತಲೆದೋರಿತು. ಭಾರತೀಯರು ವಿವಿಧ ಮಹಾನಾಯಕರುಗಳ ಮಾರ್ಗದರ್ಶನದಲ್ಲಿ ಬ್ರಿಟಿಷರಿಗೆ ಸವಾಲನ್ನು ಒಡ್ಡಲಾರಂಭಿಸಿದರು.

ಹೀಗೆ ಭಾರತದಲ್ಲಿ ನಡೆದ ಈ ಮಹಾ ನಾಟಕವು ಇತಿಹಾಸ ಸಂಶೋಧಕನಿಗೆ ಅಪಾರ ಸಂಶೋಧಕನು ಸಾಮಗ್ರಿಗಳನ್ನು ಒದಗಿಸುತ್ತದೆ. ಆಧುನಿಕ ಭಾರತದ ಇತಿಹಾಸ ಲೇಖನ ಕಲೆಯ ಮೌಲ್ಯವನ್ನು ನಿರ್ಧರಿಸಲು ಈ ಐತಿಹಾಸಿಕ ಹಿನ್ನೆಲೆ ಅವಶ್ಯಕ.

## 27.2 ಪ್ರಾಚ್ಯ ವಿದ್ಯಾವಿದರ ಕಾಲದ ಇತಿಹಾಸ ಬರವಣಿಗೆ

ಭಾರತದ ಪುರಾತನ ಇತಿಹಾಸಕ್ಕೆ ಸಂಬಂಧಿಸಿ ಆಧುನಿಕ ಬರವಣಿಗೆಯೂ ಪುರಾತನ ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದ ಅಧ್ಯಯನಗಳೂ ಹದಿನೆಂಟನೆಯ ಶತಮಾನದಲ್ಲಿ ಪ್ರಾರಂಭವಾದವು. ಅಂದಿನಿಂದ ಇಪ್ಪತ್ತನೆಯ ಶತಮಾನದ ಆರಂಭಿಕ ವರ್ಷಗಳವರೆಗೆ ಪುರಾತನ ಇತಿಹಾಸ ರಚನೆಯಲ್ಲಿ ಮೂರು ಪ್ರಧಾನ ಚಿಂತನ ಪ್ರವೃತ್ತಿಗಳು ಗೋಚರಕ್ಕೆ ಬರುತ್ತವೆ. ಅವನ್ನು ಪ್ರಾಚ್ಯವಿದ್ಯಾವಿದರ ಅಭಿಪ್ರಾಯಗಳು, ಉಪಯೋಗಿತಾವಾದಿಗಳ ಅಭಿಪ್ರಾಯಗಳು ಮತ್ತು ರಾಜ್ಯವಾದಿಗಳ ಅಭಿಪ್ರಾಯಗಳು ಎಂದು ವಿವರಿಸಬಹುದು.

ಹದಿನೈದನೆಯ ಶತಮಾನದಿಂದ ಯೂರೋಪ್ ಮತ್ತು ಏಷ್ಯಾಗಳ ನಡುವೆ ವ್ಯಾಪಾರ ಸಂಪರ್ಕಗಳು ಹೆಚ್ಚಿದುದು ನಾನಾ ಐರೋಪ್ಯ ವಿದ್ವಾಂಸರೂ, ಧರ್ಮ ಪ್ರಚಾರಕರೂ ಏಷ್ಯಾದ ಸಂಸ್ಕೃತಿಯಲ್ಲಿ ಕ್ರಮೇಣ ಆಸಕ್ತಿ ತೋರುವುದಕ್ಕೆ ದಾರಿಮಾಡಿಕೊಟ್ಟಿತು. ಭಾರತದ ಪ್ರಸಂಗದಲ್ಲಿ ಈ ಆಸಕ್ತಿ ಭಾಷೆಗಳ ಅಧ್ಯಯನದೊಂದಿಗೆ, ಅದರಲ್ಲೂ ವಿಶೇಷವಾಗಿ ಸಂಸ್ಕೃತ ಹಾಗೂ ಪರ್ಷಿಯನ್ ಭಾಷೆಗಳ ಅಧ್ಯಯನದೊಂದಿಗೆ ಪ್ರಾರಂಭವಾಯಿತು. ಹದಿನೆಂಟನೆಯ ಶತಮಾನದ ಕೊನೆಯ ಭಾಗದಲ್ಲಿ 'ರಾಯಲ್ ಏಷ್ಯಾಟಿಕ್ ಸೊಸೈಟಿ' ಸ್ಥಾಪನೆಗೊಂಡಿತು. ಭಾರತದ ಪುರಾತನ ಪರಂಪರೆಯನ್ನು ವ್ಯವಸ್ಥಿತವಾಗಿ ದಾಖಲಿಸುವ ಕಾರ್ಯ ಪ್ರಾರಂಭವಾಯಿತು. ಫಲವಾಗಿ ಈ ಅಧ್ಯಯನಗಳು ಹೆಚ್ಚು ಚುರುಕಾಗಿ ನಡೆಯತೊಡಗಿದವು. ಇದರಲ್ಲಿ ಹೆಚ್ಚಿನ ಕಾರ್ಯವನ್ನು ನೆರವೇರಿಸಿದ ವಿದ್ವಾಂಸರು ಪ್ರಾಚ್ಯ ವಿದ್ಯಾವಿದರು ಅಥವಾ ಭಾರತ ವಿದ್ಯಾವಿದರು ಎಂಬ ಹೆಸರು ಪಡೆದರು. ಇವರಲ್ಲಿ ಸಂಸ್ಕೃತದ ಅಧ್ಯಯನ ನಡೆಸಿದವರು ಆರ್ಯನ್ ಭಾಷೆಗಳನ್ನು ಮಾತನಾಡುವ ಜನತೆಗಳ ಸಂಸ್ಕೃತಿಯ ಬಗೆಗೆ ಹೆಚ್ಚು ಉತ್ಸಾಹ ತೋರಿದರು. ಇವರೇ 'ಇಂಡೋ-ಯೂರೋಪಿಯನ್ ತವರು' ಎಂಬಂಥ ಒಂದು ಸಿದ್ಧಾಂತವನ್ನು ಸೃಷ್ಟಿಸಿ ಸಂಸ್ಕೃತ ಹಾಗೂ ಗ್ರೀಕ್ ಸಂಸ್ಕೃತಿಗಳು ಒಂದೇ ಮೂಲದವು ಎಂದೂ ಪ್ರತಿವಾದಿಸಿದರು. ಇವರು ಆರ್ಯರನ್ನು ಪರಸ್ಪರ ಸಂಬಂಧಿತ ಭಾಷೆಗಳನ್ನು ಬಳಸುತ್ತಿದ್ದ ಜನತೆಗಳ ಒಂದು ವೃಂದ ಎಂದು ಪರಿಗಣಿಸದೆ ಅವರನ್ನು ಒಂದು 'ಕುಲ' ವನ್ನಾಗಿ ಕಂಡುಕೊಂಡರು. ಭಾರತದಲ್ಲಿನ ಆರ್ಯರ ಸಂಸ್ಕೃತಿಗೂ ಯೂರೋಪಿನಲ್ಲಿನ ಗ್ರೀಕ್ ಸಂಸ್ಕೃತಿಗೂ ನಡುವೆ ಸಂಬಂಧ ಕಲ್ಪಿಸಲು ಹವಣಿಸಿದರು. ಇವರು ವೇದಗಳ ಕಾಲವನ್ನು ಅತ್ಯುತ್ತಮವಾದುದೆಂದು ಹಾಡಿ ಹೊಗಳಿದರು. ಪುರಾತನ ಭಾರತೀಯರು ಸರ್ವ ರೀತಿಯಲ್ಲೂ ಸಮರ್ಪಕವಾದ ಸಮಾಜ ಸ್ಥಾಪಿಸಿಕೊಂಡಿದ್ದರು ಎಂದು ಪ್ರತಿಪಾದಿಸಿದರು. ಆ ಕಾಲದಲ್ಲಿದ್ದ ಬಿಕ್ಕಟ್ಟು ಬಿಗುಪುಗಳನ್ನು ಕಡೆಗಾಣಿಸಿದರು. ಉತ್ಕೃಷ್ಟ ಅಂಶಗಳನ್ನಷ್ಟೇ ಒತ್ತಿ ಹೇಳಿದರು. ಇದು ವೇದಗಳಲ್ಲೂ ಅವುಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲೂ ಮಹೋನ್ನತಿಯ ಭಾವನೆ ಹೊಂದಿದ್ದ ಸಾಂಪ್ರದಾಯಿಕ ಹಿಂದೂಗಳ ಅಭಿಪ್ರಾಯಕ್ಕೆ ತುಂಬ ಸರಿಹೊಂದುತ್ತಿದ್ದಿತು.

ಈ ಚಿಂತನ ರೀತಿಯ ತಂತುಗಳನ್ನೇ ಅನಂತರ ಎತ್ತಿಕೊಂಡು ಭಾರತೀಯ ಇತಿಹಾಸಕಾರರು ಒಂದು ತಪ್ಪು ಮಾಡಿದರು. ಅವರು ಪುರಾತನ ಭಾರತೀಯ ಸಮಾಜವನ್ನು ವೈಭವೀಕರಿಸಲು ಪ್ರಾಚ್ಯ ವಿದ್ಯಾವಿದರನ್ನು ಪ್ರೇರಿಸಿದ್ದಂಥ ಮೂಲ ಪ್ರೇರಣೆಗಳ ಕಡೆಗೆ ಗಮನ ಹರಿಸಲೇ ಇಲ್ಲ. ಆ ಪ್ರಾಚ್ಯ ವಿದ್ಯಾವಿದರಲ್ಲಿ ಅನೇಕರು ತಮ್ಮ ಸ್ವಂತ ಸಮಾಜದಿಂದ ಪ್ರತ್ಯೇಕಗೊಂಡಿದ್ದರು. ಅವರು ಯೂರೋಪಿನಲ್ಲಿ ಕೈಗಾರೀಕೀಕರಣದ ಫಲವಾಗಿ ಜರುಗುತ್ತಿದ್ದ ಚಾರಿತ್ರಿಕ ಬದಲಾವಣೆಗಳ ಬಗೆಗೆ ತುಂಬ ಸಂಶಯದ ಭಾವನೆ ಹೊಂದಿದ್ದರು. ಆದ್ದರಿಂದಲೇ ಅವರು ಯೂರೋಪಿನಿಂದ ಹೊರಗೆ ಆದರ್ಶ ಸಮಾಜಗಳಿಗಾಗಿ ಹುಡುಕಾಡತೊಡಗಿದರು. ಪ್ರಾಚ್ಯ ದೇಶಗಳ ಪುರಾತನ ಸಂಸ್ಕೃತಿಗಳಲ್ಲಿ ಅವರು ಅಂತಹ ಆದರ್ಶ ಸಮಾಜಗಳನ್ನು ಕಂಡುಕೊಂಡರು. ಮ್ಯಾಕ್ಸ್ ಮುಲ್ಲರ್‌ರವರು 'ಮೋಕ್ಷ ಮುಲ್ಲ' ಎಂದು

ಸಂಸ್ಕೃತದ ಹೆಸರನ್ನೂ ಇಟ್ಟುಕೊಂಡರು. ಭಾರತೀಯ ಪುರಾತನ ಸಂಸ್ಕೃತಿಯನ್ನು ಆದರ್ಶೀಕರಿಸಲು ಅವರು ತಮ್ಮನ್ನೇ ಮೀಸಲಾಗಿರಿಸಿಕೊಂಡಿದ್ದುದಕ್ಕೆ ಬಹುವೇಳೆ ಆಧುನಿಕ ಭಾರತಕ್ಕೂ ವಿಸ್ತರಿಸಲಾಗುತ್ತಿತ್ತು. ಮ್ಯಾಕ್ಸ್ ಮುಲ್ಲರ್‌ರವರೇ ಹತ್ತೊಂಭತ್ತನೆಯ ಶತಮಾನದಲ್ಲಿ ತಮ್ಮ ಜೀವಿತ ಕಾಲಾವಧಿಯಲ್ಲಿ ಭಾರತಕ್ಕೆ ಭೇಟಿ ಕೊಟ್ಟಿದ್ದಿದ್ದರೆ ಅವರ ನಿಜವಾದ ಪ್ರತಿಕ್ರಿಯೆಗಳು ಏನಾಗಿರುತ್ತಿದ್ದವು ಎಂಬುದನ್ನು ಊಹಿಸಿ ನೋಡುವುದು ಸ್ವಾರಸ್ಯಕರವಾದೀತು. ಇಂತಹ ಪ್ರಾಚ್ಯವಿದ್ಯಾವಿದರ ಬರಹಗಳು ಅನೇಕ ಭಾರತೀಯ ಜನವೃಂದಗಳ ಮೇಲೆ ಪ್ರಭಾವ ಬೀರಿದವು. ಹಾಗಾಗಿ ಭಾರತದಲ್ಲಿ ಹತ್ತೊಂಭತ್ತನೆಯ ಶತಮಾನದಲ್ಲಿ ಅನೇಕ ಧಾರ್ಮಿಕ ಹಾಗೂ ಸಾಮಾಜಿಕ ಸುಧಾರಣಾ ಚಳುವಳಿಗಳು ಹುಟ್ಟಿಕೊಂಡವು. ವೇದಕಾಲದ ಸಂಸ್ಕೃತಿಯೇ ಭಾರತೀಯ ಪರಂಪರೆಯ ಮೂಲ ಎಂದು ಅವು ಒತ್ತಿ ಹೇಳಿದವು ಮತ್ತು ಅದನ್ನು ಒಂದು ಆದರ್ಶವನ್ನಾಗಿ ಮಾಡಿದವು. ಅವರ ಬರಹಗಳು ಕೆಲವು ಐರೋಪ್ಯ ಚಿಂತನಾ ಪ್ರವೃತ್ತಿಗಳ ಮೇಲೂ ಪ್ರಭಾವ ಬೀರಿದವು. ಯೂರೋಪಿಯನ್ ಸಾಹಿತ್ಯದ ರೋಮಾಂಟಿಕ್ ಚಳುವಳಿಯಿಂದ ಹಿಡಿದು ಯೂರೋಪಿನಲ್ಲಿ ಹತ್ತೊಂಭತ್ತನೆಯ ಶತಮಾನದಲ್ಲಿ ಕಂಡು ಬಂದ ಕುಲವಾದೀ ಸಿದ್ಧಾಂತಗಳವರೆಗೆ ನಾನಾ ರೀತಿಯ ಚಳುವಳಿಗಳು ಅವುಗಳಿಂದ ಪ್ರಭಾವಿತವಾದವು. ಅತಿಶ್ರೇಷ್ಠ ಕುಲವಾದಿ ಎನಿಸಿಕೊಂಡಿದ್ದ ಗೊಬಿನೋ ತನ್ನ ಅನೇಕ ವಿಚಾರಗಳನ್ನು 'ಆರ್ಯಕುಲ' ವೇ ಪರಮೋನ್ನತವಾದುದು, ಭಾರತದಲ್ಲಿನ ಜಾತಿಪದ್ಧತಿಯೇ ಸುವ್ಯವಸ್ಥಿತ ಸಮಾಜ ಪದ್ಧತಿ, ಎಂಬಂಥ ಭಾವನೆಗಳ ಮೇಲೆ ರೂಪಿಸಿಕೊಂಡಿದ್ದ, ಇಂತಹ ಚಿಂತನೆಯ ಅಂತಿಮ ಪರಿಣಾಮವೇ ಇಪ್ಪತ್ತನೆಯ ಶತಮಾನದಲ್ಲಿ ಜರ್ಮನಿಯಲ್ಲಿ ಉದ್ಭವಿಸಿದ ಹಿಟ್ಲರ್ ವಾದ.

## 27.3 ಪ್ರಯೋಜನವಾದ ಕಾಲದ ಇತಿಹಾಸ ಬರವಣಿಗೆ

ಆಧುನಿಕ ಭಾರತದ ಇತಿಹಾಸ ಲೇಖನ ಕಲಾ ಕ್ಷೇತ್ರಕ್ಕೆ ಬ್ರಿಟಿಷ್ ಹಾಗೂ ಭಾರತೀಯ ಇತಿಹಾಸಕಾರರು ಗಮನಾರ್ಹವಾಗಿದ್ದ ಕೊಡುಗೆಗಳನ್ನು ಕೊಟ್ಟರು. ಬ್ರಿಟಿಷರು ಭಾರತದಲ್ಲಿ ತಮ್ಮ ಆಳ್ವಿಕೆಯನ್ನು ಆರಂಭಿಸುವ ವೇಳೆಗೆ, ಬ್ರಿಟಿಷ್ ಇತಿಹಾಸಕಾರರು ಜ್ಞಾನೋದಯ ಕಾಲದ ಇತಿಹಾಸ ಲೇಖನಗಳಿಂದ ಪ್ರಭಾವಿತರಾಗಿ ನಿರ್ದಿಷ್ಟ ಇತಿಹಾಸ ಸಿದ್ಧಾಂತ ಹಾಗೂ ವಿಚಾರಗಳನ್ನು ಬೆಳೆಸಿಕೊಂಡಿದ್ದರು. ಇಲ್ಲಿ ಬ್ರಿಟಿಷರು ಇತಿಹಾಸ ನಿರ್ಮಾಣ ಹಾಗೂ ಇತಿಹಾಸ ರಚನಾ ಕ್ರಮಗಳನ್ನು ಒಟ್ಟಿಗೆ ನಿರ್ವಹಿಸಿದರು. ಯೂರೋಪಿನಲ್ಲಿ ಬೆಳೆದು ಬಂದ ಸಂಪ್ರದಾಯಬದ್ಧ ಹಾಗೂ ಉದಾರ ಇತಿಹಾಸ ವಿಚಾರ ಪಂಥಗಳ ಪ್ರಭಾವಕ್ಕೆ ಒಳಗಾಗಿ ಭಾರತಕ್ಕೆ ಬಂದ ಬ್ರಿಟಿಷ್ ಬರಹಗಾರರು ರಾಜಕೀಯವಾಗಿ ಭೋಧ ಪರವಾಗಿದ್ದ ಇತಿಹಾಸ ಕೃತಿಗಳನ್ನು ರಚಿಸಿದನು. ಕಾಲಕ್ರಮೇಣ ಹಲವಾರು ವಿಚಾರ ಪಂಥಗಳು, ಇಲ್ಲಿ ಬೆಳೆದುಬಂದುವು. ಅವುಗಳಲ್ಲಿ ಬಹುಮುಖ್ಯವಾಗಿದ್ದವುಗಳನ್ನು ಈ ಕೆಳಕಂಡಂತೆ ಉಲ್ಲೇಖಿಸಬಹುದು.

ಮೊದಲನೆಯ ವಿಚಾರ ಪಂಥದವರು ಭಾರತವನ್ನು ಕುರಿತು ಬರೆಯುವಾಗ ಪ್ರಯೋಜನವಾದದ ವಿಚಾರಗಳನ್ನು ಅನ್ವಯಿಸಿ ಕೃತಿಗಳನ್ನು ರಚಿಸಿದರು. ಎರಡನೆಯ ವಿಚಾರ ಪಂಥಕ್ಕೆ ಸೇರಿದ್ದವರು ಭಾರತ ಸಮಾಜವನ್ನು ಸಹಾನುಭೂತಿಯುತ ದೃಷ್ಟಿಯಿಂದ ವೀಕ್ಷಿಸಿ, ಅದರ ಸ್ವರೂಪ ಹಾಗೂ ಪರಿಸ್ಥಿತಿಗಳನ್ನು ವಿವರಿಸಲು ಪ್ರಯತ್ನಿಸಿದರು. ಪಾದ್ರಿಗಳು ಹಾಗೂ ಇತರ ಕ್ರೈಸ್ತಧರ್ಮ ಪ್ರಚಾರಕರು ಭಾರತದಲ್ಲಿ ಸ್ಥಾಪಿಸಲಾಗಿದ್ದ ಬ್ರಿಟಿಷ್ ಆಳ್ವಿಕೆಯು ಭಾರತ ಸಮಾಜದ ಉದ್ಧಾರಕ್ಕಾಗಿ ದೈವಸಂಕಲ್ಪದಿಂದ ಮೊದಲೇ ನಿಯಮಿಸಲಾಗಿದ್ದ ಘಟನೆ ಎಂಬುದಾಗಿ ಘೋಷಿಸಿ, ಶಿಕ್ಷಣ ಮತ್ತು ಭಾರತೀಯರನ್ನು ಕ್ರೈಸ್ತಮತಾವಲಂಬಿಗಳಾಗುವಂತೆ ಪರಿವರ್ತಿಸುವುದರ ಮೂಲಕ ಭಾರತ ಸಮಾಜವನ್ನು ಬದಲಾಯಿಸಲು ಯತ್ನಿಸಿದರು. ನಾಲ್ಕನೆಯ ವಿಚಾರ ಪಂಥದ ವಿದ್ವಾಂಸರು, ಬ್ರಿಟಿಷ್ ಅಧಿಪತ್ಯವನ್ನು ಪೂರ್ವ ಹಾಗೂ ಪಶ್ಚಿಮ ರಾಷ್ಟ್ರಗಳ ಸಾಂಸ್ಕೃತಿಕ - ಸಾಮಾಜಿಕ ಶಕ್ತಿಗಳ ಅನ್ಯೋನ್ಯ ಪ್ರಭಾವದ ಫಲ ಎಂಬುದಾಗಿ ಎಣಿಸಿ, ಭಾರತ ಸಮಾಜ, ಸಂಸ್ಥೆ ಹಾಗೂ ಸಂಸ್ಕೃತಿಗಳ ಅಧ್ಯಯನದಲ್ಲಿ ಅತ್ಯಾಸಕ್ತಿಯನ್ನು ತೋರಿದರು. ಇನ್ನೂ ಕೆಲವು ಪಂಡಿತರು ಮೂಲಾಧಾರಗಳನ್ನು ಅತ್ಯಂತ ಜಾಗರೂಕತೆಯಿಂದ ವಿಮರ್ಶಾತ್ಮಕವಾಗಿ ಪರಿಶೀಲಿಸಿ ಇತಿಹಾಸವನ್ನು ರಚಿಸಬೇಕೆಂಬ ರಾಂಕೆಯ ತಂತ್ರವನ್ನು ಅನುಸರಿಸಿ ಸಾಧ್ಯವಾದಷ್ಟು ವಸ್ತುನಿಷ್ಠವಾಗಿದ್ದ ರೀತಿಯಲ್ಲಿ ಭಾರತಕ್ಕೆ ಸಂಬಂಧಿಸಿದ್ದ ವಿಷಯಗಳನ್ನು ನಿರೂಪಿಸಲು ಶ್ರಮಿಸಿದರು. ಹೀಗೆ ಹಲವಾರು ಬ್ರಿಟಿಷ್ ಚರಿತ್ರಾ ಲೇಖಕರು ಆಧುನಿಕ ಭಾರತದ ಇತಿಹಾಸ ಲೇಖನ ಕಲಾರಂಗಕ್ಕೆ ಕಾಣಿಕೆಗಳನ್ನು ಕೊಟ್ಟರು.

ಮುಸ್ಲಿಮರ ಕಾಲದಲ್ಲಿದ್ದ ಗತ ಕಾಲದ ಘಟನೆಗಳನ್ನು ದಾಖಲು ಮಾಡುವ ಸಂಪ್ರದಾಯವನ್ನು ಇಂಗ್ಲೀಷ್ ಬರಹಗಾರರು ಮುಂದುವರಿಸಿದರು. ಅವರು ಬರೆದ ಗ್ರಂಥಗಳಲ್ಲಿ 1764 ರಲ್ಲಿ ಪ್ರಕಟವಾದ ರಾಬರ್ಟ್ ಆರ್ಮೆಯ 'ಎ ಹಿಸ್ಟೋರಿ ಆಫ್ ದಿ

ಮಿಲಿಟರಿ ಟ್ರಾನ್ಸ್‌ಸ್ಯಾಕ್ಷನ್ ಆಫ್ ದಿ ಬ್ರಿಟಿಷ್ ನೇಷನ್ ಇನ್ ಇಂದೋಸ್ತಾನ್ ಫ್ರಾಮ್ ದಿ ಯಿಯರ್ 1745' ಗಮನಾರ್ಹ ಕೃತಿ. ಹ್ಯಾರೋವಿನಲ್ಲಿ ಶಿಕ್ಷಣ ಪಡೆದ ನಂತರ ಆರ್ಮೆಯ 1742 ರಲ್ಲಿ ಕಲ್ಕತ್ತಾವಿಗೆ ಬಂದು, 1744 ರಲ್ಲಿ ಈಸ್ಟ್ ಇಂಡಿಯಾ ಕಂಪೆನಿಯಲ್ಲಿ ಕೆಲಸಕ್ಕೆ ಸೇರಿಕೊಂಡು, 1754 ರಿಂದ 1758 ರವರೆಗೆ ಮದ್ರಾಸಿನಲ್ಲಿ ಮಂತ್ರಾಲೋಚನ ಸಭೆಯ ಸದಸ್ಯನಾಗಿ ಸೇವೆ ಸಲ್ಲಿಸಿದನು. ಅವನು 1769 ರಿಂದ 1801 ರವರೆಗೆ ಈಸ್ಟ್ ಇಂಡಿಯಾ ಕಂಪೆನಿಯ ಚರಿತ್ರ ಲೇಖಕನಾಗಿದ್ದನು. "1782 ರಲ್ಲಿ ಹಿಸ್ಟಾರಿಕಲ್ ಫ್ರಾಗ್‌ಮೆಂಟ್ಸ್ ಆಫ್ ದಿ ಮೊಘಲ್ ಎಂಪೈಯರ್ಸ್ ಆಫ್ ದಿ ಮೊರಾಟೋಸ್ ಅಂಡ್ ಆಫ್ ದಿ ಇಂಗ್ಲೀಷ್ ಕನ್ಸರ್ನ್ಸ್ ಇನ್ ಇಂಡೋಸ್ತಾನ್ ಫ್ರಾಮ್ ದಿ ಯಿಯರ್ ಎಮ್ ಎಲ್. ಡಿ.ಸಿ. " LIX ಎಂಬ ಅವನ ಪುಸ್ತಕ ಪ್ರಕಟವಾಯಿತು. ಆಧುನಿಕ ಇತಿಹಾಸ ಲೇಖನ ಕಲೆಯ ಬಗ್ಗೆ ಚೆನ್ನಾಗಿ ಅರಿತಿದ್ದ ಅವನು ಪ್ರಕಟಿತ ಕೃತಿ, ಕಿರುಹೊತ್ತಿಗೆ ಹಾಗೂ ಹಸ್ತ ಪ್ರತಿಗಳು ಇತ್ಯಾದಿಗಳನ್ನು ಸಂಗ್ರಹಿಸಿದನು. ಮಧ್ಯಯುಗದ ಮುಸ್ಲಿಂ ಇತಿಹಾಸಕಾರರು ಬರೆದಿದ್ದ ಕೆಲವು ವೃತ್ತಾಂತಗಳನ್ನು ಅಧ್ಯಯನ ಮಾಡಿದನೆಂಬುದರಲ್ಲಿ ಸಂದೇಹವಿಲ್ಲ. ಕಾರಣ ಅವನು ಕ್ರಿ.ಶ. 712 ರಲ್ಲಿ ಮಹಮ್ಮದ್ ಬಿನ್ ಕಾಸಿಂಸಿಂಧ್ ಪ್ರಾಂತ್ಯದ ಮೇಲೆ ನಡೆಸಿದ ದಾಳಿಯಿಂದ ಆರಂಭಿಸಿ, ಭಾರತದಲ್ಲಿ ಆಳಿದ ಮುಸ್ಲಿಂ ಸಂತತಿಗಳ ಬಗ್ಗೆ ಸಂಕ್ಷಿಪ್ತವಾದ ಹಾಗೂ ನಂಬಲರ್ಹವಾದ ಸ್ಥೂಲ ವಿವರಣೆಯನ್ನು ನೀಡಿದ್ದಾನೆ. ಆದರೆ ಅವರಿಗೆ ಹಿಂದೂಕಾಲದ ಬಗ್ಗೆ ಏನೂ ತಿಳಿದಿರಲಿಲ್ಲ. 18 ನೆಯ ಶತಮಾನದ ಕೊನೆಯ ಭಾಗದಲ್ಲಿ ಪ್ರಾಚೀನ ಲೇಖಕರ ಗ್ರಂಥಗಳಲ್ಲಿ ಗುಪ್ತವಾಗಿದ್ದ ಹಾಗೂ ಪ್ರಾಚೀನ ಭಾರತಕ್ಕೆ ಸಂಬಂಧಿಸಿದ್ದ ವಿವರಗಳನ್ನು ಸಂಗ್ರಹಿಸಲು ಪ್ರಯತ್ನಿಸಿ, 1792 ರಲ್ಲಿ - "ಹಿಸ್ಟಾರಿಕಲ್ ಡಿಸ್ಕ್ವಿಸಿಷನ್ ಕನ್ಸರ್ನಿಂಗ್ ದಿನಾಲೆಡ್ಜ್ ವ್ಹಿಚ್ ದಿ ಏನ್ಷಂಟ್ಸ್ ಹ್ಯಾಡ್ ಆಫ್ ಇಂಡಿಯಾ" ಎಂಬ ಕೃತಿಯನ್ನು ವಿಲಿಯಂ ರಾಬರ್ಟ್ ಸನ್ ಪ್ರಕಟಿಸಿದನು. ಅದರಲ್ಲಿ ಅವನು ಅಲೆಗ್ಸಾಂಡರ್ ದಂಡೆಯಾತ್ರೆಯಿಂದ ಆರಂಭಿಸಿ, ಬಂಕ್ಟೆರಿಯಾ ಹಾಗೂ ವಾಯುವ್ಯ ಭಾರತದಲ್ಲಿ ಕಂಡು ಬಂದ ಗ್ರೀಕರ ಅಧಿಪತ್ಯದ ಉದಯಾಸ್ತಮಗಳನ್ನು ವಿವರಿಸಿದ್ದಾನೆ.

ಪ್ರಯೋಜನವಾದ ಪಂಥದ ವಿಚಾರವನ್ನು ಅನುಸರಿಸಿದ ದಾರ್ಶನಿಕನೂ, ಅರ್ಥಶಾಸ್ತ್ರಜ್ಞನೂ ಹಾಗೂ ವಿವಾದಾಸ್ಪದ ಬರಹಗಾರನೂ ಆಗಿದ್ದ ಪ್ರಧಾನ ಬ್ರಿಟಿಷ್ ಚರಿತ್ರ ಲೇಖಕನೇ ಜೇಮ್ಸ್ ಮಿಲ್. 1773 ರ ಏಪ್ರಿಲ್ 6 ರಂದು ಜೇಮ್ಸ್ ಮಿಲ್ನೆ ಅಥವಾ ಮಿಲ್ ಎಂಬ ಚಮ್ಮಾರನ ಜೇಷ್ಠ ಪುತ್ರನಾಗಿ ಜನಿಸಿದ ಅವನಿಗೆ ವಿದ್ಯಾವಂತನಾಗುವಂತೆ ಪ್ರೋತ್ಸಾಹಿಸಿದವಳು ಅವನ ತಾಯಿ ಇಸ್‌ಬೆಲ್ ಫೆನ್‌ಟನ್. ಮೊದಲು ಅವನು ಪ್ಯಾರಿಸ್ ಶಾಲೆಯಲ್ಲಿ ಶಿಕ್ಷಣವನ್ನು ಪಡೆದ ನಂತರ, ಮ್ಯುಂಟ್ರೋಸ್ ಅಕ್ಯಾಡೆಮಿಯಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿದನು. ಕ್ರೈಸ್ತ ಪೌರೋಹಿತ್ಯ ಕಾರ್ಯಕ್ಕಾಗಿ ಬಡಯುವಕರನ್ನು ತರಬೇತು ಮಾಡಲು ಯತ್ನಿಸುತ್ತಿದ್ದ ಸರ್ ಜಾನ್ ಸ್ಟೂವರ್ಟ್ ಎಂಬ ಪ್ಯಾರಿಸ್ ನಿವಾಸಿಯು ಅವನಿಗೆ ಆಶ್ರಯಧಾತನಾದನು. ಮಿಲ್ 1790 ರಲ್ಲಿ ಎಡಿನ್ ಬರೋ ವಿಶ್ವವಿದ್ಯಾನಿಲಯದಲ್ಲಿ ಗ್ರೀಕ್ ಸಾಹಿತ್ಯವನ್ನು ಓದಿ ಅಗಾಧ ಪಾಂಡಿತ್ಯವನ್ನು ಗಳಿಸಿ ಪ್ರಮುಖ ಪಂಡಿತನಾದನು. 1794 ರಲ್ಲಿ ದೇವತಾಶಾಸ್ತ್ರವನ್ನು ಕುರಿತು ಅಧ್ಯಯನ ಮಾಡಲಾರಂಭಿಸಿದನು. 1798 ರಲ್ಲಿ ಅವನಿಗೆ ಧರ್ಮೋಪದೇಶವನ್ನು ಮಾಡಲು ಅನುಮತಿ ಸಿಕ್ಕಿ ಅವನು ತನ್ನ ಜಿಲ್ಲೆಯಲ್ಲಿ ಧರ್ಮ ಪ್ರವಚನವನ್ನು ಮಾಡಿದನು.

ಸರ್‌ಜಾನ್ ಸ್ಟೂವರ್ಟ್ ಮಿಲ್‌ನನ್ನು ಲಂಡನ್ನಿಗೆ ಕರೆದೊಯ್ದನು. ಅಲ್ಲಿ ಮಿಲ್ ಸೆಯಿಂಟ್ ಜೇಮ್ಸ್‌ಸ್ ಕ್ರಾನಿಕಲ್ ಎಂಬ ನಿಯತಕಾಲಿಕದ ಸಂಪಾದಕನಾದನು. ಧನಿಕ ವಿಧವೆಯೊಬ್ಬಳ ಮಗಳನ್ನು ಮದುವೆಯಾದನು. 1806 ರ ಮೇ 20 ರಂದು ಹುಟ್ಟಿದ ತನ್ನ ಪ್ರಥಮ ಪುತ್ರನಿಗೆ ತನ್ನ ಆಶ್ರಯದಾತನ ಹೆಸರಿನ ಮೇರೆಗೆ ಜಾನ್ ಸ್ಟೂವರ್ಟ್ ಮಿಲ್ ಎಂದು ನಾಮಕರಣ ಮಾಡಿದನು. ಅದೇ ವರ್ಷದ ಕೊನೆಯ ಹೊತ್ತಿಗೆ ಅವನು 'ದಿ ಹಿಸ್ಟೊರಿ ಆಫ್ ಬ್ರಿಟಿಷ್ ಇಂಡಿಯಾ' ಎಂಬ ತನ್ನ ಮೇರು ಕೃತಿಯ ರಚನೆಯನ್ನು ಆರಂಭಿಸಿದನು. ಭಾರತಕ್ಕೆ ಭೇಟಿ ಕೊಡದೆಯೇ ಭಾರತವನ್ನು ಕುರಿತ ಇತಿಹಾಸವನ್ನು ಬರೆಯಲು ಪ್ರಾರಂಭಿಸಿ, ಅದನ್ನು 3 ವರ್ಷಗಳಲ್ಲಿ ಮುಗಿಸಲು ಉದ್ದೇಶಿಸಿದನಾದರೂ, ವಾಸ್ತವದಲ್ಲಿ ಅದನ್ನು ಮುಕ್ತಾಯಗೊಳಿಸಲು ಅವನಿಗೆ 12 ವರ್ಷಗಳು ಬೇಕಾದವು. ಅದು ಮೂರು ಸಂಪುಟಗಳಲ್ಲಿ 1818 ಹಾಗೂ 1819 ರಲ್ಲಿ ಪ್ರಕಟವಾಯಿತು. ಈ ಕೃತಿಯಲ್ಲಿ ಅವನು ಭಾರತದ ಬ್ರಿಟಿಷ್ ಆಳ್ವಿಕೆಯನ್ನು ಟೀಕಿಸಿದ್ದರೂ ಅವನಿಗೆ ಇಂಡಿಯಾ ಹೌಸಿನಲ್ಲಿ ಒಂದು ಹುದ್ದೆ ದೊರಕಿ, 1830 ರಲ್ಲಿ ಅದರ ಮುಖ್ಯಸ್ಥನಾದನು. ಅವನು 'ಆನ್ಟಿಜಾಕೋಬಿನ್ ರಿವ್ಯೂ' ದಿ ಬ್ರಿಟಿಷ್ ರಿವ್ಯೂ 'ದಿ ಎಡಿನ್ ಬರೋ ರಿವ್ಯೂ' - 'ದಿ ವೆಸ್ಟ್ ಮಿನಿಸ್ಟರ್ ರಿವ್ಯೂ' ಮುಂತಾದ ನಿಯತಕಾಲಿಕೆಗಳಿಗೆ ನಿಯತವಾಗಿ ಲೇಖನಗಳನ್ನು ಬರೆದು ಕೊಡುತ್ತಿದ್ದನಲ್ಲದೆ, 1811 ರಲ್ಲಿ ವಿಲಿಯಂ ಅಲೆನ್ ಜೊತೆಯಲ್ಲಿ 'ಫಿಲ್ಯಾಂತ್ರೊಪಿಸ್ಟ್' ಎಂಬ ನಿಯತಕಾಲಿಕವನ್ನು ಪ್ರಕಟಿಸಿದನು.

ಮಿಲ್ ಸ್ವಂತಿಕೆಯಿಂದ ಕೂಡಿದ್ದ ಚಿಂತಕನಾಗಿರಲಿಲ್ಲ. ಆದರೂ ಅವನ ಅಪಾರ ಬುದ್ಧಿ ಶಕ್ತಿ ಹಾಗೂ ಸ್ಫುಟವಾಗಿದ್ದ ಸಾಹಿತ್ಯ ಶೈಲಿ ಮೆಚ್ಚತಕ್ಕದೇ ಆಗಿದ್ದುವು. ಅವನ ಪ್ರಧಾನ ಗ್ರಂಥವಾಗಿದ್ದ 'ದಿ ಹಿಸ್ಟೋರಿ ಆಫ್ ಬ್ರಿಟಿಷ್ ಇಂಡಿಯಾ' ಮುಂದೆ ಬಂದ ಕಾಲಗಳಲ್ಲಿ ಕಂಡುಬಂದ ಇತಿಹಾಸ ರಚನೆಯ ಮೇಲೆ ಪ್ರಬಲ ಪ್ರಭಾವವನ್ನು ಬೀರಿತು. ಈಸ್ಟ್ ಇಂಡಿಯಾ ಕಂಪೆನಿಯ ಕಚೇರಿಯಲ್ಲಿ ಇದ್ದಿದ್ದರಿಂದ ಅವನಿಗೆ ಭಾರತಕ್ಕೆ ಸಂಬಂಧಿಸಿದ್ದ ಎಲ್ಲ ಕಾಗದ ಪತ್ರಗಳು ಸುಲಭವಾಗಿ ಸಿಕ್ಕುತ್ತಿದ್ದುದರಿಂದ ಭಾರತ ಚರಿತ್ರೆಯನ್ನು ಬರೆಯಲು ಅವನಿಗೆ ಎಲ್ಲಾ ವಿಧದಲ್ಲೂ ಅನುಕೂಲವಾಯಿತು. ಕಾನೂನು ಮತ್ತು ಸರ್ಕಾರದ ಮೂಲಕ ಜನರ ರೀತಿ ನೀತಿಗಳನ್ನು ಉತ್ತಮಪಡಿಸಬಹುದು ಮತ್ತು ಜನರ ಪರಿಸ್ಥಿತಿಗಳನ್ನು ಸುಧಾರಿಸುವುದಕ್ಕೆ ಹೆಚ್ಚಿನ ಗಮನವನ್ನು ಕೊಡಬೇಕಾದುದು ರಾಜ್ಯದ ಪ್ರಧಾನ ಹೊಣೆಗಾರಿಕೆ ಎಂಬ ಪ್ರಯೋಜನವಾದದ ತತ್ತ್ವವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಅವನು ಭಾರತ ಇತಿಹಾಸವನ್ನು ರಚಿಸಿದನು. ಅವನು ಬರೆದಿರುವ ಹಿಂದೂ ಹಾಗೂ ಮುಸ್ಲಿಂ ಕಾಲಗಳ ಚರಿತ್ರೆಯು ಒಂದು ನಿರ್ದಿಷ್ಟ ಸಿದ್ಧಾಂತವನ್ನು ಎತ್ತಿ ಹಿಡಿದ ಪಕ್ಷಪಾತಯುಕ್ತ ದಾಖಲೆಯಾಗಿದ್ದಿತು. ಪ್ರಯೋಜನವಾದದ ದೃಷ್ಟಿಯಿಂದ ನೋಡಿದರೆ ಹಿಂದೂ ಹಾಗೂ ಮುಸ್ಲೀಂ ಸರ್ಕಾರಗಳು ಅನುಪಯುಕ್ತ ಹಾಗೂ ಅದಕ್ಷವಾಗಿದ್ದುವು. ಅವನು ಬ್ರಿಟಿಷ್ ಆಳ್ವಿಕೆಯನ್ನು ಉತ್ತಮ ಎಂದು ಕೊಂಡಾಡಿಲ್ಲ. ಆದರೆ ಹಿಂದಿನ ಆಳ್ವಿಕೆಗಳೊಂದಿಗೆ ಹೋಲಿಸಿ ನೋಡಿದರೆ, ಅದು ಹೆಚ್ಚು ಪ್ರಗತಿಪರವಾಗಿದ್ದಿತು. ಅವನ ಪ್ರಕಾರ ಹಿಂದಿನ ಸರ್ಕಾರಗಳು, ಮುಖ್ಯವಾಗಿ ಹಿಂದೂ ಆಡಳಿತ ಕ್ರಮವು, ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುವುದಕ್ಕೆ ಶಕ್ತವಾಗಿರಲಿಲ್ಲವಾಗಿದ್ದರಿಂದ, ಆ ಕಾಲವು ನಾಗರಿಕತೆಯ ಶ್ರೇಣಿಯಲ್ಲಿ ಮೇಲ್ಮಟ್ಟಕ್ಕೆ ಬರಲು ಆಗಲಿಲ್ಲ.

ಮಿಲ್‌ನಿಗೆ ವಿರುದ್ಧವಾಗಿ ಭಾರತದ ಬಗ್ಗೆ ಸಹಾನುಭೂತಿಯುತ ಅಭಿಪ್ರಾಯವನ್ನು ಬೆಳೆಸಿಕೊಂಡು ಪ್ರತಿಪಾದಿಸದವನು ಅವನ ಸಮಕಾಲೀನನಾಗಿದ್ದ 'ಎಲ್‌ಫಿನ್ ಸ್ಟೋನ್' ಅವನು ಬ್ರಿಟಿಷ್ ವಸಾಹತು ಆಡಳಿತಗಾರನೂ, ದಖನ್ ಹಾಗೂ ಬೊಂಬಾಯಿಯಲ್ಲಿ ಪ್ರಗತಿಪರ ಸರ್ಕಾರದ ಸ್ಥಾಪಕನು ಆಗಿದ್ದನು. ಅವನು ಡಂಬರ್ಟನ್ ಷೈರಿನಲ್ಲಿ 1779 ರ ಅಕ್ಟೋಬರ್ 6 ರಂದು 11 ನೆಯ ಬ್ಯಾರನ್ ಎಲ್‌ಫಿನ್ ಸ್ಟೋನನ ನಾಲ್ಕನೆಯ ಮಗುವಾಗಿ ಹುಟ್ಟಿದನು. ಅವನು 1796 ರಲ್ಲಿ ಈಸ್ಟ್ ಇಂಡಿಯಾ ಕಂಪೆನಿಯ ಸೇವಾಖಾತೆಗೆ ಸೇರಿಕೊಂಡು ಕಲ್ಕತ್ತಾದಲ್ಲಿ ಬಂದು ನೆಲೆಸಿದನು. 1801 ರಲ್ಲಿ ಪೂನಾದಲ್ಲಿ ಮರಾಠ ಒಕ್ಕೂಟದ ನಾಮಾಕಾವಸ್ಥೆ ಮುಖ್ಯಸ್ಥನಾಗಿದ್ದ ಪೇಷ್ವೆ 2 ನೆಯ ಬಾಜಿರಾಯನ ಆಸ್ಥಾನದಲ್ಲಿದ್ದ ಬ್ರಿಟಿಷ್ ರೆಸಿಡೆಂಟಿನ ಸಹಾಯಕನಾಗಿ ಕೆಲಸ ಮಾಡಿದನು. 1803 ರಲ್ಲಿ ನಡೆದ ಮರಾಠ ಕದನದಲ್ಲಿ ಸೇನಾಧಿಕಾರಿ ವೆಲ್ಲೆಸ್ಲಿಯ ರಾಜಕೀಯ ನಿಯೋಗಿ ಹಾಗೂ ಸಹಾಯಕನಾಗಿ ಬಹು ಸಮರ್ಪಕವಾಗಿ ಕರ್ತವ್ಯವನ್ನು ನಿರ್ವಹಿಸಿ ಹೆಸರುವಾಸಿಯಾದನು. 1804 ರಲ್ಲಿ ನಾಗಾಪುರದಲ್ಲಿ ಬ್ರಿಟಿಷ್ ರೆಸಿಡೆಂಟನಾಗಿ ನೇಮಕಗೊಂಡನು. 1807 ರಲ್ಲಿ ಅವನನ್ನು ಅಲ್ಲಿಂದ ಸಿಂಧಿಯಾವಿನ ಆಸ್ಥಾನಕ್ಕೆ ವರ್ಗಾಸಲಾಯಿತಾದರೂ ಮುಂದಿನ ವರ್ಷ ಅಫ್‌ಘನ್ ದೊರೆ ಷಾ ಶೂಜನೊಂದಿಗೆ ಸಂಧಿ ಮಾಡಿಕೊಳ್ಳಲು ಮಾತುಕತೆ ನಡೆಸುವುದಕ್ಕಾಗಿ, ಆ ಮೂಲಕ ಭಾರತದ ಮೇಲೆ ನೆಪೋಲಿಯನ್ನನು ಆಕ್ರಮಣ ಮಾಡದಿರುವಂತೆ ತಡೆಯುವುದಕ್ಕಾಗಿ ಅವನನ್ನು ಆಫ್‌ಘಾನಿಸ್ತಾನಕ್ಕೆ ಕಳುಹಿಸಲಾಯಿತು. ಅವನು 1811 ರಲ್ಲಿ ಪೂನಾಕ್ಕೆ ಬಂದು ರೆಸಿಡೆಂಟನಾದನು. ಬಹುಚಾತುರ್ಯದಿಂದ ಮರಾಠರಲ್ಲಿ ಒಡಕು ಉಂಟಾಗುವಂತೆ ಮಾಡಿ ಅವರು ಒಟ್ಟುಗೂಡದಂತೆ ಶಾಸ್ತ್ರಿಯ ಕೊಲೆಯನ್ನು ನೆಪವಾಗಿಟ್ಟು ಪೇಷ್ವೆಯು ಒಂದು ಅತ್ಯಂತ ಅಪಮಾನಕರವಾಗಿದ್ದ ಸಂಧಿಗೆ ಒಪ್ಪಿಕೊಳ್ಳುವಂತೆ ಒತ್ತಾಯ ಪಡಿಸಿದನು. 1817 ರ ನವೆಂಬರ್ ತಿಂಗಳಲ್ಲಿ ಪೇಷ್ವೆಯು ಬ್ರಿಟಿಷರ ವಿರುದ್ಧ ಕತ್ತಿಯನ್ನು ಹಿಡಿದಾಗ ಅವನನ್ನು ಸದೆಬಡಿಯುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸಿದನು.

ನಂತರ ಎಲ್‌ಫಿನ್ ಸ್ಟೋನನು 1818 ರಲ್ಲಿ ಆಕ್ರಮಿಸಿಕೊಳ್ಳಲಾಗಿದ್ದ ಮರಾಠ ಪ್ರದೇಶಗಳಲ್ಲಿ ಮೊದಲು ದಖನ್ನಿನ ಕಮೀಷನರನ್ನಾಗಿ, ನಂತರ 1819 ರಿಂದ 1827 ರವರೆಗೆ ಬೊಂಬಾಯಿಯ ಗವರ್ನರನಾಗಿ ಬ್ರಿಟಿಷ್ ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸುವುದಕ್ಕೆ ಕಾರಣಕರ್ತನಾದನು. ಅಂಗೀಕರಿಸಲಾಗಿದ್ದ ಸರ್ಕಾರ ಪದ್ಧತಿಯನ್ನು ಇಷ್ಟಪಡದ ಅವನು ಹಿಂದಿನ ಮರಾಠ ಸಂಸ್ಥೆಗಳಲ್ಲಿದ್ದ ಒಳ್ಳೆಯ ಪದ್ಧತಿಗಳನ್ನು ಸಂರಕ್ಷಿಸಿ ಮುಂದುವರಿಸಲು ಮತ್ತು ಮರಾಠರ ಸ್ವಾಭಿಮಾನ ಹಾಗೂ ಸೂಕ್ಷ್ಮ ಭಾವನೆಗಳಿಗೆ ತಕ್ಕ ಗೌರವವನ್ನು ತೋರಲು ಯತ್ನಿಸಿದನು.

ಇದರೊಂದಿಗೆ ಎಲ್‌ಫಿನ್ ಸ್ಟೋನ್ ಹಿಂದಿನ ಸಂಸ್ಥೆಗಳನ್ನು ಸುಧಾರಿಸಲು ಕ್ರಮಗಳನ್ನು ಕೈಗೊಂಡನು. ಹಿಂದೂ ಅಧ್ಯಯನಗಳಿಗಾಗಿ ಪೂನಾ ಕಾಲೇಜನ್ನು ಸ್ಥಾಪಿಸುವುದಕ್ಕೆ ಸಹಾಯ ಮಾಡಿದನು. ಪಾಶ್ಚಾತ್ಯ ವಿಜ್ಞಾನಗಳಲ್ಲಿ ಶಿಕ್ಷಣವನ್ನು ನೀಡಬೇಕೆಂಬುದಾಗಿ ಪ್ರಚೋದಿಸಿದ್ದಲ್ಲದೆ, ಒತ್ತಾಯ ಪಡಿಸಿದನು. ಹಿಂದೂ ಹಾಗೂ ಸಾಂಪ್ರದಾಯಿಕ ಕಾನೂನುಗಳನನು ಕ್ರೋಢೀಕರಿಸಿ 'ಎಲ್‌ಫಿನ್‌ಸ್ಟೋನ್ ಕ್ರೋಢೀಕೃತ ನ್ಯಾಯಶಾಸ್ತ್ರ' ಎಂಬ ನಿಬಂಧನೆಗಳ ಸಂಹಿತೆಯನ್ನು ರಚಿಸಿದನು. ನಂತರ ಅವನು ಸೇವಾವೃತ್ತಿಯಿಂದ ನಿವೃತ್ತನಾದರೂ, ಸರ್ಕಾರವು ಆಗಾಗ್ಗೆ ಅವನ ಸಲಹೆಗಳನ್ನು ಕೇಳುತ್ತಿದ್ದಿತು. ಅವನು 1859 ರ ನವೆಂಬರ್ 20 ರಂದು ಮೃತನಾದನು.

'ಹಿಸ್ಟೋರಿ ಆಫ್ ಇಂಡಿಯಾ' (1841) ಮತ್ತು ಪ್ರಮಾಣ ಕೃತಿಯೇ ಆಗಿದ್ದ 'ಅಕೌಂಟ್ ಆಫ್ ದಿ ಕಿಂಗ್‌ಡಂ ಆಫ್ ಕಾಬೂಲ್' (1815) ಎಲ್‌ಫಿನ್ ಸ್ಟೋನನು ಇತಿಹಾಸ ಕ್ಷೇತ್ರಕ್ಕೆ ನೀಡಿದ ಅಮೂಲ್ಯ ಕಾಣಿಕೆಗಳು, ಅವನು ಭಾರತ ಸಮಾಜವನ್ನು ಸಹಾನೂಭೂತಿಯುತ ಕಾಣಿಕೆಗಳು, ಅವನು ಭಾರತ ಸಮಾಜವನ್ನು ಸಹಾನುಭೂತಿಯುತ ದೃಷ್ಟಿಯೀವ ವೀಕ್ಷಿಸಿ, ಅದರ ಸಮಸ್ಯೆಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿದನು. ಅವನು ಮಿಲ್‌ನ ಇತಿಹಾಸವನ್ನು ಸವಿಸ್ತರವಾದುದು ಎಂಬುದಾಗಿ ಒಪ್ಪಿಕೊಂಡರೂ, ಭಾರತದ ಬಗ್ಗೆ ಅವನು ವ್ಯಕ್ತಪಡಿಸಿದ್ದ ಪಕ್ಷಪಾತ ಹಾಗೂ ಪೂರ್ವಾಗ್ರಹ ಅಭಿಪ್ರಾಯವನ್ನು ವಿರೋಧಿಸಿ, ಅದು ತಪ್ಪಾದುದೆಂಬುದನ್ನು ತೋರುವ ಉದ್ದೇಶವನ್ನು ಹೊಂದಿದ್ದನು. ಮಿಲ್ ಸಂಕುಚಿತ ದೃಷ್ಟಿಯಿಂದ ಭಾರತ ಇತಿಹಾಸವನ್ನು ರಚಿಸಲು ಯತ್ನಿಸಿದನು. ಆದ್ದರಿಂದ ಭಾರತದ ಯತಾರ್ಥ ಚಿತ್ರಣವನ್ನು ಅದರಲ್ಲಿ ಕಾಣುವುದು ಸಾಧ್ಯವಿಲ್ಲ. ಆದರೆ ಭಾರತೀಯ ಸನ್ನಿವೇಶ ಹಾಗೂ ಪರಿಸ್ಥಿತಿಗಳನ್ನು ನೇರವಾಗಿ ಅವಲೋಕಿಸಿ, ಅದರ ಬಗ್ಗೆ ಯತಾರ್ಥವಾದ ಚರಿತ್ರೆಯನ್ನು ರಚಿಸಬಹುದು ಎಂಬುದು ಎಲ್‌ಫಿನ್ ಸ್ಟೋನನ ಮತವಾಗಿದ್ದಿತು. ಬೇರೆ ಮಾತುಗಳಲ್ಲಿ ಹೇಳಬೇಕಾದರೆ, ಒಂದು ನಿರ್ದಿಷ್ಟ ತತ್ತ್ವ ಹಾಗೂ ಭಾವನಾಪಂತದ ಆಧಾರದ ಮೇಲೆ ತಾನು ನೋಡದೇ ಇದ್ದ ನಾಡಿನ ಇತಿಹಾಸವನ್ನು ಬರೆಯುವುದು ಒಂದು ಬಗೆಯಾದರೆ, ಆ ನಾಡಿನಲ್ಲೇ ಎರಡು ದಶಕಗಳ ಕಾಲ ಇದ್ದು, ಅದರ ಜನಜೀವನ ವಾಹಿನಿಯನ್ನು ವಿಮರ್ಶಾತ್ಮಕ ಹಾಗೂ ವಿವೇಚನಾ ದೃಷ್ಟಿಯಿಂದ ವೀಕ್ಷಿಸಿ, ಆ ಸಮಾಜದ ಸಂಸ್ಕೃತಿಯ ಗುಣಾವಗುಣಗಳನ್ನು ತಕ್ಕಡಿಯಲ್ಲಿಟ್ಟು ತೂಗಿ ಪರಿಶೀಲಿಸಿ, ಚರಿತ್ರೆಯನ್ನು ರಚಿಸುವುದು ಇನ್ನೊಂದು ಬಗೆ. ಎರಡನೆಯ ಬಗೆ ನಿಜಕ್ಕೂ ಶ್ರೇಷ್ಠವಾದುದು. ಎಲ್‌ಫಿನ್ ಸ್ಟೋನನು ಭಾರತದ ಹಿಂದೂ ಹಾಗೂ ಮುಸ್ಲಿಂ ಕಾಲಗಳ ಬಗ್ಗೆ ಏನನ್ನೂ ತಿಳಿಯದಿದ್ದ ಬ್ರಿಟಿಷ್ ಜನತೆಯು ಅವುಗಳ ಅಧ್ಯಯನದಲ್ಲಿ ಆಸಕ್ತಿ ತಳೆಯುವಂತೆ ಮಾಡುವ ಉದ್ದೇಶದಿಂದ ತನ್ನ 'ಹಿಸ್ಟೋರಿ ಆಫ್ ಇಂಡಿಯಾ' ಗ್ರಂಥವನ್ನು 1834 ರಲ್ಲಿ ಆರಂಭಿಸಿ 1841 ರ ಹೊತ್ತಿಗೆ ಭಾರತದ ಮೇಲೆ ಬ್ರಿಟಿಷ್ ಆಕ್ರಮಣದ ಕಾಲದವರೆಗೆ ಸಂಭವಿಸಿದ ಘಟನೆಗಳನ್ನು ಕುರಿತು ಇತಿಹಾಸವನ್ನು ರಚಿಸಿದನು. ಭಾರತದ ಪ್ರಾಚೀನ ಹಾಗೂ ಮಧ್ಯಕಾಲಗಳ ಬಗ್ಗೆ ಸಹಾನುಭೂತಯುತವಾಗಿದ್ದ, ವಸ್ತು ನಿಷ್ಠವಾಗಿದ್ದ ನಿರೂಪಣೆಯನ್ನು ನೀಡಿರುವ ಅವನ ಇತಿಹಾಸ ಗ್ರಂಥವು ಇಂಗ್ಲೀಷ್ ಜನತೆಗೆ ಪ್ರಮಾಣ ಕೃತಿಯಾಯಿತು.

ಬ್ರಿಟಿಷ್ ಚರಿತ್ರೆ ಲೇಖಕಿಯರಲ್ಲಿ ಹೆಸರಿಸಬಹುದಾದ ಇನ್ನೊಬ್ಬ ಪ್ರಸಿದ್ಧ ಚಿಂತಕನೆಂದರೆ ಮೆಕಾಲೆ. 'ಹಿಸ್ಟೋರಿ ಆಫ್ ಇಂಗ್ಲೆಂಡ್' ಎಂಬ ಕೃತಿಯ ಕರ್ತೃವೂ, ಪ್ರಬಂಧ ಲೇಖಕನೂ ಹಾಗೂ ರಾಜಕೀಯ ಪಟುವೂ ಆಗಿದ್ದ ಮಕಾಲೆ 1800 ರ ಅಕ್ಟೋಬರ್ 5 ರಂದು ಜನೋಪಕಾರಿ ಹಾಗೂ ಧರ್ಮನಿಷ್ಠ ಜಕರಿ ಮಕಾಲೆಯ ಮಗನಾಗಿ ಹುಟ್ಟಿ ಧರ್ಮನಿಷ್ಠ, ಆತ್ಮ ಪರೀಕ್ಷೆ ಹಾಗೂ ಮಾನವ ಹಿತಾಸಕ್ತಿ ಮುಂತಾದ ಮೌಲ್ಯಗಳು ಪ್ರಧಾನವಾಗಿದ್ದ ಪರಿಸರದಲ್ಲಿ ಬೆಳೆದುಬಂದನು. ಬೌಲಪ್ರೌಢನಾಗಿದ್ದ ಅವನು ತನ್ನ 8 ನೆಯ ವಯಸ್ಸಿನಲ್ಲೇ ವಿಶ್ವ ಇತಿಹಾಸದ ಸಾರಾಂಶವನ್ನು ಬರೆದನಲ್ಲದೆ, ಸರ್‌ವಾಲ್ಟರ್ ಸ್ಕಾಟ್‌ನ ಶೈಲಿಯಲ್ಲಿ ಒಂದು ಪದ್ಯ ರಚನೆ ಮಾಡಿದನು. ಖಾಸಗಿ ಶಾಲೆಯ ಶಿಕ್ಷಣ ಪಡೆದ ನಂತರ ಅವನು ಕೇಂಬ್ರಿಡ್ಜ್‌ನ ಟ್ರನಿಟಿ ಕಾಲೇಜಿನಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿದನು; 1824 ರಲ್ಲಿ 3ನೆಯ ವಿಲಿಯಂನ ಶೀಲ ಸ್ವಭಾವದ ಬಗ್ಗೆ ಅವನು ಬರೆದ ಪ್ರಬಂಧಕ್ಕೆ ಬಹುಮಾನ ಬಂದಿತು; 1826 ರಲ್ಲಿ ಅವನು ವಕೀಲನಾದನು. ಎಡಿನ್‌ಬರೋ ರಿವ್ಯೂಲುನಲ್ಲಿ ಪ್ರಕಟವಾದ ಮಿಲ್ಟನನ್ನು ಕುರಿತ ಪ್ರಬಂಧದಿಂದ ಅವನು ಸುಪ್ರಸಿದ್ಧನಾದನು. ಎಡಿನ್‌ಬರೋ ರಿವ್ಯೂವಿಗೆ ಮುಖ್ಯವಾಗಿದ್ದ ಲೇಖನಗಳನ್ನು ಬರೆದು ಕೊಟ್ಟನು. ಜೊತೆಗೆ 'ದಿ ಆರ್ಮೇಡ' ಎಂಬ ಲಘು ಕಾವ್ಯವನ್ನು ರಚಿಸಿದನು.

ನಂತರ ಮೆಕಾಲೆ ಭಾರತದ ಪ್ರಧಾನ ಮಂತ್ರಾಲೋಚನ ಸಭೆಯ ಸದಸ್ಯನಾಗಿ ಭಾರತಕ್ಕೆ ಬಂದನು. ಇಲ್ಲಿ ಅವನು ಮುದ್ರಣ ಸ್ವಾತಂತ್ರ್ಯದ ಪರವಾಗಿ ವಾದಿಸಿದನು. ಕಾನೂನಿನ ಮುಂದೆ ಯೂರೋಪಿನವರು ಹಾಗೂ ಭಾರತೀಯರು ಸಮಾನರು ಎಂಬುದಾಗಿ ಒತ್ತಿ ಹೇಳಿದನು. ಸಾರ್ವಜನಿಕ ಶಿಕ್ಷಣ ಸಮಿತಿಯ ಅಧ್ಯಕ್ಷನಾಗಿ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ಉದ್ಘಾಟಿಸಿದನು ಮತ್ತು ಐತಿಹಾಸಿಕವಾಗಿ ಪ್ರಖ್ಯಾತವಾಗಿದ್ದ - 'ಮಿನಿಟ್ ಆನ್ ಇಂಡಿಯನ್ ಎಜುಕೇಷನ್' ಎಂಬ ಕರಡು ಲೇಖನಗಳನ್ನು ಸಿದ್ಧಪಡಿಸಿ ಇಂಗ್ಲೀಷ್ ಭಾಷೆಯು ಶಿಕ್ಷಣ ಮಾಧ್ಯಮವಾಗಬೇಕೆಂದು ಸಲಹೆ ಮಾಡಿದನು. ನಂತರ ಅವನು ತಯಾರಿಸಿದ ದಂಡನೆ ಕಾಯಿದೆಯ ಕರಡು ಪ್ರತಿಯು ಭಾರತೀಯ ಅಪರಾಧ ಕಾನೂನಿಗೆ ಮೂಲವಾಯಿತು. ಹೀಗೆ ಅವನು ಭಾರತದ ಇತಿಹಾಸ ಕ್ಷೇತ್ರಕ್ಕೆ ಎರಡು ಮುಖ್ಯ ಕೊಡುಗೆಗಳನ್ನು ಕೊಟ್ಟನು. ಅವನು ಭಾರತಕ್ಕೆ ಸಂಬಂಧಿಸಿದಂತೆ ಬರೆದಿರುವ ಇತರ ಐತಿಹಾಸಿಕ ಬರಹಗಳು ಪ್ರಬಂಧಗಳ ರೂಪದಲ್ಲಿವೆ. ಅವುಗಳಲ್ಲಿ ಮುಖ್ಯವಾದುವುದು ಕ್ಲೈವ್ ಹಾಗೂ ವಾರನ್ ಹೇಸ್ಟಿಂಗ್ಸ್ ಬಗ್ಗೆ ಬರೆದಿರುವ ಪ್ರಬಂಧಗಳು. ಅವುಗಳಲ್ಲಿ ಗಮನಾರ್ಹವಾಗಿದ್ದ ಅಂಶಗಳೆಂದರೆ ಅತ್ಯಂತ ಸುಂದರ ಶೈಲಿ ಹಾಗೂ ಅಧಿಕಾರಿಗಳು ಮಾಡಿದ ಮೋಸ ಹಾಗೂ ದುರಾಸೆಯ ಸ್ಪಷ್ಟ ಚಿತ್ರಣ ಅವುಗಳು ಒಂದು ಬಗೆಯ ರಾಜಕೀಯ ಆತ್ಮ ವಿಮರ್ಶೆಯಾಗಿದ್ದುವು. ಅದು ನಿಜಕ್ಕೂ ಬ್ರಿಟಿಷ್ ಇತಿಹಾಸ ಬರಹಗಳಲ್ಲಿ ಒಂದು ಉತ್ತಮ ಪ್ರವೃತ್ತಿಯಾಯಿತು.

'ಆಕ್ಸ್‌ಫರ್ಡ್ ಹಿಸ್ಟೋರಿ ಆಫ್ ಇಂಡಿಯಾದ' ಕರ್ತೃ ವಿ.ಎ. ಸ್ಮಿತ್ ಭಾರತವನ್ನು ಕುರಿತು ಬರೆದ ಇತಿಹಾಸಕಾರರ ಹಳೆಯ ಪಂಥದ ಕೊನೆಯ ಸುಪ್ರಸಿದ್ಧ ಚರಿತ್ರ ಲೇಖಕನಾಗಿದ್ದನು. ಅವನು ಬ್ರಿಟಿಷ್ ಆಡಳಿತ ವಿಭಾಗದಲ್ಲಿ ಜವಾಬ್ದಾರಿಯುತ ಹುದ್ದೆಗಳನ್ನು ಅಲಂಕರಿಸಿದ್ದರೂ, ಇತಹಾಸ ಅಧ್ಯಯನದಲ್ಲಿ ಆಸಕ್ತಿ ವಹಿಸಿದನು. 1900 ರಲ್ಲಿ ನಿವೃತ್ತಿ ಹೊಂದಿದ ನಂತರ ಸಾವಿನ ಕರೆ ಬರುವವರೆಗೆ ಅವನು ಭಾರತದ ಇತಿಹಾಸ ಅಧ್ಯಯನಗಳಲ್ಲಿ ತೊಡಗಿದನು. 'ಅಶೋಕ ದಿ ಬುದ್ದಿಸ್ಟ್ ಎಂಪರರ್ ಆಫ್ ಇಂಡಿಯಾ', ಅಕ್ಬರ್ ದಿ ಗ್ರೇಟ್ ಮೊಘಲ್, ಎ ಹಿಸ್ಟೋರಿ ಆಫ್ ಫೈನ್ ಆರ್ಟ್ ಇನ್ ಇಂಡಿಯಾ ಆಂಡ್ ಸಿಲೋನ್, ಕ್ಯಾಟಲಾಗ್ಸ್ ಆಫ್ ಕಾಯನ್ಸ್ ಇನ್ ಇಂಡಿಯನ್ ಮ್ಯೂಸಿಯಮ್' ಮುಂತಾದವು ಅವನ ಮುಖ್ಯ ಗ್ರಂಥಗಳು.

ಕೆಲವು ಬ್ರಿಟಿಷ್ ಚರಿತ್ರ ಲೇಖಕರು ಭಾರತದ ಸಮಾಜ, ಸಂಸ್ಕೃತಿ ಮತ್ತು ಜೀವನದ ಇತರ ಮುಖಗಳನ್ನು ವಿವರಿಸುವುದರ ಆಸಕ್ತಿ ತೋರಿದರು. ಫರ್ಕೂಹರನ 'ಮಾಡ್ರನ್ ರಿಲಿಜಸ್ ಮೂವ್‌ಮೆಂಟ್ಸ್ ಇನ್ ಇಂಡಿಯಾ', ಡಾ. ವಿರಲನ್‌ಸ್ಟೈಯ - ದಿ ಇಕಾನಾಮಿಕ್ ಡಿವಲಪ್‌ಮೆಂಟ್ ಆಫ್ ಇಂಡಿಯಾ' ಮತ್ತು ಮೋರ್‌ಲ್ಯಾಂಡ್ ಭಾರತದ ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಬರೆದ ಇತಿಹಾಸಗಳು ಮುಖ್ಯವಾಗಿದ್ದುವು. 1868 ರಲ್ಲಿ ಉತ್ತರ ಐರ್ಲೆಂಡಿನಲ್ಲಿ ಹುಟ್ಟಿ, ಕೇಂಬ್ರಿಡ್ಜ್‌ನಲ್ಲಿ ಶಿಕ್ಷಣ ಪಡೆದು ಭಾರತದ ಉತ್ತರ ಪ್ರದೇಶದಲ್ಲಿ ಭೂ ದಾಖಲೆ ಹಾಗೂ ಕೃಷಿ ಇಲಾಖೆಯ ನಿರ್ದೇಶಕನಾಗಿ ಸೇವೆ ಸಲ್ಲಿಸಿ 1914 ರಲ್ಲಿ ನಿವೃತ್ತಿ ಹೊಂದಿದ ಮೋರ್‌ಲ್ಯಾಂಡ್ ಭಾರತದ ಆರ್ಥಿಕ ಇತಿಹಾಸ ಲೇಖನ ಕಲೆಯನ್ನು ಉದ್ಘಾಟಿಸಿದರು. ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ ಅವನು ಬರೆದಿರುವ ಕೃತಿಗಳಲ್ಲಿ 'ದಿ ಅಗ್ರಿಕಲ್ಚರ್ ಆಫ್ ದಿ ಯೂನೈಟೆಡ್ ಪ್ರಾವಿನ್ಸೆಸ್, ದಿ ರೆವಿನ್ಯೂ ಅಡ್‌ಮಿನಿಸ್ಟ್ರೇಷನ್ ಆಫ್ ದಿ ಯುನೈಟೆಡ್ ಪ್ರಾವಿನ್ಸಸ್ (1911) ದಿ ಅಗ್ರೇರಿಯನ್ ಸಿಸ್ಟಂ ಆಫ್ ಮೊಘಲ್ ಇಂಡಿಯಾ ಅಕ್ಬರ್ ಲ್ಯಾಂಡ್ ರೆವಿನ್ಯೂ ಸಿಸ್ಟಂ ದಿ ಅಗ್ರೇರಿಯನ್ ಸಿಸ್ಟಂ ಆಫ್ ಮುಸ್ಲಿಂ ಇಂಡಿಯಾ (1929) ಮುಖ್ಯವಾದವುಗಳು. ಅವನು ಬ್ರಿಟಿಷ್ ಆಳ್ವಿಕೆ ಶ್ರೇಷ್ಠವಾದುದು ಎಂಬುದನ್ನು ತೋರುವುದಕ್ಕಾಗಿ ಮೊಘಲ್ ಕಾಲದ ಪರಿಸ್ಥಿತಿಗಳು ಶೋಚನೀಯವಾಗಿದ್ದುವು ಎಂಬುದಾಗಿ ಹೇಳಿದ್ದಾನೆ. ಆದರೂ ಅವನು ಬ್ರಿಟಿಷ್ ಕಂದಾಯ ವ್ಯವಸ್ಥೆಯ ಹಿಂದೂ ವ್ಯವಸ್ಥೆಯ ಮೇಲೆ ಆಧಾರಿತವಾಗಿದ್ದ ಮೊಘಲ್ ಪದ್ಧತಿಯನ್ನು ಅವಲಂಬಿಸಿದ್ದಿತು. ಅಕ್ಬರನ ಕಾಲದಲ್ಲಿ ಭಾರತವು ಪಶ್ಚಿಮ ಯೂರೋಪಿಗಿಂತ ಮುಂದುವರೆದಿದ್ದಿತು ಎಂಬುದನ್ನು ಒಪ್ಪಿಕೊಂಡಿದ್ದಾನೆ. ಒಟ್ಟಿನಲ್ಲಿ, ಅವನು ಮೊಘಲ್ ಕಂದಾಯ ಪದ್ಧತಿಯನ್ನು ಆದ್ಯಂತವಾಗಿ ವಿಶ್ಲೇಷಿಸಿ, ರಾಜಕೀಯ ವ್ಯವಸ್ಥೆಯಲ್ಲಿ ಆರ್ಥಿಕ ಶಕ್ತಿಗಳು ಪ್ರಧಾನ ಪಾತ್ರವನ್ನು ವಹಿಸುತ್ತದೆ ಎಂದು ಹೇಳಿ, ನೂತನ ಬಗೆಯ ಇತಿಹಾಸದ ಬೆಳವಣಿಗೆಗೆ ಹಾದಿಯನ್ನು ಸುಗಮಪಡಿಸಿದನು.

## 27.4 ರಾಷ್ಟ್ರೀಯವಾದ ಕಾಲದ ಇತಿಹಾಸ ಬರವಣಿಗೆ

ಯೂರೋಪಿನ ಇತಿಹಾಸಕಾರರು ತಮ್ಮ ತಮ್ಮ ಅಭಿಪ್ರಾಯ ಹಾಗೂ ದೃಷ್ಟಿಕೋನಗಳನ್ನು ಮುಖ್ಯವಾದುವು ಎಂಬುದಾಗಿ ಎತ್ತಿ ಹಿಡಿಯುತ್ತಿದ್ದಾಗ, ಆಧುನಿಕ ಇತಿಹಾಸ ಲೇಖನ ಕಲಾಕ್ಷೇತ್ರವನ್ನು ವಿಳಂಬವಾಗಿ ಪ್ರವೇಶಿಸಿದ ಭಾರತೀಯ ಇತಿಹಾಸಕಾರರು ಮೊದಮೊದಲು ಪರಕೀಯ ಇತಿಹಾಸಕಾರರ ಹೆಜ್ಜೆಯ ಗುರುತುಗಳನ್ನು ಅನುಸರಿಸಿದರೂ, ಪಶ್ಚಿಮ ರಾಷ್ಟ್ರಗಳಿಂದ ಹರಿದು ಬಂದ ಇತಿಹಾಸವನ್ನು ಕುರಿತು ನೂತನ ವಿಚಾರ ವಾಹಿನಿಗಳು, ಹಾಗೂ ಪಾಶ್ಚಾತ್ಯ ಶಿಕ್ಷಣ, ರಾಜಾರಾಮ್ ಮೋಹನರಾಯ್ ಉದ್ಘಾಟಿಸಿದ ಭಾರತೀಯ ಬೌದ್ಧಿಕ ಪುನರುಜ್ಜೀವನ ಶಕೆ - ಇತ್ಯಾದಿಗಳ ಕಾರಣ ಅವರು ತಮ್ಮದೇ ಆಗಿದ್ದ ನಿರ್ದಿಷ್ಟ ಅಭಿಪ್ರಾಯಗಳನ್ನು ಎತ್ತಿ ಹಿಡಿದು ಭಾರತದ ಬಗ್ಗೆ ಬ್ರಿಟಿಷ್ ಬರಹಗಾರರು ಮಾಡಿಸಿದ್ದ ಅನೇಕ ಸಿದ್ಧಾಂತ ಹಾಗೂ ನಿರ್ಣಯಗಳನ್ನು ತಪ್ಪೆಂದು ತೋರಲು ಪ್ರಯತ್ನಿಸಿದರು. ಮಿಲ್ ಮುಂತಾದ ಬ್ರಿಟಿಷ್ ಪಂಡಿತರು ಭಾರತದ ವಿರುದ್ಧ ಮಾಡಿದ ಅನ್ಯಾಯಕರವಾಗಿದ್ದ ಉಗ್ರ ಟೀಕೆಗಳ ಕಾರಣ ಉದ್ರಿಕ್ತರಾದ ಭಾರತೀಯ ವಿದ್ವಾಂಸರು ಅತ್ಯಂತ ನಿಷ್ಠೆಯಿಂದ ಪಾಳಿ, ಪ್ರಾಕೃತ, ಸಂಸ್ಕೃತ ಮುಂತಾದ ಭಾಷೆಗಳಲ್ಲಿ ಘನ ಪಂಡಿತರಾಗಿ, ಎಲ್ಲಾ ಮೂಲಾಧಾರಗಳನ್ನು ಶೋಧಿಸಿ, ಪರಿಶೀಲಿಸಿ ತಮ್ಮ ಇತಿಹಾಸಜ್ಞಾನ ದಿಗಂತವನ್ನು ವಿಸ್ತರಿಸಿಕೊಂಡರು. ಭಾರತದ ಗತ ವೈಭವದ ಬಗ್ಗೆ ಕಂಡ ಬೆಳಕು ಅವರಲ್ಲಿ ರಾಷ್ಟ್ರೀಯ ಪ್ರೇಮಜ್ಯೋತಿ ಉಜ್ವಲವಾಗಿ ಪ್ರಕಾಶಿಸುವಂತೆ ಮಾಡಿತು. ಈ ಜ್ಞಾನದ ಆಧಾರದ ಮೇಲೆ ಅವರು ಬ್ರಿಟಿಷ್ ಬರಹಗಾರರು ಭಾರತದ ವಿರುದ್ಧವಾಗಿ ಮಾಡಿದ ಟೀಕೆಗಳಲ್ಲಿ ಹುರುಳಿಲ್ಲ ಎಂಬುದಾಗಿ ಸಮರ್ಥಿಸಲು ಯತ್ನಿಸಿದರು.

ಆದರೆ ದುರದೃಷ್ಟವಶಾತ್ ಭಾರತೀಯ ಇತಿಹಾಸಕಾರರು ವೈಜ್ಞಾನಿಕ ರೀತ್ಯಾ ಇತಿಹಾಸವನ್ನು ರಚಿಸುವುದನ್ನು ಬಿಟ್ಟು ವ್ಯಕ್ತಿ ನಿಷ್ಠ ದೃಷ್ಟಿಯನ್ನು ಬೆಳೆಸಿಕೊಂಡು ಕಣ್ಣುಗಳಿಗೆ ಕಪ್ಪು ಕನ್ನಡಕಗಳನ್ನು ಹಾಕಿಕೊಂಡು ಆ ಕಾಲದ ಚರಿತ್ರೆಯನ್ನು ಬರೆಯಲು ಆರಂಭಿಸಿದ್ದರಿಂದ ಈ ನೂತನ ಜ್ಞಾನನಿಧಿಯಿಂದ ಬಂದ ಫಲಗಳು ಬಹುಮಟ್ಟಿಗೆ ಕಹಿಯಾಗಿದ್ದವು. ಇತಿಹಾಸವನ್ನು ಸಾಮಾಜಿಕ ಸುಧಾರಣೆ, ಪರಕೀಯರನ್ನು ಹೊಡೆದೋಡಿಸುವ ರಾಜಕೀಯ ಪ್ರಚಾರ, ಜನರನ್ನು ಒಟ್ಟುಗೂಡಿಸಲು ಅಥವಾ ಪ್ರತ್ಯೇಕಿಸಲು ಮತ್ತು ಭಾರತದ ಗತಕಾಲದ ವೈಭವಗಳನ್ನು ಉತ್ಪ್ರೇಕ್ಷಿಸಿ ವಿವರಿಸಿ ರಾಷ್ಟ್ರ ಪ್ರೇಮವನ್ನು ಪ್ರಚೋದಿಸಲು ಬೇಕಾಗಿದ್ದ ಒಂದು ಪ್ರಬಲ ಮಾಧ್ಯಮವಾಗಿ ಬಳಸಿಕೊಂಡರು. ಭಾರತದ ಸಂಸ್ಕೃತಿಯು ಅತ್ಯಂತ ಪುರಾತನವಾದುದು ಎಂಬುದನ್ನು ಸಾಧಿಸಲು ತೀವ್ರವಾಗಿ ಯತ್ನಿಸಲಾಯಿತು. ಭಾರತ ಸಮಾಜ ಸಂಸ್ಕೃತಿ ಹಾಗೂ ಮತಧರ್ಮದ ಬಗ್ಗೆ ಪಾದ್ರಿಗಳು ಮಾಡಿದ ಟೀಕೆಗಳಿಂದ ಕೋಪಗೊಂಡ ರಾಜ್‌ನಾರಾಯಣ್ ಬಸು ಮುಂತಾದ ಪಂಡಿತರು ಭಾರತವು ಸಂಸ್ಕೃತಿ ಔದ್ಯೋಗಿಕ ತಂತ್ರ ಮುಂತಾಗಿ ಎಲ್ಲಾ ವಿಚಾರಗಳಲ್ಲಿ, ಜೀವನದ ಎಲ್ಲಾ ರಂಗಗಳಲ್ಲಿ ಎಲ್ಲಾ ರಾಷ್ಟ್ರಗಳಿಗಿಂತ ಮುಂದಿದ್ದಿತು ಎಂಬುದಾಗಿ ಸಮರ್ಥಿಸಲು ತೀವ್ರವಾಗಿ ಪ್ರಯತ್ನಗಳನ್ನು ಮಾಡಿದರು. ಇಷ್ಟು ಮಾತ್ರವಲ್ಲದೆ ಭಾರತೀಯರು ತಮಗೆ ರಾಜಕೀಯ ವಿಶೇಷಾಧಿಕಾರ ಹಾಗೂ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯಲು ಎಲ್ಲಾ ಅರ್ಹತೆ ಇದೆ ಮತ್ತು ಭಾರತದಲ್ಲಿ ಅನೇಕ ಬಗೆಯ ಮತಧರ್ಮ, ಜಾತಿ, ಪಂಥ, ಸಾಮಾಜಿಕ ವ್ಯವಸ್ಥೆ ಇತ್ಯಾದಿಗಳಿದ್ದರೂ, ಮೂಲಭೂತ ಏಕತೆ ಇದೆ ಎಂಬುದಾಗಿ ಸಾಧಿಸಿದರು.

ಇದರೊಂದಿಗೆ ಬ್ರಿಟಿಷರು ಭಾರತಕ್ಕೆ ನೀಡಿದ್ದ ಕೊಡುಗೆ ಹಾಗೂ ಮಾಡಿದ ಸೇವೆಯನ್ನು ಅಲ್ಪವಾಗಿ ಎಣಿಸುವ ಅಹಿತಕರ ಪ್ರವೃತ್ತಿ ಪ್ರಧಾನವಾಯಿತು. ಕ್ಲೈವ್ ಮೋಸದಿಂದ ವಿಜಯವನ್ನು ಸಾಧಿಸಿದನು. ಸಿಖ್ಖರ ಮೇಲೆ ಗಳಿಸಿದ ಜಯ ಲಂಚದ ಫಲ ಮುಂತಾಗಿ ಐತಿಹಾಸಿಕ ಘಟನೆಗಳನ್ನು ಏಕಪಕ್ಷೀಯ ದೃಷ್ಟಿಯಿಂದ ವಿವರಿಸಲಾಯಿತು. ಭಾರತದ ಆರ್ಥಿಕ ಶೋಷಣೆ, ದಾರಿದ್ರ್ಯ, ಎಲ್ಲಾ ಸಂಪನ್ಮೂಲಗಳ ಸುಲಿಗೆ ಮುಂತಾಗಿ ಬ್ರಿಟಿಷ್ ಆಳ್ವಿಕೆಯ ಕಾರಣ ಉಂಟಾದ ಅನಿಷ್ಟಕರ ಅಂಶಗಳನ್ನು ಎತ್ತಿ ತೋರಿಸುವ ಏಕಮಾತ್ರ ಉದ್ದೇಶದಿಂದ ಸಂಶೋಧನೆಗಳನ್ನು ಕೈಗೊಳ್ಳಲಾಯಿತು. ಹೀಗೆ ಕೇವಲ ಬ್ರಿಟಿಷರನ್ನು ಟೀಕಿಸುವುದು, ದೂಷಿಸುವುದು ಮುಖ್ಯ ವಿಷಯವಾಯಿತು. ಈ ಮಧ್ಯೆ ಇತಿಹಾಸ ರಚನಾ ರಂಗದಲ್ಲಿ ಇನ್ನೊಂದು ಅಹಿತಕರ ಫಲ ತಲೆದೋರಿತು. ಅದೇ ಮುಸ್ಲಿಮರ ವಿರುದ್ಧ ಹಿಂದೂಗಳು ವೀರಾವೇಶದಿಂದ ಕಾದಾಟ ನಡೆದ ವಿಷಯಗಳನ್ನು ಉತ್ಪ್ರೇಕ್ಷಿಸಿ ನಿರೂಪಿಸುವ ಪ್ರವೃತ್ತಿ, ಹಾಗೂ ಪ್ರಯತ್ನ ಮುಸ್ಲೀಮರ ವಿರುದ್ಧ ನಡೆದ ಕಾದಾಟಗಳಲ್ಲಿ ಪ್ರತಿ ರಜಪೂತ, ಮರಾಠ ಹಾಗೂ ಸಿಖ್ ಯೋಧನನ್ನು ವೀರನೆಂಬುದಾಗಿ ಚಿತ್ರಿಸಲಾಯಿತು. ಈ ವಿಚಾರದಲ್ಲಿ ಮುಸ್ಲೀಂ ಬರಹಗಾರರು ಹಿಂದೆ ಬೀಳಲಿಲ್ಲ. ಹೀಗೆ ಹಿಂದೂ ಹಾಗೂ ಮುಸ್ಲೀಂ ಇತಿಹಾಸಕಾರರು ಇತಿಹಾಸವನ್ನೇ ಒಂದು ರಣರಂಗವಾಗಿ ಬಳಸಿಕೊಂಡು, ತಾವು ಶ್ರೇಷ್ಠರು ಎಂದು ಸಾಧಿಸುವ ಕಾರ್ಯದಲ್ಲಿ ತಲ್ಲೀನರಾದರು.

ಆಗ ರಾಷ್ಟ್ರೋದ್ದೇಶ ಸಾಧನಾ ಕಾರ್ಯ ಕ್ಷೇತ್ರದಿಂದ ಮುಸ್ಲೀಮರನ್ನು ಪ್ರತ್ಯೇಕಿಸಿಟ್ಟರೆ ಉಂಟಾಗುವ ಅನರ್ಥಗಳನ್ನು ಅರಿತ ಹಲವು ಹಿಂದೂ ಚರಿತ್ರ ಲೇಖಕರು ಹಿಂದೂ - ಮುಸ್ಲೀಮರ ನಡುವೆ ಇದ್ದ ಸ್ವಾಮ್ಯಗಳನ್ನು ಒತ್ತಿ ಹೇಳಿ, ಹಿಂದೆ ಹಿಂದೂ - ಮುಸ್ಲೀಮರ ನಡುವೆ ಸಮಸ್ಯೆಯೇ ಇರಲಿಲ್ಲ. ಅದು ಬ್ರಿಟಿಷರ ಒಡೆದು ಆಳುವ ನೀತಿಯ ಕಾರಣ ತಲೆ ಎತ್ತಿಕೊಂಡಿತು ಎಂಬುದಾಗಿ ವಿವರಿಸಿ, ಅದು ಬ್ರಿಟಿಷರ ಒಡೆದು ಆಳುವ ನೀತಿಯ ಕಾರಣ ತಲೆ ಎತ್ತಿಕೊಂಡಿತು ಎಂಬುದಾಗಿ ವಿವರಿಸಿ, ಹಿಂದೂ - ಮುಸ್ಲೀಂ ಏಕತೆಯನ್ನು ಸಾಧಿಸಲು ಯತ್ನಿಸಿದರು. ತಾರಾಚಂದ್, ತ್ರಿಪಾಠಿ, ಈಶ್ವರೀಪ್ರಸಾದ್ ಮುಂತಾದ ವಿದ್ವಾಂಸರು ಈ ದಿಸೆಯಲ್ಲಿ ಬಹು ಶ್ರದ್ಧೆಯಿಂದ ಕೆಲಸ ಮಾಡಿದರೂ, ಇತಿಹಾಸ ಲೇಕನ ಕಲೆಯ ಕೇಂದ್ರವನ್ನು ಒಳ ಹೊಕ್ಕಿದ ಅಪಾಯಕಾರಿ ಕೋಮುವಾರು ಭಾವನೆಯ ಅನಿಷ್ಟ ಪ್ರಭಾವದ ವಿಷಯವನ್ನು ನಿವಾರಿಸುವುದು ಸಾಧ್ಯವಾಗಲಿಲ್ಲ. ಪ್ರಷ್ಯಾದಲ್ಲಿ ಇತಿಹಾಸವು ಜರ್ಮನಿಯ ಏಕೀಕರಣಕ್ಕೆ ಸಾಧಕವಾಗಿದ್ದರೆ, ಭಾರತದಲ್ಲಿ ಅದು ಒಂದಾಗಿದ್ದ ನಾಡನ್ನು ಎರಡಾಗಿ ಸೀಳುವುದಕ್ಕೆ ಒಂದು ಪ್ರಬಲ ಉಪಕರಣವಾಯಿತು.

ಹೀಗೆ ಭಾರತೀಯ ಚರಿತ್ರ ಲೇಖಕರು ಇತಿಹಾಸ ರಚನೆಗೆ ಸಂಬಂಧಿಸಿದಂತೆ ವಿವಿಧ ವಿಚಾರ ಹಾಗೂ ದೃಷ್ಟಿಕೋನಗಳನ್ನು ಅಳವಡಿಸಿಕೊಂಡರು. ಇದರಿಂದ ವಿಭಿನ್ನ ವಿಚಾರ ಪಂಥಗಳು ಬೆಳೆದು ಬಂದವು. ರಾಜ್‌ನಾರಾಯಣ್ ಬಸು, ಬಂಕಿಮ್ ಚಂದ್ರ ಚಟರ್ಜಿ, ಕೆ.ಪಿ. ಜಯಸ್ವಾಲ್ ಮುಂತಾದ ಘನ ಪಂಡಿತರನ್ನು ಒಳಗೊಂಡಿದ್ದ ಪಂಥವು ಪಾಶ್ಚಾತ್ಯ ಸಂಸ್ಕೃತಿಗಿಂತ ಹಿಂದೂ ಸಂಸ್ಕೃತಿಯು ಅತ್ಯುತ್ತಮವಾಗಿದ್ದಿತು ಎಂಬುದನ್ನು ಎತ್ತಿ ತೋರಲು ಯತ್ನಿಸಿದರೆ ಮೇಜರ್ ಡಿ. ಬಸು, ಎ.ಸಿ. ಮಜುಂದಾರ್, ಸಿ.ವೈ. ಚಿಂತಾಮಣಿ ಹಾಗೂ ಸುರೇಂದ್ರನಾಥ್ ಬ್ಯಾನರ್ಜಿಯವರು ಪ್ರತಿನಿಧಿಸಿದ್ದ ಇನ್ನೊಂದು ಪಂಥವು ರಾಷ್ಟ್ರ ಸ್ವಾತಂತ್ರ್ಯ ಸಾಧನೆಗಾಗಿ ಹೋರಾಡುತ್ತಿದ್ದ ರಾಷ್ಟ್ರೀಯವಾದಿಗಳ ಒಲವನ್ನು ಹೆಚ್ಚಿಸುವ ಉದ್ದೇಶದಿಂದ ಬ್ರಿಟಿಷರು ಭಾರತವನ್ನು ಆರ್ಥಿಕವಾಗಿ ಹೇಗೆ ಶೋಷಿಸಿದರು ಎಂಬುದನ್ನು ಸ್ಪಷ್ಟಪಡಿಸಲು ಪ್ರಯತ್ನಿಸಿತು. ರಾಜೇಂದ್ರಲಾಲ್ ಮಿತ್ರ, ಆರ್. ಸಿ. ದತ್, ಆರ್.ಜಿ. ಭಂಡಾರ್‌ಕರ್, ರಾಯ್ ಚೌಧುರಿ, ಮುಂತಾದ ಮಹಾ ವಿದ್ವಾಂಸರಿಂದ ಕೂಡಿದ್ದ ವಿಚಾರವಾದಿ ಪಂಥವು ಭಾರತ ಇತಿಹಾಸಕ್ಕೆ ಸಂಬಂಧಿಸಿದಂತೆ ಯೂರೋಪಿಯನ್ನರು ಮಾಡಿದ್ದ ತಪ್ಪುಗಳನ್ನು ತಿದ್ದುವುದಕ್ಕಾಗಿ ಘಟನೆಗಳನ್ನು ವಸ್ತುನಿಷ್ಠವಾಗಿ ವೀಕ್ಷಿಸಿ ವಿಚಾರ ಮಾಡಿತು. ಹಿರೇನ್ ಮುಖರ್ಜಿ, ಕೌಶಂಬಿ ಮುಂತಾದ ಘನ ವಿದ್ವಾಂಸರ ಇನ್ನೊಂದು ಪಂಥವು ಮಾರ್ಕ್ಸ್‌ನ ವಿಚಾರಧಾರೆಯಿಂದ ಆಕರ್ಷಿತರಾಗಿ, ಆ ದೃಷ್ಟಿಕೋನದಿಂದ ಭಾರತ ಚರಿತ್ರೆಯ ಸಮಸ್ಯೆಗಳನ್ನು ವಿವರಿಸಲು ಯತ್ನಿಸಿತು. ಜಾದುನಾಥ್ ಸರ್ಕಾರ, ಎಸ್.ಎನ್. ಸೆನ್, ಸರ್ ದೇಸಾಯ್, ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ವೆಂಕಟೇಶ್ವರುಲು ಮುಂತಾದ ಮಹಾ ಪಂಡಿತರ ಪಂಥವು ಭಾವನಾತ್ಮಕ ಘರ್ಷಣೆಗಳನ್ನು ಬದಿಗೊತ್ತಿ ರಾಂಕೆಯ ಕ್ರಮಗಳನ್ನು ಅನುಸರಿಸಿ ಇತಿಹಾಸವನ್ನು ರಚಿಸಲು ಶ್ರಮಿಸಿತು.

## 27.5 ಉಪಸಂಹಾರ

ಆದರೂ ಹೆಚ್ಚು ಕಡಿಮೆ ಎಲ್ಲಾ ಬ್ರಿಟಿಷ್ ಇತಿಹಾಸಕಾರರ ಕೃತಿಗಳಲ್ಲಿ ಬ್ರಿಟಿಷ್ ಆಳ್ವಿಕೆ ಶ್ರೇಷ್ಠ ಎಂಬುದನ್ನು ಎತ್ತಿ ತೋರುವ ಹಂಬಲ, ಭಾರತ ಸಮಾಜ ಸಂಸ್ಕೃತಿಯನ್ನು ಖಂಡಿಸುವ ಪ್ರವೃತ್ತಿ ಮತ್ತು ಪೂರ್ವಾಗ್ರಹಯುಕ್ತ ವಿವರಣೆ ಪ್ರಧಾನವಾಗಿವೆ ಎಂದು ಹೇಳಬಹುದು. ಬ್ರಿಟಿಷರು ಭಾರತೀಯ ಪ್ರಭುಗಳನ್ನು ಮೋಸಗೊಳಿಸಿ ಅವರ ಪ್ರದೇಶಗಳನ್ನು ಆಕ್ರಮಿಸಿಕೊಂಡಿದ್ದ ಬಗೆಯನ್ನು ವಿವರಿಸುವಾಗಲೂ ಆ ಕೃತಿಗಳಲ್ಲಿ ಈ ದೋಷಗಳು ಕಂಡು ಬರುತ್ತವೆ. ಬ್ರಿಟಿಷ್ ಸರ್ಕಾರವು ಆ ರಾಜರ ಮೇಲೆ ಏನೋ ಒಂದು ದೋಷಾರೋಪಣೆ ಮಾಡಿ ಅವರ ರಾಜ್ಯಗಳನ್ನು ಕಿತ್ತುಕೊಳ್ಳುತ್ತಿದ್ದಿತು. ಮೈಸೂರು, ಕೊಡಗು, ಇತ್ಯಾದಿಗಳ ಬಗ್ಗೆ ಬೆಂಟಿಂಗನು ಮಣಿಪುರದ ಬಗ್ಗೆ ಲ್ಯಾನ್ಸ್ ಡೌನ್ ಮತ್ತು ಅಯೋಧ್ಯೆ ಹಾಗೂ ಪಂಜಾಬಿನ ಪ್ರತಿ ಡಾಲ್ ಹೌಸಿಯು ಅನುಸರಿಸಿದ ಆಕ್ರಮಣಕಾರಿ ನೀತಿಯು ಇದಕ್ಕೆ ತಕ್ಕ ಉದಾಹರಣೆ. ದುರದೃಷ್ಟವಶಾತ್ ಬ್ರಿಟಿಷ್ ಬರಹಗಾರರು ಈ ಸರ್ಕಾರಿ ನೀತಿ ಹಾಗೂ ವಿವರಣೆಯನ್ನು ವಿಚಾರ ಮಾಡದೆ ಕುರುಡರಂತೆ ಒಪ್ಪಿಕೊಂಡರು. ಉದಾಹರಣೆಗೆ, ಕೊಡಗಿನ ದೊರೆಯ ಬಗ್ಗೆ ಮಾಡಿದ್ದ ಸುಳ್ಳು ಆಪಾದನೆಗಳ ಬಗ್ಗೆ ಸ್ಮಿತ್ ನೀಡಿರುವ ಸವಿಸ್ತರ ವಿವರಣೆ, ಮೈಸೂರು, ಮಣಿಪುರ ಮುಂತಾದ ರಾಜ್ಯಗಳ ಆಕ್ರಮಣವನ್ನು ಕುರಿತು ಮಾಡಿರುವ ಸಂಕ್ಷಿಪ್ತ ಉಲ್ಲೇಖಗಳು ಸತ್ಯಸಂಗತಿಗಳನ್ನು ಮರೆಮಾಚುವ ಪ್ರವೃತ್ತಿ ಮತ್ತು ನಡೆದ ಘಟನೆಗಳ ತಪ್ಪಾದ ನಿರೂಪಣೆಗೆ ತಕ್ಕ ನಿದರ್ಶನಗಳಾಗಿವೆ.

## 27.6 ಸ್ವಯಂ ಮೌಲ್ಯಮಾಪನ ಪ್ರಶ್ನೆಗಳು

1. ಆಧುನಿಕ ಭಾರತದ ಇತಿಹಾಸ ಲೇಖನದ ಮಹತ್ವ ಮತ್ತು ಲಕ್ಷಣಗಳನ್ನು ವಿಮರ್ಶಾತ್ಮಕವಾಗಿ ಬರೆಯಿರಿ.
2. ಆಧುನಿಕ ಭಾರತದ ಪ್ರಮುಖ ಇತಿಹಾಸಕಾರರನ್ನು ತಿಳಿಸಿ ಮತ್ತು ಅವರ ಬರವಣಿಗೆಯ ಮಹತ್ವವನ್ನು ವಿಮರ್ಶಿಸಿ.
3. ಆಧುನಿಕ ಭಾರತದ ಇತಿಹಾಸ ಲೇಖನ ಕಲೆಯ ಪ್ರಮುಖ ಲಕ್ಷಣಗಳೆಂದರೆ ಕೋಮುವಾದ ಮತ್ತು ಪ್ರಾದೇಶಿಕತೆ ಎಂಬುದನ್ನು ನೀವು ಒಪ್ಪುತ್ತೀರಾ?

## 27.7 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. B. Sheik Ali : History its theory and Method, Bangalore, 1999.
2. Fred .N. Kerlinget : "Foudation of Behavioural Research", Delhi - 1983.
3. Majumdar .R.K. & Srivastva .A.N. : "Historiography", Delhi - 1975.


*ಡಾ. ವೈ.ಹೆಚ್. ನಾಯಕವಾಡಿ*

## ಘಟಕ - 28 ಆಧುನಿಕ ಭಾರತದ ಪ್ರಮುಖ ಇತಿಹಾಸಕಾರರ ಇತಿಹಾಸ ಲೇಖನ ಕಲೆ

28.0 ಉದ್ದೇಶಗಳು

28.1 ಪ್ರಸ್ತಾವನೆ

28.2 ಸರ್‌ಜಾದೂನಾಥ್ ಸರ್ಕಾರ್ (1870-1958)

28.3 ಆರ್.ಸಿ. ಮಜುಂದಾರ್

28.4 ದಾಮೋದರ ಧರ್ಮಾನಂದ್ ಕೋಶಾಂಬಿ (1907-1966)

28.5 ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ (1871-1953)

28.6 ಕೆ.ಎ. ನೀಲಕಂಠಶಾಸ್ತ್ರಿ

28.7 ಸರ್ದಾರ್ ಕೆ.ಎಂ. ಪಣಿಕ್ಕರ್

28.8 ಉಪಸಂಹಾರ

28.9 ಸ್ವಯಂ ಮೌಲ್ಯಮಾಪನ ಪ್ರಶ್ನೆಗಳು

28.10 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 28.0 ಉದ್ದೇಶಗಳು

ಘಟಕ 28 ರಲ್ಲಿ ನಾವು ಕೆಳಗಿನ ಮುಖ್ಯ ಅಂಶಗಳನ್ನು ಅಧ್ಯಯನ ಮಾಡುವಿರಿ. ಇತಿಹಾಸಕಾರರಾದ ಜಾದೂನಾಥ್ ಸರ್ಕಾರ್, ಆರ್.ಸಿ. ಮಜುಂದಾರ್ ಕೋಸಂಬಿ ಹಾಗೂ ದಕ್ಷಿಣ ಭಾರತದ ಇತಿಹಾಸಕಾರರಾದ ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ಕೆ.ಎ. ನೀಲಕಂಠಶಾಸ್ತ್ರಿ, ಫಣಿಕ್ಕರ್ ಮುಂತಾದವರ ಗ್ರಂಥಗಳು ಮತ್ತು ಇತಿಹಾಸ ಬರವಣಿಗೆಗೆ ಅವನು ನೀಡಿರುವ ಕೊಡುಗೆಗಳನ್ನು ಸವಿಸ್ತಾರವಾಗಿ ತಿಳಿಯುವಿರಿ.

## 28.1 ಪ್ರಸ್ತಾವನೆ

ಆಧುನಿಕ ಭಾರತದ ಚರಿತ್ರೆಕಾರರಲ್ಲಿ ಈ ಕೆಳಗಿನವರು ಪ್ರಮುಖರು. ಇವರನ್ನು ಓರಿಯಂಟಲಿಸ್ಟರು, ರಾಷ್ಟ್ರೀಯವಾದಿಗಳು, ಮಾರ್ಕ್ಸ್‌ವಾದಿಗಳು ಮತ್ತು ಸಾಮ್ರಾಜ್ಯಶಾಹಿವಾದಿಗಳೆಂದು ವಿಭಾಗಿಸಬಹುದು. 20 ನೇ ಶತಮಾನದ ಆದಿಭಾಗದಲ್ಲಿ ಭಾರತದ ಪುರಾತನ ರಾಷ್ಟ್ರೀಯ ಚಟುವಟಿಕೆಯಿಂದ ಪ್ರಭಾವಿತರಾಗಿದ್ದರು. ಅವರು ತಮ್ಮಲ್ಲೇನು ರಾಷ್ಟ್ರವಾದಿ ಚರಿತ್ರೆಕಾರರೆಂದು ಕರೆದುಕೊಳ್ಳಲಿಲ್ಲ. ಆದರೆ ಭಾರತದ ಇತಿಹಾಸವನ್ನೇ ಅವರು ವ್ಯಾಖ್ಯಾನಿಸಿದ ರೀತಿ ಬಹು ವೇಳೆ ರಾಷ್ಟ್ರವಾದಿ ದೃಷ್ಟಿಕೋನದಿಂದ ಕೂಡಿದಿದ್ದಾಗಿತ್ತು. ಅವರು ಹೆಚ್ಚಾಗಿ ಓರಿಯಂಟಲಿಸ್ಟರ ಕೃತಿಗಳ ಮೇಲೆಯೋ ತಮ್ಮನ್ನು ಆಧರಿಸಿಕೊಂಡಿದ್ದರು. ಹಾಗಾಗಿ ಭಾರತ ಇತಿಹಾಸ ಅವರ ಬರವಣಿಗೆಯಲ್ಲಿ ಹೆಚ್ಚು ಅತೀ ವೈಭವೀಕರಣಕ್ಕೆ ಒಳಗಾಯಿತು. ಆದಾಗ್ಯೂ ರಾಷ್ಟ್ರೀಯವಾದಿ ಇತಿಹಾಸಕಾರರು ಭಾರತದ ಇತಿಹಾಸಕ್ಕೆ ಅಡಿಪಾಯ ಹಾಕಿಕೊಟ್ಟರು. ಹಾಗೇಯೇ ಅವರು ಭಾರತದ ಗತಕಾಲವನ್ನು ಎಷ್ಟು ಮಾತ್ರವು ಟೀಕೆಗೆ ಒಳಪಡಿಸಿದ ರೀತಿಯಲ್ಲಿ ಪರ್ಯಾಯಾಲೋಚಿಸುವ ಮನೋಧರ್ಮಕ್ಕು ಅಡಿಪಾಯ ಹಾಕಿಕೊಟ್ಟರು. ರಾಷ್ಟ್ರೀಯವಾದಿ ಚರಿತ್ರೆಕಾರರ ಅತ್ಯಂತ ದೊಡ್ಡ ದೌರ್ಬಲ್ಯವೆಂದರೆ ಅವರ ಇತಿಹಾಸ ಲೇಖನ ಸಂತತಿ ಆಧಾರಿತ ಮತ್ತು ವ್ಯಕ್ತಿ ಆಧಾರಿತವಾಗಿತ್ತು. ಭಾರತೀಯ ಇತಿಹಾಸಕಾರರಲ್ಲಿ ಮಾರ್ಕ್ಸ್‌ವಾದಿಗಳು ಪ್ರಮುಖವಾದ ಪಾತ್ರ ವಹಿಸಿದರು. ಇವರು ವಸಾಹತುಶಾಹಿಗಳನ್ನು, ರಾಷ್ಟ್ರೀಯವಾದಿಗಳನ್ನು ಹಿಂಬಾಲಿಸದೆ ಪ್ರತ್ಯೇಕವಾಗಿ ಚಿಂತಿಸಲು ಆರಂಭಿಸಿದರು. ಇವರು ರಾಜಕೀಯ ಇತಿಹಾಸಕ್ಕೆ ಹೆಚ್ಚು ಗಮನ ನೀಡದೆ, ಸಾಮಾಜಿಕ, ಆರ್ಥಿಕ ಮತ್ತು ಸಂಪೂರ್ಣವಾದಂತ ಸಾಮಾಜಿಕ ರಚನೆಯ ಕಡೆಗೆ ಹೆಚ್ಚು ಗಮನ ಕೊಟ್ಟದ್ದು. ರಾಜಕೀಯ ವಿಷಯಗಳನ್ನು ಸಾಮಾಜಿಕ ವಿಷಯಗಳಲ್ಲಿ ವಿಲೀನಗೊಳಿಸಿ ಜನಸಾಮಾನ್ಯರ ಇತಿಹಾಸಕ್ಕೆ ಹೆಚ್ಚು ಬೆಂಬಲ ನೀಡಿದರು.

## 28.2 ಸರ್‌ಜಾದೂನಾಥ್ ಸರ್ಕಾರ್ (1870-1958)

ಆಧುನಿಕ ಭಾರತದ ವೈಜ್ಞಾನಿಕ ಇತಿಹಾಸ ಲೇಖನ ಕಲೆಯ ಜನಕ ಜಾದೂನಾಥ್ ಸರ್ಕಾರ್, ಬಂಗಾಳದ ರಾಜ್‌ಷಾಹಿ ಜಿಲ್ಲೆಯಲ್ಲಿ ಉದಾರವಾದಿ ಹಾಗೂ ಧರ್ಮನಿಷ್ಠ ಜಮೀನ್ದಾರ್ ರಾಜ್‌ಕುಮಾರ್ ಸರ್ಕಾರರ **ಮೂರನೆಯ ಮಗನಾಗಿ** *1870* ರ ಡಿಸೆಂಬರ್ 10 ರಂದು ಹುಟ್ಟಿದ ಸರ್ಕಾರ್ ರಾಜ್‌ಷಾಹಿಯಲ್ಲಿ ಪ್ರಾರಂಭ ಶಿಕ್ಷಣ ಪಡೆದು, ನಂತರ ಕಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜ್ ಹಾಗೂ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾಭ್ಯಾಸವನ್ನು ಮುಂದುವರೆಸಿ ಅತ್ಯುತ್ತಮ ವಿದ್ಯಾರ್ಥಿಯಾಗಿ ಇಂಗ್ಲೀಷ್ ಹಾಗೂ ಇತಿಹಾಸ ವಿಷಯಗಳಲ್ಲಿ ಘನ ಪಾಂಡಿತ್ಯ ಪದವಿಯನ್ನು ಪಡೆದು 1892 ರಲ್ಲಿ ಇಂಗ್ಲೀಷ್‌ನಲ್ಲಿ ಎಂ.ಎ. ಪದವೀದರರಾದರು. ನಂತರ ರಿಪ್ಪನ್ ಕಾಲೇಜಿನಲ್ಲಿ ಇಂಗ್ಲೀಷ್ ಅಧ್ಯಾಪಕರಾಗಿ ಕಾರ್ಯವನ್ನು ಆರಂಭಿಸಿದ ಅವರು ಕ್ರಮೇಣ ಚರಿತ್ರೆಯಿಂದ ಆಕರ್ಷಿತರಾಗಿ ಕೊನೆಗೆ ಇತಿಹಾಸದ ಅಧಿದೇವತೆ ಕ್ಲೆಯೋವಿನ ಪರಮ ಭಕ್ತರಾದರು. 1898 ರಿಂದ 1910 ರವರೆಗೆ ಬಂಗಾಳದ ಶಿಕ್ಷಣ ಇಲಾಖೆಯಲ್ಲಿ ಯಶಸ್ವಿಯಾಗಿ ಕರ್ತವ್ಯವನ್ನು ನೆರವೇರಿಸಿ, ಬಡತಿಯನ್ನು ಪಡೆದು 1926 ರಲ್ಲಿ ನಿವೃತ್ತರಾದ ಅವರು ತಮ್ಮ ಅಸಾಧಾರಣ ಪ್ರತಿಭೆಯ ಫಲವಾಗಿ 2 ವರ್ಷಗಳ ಕಾಲ ಕಲ್ಕತ್ತಾ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದರು. ಇನ್ನೊಂದು ಎರಡು ವರ್ಷಗಳು ಉಪಕುಲಪತಿಗಳಾಗಿರಬೇಕೆಂಬ ಸರ್ಕಾರದ ಪ್ರಾರ್ಥನೆಯನ್ನು ನಿರಾಕರಿಸಿ ಅವರು 1928 ರಿಂದ 1958 ರವರೆಗೆ ಇತಿಹಾಸದ ಅಧ್ಯಯನಗಳಿಗೆ ತಮ್ಮನ್ನು ಪೂರ್ತಿಯಾಗಿ ಅರ್ಪಿಸಿಕೊಂಡರು.

ಸರ್ಕಾರ್ ಅವರ ಮೇಲೆ ಅಪಾರ ಪ್ರಭಾವವನ್ನು ಬೀರಿ ಅವರನ್ನು ಅದ್ವಿತೀಯ ಚರಿತ್ರಲೇಖಕರನ್ನಾಗಿ ರೂಪಿಸಿದ ಅಂಶಗಳು ಮೂರು. ಮೊದಲನೆಯದಾಗಿ, ಅವರ ಕೌಟುಂಬಿಕ ಪರಿಸರ. ಅವರ ತಂದೆ ಅವರಲ್ಲಿ ಇತಿಹಾಸದ ಬಗ್ಗೆ ಅತ್ಯಾಸಕ್ತಿ ಮೂಡುವಂತೆ ಮಾಡಿದರು ಹಾಗೂ ಅವರ ಅಮೂಲ್ಯ ಗ್ರಂಥಾಲಯ ಸರ್ಕಾರದ ಮೇಲೆ ಬಹು ಹಿತಕರವಾಗಿದ್ದ ಪರಿಣಾಮವನ್ನು ಬೀರಿತು. ಎರಡನೆಯದಾಗಿ, ಸರ್ಕಾರ್ ತಾವು ಅಧ್ಯಯನ ಮಾಡಿದ ಯೂರೋಪಿನ ಹಂಟ್, ಕಾರ್ಲೈಲ್, ರಾಂಕೆ, ಅಕ್ಟನ್ ಮೇಟ್‌ಲ್ಯಾಂಡ್, ಮೆಕಾಲೆ, ಗಿಬನ್, ಗ್ರೀನ್ ಮುಂತಾದ ಲೇಖಕರ ಕೃತಿಗಳಿಂದ ಬಹುಮಟ್ಟಿಗೆ ಪ್ರಭಾವಿತರಾದರು. ಅವರು ಆ ಲೇಖಕರ ಪ್ರಖ್ಯಾತಿಗೆ ಕಾರಣವಾಗಿದ್ದ ಎಲ್ಲಾ ಮುಖ್ಯಾಂಶಗಳನ್ನು ತಮ್ಮದನ್ನಾಗಿಸಿಕೊಂಡು ಬೌದ್ಧಿಕವಾಗಿ ಬೆಳೆದರು. ಅವರು ಪಶ್ಚಿಮ ರಾಷ್ಟ್ರಗಳ ಇತಿಹಾಸ ನಿಧಿಯ ಫಲ, ಅಲ್ಲಿನ ತಿರುಳೇ ಆದರೂ ಯೂರೋಪಿನ ಪಾಂಡಿತ್ಯದ ಭಾರತೀಯ ರೂಪವಾದರು. ಮೂರನೆಯದಾಗಿ, ಭಾರತದ ಶೋಚನೀಯ ಪರಿಸ್ಥಿತಿ ಅವರ ಮೇಲೆ ಗಾಢ ಪ್ರಭಾವವನ್ನು ಬೀರಿತು. ಈ ಎಲ್ಲಾ ಪ್ರಭಾವಗಳಿಗೆ ಒಳಗಾಗಿ ಅಪೂರ್ವ ರೀತಿಯಲ್ಲಿ ಬೆಳೆದ ಅವರು ಇತಿಹಾಸ ಕ್ಷೇತ್ರಕ್ಕೆ ಅಮೂಲ್ಯ ಕಾಣಿಕೆ ಕೊಟ್ಟರು.

ಮೊಘಲ್ ಅಧ್ಯಯನ. ಮರಾಠ ಅಧ್ಯಯನ ಹಾಗೂ ಇತರ ಕೆಲಸಗಳೆಂಬುದಾಗಿ ಅವರ ಬರವಣಿಗೆಯನ್ನು ವಿಭಾಗಿಸಬಹುದು. ವಿ.ಎಲ್. ಶ್ರೀವಾಸ್ತವ ಅವರು ಮೊದಲು ಸರ್ಕಾರ್ 1857 ರಲ್ಲಿ ಸಂಭವಿಸಿದ ಮಹಾ ಘಟನೆಯನ್ನು ತಮ್ಮ ಅಧ್ಯಯನ ವಿಷಯವಾಗಿ ಆರಿಸಿಕೊಳ್ಳಲು ಯೋಚಿಸಿದರು. ಮೈಸೂರಿನ ಟಿಪ್ಪು ಸುಲ್ತಾನನ ಬಗ್ಗೆ ಅಧ್ಯಯನ ಮಾಡಬೇಕೆಂದು ಬಯಸಿದರು. ವಾಸ್ತವದಲ್ಲಿ ಇಲ್ಲೇ ಇತಿಹಾಸ ಕಾರಖಾನೆಯಲ್ಲಿ ಅವರ ತರಬೇತು ಆರಂಭವಾಯಿತು.

ಸುಗ್ಗಿ ಬೆಳೆಯುವಂತಹ ಅಪಾರ ಐತಿಹಾಸಿಕ ಸಾಹಿತ್ಯವಿದ್ದಿದ್ದರಿಂದ ಮತ್ತು ಮೊಘಲ್ ಇತಿಹಾಸ ಕ್ಷೇತ್ರವು ಉತ್ತಿ, ಬಿತ್ತಿ, ಬೆಳೆ ಬೆಳೆಯದೇ ಇದ್ದ ಭೂಮಿಯಾಗಿದ್ದರಿಂದ ಸರ್ಕಾರ್ ಅದನ್ನು ತಮ್ಮ ಸಂಶೋಧನಾ ವಿಷಯವನ್ನಾಗಿ ಆರಿಸಿಕೊಂಡರು. ಹೇಗೆ ರೋಮಿನ ಅವನತಿ ಹಾಗೂ ಪತನದ ವಿಚಾರವು ಗಿಬನನಿಗೆ ಹಾಗೂ ಗೆರಿಬಾಲ್ಡಿಯ ಶೌರ್ಯ ಸಾಹಸಗಳ ವಿಷಯವು ಜಿ.ಎಂ. ಟ್ರೆವಿಲಾನ್‌ಗೆ ಸೂಕ್ತ ವಿಷಯಗಳಾದವೋ, ಅದೇ ರೀತಿ 17 ನೇಯ ಹಾಗೂ 18 ನೆಯ ಶತಮಾನಗಳ ಮೊಘಲ್ ಸಾಮ್ರಾಜ್ಯವು ಅತ್ಯಂತ ವ್ಯಾಪಕ ದೃಷ್ಟಿಕೋನವನ್ನು ಹೊಂದಿದ್ದ ಸರ್ಕಾರ್ ಅವರಿಗೆ ಯೋಗ್ಯ ಸಂಶೋಧನಾ ವಿಷಯವಾಯಿತು. ಅವರು ಇಂಡಿಯಾ ಆಫ್ ಔರಂಗಜೇಬ್ - ಇಟ್ಸ್ ಟೊಫಾಗ್ರಫಿ, ಸ್ಟಟಿಸ್ಟಿಕ್ಸ್ ಆಂಡ್ ರೋಡ್ಸ್ (1901) ಎಂಬ ಏಕವಿಷಯ ಪ್ರಬಂದದೊಂದಿಗೆ ಐತಿಹಾಸಿಕ ಪಾಂಡಿತ್ಯ ರಾಜ್ಯವನ್ನು ಪ್ರವೇಶಿಸಿದರು. ಮೂಲ ಪರ್ಷಿಯನ್ ಕೃತಿಗಳ ವಿಮರ್ಶಾತ್ಮಕ ಹಾಗೂ ತುಲನಾತ್ಮಕ ಪರಿಶೀಲನೆಯ ಮೇಲೆ ಆಧಾರಿತವಾಗಿದ್ದ ಅದು ಅವರು ಮೊಘಲ್ ಇತಿಹಾಸ ಎಂಬ ಕಾರಕಾನೆಯಲ್ಲಿ ಹೊಂದಿದ್ದ ಜಯಪ್ರದ ತರಬೇತಿನ ಫಲದಂತೆ ಕಂಡುಬಂದಿತು. ಅದರಲ್ಲಿ ರಸ್ತೆ, ಸವಿಮಾರ್ಗ ಮುಂತಾದ ಭೌಗೋಳಿಕ ಪರಿಸ್ಥಿತಿ, 17 ನೆಯ ಶತಮಾನದ ಕೊನೆಯ ಭಾಗದಲ್ಲಿದ್ದ ಮೊಘಲ್ ಭಾರತಕ್ಕೆ ಸಂಬಂಧಿಸಿದ ಅಂಕಿ ಅಂಶಗಳ ವಿವರಣೆ ಇತ್ಯಾದಿಗಳನ್ನು ಕಾಣಬಹುದು. ನಂತರ ಅವರು ಸತತವಾಗಿ 30 ವರ್ಷಗಳ ಕಾಲ ನಿಷ್ಠೆಯಿಂದ ಕಾರ್ಯಮಾಡಿ ಐದು ಸಂಪುಟಗಳಲ್ಲಿ ಭಾರತದ ಇತಿಹಾಸ ಲೇಖನ ಕಲಾಕ್ಷೇತ್ರದಲ್ಲಿ ಮಹಾಕಾವ್ಯದಂತಿದ್ದ ಸ್ಟಡಿ ಆಫ್ ಔರಂಗಜೇಬ್ (1912-1924) ಎಂಬ ಮೇರುಕೃತಿಯನ್ನು ರಚಿಸಿದರು. ಅದು ಐದು ಅಂಕಗಳ ದುರಂತ ನಾಟಕ. ಏತನ್ಮಧ್ಯೆ ಅವರು ಬಂಗಾಳದ ವಿಭಜನೆ ಹಾಗೂ ಸ್ವದೇಶಿ ಚಳುವಳಿಯ (1905-1908) ಕಾರಣ ಉಂಟಾದ ಪರಿಸ್ಥಿತಿಯಿಂದ ಉತ್ತೇಜಿತರಾಗಿ ಎಕೊನಾಮಿಕ್ಸ್ ಆಫ್ ಬ್ರಿಟಿಷ್ ಇಂಡಿಯಾ (1909) ಎಂಬ ಏಕವಿಷಯ ಪ್ರಬಂಧವನ್ನು ಬರೆದು ಭಾರತದ ಅರ್ಥವ್ಯವಸ್ಥೆಗೆ ಸಂಬಂಧಿಸಿದ ಭೌಗೋಳಿಕಾಂಶ, ಗ್ರಾಮ - ಅರ್ಥ ವ್ಯವಸ್ಥೆ, ಬ್ರಿಟಿಷ್ ಭೂ ಕಂದಾಯ ವ್ಯವಸ್ಥೆ, ಸಾರ್ವಜನಿಕ ಹಣಕಾಸು ಇತ್ಯಾದಿ ವಿಷಯಗಳನ್ನು ಕುರಿತು ಚರ್ಚಿಸಿದರು. ನಂತರ ಅವರು ಮೊಘಲ್ ಚರಿತ್ರೆಗೆ ಅನುಬಂಧವಾಗಿ ಔರಂಗಜೇಬನ ಪ್ರಬಲ ವೈರಿಯಾಗಿದ್ದ ಶಿವಾಜಿಯನ್ನು ಕುರಿತು ಶಿವಾಜಿ ಆಂಡ್ ಹಿಸ್‌ಟೈಮ್ಸ್ (1919) ಎಂಬ ಉತ್ತಮ ಕೃತಿಯನ್ನು ರಚಿಸಿದರು. ಐತಿಹ್ಯ ಹಾಗೂ ಪವಾಡಗಳಿಂದ ಮುಕ್ತವಾಗಿದ್ದ ಅದು ಇತಿಹಾಸದಲ್ಲಿ ಶಿವಾಜಿಯ ನಿಜವಾದ ಸ್ಥಾನವೇನೆಂಬುದನ್ನು ಸ್ಪಷ್ಟಪಡಿಸಿ, ಮರಾಠ ಇತಿಹಾಸ ಅಧ್ಯಯನದಲ್ಲಿ ಕ್ರಾಂತಿಕಾರರ ಬದಲಾವಣೆಯನ್ನು ಉಂಟುಮಾಡಿತು. ಇಷ್ಟು ಮಾತ್ರವಲ್ಲದೆ, ಅವರು ಇರ್ವಿನಿನ ಲೇಟರ್ ಮೊಘಲ್ಸ್ ಎಂಬ ಕೃತಿಯನ್ನು ಎರಡು ಸಂಪುಟಗಳಲ್ಲಿ ಸಂಪಾದಿಸಿ, ಪೀಠಿಕೆ ಹಾಗೂ ನಾದಿರ್‌ಷಾನನ್ನು ಕುರಿತು ಮೂರು

ಅಧ್ಯಾಯಗಳನ್ನು (11,12,13) ಬರೆದರು. ಅದೇ ಸಮಯದಲ್ಲಿ ಗಿಬನನ ಮಾದರಿಯ ಮೇರೆಗೆ ಮೊಘಲ್ ಸಾಮ್ರಾಜ್ಯದ ಪತನವನ್ನು ವಿವರಿಸುವ ಯೋಜನೆಯನ್ನು ಹಾಕಿಕೊಂಡು ನಾಲ್ಕು ಸಂಪುಟಗಳಲ್ಲಿ ಫಾಲ್ ಆಫ್ ಮೊಗಲ್ ಎಂಪಾಯರ್ (1932-1950) ರಚಿಸಿದರು.

ಈ ಮಹಾಕೃತ್ಯಗಳನ್ನು ಮಾತ್ರವಲ್ಲದೆ, ಸರ್ಕಾರ್ ಕೃಷ್ಣದಾಸ್ ಕವಿರಾಜರ ಚೈತನ್ಯ ಚರಿತಾಮೃತವನ್ನು ಚೈತನ್ಯಾಸ್ ಲೈಫ್ ಟೀಚಿಂಗ್ಸ್ (1922) ಎಂಬುದಾಗಿ ಭಾಷಾಂತರಿಸಿ ಅದಕ್ಕೆ ತಕ್ಕ ಪೀಠಿಕೆ ಹಾಗೂ ವ್ಯಾಖ್ಯಾನಗಳನ್ನು ಬರೆದರು. ಅವರ ಸ್ಟಡೀಸ್ ಇನ್ ಮೊಘಲ್ ಇಂಡಿಯಾ (1919) ಮತ್ತು ಸ್ಟಡೀಸ್ ಇನ್ ಔರಂಗಜೇಬ್ಸ್ ರೈಯ್ನ್ (1933) ಮೊಘಲ್ ಅಧ್ಯಯನಗಳಿಗೆ ಅನುಪೂರಕವಾದವು. ಅವರು ಷಹಜಹಾನ್ ಹಾಗೂ ಔರಂಗಜೇಬನ ದಿನನಿತ್ಯ ಜೀವನ, ಜೇಬುನ್ನೀಸ್ ಮುಂತಾದ ಮುಖ್ಯ ಮೊಘಲ್ ಸ್ತ್ರೀಯರು. ಔರಂಗಜೇಬನ ಕಂದಾಯ ನಿಬಂಧನೆ ಮುಂತಾದ ವಿಷಯಗಳ ಬಗ್ಗೆ ಉತ್ತಮ ಪ್ರಬಂಧಗಳನ್ನು ಬರೆದು ತಾವು ಅತ್ಯುತ್ತಮ ಪ್ರಬಂಧ ಲೇಖಕರೂ ಆಗಿದ್ದರೆಂಬುದನ್ನು ಸ್ಪಷ್ಟಪಡಿಸಿದರು. ಅವರ ಮೊಘಲ್ ಅಡ್‌ಮಿನಿಸ್ಟ್ರೇಷನ್ (1920) ಮೊಘಲ್ ಪೌರ ವ್ಯವಸ್ಥೆ, ಅದರ ಮೂಲತತ್ವಗಳು, ಚಕ್ರವರ್ತಿಯ ಸ್ಥಾನಮಾನ, ವಿವಿಧ ಇಲಾಖೆಗಳು ಹಾಗೂ ಅವುಗಳ ಮುಖ್ಯಸ್ಥರು, ಪ್ರಾಂತೀಯ ಆಡಳಿತ, ಕಂದಾಯ ನೀತಿ ಮತ್ತು ಮೊಘಲ್ ಆಳ್ವಿಕೆಯ ಜಯಾಪಜಯಗಳ ದಾರ್ಶನಿಕ ಸಮೀಕ್ಷೆ ಇತ್ಯಾದಿಗಳ ಪಾಂಡಿತ್ಯ ಪೂರ್ಣ ವಿಶ್ಲೇಷಣೆಯಾಗಿದೆ. ಘಾಜಿ, ಶಿವಾಜಿ, ಹಾಗೂ ಶಾಂಬೂಜಿಯನ್ನು ಕುರಿತ ಪ್ರಬಂಧಗಳು, ರಾಜಕುವರ ಅಕ್ಬರ್, ಔರಂಗಜೇಬನ ಪುತ್ರ ಮತ್ತು ನಾಲ್ವರು ಮರಾಠ ಇತಿಹಾಸಕಾರರನ್ನು ಕುರಿತ ಬರಹಗಳ ಸಂಗ್ರಹವಾಗಿರುವ ಹೌಸ್ ಆಫ್ ಶಿವಾಜಿ (1940) ಎಂಬ ಪುಸ್ತಕವು ಅವರ ಶಿವಾಜಿ ಆಂಡ್ ಹಿಸ್ ಟೈಮ್‌ಗೆ ಅನುಬಂಧವಾಗಿದೆ. ಆರ್ಯ, ಬೌದ್ಧ, ಇಸ್ಲಾಂ ಹಾಗೂ ಬ್ರಿಟಿಷ್ ಎಂಬುದಾಗಿ ಭಾರತ ಸಂಸ್ಕೃತಿಯ ನಾಲ್ಕು ನಿರ್ದಿಷ್ಟ ಮುಖಗಳನ್ನು ವಿಶ್ಲೇಷಿಸಿ ಚರ್ಚಿಸಿರುವ ಅವರ ಇಂಡಿಯಾ ತ್ರೂದಿ ಏಜಸ್ (1927) ಎಂಬ ಕೃತಿಯು ಅವರಿಗೆ ವಿಷಯದ ಮೇಲಿದ್ದ ಹಿಡಿತ, ಅವರ ವಿಶಾಲ ದೃಷ್ಟಿ, ಹಾಗೂ ಅಗಾಧ ಪಾಂಡಿತ್ಯಕ್ಕೆ ನಿರ್ವಿವಾದ ಸಾಕ್ಷಿಯಾಗಿದೆ. ಇಷ್ಟು ಮಾತ್ರವಲ್ಲದೆ, ಅವರು ಕೇಂಬ್ರಿಡ್ಜ್ ಹಿಸ್ಟೋರಿ ಆಫ್ ಇಂಡಿಯಾ ಸಂಪುಟಕ್ಕೆ 7,10,11,13 ನೇಯ ಅಧ್ಯಾಯಗಳನ್ನು ಬರೆದುಕೊಟ್ಟರು. ಪೂನಾ ರೆಸಿಡೆನ್ಸಿ ಕರಸ್ಪಾಂಡೆನ್ಸ್ ಎಂಬ ಹೆಸರಿನಲ್ಲಿ ಅನೇಕ ಸರ್ಕಾರಿ ಪತ್ರಗಳನ್ನು ಸಂಪಾದಿಸಿದರು. ಮರಾಠ ಇತಿಹಾಸಕ್ಕೆ ಬೇಕಾಗಿದ್ದ ಪರ್ಷಿಯನ್ ದಾಖಲೆಗಳನ್ನು ಇಂಗ್ಲೀಷ್ ಭಾಷೆಗೆ ತರ್ಜುಮೆ ಮಾಡಿಸಿದರು. ಆಯಿನಿ ಅಕ್ಬರಿಯನ್ನು ಸಂಪಾದಿಸಿ, ಅಕಾಡೆಮಿ - ಅಲಾಗೀರಿ ಹಾಗೂ ಮಾಶರಿ - ಅಲಂಗೀರಿ ಎಂಬ ಪುಸ್ತಕಗಳನ್ನು ಸಂಪಾದಿಸಿ ಭಾಷಾಂತರ ಮಾಡಿದರು (1912, 1947) ಅವರು ಸಂಪಾದಿಸಿದ ಅತಿ ಮುಖ್ಯ ಕೃತಿ ಎಂದರೆ ಹಿಸ್ಟೋರಿ ಆಫ್ ಬೆಂಗಾಲ್ (ಸಂಪುಟ II, 1947) ಶಿವಾಜಿ - ಏ ಸ್ಟಡಿ ಇನ್ ಲೀಡರ್ ಷಿಪ್ (1949), ಬೆಂಗಾಲ್ ನವಾಬ್ಸ್ (1952) ಮತ್ತು ಹಿಸ್ಟೋರಿ ಆಫ್ ದಿ ದಸ್‌ನಾಮಿ ಸೆಕ್ಟ್ ಎಂಬ ಗೌಣವಾದ, ಆದರೆ ಪಾಂಡಿತ್ಯ ಪೂರ್ಣ ಅಧ್ಯಯನಗಳು ಮಾತ್ರವಲ್ಲದೆ, ತಮ್ಮ ಜೀವನದ ಕೊನೆಯ ವರ್ಷಗಳಲ್ಲಿ ಅವರು ರಚಿಸಿದ ಇನ್ನೊಂದು ಪ್ರಧಾನ ಗ್ರಂಥವೆಂದರೆ ಮಿಲಿಟರಿ ಹಿಸ್ಟೋರಿ ಆಫ್ ಇಂಡಿಯಾ (1960) ಅದು ಭಾರತದ ಯುದ್ಧ ಕಲೆಯನ್ನು ಕುರಿತ ಪ್ರಥಮ ಕೃತಿ.

ಸರ್ಕಾರ್ ಬರೆದ ಮೂರು ಮಹಾಕೃತಿಗಳು ಭಾರತದ ಇತಿಹಾಸ ಲೇಖನ ಕಲಾರಂಗದಲ್ಲಿ ಅದ್ವಿತೀಯವಾಗಿದ್ದುದಕ್ಕೆ ಕಾರಣ ಅವರು ಬಳಸಿದ ಅಪಾರ ವಿಷಯ ಸಾಮಾಗ್ರಿಗಳು. ಅವರು ಪರ್ಷಿಯನ್, ಮರಾಠಿ, ಹಿಂದಿ, ಸಂಸ್ಕೃತ, ಇಂಗ್ಲೀಷ್, ಫ್ರೆಂಚ್, ಡಚ್ ಹಾಗೂ ಪೋರ್ಚುಗೀಸ್ ಕೃತಿಗಳಿಂದ ಮತ್ತು ಅಧಿಕೃತ ಇತಿಹಾಸ. ಖಾಸಗಿ ಚರಿತ್ರೆ ಆ ಕಾಲದ ನಿರ್ದಿಷ್ಟ ವ್ಯಕ್ತಿ ಹಾಗೂ ಘಟನೆಗಳಿಗೆ ಸಂಬಂಧಿಸಿದ್ದ ಏಕ ವಿಷಯ ಪ್ರಬಂಧಗಳು, ರಾಜಸ್ಥಾನಗಳ ಲಘು ಪ್ರಕಟಣೆಗಳು, ಪ್ರಧಾನ ವ್ಯಕ್ತಿಗಳ ಪತ್ರಗಳ, ಚರಿತ್ರಾಂಶಗಳ ಸಂಗ್ರಹಗಳು ಯೂರೋಪಿನ ಪ್ರವಾಸಿಗಳ ಕಥನಗಳು, ಸಮಕಾಲೀನ ದಾಖಲೆಗಳು, ಪ್ರಾಂತೀಯ ಚರಿತ್ರೆ ಹಾಗೂ ಸಾಮ್ರಾಜ್ಯದ ವಿಚಾರ ಕೋಶ ಮುಂತಾದ ಮೂಲಧಾರಗಳಿಂದ ಕಚ್ಚಾ ವಿಷಯ ಸಾಮಗ್ರಿಗಳನ್ನು ಸಂಗ್ರಹಿಸಿ, ಅವುಗಳನ್ನು ಬಹು ಎಚ್ಚರಿಕೆಯಿಂದ ಸೂಕ್ಷ್ಮ ದೃಷ್ಟಿಯಿಂದ ಪರಿಶೀಲಿಸಿ, ತಾಳೆ ನೋಡಿ ಕ್ರಮಬದ್ಧವಾಗಿ ಅಣಿಮಾಡಿಕೊಂಡರು. ಅನಂತರ ವಿಶ್ಲೇಷಣೆ ಹಾಗೂ ತುಲನಾತ್ಮಕ ವಿಧಾನದ ಮೂಲಕ ಅವುಗಳ ಯಥಾರ್ಥತೆಯನ್ನು ಪರೀಕ್ಷಿಸಿದರು. ಯಾವ ತೆರಪು ಇರದಂತೆ ಮಾಡುವುದಕ್ಕಾಗಿ ಲಭ್ಯವಿದ್ದ ಇತರ ಮೂಲಾಧಾರಗಳ ಬೆಳಕಿನಲ್ಲಿ ಅವುಗಳನ್ನು ಪರಿಶೀಲಿಸಿದರು. ಅವರು ವಿಷಯಗಳ ಕಾಲವನ್ನು ನಿರ್ದಿಷ್ಟವಾಗಿ ನಿರ್ಧರಿಸುವುದಕ್ಕೆ ಬಹು ಹೆಚ್ಚಿನ ಗಮನವನ್ನು ನೀಡಿದರು. ಅವರು ತಮ್ಮ ಬರಹಗಳಲ್ಲಿ ತಾವು ಅನುಸರಿಸಿದ ವಿಧಾನವನ್ನು ಸೂಚಿಸಿದ್ದಾರೆ.

ಸರ್ಕಾರ್ ದಾಖಲು ಮಾಡುವಾಗ ವಸ್ತುನಿಷ್ಠ ವೈಜ್ಞಾನಿಕ ಕ್ರಮ ಮತ್ತು ಯತಾರ್ಥತೆಗೆ ಹೆಚ್ಚಿನ ಪ್ರಾಮುಖ್ಯವನ್ನು ಕೊಟ್ಟಿದ್ದಾರೆ. ಸಮಕಾಲೀನ ಮೂಲಾಧಾರಗಳ ಬಳಕೆ, ಮೂಲಗ್ರಂಥಗಳಲ್ಲಿ ಬಳಸಲಾಗಿದ್ದ ಭಾಷೆಗಳ ಪೂರ್ಣ ಪರಿಚಯ, ಮೂಲ ವಿಷಯ ಸಾಮಗ್ರಿಗಳನ್ನು ನೀಡಿದ ವ್ಯಕ್ತಿಗಳ ಮನೋಭಾವ ಹಾಗೂ ವ್ಯಕ್ತಿತ್ವದ ಅಧ್ಯಯನ, ಇತರ ಬಗೆಯ ಮೂಲಾಧಾರ ಹಾಗೂ ಇತರ ಬರಹಗಾರರು ನೀಡಿರುವ ವಿವರಗಳೊಂದಿಗೆ ಹೋಲಿಸುವುದರ ಮೂಲಕ ಎಲ್ಲಾ ವಿಷಯಗಳ ಪರಿಶೀಲನೆ, ಎಲ್ಲಾ ಬಗೆಯ ವಿಷಯಗಳ ಬಳಕೆ, ವಿಚಾರ ಮಾಡುವುದರಲ್ಲಿ ಸ್ವಂತಿಕೆ ಮತ್ತು ಎಲ್ಲಾ ಭಾಗಗಳ ಕ್ರಮಬದ್ಧ ಸಂಘಟನೆ ಅವರ ವಿಧಾನದಲ್ಲಿ ಕಂಡುಬರುವ ಪ್ರಮುಖ ಲಕ್ಷಣಗಳಾಗಿವೆ. ಒಂದು ಘಟನೆಯನ್ನು ವರ್ಣಿಸುವುದಕ್ಕೆ ಮೊದಲು, ಅವರು ವಿವಿಧ ಆಧಾರಗಳ ಸಹಾಯದಿಂದ ಅದರ ಸತ್ಯಾಸತ್ಯತೆಗಳನ್ನು ದೃಢೀಕರಿಸಿಕೊಂಡು, ತಾವು ಬಳಸಿದ ಮೂಲಗ್ರಂಥಗಳನ್ನು ಸ್ಪಷ್ಟವಾಗಿ ಉಲ್ಲೇಖಿಸುತ್ತಿದ್ದರು. ಯಾವ ಆಧಾರ ಗ್ರಂಥವನ್ನು ಕುರುಡರಂತೆ ಅನುಸರಿಸುತ್ತಿರಲಿಲ್ಲ. ಒಂದು ಕಥನವನ್ನು ಪುನರ್ರಚಿಸದಿದ್ದರೆ ಅದನ್ನು ಸ್ಪಷ್ಟವಾಗಿ ಹೇಳಿ, ಅದಕ್ಕಾಗಿ ತುಣುಕುಗಳನ್ನು ಸಂಗ್ರಹಿಸಿ ಒಂದು ಘಟನೆಯನ್ನು ಪುನರ್ರಚಿಸಿದ್ದರೆ ಅವುಗಳನ್ನೆಲ್ಲಾ ಅನುಬಂಧದಲ್ಲಿ ಸ್ಪಷ್ಟವಾಗಿ ನಿರೂಪಿಸುತ್ತಿದ್ದರು. ಒಂದು ನಿರ್ಧಿಷ್ಟ ಘಟನೆಯನ್ನು ವಿವರಿಸುವಾಗ ಅವರು ಭಾರತದ ಇತರ ಭಾಗಗಳಲ್ಲಿ ಅಥವಾ ಹೊರನಾಡಿನಲ್ಲಿ ಸಂಭವಿಸಿದ್ದ ಅದಕ್ಕೆ ಸರಿಸಮಾನವಾಗಿದ್ದ ಸಂಭವಗಳನ್ನು ಉಲ್ಲೇಖಿಸುತ್ತಿದ್ದರು. ಉದಾಹರಣೆಗೆ, ಅವರು ಶಿವಾಜಿಯ ತಾಯಿ ಜೀಜಾಬಾಯಿಯ ಬಗ್ಗೆ ಚರ್ಚಿಸುವಾಗ ಸಾತಕರ್ಣಿಯ ಮಾತೆ ಗೌತಮಿಯನ್ನು ಉಲ್ಲೇಖಿಸಿದ್ದಾರೆ. ಅವರಿಗಿದ್ದ ಕಲ್ಪನಾಶಕ್ತಿ ಅದ್ವಿತೀಯವಾಗಿದ್ದಿತು. ಆದ್ದರಿಂದ ಚಲನಚಿತ್ರದ ನಿರ್ದೇಶಕರಂತೆ ಪ್ರತಿಘಟನೆಯ ಅತ್ಯಲ್ಪ ವಿವರವನ್ನೂ ಬಿಡದೆ ಅದನ್ನು ಯಥವತ್ತಾಗಿ ಕಲ್ಪಿಸಿ ಚಿತ್ರಿಸುವುದು ಮತ್ತು ಗತಕಾಲವನ್ನು ಸಂಪೂರ್ಣವಾಗಿ ವೀಕ್ಷಿಸಿ ವಿವರಿಸುವುದು ಅವರಿಗೆ ಸಾಧ್ಯವಾಯಿತು.

ನಿಷ್ಪಕ್ಷಪಾತ ದೃಷ್ಟಿ, ಸೃಜನಶೀಲ ಕಲ್ಪನಾಶಕ್ತಿ ಮತ್ತು ಎಲ್ಲಾ ಮೂಲಾಧಾರಗಳ ವಿಮರ್ಶಾತ್ಮಕ ಪರಿಶೀಲನೆಯಿಂದ ಗಳಿಸಿಕೊಂಡ ಶುದ್ಧ ಜ್ಞಾನದಿಂದ ಕೂಡಿದ್ದ ಸರ್ಕಾರ್ ಅತ್ಯಂತ ಸರಳ. ಸುಂದರ ಹಾಗೂ ಅತ್ಯಾಕರ್ಷಕ ಶೈಲಿಯಲ್ಲಿ ವಿವರಣೆಗಳನ್ನು ನೀಡಿದರು. ಅವರು ನೀಡಿರುವ ವ್ಯಕ್ತಿ ಚಿತ್ರಣಗಳು ಅತ್ಯಂತ ಮನೋಹರವಾಗಿವೆ. ಅವರು ನೀಡಿರುವ ಯುದ್ಧ ವರ್ಣನೆಗಳಿಗೆ ಸರಿಸಮವಾದುದು ಯಾವುದೂ ಇಲ್ಲ ಎಂದು ಹೇಳಲಾಗುತ್ತದೆ. ಚಿಕ್ಕ ವಯಸ್ಸಿನಲ್ಲಿ ಜೋಮಿನಿಯ ಆರ್ಟ್ ಆಫ್‌ವಾರ್ ಎಂಬ ಪುಸ್ತಕದಿಂದ ಪ್ರಭಾವಿತರಾದ ಅವರು ಐತಿಹಾಸಿಕ ಯುದ್ಧಗಳ ವರದಿಗಾರರಂತೆ ಅತ್ಯಂತ ಸುಸ್ಪಷ್ಟವಾಗಿದ್ದ ರೀತಿಯಲ್ಲಿ, ಒಂದು ವಿವರವನ್ನೂ ಬಿಡದಂತೆ ಕದನಗಳನ್ನು ವರ್ಣಿಸಿದರು. ತಾವು ನಿರೂಪಿಸಿದ ಐತಿಹಾಸಿಕ ಘಟನೆಗಳಿಗೆ ಸಂಬಂಧಿಸಿದ್ದ ಭೌಗೋಳಿಕ ಪರಿಸ್ಥಿತಿಗಳನ್ನು ತಿಳಿಯಲು ವಿವಿಧ ಪ್ರದೇಶಗಳಿಗೆ ಭೇಟಿಕೊಟ್ಟರು ಮತ್ತು ಭೂಪಟಗಳನ್ನು ಬಳಸಿದರು. ಆದ್ದರಿಂದ ಅವರು ನೀಡಿರುವ ಕದನಗಳ ವರ್ಣನೆಗಳ ಸುಪ್ರಸಿದ್ಧ ಮಿಲಿಟರಿ ಇತಿಹಾಸಕಾರರು ಕೊಟ್ಟಿರುವ ವಿವರಣೆಗಳಿಗಿಂತ ಉತ್ತಮವಾಗಿದೆ ಎಂದು ಹೇಳಲಾಗುತ್ತದೆ. ಜಗತ್ತಿನ ಇತಿಹಾಸ ಹಾಗೂ ಸಾಹಿತ್ಯದಿಂದ ತಕ್ಕ ಉಲ್ಲೇಖ ಹಾಗೂ ನಿದರ್ಶನಗಳನ್ನು ಕೊಟ್ಟು ವಿವರಿಸುವುದು ಅವರ ಶೈಲಿಯ ಇನ್ನೊಂದು ವಿಶಿಷ್ಟ ಲಕ್ಷಣ.

ಸರ್ಕಾರ್ ರಾಂಕೆಯ ಕ್ರಮಗಳನ್ನು ಅನುಸರಿಸಿದರೂ, ಇತಿಹಾಸಕಾರನು ನಿರ್ಣಯಗಳನ್ನು ನೀಡಬಾರದೆಂಬ ಅವನ ಅಭಿಪ್ರಾಯವನ್ನು ಒಪ್ಪದೆ ಚರಿತ್ರಲೇಖಕನು ವ್ಯಕ್ತಿ ಹಾಗೂ ಘಟನೆಗಳನ್ನು ಪರೀಕ್ಷಿಸಿ ತೀರ್ಮಾನಿಸಬೇಕು ಎಂಬುದಾಗಿ ಹೇಳಿದರು. ಅವರು ಇತಿಹಾಸವು ವ್ಯಾವಹಾರಿಕವಾಗಿ ಉಪಯುಕ್ತವಾದುದು ಎಂಬುದಾಗಿ ಅಭಿಪ್ರಾಯಪಟ್ಟರು. ಗತಕಾಲದ ಅರಿವು ವರ್ತಮಾನ ಕಾಲದ ಸಮಸ್ಯೆಗಳನ್ನು ಪರಿಹರಿಸಲು ಸಹಾಯವಾಗುತ್ತದೆ ಮತ್ತು ಭವಿಷ್ಯತ್ತಿಗೆ ಮಾರ್ಗದರ್ಶಕವಾಗುತ್ತದೆ. ಅವರಿಗೆ ಪ್ರಗತಿಯ ಕಲ್ಪನೆ. ಮಾನವ ವ್ಯವಹಾರಗಳಲ್ಲಿ ದೇವರು ಪಾತ್ರ ವಹಿಸುತ್ತಾನೆ ಮತ್ತು ಇತಿಹಾಸವು ದೈವಸಂಕಲ್ಪದಂತೆ ಮುಂದುವರಿಯುತ್ತದೆ ಎಂಬ ವಿಷಯಗಳಲ್ಲಿ ನಂಬಿಕೆ ಇದ್ದಿತು. ಹಲವಾರು ಕಡೆ ಅವರು ದೇವನ್ಯಾಯದ ಬಗ್ಗೆ ಉಲ್ಲೇಖಿಸಿದ್ದಾರೆ. ಅವರು ನಿಯತಿ ಪ್ರತೀಕಾರ ನ್ಯಾಯ ಹಾಗೂ ದುಷ್ಕರ್ಮ ಫಲಗಳನ್ನು ಮಾನವ ಸಮಗ್ರ ಕ್ರಿಯೆಯೊಂದಿಗೆ ಸಮೀಕರಿಸಿದರು. ಸತ್ಯವು ಪ್ರಿಯವೋ, ಅಪ್ರಿಯವೊ, ಜನರಿಗೆ ಸಮ್ಮತವಾದುದೋ, ಇಲ್ಲವೋ ತಮಗೆ ಅದು ಮುಖ್ಯವಲ್ಲ. ತಾವು ಸತ್ಯವನ್ನೇ ಅನ್ವೇಷಿಸುವುದಾಗಿ, ಒಪ್ಪಿಕೊಳ್ಳುವುದಾಗಿ ಹೇಳಿಕೊಂಡಿದ್ದಾರೆ. ಇದು ಬಹುಶಃ ಅವರ ಇತಿಹಾಸ ಸಂದರ್ಶನದ ಕೇಂದ್ರಿತವಾಗಿದೆ. ಅವರ ಪ್ರಕಾರ, ಇತಿಹಾಸಕಾರನು ಸತ್ಯದ ಪ್ರತಿ ಅಪಾರ ಗೌರವ ಹಾಗೂ ನಿಷ್ಪಕ್ಷಪಾತ ದೃಷ್ಟಿಯನ್ನು ಮಾತ್ರವಲ್ಲದೆ, ಸಹಾನುಭೂತಿಯನ್ನು ಬೆಳೆಸಿಕೊಳ್ಳಬೇಕು. ಅವರು ಐತಿಹಾಸಿಕ

ವಿಷಯಗಳ ಉದಾರ, ಪ್ರಾಮಾಣಿಕ ಹಾಗೂ ಸಹಾನುಭೂತಿಯುತ ನಿರೂಪಣೆಯನ್ನು ಎತ್ತಿ ಹಿಡಿದರು.

ಸರ್ಕಾರ ಅವರ ಬರಹಗಳಲ್ಲೂ ಆ ಕಾಲದಲ್ಲಿ ಪ್ರಮುಖವಾಗಿದ್ದ ರಾಷ್ಟ್ರೀಯತೆಯ ಪ್ರಬಂಧವನ್ನು ಕಾಣಬಹುದು. ಅವರ ಅಧ್ಯಯನಗಳಲ್ಲಿ ಹೆಚ್ಚಾಗಿ ರಾಜಕೀಯ ಹಾಗೂ ಮಿಲಿಟರಿ ವಿಷಯಗಳು ಪ್ರಧಾನವಾಗಿದ್ದವು. ಅವರೂ ತಮ್ಮ ಕಾಲದಲ್ಲಿ ಶೀಘ್ರವಾಗಿ ಬೆಳೆಯುತ್ತಿದ್ದ ಮಾನವಶಾಸ್ತ್ರ, ಸಮಾಜ ವಿಜ್ಞಾನ, ಅರ್ಥಶಾಸ್ತ್ರ ಮುಂತಾದ ಸಂಬಂಧಿತ ಸಾಮಾಜಿಕ ವಿಜ್ಞಾನಗಳನ್ನು ತಮ್ಮ ಅಧ್ಯಯನಗಳಲ್ಲಿ ಬಳಸಿಕೊಳ್ಳಲಿಲ್ಲ. ಅವರು ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ವಿಷಯಗಳಿಗೆ ಅಷ್ಟೇನು ಗಮನವನ್ನು ಕೊಡಲಿಲ್ಲ. ಕೆಲವರು ಅವರು ಮೊಘಲರ ಹಾಗೂ ಬ್ರಿಟಿಷ್ ಆಳ್ವಿಕೆಯ ಹೆಚ್ಚು ಒಲವನ್ನು ತೋರಿದರು ಎಂಬುದಾಗಿ ಟೀಕಿಸಿದ್ದಾರೆ. ಟೀಕೆಗಳೇನಿದ್ದರೂ ಅವರು ಭಾರತದ ಅತ್ಯುತ್ತಮ ಚರಿತ್ರಲೇಖಕರೆಂಬುದರಲ್ಲಿ ಸಂದೇಹವೇ ಇಲ್ಲ. ಇತಿಹಾಸ ರಚನಾ ಕಾರ್ಯ ಅವರಿಗೆ ಎಷ್ಟು ಮುಖ್ಯವಾಗಿದ್ದಿತ್ತೆಂದರೆ ಅವರು ಯಾವ ಸಾಮಾಜಿಕ ಸಮಾರಂಭಗಳಲ್ಲೂ ಭಾಗವಹಿಸುತ್ತಿರಲಿಲ್ಲ. ಅನೇಕ ಇತಿಹಾಸ ವಿದ್ಯಾರ್ಥಿಗಳನ್ನು, ಮುಖ್ಯವಾಗಿ ಆಪ್ತಮಿತ್ರ ಸರ್ ದೇಸಾಯಿ ಅವರನ್ನು, ದೊಡ್ಡ ಚರಿತ್ರ ಲೇಖಕರನ್ನಾಗಿ ಕಡೆದ ಶಿಲ್ಪಿ ಅವರು. ಅವರ ಮಹತ್ಸಾಧನೆಗಾಗಿ ಅವರನ್ನು 'ಮೊಘಲ್ ಇತಿಹಾಸ ಕೊಲಂಬಸ್' ಎಂಬುದಾಗಿ ಮತ್ತು 17-18 ನೆಯ ಶತಮಾನಗಳನ್ನು 'ಜಾದೂನಾಥ್ ಶತಮಾನಗಳು' ಎಂಬುದಾಗಿ ಕರೆಯಲಾಗಿದೆ. ಭಾರತ ಇತಿಹಾಸ ಕ್ಷೇತ್ರಕ್ಕೆ ಬಹು ಬೆಲೆಬಾಳುವ ಶಾಶ್ವತ ನಿಧಿಗಳನ್ನು ನೀಡಿರುವ ಸರ್ಕಾರ್ ಭಾರತ ಇತಿಹಾಸ ಪಾಂಡಿತ್ಯ ಆಗಸದಲ್ಲಿ ಅತ್ಯುಜ್ವಲವಾಗಿ ಪ್ರಕಾಶಿಸುತ್ತಿರುವ ಅದ್ವಿತೀಯ ತಾರೆ.

## 28.3 ಆರ್.ಸಿ. ಮಜುಂದಾರ್

ಅಂತರ ರಾಷ್ಟ್ರೀಯ ಖ್ಯಾತಿ ಪಡೆದ ಮಜುಂದಾರ್ ಅತ್ಯಂತ ಗೌರವಾರ್ಹ ಇತಿಹಾಸಕಾರರು. 1888 ರಲ್ಲಿ ಹುಟ್ಟಿದ ಅವರು ಕಲ್ಕತ್ತಾದಲ್ಲಿ ವಿದ್ಯಾಭ್ಯಾಸವನ್ನು ಮುಂದುವರೆಸಿ ಅಲ್ಲಿಯ ವಿಶ್ವವಿದ್ಯಾನಿಲಯದಲ್ಲಿ ಪಿ.ಎಚ್.ಡಿ. ಪದವಿಯನ್ನು ಪಡೆದರು. ಇತಿಹಾಸದ ಪ್ರಾಧ್ಯಾಪಕರಾದ ಮತ್ತು ಢಖ್ಖಾನ್ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದರು. ಅವರ ಲೇಖನಿಯಿಂದ ಹರಿದು ಬಂದ ಇತಿಹಾಸ ಕೃತಿಗಳು ಹಲವಾರು, ವಿಷಯ, ಕಾಲ, ಸಮಸ್ಯೆ ಯಾವುದೇ ಇರಲಿ ಅವುಗಳನ್ನು ಅತ್ಯಂತ ಪಾಂಡಿತ್ಯ ಪೂರ್ಣವಾದ ಬಗೆಯಲ್ಲಿ, ವಸ್ತುನಿಷ್ಠವಾಗಿ ನಿರೂಪಿಸುವುದರಲ್ಲಿ ಅವರದು ಎತ್ತಿದ ಕೈ. ಅದಕ್ಕೆ ಸಾಕ್ಷಿ ಅವರ ಕಾರ್ಪೊರೇಟ್ ಲೈಫ್ ಇನ್ ಏನ್ಷೆಂಟ್ಇಂಡಿಯಾ, ಹಿಸ್ಟೊರಿ ಆಫ್ ಫ್ರೀಡಮ್ ಮೂವ್‌ಮೆಂಟ್ ಹಿಸ್ಟೊರೀಯಾಗ್ರಫಿ ಇನ್ ಮಾಡರನ್ ಇಂಡಿಯಾ, ಅರಬ್ ಇನ್‌ವೇಷನ್ ಆಫ್ ಇಂಡಿಯಾ ಕ್ಲಾಸಿಕಲ್ ಅಕೌಂಟ್ಸ್ ಆಫ್ ಇಂಡಿಯಾ, ಗ್ಲಿಂಪ್ಸೆಸ್ ಆಫ್ ಬೆಂಗಾಲ್ ಇನ್ ನೈನ್‌ಟೀನ್ತ್ ಸೆಂಚುರಿ, ಏನ್ಷೆಂಟ್ ಇಂಡಿಯಾ ಪೀವಲ್ ಸೆಟಲ್‌ಮೆಂಟೇ ಇನ್ ಅಂಡಮಾನ್ ಇತ್ಯಾದಿ ಕೃತಿಗಳೇ ಬಲವಾದ ಸಾಕ್ಷಿಯಾಗಿವೆ. ಅವರು ರಾಯ್ ಚೌಧುರಿ ಹಾಗೂ ದತ್ತರವರ ಒಡಗೂಡಿ ಬರೆದಿರುವ ಏನ್ ಅಡ್ವಾನ್ಸಡ್ ಇನ್ ಹಿಸ್ಟೊರಿ ಆಫ್ ಇಂಡಿಯಾ ಒಂದು ಉಪಯುಕ್ತ ಪಠ್ಯಪುಸ್ತಕ ಅವರ ನಿರೂಪಣೆಯಲ್ಲಿ ವ್ಯಕ್ತಿ ನಿಷ್ಠತೆಗೆ ಸ್ಥಳವಿಲ್ಲ. ಅವರ ವಿಶ್ಲೇಷಣೆ ಸುಸ್ಪಷ್ಟ. ವರು ಸಮಸ್ಯೆಗಳನ್ನು ಮುಚ್ಚುಮರೆ ಇಲ್ಲದೆ ಆದ್ಯಂತವಾಗಿ ಚರ್ಚಿಸಿದ್ದಾರೆ. ಅದರ ನಿವಾರಣೆ ಅತ್ಯಂತ ಪರಿಣಾಮಕಾರಿಯಾಗಿದೆ. ಅವರು ಬಳಸಿರುವ ಶೈಲಿ ಅವರ ಗಾಢ ಸಂಶೋಧನೆಗೆ ತಕ್ಕದಾಗಿದೆ. ಅದು ಹೆಚ್ಚಾಗಿ ನೂತನ ಭಾವನೆಗಳನ್ನು ಪ್ರಚೋದಿಸುತ್ತದೆಯೇ ಹೊರತು ರಂಜಿಸುವುದಿಲ್ಲ. ಅವರು ಘಟನೆಗಳಿಗೆ ಸಂಬಂಧಿಸಿರುವುದಿಲ್ಲ. ಅವರು ಘಟನೆಗಳಿಗೆ ಸಂಬಂಧಿಸಿದ ವಿವರಗಳನ್ನು ಕ್ರಮಬದ್ಧವಾಗಿ ಸಂಘಟಿಸಿ ವಿವರಿಸಿದ್ದಾರೆ. ಭಾರತೀಯ ವಿದ್ಯಾಭವನ ಸಂಸ್ಥೆ ಆರಂಭಿಸಿದ " ದಿ ಹಿಸ್ಟೊರಿ ಆಂಡ್ ಕಲ್ಚರ್ ಆಫ್ ಇಂಡಿಯನ್ ಪೀಪಲ್"ಎಂಬ ಸಂಪುಟಗಳ ಪ್ರಧಾನ ಸಂಪಾದಕರಾಗಿ ಈ ಅತ್ಯಂತ ಶ್ರಮಸಾಧ್ಯವಾದ ಕೆಲಸವನ್ನು ಅತ್ಯಂತ ಸಮರ್ಪಕವಾಗಿ ನೆರವೇರಿಸಿದುದು ಅವರ ಮಹತ್ಸಾಧನೆ. ಒಟ್ಟಿನಲ್ಲಿ ಅವರು ತಮ್ಮ ಸಂಪೂರ್ಣ ಜ್ಞಾನ, ಅಪಾರ ಅನುಭವ, ವಸ್ತು ನಿಷ್ಠತೆ, ಅಭಿಪ್ರಾಯಗಳ ಸ್ಪಷ್ಟ ನಿರೂಪಣೆ, ವಿಮರ್ಶಾತ್ಮಕ ಹಾಗೂ ವಿಶಾಲ ದೃಷ್ಟಿ ಇತ್ಯಾದಿಗಳ ಕಾರಣ ಪಂಡಿತರ ಪಂಕ್ತಿಯಲ್ಲಿ ಉನ್ನತ ಸ್ಥಾನವನ್ನು ಅಲಂಕರಿಸಿದ್ದಾರೆ. ಆದ್ದರಿಂದ ಅನೇಕ ಗೌರವ, ಬಿರುದು ಹಾಗೂ ಪ್ರಶಸ್ತಿಗಳು ಅವರನ್ನು ಹುಡುಕಿಕೊಂಡು ಬಂದಿದ್ದುದರಲ್ಲಿ ಆಶ್ಚರ್ಯವೇನಿಲ್ಲ. ಮಾನವ ಕುಲದ ಇತಿಹಾಸವನ್ನು ಸಂಪಾದಿಸಬೇಕೆಂಬ ಯುನೆಸ್ಕೊ ಯೋಜನೆಯ ಪ್ರಥಮ ಭಾರತೀಯ ಉಪಾಧ್ಯಕ್ಷರು ಮಜುಂದಾರ್ ಅವರು.

## 28.4 ದಾಮೋದರ್ ಧರ್ಮಾನಂದ್ ಕೋಶಾಂಬಿ (1907-1966)

ಮೂಲ ಸಂಶೋಧನೆ ನಡೆಸುವುದರಲ್ಲಿ ಅಪಾರ ಆಸಕ್ತಿಯನ್ನು ಕೋರಿವ ಕೋಶಾಂಭಿಯವರಿಗೆ ಇತಿಹಾಸದಲ್ಲಿ ಮಾತ್ರವಲ್ಲದೆ, ನಾಣ್ಯಶಾಸ್ತ್ರ, ಮಾನವ ಕುಲ ವಿಜ್ಞಾನ, ಪ್ರಾಚೀನ ಶೋಧನಶಾಸ್ತ್ರ, ಭಾಷಾ ವಿಜ್ಞಾನ, ಪೂರ್ವೇತಿಹಾಸ ಇತ್ಯಾದಿಗಳಲ್ಲೂ ಅತ್ಯಾಸಕ್ತಿ ಇದ್ದಿತು. ಮಾತೃಭಾಷೆಯಲ್ಲದಿದ್ದರೂ ಇಂಗ್ಲೀಷ್, ಫ್ರೆಂಚ್, ಗ್ರೀಕ್, ಲ್ಯಾಟಿನ್, ಸಂಸ್ಕೃತ, ಪಾಳಿ ಹಾಗೂ ಅರಬ್ಬೀ ಭಾಷೆಗಳಲ್ಲಿ ಚೆನ್ನಾಗಿ ತಿಳಿದಿದ್ದಿತು. ಗಣಿತಶಾಸ್ತ್ರ ಅವರಿಗೆ ಪ್ರೀತಿಯ ವಿಷಯವಾಗಿದ್ದರೂ, ಜೀವಶಾಸ್ತ್ರ ಮತ್ತು ಎಲ್ಲಾ ಭಾಷೆಗಳ ಸಾಹಿತ್ಯದಲ್ಲಿ ಅಪಾರ ಪ್ರೇಮವಿದ್ದಿತು. ಹೀಗೆ ವಿಶ್ವಕೋಶದಂತಿದ್ದ ಅವರು 1907 ರಲ್ಲಿ ಗೋವಾದಲ್ಲಿ ಒಂದು ಸುಸಂಸ್ಕೃತ ಕುಟುಂಬದಲ್ಲಿ ಹುಟ್ಟಿದರು. ಬೌದ್ಧ ಅಧ್ಯಯನಗಳಲ್ಲಿ ಅಪಾರ ಪಾಂಡಿತ್ಯವನ್ನು ಗಳಿಸಿದ್ದ ಅವರ ತಂದೆ ಧರ್ಮಾನಂದ ಕೋಶಾಂಭಿಯವರಿಂದ ಅವರಿಗೆ ಭಾರತ ಇತಿಹಾಸದ ಪರಿಚಯವಾಯಿತು.

ಸಂಶೋಧನೆಯಲ್ಲಿ ಆಸಕ್ತಿ, ರಾಷ್ಟ್ರಪ್ರೇಮ ಹಾಗೂ ತೀಕ್ಷ್ಣಬುದ್ಧಿ ತಂದೆಯವರಿಂದ ಬಂದ ಕೊಡುಗೆ. ಅವರ ತಂದೆಯವರು ಅಮೇರಿಕಾದ ಹಾರ್ವರ್ಡ್‌ನಲ್ಲಿ ಉಪಾಧ್ಯಾಯರಾಗಿದ್ದರಿಂದ ಕೋಶಾಂಭಿ ಸಹ ಅಲ್ಲೇ ಅತ್ಯಂತ ಪ್ರಶಂಸನೀಯವಾಗಿದ್ದ ರೀತಿಯಲ್ಲಿ ಪದವಿಯನ್ನು ಪಡೆದರು. ಪೂನಾದ ಫರ್ಗೂಸನ್ ಕಾಲೇಜಿಗೆ ಬರುವ ಮೊದಲು ಕೌಶಿ ಹಾಗೂ ಆಲಿಘುರ್‌ನಲ್ಲಿ ಗಣಿತಶಾಸ್ತ್ರದ ಅಧ್ಯಾಪಕರಾಗಿದ್ದರು ಮತ್ತು 1947 ರಿಂದ 1962 ರವರೆಗೆ ಸುಪ್ರಸಿದ್ಧ ಟಾಟಾರವರ ಮೂಲ ಸಂಶೋಧನಾ ಸಂಸ್ಥೆಯಲ್ಲಿ ಗಣಿತ ವಿಜ್ಞಾನದ ಪ್ರಾಧ್ಯಾಪಕರಾಗಿದ್ದರು. ಈ ಅತ್ಯಂತ ಪ್ರತಿಭಾಶಾಲಿಗೆ 1966 ರಲ್ಲಿ ಅನಿರೀಕ್ಷಿತವಾಗಿ ಸಾವಿನ ಕರೆ ಬಂದೊದಗಿತು.

ಕೋಶಾಂಭಿ ಇತಿಹಾಸ ಲೇಕನ ಕಲಾಕ್ಷೇತ್ರಕ್ಕೆ ನಾಲ್ಕು ಮುಖ್ಯ ಕೃತಿಗಳ ಜೊತೆ ಅನೇಕ ಲೇಖನಗಳನ್ನು ಕಾಣಿಕೆಯಾಗಿ ಕೊಟ್ಟಿದ್ದಾರೆ. ಅವರ "ಇಂಟ್ರೊಡಕ್ಷನ್ ಟೂ ದಿ ಸ್ಟಡಿ ಆಫ್ ಇಂಡಿಯನ್ ಹಿಸ್ಟೊರಿ" ಯಲ್ಲಿ ಪೂರ್ವೇತಿಹಾಸ ಕಾಲದಿಂದ ಹಿಡಿದು ಭಾರತದ ಮೇಲೆ ಬ್ರಿಟಿಷರ ಆಕ್ರಮಣದವರೆಗೆ ಉತ್ಪಾದನಾ ಉಪಕರಣ ಹಾಗೂ ಸಂಬಂಧ ಜನರ ಸಾಮಾಜಿಕ -ಆರ್ಥಿಕ ಬೆಳವಣಿಗೆ ಹಾಗೂ ಸಾಂಸ್ಕೃತಿಕ ಜೀವನದಲ್ಲಿ ಕಂಡು ಬಂದ ಪ್ರಧಾನ ಪ್ರವೃತ್ತಿ ಹಾಗೂ ಮುಖ್ಯ ಹೆಗ್ಗುರುತುಗಳನ್ನು ಗುರುತಿಸಲಾಗಿದೆ. ಆದರೆ ಅದು ಭಾರತವನ್ನು ಕುರಿತ ಕ್ರಮಬದ್ಧವಾದ ವ್ಯಾಪಕ ಐತಿಹಾಸಿಕ ವೃತ್ತಾಂತವಾಗಿಲ್ಲ. ಅವರು ಅಲ್ಲಿ ಅನುಸರಿಸುವ ದೃಷ್ಟಿಕೋನ ಆಧುನಿಕವಾದುದು. ಭಾರತೀಯ ಇತಿಹಾಸ ರಚನೆಯಲ್ಲಿ ನೂತನವಾದುದು. ಪೂರ್ವೇತಿಹಾಸಕಾಲದಿಂದ ಹಿಡಿದು ಮುಸ್ಲಿಮರ ಆಗಮನದವರೆಗೆ ಪ್ರಾಚೀನ ಭಾರತ ಇತಿಹಾಸ ಹಾಗೂ ಸಂಸ್ಕೃತಿಯ ಸಂಕ್ಷಿಪ್ತ ರೂಪುರೇಖೆಯನ್ನು ನೀಡಿರುವ "ದಿ ಕಲ್ಚರ್ ಆಂಡ್ ಸಿವಿಲಸೇಷನ್ ಇನ್ ಹಿಸ್ಟಾರಿಕಲ್ ಔಟ್".

ಪ್ರಾಚೀನ ಭಾರತದಲ್ಲಿದ್ದ ಉತ್ಪಾದನಾ ಕ್ರಮ ಹಾಗೂ ಸಂಬಂಧಗಳು ಮತ್ತು ಅವುಗಳ ಫಲವಾಗಿ ಬೆಳೆದು ಬಂದಿದ್ದ ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ಸಂಸ್ಥೆಗಳನ್ನು ವಿಶ್ಲೇಷಿಸಲಾಗಿದೆ. ಹತ್ತು ಪ್ರಬಂಧಗಳು ಸಂಕಲನವಾಗಿರುವ ಅವರ ಎಗ್ಸಾಸ್ಪೆರೇಟಿಂಗ್ ಎಸ್ಸೇಸ್: ಎಕ್ಸರ್‌ಸೈಸಸ್ ಇನ್ ದಿ ಡೈ ಅಲೆಕ್ಟಿಕಲ್ ಮೆತಡ್‌ನಲ್ಲಿ ಮೂರು ಪ್ರಬಂಧಗಳು ಮಾತ್ರ ಭಾರತ ಇತಿಹಾಸಕ್ಕೆ ಸಂಬಂಧಪಟ್ಟಿವೆ, ವರು ತಮ್ಮ ಮಿತ್ ಆಂಡ್ ರಿಯಾಲಿಟಿ ಸ್ಟಡೀಸ್ ಇನ್ ದಿ ಫಾರ್ಮೇಷನ್ ಆಫ್ ಇಂಡಿಯನ್ ಕಲ್ಚರ್ ನಲ್ಲಿ ಅಳಿಯದೆ ಉಳಿದಿರುವ ಭಾರತದ ಕಾಲ್ಪನಿಕ ಕಥನಗಳ ಬಗ್ಗೆ ಐದು ಲೇಖನಗಳನ್ನು ಬರೆದು ಅವುಗಳು ಭಾರತ ಸಂಸ್ಕೃತಿಯ ಮುಖ್ಯ ಭಾಗಗಳು ಎಂಬುದಾಗಿ ವರ್ಣಿಸಿದ್ದಾರೆ.

ಕೋಶಾಂಭಿಯವರ ಅಭಿಪ್ರಾಯದಲ್ಲಿ ಪ್ರಾಚೀನ ಭಾರತಕ್ಕೆ ಸಂಬಂಧಿಸಿರುವ ನಿಷ್ಪಕ್ಷ ಐತಿಹಾಸಿಕ ದಾಖಲೆಗಳು ಇಲ್ಲ. ಇರುವ ಇತರ ಆಧಾರಗಳನ್ನು ಬಳಸಿ ವಿವರಣೆಗಳನ್ನು ನೀಡುವುದು ಸುಲಭವಲ್ಲ. ಆದರೂ ವೇದ ರಾಮಾಯಣ ಮಹಾಭಾರತ ಹಾಗೂ ಪುರಾಣಗಳನ್ನು ಬಹು ಎಚ್ಚರಿಕೆಯಿಂದ ವಿಮರ್ಶಾತ್ಮಕವಾಗಿ ಪರಿಶೀಲಿಸಿದರೆ ಸೂಕ್ಷ್ಮವಾದ ಅಮೂಲ್ಯ ಇತಿಹಾಸ ಕಣಗಳು ಸಿಗಬಹುದು. ಭೌತವಾದಿಯಾಗಿದ್ದ ಅವರು ಬಂದು ಜನತೆಯು ಬಳಸುತ್ತಿದ್ದ ಕೃಷಿ ಉಪಕರಣಗಳನ್ನು ಅವರ ದೊರೆಯ ಹೆಸರಿಗಿಂತ ಬಹುಮುಖ್ಯವಾದವು ಎಂಬುದಾಗಿ ಎಣಿಸಿದರು. ಉತ್ಪಾದನಾ ಮಾಧ್ಯಮ ಹಾಗೂ ಸಂಬಂಧಗಳ ಆಧಾರದ ಮೇಲೆ ಐತಿಹಾಸಿಕ ಕಾಲಗಳನ್ನು

ನಿರ್ಧರಿಸುತ್ತಿದ್ದರೇ ವಿನಹಃ ಆಳುತ್ತಿದ್ದ ಸಂತತಿಗಳ ಬದಲಾವಣೆ ಅಥವಾ ಯುದ್ಧಗಳ ಆಧಾರದ ಮೇಲಲ್ಲ. ಅವರ ಪ್ರಕಾರ ಭಕ್ತಿಪಂಥದ ಸಿದ್ಧಾಂತವು ಊಳಿಗಮಾನ್ಯ ಪದ್ಧತಿಗೆ ಭಾವಾತ್ಮಕ ಆಧಾರವಾಯಿತು. ಗುಪ್ತರ ಕಾಲದ ಅಂತ್ಯದಲ್ಲಿ ಆದ ಸ್ವಾವಲಂಬಿ ಗ್ರಾಮಗಳ ಬೆಳವಣಿಗೆಯ ಕಾರಣ ಪದಾರ್ಥಗಳ ಉತ್ಪಾದನೆ ಗಣನೀಯವಾಗಿ ಕಡಿಮೆಯಾಯಿತು; ಅದು ಊಳಿಗಮಾನ್ಯ ಪದ್ಧತಿಯ, ಬೆಳವಣಿಗೆಗೆ ಹಾಗೂ ಚಕ್ರಾಧಿಪತ್ಯದ ಶಿಥಿಲತೆಗೆ ಹಿನ್ನೆಲೆಯಾಯಿತು. ಪದಾರ್ಥಗಳ ಹೆಚ್ಚು ಉತ್ಪಾದನೆ, ವ್ಯಾಪಕ ವ್ಯಾಪಾರ ಹಾಗೂ ಹೆಚ್ಚು ತೆರಿಗೆಗಳಿದ್ದರೆ ಒಂದು ದೊಡ್ಡ ಸಾಮ್ರಾಜ್ಯ ಹಾಗೂ ಖಾಯಂ ಸೇನೆಯನ್ನು ಸಂರಕ್ಷಿಸಬಹುದು.

ಒಟ್ಟಿನಲ್ಲಿ ಅವರ ಪ್ರಕಾರ ಕಾಲಕ್ರಮವಾಗಿ ಉತ್ಪಾದನಾ ಮಾಧ್ಯಮ ಹಾಗೂ ಸಂಬಂಧಗಳಲ್ಲಿ ಉಂಟಾಗುವ ಅನುಕ್ರಮ ಬೆಳವಣಿಗೆಗಳು ಒಂದು ಜನತೆಯ ಇತಿಹಾಸವಾಗುತ್ತದೆ; ಬುಡಕಟ್ಟು ಸಮಾಜಗಳ ಉಳಿಕೆಯ ಅಂಶ, ಲಿಖಿತ ದಾಖಲೆ, ಪ್ರಾಚೀನ, ಶೋಧನಶಾಸ್ತ್ರ, ಶಾಸನ, ನಾಣ್ಯಗಳು, ಮಾತ್ರವಲ್ಲದೆ, ಭಾಷಾ ವಿಜ್ಞಾನ ಮಾನವಶಾಸ್ತ್ರ, ಸಮಾಜ ವಿಜ್ಞಾನ ಮುಂತಾಗಿ ಎಲ್ಲಾ ಸಂಬಂಧಿತ ವಿಜ್ಞಾನಗಳ ವಿಧಾನಗಳನ್ನು ಬಳಸಿ ಮಾನವಕುಲ ವರ್ಣನಾತ್ಮಕ ವಿವರಣೆಯ ಸಹಾಯದಿಂದ ಇತಿಹಾಸವನ್ನು ವೈಜ್ಞಾನಿಕ ಸಂಶೋಧನೆಯಲ್ಲಿ ಗಾಡಾಸಕ್ತಿಯನ್ನು ಬೆಳೆಸಿಕೊಂಡಿದ್ದ ಅವರು ಪ್ರಾಚೀನ ಭಾರತ ಇತಿಹಾಸ ಹಾಗೂ ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡಬೇಕಾದರೆ ಅಥವಾ ಬರೆಯಬೇಕಾದರೆ ಈ ಎಲ್ಲ ಆಧಾರ ಹಾಗೂ ಕ್ರಮಗಳನ್ನು ಬಳಸಬೇಕು ಎಂದು ಹೇಳಿದರು. ಅವರು ಮೂಲಾಧಾರಗಳ ವಾಸ್ತವಾಂಶಗಳನ್ನು ಪ್ರಾಚೀನ ಶೋಧನ ಶಾಸ್ತ್ರದಿ ಬೆಳಕಿನಲ್ಲಿ ತಾಳೆ ನೋಡಿ ಅವುಗಳನ್ನು ಮಾನವಕುಲ ವರ್ಣನಾತ್ಮಕ ವಿವರಣೆಗಳೊಂದಿಗೆ ಸೇರಿಸಿ ಬಹು ಎಚ್ಚರಿಕೆಯಿಂದ ಅರ್ಥ ವಿವರಣೆಯನ್ನು ನೀಡುತ್ತಿದ್ದರು. ಹೀಗೆ ಅವರು ಸಂಬಂಧಿತ ಶಾಸ್ತ್ರಗಳ ಸಂಘಟಿತ ವಿಧಾನವನ್ನು ಬಳಸಿದರು. ಅವರದು ಅನ್ಯೋನ್ಯ -ಶಿಕ್ಷಣಾತ್ಮಕ ದೃಷ್ಟಿಕೋನ. ಅವರು ಕ್ಷೇತ್ರ-ಕಾರ್ಯಕ್ಕೆ ಹೆಚ್ಚಿನ ಪ್ರಾಮುಖ್ಯವನ್ನು ನೀಡಿ ಇತರ ಎಲ್ಲಾ ಆಧಾರಗಳಿಂದ ಸಂಗ್ರಹಿಸಲಾದ ವಿವರಗಳನ್ನು ಕ್ಷೇತ್ರ - ಕಾರ್ಯದ ಆಧಾರದ ಮೇಲೆ ಪರಿಶೀಲಿಸಬೇಕು ಎಂಬುದಾಗಿ ಅಭಿಪ್ರಾಯಪಟ್ಟರು.

## 28.5 ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ (1871-1953)

ದಕ್ಷಿಣ ಭಾರತ ಇತಿಹಾಸ ರಂಗದಲ್ಲಿ ಎಸ್.ಕೆ. ಅಯ್ಯಂಗಾರ್ ಎಂಬ ಹೆಸರು ಎದ್ದು ಕಾಣುವಂತಹುದು. ಕುಂಭಕೋಣದ ಹತ್ತಿರವಿದ್ದ ಸಕ್ಕೋಟಿ ಎಂಬಲ್ಲಿ ಜನಿಸಿ, ಬೆಂಗಳೂರಿನಲ್ಲಿ ಶಿಕ್ಷಣ ಪಡೆದ ಅವರಿಗೆ ಪದವಿಪೂರ್ವ ವರ್ಗದಲ್ಲಿ ಭೌತಶಾಸ್ತ್ರ ಮತ್ತು ಸ್ನಾತಕೋತ್ತರ ವಿಭಾಗದಲ್ಲಿ ಗಣಿತಶಾಸ್ತ್ರ ಬಹುಪ್ರಿಯವಾಗಿದ್ದ ವಿಷಯಗಳಾಗಿದ್ದವು. ಕೊನೆಗೆ ಬಂದು ಅವರು ಬಲವಾಗಿ ನೆಲೆಯೂರಿದ್ದುದು ಇತಿಹಾಸ ಕ್ಷೇತ್ರದಲ್ಲಿ. ಮೊಟ್ಟಮೊದಲು ಅವರ ಲೇಖನಿಯಿಂದ ಹೊರಬಂದಿದ್ದುದು ದಿ ಹಿಸ್ಟೋರಿ ಆಫ್ ಮೈಸೂರ್ ಅಂಡರ್ ದಿ ಒಡೆಯರ್ಸ್ ಎಂಬ ಪ್ರೌಢ ಪ್ರಬಂಧ. ಪ್ರಖ್ಯಾತ ಶಾಸನತಜ್ಞರಾಗಿದ್ದ ಹಲ್ಟ್ಜ್ ಹಾಗೂ ವೆಂಕಯ್ಯನವರ ಪರಿಚಯದಿಂದ ಇತಿಹಾಸಕಾರರಾಗಿದ್ದ ಅವರ ಜೀವನದಲ್ಲಿ ಒಂದು ಮಹತ್ತರ ತಿರುವು ಉಂಟಾಯಿತು. ಅವರು 1901 ರ ಹೊತ್ತಿಗೆ ಚೋಳ ಚರಿತ್ರೆಯಲ್ಲಿ ಆಸಕ್ತಿ ವಹಿಸಿ ಸಂಶೋಧನೆಯನ್ನು ಆರಂಭಿಸಿದರು. ಆಳಿದ ಸಂತತಿಗಳನ್ನು ಹಾಗೂ ಕಾಲಗರ್ಭದಲ್ಲಿ ಕಣ್ಮರೆಯಾಗಿ ಹೋಗಿದ್ದ ಜನರು ಮರೆತಿದ್ದ ಸಂತತಿಗಳನ್ನು ಬೆಳಕಿಗೆ ತರುವುದು. ಅವುಗಳ ಕಾಲವನ್ನು ಸರಿಪಡಿಸಿ ನಿರ್ದಿಷ್ಟವಾಗಿ ನಿರ್ಧರಿಸುವುದು. ಆಳಿ ಅಳಿದು ಹೋದ ರಾಜರ ವಂಶಾವಳಿಗಳನ್ನು ಸ್ಪಷ್ಟವಾಗಿ ಸೂಚಿಸುವುದು. ಆಳಿದ ಸಂತತಿಗಳ ಕಾಲ್ಪನಿಕ ಮೂಲದ ಮೇಲೆ ಬೆಳಕನ್ನು ಬೀರುವುದು ಮುಂತಾದ ಅನೇಕ ಸಮಸ್ಯೆ ಹಾಗೂ ಒಗಟನ್ನು ಬಿಡಿಸುವ ಕಾರ್ಯದಲ್ಲಿ ತಲ್ಲೀನರಾದರು. ಅವರು ಮೊದಲಿನಿಂದಲೂ ತಮಿಳು ಭಾಷೆಯಲ್ಲಿ ಪಾಂಡಿತ್ಯ ಪೂರ್ಣ ಐತಿಹಾಸಿಕ ಪ್ರಾಧ್ಯಾಪಕ ಪೀಠವನ್ನು ಸ್ಥಾಪಿಸಿದಾಗ ಅದನ್ನು ಅಲಂಕರಿಸಿದ ಪ್ರಥಮ ಮಹಾಪಂಡಿತರು ಎಸ್.ಕೆ. ಅಯ್ಯಂಗಾರ್. ಅವರು 1918 ರಲ್ಲಿ "ದಿ ಬಿಗಿನಿಂಗ್ಸ್ ಆಫ್ ಸೌತ್ ಇಂಡಿಯನ್ ಹಿಸ್ಟೋರಿ" ಎಂಬ ಪುಸ್ತಕವನ್ನು ಪ್ರಕಟಿಸಿದರು. 1821 ರಲ್ಲಿ ಪ್ರಕಟವಾದ ಸೌತ್ ಇಂಡಿಯಾ ಆಂಡ್ ಹರ್ ಮೊಹಮ್ಮದನ್ ಇನ್‌ಮೇಡರ್ಸ್ ಉತ್ತಮ ಕೃತಿ. ಅವರ "ಕಾಂಟ್ರಿಬ್ಯೂಷನ್ ಆಫ್ ಸೌತ್ ಇಂಡಿಯಾ ಟು ಇಂಡಿಯನ್ ಕಲ್ಚರ್, ಮಣಿ ಮೇಖಲೆ ಇನ್ ಇಟ್ಸ್ ಹಿಸ್ಟಾರಿಕಲ್ ಸೆಟಿಂಗ್ (1928), ದಿ ರೆವ್ಯೂಲ್ಯೂಷನ್ ಆಫ್ ಹಿಂದೂ ಅಡ್‌ಮಿನಿಸ್ಟ್ರೇಷನ್ ಇನ್‌ಸ್ಟಿಟ್ಯೂಷನ್ ಇನ್ ಸೌತ್ ಇಂಡಿಯಾ (1931) ಇತ್ಯಾದಿಗಳು ಸಂಪ್ರದಾಯಬದ್ಧ ಇತಿಹಾಸ ಸಂಶೋಧನಾ ವರ್ಗಕ್ಕೆ ಸೇರಿದವುಗಳು. ಅವುಗಳಲ್ಲಿ ಅಪಾರವಾಗಿದ್ದ ನೂತನ ವಿವರಗಳು,

ಹಲವಾರು ಹೊಸ ದಾಖಲೆಗಳ ಪರಿಚಯ ಮತ್ತು ಸಮಾಜ, ಸಂಸ್ಕೃತಿ, ಕಲೆ ಇತ್ಯಾದಿ ನೂತನ ಕ್ಷೇತ್ರಗಳ ಪರಿಶೋಧನೆ ಮುಂತಾದ ಅಂಶಗಳು ಮುಖ್ಯವಾಗಿವೆ. ಅವುಗಳ ವಿವರಣಾತ್ಮಕ ಇತಿಹಾಸಗಳೇ ಹೊರತು ತಾರ್ಕಿಕವಾಗಿ ಹಾಗೂ ಸೂಕ್ಷ್ಮಾರ್ಥ ವ್ಯಾಖ್ಯಾನಾತ್ಮಕವಾದ ಚರಿತ್ರೆಗಳಲ್ಲಿ ಅವುಗಳು ಗತಕಾಲವನ್ನು ಪ್ರತಿಬಿಂಬಿಸುವ ಕನ್ನಡಿ ಮಾತ್ರವಾಗಿವೆ.

ಇಷ್ಟು ಮಾತ್ರವಲ್ಲದೆ, ಎಸ್.ಕೆ. ಅಯ್ಯಂಗಾರ್ ಸಿವೆಲಿನ "ಹಿಸ್ಟೊರಿಕಲ್ ಇನ್‌ಸ್ಕ್ರಿಪ್ಷನ್ ಆಫ್ ಸೌತ್ ಇಂಡಿಯಾದ" ಸಂಪಾದಕರಾದರು. ಎರಡು ಸಂಪುಟಗಳಲ್ಲಿ ಹಿಸ್ಟೊರಿ ಆಫ್ ತಿರುಪತಿಯನ್ನು ರಚಿಸಿದರು ಮತ್ತು ಅವರ ಸೋರ್ಸಸ್ ಆಫ್ ವಿಜಯ್‌ನಗರ್ ಹಿಸ್ಟೊರಿ ಮುಂದೆ ಅದೇ ಬಗೆಯ ಕೃತಿಗಳಿಗೆ ಹಾದಿಯನ್ನು ಸುಗಮ ಪಡಿಸಿತು. ಅವರಿಗೆ ಸಂಗಂ ಕಾಲದ ಅಧ್ಯಯನದಲ್ಲಿ ಗಾಢಾನುಸಕ್ತಿ ಹಾಗೂ ಅತ್ಯಾಸಕ್ತಿ ಇದ್ದಿತು. ಅವರು ಕೇಂಬ್ರಿಡ್ಜ್ ಹಿಸ್ಟೊರಿ ಆಫ್ ಇಂಡಿಯಾದ ಮೂರನೆಯ ಸಂಪುಟದಲ್ಲಿ ದಕ್ಷಿಣ ಭಾರತದ ಇತಿಹಾಸವನ್ನ ಕುರಿತು ಅಧ್ಯಾಯಗಳನ್ನು ಬರೆದರು. ಸ್ವಲ್ಪ ಕಾಲ ಜನರಲ್ ಆಫ್ ಇಂಡಿಯನ್ ಹಿಸ್ಟೊರಿ ಎಂಬ ನಿಯತಕಾಲಕದ ಸಂಪಾದಕರಾಗಿದ್ದರು. ಅವರು 1929 ನೇಯ ನವೆಂಬರ್ 11 ರಂದು ನಿವೃತ್ತರಾದರು. ಅವರು ಮದ್ರಾಸಿನಲ್ಲಿ ಇತಿಹಾಸ ಅಧ್ಯಯನಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಿದರು; ಸತ್ಯನಾಥ್ ಅಯ್ಯರ್, ಗೋಪಾಲನ್, ನಾರಾಯಣ ಅಯ್ಯರ್, ಅಪ್ಪಾದೊರೈ ಮುಂತಾದ ಘನ ವಿದ್ವಾಂಸರಿಗೆ ಸ್ಫೂರ್ತಿದಾಯಕರಾಗಿದ್ದರು. ಹೀಗೆ ರಾಜಕೀಯ ಇತಿಹಾಸದಲ್ಲಿ ಆಸಕ್ತಿ ವಹಿಸಿದ್ದ ಒಂದು ವಿಚಾರ ಪಂಥವು ಬೆಳೆಯುವುದಕ್ಕೆ ಕಾರಣರಾದರು. ದಕ್ಷಿಣ ಭಾರತದಲ್ಲಿ ನೂತನ ವಿಷಯಗಳಿಗಾಗಿ ಬಹು ಶ್ರಮದಿಂದ ಸಂಶೋಧನೆ ನಡೆಸಿದ ಮತ್ತು ಇಲ್ಲಿಯ ಸಂಸ್ಕೃತಿ ಎಷ್ಟು ಸಂಪತ್ಸಮೃದ್ಧವೂ ವೈವಿಧ್ಯಮಯವೂ ಆಗಿತ್ತೆಂಬುದನ್ನು ತೋರುವುದಕ್ಕಾಗಿ ವಿಭಿನ್ನ ವಿಷಯಗಳನ್ನು ಕುರಿತು ವಿಚಾರ ಮಾಡಿದ ಒಂದು ನೂತನ ಬಗೆಯ ಐತಿಹಾಸಿಕ ಸಂಶೋಧನಾ ಪಂಥವನ್ನು ಉದ್ಘಾಟಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಆದರೂ ಭಾರತದ ಬಗ್ಗೆ ಯೂರೋಪಿನವರು, ಮುಖ್ಯವಾಗಿ ಪಾದ್ರಿಗಳು, ಮಾಡಿದ ಏಕಪಕ್ಷೀಯ ಟೀಕೆಗಳಿಗೆ ಅವರಾಗಲಿ, ಅವರ ಸಹೋದ್ಯೋಗಿಗಳಾಗಲಿ ಪ್ರತಿಭಟಿಸದೆ ಮೌನವಾಗಿದ್ದುದು ಆಶ್ಚರ್ಯವೇ ಸರಿ.

## 28.6 ಕೆ.ಎ. ನೀಲಕಂಠಶಾಸ್ತ್ರಿ (1892-1975)

ಅತ್ಯಂತ ಹಿಂದಿನ ಕಾಲದಿಂದ ಹಿಡಿದು 16 ನೇಯ ಶತಮಾನದಲ್ಲಿ ಸಂಭವಿಸಿದ ವಿಜಯನಗರ ಸಾಮ್ರಾಜ್ಯದ ಪತನದವರೆಗೆ ದಕ್ಷಿಣ ಭಾರತದ ಸುದೀರ್ಘ ಇತಿಹಾಸವನ್ನು ಬರೆದವರು ಮತ್ತು ಪ್ರಮುಖ ದಕ್ಷಿಣ ಭಾರತದ ಇತಿಹಾಸಕಾರರೂ ಆಗಿದ್ದವರು ಕೆ.ಎ. ನೀಲಕಂಠಶಾಸ್ತ್ರಿ. ತಮಿಳುನಾಡಿನ ತಿರುನೆಲ್‌ವೇಲಿಯಲ್ಲಿ 1892 ರಲ್ಲಿ ಹುಟ್ಟಿದ ಅವರು ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ಇತಿಹಾಸ ಶಾಖೆಯಲ್ಲಿ ಅತ್ಯಂತ ಪ್ರತಿಭಾಶಾಲಿ ವಿದ್ಯಾರ್ಥಿಯಾಗಿದ್ದರು. ದಕ್ಷಿಣ ಭಾರತದ ಭಾಷೆಗಳನ್ನು ಚೆನ್ನಾಗಿ ಅರಿತಿದ್ದ ಅವರು ಆಗ್ನೇಯ ಏಷ್ಯಾದ ಅಧ್ಯಯನ ಮಾಡುವುದಕ್ಕಾಗಿ ಡಚ್ ಹಾಗೂ ಫ್ರೆಂಚ್ ಭಾಷೆಗಳನ್ನು ಕಲಿತರು. ಅವರು ಚಿದಂಬರದ ಶ್ರೀ ಮೀನಾಕ್ಷಿ ಕಾಲೇಜಿನ ಪ್ರಾಂಶುಪಾಲರಾಗಿರುವುದಕ್ಕೆ ಮೊದಲು ತಿರುನೆಲ್‌ವೇಲಿ ಹಾಗೂ ಕಾಶಿಯಲ್ಲಿ ಇತಿಹಾಸ ಅಧ್ಯಾಪಕರಾಗಿದ್ದರು. 1929 ರಲ್ಲಿ ಅವರನ್ನು ಮದ್ರಾಸು ವಿಶ್ವವಿದ್ಯಾನಿಲಯದ ಭಾರತ ಇತಿಹಾಸ ಹಾಗೂ ಪ್ರಾಚೀನ ಶೋಧನಶಾಸ್ತ್ರದ ಪ್ರಾಧ್ಯಾಪಕರಾಗಿ ನೇಮಿಸಲಾಯಿತು. ನಿವೃತ್ತರಾದ ನಂತರ ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಭಾರತ ಶಾಸ್ತ್ರದ ಪ್ರಾಧ್ಯಾಪಕರಾದರು ಹಾಗೂ ತಮಿಳುನಾಡಿನಲ್ಲಿ ಸಾಂಪ್ರದಾಯಿಕ ಸಂಸ್ಕೃತಿಗಳ ಸಂಸ್ಥೆಯ ನಿರ್ದೇಶಕರೂ ಆದರು. ಅವರು ಚಿಕಾಗೋ ವಿಶ್ವವಿದ್ಯಾನಿಲಯದಲ್ಲಿ ದಕ್ಷಿಣ ಭಾರತ ಇತಿಹಾಸದ ಬಗ್ಗೆ ಉಪನ್ಯಾಸಗಳನ್ನು ನೀಡಿದರು. 1975 ರಲ್ಲಿ ಶಾಸ್ತ್ರಿಯವರು ಮೃತ್ಯುವಶರಾದರು.

ಶಾಸ್ತ್ರಿಯವರು ಭಾರತ ಇತಿಹಾಸ ಸಾಹಿತ್ಯಕ್ಕೆ ನೀಡಿರುವ ಕಾಣಿಕೆಗಳನ್ನು ಈ ಕೆಳಕಂಡಂತೆ ಐದು ವರ್ಗಗಳಾಗಿ ವಿಭಾಗಿಸಬಹುದು:-

1. ದಿ ಪಾಂಡ್ಯನ್ ಕಿಂಗ್‌ಡಂ (1929) ಎಂಬ ಅಷ್ಟು ಸಮರ್ಪಕವಾಗಿಲ್ಲದ ಕೃತಿ ; ಸ್ಟಡೀಸ್ ಇನ್ ಚೋಳ ಹಿಸ್ಟೊರಿ ಆಂಡ್ ಅಡ್‌ಮಿನಿಸ್ಟ್ರೇಷನ್ (1932); ಚೋಳರ ರಾಜಕೀಯ ಇತಿಹಾಸ ಮತ್ತು ಅವರ ಕಾಲದ ಸರ್ಕಾರ, ಸ್ಥಳೀಯ ಆಡಳಿತ, ತೆರಿಗೆ, ಹಣಕಾಸು, ಸಾಮಾಜಿಕ ವಿಭಾಗಗಳು, ಜೀವನ ಮಟ್ಟ, ಕೃಷಿ, ಕೈಗಾರಿಕೆ ಹಾಗೂ ವ್ಯಾಪಾರ, ನಾಣ್ಯ, ಶಿಕ್ಷಣ, ಮತಧರ್ಮ, ಸಾಹಿತ್ಯ, ಇತ್ಯಾದಿ ವಿಷಯಗಳ ವೃತ್ತಾಂತವಾಗಿರುವ ದಿ ಚೋಳಾಸ್ (2 ಸಂಪುಟಗಳು, 1935 - 1937). ಒಂದೇ ಸಂಪುಟದಲ್ಲಿ (1955);

ಚೇರ, ಚೋಳ ಹಾಗೂ ಪಾಂಡ್ಯ ರಾಜ್ಯಗಳ ಸರ್ಕಾರ, ಸಾಮಾಜಿಕ - ಆರ್ಥಿಕ ಪರಿಸ್ಥಿತಿ, ಮತಧರ್ಮ, ಸಾಹಿತ್ಯ, ಕಲೆ ಇತ್ಯಾದಿಗಳ ಅತ್ಯುತ್ತಮ ಸಂಕ್ಷಿಪ್ತ ವಿಮರ್ಶೆಯಾಗಿರುವ ದಿ ತಮಿಳ್ ಕಿಂಗ್‌ಡಂಸ್ ಆಫ್ ಸೌತ್ ಇಂಡಿಯಾ (1948) ಮತ್ತು ದಿ ಕಲ್ಚರ್ ಆಂಡ್ ಹಿಸ್ಟೋರಿ ಆಫ್ ದಿ ತಮಿಳ್ಸ್ (1946); ಶೈಲೇಂದ್ರರ ಸುಮಂತ್ರ ರಾಜ್ಯವನ್ನು ಕುರಿತ ಹಿಸ್ಟೋರಿ ಆಫ್ ಶ್ರೀ ವಿಜಯ (1949) ಮತ್ತು ಹಿಸ್ಟೋರಿ ಆಫ್ ಇಂಡಿಯಾ (3 ಭಾಗಗಳು, 1950, ಪರಿಷ್ಕೃತ ಮುದ್ರಣ) ಅಡ್ವಾನ್ಸ್‌ಡ್ ಹಿಸ್ಟೋರಿ ಆಫ್ ಇಂಡಿಯಾ (1970), ಇಂಡಿಯಾ - ಏ ಹಿಸ್ಟಾರಿಕಲ್ ಸರ್ವೆ (1966) ( ಪರಿಷ್ಕೃತ ಮುದ್ರಣ), ಲೈಫ್ ಆಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್ (1970) ಮುಂತಾದ ಪಠ್ಯಪುಸ್ತಕಗಳು; ಮತ್ತು ದೃಢೀಕೃತ ವಿಷಯಗಳ ಸಂಘಟಿತ ಕಥನವಾಗಿದ್ದರೂ, ದಕ್ಷಿಣ ಭಾರತ ಚರಿತ್ರೆ ಎಂಬ ಭಯಂಕರ ಕಾಡಿನಲ್ಲಿ ಸರಿಯಾದ ಮಾರ್ಗವನ್ನು ನಿರ್ಮಿಸಿ ವಾಚಕರನ್ನು ಕುಸಿದುಬೀಳುತ್ತಿರುವ ರಾಜ್ಯಗಳ ಮತ್ತು ಯುದ್ಧಾಯುಧಗಳ ಹೊಡೆತಗಳ ನಡುವೆ ಕ್ಷೇಮವಾಗಿ ಕರೆದೊಯ್ದು, ಜನರ ನಿಜವಾದ ಇತಿಹಾಸ ಹಾಗೂ ಸಾಂಸ್ಕೃತಿಕ ಮುನ್ನಡೆಯ ಮೇಲೆ ಬೆಳಕನ್ನು ಬೀರುವ ಹಿಸ್ಟೋರಿ ಆಫ್ ಸೌತ್ ಇಂಡಿಯಾ ಮುಂತಾದ ಪ್ರಧಾನ ಪುಸ್ತಕಗಳು.

2. ದಿವ್ಯವಾದ ಮತ್ತುಅವದನ ಶತಕ್ ಎಂಬ ಬೌದ್ಧ ಸಾಹಿತ್ಯದಲ್ಲಿ ಅಡಕವಾಗಿದ್ದ ಸಾಮಾಜಿಕ ಜೀವನವನ್ನು ಕುರಿತ ವಾಸ್ತವಾಂಶಗಳ ಸಂಗ್ರಹವಾಗಿರುವ ಗ್ಲಿನಿಂಗ್ಸ್ ಆನ್ ಸೋಷಿಯಲ್ ಲೈಫ್ ಫ್ರಾಮ್ ದಿ ಅವದನಾಸ್; ಹಿಂದೂ ವಸಾಹತು ಸ್ಥಾಪನೆಯ ಮೊದಲನೆಯ ಹಂತದಲ್ಲಿ ಬೆಳೆದುಬಂದ ಕಲೆ ಹಾಗೂ ಸಾಮಾಜಿಕ ಜೀವನದ ಅಧ್ಯಯನವಾದ ಸೌತ್ ಇಂಡಿಯನ್ ಇನ್‌ಫ್ಲೂಯನ್ಸಸ್ ಇನ್‌ದ ಇ ಫಾರ್ ಈಸ್ಟ್ (1948); ಇತರ ನಾಡುಗಳ ಸಾಂಸ್ಕೃತಿಕ ರಚನೆಯಲ್ಲಿ ಇದ್ದ ಭಾರತೀಯ ಅಂಶಗಳನ್ನು ಎತ್ತಿ ತೋರುವ ಕಲ್ಚರಲ್ ಎಕ್ಸ್‌ಪ್ಯಾನ್‌ಷನ್ ಆಫ್ ಇಂಡಿಯಾ (1959); ದಕ್ಷಿಣ ಭಾರತದ ಭಾಷೆಗಳ ಕಾಲ ಹಾಗೂ ಸಾಹಿತ್ಯದ ವಿಷಯಗಳ ಸಂಕ್ಷಿಪ್ತ ರೂಪುರೇಖೆಯನ್ನು ನೀಡಿರುವ 48 ಪುಟಗಳ ದ್ರಾವಿಡಿಯನ್ ಲಿಟರೇಚರ್ಸ್ (1949); ಅತ್ಯಂತ ಹಿಂದಿನ ತಮಿಳ್ ಸಾಹಿತ್ಯದ ವೃತ್ತಾಂತವಾಗಿರುವ ಸಂಗಂ ಲಿಟರೇಚರ್ - ಇಟ್ಸ್ ಕಲ್ಟ್ಸ್ ಆಂಡ್ ಕಲ್ಚರ್ಸ್ (1972); ಹಿಂದೂ ಧರ್ಮದ ಆರಂಭದಿಂದ ಹಿಡಿದು ಇಂದಿನ ಸುಧಾರಣೆಗೆ ಹಾಗೂ ದ್ರಾವಿಡರ ಸಂಪರ್ಕ ಸ್ನೇಹಮಯವಾಗಿದ್ದಿತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವ ಕಲ್ಚರಲ್ ಕಾಂಟ್ಯಾಕ್ಸ್ ಬಿಟ್ವೀನ್ ಆರ್ಯನ್ಸ್ ಆಂಡ್ ದ್ರಾವಿಡಿಯನ್ಸ್ (1967) ಮುಂತಾದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಇತಿಹಾಸ ಕೃತಿಗಳು.

3. ಭಾರತೀಯ ವಿದ್ಯಾಭವನದ ದಿ ಏಜ್ ಆಫ್ ನಲಂದಾಸ್ ಆಂಡ್ ಮೌರ್ಯಾಸ್ (1952); ಏ ಕಾಂಪ್ರಿಹೆನ್ಸಿವ್ ಹಿಸ್ಟೋರಿ ಆಫ್ ಇಂಡಿಯಾ ಸಂಪುಟ II (1957); ಮಾಕ್ಸ್ ಮುಲ್ಲರ್ಸ್ ಇಂಡಿಯಾ ಹ್ಯಾಟ್ ಕ್ಯಾನ್ ಇಟ್ ಟೀಚ್ ಅಸ್? (1834); ಏ ಗ್ರೇಟ್ ಲಿಬೆರಲ್; ಸ್ಪೀಚಸ್ ಆಂಡ್ ರೈಟಿಂಗ್ಸ್ ಆಫ್ ಸರ್ ಪಿ.ಎಸ್. ಶಿವಸ್ವಾಮಿ ಅಯ್ಯರ್ (1975); ಇಂಡಿಯಾ ಆಸ್ ಸೀನ್ ಇನ್ ಬೃಹತ್ ಸಂಹಿತ ಆಫ್ ವರಾಹಮಿಹಿರ, ಮತ್ತು ಬಿ.ಸಿ. ಲಾಮಿಮೋರಿಯಲ್ ವಾಲ್ಯೂಮ್ (1946) ಮತ್ತು ದಕ್ಷಿಣ ಭಾರತದ ಇತಿಹಾಸಕ್ಕೆ ಉಪಯುಕ್ತವಾದ ಕೆಲವು ಆಧಾರ ಗ್ರಂಥಗಳಾಗಿರುವ ಫರ್ದರ್ ಸೋರ್ಸಸ್ ಆಫ್ ವಿಜಯನಗರ್ ಹಿಸ್ಟೋರಿ (1946, 3 ಸಂಪುಟಗಳು), ಸಮ್ ಡಾಕ್ಯುಮೆಂಟ್ಸ್ ಆನ್ ದಿ ಹಿಸ್ಟೋರಿ ಆಫ್ ಕೊಚಿನ್ (1939) ಮತ್ತು ಫಾರಿನ್ ನೋಟಿಸಸ್ ಆಫ್ ಸೌತ್ ಇಂಡಿಯಾ ಇತ್ಯಾದಿ ಸಂಪಾದಿತ ಗ್ರಂಥಗಳು.

4. ಐತಿಹಾಸಿಕ ಅಧ್ಯಯನಗಳ ಕೆಲವು ಸಾಮಾನ್ಯ ತತ್ತ್ವಗಳನ್ನು ಮತ್ತು ದಕ್ಷಿಣ ಭಾರತ ಇತಿಹಾಸದ ಅಧ್ಯಯನದ ಕೆಲವು ವಿಶೇಷ ಸಮಸ್ಯೆಗಳನ್ನು ಚರ್ಚಿಸಿರುವ ಹಿಸ್ಟಾರಿಕಲ್ ಮೆತಡ್ ಇನ್ ರಿಲೇಷನ್ ಟು ಪ್ರಾಬ್ಲಂಸ್ ಆಫ್ ಸೌತ್ ಇಂಡಿಯನ್ ಹಿಸ್ಟೋರಿ (1941), ಲೆಕ್ಚರ್ಸ್ ಆನ್ ಪಾಕ್ಟರ್ಸ್ ಆನ್ ಇಂಡಿಯನ್ ಹಿಸ್ಟೋರಿ (1949) ಹಿಸ್ಟಾರಿಕಲ್ ಮೆತಡ್ ಇನ್ ರಿಲೇಷನ್ ಟು ಇಂಡಿಯನ್ ಹಿಸ್ಟೋರಿ (1956), ಸೋರ್ಸಸ್ ಆಫ್ ಇಂಡಿಯನ್ ಹಿಸ್ಟೋರಿ (1961) ಮುಂತಾದ ವಿಧಾನ ಶಾಸ್ತ್ರಕ್ಕೆ ಸಂಬಂಧಿಸಿರುವ ಕೃತಿಗಳು.

5. ದಿ ಕಾನ್ಸೆಪ್ಟ್ ಆಫ್ ದಿ ಸೆಕ್ಯುಲರ್ ಸ್ಟೇಟ್ ; ಅಗಸ್ತ್ಯ; ಅಲೆಗ್ಸಾಂಡರ್ಸ್ ಕ್ಯಾಂಪೇನ್ ಅಗನ್ಸ್ಟ್ ಪೋರಸ್ ; ನಳಂದ; ತಿರುಮಲನಾಯಕ್; ಪೋರ್ಚುಗೀಸ್ ಆಂಡ್ ದಿ ಡಚ್; ಸದರನ್ ಇಂಡಿಯಾ, ಅರೇಬಿಯಾ ಆಂಡ್ ಆಫ್ರಿಕಾ; ಸೌತ್ ಇಂಡಿಯಾ; ಪ್ರೆಸಿಡೆನ್ಸಿಯಲ್ ಅಡ್ರೆಸಸ್ ಮುಂತಾದ ಗೌಣ ಬರಹಗಳು ಹಾಗೂ ಐತಿಹಾಸಿಕ ಲೇಖನಗಳು.

ಶಾಸ್ತ್ರಿಯವರ ಪ್ರಕಾರ, ಇತಿಹಾಸವು ಅತ್ಯಂತ ವ್ಯಾಪಕವಾದುದು, ಅದು ಮಾನವ ಕುಲ ಜೀವನದ ಪ್ರತಮುಖವನ್ನು ಒಳಗೊಳ್ಳುತ್ತದೆ. ಅದು ಕೇವಲ ದೊರೆಗಳ, ಅವರ ಯುದ್ಧಗಳ ವೃತ್ತಾಂತವಲ್ಲ; ಅದು ಭೌತ ಪರಿಸ್ಥಿತಿ, ಸಾಮಾಜಿಕ ಸಂಸ್ಥೆ, ದರ್ಶನ, ಮತಧರ್ಮ, ಕಲೆ, ಸಾಹಿತ್ಯ ಮುಂತಾಗಿ ಎಲ್ಲಾ ವಿಷಯಗಳನ್ನು ಪರಿಶೀಲಿಸುತ್ತದೆ. ಅದು ವೈಜ್ಞಾನಿಕ ಅಧ್ಯಯನ ಸತ್ಯಾನ್ವೇಷಣೆಯೇ ಆಗಿರುವುದರಿಂದ ಸಂಶೋಧಕನು ಬಹು ಎಚ್ಚರಿಕೆಯಿಂದ ಎಲ್ಲಾ ಮೂಲಾಧಾರಗಳನ್ನು ಪರಿಶೀಲಿಸಿ ಬಳಸಬೇಕು. ಶಾಸ್ತ್ರೀಯವರು ಸಾಹಿತ್ಯ, ಪ್ರಮಾಣ, ಪ್ರಾಚೀನ ಶೋಧನಾಶಾಸ್ತ್ರ, ಶಾಸನಶಾಸ್ತ್ರ, ನಾಣ್ಯಶಾಸ್ತ್ರ ಮತ್ತು ಪರದೇಶ ವಾಸಿಗಳ ಪ್ರವಾಸ ಕಥನಗಳು ಎಂಬ ಐದು ಬಗೆಯ ಮೂಲಾಧಾರಗಳನ್ನು ಬಳಸಿಕೊಂಡರು; ಅವುಗಳನ್ನು ಉಪಯೋಗಿಸಿಕೊಳ್ಳುವುದಕ್ಕೆ ಮೊದಲು ವಿಭಿನ್ನ ದೃಷ್ಟಿಕೋನಗಳಿಂದ ಪರಿಶೀಲಿಸಿ ಅವುಗಳ ಯಥಾರ್ಥತೆಯನ್ನು ದೃಢಪಡಿಸಿಕೊಳ್ಳುತ್ತಿದ್ದರು. ಅವರ ಪ್ರಕಾರ, ಈ ಕಚ್ಚಾ ವಿಷಯ ಸಾಮಾಗ್ರಿಗಳನ್ನು ಬಹು ತೀವ್ರವಾದ ಪರೀಕ್ಷೆಗೆ ಗುರಿಪಡಿಸಿ ಸತ್ಯವನ್ನು ಬೆಳಕಿಗೆ ತರಬೇಕು; ಗತಕಾಲವನ್ನು ವಿವರಿಸುವಾಗ ಇಂದಿನ ಭಾವನೆ ಹಾಗೂ ಮನೋವಿಕಾರಗಳನ್ನು ಅದರ ಮೇಲೆ ಹೇರಬಾರದು; ಅಷ್ಟು ಮಾತ್ರವಲ್ಲದೆ, ಪ್ರಮಾಣಗಳು ಕರೆದೊಯ್ಯುವ ಕಡೆಗೆಲ್ಲಾ ಸಂಶೋಧಕನು ಹೋಗಿ ಪರಿಶೀಲಿಸಲು ಸಿದ್ಧನಾಗಿರಬೇಕು. ಅವನು ಪೂರ್ವಕಲ್ಪಿತ ಅಪಾಯಕಾರಿ ಭಾವನೆಗಳ ಹಿಡಿತಕ್ಕೆ ಸಿಕ್ಕಿ ಹಾಕಿಕೊಳ್ಳಬಾರದು, ಪೂರ್ವಾಗ್ರಹ ಪೀಡಿತನಾಗಿರಬಾರದು, ತನ್ನೆಲ್ಲಾ ಮೂಲ ವಿವರಗಳನ್ನು ಬಹು ಪ್ರಾಮಾಣಿಕತೆ ಹಾಗೂ ನಿಷ್ಪಕ್ಷಪಾತ ದೃಷ್ಟಿಯಿಂದ ಅರ್ಥೈಸಬೇಕು. ಶಾಸ್ತ್ರೀಯವರು ಇತಿಹಾಸಕಾರರನ್ನು ರಸಾಯನ ಶಾಸ್ತ್ರಜ್ಞನಿಗೆ ಹೋಲಿಸುತ್ತಾರೆ. ಹೇಗೆ ಆ ವಿಜ್ಞಾನಿಯು ಎಚ್ಚರಿಕೆಯಿಂದ ಪ್ರಯೋಗಗಳನ್ನು ನಡೆಸಿ ಸತ್ಯವನ್ನು ಕಂಡುಹಿಡಿಯುತ್ತಾನೆಯೋ, ಅದೇ ರೀತಿ ಚರಿತ್ರಲೇಖಕನೂ ಸಹ ಆಧಾರ ಗ್ರಂಥಗಳನ್ನು ಅತ್ಯಂತ ಸೂಕ್ಷ್ಮ ಹಾಗೂ ಜಾಗರೂಕ ಪರಿಶೀಲನೆಯಿಂದ ನಿಜಾಂಶಗಳನ್ನು ತಿಳಿದುಕೊಳ್ಳಬೇಕು.

## 28.7 ಸರ್ದಾರ್ ಕೆ.ಎಂ. ಪಣಿಕ್ಕರ್ (1895-1963)

ಆಧುನಿಕ ಭಾರತದ ರಾಯಭಾರ ಕುಶಲಿ - ಇತಿಹಾಸಕಾರರೂ, ಭವ್ಯ ವ್ಯಕ್ತಿತ್ವ, ಹಾಗೂ ಅಪರೂಪ ಸೃಜನಶೀಲ ಕಲ್ಪನಾಶಕ್ತಿಯಿಂದ ಕೂಡಿ ಭಾರತದ ಇತಿಹಾಸದ ಬಗ್ಗೆ ಒಂದು ನೂತನವಾಗಿದ್ದ ದೃಷ್ಟಿಕೋನವನ್ನು ಬೆಳೆಸಿಕೊಂಡಿದ್ದ ಮಹಾಲೇಖಕರೂ ಆಗಿದ್ದ ಕಾವಲಂ ಮಾಧವ ಪಣಿಕ್ಕರ್ 1895 ರಲ್ಲಿ ಕೇರಳದ ಕಾವಲಂನಲ್ಲಿ ಹುಟ್ಟಿ, ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಶಿಕ್ಷಣವನ್ನು ಪಡೆದು, ಆಕ್ಸ್‌ಫರ್ಡಿನಲ್ಲಿ ಇತಿಹಾಸದ ವಿಷಯದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ ನಂತರ ವಕೀಲರಾದರು; 1919 ರಿಂದ 1922 ರವರೆಗೆ ಆಲಿಘರ್ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. 1924 ರಲ್ಲಿ ದೆಹಲಿಯಲ್ಲಿ ಹಿಂದೂಸ್ಥಾನ್ ಟೈಮ್ಸ್ ಪತ್ರಿಕೆ ಪ್ರಾರಂಭವಾದಾಗ ಅದರ ಸಂಪಾದಕರಾದರು. ನಂತರ ಪತ್ರಿಕೋದ್ಯಮ ಕ್ಷೇತ್ರವನ್ನು ಬಿಟ್ಟು ಅವರು ರಾಜರ ಮಂಡಳಿಯ ಕಾರ್ಯದರ್ಶಿಯಾದರು. 1936 ರಿಂದ 1939 ರವರೆಗೆ ಪಾಟಿಯಾಲಾ ರಾಜ್ಯದಲ್ಲಿ ಮತ್ತು 1939 ರಿಂದ 1944 ರವರೆಗೆ ಬಿಕ್‌ನಿಕ್ ಸಂಸ್ಥಾನದಲ್ಲಿ ವಿದೇಶಾಂಗ ಮಂತ್ರಿಯಾಗಿದ್ದರು. 1944 ರಲ್ಲಿ ಬಿಕ್‌ನಿರ್ ರಾಜ್ಯದ ಪ್ರಧಾನಮಂತ್ರಿಯಾಗಿ ಸೇವೆ ಸಲ್ಲಿಸಿದರು. ಅಲ್ಲಿ ಅವರಿಗೆ 'ಸರ್ದಾರ್' ಎಂಬ ರಾಜಪುತ್ರ ಬಿರುದನ್ನು ಕೊಡಲಾಯಿತು. 1930 ಹಾಗೂ 1933 ರ ನಡುವಿನ ವರ್ಷಗಳಲ್ಲಿ ದುಂಡು ಮೇಜಿನ ಸಭೆಗೆ ಭಾರತ ಸಂಸ್ಥಾನಗಳ ನಿಯೋಗದ ಕಾರ್ಯದರ್ಶಿಯಾಗಿ ಮತ್ತು 1942 ರಲ್ಲಿ ಕೆನಡಾದಲ್ಲಿ ನಡೆದ ಪೆಸಿಫಿಕ್ ರಿಲೇಷನ್ಸ್ ಸಭೆಯಲ್ಲಿ ಭಾರತ ರಾಜ್ಯಗಳ ಪ್ರತಿನಿಧಿಯಾಗಿ ಹೋಗಿ ಕರ್ತವ್ಯವನ್ನು ನಿರ್ವಹಿಸಿದರು. ಇದರಿಂದ ಅವರಿಗೆ ಭಾರತದ ಸಮಸ್ಯೆಗಳನ್ನು ಸರಿಯಾಗಿ ಅರ್ಥಮಾಡಿಕೊಂಡು ಅಪಾರ ಅನುಭವವನ್ನು ಪಡೆಯುವುದಕ್ಕೆ ಅವಕಾಶವಾಯಿತು. ಭಾರತದಲ್ಲಿ ಸ್ವಾತಂತ್ರ್ಯ ಸೂರ್ಯನ ಉದಯವಾದಂತೆ, ಭಾರತದ ಪ್ರಥಮ ಪ್ರಧಾನಮಂತ್ರಿ ಜವಹರ್‌ಲಾಲ್ ನೆಹರೂರವರ ಕರೆಗೆ ಓಗೊಟ್ಟು ಅವರು ನಾಡಿನ ಸೇವೆಗೆ ಮುಂದಾದರು. ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿ ಭಾರತದ ರಾಯಭಾರಿಯಾಗಿ ಕಾರ್ಯವನ್ನು ನಿರ್ವಹಿಸಿದರು ಮತ್ತು ಭಾರತ ಹಾಗೂ ಚೀನಾದ ನಡುವೆ ಸ್ನೇಹ ಸೇತುವೆಯನ್ನು ನಿರ್ಮಿಸಿದ ಶಿಲ್ಪಿ ಅವರು. ಹೀಗೆ ರಾಜಕೀಯ ಕ್ಷೇತ್ರದಲ್ಲಿ ಗುರುತರವಾದ ಹೊಣೆಗಾರಿಕೆಯನ್ನು ನಿರ್ವಹಿಸಿ, ಅವರು ಪುನಃ ಶಿಕ್ಷಣ ರಂಗಕ್ಕೆ ಹಿಂತಿರುಗಿ 1961 ರಲ್ಲಿ ಕಾಶ್ಮೀರ ವಿಶ್ವವಿದ್ಯಾನಿಲಯದಲ್ಲಿ ನಂತರ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಉಪಕುಲಪತಿಗಳಾದರು. 1963 ರಲ್ಲಿ ಡಿಸೆಂಬರ್ 11 ರಂದು ಮೈಸೂರಿನಲ್ಲಿ ಮೃತ್ಯುವಿನ ವಶವಾದರು. ಹೀಗೆ ಶಿಕ್ಷಣ ಕ್ಷೇತ್ರದಲ್ಲಿ ಆರಂಭವಾದ ಅವರ ಸೇವಾ ಜೀವನ, ಅದೇ ರಂಗದಲ್ಲಿ ಮುಕ್ತಾಯಗೊಂಡಿತು; ಒಂದು ಸಾರ್ಥಕ ಜೀವನ

ಚಿಕ್ರದ ಆವರ್ತ ಕೊನೆಗೊಂಡಿತು.

ಜೀವನದ ವಿವಿಧ ರಂಗಗಳಲ್ಲಿ ಇಷ್ಟೊಂದು ಜವಾಬ್ದಾರಿಯುತ ಕೆಲಸಗಳನ್ನು ನಿರ್ವಹಿಸುತ್ತಿದ್ದರೂ, ಪಣಿಕ್ಕರ್ ಆಳವಾಗಿದ್ದ ಪಾಂಡಿತ್ಯವನ್ನು ಸಂಪಾದಿಸಿಕೊಂಡು ಇತಿಹಾಸ ರಚನೆಯನ್ನು ಒಂದು ಹವ್ಯಾಸವಾಗಿ, ಅದಕ್ಕಿಂತ ಹೆಚ್ಚಾಗಿ ಒಂದು ಪವಿತ್ರ ಧ್ಯೇಯ ಹಾಗೂ ಕರ್ತವ್ಯವಾಗಿ ಎಣಿಸಿ ಚರಿತ್ರೆಯ ಕ್ಷೇತ್ರಕ್ಕೆ ಅತ್ಯಂತ ಬೆಲೆಬಾಳುವ ಕಾಣಿಕೆಗಳನ್ನು ನೀಡಿದರು. ಅವರ ಇತಿಹಾಸ ಕೃತಿಗಳನ್ನು ಈ ಕೆಳಕಂಡಂತೆ ಮೂರು ಭಾಗಗಳಾಗಿ ವಿಭಾಗಿಸಬಹುದು.

1. ಪಣಿಕ್ಕರ್ ಆಲಿಘರ್‌ನಲ್ಲಿದ್ದಾಗ ಬರೆದ ಶ್ರೀ ಹರ್ಷ ಆಫ್ ಕನೂಜ್- ಏ ಮನೋಗ್ರಾಫ್ ಆಫ್ ದಿ ಹಿಸ್ಟೋರಿ ಆಫ್ ಇಂಡಿಯಾ ಇನ್ ದಿ ಫಸ್ಟ್ ಹಾಫ್ ದಿ ಸೆವೆನ್ತ್ ಸಂಚುರಿ ಏ.ಡಿ. (1922); ಅವರಿಗೆ ಪ್ರಾಚೀನ ಭಾರತದ ಇತಿಹಾಸದಲ್ಲಿದ್ದ ಆಸಕ್ತಿಯನ್ನು ಪ್ರತಿಬಿಂಬಿಸಿದ ಹಾಗೂ ಹಿಂದೂಗಳಲ್ಲಿ ರಾಜ್ಯಶಾಸ್ತ್ರವು ಗಂಭೀರ ವಿಷಯವಾಗಿರಲಿಲ್ಲ ಎಂಬ ಯೂರೋಪಿನ ಬರಹಗಾರರ ತಪ್ಪು ಟೀಕೆಯನ್ನು ಸರಿಪಡಿಸುವ ಉದ್ದೇಶದಿಂದ ಕೂಡಿದ್ದ ಆರಿಜಿನ್ ಅಂಡ್ ಎವೊಲ್ಯೂಷನ್ ಆಫ್ ಕಿಂಗ್‌ಷಿಪ್ ಇನ್ ಇಂಡಿಯಾ (1938); 16 ನೇಯ ಶತಮಾನದ ಆರಂಭದಿಂದ ಹಿಡಿದು 18 ನೆಯ ಶತಮಾನದ ಅಂತ್ಯದವರೆಗೆ ಯೂರೋಪಿಗೂ, ಭಾರತದ ಪಶ್ಚಿಮ ಕರಾವಳಿಗೂ ಇದ್ದ ಸಂಪರ್ಕವನ್ನು ವಿವರಿಸಿದ ಸದಸ್ಯರ ಪೂರ ಕೃತಿಗಳಾಗಿದ್ದ ಮಲಭಾರ್ ಆಂಡ್ ದಿ ಪೋರ್ಚುಗೀಸ್ ಎಟ್‌ಸೆಟ್‌ರ ಮತ್ತು ಮಲಬಾರ್ ಆಂಡ್ ದಿ ಡಚ್ (1931) ಮತ್ತು ನಂತರ ಒಂದೇ ಸಂಪುಟವಾಗಿ ಪ್ರಕಟವಾದ ಏ ಹಿಸ್ಟೋರಿ ಆಫ್ ಕೇರಳ (1498-1801); ಭಾರತದ ಶಿಕ್ಷಣ ಸಮಸ್ಯೆಯನ್ನು ಕುರಿತು ಎಸ್ಸೇಟ್ ಆನ್ ಎಜುಕೇಷನಲ್ ರಿಕನ್ಸ್ಟ್ರಕ್ಷನ್ ಇನ್ ಇಂಡಿಯಾ (1920); ಮುಂದೆ ಬ್ರಿಟಿಷರಿಂದ ಭಾರತೀಯರಿಗೆ ಆದ ಅಧಿಕಾರ ವರ್ಗಾವಣೆಯನ್ನು ಮುಂಭಾವಿಸಿ ಭಾರತ ಸಂವಿಧಾನದ ಮುಂದಿನ ಚೌಕಟ್ಟಿನ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯಗಳಿಂದ ಕೂಡಿದ್ದ ಫೆಡೆರಲ್ ಇಂಡಿಯಾ (1930); ಸಂವಿಧಾನಾತ್ಮಕ ಸಮಸ್ಯೆಗಳನ್ನು ಕುರಿತ ಸ್ಪಷ್ಟ ಅಭಿಪ್ರಾಯಗಳನ್ನು ಒಳಗೊಂಡಿದ್ದ ದೀ ವರ್ಕಿಂಗ್ ಆಫ್ ಡೈಆರ್ಗಿ 1919-1928 (1928); ಭಾರತಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಹಿಂದಿನ ವರ್ಷ ಬರೆಯಲಾದ ಮತ್ತು ಹಿಂದೂ ಮಹಾಸಾಗರ ಪ್ರದೇಶದ ರಕ್ಷಣಾ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಬ್ರಿಟನ್ ಹಾಗೂ ಭಾರತದ ನಡುವಿನ ಮುಂದಿನ ಬಾಂಧವ್ಯವನ್ನು ವಿವರಿಸಿರುವ ದಿ ಬೇಸಿಸ್ ಆಫ್ ಇಂಡೋ - ಬ್ರಿಟಿಷ್ ಟ್ರೀಟ್ (1946); ಓಷನ್- ಆನ್ ಎಸ್ಸೇ ಆನ್ ದಿ ಇನ್‌ಫ್ಲೂಯೆನ್ಸ್ ಆಫ್ ಸೀ ಪೌಅರ್ ಆನ್ ಇಂಡಿಯನ್ ಹಿಸ್ಟೋರಿ (1945) ಮತ್ತು ಜೀಒಗ್ರಾಫಿಕಲ್ ಫ್ಯಾಕ್ಟರ್ಸ್ ಇನ್ ಇಂಡಿಯನ್ ಹಿಸ್ಟೋರಿ (1955); ಅತ್ಯಂತ ಹಿಂದಿನ ಕಾಲದಿಂದ ಹಿಡಿದು ಇಂದಿನ ಶತಮಾನದವರೆಗೆ ಭಾರತದ ಇತಿಹಾಸದ ಸಾಮಾನ್ಯ ವಿಶ್ಲೇಷಣೆಯಾದ ಏ ಸರ್ವೇ ಆಫ್ ಇಂಡಿಯನ್ ಹಿಸ್ಟೋರಿ (1947); ಸಿಪಾಯಿ ದಂಗೆಯ ಶತಮಾನೋತ್ಸವದ ಸಂದರ್ಭದಲ್ಲಿ ಬರೆದ ಹಾಗೂ ಅದೊಂದು ಜನರ ದಂಗೆಯಾಗಿದ್ದಿತೆಂದು ಸಾಧಿಸಿದ ಇನ್ 1857 ಎಂಬ ಅತ್ಯಂತ ಸ್ವಾರಸ್ಯಕರ ಲಘುಪುಸ್ತಕ; ನೂತನ ದೃಷ್ಟಿಕೋನದಿಂದ ಮಾಡಲಾದ ಭಾರತ ಇತಿಹಾಸ ಹಸಿವಿನ ಸಮರ್ಪಕ ಸಮೀಕ್ಷೆಯಾಗಿರುವ ದಿ ಡಿಟರ್ಮಿನಿಂಗ್ ಪೀರಿಯಡ್ಸ್ ಆಫ್ ಇಂಡಿಯನ್ ಹಿಸ್ಟೋರಿ (1963); ಅಪ್ರತ್ಯಕ್ಷವಾಗಿ ಹಿಂದೂ ಸಂಸ್ಕೃತಿಯ ಸತ್ತ್ವವನ್ನು ಸಮರ್ಥಿಸಿದ ದಿ ಫೌಂಡೇಷನ್ ಆಫ್ ನ್ಯೂ ಇಂಡಿಯಾ (1963) ಮುಂತಾದ ಭಾರತ ಚರಿತ್ರೆಯ ದೃಶ್ಯ ಪರಂಪರೆಯನ್ನು ತೆರೆದು ತೋರಿಸುವ ಪ್ರಧಾನ ಗ್ರಂಥಗಳು.

2. ದಿ ಎವೊಲ್ಯೂಷನ್ ಆನ್ ಬ್ರಿಟಿಷ್ ಪಾಲಿಸಿ ಟುವರ್ಡ್ಸ್ ಇಂಡಿಯನ್ ಸ್ಟೇಟ್ಸ್ (1774-1858) ಎಂಬ ವಿಷಯವಾಗಿ ಕಲ್ಕತ್ತಾದಲ್ಲಿ ಮಾಡಿದ ಭಾಷಣಗಳ ಪರಿಷ್ಕೃತ ಸಂಪುಟವಾಗಿದ್ದ ಇಂಡಿಯನ್ ಸ್ಟೇಟ್ಸ್ ಆಂಡ್ ದಿ ಗವರ್ನಮೆಂಟ್ ಆಫ್ ಇಂಡಿಯಾ (1952); ರಾಜರ ಆಳ್ವಿಕೆಗೆ ಒಳಪಟ್ಟಿದ್ದ ಸಂಸ್ಥಾನಗಳ ಸಮಸ್ಯೆಗಳ ಕಾನೂನು ಸಂಬಂಧವಾದ ಅಂಶಗಳನ್ನು ಚರ್ಚಿಸಿದಿ ಇಂಟರ್ ಸ್ಟೇಟಲ್ ಲಾ-ದಿ-ವಾ ಅಫೆಕ್ಟಿಂಗ್ ದಿ ರಿಲೇಷನ್ಸ್ ಆಫ್ ಇಂಡಿಯನ್ ಸ್ಟೇಟ್ಸ್ ವಿತ್ ದಿ ಬ್ರಿಟಿಷ್ ಕ್ರೌನ್; ಭಾರತ ರಾಜ್ಯಗಳ ಬಗ್ಗೆ ಇದ್ದ ಅಭಿಪ್ರಾಯಗಳ ಸಾರಾಂಶವಾಗಿದ್ದ ಆಕ್ಸ್‌ಫರ್ಡ್ ಪ್ಯಾಂಫ್ಲೆಟ್ ಆಫ್ ಇಂಡಿಯನ್ ಅಫೇರ್ಸ್; ಕಾಶ್ಮೀರದ ಮಹಾರಾಜ ಗುಲಾಬ್ ಸಿಂಗರ ಮತ್ತು ಬಿಕನಿರ್ ಮಹಾರಾಜರ ಜೀವನ ಚರಿತ್ರೆಗಳಾದ ದಿ ಫೌಂಡಿಂಗ್ ಆಫ್ ದಿ ಕಾಶ್ಮೀರ್ ಸ್ಟೇಟ್; ಏ ಬಯಾಗ್ರಫಿ ಆಫ್ ಮಹಾರಾಜ ಗುಲಾಬ್ ಸಿಂಗ್ (1930); ಮತ್ತು ಹಿಸ್ ಹೈನೆಸ್ ದಿ ಮಹಾಜ ಆಫ್ ಬಿಕನಿರ್; ಏ ಬಯಾಗ್ರಫಿ

(1937); ಮತ್ತು ಒಂದು ಯಥಾರ್ಥ ನಿರೂಪಣೆಯಾಗಿರುವ ಎ ಇಂಡಿಯನ್ ಪ್ರಿನ್ಸ್ ಇನ್ ಕೌನ್ಸಿಲ್ - ಎ ರಿಕಾರ್ಡ್ ಆಫ್ ದಿ ಚಾನ್ಸೆಲರ್‌ಷಿಪ್ ಆಫ್ ಹಿಸ್ ಹೈನೆಸ್ ದಿ ಮಹಾರಾಜ ಆಫ್ ಪಾಟಿಯಾಲ ಇತ್ಯಾದಿ ಭಾರತೀಯ ದೊರೆಗಳ ಆಳ್ವಿಕೆಗೆ ಒಳಪಟ್ಟಿದ್ದ ಸಂಸ್ಥಾನಗಳಿಗೆ ಸಂಬಂಧಿಸಿದ ಕೃತಿಗಳು.

3. ಭಾರತೀಯ ವಲಸೆಯ ಸಮಸ್ಯೆಗಳಿಗೆ ಸಂಬಂಧಿಸಿದ ಪ್ರಾಬ್ಲಂಸ್ ಆಫ್ ಗ್ರೇಟರ್ ಇಂಡಿಯಾ (1916); ಸಮಗ್ರ ಆಗ್ನೇಯ ಏಷ್ಯಾರಿಗೆ ಸಂಬಂಧಪಟ್ಟ ಯುದ್ಧಾನಂತರದ ಯೋಜನೆಯ ವಿಷಯವನ್ನು ವ್ಯಾಪಕವಾಗಿ ಚರ್ಚಿಸಿರುವ ದಿ ಫ್ಯೂಚರ್ ಆಫ್ ಇಂಡಿಯಾ ಆಂಡ್ ಸೌತ್ - ಈಸ್ಟ್ ಏಷ್ಯಾ (1845); ಚೀನಾ- ಭಾರತ ಸಂಬಂಧದ ಅಧ್ಯಾಯವಾಗಿರುವ ಇಂಡಿಯಾ ಆಂಡ್ ಚೀನಾ (1957); ನೂತನವಾಗಿ ತಲೆ ಎತ್ತಿಕೊಳ್ಳುತ್ತಿದ್ದ ಏಷ್ಯಾ ಹಾಗೂ ಆಫ್ರಿಕಾದ ರಾಜ್ಯಗಳ ಸಮಸ್ಯೆಗಳನ್ನು ಚರ್ಚಿಸಿ ತಕ್ಕ ಪರಿಹಾರಗಳನ್ನು ಸೂಚಿಸಿರುವ ದಿ ಆಫ್ರೋ-ಏಷ್ಯನ್ ಸ್ಟೇಟ್ಸ್ ಆಂಡ್ ದೇರ್ ಪ್ರಾಬ್ಲಂಸ್ (1959); ಪಾಂಡಿತ್ಯ ಜಗತ್ತನ್ನು ಆಶ್ಚರ್ಯಚಕಿತಗೊಳಿಸಿದ, ಇತಿಹಾಸ ನಿಧಿಗೆ ಮಹತ್ತ್ವಪೂರಿತ ಕಾಣಿಕೆಯಾಗಿದ್ದ, 1498 ಹಾಗೂ 1945 ರ ನಡುವಿನ ವರ್ಷಗಳಲ್ಲಿ ಏಷ್ಯಾದ ದೇಶಗಳಿಗೂ ಹಾಗೂ ಯೂರೋಪಿಗೂ ಉಂಟಾದ ಸಂಪರ್ಕದ ವಿಮರ್ಶಾತ್ಮಕ ಸಮೀಕ್ಷೆಯಾಗಿರುವ ಮತ್ತು ಈ ಸಮಸ್ಯೆಯನ್ನು ಏಷ್ಯಾದ ದೃಷ್ಟಿಕೋನದಿಂದ ವೀಕ್ಷಿಸಿ ಮಾಡಿದ ಏಷ್ಯಾ ಆಂಡ್ ವೆಸ್ಟರ್ನ್ ಡಾಮಿನೆನ್ಸ್ (1953) ಮುಂತಾದ ಭಾರತ ದಿಗಂತದಾಚೆಗೆ ವ್ಯಾಪಿಸಿರುವ ವಿಶಾಲ ದೃಷ್ಟಿಕೋನದಿಂದ ಇತರ ರಾಷ್ಟ್ರಗಳಿಗೆ ಸಂಬಂಧಿಸಿದಂತೆ ಭಾರತ ಚರಿತ್ರೆಯ ನಿರೂಪಣೆಯಾಗಿರುವ ಮತ್ತು ಏಷ್ಯಾದ ದೃಷ್ಟಿಕೋನವೇ ಎದ್ದು ಕಾಣುವಂತೆ ಇರುವ ಗ್ರಂಥಗಳು.

ಪಣಿಕ್ಕರ್ ಭಾರತವನ್ನು ಕುರಿತ ಬ್ರಿಟಿಷ್ ಇತಿಹಾಸ ಲೇಖನ ಕಲೆಯಲ್ಲಿದ್ದ ಹಲವಾರು ಕುಂದು ಕೊರತೆಗಳನ್ನು ಸ್ಪಷ್ಟಪಡಿಸಿದರು. ಮೊದಲನೆಯದಾಗಿ, ಭಾರತದಲ್ಲಿ ಬ್ರಿಟಿಷ್ ಅಧಿಕಾರಿಗಳು ನಡೆಸಿದ ಪ್ರತಿ ಕಾರ್ಯಕ್ರಮವನ್ನು ಸಮರ್ಥಿಸುವುದು, ಸಮರ್ಥನೀಯವಾದಾಗ, ವಿಷಯಗಳನ್ನು ತೇಲಿಸಿಬಿಡುವುದು ಮತ್ತು ಈ ನಾಡಿನಲ್ಲಿ ಬ್ರಿಟಿಷ್ ಅಧಿಕಾರವನ್ನು ವಿರೋಧಿಸಿದ ಎಲ್ಲಾ ಚಳುವಳಿಗಳನ್ನು ತಪ್ಪಾಗಿ ನಿರೂಪಿಸುವುದು, ಎಲ್ಲಾ ವ್ಯಕ್ತಿಗಳಿಗೂ ಕಳಂಕವನ್ನು ಹೊರೆಸಿ ಮಸಿ ಬಳಿಯುವುದು ಈ ಎಲ್ಲಾ ಬರಹಗಳ ಏಕಮಾತ್ರ ಉದ್ದೇಶವಾಗಿದ್ದಿತು. ಎರಡನೆಯದಾಗಿ, ಅವುಗಳಲ್ಲಿದ್ದ ಇನ್ನೊಂದು ದೊಡ್ಡ ದೋಷವೆಂದರೆ, ಭಾರತದಲ್ಲಿ ಯಾವ ಮುಖ್ಯ ಸಾಧನೆಯೂ ಕಂಡುಬರಲಿಲ್ಲ. ಹಾಗೇನಾದರೂ ಇದ್ದರೆ ಅದಕ್ಕೆ ಯೂರೋಪ್ ಮೂಲ ಎಂಬುದಾಗಿ ಸಾಧಿಸುವ ಅನ್ಯಾಯಕರ ಪ್ರವೃತ್ತಿ. ಈ ಮುಂಚಿನ ಬರಹಗಳಲ್ಲಿ ಹೆಚ್ಚಾಗಿ ದೊರೆ ಹಾಗೂ ಆಳುವ ಸಂತತಿಗಳಿಗೆ ಪ್ರಾಧಾನ್ಯತೆಯನ್ನು ನೀಡಿರುವುದು ಮೂರನೆಯ ಕೊರತೆ. ಆದ್ದರಿಂದ ಭಾರತ ಇತಿಹಾಸ ನೀರಸವಾಗಿ, ಅದು ಕೇವಲ ಟೆಲಿಫೋನು ಹೆಸರು, ವಿಳಾಸ ಸೂಚಿಯಂತಿದ್ದಿತು. ಕೊನೆಯದಾಗಿ, ಭಾರತ ಚರಿತ್ರೆಯನ್ನು ಪರಸ್ಪರ ಸಂಬಂಧವೇ ಇಲ್ಲದ ಹಿಂದೂ, ಮುಸ್ಲಿಂ ಹಾಗೂ ಬ್ರಿಟಿಷ್ ಕಾಲಗಳೆಂಬುದಾಗಿ ವಿಭಾಗಿಸುವ ಕ್ರಮ ಅವೈಜ್ಞಾನಿಕವಾದುದು. ಆದ್ದರಿಂದ ಭಾರತ ಇತಿಹಾಸವನ್ನು ಪುನಃ ಶೋಧಿಸಿ ಕಂಡು ಹಿಡಿಯಬೇಕು. ಭಾರತದ ಅಮೂಲ್ಯ ನಿಧಿ, ಶತಶತಮಾನಗಳಿಂದ ಆದ ಅದರ ವಿಕಾಸ, ಪರಿವರ್ತನೆ ಹಾಗೂ ಅವಿಚ್ಛಿನ್ನತೆಯ ಸ್ಪಷ್ಟ ವಿಶದೀಕರಣವೇ ಭಾರತ ಇತಿಹಾಸದ ನಿಜವಾದ ತಿರುಳು. ಭಾರತದಲ್ಲಿ ಮುಖ್ಯವಾಗಿದ್ದ ಐತಿಹಾಸಿಕ ಪ್ರಕ್ರಿಯೆಗಳನ್ನು ಅರ್ಥಮಾಡಿಕೊಂಡ ಭಾರತೀಯ ದೃಷ್ಟಿಯಿಂದ ಭಾರತ ಇತಿಹಾಸಲೇಖನ ಕಲೆಯನ್ನು ಬೆಳೆಸುವುದು, ತೆರಪುಗಳನ್ನು ತುಂಬುವುದು ಮತ್ತು ಭಾರತವನ್ನು ಕುರಿತ ಬ್ರಿಟಿಷ್ ಲೇಖಕರ ಬರಹಗಳಲ್ಲಿ ಇದ್ದ ತಪ್ಪುಗಳನ್ನು ತಿದ್ದುವುದು ಪಣಿಕ್ಕರ್‌ಗೆ ಒಂದು ಆಧ್ಯಾತ್ಮಿಕ ಸಾಹಸೋದ್ಯಮವಾಯಿತು.

ಹೀಗೆ ತಾವು ಕೈಗೊಳ್ಳಬೇಕಾದ ನಿರ್ದಿಷ್ಟ ಕಾರ್ಯವನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡು ಪಣಿಕ್ಕರ್ ಐತಿಹಾಸಿಕ ಸಮಸ್ಯೆಗಳನ್ನು ಅತ್ಯಂತ ನೂತನವಾಗಿದ್ದ ದೃಷ್ಟಿಕೋನದಿಂದ ವೀಕ್ಷಿಸಿದರು. ಅಧ್ಯಯನ ವಿಧಾನದ ವಿಚಾರದಲ್ಲಿ ಹಳೆಯ ರೂಢಿ ಮಾರ್ಗವನ್ನು ಅನುಸರಿಸಲಿಲ್ಲ. ಅಂದರೆ, ಗ್ರಂಥಾಲಯ, ಸರ್ಕಾರಿ ಪತ್ರಾಗಾರ, ಮತ್ತು ಇತರ ಆಧಾರಗಳಿಂದ ವಿಷಯಗಳನ್ನು ಸಂಗ್ರಹಿಸಿ, ಕ್ರಮಬದ್ಧವಾಗಿ ವರ್ಗೀಕರಿಸಿ, ಅಡಿಟಿಪ್ಪಣಿ ಹಾಗೂ ಆಕರಗಳಿಂದ ತುಂಬಿ ತುಳುಕುವಂತಹ ಸಂಶೋಧನಾ ವರದಿಯನ್ನು ಬರೆಯುವುದು, ದಾಖಲೆಯಾಧಾರಿತವಾದ ಸಂಶೋಧನೆಯನ್ನು ನಡೆಸುವುದು, ಇಲ್ಲಿ ಹರಿದು ಅಲ್ಲಿ ಅಂಟಿಸುವುದು ಅವರ ಕ್ರಮವಾಗಿರಲಿಲ್ಲ. ಅವರು ತಮ್ಮದೇ ಆದ ತಂತ್ರವೊಂದನ್ನು ಬೆಳೆಸಿದರು; ಅದೇ ವಿಶ್ಲೇಷಣಾ ತಂತ್ರ; ವ್ಯಕ್ತಿ ಹಾಗೂ ಘಟನೆಗಳನ್ನು ಆಯಾಯ ಕಾರ್ಯಕ್ಷೇತ್ರಗಳಿಗೆ

ಸಂಬಂಧಿಸಿದಂತೆ ವೀಕ್ಷಿಸಿ ಮೌಲ್ಯವನ್ನು ನಿರ್ಧರಿಸಿ ಅವುಗಳಿಗಿರುವ ಮೂಲಭೂತ ಏಕತೆಯನ್ನು ಕಂಡು ಹಿಡಿಯುವ ವಿಶಿಷ್ಟ ಯೋಗ್ಯತೆ, ಸೃಜನಶೀಲ ಕಲ್ಪನೆ, ಸಹಾನುಭೂತಿ ಮತ್ತು ವಿಷಯಗಳನ್ನು ಬಲು ಸೊಗಸಾದ ಶೈಲಿಯಲ್ಲಿ ವಿವರಿಸುವ ಕಲೆ ಅವರಲ್ಲಿದ್ದ ಪ್ರಶಂಸಾರ್ಹ ಗುಣಗಳು. ನೀರಿನ ಕಿರುದೆರೆಗಳ ಮೇಲೆ ಅವರ ಬರಹದಲ್ಲಿದೆ. ಇದಕ್ಕೆ ಕಾರಣ ಅವರು ಚರಿತ್ರೆಯ ವಸ್ತು ಸ್ಥಿತಿಯನ್ನು ಕಂಡು ಹಿಡಿದು, ಪರಿಶೀಲಿಸಿ ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಶ್ರಮಿಸಿದರು. ಅವರಲ್ಲಿದ್ದ ಸೂಕ್ಷ್ಮವಾಗಿ ಅವಲೋಕಿಸುವ ಹಾಗೂ ವಿಶ್ಲೇಷಿಸುವ ಸೃಜನಶೀಲ ದೃಷ್ಟಿಯ ವಿಷಯ ಸಂಗ್ರಹಣೆಗೆ ಮೂಲವಾಯಿತು; ಅದರಲ್ಲಿದ್ದ ಮೂಲಾರ್ಥಗಳನ್ನು ಸಮಗ್ರವಾಗಿ, ಸ್ಪಷ್ಟವಾಗಿ ವಿವರಿಸುವ ಸಾಮರ್ಥ್ಯವು ಅವರ ಲೇಖನಿಯನ್ನು ಶಕ್ತಿಯುತವನ್ನಾಗಿಸಿ ಬರಹ ಸುಲಲಿತವಾಗಿ ಮುಂದುವರಿಯುವಂತೆ ಮಾಡಿತು ಮತ್ತು ಇತಿಹಾಸದ ಪ್ರತಿ ಇದ್ದ ತೀವ್ರಾಸಕ್ತಿಯು ಅವರ ಬರಹದ ವೇಗ ಹಾಗೂ ಗತಿಯನ್ನು ಎತ್ತಿ ಹಿಡಿದು ಮುಂದುವರಿಸಿತು. ಅವರು ವಿಭಿನ್ನವಾದ ಮನರಂಜಕ ಹಾಗೂ ಚಿತ್ತಾಕರ್ಷಕ ವಿನ್ಯಾಸ ಹಾಗೂ ಬಣ್ಣಗಳಲ್ಲಿ ಗತಕಾಲವನ್ನು ಚಿತ್ರಿಸಿದ ಕಲೆಗಾರರಾಗಿದ್ದರು.

ಕಾರಣ ಸಾಮಾನ್ಯ ಜನರಿಗೆ ಅರ್ಥವಾಗುವಂತೆ ಇತಿಹಾಸವನ್ನು ರಚಿಸುವುದು ಅವರ ಉದ್ದೇಶವಾಗಿದ್ದಿತು. ಅವರ ಪ್ರಕಾರ, ನಾಗರಿಕತೆಯನ್ನು ಕಟ್ಟಲು, ತಮ್ಮ ಜೀವನ ಮಟ್ಟವನ್ನು ಉತ್ತಮ ಪಡಿಸಿಕೊಳ್ಳಲು ಮತ್ತು ಸುಖಕರವಾದ ಉತ್ತಮ ಜೀವನವನ್ನು ನಡೆಸಲು ಸಾಮಾನ್ಯ ಜನರು ಪ್ರಜ್ಞಾಪೂರ್ವಕವಾಗಿ ಮಾಡಿದ ಪ್ರಯತ್ನಗಳನ್ನು ಅಲಕ್ಷಿಸಿದರೆ, ಇತಿಹಾಸಕ್ಕೆ ಬೆಲೆ ಇರುವುದಿಲ್ಲ. ಉದಾಹರಣೆಗೆ, ಬ್ರಿಟಿಷರ ಕಾಲದಲ್ಲಿ ಭಾರತೀಯರು ಸಂಘಟಿತರಾಗಿ ನಡೆಸಿದ ಕಾರ್ಯಕ್ರಮಗಳಲ್ಲಿ ಭಾರತ ಇತಿಹಾಸದ ಮೌಲ್ಯವಿರುವುದೇ ಹೊರತು ಬ್ರಿಟಿಷ್ ಸರ್ಕಾರದ ಚಟುವಟಿಕೆಗಳು ನಿರೂಪಣೆಯಲ್ಲಿಲ್ಲ. ಮಧ್ಯಯುಗದಲ್ಲಿ ಹೇಗೆ ಭಕ್ತಿ ಪಂಥದ ಪ್ರಭಾವವು ಸಮಾಜದ ಕೆಳವರ್ಗಗಳಲ್ಲಿ ವ್ಯಾಪಿಸಿತು ಮತ್ತು ಹೇಗೆ ನಗರಕ್ರಾಂತಿಯ ಕಾರಣ ಉಂಟಾದ ಪರಿವರ್ತನೆಯಿಂದ ಸಮಾಜ ಬದಲಾಗಿ ಮಂಗೋಲರ ದಾಳಿಯನ್ನು ತಡೆಗಟ್ಟಲು ಶಕ್ತವಾಯಿತು ಎಂಬ ಕಥನವೇ ಮಧ್ಯಕಾಲದ ನಿಜವಾದ ಚರಿತ್ರೆಯೇ ಹೊರತು ಸುಲ್ತಾನರು ಅರಮನೆ ಹಾಗೂ ರಣರಂಗದಲ್ಲಿ ನಡೆಸಿದ ಕಾರ್ಯಕ್ರಮಗಳ ಕಥೆಯಲ್ಲ. ಅದೇ ರೀತಿ ಪ್ರಾಚೀನ ಭಾರತದ ಯಥಾರ್ಥ ಇತಿಹಾಸ ಕಂಡುಬರುವುದು ಆ ಸಮಯದ ದರ್ಶನ, ಕಲೆ, ಸಾಹಿತ್ಯ, ಧರ್ಮ ಇತ್ಯಾದಿಗಳನ್ನು ರೂಪಿಸಿದ ಭಾವನೆ ಹಾಗೂ ಸಂಸ್ಕೃತಿಗಳ ನಿರೂಪಣೆಯಲ್ಲಿಯೇ ಹೊರತು, ಆಳಿದ ಸಂತತಿಗಳ ಹಾಗೂ ರಾಜರ ಪಟ್ಟಿಯಲಿಲ್ಲ. ಹಾಗೆಯೇ ಸಮಕಾಲೀನ ಭಾರತ ಇತಿಹಾಸದ ಮಹತ್ತ್ವ ಇರುವುದು ಈ ಸಮಾಜವನ್ನು ಒಂದು ಸಮ್ಯೆಕ್ಯ ಸಮಷ್ಟಿಯಾಗಿ ಸಂಘಟಿತವಾಗಿ ರೂಪಿಸಿ, ಪ್ರತ್ಯೇಕಿಸುವ ಶಕ್ತಿಗಳನ್ನು ತಡೆಗಟ್ಟಲು ಶಕ್ತವಾದ ನೂತನ ಭಾವನೆಗಳ ಸೃಷ್ಟೀಕರಣದಲ್ಲಿಯೇ ಹೊರತು, ಈ ನಾಡಿನ ಔದ್ಯೋಗಿಕ ಪ್ರಗತಿ ಸಾಧನೆಯ ವಿವರಣೆಯಾಲ್ಲಿಲ್ಲ.

ಪಣಿಕ್ಕರ್ ಯಾವ ಪ್ರಾದೇಶಿಕ ಪ್ರೇಮವನ್ನು ಬಳಸಿಕೊಳ್ಳದೇ ಇದ್ದರೂ, ಹಿಂದೂ ಸಂಸ್ಕೃತಿಯು ಆಳವಾಗಿ ಬೇರು ಬಿಟ್ಟಿರುವ ದಕ್ಷಿಣ ಭಾರತದ ಬಗ್ಗೆ ಅವರಲ್ಲಿ ಬೆಳೆದು ಬಂದಿದ್ದ ಹೆಮ್ಮೆಯ ಕಾರಣ ಅವರು ಪೂರ್ವಾಗ್ರಹದಿಂದ ಮುಕ್ತರಾಗಲಿಲ್ಲ; ಹಿಂದೂ ಸಂಸ್ಕೃತಿಯ ಅಪೂರ್ವ ಸತ್ತ್ವವನ್ನು ಎತ್ತಿಹಿಡಿಯುವ ಕಾತುರದಲ್ಲಿ ಅವರು ಏಕಪಕ್ಷೀಯ ಮನೋಭಾವವನ್ನು ಬೆಳೆಸಿಕೊಂಡರು; ಈ ಹಿಂದೂ ಅಭಿಮಾನದ ಜೊತೆಗೆ ಅವರು ಕ್ರೈಸ್ತ - ಪಾದ್ರಿ- ವಿರೋಧಿ ಭಾವನೆಯನ್ನು ಬೆಳೆಸಿಕೊಂಡಿದ್ದರು ಎಂಬುದಾಗಿ ಟೀಕಿಸಲಾಗಿದೆ. ಇಷ್ಟು ಮಾತ್ರವಲ್ಲದೆ, ಅವರು ಒಂದು ಕಡೆ ಭಾರತದ ಮೂಲಭೂತ ಏಕತೆಯನ್ನು, ಸಂಯೋಜನಾ ಸಾಮರ್ಥ್ಯವನ್ನು ಎತ್ತಿ ಹಿಡಿದರು; ಮತ್ತೊಂದು ಕಡೆ ಹಿಂದೂ ಸಂಪ್ರದಾಯದ ಹಿರಿಮೆ ಹಾಗೂ ಗರಿಮೆಯ ಬಗ್ಗೆ ಒತ್ತಿ ಹೇಳಿದರು; ಇನ್ನೊಂದು ಕಡೆ ಪಾಕಿಸ್ತಾನದ ಉದಯವನ್ನು ಸಹಜ ಎಂಬುದಾಗಿ ಎಣಿಸಿದರು; ಹೀಗೆ ಅವರ ವಿಚಾರ ಸರಣಿಯಲ್ಲಿ ವಿರೋಧವಾದ ಹೇಳಿಕೆಗಳಿವೆ ಎಂಬುದಾಗಿಯೂ ಸಹ ಆಪಾದಿಸಲಾಗಿದೆ.

ಪಣಿಕ್ಕರ್ ಭಾರತ ಸಂಸ್ಕೃತಿಯನ್ನು ಶ್ರೇಷ್ಠವಾದುದು ಎಂದು ಹೇಳಿದರೂ ಸಂಪ್ರದಾಯ ಬದ್ಧತೆಯನ್ನು ಎತ್ತಿ ಹಿಡಿದವರಿಲ್ಲ; ಅದರ ಪುನರುಜ್ಜೀವನ ತತ್ತ್ವವನ್ನು ಅನುಸರಿಸಿದ ಇತಿಹಾಸಕಾರರಿಲ್ಲ; ಭಾರತದ ಸುವರ್ಣಯುಗ ಅಥವಾ ಅತ್ಯುತ್ತಮ ಗತಸಂಪ್ರದಾಯದಲ್ಲಿ ನಂಬಿಕೆಯನ್ನು ಬೆಳೆಸಿಕೊಂಡವರಲ್ಲ; ಭಾರತ ಇತಿಹಾಸದ ನಿರ್ದಿಷ್ಟ ವಿಚಾರ ಪಂಥಕ್ಕೆ ಸೇರಿದವರಲ್ಲ; ಒಂದು ವಿಶಿಷ್ಟ ಐತಿಹಾಸಿಕ ವಿಚಾರಧಾರೆಯನ್ನು ಪ್ರತಿಪಾದಿಸಿದವರಲ್ಲ ಅವರು. ಭಾರತ ಇತಿಹಾಸವನ್ನು ಸೃಜನಶೀಲ ಕಲ್ಪನೆ ಹಾಗೂ ಸಹಾನುಭೂತಿಯಿಂದ ರಚಿಸಲು ಬಯಸಿದ ವಸ್ತುನಿಷ್ಠ ಇತಿಹಾಸಕಾರರೂ ಪಾಶ್ಚಾತ್ಯ ದೇಶದಲ್ಲಿ ತರಬೇತನ್ನು ಪಡೆದಿದ್ದರೂ ಅವರು ಬ್ರಿಟಿಷ್ ಸಾರ್ವಭೌಮಾಧಿಕಾರದ ಪರವಾಗಿದ್ದ ಲೇಖಕರಾಗಿರಲಿಲ್ಲ, ಅಥವಾ ರಾಷ್ಟ್ರವಾದಿ ಬರಹಗಾರರಾಗಿರಲಿಲ್ಲ. ರಷ್ಯಾ ಹಾಗೂ

ಚೀನಾವನ್ನು ಮೆಚ್ಚಿಕೊಂಡಿದ್ದರೂ, ಅವರು ಸಮಾಜವಾದಿ ಚರಿತ್ರಲೇಖಕರಾಗಿರಲಿಲ್ಲ. ಅವರು ಶೋಷಣೆಯನ್ನು ಅಳಿಸಿ ಹಾಕಬೇಕೆಂದು ಬಯಸಿದರೂ, ಸಾಮಾಜಿಕ ಪರಿವರ್ತನೆಗೆ ಹಿಂಸಾತ್ಮಾಕ ಮಾಧ್ಯಮ ಸರಿಯಾದುದು ಎಂಬುಧನ್ನು ಒಪ್ಪಲಿಲ್ಲ. ಅವರು ನೋವಾಗಿದ್ದ ಭಾಗಗಳಿಗೆ ಮಾರ್ಕ್ಸ್‌ನು ಸೂಚಿಸಿದ್ದ ಮೂಲಾಮನ್ನು ಹಚ್ಚಬೇಕೆಂದು ಸಲಹೆ ಮಾಡಿದರೇ ವಿನಹ ಸಂಪೂರ್ಣ ಶಸ್ತ್ರಚಿಕಿತ್ಸೆಯನ್ನು ಎತ್ತಿ ಹಿಡಿದವರಲ್ಲ. ಅವರ ದೃಷ್ಟಿಯಲ್ಲಿ ಇತಿಹಾಸವು ಒಂದು ಸಂಯೋಜಿತ ಕಲ್ಪನೆ, ಒಂದು ಜೀವಂತ ಸತ್ಯ ಮತ್ತು ಜನರ ವಿಕಾಸದ ಶಕ್ತಿ; ರಾಷ್ಟ್ರದ ಗತಕಾಲ, ಇಂದಿನ ಹಾಗೂ ಮುಂದಿನ ಯುಗಗಳನ್ನು ಕುರಿತ ಸಮಗ್ರ ಚಿಂತನೆಯಾಗಿದೆ; ಆದ್ದರಿಂದ ಅದನ್ನು ಅಸಂಘಟಿತ ಕ್ರಮದಲ್ಲಿ ರಚಿಸುವುದು ಸಾಧ್ಯವಿಲ್ಲ. ಪಣಿಕ್ಕರ್ ಜ್ಞಾನ ರಂಗದಲ್ಲಿ ಕ್ಷೇತ್ರದಿಂದ ಕ್ಷೇತ್ರಕ್ಕೆ ಹಾರಿ ಹೋಗಿ ಸಮಗ್ರವನ್ನು ಸಮೀಕ್ಷೆ ಮಾಡಿ, ಪ್ರತಿ ಕ್ಷೇತ್ರದ ನಕ್ಷೆಯನ್ನು ತಯಾರಿಸಿದರೇ ವಿನಹ, ಒಂದೇ ವಿಷಯವನ್ನು ಕುರಿತು ಆಳವಾಗಿ ಚಿಂತಿಸಿದವರಲ್ಲಿ ಒಂದೇ ಕ್ಷೇತ್ರದಲ್ಲಿ ಭದ್ರವಾಗಿ ನೆಲೆಯೂರಿ, ಉತ್ತು, ಬಿತ್ತಿ ಬೆಳೆದವರಲ್ಲ. ಅವರು ನೊಗವನ್ನೇ ಮುಟ್ಟದ ಆದರೆ ಬೆಳೆಯ ವಿಚಾರದಲ್ಲಿ ಎಲ್ಲವನ್ನೂ ಬಲ್ಲ ಜಮೀನ್ದಾರರಂತಿದ್ದರು.

ಒಟ್ಟಿನಲ್ಲಿ, ತೀಕ್ಷ್ಣವಾಗಿದ್ದ ವಿಮರ್ಶಾತ್ಮಕ, ಬುದ್ಧಿ, ಉದಾರ ಮನೋಭಾವ ಇತ್ಯಾದಿ ಗುಣಗಳಿಂದ ಕೂಡಿದ್ದ, ಸಾರ್ವಜನಿಕ ಕ್ಷೇತ್ರಗಳಲ್ಲಿ ಗಳಿಸಲಾಗದ ಅನುಭವಗಳಿಂದ ಇತಿಹಾಸಕಾರನ ಮನೋಭಾವನೆಗಳೂ ಸಂಪತ್ಸಮೃದ್ಧವಾಗುತ್ತವೆ ಎಂಬುದಾಗಿ ನಂಬಿದ್ದ ಮತ್ತು ಪತ್ರಿಕೋದ್ಯಮಿ, ರಾಜ್ಯಭಾರ ಕುಶಲ, ರಾಜನೀತಿಜ್ಞ, ಪ್ರಬಂಧ ಲೇಖಕ, ಕವಿ, ಚಿಂತಕ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಇತಿಹಾಸಕಾರರಾಗಿ ಬಹುಮುಖ ಪ್ರತಿಭೆಯನ್ನು ತೋರಿದ ಮೇಧಾವಿ ಪಣಿಕ್ಕರ್ ಸುಮಾರು ಅರ್ಧ ಶತಮಾನದವರೆಗೆ ಇತಿಹಾಸ ಕ್ಷೇತ್ರದಲ್ಲಿ ಪ್ರಚಂಡ ಶಕ್ತಿಯಾಗಿ ಬೆಳಗಿದರು.

## 28.8 ಉಪಸಂಹಾರ

ಆಧುನಿಕ ಭಾರತೀಯ ಇತಿಹಾಸಕಾರರಲ್ಲಿ ಈ ಮೇಲ್ಕಂಡ ಅನೇಕರು ತಮ್ಮ ಬರವಣಿಗೆಗಳಲ್ಲಿ ಐತಿಹಾಸಿಕ ಅಂಶಗಳನ್ನು ಬಿಚ್ಚಿ ಇಡುವುದರ ಜೊತೆಗೆ ಈ ಕಾಲದ ಕೋಮುವಾದಿ ರಾಜಕಾರಣವನ್ನೇ ಗತಕಾಲದಲ್ಲಿ ಕಾಣಲು ಅವಣಿಸಿದರು. ಇವರಲ್ಲಿ ಕೆಲವರು ಅಪವಾದ ಎನ್ನುವಂತೆ ಬೇರೆ ದೃಷ್ಟಿಕೋನದಿಂದ ನೋಡಲು ಪ್ರಯತ್ನಿಸಿದರು. ಆದ್ದಾಗ್ಯೂ ಅವರು ಕೂಡ ಅಪವಾದಗಳಿಗೆ ಪ್ರತ್ಯೇಕವಾದಂತವುಗಳಾಗಿರಲಿಲ್ಲ. ಈ ಎಲ್ಲಾ ಇತಿಹಾಸಕಾರರು 18 ನೇ ಶತಮಾನದ ರಾಜಕಾರಣವನ್ನು ಹಿಂದೂ - ಮುಸ್ಲಿಂರಿಗು ನಡುವಿನ ಹೋರಾಟವನ್ನಾಗಿ ಕಾಣಲಾಯಿತು. ಅದೇ ಹೋರಾಟ 19 ಮತ್ತು 20 ನೇ ಶತಮಾನಗಳಲ್ಲು ಮುಂದುವರಿಯಿತು ಎಂದು ತಿಳಿಸಲಾಯಿತು. 18 ನೇ ಶತಮಾನದಲ್ಲಿ ಈ ಹಿಂದೂ ಮುಸ್ಲಿಂ ಹೋರಾಟವೇ ಆ ಕಾಲದ ಪ್ರಧಾನ ಸಮಸ್ಯೆಯಾಗಿತ್ತು ಎಂದು ಅನೇಕ ಇತಿಹಾಸಕಾರರು ಬರೆದಿದ್ದಾರೆ. ಅದರಲ್ಲೂ ಕೆಲವರು ಪ್ರಾಮಾಣಿಕವಾದ ದೃಷ್ಟಿಕೋನದಿಂದ ಕಂಡಿದ್ದಾರೆ. ಹೀಗಾಗಿ ಈ ಚರಿತ್ರೆಕಾರರ ಬರವಣಿಗೆಗಳನ್ನು ನಾವು ಕಡೆಗಣಿಸುವಂತಿಲ್ಲ.

## 28.9 ಸ್ವಯಂ ಮೌಲ್ಯಮಾಪನ ಪ್ರಶ್ನೆಗಳು

1. ಜಾದ್‌ನಾಥ್ ಸರ್ಕಾರ್ ಅವರ ಬರವಣಿಗೆಗಳ ಮಹತ್ವವನ್ನು ತಿಳಿಸಿ.

2. ಡಿ.ಡಿ. ಕೊಸಂಬಿಯವರ ಬರವಣಿಗೆಗಳಲ್ಲಿ ಊಳಿಗಮಾನ್ಯ ರಾಜ್ಯದ ಪ್ರತಿಪಾದನೆಯನ್ನು ಕುರಿತು ಬರೆಯಿರಿ.

3. ಕೆ.ಪಿ. ನೀಲಕಂಠಶಾಸ್ತ್ರಿಯವರ ಬರವಣಿಗೆಗಳು ದಕ್ಷಿಣ ಭಾರತ ಇತಿಹಾಸ ರಚನೆಗೆ ಪ್ರಮುಖ ಆಧಾರಗಳಾಗಿವೆ, ಚರ್ಚಿಸಿ?

## 28.10 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. D.D. Kosambi : Myth and Reality, P 2
2. K.A. Nilakanta Sastri : Historical Method in Relation to Problems of South Indian History, P 8-14
3. R.C. Dutt : The Economic History of India, Vol, I 1960, P.298, 293
4. Subodh Kumar : Mukhopadhyay Op. Cit. p 87-97
5. Sarkar .J.N. : History of Aurangazeb, Vol V. p.1
6. Tarasankar Banerjee : Sardar .K.M. Panikkar, 1977, p 1-71
7. B. Shaik Ali : cp cit, p 443-448
8. Pannikar .K.M. : A Survey of Indian History, 1950, p 235.


ಡಾ. ವೈ. ಹೆಚ್. ನಾಯಕವಾಡಿ

# ಟಿಪ್ಪಣಿ

# ಟಿಪ್ಪಣಿ

## ಟಿಪ್ಪಣಿ

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................

..............................................................................................................


ಆದೇಶ ಸಂಖ್ಯೆ : ಕರಾಮುವಿ/ಅಸಾವಿ/4–398/2015–16 ದಿನಾಂಕ 21–01–2016
ಮುದ್ರಕರು : ರಾಜಾ ಪ್ರಿಂಟರ್ಸ್, ಬೆಂಗಳೂರು–560 027 ಪ್ರತಿಗಳು : 4500
ಒಳಪುಟ ಕಾಗದ : 60 ಜಿ.ಎಸ್.ಎಂ. ವೆಸ್ಟ್‌ಕೋಸ್ಟ್ ಮ್ಯಾಪ್‌ಲಿಥೋ ಪೇಪರ್, ರಕ್ಷಾಪುಟಕ್ಕೆ : 220 ಜಿ.ಎಸ್.ಎಂ. ಫಾರಿನ್ ಮ್ಯಾಟ್ ಆರ್ಟ್ ಕಾರ್ಡ್

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-೫೭೦ ೦೦೬

ಉನ್ನತ ಶಿಕ್ಷಣದ ಅವಕಾಶಗಳನ್ನು ವೃದ್ಧಿಸಿ ಶಿಕ್ಷಣವನ್ನು ಪ್ರಜಾತಾಂತ್ರಿಕರಿಸುವ ಸಾಧನವಾಗಿ ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥೆಯನ್ನು ಅನಾವರಣಗೊಳಿಸಲಾಗಿದೆ.

*ರಾಷ್ಟ್ರೀಯ ಶಿಕ್ಷಣ ನೀತಿ ೧೯೮೬*




♣ ಪ್ರಾದೇಶಿಕ ಕೇಂದ್ರಗಳು

- ಬೆಂಗಳೂರು
- ದಾವಣಗೆರೆ
- ಗುಲ್ಬರ್ಗಾ
- ಧಾರವಾಡ
- ಶಿವಮೊಗ್ಗ
- ಮಂಗಳೂರು
- ತುಮಕೂರು
- ಹಾಸನ
- ಚಾಮರಾಜನಗರ
- ಬಳ್ಳಾರಿ
- ಮಂಡ್ಯ
- ಕೋಲಾರ
- ಬಿಜಾಮರ
- ಬೆಳಗಾಂ
- ರಾಮನಗರ
- ಬೆಂಗಳೂರು (ಮತ್ತೊಂದು)
- ಚಿಕ್ಕಮಗಳೂರು
- ಉಡುಪಿ
- ಕಾರವಾರ
- ಬೀದರ್
- ಮೈಸೂರು

# KSOU

**Higher Education to everyone everywhere**

ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ




ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-೫೭೦ ೦೦೬

## Karnataka State Open University

Mukthagangotri, Mysuru-570 006 Website: www.ksoumysore.edu.in

Raja Printers, Bengaluru-27, Ph.: 22234066